TEXT PROBLEM WITHIN THE BOOK ONLY

UNIVERSAL LIBRARY
OU_198479
UNIVERSAL LIBRARY

IANIA UNIVERSITY LIBRARY

K
831
V21A

Accession No P.G K 4689

s book should be returned on or before the date
ked below

# ಅಪರೂಪದ ಅತಿಥಿ

# ಅಪರೂಪದ ಅತಿಥಿ

ಸಣ್ಣ ಕತೆಗಳು

ವಾಣಿ

ಪ್ರಕಾಶಕರು
ಡಿ. ವಿ. ಕೆ. ಮೂರ್ತಿ
ಕೃಷ್ಣಮೂರ್ತಿಪುರಂ : ಮೈಸೂರು–೪.

ಮೊದಲನೆಯ ಮುದ್ರಣ ೧೯೭೧

ಎಲ್ಲ ಹಕ್ಕುಗಳೂ ಲೇಖಿಕೆಯರವು

ಮುದ್ರಕರು
ವಾಣೀ ಪ್ರೆಸ್
ಮೈಸೂರು.

# ಓದುಗರಲ್ಲಿ ವಿನಂತಿ

‘ಅಪರೂಪದ ಅತಿಥಿ’ ತನ್ನ ಜೊತೆಯವರೊಂದಿಗೆ ನಿಮ್ಮಲ್ಲಿಗೆ ಬಂದಿದಾನೆ. ಅವನಿಗೆ ನಿಮ್ಮ ಕಡೆಯಿಂದ ಸ್ವಾಗತ ದೊರೆಯವುದೆಂಬ ಭರವಸೆ ನನಗಿದೆ.

ಈ ಕಥೆಗಳಿಗೆ ಮೊದಲಲ್ಲಿ ಆಶ್ರಯವಿತ್ತ ಸಾಪ್ತಾಹಿಕ, ಮಾಸಿಕ, ವಾರ್ಷಿಕ ಪತ್ರಿಕೆಗಳವರಿಗೆ ನನ್ನ ಹೃತ್ಪೂರ್ವಕ ವಂದನೆಗಳು.

ಶ್ರೀ ಮಾರ್. ಡಿ. ವಿ. ಕೆ. ಮೂರ್ತಿಯವರು ಈ ಸಂಕಲನವನ್ನು ಆಸಕ್ತಿಯಿಂದ ಪ್ರಕಟಿಸಿದ್ದಾರೆ. ಅಷ್ಟೇ ಉತ್ಸಾಹದಿಂದ ಮುದ್ರಣದ ಕೆಲಸ ನಿರ್ವಹಿಸಿದಾರೆ ವಾಣೀ ಪ್ರೆಸ್ಸಿನವರು. ಇವರಿಗೆಲ್ಲ ನನ್ನ ಕೃತಜ್ಞತೆಗಳು.

ಮೈ ತುಂಬಿರುವ ಈ ‘ಅತಿಥಿ’ ಯನ್ನು ಕೈ ನೀಡಿ ಸ್ವಾಗತಿಸಲಿರುವ ನಿಮಗೂ ನನ್ನ ಧನ್ಯವಾದಗಳು.

ವಾಣಿ

೧೭೯೬, ಚಾಮರಾಜಪುರಂ
ಮೈಸೂರು-೪

# ಪ ರಿ ವಿ ಡಿ


| | | |
|---|---|---|
| ೧ | ವೈಶಾಖಿ | ೭ |
| ೨ | ಹೆಂಡತಿಯ ಹರಕೆ | ೧೪ |
| ೩ | ಅಪರೂಪದ ಅಥಿತಿ | ೨೫ |
| ೪ | ಉಪಕಾರಿ | ೩೭ |
| ೫ | ಕಂಕಣ | ೫೦ |
| ೬ | ಅವಳ ಪ್ರೇಮ | ೬೧ |
| ೭ | ರತ್ನವಿಲಾಸ | ೭೧ |
| ೮ | ಒಲುಮೆಯ ಸುಳಿಯಲ್ಲಿ | ೧೦೪ |
| ೯ | ಮಾರ್ಗದರ್ಶಿ | ೧೧೭ |
| ೧೦ | ತಾರ | ೧೨೩ |
| ೧೧ | ಕೆಂಪು ಹೂವು | ೧೪೨ |
| ೧೨ | ನಿರೀಕ್ಷೆ | ೧೫೩ |
| ೧೩ | ಉಪಕಾರ ಸ್ಮರಣೆ | ೧೬೩ |
| ೧೪ | ಬೀಸಿ ಬಂದ ಗಾಳಿ | ೧೭೩ |
| ೧೫ | ವಾರದ ಹುಡುಗ | ೧೯೧ |
| ೧೬ | ಸಂಜೀವಿನಿ | ೨೦೦ |
| ೧೭ | ಅಪೂರ್ಣ | ೨೧೧ |
| ೧೮ | ಕೆಳಗೆ ಬಿದ್ದ ಕಾಗದ | ೨೩೨ |
| ೧೯ | ಮೂರು ಮೆಟ್ಟಿಲು | ೨೩೮ |
| ೨೦ | ರಾಧೆಯ ಕೊಡುಗೆ | ೨೪೭ |
| ೨೧ | ಆಯ್ಕೆ | ೨೬೧ |
| ೨೨ | ವೈರಾಗ್ಯ | ೨೭೮ |
| ೨೩ | ಹಿರಿಮೆ | ೨೮೯ |
| ೨೪ | ಸೇಡಿನ ಬಲೆ | ೨೯೯ |
| ೨೫ | ಎಲ್ಲವೂ ಒಳಿತೇ | ೩೧೪ |
| ೨೬ | ಬದುಕಿನ ದಾರಿ | ೩೨೯ |

# ಅರ್ಪಣೆ

ತಮ್ಮ ಬರಹಗಳಿಂದ ಕನ್ನಡಿಗರ
ಮನೆ ಮನಗಳನ್ನು ಬೆಳಗಿರುವ
ಮೆಚ್ಚಿನ ಬರಹಗಾರ್ತಿ
ದಿ|| ಶ್ರೀಮತಿ ತ್ರಿವೇಣಿಯವರ
ಮಧುರ ನನಪಿಗೆ

# ವೈಶಾಖಿ

ವೈಶಾಖದ ಬಿಸಿಲು ಮೈ ಸುಡುವಂತಿದ್ದರೂ, ಅದರೊಡನೆ ಗಾಳಿ ತಂಪಾಗಿ ಬೀಸಿ, ಸಂಜೆ ಮಳೆ ಬರುವ ಸೂಚನೆ ಇತ್ತು.

ಶ್ರೀನಾಥನ ನಡಿಗೆಯಲ್ಲಿ ಆತುರವಿಲ್ಲ. ಆರಾಮವಾಗಿ ಎಡಬಲ ನೋಡುತ್ತ ಹೆಜ್ಜೆ ಹಾಕುತ್ತಿದ್ದ. ಗೆಳೆಯ ಅರುಣನ ಮನೆ ಇಲ್ಲೇ ಎಲ್ಲೋ ಇರಬೇಕು. ಜಯನಗರದ ವಿಸ್ತರಣದ ನಾಲ್ಕನೇ ಬ್ಲಾಕಿನಲ್ಲಿ ಮನೆ. ಕಟ್ಟು ಾಗ ಒಮ್ಮೆ ಬಂದಿದ್ದ. ಆಗ ಎರಡು ಮಗ್ಗಲಿಗೂ ಖಾಲಿ ಜಾಗವಿತ್ತು.

ಅದೇ ನೆನಪು.

ಎಡಬಲಗಳಲ್ಲಿ ಖಾಲಿ ಇರುವ ಮನೆ ಯಾವುದೂ ಇಲ್ಲ. ಈ ಎರಡು ವರ್ಷಗಳಲ್ಲಿ ಅಲ್ಲಿ ದೊಡ್ಡ ಮಹಡಿಮನೆಗಳು ಎದ್ದಿದ್ದು, ಅವನ ನೆನಪಿನಲ್ಲಿದ್ದ ಗುರುತು ಮರೆಯಾಗಿತ್ತು.

ಶ್ರೀನಾಥ ನೆನಪಿನ ಕುದುರೆಯನ್ನು ಹಿಂದಕ್ಕೆ ಓಡಿಸಿದ. ಎದುರಿಗೆ ಏನಿತ್ತು ? ಏನಿತ್ತು ಎದುರಿನಲ್ಲಿ ?

ಓ ..ಒಂದು ಸಣ್ಣ ಅಂಗಡಿ. ಬಿಸ್ಕತ್ತು ಪೆಪ್ಪರಮೆಂಟು ಮೊದಲಾದ ಣ್ಣ ಸಾಮಾನುಗಳದು.

ಶ್ರೀನಾಥ ಅದೇ ದಾರಿಯಲ್ಲಿ ಹಿಂದಕ್ಕೆ ಹೋಗಿ ಅಂಗಡಿಗಾಗಿ ಹುಡುಕಿದ. ಗಾಜಿನ ದೊಡ್ಡ ಶೀಷೆಗಳಿದ್ದ ಅಂಗಡಿ ಕಣ್ಣಿಗೆ ಬಿದ್ದಾಗ ಅವನಿಗಾದ ಸಂತೋಷ ? ಅದೇ ಅಂಗಡಿಯ ಮುಂದೆ ಎರಡು ಸಲ ಓಡಾಡಿದ್ದರೂ ಆಗ ಅದರ ನೆನಪು ಬಂದಿರಲಿಲ್ಲ. ಗುರಿ ಖಾಲಿಜಾಗದ ನಡುವೆ ಇದ್ದ ಮನೆಯ ಮೇಲೆ ಇತ್ತು.

ಜೇಬಿನಿಂದ ಅರುಣ ಬರೆದಿದ್ದ ಕಾಗದ ಹೊರಬಂತು. ಅದರಲ್ಲಿ ಮನೆಯ ನಂಬರು ಕಾಣಿಸಿದ್ದ. ಶ್ರೀನಾಥ ಅದನ್ನು ನೋಡಿಕೊಂಡು ನೆನಪಿಗೆ ಹತ್ತಿದ

ಮೆಸಿಯನ್ನು ಅಳಿಸಲು ಪ್ರಯತ್ನಿಸಿದ.

ಜೇಬು ಬರಿದಾಗಿತ್ತು. ಸಿಗರೇಟಿಗಾಗಿ ಕೈಹಾಕಿದಾಗ. ಅಂಗಡಿ ನುಗ್ಗಿ ಒಂದು ಪ್ಯಾಕ್ ಸಿಗರೇಟು ಕೊಂಡ. ಕಡ್ಡಿ ಗೀರಿ ಹೊತ್ತಿಸಿಕೊಂ. ಆರಾಮವಾಗಿ ಹೊಗೆಬಿಟ್ಟ.

"ಈ ನಂಬರಿನ ಮನೆ ಯಾವುದು ? ಇಲ್ಲೆಲ್ಲ ನೋಡಿದೆ. ಕಾಣಿಸಲಿಲ್ಲ

ಶ್ರೀನಾಥ ಅಂಗಡಿಯವನನ್ನು ಕೇಳಿದ.

"ಈಗ ನಂಬರು ಬಗಲಾಗಿದೆ. ಹೆಸರು ಹೇಳಿ. ಯಾರು ಬೇಕಾಗಿತ್ತು?

"ಅರುಣ ಕುಮಾರ್ ಎಂತ, ಎಚ್. ಎ. ಎಲ್.ನಲ್ಲಿದ್ದಾರೆ."

"ಓ ಅವರೇ ? ಅಲ್ಲಿ ಕಾಣುವುದೇ ಮನೆ."

"ಯಾವುದು ? ಹಸುರು ಕಿಟಕಿ ಇದೆಯಲ್ಲ ?"

"ಊಹೂಂ. ಅದಲ್ಲ. ಅದರ ಪಕ್ಕದ್ದು-ಮನೆಯ ಮುಂಭಾಗದಲ್ಲೆಲ್ಲ ಬರೀ ಕೆಂಪು ಹೂ ಇದೆ. ಅದೇ ಗುರುತು."

"ತೊಂದರೆ ಕೊಟ್ಟೆ. ಹಿಂದೆ ನಾನು ಬಂದಿದ್ದಾಗ ಇಲ್ಲೆಲ್ಲ ಖಾ ಖಾಲಿಯಾಗಿತ್ತು. ಈಗ ಮಹಡಿಮನೆಗಳು ಎದ್ದು ನಿಂತು ಆ ಮನೆ ಬೇಗ ಕಾಣಿಸೋದೇ ಇಲ್ಲ"

"ಅದೇನು ಹೇಳ್ತೀರಿ; ಈ ವಿಸ್ತರಣಗಳು ಬೆಳೆಯುತ್ತಿರೋ ರೀತೀ ದಿನಾ ಓಡಾಡೋರಿಗೇ ಒಂದೊಂದು ಸಲ ತಬ್ಬಿಬ್ಬಾಗುತ್ತೆ."

"ನಿಮಗೆ ಅವರ ಪರಿಚಯ ಉಂಟೋ ?"

"ಹೀಗೇ .. ಯಾವಾಗಲಾದರೂ ಅಂಗಡಿಗೆ ಬರ್ತಾರೆ"

ಶ್ರೀನಾಥ ಗುರುತು ಹಿಡಿದು ಹೊರಟ. ಆ ಸಾಲಿನ ಮೂರು ಮನೆ ಕಿಟಕಿಗಳೂ ಹಸುರು ಬಣ್ಣವನ್ನೇ ಹೊತ್ತಿದ್ದುವು. ಅಂಗಡಿಯಾ ಯಾವುದೋ ಗಿಡ ಇದೆ ಎಂದು ಹೇಳಿದ್ದ.

ನಡುವಿನದೇ ಇರಬೇಕು. ಆವರಣದ ತುಂಬ ತುರಾಯಿಯಂತೆ ಕೆಂ ಬಣ್ಣದ, ಗೊಂಡೆಯಂತಹ ಹೂಗಳು. ಎಲೆ ಇಲ್ಲ, ರೆಂಬೆ ಇಲ್ಲ; ನೇರವಾ ನೆಲದಿಂದ ಎದ್ದು ಬಂದಂತೆ ದಂಟಿನ ತುದಿಯಲ್ಲಿ ಕುಸುರು ಕುಸುರಾಗಿ ಅರಳಿ ನಿಂತಿದ್ದವು.

ಎಂತಹ ಸುಂದರ ಹೂವುಗಳು!

ಶ್ರೀನಾಥ ಒಳಗೆ ಬಂದ. ಕೂಗಬೇಕಾಗಲಿಲ್ಲ. ಮುಂಭಾಗದಲ್ಲೇ ಅರುಣ ಪತ್ರಿಕೆ ಓದುತ್ತ ಕುರ್ಚಿಯಲ್ಲಿ ಒರಗಿದ್ದ.

ಅನಿರೀಕ್ಷಿತ ಭೇಟಿಯ ಸಂಭ್ರಮದ ಸ್ವಾಗತ ಬಯಸಿ ಅರುಣ ಕೇಳಿದ.

"ಯಾವಾಗ ಬಂದದ್ದು ?"

"ನಿನ್ನೆ ಬಂದೆ. ಆಫೀಸಿನ ಕಡೆಯಿಂದ ಕೆಲಸವಿತ್ತು. ಮಧ್ಯಾಹ್ನಕ್ಕೆ ಮುಗೀತು. ರಾತ್ರೆ ಹೊರಡುವವರೆಗೆ ಹೊತ್ತಿದೆಯಲ್ಲ."

"ನೆಟ್ಟಗೆ ಇಲ್ಲಿಗೇ ಬಂದಿದ್ದರೆ ? ಎರಡು ದಿನ ಜೊತೆಯಾಗಿ ಇರಬಹುದಿತ್ತು."

"ತಮ್ಮನ ಮನೆ ಉಂಟಲ್ಲ ಇಲ್ಲಿ. ಅವನಲ್ಲಿಗೆ ಹೋಗದಿದ್ದರೆ ತಪ್ಪು ತಿಳೀತಾನೆ ಬಂದೆನಲ್ಲ ಈಗ "

"ಮನೆ ಸುಲಭವಾಗಿ ಸಿಕ್ಕಿತೆ ?"

"ವಿಳಾಸ ಗೊತ್ತಿಲ್ಲ. ಎರಡು ಸಲ, ಇದರ ಮುಂದಿನಿಂದಲೇ ಹೋದೆ. ತಟ್ಟನೆ ಗೊತ್ತಾಗಲಿಲ್ಲ ಎಡಬಲದಲ್ಲಿ ಖಾಲಿ ಜಾಗ ಎಂದು ನೆನಪು ಇತ್ತು."

"ಅದು ಒಂದು ವರ್ಷದ ಹಿಂದಿನ ಮಾತು. ಈಗ ಅಲ್ಲಿ ಎರಡು ಮಹಡಿ ಮನಗಳು, ನಾಲ್ಕು ಸಂಸಾರ ಇವೆ."

"ಹೌದಲ್ಲ ? ಆ ಮೂಲೇ ಅಂಗಡೀಲಿ ವಿಚಾರಿಸಿದೆ. ಅವ ತೋರಿಸಿದ. ಈ ಹೂವಿನ ಗಿಡದ ಗುರುತು ಹೇಳಿದ. ಬಹಳ ಚಂದವಿದೆ ಈ ಹೂಗಳು ನಾನು ಇದೇ ಮೊದಲು ನೋಡಿದ್ದು."

"ಹೂಂ . ಕಣ್ಣಿಗಷ್ಟೇ ಚಂದ, ಈ ವೈಶಾಖಿ. ಇಂಗ್ಲೀಷಿನಲ್ಲಿ ಮೇಫ್ಲವರ್ ಅಂತಾರೆ. ನಾನು ವೈಶಾಖಿ ಅನ್ನುವೆ. ವರ್ಷಕ್ಕೆ ಒಂದೇ ಸಲ ಈ ಹೂವು. ಅದರ ಹಿಂದೆ ಒಂದು ಕತೆಯೇ ಇದೆ."

ಅರುಣ ಯೋಚಿಸುವಂತೆ ಕುಳಿತ. ಲಜ್ಜೆಯ ಭಾರದಿಂದ ತಲೆ ಬಗ್ಗಿಸಿರುವ ನವವಧುವಿನಂತೆ ನಮ್ರಭಾಗಿದ್ದ ಹೂವುಗಳನ್ನು ದಿಟ್ಟಿಸಿದ.

ಅರುಣ ಮಗನನ್ನು ಕೂಗಿದ. ಕಾಫಿ ತರುವಂತೆ ಹೇಳಿದ.

"ನಮ್ಮ ಜೊತೆ ಓದುತ್ತಿದ್ದ ಚಂದು ನೆನಪಿದೆಯೆ ನಿನಗೆ ?"

ಕಾಫಿಯನ್ನು ಹೀರುತ್ತ ಅರುಣ ಪ್ರಶ್ನಿಸಿದ.

"ಓ.....ನೆನಪಿದೆ ಪಂಡಿತಪುತ್ರ ಎನ್ನುತ್ತಿರಲಿಲ್ಲವೇ ನಾವು ಅವನ

ಬುದ್ಧಿವಂತೆ. ‘ಪಂಡಿತ ಪುತ್ರ’ ಎಂದು ಯಾವ ಅರ್ಥದಲ್ಲಿ ಹೇಳುವರೋ ಹಾಗಂತೂ ಇರಲಿಲ್ಲ. ಐ. ಎ. ಎಸ್.ನಲ್ಲಿ ರ್‍ಯಾಂಕ್ ಬಂತಲ್ಲವೇ ಅವನಿಗೆ ?”

“ಹೌದು. ಅವರಪ್ಪ ಆಯುರ್ವೇದ ಪಂಡಿತರು. ಆದರಿಂದ ಆ ಹೆಸರು ಬಂದಿತ್ತೇನೋ ? ಪ್ರೊಬೆಷನರಿ ಅವಧಿಯಲ್ಲಿ ಅವನು ಕೆಲವು ದಿವಸ ಮೈಸೂರಿನಲ್ಲಿದ್ದ. ಒಂದು ಸಲ ನನಗೆ ಬರುವಂತೆ ಆಗ್ರಹ ಮಾಡಿ ಬರೆದಿದ್ದ. ನಾನು ಇಲ್ಲಿ ಕೆಲಸಕ್ಕೆ ಸೇರಿ ಕೆಲವು ತಿಂಗಳಾಗಿತ್ತು. ಅವನ ಬಲವಂತಕ್ಕೆ ಎರಡು ದಿನ ರಜ ಹಾಕಿ ಮೈಸೂರಿಗೆ ಹೋದೆ ”

“ಹೌದೇನು ? ನನಗೆ ಗೊತ್ತಿರಲಿಲ್ಲ.”

“ಹೇಗೆ ಗೊತ್ತಾಗಬೇಕು ? ನೀನು ಆಗಲೇ ಧಾರವಾಡ ಸೇರಿದ್ದೆ. ನಾನೂ ಇದುವರೆಗೆ ಹೇಳಿರಲಿಲ್ಲ ಇಂದೇಕೋ ಆ ಹೂವು ಹಳೆಯ ನೆನಪನ್ನು ಕೆದಕಿದೆ ”

“ಅದೇನು ಹೇಳು ? ಕಥೆ ಸ್ವಾರಸ್ಯವಾಗಿರುವಂತಿದೆ.”

“ಅವನು ನನ್ನ ಕರೆದಿದ್ದರ ಉದ್ದೇಶ ಅಲ್ಲಿಗೆ ಹೋದ ಕೂಡಲೇ ತಿಳಿಯಿತು ರಾಜೋಪಚಾರ ನನಗೆ.”

“ಅಳಿಯತನ ಅನ್ನು.”

“ಹೂಂ ...ಹಾಗೇ ಪಂಡಿತರು ಮಗನೊಟ್ಟಿಗೆ ಇದ್ದರು. ಅಧಿಕಾರದಲ್ಲಿದ್ದ ಚಂದುವಿಗೆ ಹೆಣ್ಣು ಕೊಡಲು ಜನ ನುಗ್ಗುತ್ತಿದ್ದರು. ಅವರಿಗೆ ಮಗಳ ಚಿಂತೆ. ಹೇಗಾದರೂ ಆ ಹುಡುಗಿಗೆ ಮದುವೆ ಮಾಡಿಬಿಡಬೇಕು. ತಾಯಿ ಇಲ್ಲದ ಹೆಣ್ಣು. ಮಗ ಮೊದಲೇ ಅಧಿಕಾರಿ ದೊಡ್ಡ ಕಡೆ ಹುಡುಗಿ ಬಂದು ಅವರ ಮನ ತುಂಬಿದರೆ, ಆ ತಂದೆ ಮಗಳನ್ನು ಕೇಳೋರು ಯಾರು ? ಮಗ ದೂರವಾಗುವುದಂತೂ ಖಂಡಿತ ಏನಿದ್ದರೂ ಕೂಡಲೇ ಆಗಬೇಕು. ನಿನ್ನ ಸ್ನೇಹಿತರು ಯಾರಾದರೂ ಇದ್ದರೆ ಹೇಳು. ನಮ್ಮ ಜನ ಆದರೆ ಸರಿ, ಎಂದರಂತೆ ನನಗೆ ಬಂತು ಬುಲಾವ್.”

“ನೀನು ಹೋಗುವ ವೇಳೆಗೆ ಬಲೆ ಸಿದ್ಧವಾಗಿತ್ತು ಅನ್ನು ”

ಶ್ರೀನಾಥ ನಕ್ಕು ಕೇಳಿದ. ಅವನ ಕುತೂಹಲ ಕೆರಳಿತು.

“ಹೂಂ ..ಚೆಂದುವಿನ ತಂಗಿ ಮಂಗಳ, ಹೋದ ದಿನವೇ ಪರಿಚಯವಾಯ್ತು. ಮನೆಯಲ್ಲಿ ಒಂದು ಮುದುಕಿ. ಓಡಾಟವೆಲ್ಲ ಅವಳದೇ. ತಂದೆಗೆ

ಔಷಧಿ ಅರೆಯುವುದರಿಂದ ಹಿಡಿದು ಎಲ್ಲ ಕೆಲಸಕ್ಕೂ ಅವಳೇ."

"ಅಲ್ಲೂ ಅವರು ಔಷಧಿ ಕೊಡುತ್ತಿದ್ದರೇ ?"

"ಬೋರ್ಡು ಹಾಕಿರಲಿಲ್ಲ. ಕೆಲವರು ತಿಳಿದವರು ಬರೋರು. ಇವರೂ ಕೊಡೋರು, ಹಿಂದಿನಿಂದ ಬಂದದ್ದು ಅಭ್ಯಾಸ."

"ನೀನು ಅಲ್ಲಿ ಹೋಗಿ ಖಾಯಿಲೆ ಮಲಗಿದೆಯೇನೋ ? ಆ ಹುಡುಗಿ ಮಾತ್ರೆ, ಕಷಾಯ ಕುಡಿಸಿ ಉಪಚರಿಸಿದಳೋ ?"

"ಸಧ್ಯ, ನಿನ್ನ ಕಲ್ಪನೆಯ ಕುದುರೆಗೆ ಕಡಿವಾಣ ಹಾಕು ಮಾರಾಯ. ಅಂತಹುದೇನೂ ಆಗಲಿಲ್ಲ."

"ಮತ್ತೇ ?"

"ಪಂಡಿತರಿಗೆ ಔಷಧಿ ಕೊಡುವುದರ ಜೊತೆಗೆ, ವಿಧವಿಧವಾದ ಹೂವುಗಳನ್ನು ಬೆಳೆಸುವುದು ಒಂದು ಹವ್ಯಾಸ. ಅವರ ಮನೆಯಲ್ಲೇ ಈ ವೈಶಾಖಿ ಹೂವನ್ನು ನಾನು ಮೊದಲು ನೋಡಿದ್ದು."

"ಓ ..."

"ಬೆಳಗಿನ ಹೊಂಗಿರಣಗಳು ಕೆಂಪು ಹೂವಿನ ಮೇಲೆ ನರ್ತಿಸುತ್ತಿದ್ದಾಗ ನಾನು ಬೆರಗಿನಿಂದ ನೋಡುತ್ತಿದ್ದೆ. ಆಗ ಇದ್ದಕ್ಕಿದ್ದಂತೆ ಒಂದು ಆಶ್ಚರ್ಯ ನಡೆಯಿತು !"

"ಏನೋ ? ಹೂವಿನಡಿಯಿಂದ ಹಾವು ..?"

"ಛೆ....ಛೆ ಅಂಥದೇನಿಲ್ಲ. ಹೂವುಗಳ ನಡುವಿನಿಂದ ಒಂದು ಹುಡುಗಿ ಎದ್ದು ನಿಂತಳು. ಬಹುಶಃ ಹೂವಿನ ಅಂದಚೆಂದ ನೋಡುತ್ತ ಅಲ್ಲೇ ಕೂತಿದ್ದಳೇನೋ? ಅವಳು ತಟ್ಟನೆ ಎದ್ದು ನಿಂತಾಗ ಹೂವೇ ಹುಡುಗಿಯಾಗಿ ನಿಂತಳೇನೋ ಎನಿಸಿತು."

"ಅಷ್ಟು ಚಲುವೆಯೇ ಹುಡುಗಿ ?"

"ಅಷ್ಟಲ್ಲ. ಅದಕ್ಕೆ ಹತ್ತರಷ್ಟು, ನೂರರಷ್ಟು ಚೆಲುವೆ. ಹೂವು ನಾಚಿ ತಲೆಬಾಗಿತ್ತು ಅವಳ ಮುಂದೆ. ಕಣ್ಣು ಇರುವುದು ಸಾರ್ಥಕ ಎನಿಸಿತು. ಅದೇ ಕಣ್ಣು ಕುಕ್ಕುವ ಬಣ್ಣ. ಅದೇ ಕೋಮಲತೆ."

"ಎಲ್ಲಿ ಆ ಚೆಲುವೆ ? ನಿನ್ನ ..?"

"ನನ್ನ ತಂಗೀನ ಮದುವೆಯಾಗುವೆಯ? ನಮ್ಮ ತಂದೆಗೆ ನೀನು ಅಳಿಯನಾಗಬೇಕೆಂದು ಬಹಳ ಆಸೆ"

ಆನಂದದಿಂದ ಮೂಗನಾಗಿದ್ದೆ ನಾನು. ಊರಿಗೆ ಹೋಗಿ ಬರೆಯುವೆ ಎಂದು ಹೇಳಿದೆ.

ದಾರಿಯುದ್ದಕ್ಕೂ ನನಗೆ ಅದೇ ಯೋಚನೆ. ವೈಶಾಖೀ ಹೂವುಗಳ ನಡುವೆ ಕಂಡ ಹುಡುಗಿ ಚಂದುವಿನ ತಂಗಿಯೇ ಇರಬೇಕು

ಹಾಗಾದರೆ ನಂಗಳೆ ? ಅವಳೂ ತಂಗಿ ಏನೊ ? ಹೊಸಬನಾಗಿ ಹೋದವನು ಸೀದಾ ಹೆಣ್ಣು ಮಕ್ಕಳ ವಿಚಾರ ಹೇಗೆ ಕೇಳುವುದು ? ಆದರೂ 'ಯಾರ ನಿನ್ನ ತಂಗಿ ? ಮನೆಯನ್ನು ಬೆಳಗಿರುವ ಮುಗಳೆಯೆ ? ಅಥವಾ ಹೂವುಗಳ ನಡುವೆ ನುಸುಳಿ ಮರೆಯಾದ .ಏನು ಅವಳ ಹೆಸರು, ಒಮ್ಮೆ ಪಂಡಿತರು ವಸು ಎಂದು ಕೂಗಿದ್ದು ಕಿವಿಗೆ ಬಿದ್ದಿತ್ತು. ಅವಳೇ ವಸು ಇರಬಹುದೇ ? ಎಂದಾದರೂ ಕೇಳಿದ್ದರೆ ಚೆನ್ನಾಗಿತ್ತು

ಆಗ ಈ ಅನುಮಾನ ತೊಳಲಿಕೆ ಇರುತ್ತಿರಲಿಲ್ಲ ವಸು-ವೈಶಾಖಿ ಹೂವು ಎರಡೂ ನನ್ನೆದೆಯನ್ನು ತುಂಬಿ ಹುಚ್ಚನಂತಾಗಿದ್ದೆ ಊರಿಗೆ ಹೋದವನೇ ನನ್ನ ಆಸೆಯನ್ನು ತುಂಬಿ ಚಂದುವಿಗೆ ಕಾಗದ ಬರೆದೆ. ಕಾತುರದಿಂದ ಉತ್ತರ ನಿರೀಕ್ಷಿಸಿದೆ. ಕೊನೆಗೆ ಬಂತು ಕಾಗದ."

ಅರುಣ ನಿಟ್ಟುಸಿರುಬಿಟ್ಟ

"ಆಮೇಲೆ ?"

ಆಸಕ್ತಿಯಿಂದ ಕಿವಿ ನಿಮಿರಿಸಿ ಶ್ರೀನಾಥ.

"ಗೆಳೆಯಾ .ನಿನ್ನ ಮಾತು ನಿಜ ವಸು ನಿಜಕ್ಕೂ ವೈಶಾಖಿ ಹೂವಿನಂತೆ. ನೋಡಲು ಚಂದ. ಮುಡಿಯಲು ಬಾರದು. ಅವಳು ಎಲ್ಲರಂತೆ ಆರೋಗ್ಯವಾಗಿದ್ದರೆ, ನಾನೇ ಅವಳ ಕೈಹಿಡಿಯುತ್ತಿದ್ದೆ. ನನಗೆ ಮಾಲೆ ಹಾಕಲು ಕಾದಿರುವ ಸಿರಿವಂತ ಹುಡುಗಿಯರನ್ನು ಕಣ್ಣೆತ್ತಿಯೂ ನೋಡುತ್ತಿರಲಿಲ್ಲ.

ಎಳೆಯ ವಯಸ್ಸಿನಿಂದಲೇ ಹೃದ್ರೋಗಕ್ಕೆ ತುತ್ತಾಗಿದ್ದಾಳೆ ಹುಡುಗಿ. ನಡೆದರೆ ಮೇಲುಸಿರು, ನಕ್ಕರೆ ಹವಳದ ತುಟಿ ನೀಲಿಯಾಗುವುದು. ಮುಟ್ಟಿದರೆ ಸಾಕು, ಮುದುರಿ ಬಾಡುವಳು. ಎಲ್ಲ ಕಡೆಯೂ ಔಷಧಿ ಕೊಡಿಸಿ ಕೊನೆಯ

ಪ್ರಯತ್ನ ಎಂದು ಇಲ್ಲಿ ಬಿಟ್ಟಿದ್ದಾರೆ. ತಂದೆಯವರು ಮದ್ದು ಕೊಡುತ್ತಿದ್ದಾರೆ. ಆದರೆ ಭರವಸೆಯಿಲ್ಲ. ತಂಗಿಯ ಮಗಳು ಎಂಬ ಪ್ರೀತಿಯಿಂದ ಶಕ್ತಿಮೀರಿ ಪ್ರಯತ್ನಿಸುತ್ತಿದ್ದಾರೆ ಹೂವಿನಷ್ಟೇ ಸುಕುಮಾರಿ. ಆಯುಷ್ಯವೂ ಅಷ್ಟೇ ಏನೋ ?"

"ಛೆ .. ಛೆ ...ಎಂತಹ ನಿರಾಸೆ. ಮುಂದೆ ?"

"ವೈಶಾಖಿ ಹೂವು ರೆಕ್ಕೆಗಳನ್ನು ಕಳೆದುಕೊಂಡು ಬರೀ ಕೊಂಬೆಯಾಗಿ ಉಳಿಯುವ ವೇಳೆಗೆ ವಸು ಇಲ್ಲವಾಗಿದ್ದಳು, ಚಂದುವಿನ ತಂಗಿ ಮಂಗಳೆಗೆ ಕೇಳಿಕೊಂಡೆ ನಾನು .."

"ಏನೆಂದು ?"

"ನೀನು ಬರುವಾಗ ಒಂದು ವೈಶಾಖಿ ಗಿಡದ ಗೆಡ್ಡೆಯನ್ನು ತರಲು ಮರೆಯಬೇಡ ಎಂತ. ನನ್ನ ಅಪೇಕ್ಷೆಯಂತೆ ಮಂಗಳ ಅದನ್ನು ತಂದು ನೆಟ್ಟಳು ಒಂದು ಗಿಡ ಹತ್ತಾಗಿ ವರ್ಷಕ್ಕೊಮ್ಮೆ ಆವರಣದ ತುಂಬ ಗಿಡ ಬೆಳೆದು ಪಲ್ಲೈಸಿ, ಎಲೆ ಉದುರಿ ಬೋಳಾಗಿ, ಬರಿ ನೆಲವಾಗಿದ್ದು ವೈಶಾಖದ ವಸಂತನ ಮೋಡಿಗೆ ಸಿಕ್ಕಂತೆ, ಬರಿ ನೆಲದಿಂದಲೇ ಹೂವು ಬಿರಿದು ಅರಳಿ ಮೈತುಂಬಿ ಆವರಣವನ್ನೆಲ್ಲ ಚೆಲುವಾಗಿಸುತ್ತದೆ. ವಾಸನ ಇಲ್ಲ, ಒಂದೆರಡು ಎಸಳು ಬಿಡಿಸಿ ಕಟ್ಟಲೂ ಬಾರದು. ಮುಡಿಯುವ ಆಸೆಯೆ ಇಲ್ಲ. ಕಣ್ಣು ತಣಿಸ ಬಲ್ಲಳು. ಮನವ ಅರಳಿಸಬಲ್ಲಳು ಚೆಲುವು ವೈಶಾಖಿ "

"ಚಂದುವಿನ ತಂಗಿ ಮಂಗಳಾ ?"

–ಉಸಿರು ಕಟ್ಟಿ ಕೇಳಿದ ಶ್ರೀನಾಥ.

"ಮಂಗಳಾ ...ನನ್ನ ಮಡದಿಯಾಗಿ ಮನೆ ಬೆಳಗಿದ್ದಾಳೆ. ಏನೆಂದರೂ ಮುಡಿಯಬಲ್ಲ ಮಲ್ಲಿಗೆ ಅವಳು. ಅವಳಿಗೆ ಸ್ವಲ್ಪವೂ ಮತ್ಸರವಿಲ್ಲ. ವೈಶಾಖಿಗೆ ತಾನೇ ನೀರು ಉಣಿಸಿ ಬೆಳೆಸುತ್ತಾಳೆ."

ಅರುಣ ನಕ್ಕು ನುಡಿದ. ಬೀಸುತ್ತಿದ್ದ ತಂಗಾಳಿಗೆ ತಲೆ ದೂಗುತ್ತಿತ್ತು ವೈಶಾಖಿ !

# ಹೆಂಡತಿಯ ಹರಕೆ

"ವನಜಾ-ಏನೇ ಇದು? ಹಬ್ಬವೇನೆ?"

"ಇಲ್ಲವಲ್ಲ! ನಿಮಗೇಕೆ ಹಬ್ಬದ ನೆನಪು ಬಂತು?"

"ಅದೇನೋ ಗೊತ್ತಿಲ್ಲ. ಮನೆಯ ಒಳಗೆ ಕಾಲಿಟ್ಟ ಕೂಡಲೇ ಈ ದಿನ ಹಬ್ಬವಿರಬೇಕು ಎನ್ನಿಸಿತು. ಗಾಳಿಯಲ್ಲೇ ಏನೋ ಒಂದು ತರಹ ಸಂಭ್ರಮ. ನಿನ್ನ ಮುಖದಲ್ಲಿನ ಕಳೆ..."

"ಕೊಳೆ ಇರಬಹುದು ಕೆಲಸ ಮುಗಿದಾಗಿನಿಂದ ಮುಖ ತೊಳೆದಿಲ್ಲ"

–ವನಜಾ ನಕ್ಕಳು.

"ಹಾ...ನಾನು ಹೇಳಲಿಲ್ಲವೇ? ನಿನ್ನ ಮಾತಿನಲ್ಲಿ, ನಗುವಿನಲ್ಲಿ ಸಂತೋಷ ಹೊನಲಾಗಿ ಹರೀತಿದೆ. ಅದರಿಂದಲೇ ಮನೆಯ ವಾತಾವರಣವೇ ಬದಲಾಯಿಸಿದೆ."

ತನ್ನ ಮಾತನ್ನು ದೃಢಪಡಿಸುವಂತೆ ಕೇಶವ ಕುರ್ಚಿಯಲ್ಲಿ ದೇಹವನ್ನು ನುಗ್ಗಿಸಿ ಸುತ್ತ ನೋಟ ಹರಿಸಿದ.

"ಮನೆಯಲ್ಲಿ ಏನೂ ಬದಲಾಗಿಲ್ಲ. ಎಲ್ಲ ಇದ್ದಂತೆಯೇ ಇದೆ. ನಿಮಗೇ ಏನೋ ಒಳ್ಳೆಯ ತಿಂಡಿ ತಿನ್ನುವ ಆಸೆಯಾಗಿರಬೇಕು. ಅದಕ್ಕೇ ಹಬ್ಬದ ನೆನಪು ಬಂದಿರಬೇಕು."

"ಹೋಗಲಿ ಬಿಡು. ಈ ವಾದ ಮುಗಿಯೋದಿಲ್ಲ. ತಿನ್ನಲು ಏನಾದರೂ ಇದೆಯೋ? ಅಥವಾ ಬರೀ ಕಾಫೀನೋ?"

"ಇಲ್ಲಾಂದ್ರೆ, ತಿಂಡಿ ಮಾಡಿದೇನೆ"

–ಎನ್ನುತ್ತ, ವನಜಾ ಒಳಗೆ ಹೋಗಿ ತಟ್ಟೆಯಲ್ಲಿ ಒಗ್ಗರಣೆ ಹಾಕಿದ ಅವಲಕ್ಕಿ, ರವೆ ಸಜ್ಜಿಗೆ ತಂದು ಮುಂದಿಟ್ಟಳು

ಕೇಶವನ ಕಣ್ಣು ಉತ್ಸಾಹದಿಂದ ಅರಳಿತು. ಊಟ ತಿಂಡಿಗಳಲ್ಲಿ ಭೋಗಿ ಆತ. ಕಾರ್ಪಣ್ಯವೆಂದರೆ ಆಗದು. ಅದನ್ನು ತಿಳಿದೇ ವನಜಾ

ಇದ್ದುದನ್ನು ಹೊಂದಿಸಿಕೊಂಡು ಅವನಿಗೆ ರಸಗವಳ ಸಿದ್ಧಪಡಿಸುತ್ತಿದ್ದಳು.

ಕೇಶವ ಎಂದೂ ಅವಳ ಶ್ರಮಕ್ಕೆ ಅನ್ಯಾಯ ಮಾಡುತ್ತಿರಲಿಲ್ಲ. ಸಂತೋಷದಿಂದ ಸವಿಯುತ್ತಿದ್ದ.

ಆದರೂ ? ಇಂದು ?

ಒಂದರ ಜಾಗದಲ್ಲಿ ಎರಡಿದೆ. ಒಂದು ಸಿಹಿ, ಒಂದು ಖಾರ. ತಿನ್ನುವುದಕ್ಕೇನೋ ಸೊಗಸು. ಆದರೆ ಸಾಮಾನು ಎಲ್ಲಿ ಹೊಂದಿಸಿದಳೊ ?

ನಾಲಗೆ ತಿಂಡಿಯ ರುಚಿಯುನ್ನು ಸವಿಯುತ್ತಿದ್ದಂತೆ, ತಲೆ ಯೋಚಿಸಲು ತೊಡಗಿತ್ತು.

"ವನಜಾ ..."

"ಕರೆದಿರಾ ?"

"ಹೂಂ-ಕರೆದೆ. ರಂಗ ಎಲ್ಲಿ ?"

"ಆಟಕ್ಕೆ ಹೋಗಿದ್ದಾನೆ, ಎದುರು ಮನೆಗೆ. ಕೂಗಲೆ ?"

"ಬೇಡ. ಎಮರಿಗೆ ಕಾಣಿಸಲಿಲ್ಲವಲ್ಲ. ಎಲ್ಲಿ ಎಂದು ಕೇಳಿದೆ. ಅವಲಕ್ಕಿ ಬಹಳ ಚೆನ್ನಾಗಿದೆ ಕಣೆ"

"ಇನ್ನು ಸ್ವಲ್ಪ ತರಲೆ ?"

"ಬೇಡ ಮಹಾರಾಯಿತ್ತಿ. ಹೊಗಳಿದರೆ ನನ್ನ ಹೊಟ್ಟೆಗೇ ಉಬ್ಬಸ. ಮಾಡಿದ್ದು ನಿನಗೂ ಮಗುವಿಗೂ ಇರಲಿ. ಚೆನ್ನಾಗಿದೆಯೆಂದು ನಾನೇ ಮುಗಿಸಿಬಿಟ್ಟರೆ ?"

"ಇಲ್ಲ ನಮಗೂ ಉಳಿಸಿದೇನೆ. ಎದುರು ಮನೆ ಜಾನಕಿ ಊರಿನಿಂದ ಅವಲಕ್ಕಿ ತಂದಿದ್ದಳಂತೆ. ನನಗೂ ಸ್ವಲ್ಪಕೊಟ್ಟಳು. ಸಜ್ಜಿಗೆಯ ಜೊತೆಗೆ ಇರಲೆಂದು ಮಾಡಿದೆ."

"ಅದೇನೋ ಸರಿ. ನಮ್ಮ ಕಾರ್ಪಣ್ಯ ದಿನಾ ಇದ್ದದ್ದೇ. ಇದ್ದ ದಿವಸ ತೃಪ್ತಿಯಾಗುವಂತೆ ತಿನ್ನೋದು."

"ಒಬ್ಬೊಬ್ಬರಿಗೆ ಒಂದೊಂದರಲ್ಲಿ ತೃಪ್ತಿ ಅಲ್ಲವೆ ?"

"ಒಪ್ಪಿದೆ. ನಿನಗೆ ಯಾವ ಬಯಕೆ ? ಹೇಳಿ ಬಿಡು. ಇದು ಯಾವುದೋ ಮುಂಬರುವ ವಿಷಯಕ್ಕೆ ನಾಂದಿ ಎಂದು ನನಗೆ ಆಗಲೇ

ಹಸಿವು ಹಿಂಗಿ ತೃಪ್ತನಾದ ಕೇಶವ ಸಮಾಧಾನದಿಂದಲೇ ಕೇಳಿದ.

ವನಜಳಿಗೂ ಸಮಾಧಾನವೇ. ಈಗ ಧೈರ್ಯವಾಗಿ ಏನುಬೇಕಾದರೂ ಕೇಳಬಹುದು. ಒಂದು ವೇಳೆ ಕೇಳಿದ ಕೆಲಸ ಆಗದಿದ್ದರೂ ಕೋಪದಿಂದ ಹಾರಾಡುವ ಭಯವಿಲ್ಲ.

ಸಂಸಾರವೆಂದ ಮೇಲೆ ಭಿನ್ನಾಭಿಪ್ರಾಯ ಇದ್ದೇ ಇರುತ್ತದೆ. ಏನಿದ್ದರೂ ಸುಲಭದಲ್ಲಿ ಸರಿಹೋಗಿಸಿ ಕೊಳ್ಳುತ್ತಿದ್ದರು. ಆದರೆ ದೇವರ ಸೇವೆ, ದೇವ ಸ್ಥಾನಗಳ ವಿಷಯಕ್ಕೆ ಇಬ್ಬರ ನಡುವೆ ದೊಡ್ಡ ಕಮರಿಯೇ ಇತ್ತು.

ಪೂಜೆ, ಪುರಸ್ಕಾರ, ಅದಕ್ಕೆ ಸಂಬಂಧಿಸಿದಂತೆ ಮಾಡುವ ಊಟ, ಉಪಚಾರ ಒಂದರಲ್ಲೂ ಕೇಶವನಿಗೆ ನಂಬಿಕೆಯಿಲ್ಲ.

"ದೇವರು ನಾವು ಕೊಡುವ ಈ ಕೂಳಿಗಾಗಿ ಕಾದಿದಾನೆಯೆ ? ನೀನು ನೈವೇದ್ಯ ಮಾಡಲಿ ಎಂದು ಅವನೇನು ಬಾಯಿಬಿಟ್ಟು ಕೂತಿಲ್ಲ. ಬೆಳಗಿನಿಂದ ಮಗೂನ ಅಳಿಸಿಕೊಂಡು ಒದ್ದಾಡುತ್ತಿದೀಯಲ್ಲ. ನಿನಗೆ ಬುದ್ಧಿ ಇದಯೇ ? ಮೊದಲು ಮಗೂನ ಕರೆಕೊಂಡು, ನೀನು ಮಾಡಿರೋದನ್ನ ಅದಕ್ಕೆ ಕೊಡು. ದೇವರ ಇರೋದು ನಿಜವಾದರೆ ಅವನಿಗೆ ನಿಜವಾಗಿ ಪ್ರೀತಿಯಾಗುತ್ತೆ"

–ಎನ್ನುತ್ತಿದ್ದ.

ಸಂಪ್ರದಾಯವಂತರ ಮನೆಯಲ್ಲಿ ಹಬ್ಬ ಹರಿದಿನಗಳನ್ನು ಚಾ-ಚೂ ತಪ್ಪದೇ ನಡೆಸಿಕೊಂಡು ಬರುತ್ತಿದ್ದವರ ನಡುವೆ ಬೆಳೆದವಳು ವನಜಾ. ಗಂಡನ ಈ ಧೋರಣೆ ಅವಳಿಗೆ ನುಂಗಲಾರದ ತುತ್ತಿನಂತೆ ಇತ್ತು.

"ಹೇಗೆ ಹೇಳೊದು?"

ವನಜಾ ಮನಸ್ಸನ್ನು ಹುರಿ ಮಾಡುತ್ತಿದ್ದಳು. ಹೇಳುವ ಆತುರ ಮುಖ ದಲ್ಲಿ ಕಾಣಿಸಿದರೂ ತುಟಿ ಅಲ್ಲಾಡಲಿಲ್ಲ.

ಕೇಶವ ಅವಳ ಹೊಯ್ದಾಟವನ್ನು ಗಮನಿಸಿದ. ಹತ್ತಿರ ಬಂದು ಅವಳ ಕೈಹಿಡಿದು ಕೇಳಿದ–

"ಅದೇನು ಹೇಳಿಬಿಡು. ಕೇಳುವಾ. ಯಾವುದಾದರೂ ಪೂಜೆ ಮಾಡಬೇಕೋ ?"

"ಇಲ್ಲ ..."

"ಮತ್ತೆ ?"

"ನಾಳೆ ರಂಗನಾಥನ ಜಾತ್ರೆ."

-ವನಜಾ ಅವನು ಹಿಡಿದಿದ್ದ ಕೈಯನ್ನು ಬಲವಾಗಿ ಅದುಮಿ ಅವನ ಮುಖವನ್ನೇ ನೋಡುತ್ತಾ ಕೇಳಿದಳು.

ಮಗುವಿನಂತಹ ಅವಳ ಮುಗ್ಧ ಮುಖದಲ್ಲಿ ಆಸೆ ಹೂವಾಗಿ ಅರಳಿದಂತೆ ಕಾಣಿಸಿತು.

ಎಂತಹ ಸುಂದರ ನೋಟ.

ಬೇರೆ ಸಮಯವಾಗಿದ್ದರೆ ಕೇಶವ ವೈವರಿತು ಆ ಚೆಲುವನ್ನು ಆಸ್ವಾದಿಸುತ್ತಿದ್ದ.

ಆದರೆ ಈಗ? ಆ ನೋಟದ ಹಿಂದಿದ್ದ ಆರ್ತತೆ ಅವನು ಮುಂದು ವರಿಯದಂತೆ ತಡೆಯಿತು.

"ಏನಿದು ವನಜಾ? ರಂಗನಾಥನ ಜಾತ್ರೆ ನೋಡಿಲ್ಲವೆ? ಎಂದೂ ನೋಡದವಳಂತೆ ಕೇಳ್ತೀಯಲ್ಲ"

"ಬಹಳ ಹಿಂದೆ ನೋಡಿದ್ದೆ. ನಿಮ್ಮೊಡನೆ ಬಂದ ಮೇಲೆ ಈ ಕಡೆ ಬಂದೇ ಇರಲಿಲ್ಲ. ಏನೋ ಅಕಸ್ಮಾತ್ ಈ ವರ್ಷ ಇಲ್ಲಿದೇವೆ. ಬರುವ ವರ್ಷ ಎಲ್ಲಿಗೆ ಹಾಕ್ತಾರೋ? ಸರ್ಕಾರದ ಕೆಲಸ. ಹತ್ತಿರ ಬಂದಿರುವಾಗ ಹೋಗೋಣ...."

ವನಜಾ ತಡೆ ತಡೆದು ತನ್ನ ಆಸೆಯನ್ನು ಗಂಡನ ಮುಂದಿಟ್ಟಳು.

ಕೇಶವನ ಮುಖ ಗಂಭೀರವಾಯ್ತು.

"ನಿನಗೆ ಗೊತ್ತಿದೆ. ನನಗೆ ಅವೆಲ್ಲ ಸ್ವಲ್ಪವೂ ಇಷ್ಟವಿಲ್ಲ. ದೇವರಿಗೆ ಏನಾದರೂ ಕೊಡಬೇಕೆನಿಸಿದರೆ, ಯಾರಾದರೂ ತೀರ ಗತಿಯಿಲ್ಲದವರಿಗೆ ಕೊಡು."

"ಕೊಡುವ ವಿಷಯವಲ್ಲ ಇದು. ದೇವರ ದರ್ಶನ ಮಾಡಬೇಕು. ರಥದ ಮೇಲಿರುವ ದೇವರಿಗೆ ಹಣ್ಣುಕಾಯಿ ಒಪ್ಪಿಸಬೇಕು"

"ನನಗೆ ಬೇಷರಮಾಡಿಯಾದರೂ ಒಪ್ಪಿಸಬೇಕೆ? ಅಷ್ಟು ದೊಡ್ಡದೆ ನಿನ್ನ ಆಸೆ?"

ಕೇಶವ ಮೆಲ್ಲಗೆ ಕೇಳಿದರೂ ಅವನ ಧ್ವನಿಯಲ್ಲಿ ತಿರಸ್ಕಾರವಿತ್ತು.

ಆಕಾಂಕ್ಷೆಯಿಂದ ಅರಳಿದ್ದ ಮುಖ 'ಮುಟ್ಟಿದರೆ ಮುನಿಯುವ' ಗಿಡದ ಎಲೆಯಂತೆ ಮುದುರಿಕೊಂಡಿತು.

"ಬಿಡಿ-ನನ್ನದೇ ತಪ್ಪು. ನಿಮ್ಮ ಸ್ವಭಾವ ತಿಳಿದೂ ಹರಕೆ ಮಾಡಿದ್ದು ನನ್ನ ತಪ್ಪು. ಆದರೆ ಆ ಸಮಯ ಹಾಗಿತ್ತು."

"ಹರಕೆ ? ಯಾವಾಗ ಮಾಡಿದ್ದೆ ?"

"ಹೋದ ವರ್ಷ ರಂಗನಿಗೆ ಖಾಯಿಲೆಯಾಗಿದ್ದು ನೆನಪಿದೆಯೆ ?"

"ಇಲ್ಲದೇ ಉಂಟೆ? ಮೃತ್ಯುವಿನ ಬಾಯಿನವರೆಗೆ ನುಸುಳಿದ್ದ ರಂಗ. ಆಗ ಮಗು ಅನುಭವಿಸಿದ್ದನ್ನು ಮರೆಯಬಲ್ಲೆನೇ ನಾನು ?"

ಆ ಕರಿನ ದಿನಗಳ ನೆನಪಿನಿಂದ ಕುಂಠಿತನಾಗಿ ಕೇಶವ ಪ್ರಶ್ನಿಸಿದ.

"ಆಗ, ಒಂದು ದಿನ, ಮಗುವಿಗೆ ವಿಪರೀತ ಸಂಕಟ. ನೀವೂ ಮನೇಲಿರಲಿಲ್ಲ. ಮಗುವನ್ನು ಡಾಕ್ಟರ ಬಳಿಗೂ ಕರೆದೊಯ್ಯುವಂತಿರಲಿಲ್ಲ. ಗಳಿಗೆ ಗಳಿಗೆಗೆ ಸಂಕಟ ಹೆಚ್ಚಾಗುತ್ತಿತ್ತು. ನನಗೆ ಒಂದೂ ತೋರಲಿಲ್ಲ. ಅಂತಹ ಹೊತ್ತಿನಲ್ಲಿ—'ದೇವರೆ ನನ್ನ ಮಗುವನ್ನು ಉಳಿಸು. ಅವನೊಡನೆ ಬಂದು ನಿನ್ನ ಸೇವೆ ಮಾಡ್ತೇವೆ. ರಥದ ಮೇಲೆ ನೀನಿರುವಾಗ ಫಲ ಪುಷ್ಪ ಅರ್ಪಿಸುತ್ತೇನೆ ? ಎಂದು ಪ್ರಾರ್ಥಿಸಿಕೊಂಡೆ .."

ವನಜಳ ಕೊರಳು ಬಿಗಿದು, ಕಣ್ಣಲ್ಲಿ ನೀರು ತುಂಬಿತು. ಕೈಹಿಡಿದು ಸಹಾನುಭೂತಿಯಿಂದ ನೋಡುತ್ತಿದ್ದ ಇನಿಯನ ಸಾನ್ನಿಧ್ಯ ಮರೆತಂತಿತ್ತು. ಕೇವಲ ತನ್ನ ಮಗುವಿಗಾಗಿ ಬೇಡುವ ಆರ್ತಳಾದ ತಾಯಿಯಾಗಿ ಕಾಣಿಸಿದಳು.

'ಬೇಡ, ಹೋಗುವುದು ಬೇಡ. ಅದರಲ್ಲಿ ನನಗೆ ನಂಬಿಕೆಯಿಲ್ಲ'—ಎಂದು ಚೀರಬೇಕೆನಿಸಿತು ಕೇಶವನಿಗೆ. 'ಅಷ್ಟು ಹೋಗಲೇಬೇಕೆನಿಸಿದರೆ ನೀನು ಮಗುವಿನೊಡನೆ ಹೋಗು. ನನ್ನ ಕರೆಯಬೇಡ' ಎಂದೇಕೆ ಹೇಳಬಾರದು ? ಮನಸ್ಸು ಹೊಯ್ದಾಡಿತು.

ಅದರ ಛಾಯೆ ಮುಖದ ಮೇಲೆ ಮೂಡಿತು.

ವನಜಾ ಕೂಡಲೇ ಅದನ್ನು ಗುರುತಿಸಿದವಳು, ಕೇಶವನ ಭುಜದ ಮೇಲೆ ಕೈ ಇಟ್ಟು ನಯವಾಗಿ ಕೇಳಿದಳು—

"ನಾಳೆ ಹೋಗೋಣವೇ ? ದಯವಿಟ್ಟು 'ಇಲ್ಲ' ಎನ್ನಬೇಡಿ. ನಾನು ಎಂದೂ ನಿಮ್ಮನ್ನು ಯಾವುದಕ್ಕೂ ಪೀಡಿಸಿಲ್ಲ."

ಆ ಪ್ರಾರ್ಥನೆಗೆ ಸಮ್ಮತಿಸದಿರಲು ಕಲ್ಲು ಹೃದಯುದವರಾಗಿರಬೇಕು. ಕೇಶವ ಒರಟ. ಅವನಿಗೆ ಇವುಗಳಲ್ಲಿ ನಂಬಿಕೆಯಿಲ್ಲ, ನಿಜ. ಆದರೆ ಅವನ ಹೃದಯ ಕಲ್ಲಾಗಿರಲಿಲ್ಲ.

* * *

ಮಾಘಮಾಸದ ಚಳಿ ಗಾಳಿ ಮೈ ಕೊರೆಯುವಂತಿತ್ತು. ಮಂಜಿನ ತೆರೆಯನ್ನು ಭೇದಿಸಿಕೊಂಡು ರೈಲು ಮುಂದೆ ಓಡುತಿತ್ತು.

ತಾಯಿ ತಂದೆಯರ ನಡುವೆ ಮುದ್ದಿನ ಮುದ್ದೆಯಂತೆ ರಂಗ ಕುಳಿತಿದ್ದ. ಅವನ ಗುಂಗುರು ಕೂದಲು ಗಾಳಿಗೆ ನರ್ತಿಸುತ್ತಿತ್ತು ಕೆಂಪು ಬಣ್ಣದ ಸ್ವೆಟರ್ ಅವನ ಕೆನ್ನೆಯ ರಂಗು ಎದ್ದು ಕಾಣುವಂತೆ ಮಾಡಿತ್ತು. ಅವನ ಐದು ವರ್ಷಗಳ ಎಳೆಯ ಬಾಳಿನಲ್ಲಿ ಹೊರಗೆ ಹೋಗಿದ್ದು ಎಲ್ಲೋ ಒಂದೆರಡು ಸಲ. ಇಂದಿನ ರೈಲು ಪ್ರಯಾಣ ಅವನ ಉತ್ಸಾಹವನ್ನು ಚಿಮ್ಮಿಸುತ್ತಿತ್ತು.

ಅವನ ಮಾತಿಗೆ, ಕೇಳುತ್ತಿದ್ದ ಪ್ರಶ್ನೆಗಳಿಗೆ ಮಿತಿಯೇ ಇರಲಿಲ್ಲ. ಮುದ್ದಾದ ಮಗು. ಅತಿ ಚುಟಿ. ಗಾಡಿಯಲ್ಲಿದ್ದವರ ಗಮನವನ್ನೆಲ್ಲ ಸೆಳೆದಿತ್ತು.

ವನಜಾ ಕೃತಾರ್ಥಳಾದಂತೆ, ತನ್ನ ಆಸೆ ಫಲಿಸಿತಲ್ಲ ಎಂಬ ನೆಮ್ಮದಿಯಿಂದ ತೃಪ್ತಿಯ ನಗೆ ಬೀರುತ್ತ ಕುಳಿತಿದ್ದರೂ ಅವಳ ಮನಸ್ಸು ರೈಲಿಗಿಂತ ವೇಗವಾಗಿ ತಾವು ಹೋಗುತ್ತಿದ್ದ ಜಾಗವನ್ನು ಅರಸಿ ಓಡುತ್ತಿತ್ತು.

ಬಣ್ಣ ಬಣ್ಣದ ಬಟ್ಟೆಗಳಿಂದ ಅಲಂಕೃತವಾಗಿದ್ದ ರಥ. ಅದರಲ್ಲಿ ರತ್ನಾಭರಣಗಳಿಂದ ಶೋಭಿತವಾದ ದೇವರ ಉತ್ಸವ ಮೂರ್ತಿ. ಎದುರಿಗೆ ಸಾವಿರಾರು ಜನರ ಗುಂಪು. ದೇವರ ಮೇಲೆ ಎರಚುತ್ತಿದ್ದ ಬಾಳೆಹಣ್ಣು, ದವನ ಎಲ್ಲವೂ ಅವಳ ಕಣ್ಣೆದುರಿಗೆ ನಿಂತಂತಾಯ್ತು.

ಎಷ್ಟು ವರ್ಷವಾಯ್ತೋ ನೋಡಿ!

ಆದರೂ ನೆನ್ನೆ ನೋಡಿದಷ್ಟು ನಿಚ್ಚಳ.

'ವನಜಳಿಗಾಗಿ ಬಂದುದಂತೂ ಆಯ್ತು. ಇನ್ನು ಸಂಜೆಯವರೆಗೆ ಹೇಗೆ ಹೊತ್ತು ಕಳೆಯೋದು? ಆ ಜಾತ್ರೇಲಿ ನೋಡೋದಾದರೂ ಏನಿದೆ? ಜೇಬಿನಲ್ಲಿ ಕಡಲೆಪುರಿ ತುಂಬಿಕೊಂಡು ಮೂರು ಕಾಸಿನ, ತಗಡಿನ ಪೀಪಿ ಊದುತ್ತ

ಆನಂದಿಸುತ್ತಿದ್ದ ಕಾಲ ಎಂದೋ ಕಳೆದುಹೋಯಿತಲ್ಲ !”

–ಕೇಶವ ಯೋಚಿಸುತ್ತಿದ್ದ.

ಜಾತ್ರೆಗೆ ಹೊರಟಿದ್ದ ಯಾತ್ರಿಕರನ್ನು ಇಳಿಸಿ ರೈಲು ಮುಂದೆ ಹೋಯ್ತು. ಮಗುವಿನ ಕೈಹಿಡಿದುಕೊಂಡು ಕೇಶವ ಜನರ ಗುಂಪಿನೊಡನೆ ಮುಂದೆ ನಡೆದ, ವನಜಾ ಕೈ ಚೀಲದೊಡನೆ ಅವನನ್ನು ಹಿಂಬಾಲಿಸಿದಳು.

ಗುಡಿ ಹತ್ತಿರವಾದಂತೆ ಜನಸಂದಣಿ ದಟ್ಟವಾಗತೊಡಗಿತು. ಇಬ್ಬರೂ ನಿಧಾನವಾಗಿ ಹೆಜ್ಜೆಹಾಕಿದರು. ಹಗ್ಗ ಹಿಡಿದು ನಿಂತಿದ್ದ ಜನ ಏಕಕಂಠದಿಂದ ಜಯಘೋಷ ಮಾಡಿದರು. ದೇವರನ್ನು ಹೊತ್ತಿದ್ದ ಬೃಹದಾಕಾರದ ತೇರು ನಿಧಾನವಾಗಿ ಚಲಿಸಿತು.

“ಗುಡಿಯ ಒಳಗೆ ಹೋಗಿ ರಂಗನಾಥನನ್ನು ನೋಡಿ ಬರೋಣ ಉತ್ಸವಮೂರ್ತಿಯನ್ನು ನೋಡಿದ್ದಾಯ್ತು ”

ವನಜಾ ಎಲ್ಲೋ ನೋಡುತ್ತಿದ್ದ ಕೇಶವನನ್ನು ಎಚ್ಚರಿಸಿದಳು.

“ಅಲ್ಲಿ ವಿಪರೀತ ಗಲಾಟೆ. ಹೋಗೋದು ಸಾಧ್ಯವೆ ? ಇಲ್ಲಿ ಬಯಲಾದ್ದರಿಂದ ದೂರ ನಿಂತು ನೋಡಿದೆವು. ಆ ಗುಂಪಿನಲ್ಲಿ, ಮಗುವನ್ನು ಕರೆದುಕೊಂಡು ? ನನಗಂತೂ ಸಾಧ್ಯವಿಲ್ಲ.”

ಕೇಶವ ಖಂಡಿತವಾಗಿ ಉತ್ತರಕೊಟ್ಟ.

“ಹಾಗಾದರೆ ನೀವು, ರಂಗ ಇಲ್ಲೇ ಇರಿ. ನಾನು ಒಳಗೆ ಹೋಗಿ ದೇವರನ್ನ ನೋಡಿಕೊಂಡು ಬೇಗ ಬಂದುಬಿಡ್ತೀನಿ. ಇಷ್ಟು ದೂರ ಬಂದು ಮೂಲ ದೇವರನ್ನು ನೋಡದೆ ಹೋಗೋದೆ ?”

“ಹೋಗು, ಬೇಗ ಬಂದ್ಬಿಡು. ತಡ ಮಾಡ್ಬೇಡ”

“ಹೂಂ ...ಮಗು ಹುಷಾರು ?”

ವನಜಾ ಒಳಗೆ ಹೋದಳು. ನುಗ್ಗುತ್ತಿದ್ದ ನೂರಾರು ಜನರ ನಡುವೆ ತಾನೂ ನುಗ್ಗಿದಳು. ಹಣ್ಣು ಕಾಯಿ ಒಪ್ಪಿಸುವುದಂತೂ ಸಾಧ್ಯವಿಲ್ಲ. ಒಂದು ಸಲ, ಒಂದೇ ಸಲ ದೇವರ ದರ್ಶನವಾದರೆ ಸಾಕು.

ಕೇಶವ ರಂಗನ ಕೈಹಿಡಿದು ಅಲ್ಲೇ ನಿಂತ. ಸುತ್ತ ಓಡಾಡುತ್ತಿದ್ದ ಜನರನ್ನು ನಿರಾಸಕ್ತಿಯಿಂದ ದಿಟ್ಟಿಸಿದ. ಜನಗಳ ಜಾತ್ರೆಯೇ ಅವನ ಮುಂದೆ ಸಾಗಿತ್ತು.

ಈಗ ಮಂಜು ಮರೆಯಾಗಿ ಬಿಸಿಲು ಸುಡುತ್ತಿತ್ತು. ಆಯಾಸದಿಂದ, ನೂಕುನುಗ್ಗಲಿಂದ ಜನಗಳ ಮುಖದಲ್ಲಿ ಬೆವರು ಸುರಿಯುತ್ತಿತ್ತು. ಕೆಲವರು ಭಕ್ತಿಯಿಂದ ಕೈ ಮುಗಿದು ನಿಂತಿದ್ದರು. ದೇವರಿಗಿಂತ ಹೆಚ್ಚಾಗಿ ಜನರನ್ನು ನೋಡುವುದರಲ್ಲೇ ಆಸಕ್ತರಾಗಿದ್ದರು ಕೆಲವರು. ಹಳ್ಳಿಯಿಂದ ಬಂದಿದ್ದ ಹೆಣ್ಣು ಮಕ್ಕಳು ಪಾತ್ರೆಯ ಅಂಗಡಿಯ ಮುಂದೆ ನಿಂತು ಚೌಕಾಸಿ ಮಾಡುತ್ತಿದ್ದರು.

ಗುಡಿಯ ಎದುರಿಗೆ ಎರಡು ಪಕ್ಕಕ್ಕೂ ಅಂಗಡಿಯ ಸಾಲು ಜಾತ್ರೆಗೆ ಬರುವವರನ್ನು ಆಕರ್ಷಿಸುತ್ತಿತ್ತು.

ಹಣ್ಣು, ಕಾಯಿ, ಕರ್ಪೂರ ಎಲ್ಲದಕ್ಕೂ ವ್ಯಾಪಾರ.

ಮಿಠಾಯಿ ಅಂಗಡಿಯ ಸುತ್ತ ಮಕ್ಕಳ ಗುಂಪು, ಸಕ್ಕರೆಗೆ ಇರುವೆ ಮುತ್ತಿದ ಹಾಗೆ! ರಂಗನ ಕಣ್ಣಿಗೆ ಇನ್ನೂ ಮಿಠಾಯಿ ಕಾಣಿಸಿರಲಾರದು. ನೋಡಿದ್ದರೆ ಹೀಗೆ ನಿಲ್ಲಲು ಅವಕಾಶ ಕೊಡುತ್ತಿದ್ದನೆ?

ಇದ್ದಕ್ಕಿದ್ದಂತೆ ಕೇಶವನ ಕಣ್ಣುಗಳು ಸಂತೋಷದಿಂದ ಇಷ್ಟಗಲ ವಾಯ್ತು. ಹಳೆಯ ಗೆಳೆಯ ರಾಘು ಗುಂಪಿನಲ್ಲಿ ದಾರಿ ಮಾಡಿಕೊಂಡು ಇವನೆಡೆಗೆ ನುಗ್ಗಿ ಬರುತ್ತಿದ್ದ.

ಕೈ ಕುಲುಕಿ, ಭುಜ ಹಿಡಿದು ಅಲುಗಿಸಿ, ಸ್ನೇಹ ಪ್ರದರ್ಶನವಾದ ಮೇಲೆ ಗೆಳೆಯರಿಬ್ಬರೂ ಮಾತಿಗೆ ನಿಂತರು. ಎಷ್ಟು ದಿನವಾಗಿತ್ತು ನೋಡಿ! ಅಷ್ಟು ಕಾಲದ ವಿಚಾರ ವಿನಿಮಯವಾಗಬೇಕಲ್ಲ.

ಕೇಶವನಿಗಂತೂ ಗೆಳೆಯನನ್ನು ನೋಡಿದ್ದು ದೇವರನ್ನು ನೋಡಿದ್ದಕ್ಕಿಂತ ಹೆಚ್ಚು ಸಂತೋಷವಾಗಿ, ಒಬ್ಬನೇ ನಿಂತಿದ್ದ ಬೇಸರ ಓಡಿಹೋಗಿತ್ತು. ಜಾತ್ರೆಗೆ ಬಂದದ್ದು ವ್ಯರ್ಥವಾಗಲಿಲ್ಲ ಎನಿಸಿತು.

"ಅಣ್ಣ-ಅಮ್ಮ ಬರ್ಲೇ ಇಲ್ಲ."

–ರಂಗ ತಂದೆಯನ್ನು ಕೇಳಿದ.

"ಬರ್ತ್ತಾಳೆ ಮರಿ, ಗುಡಿ ಒಳಗೆ ಹೋಗಿದಾಳೆ ಬರಬೇಕಲ್ಲ"

ಸ್ವಲ್ಪ ಕಾದು ಹುಡುಗ ಪುನಃ ಕೇಳಿದ—

"ಅಣ್ಣ-ನನಗೆ ಸೊಪ್ಪಿನ ಕಡ್ಲೇಕಾಯಿ ಬೇಕು"

"ಅಮ್ಮ ಬರ್ಲಿ ತಾಳು, ತಗೋಳೋಣ."

"ಊ—ಈಗ್ಲೇ ಬೇಕು"

-ರಂಗ ತಂದೆಯ ಕೈ ಹಿಡಿದು ಜಗ್ಗಿದ.

ಅವನಿಗೆ ಒಂದೇಟು ಕೊಡಬೇಕೆನಿಸಿತು ಕೇಶವನಿಗೆ. ಆದರೆ ಗೆಳೆಯ ಎದುರಿಗಿದ್ದ. ಮಾತಾಡದೆ ಮುಂದೆ ಹೋಗಿ ಐದು ಪೈಸೆಗೆ ಸೊಪ್ಪಿನ ಕಡಲೇ ಕಾಯಿ ಕೊಂಡು ಮಗುವಿಗೆ ಕೊಟ್ಟ.

ರಂಗ ತಂದೆಯ ಕೈ ಬಿಟ್ಟು ಎಡಗೈಲಿ ಕಂತೆ ಹಿಡಿದುಕೊಂಡು, ಬಲ ಗೈನಿಂದ ಒಂದೊಂದೇ ಕಾಯಿ ಬಿಡಿಸಿ, ಹಲ್ಲಿನಿಂದ ಕಚ್ಚಿ ಸಿಪ್ಪೆ ಸುಲಿಯು ತ್ತಿದ್ದ.

ಮಾತು ಮುಗಿಸಿ ಗೆಳೆಯ ಹೊರಟ. ಕೇಶವ ತಟ್ಟನೆ ತಿರುಗಿ ನೋಡಿದ. ರಂಗ ಎಲ್ಲೂ ಕಾಣಿಸಲಿಲ್ಲ.

"ರಂಗಾ"

-ಕೇಶವ ಮೈಮರೆತು ಕೂಗಿದ. ಇಲ್ಲೇ ನಿಂತಿದ್ದ ಹುಡುಗ. ಇಷ್ಟು ಬೇಗ ಎಲ್ಲಿ ಹೋದಾನು ?

ಕೇಶವನ ಎದೆ ಜೋರಾಗಿ ಹೊಡೆದುಕೊಂಡಿತು. ತನ್ನ ಸುತ್ತ ಜನ ರಿರುವುದು ಮರೆತುಹೋಯ್ತು. ಹುಚ್ಚನಂತೆ ಬೇಗ ಬೇಗ ಹೆಜ್ಜೆ ಹಾಕುತ್ತ ಅಂಗಡಿಯ ಮುಂದೆಲ್ಲ ಓಡಾಡಿದ. ಮಕ್ಕಳ ಗುಂಪನ್ನೆಲ್ಲ ಸುತ್ತಿಬಂದ. ಕೆಂಪು ಬಣ್ಣ ಕಾಣಿಸಿದ ಕಡೆಗೆಲ್ಲ ದೃಷ್ಟಿಹರಿಸಿದ.

ಎಲ್ಲೂ ರಂಗನ ಸುಳಿವಿಲ್ಲ.

ಸ್ವಲ್ಪ ಹೊತ್ತಿಗೆ ಮುಂಚೆ ಇದ್ದ ಅನಾಸಕ್ತಿ, ಬೇಸರ ಮರೆಯಾಗಿ, ಯಾವುದೋ ಹೇಳಲಾಗದ ಭಾವ ಅವನ ಎದೆಯನ್ನು ತುಂಬಿತು. ಒಂದೇ ಕ್ಷಣದಲ್ಲಿ ಅದೆಂತಹ ಬದಲಾವಣೆ ! ಅದೆಂತಹ ಅನುಭವ !

"ಏನು ಸ್ವಾಮಿ ? ಏನಾದರೂ ಕಳೆದುಕೊಂಡಿರಾ ?"

ಇವನ ಮುಖದ ಹುಚ್ಚು ವೇದನೆ ನೋಡಿ, ಎದುರಿಗೆ ಬರುತ್ತಿದ್ದವ ನೊಬ್ಬ ಕೇಳಿದ.

"ಮಗು....ನಮ್ಮ ಹುಡುಗ ಎಲ್ಲೊ ತಪ್ಪಿಸಿಕೊಂಡಿದಾನೆ" ಕೇಶವ ಮುಂದೆ ನಡೆಯುತ್ತಲೇ ಹೇಳಿದ.

"ಎಷ್ಟು ಹೊತ್ತಾಯ್ತು ?"

"ಇದೇ ಈಗ ಇದ್ದ. ಕಡ್ಲೇಕಾಯಿ ತಿನ್ನುತ್ತ ನಿಂತಿದ್ದ. ತಿರುಗಿ ನೋಡಿದರೆ ಇಲ್ಲವೇ ಇಲ್ಲ."

"ಇಷ್ಟು ಬೇಗ ಎಲ್ಲಿ ಹೋದೀತು ? ಇಲ್ಲೇ ಎಲ್ಲೋ ನಿಂತಿರಬೇಕು."

"ಇಲ್ಲೆಲ್ಲ ನೋಡಿದೆ, ಎಲ್ಲೂ ಇಲ್ಲ. ಕೆಂಪು ಬಣ್ಣದ ಸ್ವೆಟರ್ ಹಾಕಿಕೊಂಡಿದ್ದ...."

"ಕೆಂಪು ಸ್ವೆಟರ್ ಹಾಕಿಕೊಂಡಿದ್ದ ಒಂದು ಹುಡುಗ ನದೀ ಕಡೆ ಹೋಗ್ತಾ ಇದ್ದ."

"ರಾಮಾ"

–ಮುಂದಿನ ಮಾತು ಕೇಳಿಸಿಕೊಳ್ಳದೆ ಕೇಶವ ನದಿಯ ದಿಕ್ಕಿಗೆ ಓಡಿದ

"ಮಗು ಹುಷಾರು ."

ವನಜಾ ಹೇಳಿದ್ದು ಪುನಃ ಹಿಂದಿನಿಂದ ಕೂಗಿ ಹೇಳುತ್ತಿರುವಂತೆ ಕೇಳಿಸಿತು.

ಅಷ್ಟು ಖಾಯಿಲೆಯಾಗಿ ಮಗು ಬದುಕಿ ಉಳಿದಿತ್ತು. ಆ ಆತಂಕದ ನಿದ್ದೆಯಿಲ್ಲದ ರಾತ್ರಿಗಳು, ಡಾಕ್ಟರ ಷಾಪಿಗೆ ಬಿಡುವಿಲ್ಲದ ಓಡಾಟ, ಎಲ್ಲ ಸಾರ್ಥಕವಾಗಿತ್ತು. ಆದರೆ ಇಂದು ?

ಅಯ್ಯೋ, ಇಂದು ರಾಘು ಸಿಕ್ಕದೆ ಇದ್ದಿದ್ದರೆ ?

ಮಗುವಿಗೆ ಕಡ್ಲೇಕಾಯಿ ಕೊಡಿಸದಿದ್ದರೆ ? ಅದು ತನ್ನ ಕೈ ಬಿಡುತ್ತಿರಲಿಲ್ಲ. ಅವನೊಡನೆ ನಿರಾಂತಕವಾಗಿ ಮಾತಾಡಲೆಂದಲ್ಲವೆ ? ಅದಕ್ಕೆ ಸೊಪ್ಪಿನ ಕಡ್ಲೇಕಾಯಿ ಕೊಡಿಸಿದ್ದು ? ಒಂದೇ ಸಮ ಕೈಹಿಡಿದು ಜಗ್ಗಿದ್ದ ಹುಡುಗ

ಇನ್ನು ಕೈಹಿಡಿದು ಎಳೆಯೋರು ಯಾರು ?

ಕೇಶವ ತನ್ನ ಕೈಬೆರಳು ಮುಟ್ಟಿ ನೋಡಿಕೊಂಡ ಮಿಂಚಿನಂತೆ ಹಾಯ್ದು ಬಂದ ಯೋಚನೆಯೊಂದು ಅವನ ಓಟವನ್ನು ಹಿಡಿದು ನಿಲ್ಲಿಸಿತು.

ವನಜಾ ಈ ವೇಳೆಗೆ ಗುಡಿಯಿಂದ ಹೊರಗೆ ಬಂದು ನಮ್ಮನ್ನು ಹುಡುಕುತ್ತಿರಬಹುದಲ್ಲವೆ ? ನಮ್ಮಿಬ್ಬರನ್ನೂ ಕಾಣದೆ ಎಷ್ಟು ಹೆದರಿರುತ್ತಾಳೊ ?

ಕೇಶವ ತಟ್ಟನೆ ನಿಂತುಬಿಟ್ಟ. ಮುಂದೆ ಹೋಗಲಾರ; ಹಿಂದೆ

ಅಡಿಯಿಡಲಾರ.

ನಿಂತಲ್ಲಿಂದಲೇ ತನ್ನಲ್ಲಿ ಉಳಿದಿದ್ದ ಶಕ್ತಿಯನ್ನೆಲ್ಲಾ ಬಿಟ್ಟು ಚೀರಿದ—
"ರಂ ...ಗಾ ..."

ಈ ಸಲದ ಕೂಗು....ಆ ಆರ್ತಧ್ವನಿ ಕೇವಲ ಮಗುವನ್ನು ಉದ್ದೇಶಿಸಿ ಕೂಗಿದ ಕೂಗಾಗಿರಲಿಲ್ಲ.

ದೇವಸ್ಥಾನದ ಗರ್ಭಗುಡಿಯೊಳಗೆ ತೋಳಿಗೆ ತಲೆಯಿಟ್ಟು ಮಲಗಿದ್ದ ದೇವನನ್ನು ಅರಿಸಿಕೊಂಡು ಹೋಗಿತ್ತು ಆ ಕೂಗು. ಕೇಶವನಿಗೆ ಅರಿವಿಲ್ಲ ದೆಯೇ ಆ ಆರ್ತನಾದ ಹೊರಬಂದಿತ್ತು.

"ರಂ ಗಾ .!"

ಕೂಗು ಹೊರಬಂದಾಗ ಕೇಶವ ಕಣ್ಣು ಮುಚ್ಚಿದ. ಹಾಗೆ ಎಷ್ಟು ಹೊತ್ತು ನಿಂತಿದ್ದನೋ ? ಪುಟ್ಟ ಕೈಗಳೆರೆಡು ಹಿಂದಿನಿಂದ ಕೇಶವನ ಮಂಡಿ ಯನ್ನು ತಬ್ಬಿದ್ದುವು

ಕೇಶವ ಬೆಚ್ಚಿ ಕಣ್ಣು ತೆರೆದ.

ದುಂಡು ಮೊಗದ, ಗುಂಗುರು ಕೂದಲಿನ, ಹೊಳಪು ಕಣ್ಣುಗಳ ರಂಗ ಓಡಿಬಂದು ತಂದೆಯನ್ನು ತಬ್ಬಿದ್ದ.

ಅವನ ಕೆನ್ನೆಯ ಮೇಲೆ ಕಣ್ಣೀರು ಹರಿದು ಕರೆಗಟ್ಟಿತ್ತು.

ಕೇಶವ ಮಗನನ್ನು ಬಾಚಿ ಅಪ್ಪಿ ಎತ್ತಿಕೊಂಡು ಮುದ್ದಿಡುತ್ತ,

"ಎಲ್ಲಿ ಹೋಗಿದ್ಯೋ ಮರಿ ?"

ಎಂದ. ಅವನ ಧ್ವನಿ ನಡುಗುತ್ತಿತ್ತು.

ಕೆಲವು ಕ್ಷಣಗಳ ಹಿಂದೆ ಆದ ಅನುಭವಕ್ಕಿಂತ ಇದು ತೀರಾ ಭಿನ್ನ ವಾಗಿತ್ತು. ಆ ರುದ್ರ ಗಂಭೀರ ಗಳಿಗೆಯಲ್ಲಿ ಅವನ ಹೃದಯ ದೇವರನ್ನು ಕಂಡುಕೊಂಡಿತ್ತು.

ವನಜಾ ನಮ್ಮನ್ನು ಎಷ್ಟು ಹುಡುಕುವಳೊ ?

ಕೇಶವ ಮಗನನ್ನು ಎತ್ತಿಕೊಂಡೇ ಬೇಗ ಬೇಗ ಹೆಜ್ಜೆ ಹಾಕಿದ. ಸ್ವಲ್ಪ ದೂರ ನಡೆಯುವುದರ ಒಳಗೆ ವನಜಾ ಎದುರಿಗೆ ಬಂದಳು.

ಒಂದು ಕ್ಷಣದ ಹಿಂದೆ ಕೇಶವನ ಎದೆಯಲ್ಲಿ ನಡೆದ ವಿಪ್ಲವ ಅವಳಿಗೆ ಗೊತ್ತಿರಲಿಲ್ಲ. ಮಗು ಕಾಣೆಯಾಗಿದ್ದುದೂ ತಿಳಿಯದು.

ಧನ್ಯತೆಯ ಭಾವವೊಂದು ಮಾತ್ರ ಅವಳ ಮುಖದಲ್ಲಿ ನರ್ತಿಸುತ್ತಿತ್ತು.

# ಅಪರೂಪದ ಅತಿಥಿ

ಹೊತ್ತು ಬಹಳ ವೇಗವಾಗಿ ಚಲಿಸುತ್ತಿರುವಂತೆ ವೇಣಿಗೆ ತೋರಿತು.

ನಿಜ ..ವೇಗವಲ್ಲದೆ ಮತ್ತೇನು ?

ಐದು ದಿವಸ ಐದು ನಿಮಿಷಗಳಂತೆ ಜಾರಿ ಹೋಗಿದೆ. ಐದು ದಿವಸಗಳ ಹಿಂದೆ ನರಹರಿ ಕಾಗದ ಹಿಡಿದು ಓದುತ್ತಾ ಒಳಗೆ ಬಂದು ಗೆಳೆಯ ಚಂದ್ರು ಬರುವನೆಂದು ಸುದ್ದಿ ಹೇಳಿದ.

ಸುದ್ದಿಯ ಹಿಂದೆಯೇ ಗೆಳೆಯ ಬಂದ.

ನರಹರಿ–ನಾಗವೇಣಿ, ಇಬ್ಬರೂ ಉತ್ಸಾಹದಿಂದ ಅವನನ್ನು ಸ್ವಾಗತಿಸಿದರು. ಗೆಳೆಯನನ್ನು ನೋಡಿ ಆರು ವರ್ಷಗಳು ಆಗಿ ಹೋಗಿದ್ದುವು.

ಆರು ವರ್ಷ! ಬಹಳ ದೀರ್ಘ ಅವಧಿ

ಆ ಅವಧಿಯಲ್ಲಿ ಗೆಳೆಯ ಬದಲಾಯಿಸಿರುವುದು ಆಶ್ಚರ್ಯವಲ್ಲ. ತಾವೇ ಬದಲಾಯಿಸಿಲ್ಲವೇ ಈಗ ?

ಕಂಕಣ ಕಟ್ಟಿಕೊಂಡು ವೇಣಿಯೊಡನೆ ಹಸೆಯಲ್ಲಿ ಕುಳಿತಿದ್ದಾಗ ಚಂದ್ರು ಮದುವೆಯ ಚಪ್ಪರದ ತುಂಬ ಓಡಾಡಿದ್ದ

ಕುಂಕುಮ ತುಂಬಿದ ಕರಡಿಗೆಯನ್ನು ವೇಣಿಗೆ ಕೊಟ್ಟು

"ನರಹರಿ ನನ್ನ ಬಾಲ್ಯ ಸ್ನೇಹಿತ ಅವನು ನಿನಗೆ ಪತಿಯಾಗಿ ದೊರೆತಿರುವುದು ನಿನ್ನ ಸೌಭಾಗ್ಯ. ಅದು ಚಿರಕಾಲ ಇರಲಿ"–ಎಂದು ಹರಸಿ ಹೋಗಿದ್ದ

ಇಂದೇ ಅವನ ಮರುಭೇಟಿ.

ಗೆಳೆಯರ ನಡುವೆ ಮಾತಿನ ಮಳೆ ಹರಿಯಿತು. ಹಳೆಯ ನೆನಪುಗಳು ಅದರಲ್ಲಿ ಕೊಚ್ಚಿ ಹೋದುವು

ವೇಣಿ ತಂದುಕೊಟ್ಟ ಬಿಸಿ ಕಾಫಿ ಹೀರಿದ್ದು ಸಹ ಅವರಿಗೆ ನೆನಪಿಲ್ಲ.

ನರಹರಿ ಆಫೀಸಿಗೆ ಮೂರು ದಿನ ರಜ ಹಾಕಿ ಮನೆಯಲ್ಲೇ ಉಳಿದ. ಗೆಳೆಯನೊಡನೆ ಊಟ ತಿಂಡಿ ಹೊರಗೆ ಸುತ್ತುವುದು, ಇದರಲ್ಲಿ ವೇಳೆ

ಉರುಳಿದುದೇ ಗೊತ್ತಾಗಲಿಲ್ಲ

ವೇಣಿ ಒಳ್ಳೆಯ ಗೃಹಿಣಿ. ಅತಿಥಿಗೆ ಆದರಿಸಿ ಉಪಚರಿಸುವುದರಲ್ಲಿ ಸ್ವಲ್ಪವೂ ಹಿಂದಾಗಲಿಲ್ಲ. ಚಂದ್ರುವಿಗೆ ಅವರ ಮನೆಯಲ್ಲಿ ರಾಜೋಪಚಾರ ನಡೆಯಿತು

ಬೆಳಗ್ಗೆ ಏಳುವ ಹೊತ್ತಿಗೆ ಕಾಫಿ, ಎಂಟು ಗಂಟೆಗೆ ಪುನಃ ತಿಂಡಿ ಕಾಫಿ, ಹನ್ನೆರಡಕ್ಕೆ ರುಚಿಯಾದ ಊಟ, ನಿದ್ರೆ ಮುಗಿಸಿ ಏಳುವ ಹೊತ್ತಿಗೆ ಮತ್ತೆ ಬಿಸಿ ಬಿಸಿ ಫಲಾಹಾರ, ಸಂಜೆ ಗೆಳೆಯರು ಹೊರಗೆ ಸುತ್ತಿ ಬರುವಾಗಲೇ ರಾತ್ರಿಯ ಅಡಿಗೆಯ ಘಮ ಘಮ ಬಾಗಿಲಲ್ಲಿ ಅವರನ್ನು ಸ್ವಾಗತಿಸುತ್ತಿತ್ತು.

ವೇಣಿಯ ಗೆಲುವಿನ ಮುಖ, ಆವಳ ನಗು, ಮನೆಯನ್ನು ಬೆಳಗಿಸಿತು.

ಕೆಲಸವನ್ನು ಮುಗಿಸಿ ವೇಣಿ ಅವರೊಡನೆ ಮಾತಿಗೆ ಕೂರುತ್ತಿದ್ದಳು ಅವಳಿದ್ದರೆ ಮಾತಿಗೆ ಚೈತನ್ಯತುಂಬುತಿತ್ತು.

ಅದು ಗೆಳೆಯರಿಬ್ಬರಿಗೂ ಗೊತ್ತು.

ಆ ಮೋಡಿಗೆ ಒಳಗಾಗಿ ಹೊತ್ತಿನ ಪರಿವೆಯಿಲ್ಲದೆ ಕುಳಿತಾಗ ಎಚ್ಚರಿಸು ತ್ತಿದ್ದವಳೂ ಅವಳೇ!

"ಗಂಟೆ ಹನ್ನೊಂದಾಯ್ತು ಇನ್ನೂ ಮಲಗುವ ಯೋಚನೆಯಿಲ್ಲವೆ? ಬೆಳಗ್ಗೆ ನಾನು ಏಳುವುದು ತಡವಾದರೆ ನಿಮಗೆ ಕಾಫಿಗೆ ಸೊನ್ನೆ"

-ಎಂದು.ಮಾತಿಗೆ ಮುಕ್ತಾಯ ಹಾಕುತ್ತಿದ್ದಳು.

ಚಂದ್ರು ಸ್ನಾನಮಾಡಲು ಹೋಗಿದ್ದ. ನರಹರಿ ಸ್ನಾನವನ್ನು ಮುಗಿಸಿ, ಕ್ರಾಪು ಬಾಚಿಕೊಳ್ಳುತ್ತಿದ್ದ. ಮಾಡಿದ ತಿಂಡಿಯನ್ನು ತಟ್ಟೆಗಳಿಗೆ ಇಡುತ್ತ ವೇಣಿ,

"ತಿಂಡಿ ತಗೋತೀರ ಆರಿ ಹೋಗುತ್ತೆ."

-ಎಂದು ಕೂಗಿದಳು.

"ಸ್ವಲ್ಪ ತಾಳು. ಚಂದ್ರು ಸ್ನಾನಕ್ಕೆ ಹೋಗಿದಾನೆ. ಅವನೂ ಬರಲಿ ಏನು ಮಾಡಿದ್ದಿ ?"

"ರವೆ ಇಡ್ಲಿ-ಪಲ್ಯ ಮಾಡಿದೀನಿ"

"ಒಳ್ಳೆಯದಾಯ್ತು ವಿದ್ಯಾರ್ಥಿ ದೆಸೆಯಿಂದಲೂ ಅವನಿಗೆ ಇಡ್ಲಿ ಬಹಳ ಇಷ್ಟವಾದ ತಿಂಡಿ. ನಾವು ಕಾಲೇಜಿನಲ್ಲಿ ಓದುತ್ತಿದ್ದಾಗ ಹೋಟೆಲಿನ ಮಾಣಿ

ನಾವು ಹೇಳುವ ಮೊದಲೇ ಇಡ್ಲಿ ತಂದು ಮುಂದಿಡುತ್ತಿದ್ದ"

"ನಿಮ್ಮ ಗೆಳೆಯ ನಿಗರ್ವಿ ಯಾವುದನ್ನೂ ಬೇಡವೆನ್ನುವುದಿಲ್ಲ. ಬಾಯಿ ತುಂಬ ಹೋಗಳುತ್ತ ತಿನ್ತಾರೆ ಅವರ ಮಾತು, ನಡೆ ನೋಡಿದರೆ ದೊಡ್ಡ ಅಧಿಕಾರಸ್ಥರೆಂದು ಹೇಳೋಕೆ ಅಗಲ್ಲ."

"ಒಟ್ಟಿನಲ್ಲಿ ಸರಳ ಸ್ವಭಾವ, ಯಾರನ್ನೂ ನೋಯಿಸುವುದಿಲ್ಲ. ಅಷ್ಟು ಹೊಗಳಿಕೊಂಡು ತಿಂದಿರುವ ತಿಂಡಿಯ ವಿಚಾರ ಮದ್ಯಾಹ್ನ ಕೇಳು ಅವನಿಗೆ ತಾನು ಏನು ತಿಂದೆನೆಂದು ನೆನಪೇ ಇರುವುದಿಲ್ಲ"–ನರಹರಿ ನಕ್ಕ

"ಏನು ಹಾಗೆಂದರೆ ?"

"ಹಾಗೆಂದರೆ .. "

ನರಹರಿ ಮಾತು ಮುಗಿಸುವ ಮೊದಲೇ ಚಂದ್ರು ಟವಲಿನಿಂದ ತಲೆ ಒರಸಿಕೊಳ್ಳುತ್ತ ಒಳಗೆ ಬಂದ.

"ಬಾರಯ್ಯ ತಿಂಡಿ ತಗೋಳೋಣ ಇವತ್ತು ನಿನ್ನ ಅಚ್ಚು ಮೆಚ್ಚಿನ ಇಡ್ಲಿ ಆರಿಹೋಗುವ ಮೊದಲು ಅದಕ್ಕೆ ನ್ಯಾಯ ದೊರಕಿಸೋಣ"

ನರಹರಿಮೇಜಿನ ಮುಂದೆ ಕೂರುತ್ತ ಕರೆದ.

ಅದೇ ತಾನೇ ಬಿಸಿ ನೀರಿನಲ್ಲಿ ಮಿಂದು ಮುಖ ಕೆಂಪಾಗಿದ್ದ ಚಂದ್ರು ಬೆವರನ್ನು ಒರಸಿಕೊಳ್ಳುತ್ತಲೇ ಆಸನದಲ್ಲಿ ಮಂಡಿಸಿದ.

"ನಾಳೆ ಇಷ್ಟು ಹೊತ್ತಿಗೆ ರೈಲಿನಲ್ಲಿರಬೇಕು."

ಕಾಫಿಕುಡಿಯುತ್ತ ಚಂದ್ರು ಹೇಳಿದ

"ಏನೆಂದೆ ? ನಾಳೆಯೇ ಹೊರಡಬೇಕೆ ?"

"ಬೇಡವೇ ? ರಜ ಮುಗಿದು ಹೋಯಿತಲ್ಲ ಮುವತ್ತು ದಿನಗಳ ರಜ ದಲ್ಲಿ ಪ್ರಯಾಣಕ್ಕೆ ಹತ್ತು ದಿವಸ, ನಮ್ಮ ಊರಿನಲ್ಲಿ ಹದಿನೈದು ದಿನ ಕಳೆದು ಬಿಟ್ಟೆ. ಮೊದಲೇ ಇಲ್ಲಿಗೆ ಬಂದಿದ್ದರೆ ನಿಮ್ಮ ಆದರದಲ್ಲಿ ಊರಿಗೆ ಹೋಗೋ ದನ್ನೂ ಮರೆತು ಬಿಡ್ತಿದ್ದೆನೋ ಏನೋ ? ಇಲ್ಲಿ ಹೊತ್ತು ಹೋಗೋದು ತಿಳಿ ಯಲ್ಲ"

"ಇನ್ನು ನಾಲ್ಕಾರುದಿನ ಇದ್ದಿದ್ದರೆ ಚೆನ್ನಾಗಿತ್ತು. ಅಪರೂಪಕ್ಕೆ ಬಂದಿದ್ದಿರಿ."

"ಸಾಧ್ಯವಿಲ್ಲ ಅತ್ತಿಗೆ. ಬರುವಾಗಲೇ ರೈಲಿಗೆ ರಿಸರ್ವ್ ಮಾಡಿಸಿ

ಬಂದಿದ್ದೇನೆ. ಒಳ್ಳೆಯ ಅಪರೂಪವಾಯ್ತಲ್ಲ. ಇಲ್ಲಿಗೆ ಬಂದಾಗಿನಿಂದ ದಿನಕ್ಕೆ ಹತ್ತು ಸಲವಾದರೂ ಆ ಮಾತು ಕೇಳಬೇಕಾಗಿದೆ."

"ಯಾರಪ್ಪ ಹಾಗೆ ಕೇಳಿದವರು ?"

"ಪ್ರತಿಯೊಬ್ಬರೂ. ನಿನ್ನೆ ಕಾಗದ ಪೋಸ್ಟಿಗೆ ಹಾಕಲು ಬೀದಿಯ ಕೊನೆಯವರೆಗೆ ಹೋಗಿದ್ದೆ. ದಾರಿಯಲ್ಲಿ ಸಿಕ್ಕವರೆಲ್ಲ ಅದನ್ನೇ ಕೇಳಿದರು, ಅಪರೂಪಕ್ಕೆ ಬಂದೆಯಲ್ಲ, ಅಂತ. ಇಲ್ಲಿ ನನ್ನನ್ನು ನೋಡಲು ಬಂದವರು ಹೇಳಿದ್ದೂ ಅದೇ !"

"ಅವರು ಹೇಳಿದ್ದು ನಿಜ ನಾನೇ ? ನೀನು ಈ ಕಡೆ ಬಂದು ಎಷ್ಟು ವರ್ಷವಾಯ್ತು ?"

"ಅದು ನನಗೂ ಗೊತ್ತು. ಅವರೆಲ್ಲ ಮನೆ ಬಾಗಿಲಿನಲ್ಲಿ ಹಾಯಾಗಿ ರೋರು ನಮ್ಮ ಕಷ್ಟ ಅವರಿಗೇನು ಗೊತ್ತು ? ಸಾವಿರಾರು ಮೈಲಿಪ್ರಯಾಣ ಮಾಡಿ ಬರುವುದು ಸುಲಭವೆ ? ಅಥವಾ ನನೆದಾಗಲೆಲ್ಲ ಬರುವುದು ಸಾಧ್ಯವೊ?"

"ಅದೆಲ್ಲಾ ನನಗೆ ಗೊತ್ತಾಗಲಿಲ್ಲ. ನೀವು ಇನ್ನೂ ಕೆಲವು ದಿವಸ ಇದ್ದಿದ್ದರೆ ಚೆನ್ನಾಗಿತ್ತು."

–ವೇಣಿ ಹೇಳಿದಳು

"ಇನ್ನೊಮ್ಮೆ ಬಂದಾಗ ನಿಮ್ಮಲ್ಲೇ ಹೆಚ್ಚು ದಿವಸ ಇದ್ದರೆ ಆಯ್ತಲ್ಲ. ಅಂದ ಹಾಗೆ ನನಗೆ ಇವತ್ತು ನಿಮ್ಮಲ್ಲಿ ಊಟವಿಲ್ಲ"

"ಯಾಕೆ ?"

"ನಿನ್ನೆ ಬಂದಿದ್ದರಲ್ಲ ಅವರು ತಮ್ಮ ಮನೆಗೆ ಬರಲೇಬೇಕೆಂದು ಬಹಳ ಹೇಳಿದ್ದಾರೆ ನಾನು ತಪ್ಪಿಸಿಕೊಳ್ಳಲು ಒದ್ದಾಡಿದೆ ಬಿಡಬೇಕಲ್ಲ ಅವರು ಕೊನೆಗೆ ಒಪ್ಪಬೇಕಾಯ್ತು. ನರಹರಿ ನಿನಗೂ ಕರೆದಿಲ್ಲವೆ ?"

"ಇಲ್ಲಪ್ಪ–ನಾನು ಇಲ್ಲೇ ಇರೋನು ನನಗ್ಯಾಕೆ ಔತಣ ನೀನಾದರೆ .."

"ಅಪರೂಪಕ್ಕೆ ಬಂದಿರೋನು"

–ಚಂದ್ರು ಮಾತು ಪೂರ್ತಿ ಮಾಡಿದ.

ಮೂವರೂ ಮನೆ ತುಂಬುವಂತೆ ಜೋರಾಗಿ ನಕ್ಕರು.

ಚಂದ್ರು ಬಟ್ಟೆ ಹಾಕಿಕೊಂಡು ಹೊರಟ. ಪೇಟೆ ಕಡೆ ಸುತ್ತಾಡಿ ಕೊಂಡು ಹೋಗೋಣವೆಂದುಕೊಂಡು ಸ್ವಲ್ಪ ಬೇಗನೆ ಮನೆ ಬಿಟ್ಟ. ಮಾರನೆ

ದಿನದ ಪ್ರಯಾಣಕ್ಕೆ ಮೊದಲು ಕೊಳ್ಳುವ ಕೆಲವು ಸಣ್ಣ ಆವಶ್ಯಕತೆಗಳೂ ಇದ್ದುವು

ಪೇಟೆಯ ಕೆಲಸ ಬೇಗ ಮುಗಿಯಿತು. ಚಂದ್ರು ಕೈಗಡಿಯಾರ ನೋಡಿದ

ಇನ್ನೂ ಹತ್ತೂವರೆ. ಔತಣ ಕೊಟ್ಟವರು ಹನ್ನೆರಡು ಗಂಟೆಗೆ ಬರುವಂತೆ ಹೇಳಿದ್ದರು.

ಇನ್ನೂ ಒಂದೂವರೆ ಗಂಟೆ ಕಾಯಬೇಕು.

ಆದರೇನು ?

ಅಲ್ಲೇ ಹೋಗಿ ಹರಟುತ್ತ ಕೂತರಾಯ್ತು. ಹಿಂದಕ್ಕೆ ಮನೆಗೆ ಹೋಗುವುದಕ್ಕಿಂತ ಅದೇ ವಾಸಿ. ತಾನು ಇಲ್ಲವೆಂದು ನರಹರಿ ಹೊರಗೆ ಹೋಗಿರಲೂ ಬಹುದು. ಅತಿಥಿಯ ಉಪಚಾರದಿಂದ ಬಿಡುಗಡೆ ಹೊಂದಿದ ವೇಣಿ ಬೇರೆ ಕೆಲಸ ಹಚ್ಚಿಕೊಂಡು ಕುಳಿತಿದ್ದಾಳು.

ಈಗ ಹಿಂದಕ್ಕೆ ಹೋಗಿ ಪುನಃ ಅವಳಿಗೆ ತೊಂದರೆ ಕೊಡುವುದು ಏನು ಚೆನ್ನ ?

ಚಂದ್ರು ಮುಂದಕ್ಕೆ ನಡೆದ.

ದಾರಿಯಲ್ಲಿ ಗುರುತಿನವರು ಸಿಕ್ಕಿ ಮಾತಾಡಿಸುತ್ತ ನಿಂತರು. ಅವನ ಕಾಲೇಜು ವಿಧ್ಯಾಭ್ಯಾಸವೆಲ್ಲ ಅಲ್ಲೇ ಮುಗಿದಿತ್ತು. ಪರಿಚಿತ ಜಾಗಗಳು. ಪರಿಚಿತ ಜನರು.

ಮತ್ತೊಮ್ಮೆ ಹೊಣೆರಹಿತ ವಿದ್ಯಾರ್ಥಿ ಜೀವನ ಮರುಕಳಿಸಿದಂತಾಗಿ ಹೃದಯ ಹಗುರವೆನಿಸಿತು.

ಅವರ ಮನೆ ತಲಪಿದಾಗ ಮಾಧುವಿನ ತಂದೆ ಬಾಗಿಲಲ್ಲೇ ನಿಂತಿದ್ದರು. ಚಂದ್ರುವನ್ನು ನೋಡಿ ಸಂತೋಷ, ಆಶ್ಚರ್ಯಗಳೆರಡೂ ಏಕ ಕಾಲವಲ್ಲಿ ಅವರ ಮುಖದಲ್ಲಿ ನರ್ತಿಸಿದುವು.

"ಬಾರಯ್ಯ ... ಬಾ ಬಹಳ ಅಪರೂಪಕ್ಕೆ ಬಂದಿದ್ದಿ. ಬಡವರ ಮನೆಯ ನೆನಪಾಯಿತಲ್ಲ."

–ಎಂದು ಸ್ವಾಗತಿಸಿದರು.

"ಓ ಓ ..ಹಾಗೆಂದರೇನು ? ನಿಮ್ಮ ಮನೆಗೆ ನಾನು ಬರೋದು

ಹೊಸವೆ ? ಕಾಲೇಜಿನಲ್ಲಿ ಓದುತ್ತಿದ್ದಾಗ ಎಷ್ಟು ದಿನ ಬಂದಿರಲಿಲ್ಲ. "

"ನಿಜ ನಿಜ. ಆದರೆ ಅದು ಬೇರೆ ಮಾತು. ಆಗ ಎಂದಾದರೂ ಮಾಧು ವಿನ ಜೊತೆ ಬರ್‍ತಿದ್ದೆ. ಈಗ ನೀನು ದೊಡ್ಡ ಅಧಿಕಾರಿ. ಅದೇ ಸ್ನೇಹ ವಿಶ್ವಾಸ ಉಳಿಸಿಕೊಂಡಿದೀಯಲ್ಲ"

"ಅಧಿಕಾರ ಆಫೀಸಿನಲ್ಲಿ. ನಿಮ್ಮ ಹತ್ತಿರ ನಾನು ಮೊದಲಿನ ಚಂದ್ರು ತಾನೇ ?"

"ಸಂತೋಷ. ಬಾಪ್ಪ ಒಳಗೆ"

ಆತ ಕುರ್ಚಿ ತೋರಿಸಿದರು.

"ಮಾಧು ಇಲ್ಲವೆ ?"

-ಕುರ್ಚಿಯಲ್ಲಿ ಮಂಡಿಸುತ್ತ ಚಂದ್ರು ಕೇಳಿದ.

"ಎಲ್ಲೋ ಹೊರಗೆ ಹೋದ ಇನ್ನೇನು ಈಗ ಬಂದು ಬಿಡ್ತಾನೆ."

ಚಂದ್ರು ಕುಳಿತಂತೆ ಸುತ್ತ ತನ್ನ ನೋಟ ಹರಿಸಿದ ಅದೇ ಹಳೆಯ ಮನೆ. ಸುಣ್ಣ ಬಣ್ಣ ಕಾಣದ ಗೋಡೆಗಳು. ಧೂಳು ಹಿಡಿದಿದ್ದ ಅದೇ ಹಳೆಯ ಪರಗಳು. ಅಷ್ಟು ದೀರ್ಘ ಅವಧಿಯಲ್ಲಿ ಅಲ್ಲಿ ಏನೂ ಬದಲಾಗಿರಲಿಲ್ಲ. ಇನ್ನೂ ನಿನ್ನೆ ಮೊನ್ನೆ ಅಲ್ಲಿ ಕುಳಿತಿದ್ದೇನೇ ಎನಿಸಿತು.

ಅವನನ್ನು ಅಲ್ಲಿ ಬಿಟ್ಟು ಮಾಧುವಿನ ತಂದೆ ಒಳಗೆ ಹೋದರು. ಸ್ವಲ್ಪ ಹೊತ್ತಿನಲ್ಲಿ ಕಾಫಿ ಹಿಡಿದು ಬಂದರು

"ತಗೋಪ್ಪ"

ಎಂಗು ಉಪಚರಿಸಿದರು

"ಊಟದ ಹೊತ್ತಾಯ್ತು ಈಗೇಕೆ ಕಾಫಿ ?"

ಕೈ ಮುಂದು ಮಾಡುತ್ತಲೇ ಚಂದ್ರು ಸಂಕೋಚ ವ್ಯಕ್ತಪಡಿಸಿದ.

"ಇರಲಿ ತಗೋ ಹುಡುಗರಿಗೆ ಕಾಫಿ ಯಾವ ಲೆಖ್ಖ. ಈಗಿನ ಕಾಲ ಜೋರು ಊಟಕ್ಕೆ ಮೊದಲು, ಊಟವಾದ ಮೇಲೆ ಎಲ್ಲಾ ಕುಡಿತಾರೆ"

ಚಂದ್ರು ನಿಧಾನವಾಗಿ ಕಾಫಿ ಚಪ್ಪರಿಸಿದ. ಸಧ್ಯಃ ಕಾಫಿ ಕುಡಿಯು ವಾಗ ಮಾತಾಡಬೇಕಾಗಿಲ್ಲವಲ್ಲ!

ಮಾಧುವಿನದು ದೊಡ್ಡ ಸಂಸಾರ ತಂದೆಗೆ ಅವನೇ ಹಿರಿಯ ಮಗ. ಮನೆ ತುಂಬ ತಮ್ಮಂದಿರು ತಂಗಿಯರು. ಮಕ್ಕಳದೊಂದು ಸೈನ್ಯವೇ ಇತ್ತು.

ಈಗ ಅವರಲ್ಲಿ ಕೆಲವರಾದರೂ ಮದುವೆಯಾಗಿ, ಅಥವಾ ಉದ್ಯೋಗ ಹಿಡಿದು ಹೊರಗೆ ಹೋಗಿರಬಹುದು.

ಆದರೂ ಒಳಗಿನಿಂದ ಮಕ್ಕಳ ಧ್ವನಿ ಕೇಳುತ್ತಲೇ ಇತ್ತು. ಕೊಳಕು ಬಟ್ಟೆ ಹಾಕಿಕೊಂಡು, ಕೆದರಿದ ತಲೆಯ ನಾಲ್ಕಾರು ಮಕ್ಕಳು ದೊಡ್ಡವರ ಮಾತಿಗೆ ಲಕ್ಷ್ಯ ಕೊಡದೆ ಹೊರಗೆ ಬಂದು ಇಣುಕಿ ನೋಡಿದುವು.

ಪಿಸಿ ಪಿಸಿ ಮಾತು, ಮುಸಿ ಮುಸಿ ನಗು.

ಚಂದ್ರು ಕೈ ಬೀಸಿ ಮಕ್ಕಳನ್ನು ಹತ್ತಿರ ಕರೆದ ತಾನು ತಂದಿದ್ದ ಬಿಸ್ಕತ್ತು ಚಾಕಲೇಟುಗಳನ್ನು ಹಂಚಿದ.

ಹುಡುಗರು ಒಳಕ್ಕೆ ಓಡಿದುವು. ಅಲ್ಲಿ ಕಚ್ಚಾಟದ ಜಗಳದ ಮಾತುಗಳು ಆರಂಭವಾದುವು.

ಮಾಧುವಿನ ಮನೆಯವರು ಅನುಕೂಲಸ್ಥರಲ್ಲ. ನಿಜ. ಆದರೂ– ಒಬ್ಬ ಅತಿಥಿಯನ್ನು ಮನೆಗೆ ಆಹ್ವಾನಿಸಿರುವಾಗ ಇನ್ನು ಸ್ವಲ್ಪ ಚೊಕ್ಕಟವಾಗಿರದಷ್ಟು ಬಡತನವಂತೂ ಖಂಡಿತ ಇರಲಾರದು.

"ಮಾಧು–ನಿನ್ನೆ ನರಹರಿಯ ಮನೆಗೆ ಬಂದಿದ್ದನಂತೆ ಅಲ್ಲಿ ನಿನ್ನನ್ನು ನೋಡಿದುದಾಗಿ ಹೇಳಿದ"

ಮೌನವನ್ನು ಮುರಿದು ಮಾಧುವಿನ ತಂದೆ ಹೇಳಿದರು

"ಹೌದು. ಮಾಧು ಬಂದಿದ್ದ. ಅವನು ಬಂದು ಹೋದ ವೇಳೆ ಇನ್ನೂ ಕೆಲವರು ಗೆಳೆಯರು ಬಂದಿದ್ದರು"

ಮಾತು ಹಾಗೇ ಸಾಗಿತು. ಮಾಧು ಯಾಕೆ ಬರಲಿಲ್ಲವೆಂದು ಚಂದ್ರು ಚಿಂತಿಸಿದ.

ನನ್ನನ್ನು ಬರುವಂತೆ ಕರೆದು ತಾನೇ ಹೋಗಿಬಿಡುವುದೆ? ಈ ಮುದುಕರ ಕೈಲಿ ತಾನು ಎಷ್ಟು ಮಾತಾಡಬಹುದು? ಏನಾದರೂ ಸಾಮಾನು ತರಲಿಕ್ಕೆ ಹೋಗಿದ್ದಾನೋ ಏನೋ?

ಇದ್ದುದರಲ್ಲಿ ಸಣ್ಣ ಸಮಾಧಾನ.

ಕೊನೆಗೊಮ್ಮೆ ಮಾಧು ಕೈ ಬೀಸಿಕೊಂಡು ಬಂದ. ಗೆಳೆಯನನ್ನು ನೋಡಿ ಆನಂದದಿಂದ ಮೈಮರೆತು, ಮಾತಾಡುತ್ತಾ ಕುಳಿತ.

ಅತಿಥಿಯನ್ನು ಮಗನ ಸುಪರ್ದಿಗೆ ಬಿಟ್ಟು ಮಾಧುವಿನ ತಂದೆ ಒಳಗೆ

ನಡೆದರು

ಮಾತಿನೊಡನೆ ಹೊತ್ತೂ ಉರುಳಿತು. ವೇಣು ಕೊಟ್ಟ ಇಡ್ಲಿ, ಹಸಿವಿಗೆ ದಾರಿ ಕೊಟ್ಟು ತಾನು ಮರೆಯಾಯಿತು.

ಒಳಗಿನಿಂದ ಊಟಕ್ಕೆ ಕರೆಯಬಹುದೆಂದು ಚಂದ್ರು ಕಾದ. ಕಾದು ಬೇಸುತ್ತ, ಗಡಿಯಾರ ನೋಡಿಕೊಂಡ.

ಗಡಿಯಾರ ನಗುತ್ತಿರುವಂತೆ ತೋರಿತು. ಗಂಟೆ ಒಂದಾಗಿತ್ತು.

ಮಾಧುವಿನ ತಂದೆ ಒಂದೆರಡು ಸಲ ಬಗ್ಗಿ ನೋಡಿದರು. ತಂದೆ ಮಗ ಕಣ್ಸನ್ನೆಯಲ್ಲೇ ಮಾತಾಡಿಕೊಂಡಂತೆ ತೋರಿತು

ಬಂದ ಅತಿಥಿ ಹೊರಡುವ ಯೋಚನೆಯೇ ಇಲ್ಲದೆ ಕುಳಿತಲ್ಲೇ ಬೇರು ಬಿಟ್ಟರೆ ?

ಮಾಧು ಆಕಳಿಸಿ ಮೈ ಮುರಿದ.

"ಕಾಫಿ ಮಾಡಿಸಲೋ ಅಥವಾ ನಿನಗೆ ಚಾ ಅಭ್ಯಾಸವೋ ?"

ಎಂದು ವಿಚಾರಿಸಿದ

ನಾನು ಬಂದ ಕೂಡ್ಲೆ ಕಾಫಿ ಆಯ್ತು. ಈಗೇಕೆ ಪುನಃ ? ಈಗ ಕುಡಿದರೆ ಊಟ ಸೇರೋದಿಲ್ಲ

ಮಾಧುವಿಗೆ ಏನುತೋರಿತೋ ?

"ಬಂದೆ"

–ಎನ್ನುತ್ತ ಎದ್ದು ಒಳಗೆ ಹೋದ.

ಒಂದೆರಡು ನಿಮಿಷಗಳಲ್ಲಿ ಹೊರಗೆ ಬಂದು–

"ಹೇಗೂ ಹೊತ್ತಾಯ್ತು. ಇಲ್ಲೇ ಊಟಕ್ಕೆ ಏಳಯ್ಯ"

ಎಂದು ಅನುಮಾನಿಸುತ್ತ ಹೇಳಿದ.

ಹೊಟ್ಟೆ ಹಸಿದಿದ್ದ ಚಂದ್ರು ಅವನ ಅನುಮಾನವನ್ನು ಗಮನಿಸಲೇ ಇಲ್ಲ.

"ಅದಕ್ಕೆ ಬಂದಿದೇನೆ. ಸಂಕೋಚವೇಕೆ ಮಾರಾಯ ?"

ಎನ್ನುತ್ತ ಎದ್ದೇ ಬಿಟ್ಟ.

ಬಾಗಿಲಿನಲ್ಲೇ ನಿಂತಿದ್ದ ಮಾಧುವಿನ ತಂದೆ—

"ಮಾಧೂ, ಒಂದು ಪಂಚೆ ಕೊಡೋ. ನಮ್ಮನೇಲಿ ನೆಲದ ಮೇಲೇ

ಊಟ" ಎಂದರು.

ಚಂದ್ರು ರೂಮಿಗೆ ಹೋಗಿ ಬಟ್ಟೆ ಬದಲಿಸಿಕೊಂಡು ಹೊರಗೆ ಬಂದಾಗ, ಒಬ್ಬ ಹುಡುಗಿ ಬಟ್ಟಲಲ್ಲಿ ಎಣ್ಣೆ ಹಿಡಿದು ಒಳಗೆ ಹೋದಳು.

ಅವಳು ಕೈ ಮುಚ್ಚಿಕೊಂಡಿದ್ದರೂ. ಬಟ್ಟಲಲ್ಲಿದ್ದುದು ಎಣ್ಣೆ ಎಂದು ಕಾಣಿಸಿತು.

ಒಳಗೆ ರುಬ್ಬುತ್ತಿದ್ದ ಸದ್ದಿನ ಜೊತೆಗೆ ಸಂಡಿಗೆ ಕರಿಯುತ್ತಿದ್ದ ವಾಸನೆಯೂ ಬಂತು.

ಚಂದ್ರು ನೀರು ಮನೆಗೆ ಹೋಗಿ ಕೈಕಾಲು ತೊಳೆದು ಬಂದು ಎಲೆಯ ಮುಂದೆ ಕುಳಿತ

ಎಡದಲ್ಲಿ ಮಾಧು ಬಲಗಡೆಗೆ ಅವನ ತಂದೆ. ಎದುರು ಸಾಲಿನಲ್ಲಿ ಸಾಲಾಗಿ ಹಾಕಿದ್ದ ತಟ್ಟೆಗಳ ಮುಂದೆ ಹುಡುಗರು.

ಅತ್ತೆ ಸೊನೆ ಸೊಂಟ ಕಟ್ಟಿ ಬಡಿಸಲು ನಿಂತಿದ್ದರು.

ಸಾಧಾರಣ ಊಟ, ಆದರೆ ಅವರ ಅಭಿಮಾನ ಆದರ ಸಾಧಾರಣ ವಾಗಿರಲಿಲ್ಲ. ಹೃದಯ ತುಂಬುವಂತಿತ್ತು.

ಊಟವಾದ ಮೇಲೆ ಚುಟುಕು ನಿದ್ರೆ ಮುಗಿಸಿ, ಚಂದ್ರು ಮನೆಯ ಕಡೆ ಹೊರಟಾಗ ಗಂಟೆ ನಾಲ್ಕಾಗಿತ್ತು.

ವೇಣಿ ಮುಂಬಾಗಿಲಿನಲ್ಲೇ ನಿಂತಿದ್ದಳು. ನರಹರಿ ಗೇಟಿನಲ್ಲೇ ಕಾದಿದ್ದವನು-

"ಎಲ್ಲಿಗೆ ಹೋಗಿದ್ದೆಯಪ್ಪ ಚಂದ್ರು ?"

-ಎಂದು ಕುತೂಹಲದಿಂದ ವಿಚಾರಿಸಿದ.

"ಹೇಳಿರಲಿಲ್ಲವೇ ? ನಾನು ಊಟಕ್ಕೆ ಹೋಗುವುದಾಗಿ ಬೆಳಗ್ಗೆಯೇ ಹೇಳಿದ್ದ ನೆನಪು. ನಾನು ಕೆಲವು ಸಲ ಮರೆಯೋದುಂಟು. ಆದರೆ ಇವತ್ತು ಖಂಡಿತ ಹೇಳಿದ್ದೆ. ಅಲ್ಲವೆ ಅತ್ತಿಗೆ ?"

"ಅವರು ಒಳಗೆ ಬರಲಿ ಜಾಗ ಬಿಡಿ. ಬೀದಿಯಲ್ಲೇ ನಿಲ್ಲಿಸಿ ಮಾತಾ ಡಿದರೆ ?"

ವೇಣಿ ಗಂಡನಿಗೆ ಹೇಳಿದಳು. ಅವಳು ನಗುತ್ತಿರುವಂತೆ ಚಂದ್ರುವಿಗೆ ತೋರಿತು.

"ನಾನು ಮರೆತು ಬಿಟ್ಟು ನಿಮ್ಮನ್ನು ಕಾಯುವಂತೆ ಮಾಡಿದೆನೆ?"

–ಚಂದ್ರು ಅವಳ ನಗು ತುಂಬಿದ ಮುಖದ ಕಡೆ ನೋಡುತ್ತ ಕೇಳಿದ.

"ಇಲ್ಲ ನೀವು ಊಟಕ್ಕೆ ಹೋಗುವುದಾಗಿ ಹೇಳಿದ್ದಿರಿ. ಊಟ ಯಾರ ಮನೇಲೆಂದು ನೀವೂ ಹೇಳಲಿಲ್ಲ ನಾವೂ ಕೇಳಲಿಲ್ಲ"

–ವೇಣಿ ಕೇಳಿದಳು.

"ಹೌದಲ್ಲ? ನಾನು ಹೇಳಲು ಮರೆತುಬಿಟ್ಟೆ. ನಿಜವಾಗಿ ಹೇಳ ಬೇಕಾದರೆ ನನಗೇ ಯಾರ ಮನೆಯೆಂದು ಸರಿಯಾಗಿ ನೆನಪಿರಲಿಲ್ಲ. ನಿನ್ನೆ ಎಷ್ಟೋ ಜನ ಸ್ನೇಹಿತರು ಬಂದಿದ್ದರು. ಅವರಲ್ಲಿ ಯಾರು ಕರೆದರೋ? ಪೇಟೆ ಕಡೆ ಹೋದ ಮೇಲೆ ಮಾಧು ಕರೆದಿರಬಹುದೆಂದು ತೋರಿತು, ಅವನ ಮನೆ ಅಲ್ಲಿಗೆ ಹತ್ತಿರ, ಸರಿ ಅಲ್ಲೇ ನುಗ್ಗಿದೆ."

"ಒಳ್ಳೆಯ ಕೆಲಸ ಮಾಡಿದಿರಿ. ಊಟ ಆಯ್ತು ತಾನೇ?"

"ಓ ..ಭೇಷಾಗಿ ಆಯ್ತು. ಸ್ವಲ್ಪ ಲೇಟಾಯ್ತು ಮಾಧು ಮನೇಲೇ ಇರ್ಲಿಲ್ಲ. ಎಲ್ಲೋ ಹೋಗಿದ್ದವನು ನಾನು ಹೋದ ಎಷ್ಟೋ ಹೊತ್ತಿನ ಮೇಲೆ ಬಂದ. ಆದರೇನು? ಬಹಳ ವಿಶ್ವಾಸದ ಜನ ಮನೆಯಲ್ಲಿ ಊಟಮಾಡಿದಂತೇ ಇತ್ತು. ಎಲ್ಲೋ ಹೊರಗಡೆ ಊಟಕ್ಕೆ ಬಂದಿರುವೆನೆಂದು ಎನಿಸಲೇ ಇಲ್ಲ."

"ಅದೇನೋ ಸರಿಹೋಯ್ತು. ಆದರೆ ನಿನ್ನ ಹುಡುಕಿಕೊಂಡು ಊರೆಲ್ಲಾ ಮೂರು ಸುತ್ತು ಸುತ್ತಿ ಬಂದೆ. ನೀನು ಮಾಧುವಿನ ಮನೆಗೆ ಹೋಗಿರಬಹುದೆಂದು ತೋರಲೇ ಇಲ್ಲ"

–ನರಹರಿ ಹೇಳಿದ.

"ಅಂಥದೇನು ಆಗತ್ಯವಿತ್ತು? ಹೇಗೂ ಬರ್ತಿದ್ದೆ"

"ಆಗತ್ಯವಿದ್ದುದರಿಂದಲೇ ಹುಡುಕಿದ್ದು. ನಾಗರಾಜ ನಿನ್ನ ಕರೆಯೋಕೆ ಬಂದಿದ್ದ ಒಂದು ಸಲವಲ್ಲ, ನಾಲ್ಕು ಸಲ"

"ಯಾಕೋ?"

–ಚಂದ್ರುವಿಗೆ ಆಶ್ಚರ್ಯ.

"ನಿನಗೆ ಊಟಕ್ಕ ಕರೆದ ತಪ್ಪಿಗೆ ಔತಣದ ಅಡಿಗೆ ಮಾಡಿಟ್ಟುಕೊಂಡು ನಿನಗಾಗಿ ಕಾದು ಕಾದು ಸಾಕಾಗಿ ಇಲ್ಲಿಗೆ ಹುಡುಕಿಕೊಂಡು ಬಂದ–'ನಿಮ್ಮ ಮನೆಗೆ ಹೋದ' ಎಂದೆ."

"ನಾನು ಈ ಕಡೆ ಬಂದಮೇಲೆ ನೀನು ಆಕಡೆ ಬಂದಿರಬಹುದೇನೋ ಎಂದುಕೊಂಡು ಪುನಃ ಮನೆಗೆ ಓಡಿದ. ಬಾಗಿಲಲ್ಲಿ ಮುಖ ಒಣಗಿಸಿಕೊಂಡು ನಿಂತಿದ್ದ ಅವನ ಹೆಂಡತಿ ಬಂದಿಲ್ಲವೆಂದು ತಲೆ ಅಲ್ಲಾಡಿಸಿದಳಂತೆ ಪುನಃ ಬಂದ. ನಾವಿಬ್ಬರೂ ಊರೆಲ್ಲ ಸುತ್ತಿಬಂದೆವು. ಅವನು ಸುಸ್ತಾಗಿ ಮನೆಗೆ ಹೋದ ನಾನು ಗೇಟಿನಲ್ಲೇ ಉಳಿದೆ"

"ಅರರೇ-ಎಂಥ ಕೆಲಸವಾಯ್ತು."

ಚಂದ್ರು ಪೆಚ್ಚಾಗಿ ಹೇಳಿದ ನರಹರಿ ಸುಮ್ಮನಿದ್ದುದನ್ನು ನೋಡಿ—

"ನರಹರಿ .ಹಾಗಾದರೆ ನನಗೆ ಊಟಕ್ಕೆ ಕರೆದವನು ನಾಗರಾಜನೇ?"

-ಎಂದು ಪ್ರಶ್ನಿಸಿದ.

"ಇರಬೇಕು"

ಚಂದ್ರು ಒಂದು ಕ್ಷಣ ತಲೆ ಕೆರೆಯುತ್ತ ನಿಂತ. ಮಾಧು ಮನೆಯಲ್ಲಿ ಇರದಿದ್ದುದು, ತನ್ನನ್ನು ನೋಡಿ ಅವನಿಗಾದ ಆಶ್ಚರ್ಯ, ತಾನು ಊಟಕ್ಕೆ ಎದ್ದಾಗ ಅವಸರದಲ್ಲಿ ನೆರಮನೆಯಿಂದ ಎಣ್ಣೆ ತಂದು, ಸಂಡಿಗೆ ಕರೆದು-ಚಟ್ನಿ ರುಬ್ಬಿ, ಮಾಡಿದ್ದ ಅನ್ನ ಹುಳಿಯೊಂದಿಗೆ ಬಡಿಸಿದ್ದು. ತಾನು ಎಷ್ಟು ಹೊತ್ತಾದರೂ ಏಳದಿದ್ದಾಗ ತಂದೆ ಮಕ್ಕಳು ಕಣ್ಣಲ್ಲಿ ಮಾತಾಡಿದ್ದು .

ಎಲ್ಲದಕ್ಕೂ ಈಗ ಅರ್ಥ ಹೊಳೆಯಿತು.

ಚಂದ್ರುವಿಗೆ ತನ್ನ ಮೇಲೆ ಸಿಟ್ಟು ಬಂತು. ತನ್ನ ಮರೆವಿಗೆ ನಗ ಬೇಕೋ, ಕೋಪಗೊಳ್ಳಬೇಕೊ ತಿಳಿಯಲಿಲ್ಲ.

ತಟ್ಟನೆ ಎದ್ದು ನಿಂತ.

"ಎಲ್ಲಿಗೆ ಹೊರಟೆ ?" ನರಹರಿ ಕೈಹಿಡಿದು ಕೇಳಿದ.

"ಒಬ್ಬ ಗೆಳೆಯನಿಗೆ ಹೊತ್ತಲ್ಲದ ಹೊತ್ತಿನಲ್ಲಿ ಹೋಗಿ ತೊಂದರೆ ಕೊಟ್ಟೆ. ಅದೇನೋ ಕ್ಷಮಾರ್ಹ. ನಾಗರಾಜನಿಗೆ ಕೊಟ್ಟ ತೊಂದರೆ ಯಾರೂ ಕ್ಷಮಿಸುವಂತಹುದಲ್ಲ. ಗಂಡ ಹೆಂಡಿರು ನನಗಾಗಿ ಕಾದು ಎಷ್ಟು ಬೇಸರ ಗೊಂಡರೋ? ಹೋಗಿ ಅವರನ್ನು ಕ್ಷಮೆ ಕೇಳುವುದಕ್ಕೂ ನನಗೆ ಸಂಕೋಚ ಆದರೂ ಹೋಗ್ತೀನಿ."

"ಅಷ್ಟೇಕೆ ಅವಸರ ನಿಧಾನವಾಗಿ ಹೋಗುವೆಯಂತೆ"

"ತಪ್ಪು ತಿಳಿಯುವುದಿಲ್ಲವೆ ಅವನು"

"ತಿಳಿಯಲಾರನೆಂದೇ ನನ್ನ ಭಾವನ"

"ಹೇಗೆ ಹೇಳುವೆ ?"

"ಹೇಗೆಂದರೆ....? ಅದು ಎಲ್ಲರಿಗೂ ಗೊತ್ತಿರುವ ಸತ್ಯ. ನಮ್ಮಂಥವರು ಆ ಕೆಲಸ ಮಾಡಿದರೆ ಎಲ್ಲರೂ ಇವನಿಗೇನು ಬಂತು? ಅಂತಾರೆ. ದೊಡ್ಡ ಪ್ರೊಫೇಸರುಗಳೂ, ವಿಜ್ಞಾನಿಗಳೂ ಹಾಗೆ ಮರೆಯುವುದು ಅವರ ಹಕ್ಕು ಅಲ್ಲವೇ?"

ಚಂದ್ರು ನಿಧಾನವಾಗಿ ನಕ್ಕ. ಗಂಟಿಕ್ಕಿದ ಮುಖ ಆತಂಕವನ್ನು ಕಳೆದುಕೊಂಡು ಸಡಿಲವಾಯ್ತು.

"ರಾತ್ರಿಗೆ ನಮ್ಮಲ್ಲಿ ಔತಣವಿದೆ ಅದನ್ನು ಮರೆಯೋದಿಲ್ಲ ತಾನೇ? ಬೆಳಗ್ಗೆಯೇ ಹೊರಡೋನಾಗಿದ್ದೀ"

ನರಹರಿ ಕೆಣಕಿ ಕೇಳಿದ.

"ಮರೆಯೋದೆಲ್ಲಿ ಬಂತು? ನೀನು ನನ್ನ ಬೆನ್ನು ಹಿಂದೇ ಇರ್ತೀಯಲ್ಲ ಮಾರಾಯ?"

"ರಾತ್ರಿಗೆ ನಾಗರಾಜನ ಮನೆಯವರನ್ನು ಇಲ್ಲಿಗೇ ಊಟಕ್ಕೆ ಕರೆದಿದ್ದೇನೆ. ಆಗಲಾದರೂ ಎಲ್ಲಾ ಒಟ್ಟಿಗೆ ಸೇರಬಹುದು. ಮಧ್ಯಾಹ್ನ ನಿಮಗಾಗಿ ಮಾಡಿದ್ದ ತಿಂಡಿಯೆಲ್ಲ ಇಲ್ಲೇ ತರುವುದಾಗಿ ಹೇಳಿದಾಳೆ ಆಕೆ. ಸರಿತಾನೇ?"

ವೇಣಿಯ ಪ್ರಶ್ನೆಗೆ ಯಾರೂ ಉತ್ತರ ಕೊಡಲಿಲ್ಲ. ಅದಕ್ಕಿಂತ ಉತ್ತಮ ಪರಿಹಾರ ಸೂಚಿಸುವುದು ಅವರಿಗೂ ಸಾಧ್ಯವಿರಲಿಲ್ಲ.

# ಉಪಕಾರಿ

ಬೆಳಗಿನ ಸೂರ್ಯ ಮೋಡಗಳ ಮರೆಯಿಂದ ಇಣುಕುವ ಮೊದಲೇ ನಾಗಸ್ವರದ ಮಧುರ ಆಲಾಪನೆ ಅಲೆಅಲೆಯಾಗಿ ಬೀದಿಗೆಲ್ಲ ಹೊಮ್ಮಿತು.

ನಿದ್ರೆಯ ಅಪ್ಪುಗೆಯಿಂದ ಹೊರಬರುವ ಮೊದಲು ಹಾಸಿಗೆಯಲ್ಲಿ ಬೆಚ್ಚಗೆ ಮಲಗಿರುವಾಗಲೇ, ತರಂಗತರಂಗವಾಗಿ ಕೇಳಿಸುವ ಅದನ್ನು ಆಲಿಸುವುದು ಬಹಳ ಸುಖ.

ಅರೆಗಣ್ಣು ತೆರೆದು ರಾಗದ ಸುಖಾನುಭವ ಮಾಡುತ್ತ ಹಗಲುಕನಸು ಹೆಣೆಯುವುದರಲ್ಲಿ ಎಂತಹ ಆನಂದವಿದೆ!

ನಿಜ ಆನಂದ ಇರುವುದು ಯಾರಿಗೆ? ಯಾವ ಹೊಣೆಯೂ ಇಲ್ಲದ ನಿರಾತಂಕ ಜೀವಿಗಳಿಗೆ. ಆದರೆ ಮನೆಯಲ್ಲಿ ಮಂಗಳಕಾರ್ಯ ಏರ್ಪಡಿಸಿ ಅದರ ಮೊದಲ ಕಾರ್ಯಕ್ರಮ ಮಂಗಳವಾದ್ಯದಿಂದ ಆರಂಭವಾದಾಗ ಓಡಾಟದ ಗಡಿಬಿಡಿಯಲ್ಲಿ ಅದನ್ನು ಕೇಳುವುದಕ್ಕಾದರೂ ಬಿಡುವೆಲ್ಲಿ? ಇನ್ನು ರಾಗವನ್ನು ಸವಿಯುವುದು ದೂರವೇ ಉಳಿಯಿತು. ಆದರೂ ಡೋಲಿನವನು ಉತ್ಸಾಹ ದಿಂದ ಬಡಿದಾಗ ಆ ಸದ್ದು ಎಲ್ಲರನ್ನೂ ಇದ್ದಲ್ಲಿ ತಿರುಬಿ ಎಚ್ಚರಿಸುತ್ತಿತ್ತು.

ಬೆಳಗಿನ ಹೊತ್ತು ಸಾಮಾನ್ಯವಾಗಿ ಬಾರಿಸುವ 'ಬಿಲಹರಿ' ರಾಗ ಹಿತ ವಾಗಿ ಹರಿದು ಬರುವಂತಿತ್ತು. ಕೇಳಲಿ ಬಿಡಲಿ ನಾಗಸ್ವರ ಮುಂದುವರೆದು ಒಳಗಿನಿಂದ 'ಸಾಕು' ಎಂಬ ಸೂಚನೆ ಬಂದಾಗ ತಟ್ಟನೆ ನಿಂತಿತು.

ಒಳಗೆ ತಿಂಡಿ ಕಾಫಿ ಸಮಾರಾಧನೆ, ಹುಡುಗರ ಗದ್ದಲ, ಮಕ್ಕಳ ಅಳು, ತಾಯಿಯರ ಗದರಿಕೆ ಇವೆಲ್ಲ ಮೇಳಗಳೊಡನೆ ಸಾಗಿತು

ಅತಿಥಿಗಳು ಬರಲು ಆರಂಭಿಸಿದರು. ಎರಡು ದಿನ ಮೊದಲೇ ನೆಂಟರೆಲ್ಲ ಬಂದಿದ್ದರೂ, ಇನ್ನೂ ಬರುವವರು ಇದ್ದರು ಆಗಾಗ ಗಾಡಿಗಳಲ್ಲಿ, ಕಾರಿನಲ್ಲಿ ಬಂದರು. ಆಳು ಮಕ್ಕಳು ಹಾಸಿಗೆ ಪೆಟ್ಟಿಗೆಗಳನ್ನು ಹೊತ್ತು ಒಳಗೆ ಸಾಗಿಸಿ ದರು. ಅವರಿಗೆ ಬಿಡುವೇ ಇಲ್ಲ.

ರಾಯರ ವಂಶೋದ್ಧಾರಕನ ಉಪನಯನ ಅಂದು. ಒಂದು ಮದುವೆಗೆ ಇಷ್ಟು ಸಡಗರವೇ ಎನಿಸಬಹುದು. ಆದರೆ ಸಂದರ್ಭ ಹಾಗಿತ್ತು. ಲಕ್ಷ್ಮಿ ತಾಂಡವವಾಡುತ್ತಿದ್ದ ಆ ಮನೆಯಲ್ಲಿ ನಡೆಯಲ್ಲಿದ್ದ ಮೊದಲ ದೊಡ್ಡ ಸಮಾರಂಭ, ಒಬ್ಬನೇ ಮಗ. ಕಾಲವೂ ಚೆನ್ನಾಗಿತ್ತು. ಎಲ್ಲ ಸಮೃದ್ಧಿ. ಒಡಾಡಿಸಲು ಕೈತುಂಬ ಹಣ, ಮನಸ್ಸಿನಲ್ಲಿ ಹೊರಸೂಸುವ ಉತ್ಸಾಹ. ಕೇಳಬೇಕೇ ?.

ಬಾಳೆಯ ಕಂಬ, ಮಾವಿನ ತೋರಣಗಳಿಂದ ಅಲಂಕರಿಸಿದ್ದ ಚಪ್ಪರದ ಮುಂದೆ ಒಂದು ಗಾಡಿ ನಿಂತಿತು ಅದರಿಂದ ಸುಕ್ಕುಗಟ್ಟಿದ್ದ ಕರಿಯ ಕಾಲುಗಳು ಹೊರಗೆ ಬಂದುವು. ನಡುಗುತ್ತ ಮೆಲ್ಲಗೆ ಕೆಳಕ್ಕೆ ಇಳಿದ ಹೆಂಗಸು ಕೈ ಆಸರೆ ಕೊಟ್ಟು ಇನ್ನೂ ಹಿಂದೆ ಕುಳಿತಿದ್ದ ಗಂಡನನ್ನು ಇಳಿಸಲು ಒದ್ದಾಡಿದಳು.

ಅದೇ ವೇಳೆಗೆ ಅಕಸ್ಮಾತ್ ಹೊರಗೆ ಬಂದ ರಾಯರು ತಟ್ಟನೆ ನಿಂತರು. ಬಂದವರು ಯಾರೆಂದು ಅರೆಕ್ಷಣ ಅವರಿಗೆ ತಬ್ಬಿಬ್ಬಾಯ್ತು. ಜೀರ್ಣವಾದ ದೇಹ ಅಷ್ಟೇ ಹಳೆಯದಾದ ಬಟ್ಟೆಗಳು. ಬಡತನನವೇ ಮೂರ್ತಿವೆತ್ತಂತಿದ್ದ ವೃದ್ಧ ದಂಪತಿಗಳು.

ಮರೆವು ಮುಸುಕಿದ್ದ ತಾಣದಲ್ಲಿ ನೆನಪಿನ ಸೆಳೆಮಿಂಚು ಬೆಳಗಿತು. ರಾಯರು ದಡದಡನೆ ಆರು ಮೆಟ್ಟಲುಗಳನ್ನೂ ಇಳಿದು ಗಾಡಿಯ ಬಳಿಗೆ ಹಾರಿದರು. ವೃದ್ಧರನ್ನು ಕೈ ಹಿಡಿದು ಕೆಳಗಿಸಿ, ಗಾಡಿಯಲ್ಲಿದ್ದ ಕೋಲನ್ನು ಅವರಿಗೆ ಕೊಟ್ಟರು. ಎರಡು ತೋಳುಗಳನ್ನೂ ಇಬ್ಬರಿಗೂ ಆಸರೆಯಾಗಿ ಕೊಟ್ಟು ಮೆಟ್ಟಲು ಹತ್ತಲು ಸಹಕರಿಸಿದರು.

ಉದಾಸೀನವಾಗಿ ನೋಡುತ್ತ ನಿಂತಿದ್ದ ಆಳುಮಕ್ಕಳು ರಾಯರ ಮುತುವರ್ಜಿಯನ್ನು ಗಮನಿಸಿ, ಬೇಗ ಬಂದು ಸಾಮಾನು ಹೊತ್ತರು ಗಾಡಿಯವನು ನಿಂತುದನ್ನು ನೋಡಿ ರಾಯರು ಬಾಡಿಗೆ ಕೊಟ್ಟು ಕಳಿಸುವಂತೆ ಹತ್ತಿರ ಇದ್ದವರಿಗೆ ಹೇಳಿ ಮುಂದೆ ನಡೆದರು.

"ಅಮ್ಮಾ ..ನೋಡು ಬಾ ಯಾರು ಬಂದಿದಾರೆ !"

ರಾಯರ ಕಂಚಿನ ಕಂಠ ಮನೆಯ ಉದ್ದಕ್ಕೂ ಅಪ್ಪಳಿಸಿ ಒಳಗೆ ಕೆಲಸದಲ್ಲಿದ್ದ ತಾಯಿ ಬೇಗ ಬರುವಂತೆ ಮಾಡಿತು.

ಹಜಾರದಲ್ಲಿದ್ದ ಕುರ್ಚಿಯ ಮೇಲೆ ಅವರಿಬ್ಬರನ್ನೂ ಕೂರಿಸಿ ಧೂಳು

ತುಂಬಿದ ಕಾಲುಗಳಿಗೆ ನಮಸ್ಕರಿಸಿ ಎದ್ದು ನಿಂತು ರಾಯರು ಹೇಳಿದರು,

"ದೊಡ್ಡಮ್ಮ, ನೀವು ಬಂದದ್ದು ಸಂತೋಷ, ನಮ್ಮೆಲ್ಲರ ಭಾಗ್ಯ."

"ಮಗೂ ... ಚೆನ್ನಾಗಿದೀಯ ?"

ಮುದುಕರ ಕೈಗಳು ಆಶೀರ್ವಾದ ಮಾಡುವಂತೆ ಮೇಲೆದ್ದುವು.

ಸೀತಮ್ಮ ಸರಸರನೆ ಬಂದವರು ಅಲ್ಲಿನ ನೋಟ ನೋಡಿ ಮರವಟ್ಟಂತೆ ನಿಂತುಬಿಟ್ಟರು. ಅವರ ಶಕ್ತಿ, ಉತ್ಸಾಹ ಎಲ್ಲ ಮರೆಯಾಗಿ ಆತಂಕ, ಗಾಬರಿ ಮುಖದ ಮೇಲೆ ನರ್ತಿಸಿತು.

ಇಷ್ಟು ಗೌರವ ಆದರಗಳಿಗೆ ಪಾತ್ರರಾದ ಬಂಧುಗಳನ್ನು ನೋಡುತ್ತ ಕೆಲಸದವರೆಲ್ಲ ಮಾಡುವ ಕೆಲಸವನ್ನೂ ಮರೆತು ನಿಂತರು. ನಿಂತವರ ನೋಟ ಧಾವಿಸಿ ಬಂದ ಯಜಮಾನಿಯತ್ತ ತಿರುಗಿದುವು.

ಇಡೀ ಮನೆ ತನ್ನ ಸುತ್ತ ತಿರುಗುತ್ತಿರುವಂತೆ ಸೀತಮ್ಮನಿಗೆ ಭಾಸ ವಾಯ್ತು. ಆದರೂ ಅಷ್ಟು ಜನರ ನೋಟ ತಮ್ಮತ್ತ ತಿರುಗಿದಾಗ ಆಕೆ ತಕ್ಷಣ ಚೇತರಿಸಿಕೊಂಡರು. ಮಗನ ಕಣ್ಣುಗಳು ಯಾವುದೋ ಸಂದೇಶವನ್ನು ತಿಳಿಸಿದಂತಾಯ್ತು. ಮುಖದ ತುಂಬ ನಗುವನ್ನು ತುಳುಕಿಸುತ್ತ ಮುಂದೆ ಬಂದು ಕೇಳಿದರು–

"ಅಕ್ಕ ಭಾವ, ನೀವು ದೊಡ್ಡ ಮನಸ್ಸು ಮಾಡಿ ಬಂದಿರಲ್ಲ. ಅಷ್ಟೇ ಸಾಕು. ಪ್ರಯಾಣ ಎಷ್ಟು ಆಯಾಸವಾಯ್ತೊ ? ಏಳಿ, ಸ್ನಾನಮಾಡಿ ಫಲಾರ ಮಾಡುವಿರಂತೆ."

ಮುದುಕಿಯನ್ನು ಕೈ ಹಿಡಿದು ಒಳಗೆ ಕರೆದುಕೊಂಡು ಹೋಗುತ್ತಿದ್ದ ಸೀತಮ್ಮ ಹಿಂದಿರುಗಿ ಮಗನಿಗೆ ಹೇಳಿದರು :

"ಮಗೂ .ದೊಡ್ಡಪ್ಪ ಉಪ್ಪರಿಗೆಗೆ ಹತ್ತಲಾರರು. ಅವರಿಗೆ ಕೆಳಗಡೆ ರೂಮಿನಲ್ಲೇ ಬಿಡಾರಮಾಡಿಸು.

"ಆಗಲಮ್ಮ. ನಾನೂ ಹಾಗೇ ಯೋಚಿಸಿದ್ದೆ."

ಮುದುಕಿ ಸುತ್ತಲೂ ನೋಡುತ್ತ ಒಂದೊಂದೇ ಹೆಜ್ಜೆ ಮುಂದಿಟ್ಟರು. ದೊಡ್ಡ ಮನೆ, ಮನೆತುಂಬ ಬಂಧುಮಿತ್ರರು ಸೇರಿದ್ದಾರೆ. ಎಲ್ಲೆಲ್ಲೂ ಗಲಾಟೆ, ನಗು. ಕಣ್ಣು ಕೋರೈಸುವ ವಸ್ತ್ರಾಭರಣಗಳನ್ನು ಧರಿಸಿರುವ ಜನ.

ಒಳಗಡೆ ತೊಟ್ಟಿಯ ಒಂದು ಮೂಲೆಯಲ್ಲಿ ಬಾಳೆಲೆ ಪಿಂಡಿಗಳು ರಾಶಿ

ರಾಶಿಯಾಗಿ ಬಿದ್ದಿವೆ. ಉಗ್ರಾಣದ ತೆರೆದ ಬಾಗಿಲಿಂದ ಸಾಮಾನುಗಳು ಕಾಣಿಸುತ್ತಿವೆ. ಒಂದು ಕಡೆ ತೆಂಗಿನಕಾಯಿಗಳ ಗುಡ್ಡವೇ ಇದೆ.

ಅಲ್ಲಿಂದ ಮುಂದೆ ಪಾಕಶಾಲೆ ಇದೆಯೆಂದು ಆ ಕಡೆ ಹತ್ತಿರ ಬರುವ ಮೊದಲೇ ಅಡಿಗೆಯ ಘಮ ಘಮ ಮುಂದಾಗಿ ಸುದ್ದಿ ಕೊಡುವಂತಿದೆ.

ಎಡಭಾಗದ ಕೋಣೆಯಲ್ಲಿ ಭಕ್ಷ್ಯ ತಯಾರಾಗುತ್ತಿದೆ. ದೊಡ್ಡ ದೊಡ್ಡ ಹೊಸ ಗೂಡೆಗಳಲ್ಲಿ ಚಿರೋಟಿ ಪೇರಿಸಿ ಇಟ್ಟಿದ್ದಾರೆ. ಮುಂಡಿಯವರೆಗೆ ಟವಲು ಸುತ್ತಿದ್ದ ಅಡಿಗೆ ಮಾಡುವ ಜನ ಅಲ್ಲೆಲ್ಲಾ ಓಡಾಡುತ್ತಿದ್ದಾರೆ. ದೊಡ್ಡ ದೊಡ್ಡ ಪಾತ್ರೆಗಳನ್ನು ಎಳೆಯುವ ಸದ್ದು. ಒಲೆಯಿಂದ ಮೇಲೆ ಏಳುತ್ತಿರುವ ಕೆಂಪಿನ ಬೆಳಕು ಉಗಿಯುವ ಉರಿ. ಆದರೆದುರು ಬಗ್ಗಿ ತೊಳಸುತ್ತಿರುವ ಬೆವರು ತುಂಬಿದ ಮುಖ.

ಒಬ್ಬ ಭಟ್ಟರು ದೊಡ್ಡ ತಟ್ಟೆಯಲ್ಲಿ ಹೊಯ್ದಿದ್ದ ಮೈಸೂರುಪಾಕನ್ನು ತುಂಡುತುಂಡಾಗಿ ಚಾಕುವಿನಿಂದ ಕತ್ತರಿಸುತ್ತಿದ್ದಾರೆ

ಬಾಗಿನಕ್ಕೆಂದು ಮಾಡಿರುವ ಉಂಡೆ ಚಕ್ಕುಲಿಗಳು ಒಂದು ಕೋಣೆಯನ್ನು ಪೂರ್ತಿಯಾಗಿ ಆಕ್ರಮಣ ಮಾಡಿದಂತಿದೆ.

ಮುದುಕಿಗೆ ಸ್ವಲ್ಪ ಹೆದರಿಕೆಯೇ ಆಯ್ತು. ಎಂದೂ ಹಳ್ಳಿಯನ್ನು ಬಿಟ್ಟು ಬಂದವರಲ್ಲ. ಮೈಸೂರಿನಲ್ಲಿ ಅರಮನೆ ಇರುವುದಾಗಿ ಕೇಳಿದ್ದರು, ಇದೇ ಇರಬಹುದೆ?

ತಿರುಗಿದತ್ತ ಲಕ್ಷ್ಮಿಯ ನರ್ತನ.

ಈ ಜನ, ಈ ವೈಭವ, ಯಾರಿಗುಂಟು?

ಇದೆಲ್ಲವನ್ನೂ ದಾಟಿಕೊಂಡೇ ನೀರುಮನೆಗೆ ಹೋಗಬೇಕು. ಮುಂದೆ ಹೋಗಲು ಹೆಜ್ಜೆ ಏಳಲೇ ಒಲ್ಲದು. ಒಣಗಿದ ನಾಲಿಗೆಯನ್ನು ತುಟಿಗೆ ತಗುಲಿಸುತ್ತ ಮುದುಕಿ ಕೇಳಿದರು.

"ಸೀತಾ ..ಇದು ಯಾರ ಮನೆಯೋ?"

"ಇದೇನಕ್ಕ ಹೀಗೆ ಕೇಳ್ತೀರಿ? ನಿಮ್ಮದೇ ಮನೆ ಇದು. ನೀವು ಹಿರಿಯ ಸೊಸೆ. ಕೊನೆಗೆ ಬಂದವಳಲ್ಲವೇ ನಾನು?"

ಸೀತಾ ಅಣಕವಾಡುತ್ತಿಲ್ಲ ತಾನೇ? ಮುದುಕಿಗೆ ವಯಸ್ಸಾಗಿದ್ದರೂ ಕಣ್ಣಿನ ತೀಕ್ಷ್ಣತೆ ಕಡಿಮೆಯಾಗಿರಲಿಲ್ಲ. ಚುಚ್ಚುವಂತೆ ಓರಗಿತ್ತಿಯನ್ನು ನೋಡಿದರು.

ಸರಳವಾಗಿ ಮಾತಾಡಿದ್ದರು ಸೀತಮ್ಮ.

ಸ್ನಾನವಾದ ಮೇಲೆ ರೂಮಿಗೇ ತಿಂಡಿ ಕಾಫಿ ತಂದ ಮಾಣಿ. ಎದುರು ಬದುರಿಗೆ ಹಾಕಿದ್ದ ಕರೀ ಮರದ ಮಂಚದ ಮೇಲೆ ಮಲಗಿ ವಿಶ್ರಾಂತಿ. ತಲೆಯಲ್ಲಿ ದೂರದೂರಕ್ಕೆ ಅಂಟಿಸಿದಂತಿದ್ದ ಬೆಳ್ಳಿಕೂದಲುಗಳನ್ನು ಬಾಚಿ ಹೆರಳು ಸಿಕ್ಕಿಸಿ, ದೊಡ್ಡದಾಗಿ ಕುಂಕುಮ ಇಟ್ಟುಕೊಂಡು ಸಿದ್ಧವಾಗುವ ಹೊತ್ತಿಗೆ ಸೀತಮ್ಮ ಬಂದು ಆಕೆಯನ್ನು ಹೊರಗಡೆ ಚಪ್ಪರಕ್ಕೆ ಕರೆದು ಕೊಂಡು ಹೋದರು. ಹೆಂಗಸರ ಗುಂಪಿಗೆ ಪರಿಚಯ ಮಾಡಿಕೊಡುತ್ತ-

"ಇವರು ನಮ್ಮ ಅಕ್ಕ. ಅಲ್ಲಿ ಕೂತಿರೋರು ನಮ್ಮ ಭಾವನವರು. ಹಳ್ಳಿ ಯನ್ನು ಬಿಟ್ಟು ಬಂದೋರೇ ಅಲ್ಲ. ವಟುವಿನ ಪುಣ್ಯ. ಅವನಿಗೆ ಆಶೀರ್ವಾದ ಮಾಡಲು ಅಷ್ಟು ದೂರದಿಂದ ಬಂದಿದಾರೆ"-ಎಂದರು.

"ಬನ್ನಿ ಅಜ್ಜಿ" ಎನ್ನುತ್ತ ಹೆಂಗಸರು ಸರಿದು ಗೋಡೆಯ ಅಂಚಿನಲ್ಲಿ ಆಕೆಗೆ ಜಾಗ ಮಾಡಿಕೊಟ್ಟರು.

ಹಸೆಮಣೆಯ ಕಲಾಪವೆಲ್ಲ ಮುಗಿದು ಆರತಿಯಾದ ಮೇಲೆ ರಾಯರು ಮಡದಿ ಮತ್ತು ಮಗನೊಡನೆ ಬಂದು ವೃದ್ಧರಿಗೆ ನಮಸ್ಕರಿಸಿ ಆಶಿರ್ವಾದ ಬೇಡಿದರು.

ಅಡಿಯಿಂದ ಮುಡಿಯವರೆಗೆ ಅಲಂಕೃತಳಾಗಿದ್ದ ಸೊಸೆಯನ್ನು ತೋರಿಸಿ ಸೀತಮ್ಮ ಹೇಳಿದರು.

"ಅಕ್ಕ ನಿಮ್ಮ ಸೊಸೆಗೆ ಹರಸಿ."

ಆಮೇಲೆ ಊಟದ ಸಡಗರ. ಬಂದವರಿಗೆಲ್ಲ ಚಪ್ಪರದಲ್ಲಿ ಸಾಲು ಸಾಲಾಗಿ ಎಲೆ ಹಾಕಿ ಬಡಿಸಿದರು. ಊಟ ಮುಗಿಸಿ ಎಲೆ ಅಡಿಕೆ ಜಗಿಯುತ್ತ ಮನೆಗಳಿಗೆ ಹೊರಟರು, ಜನ.

"ಬರ್ತೀವಿ ಅಜ್ಜಿ. ನಮ್ಮ ಮನೆಗೂ ಬನ್ನಿ ಮನೆ ಹತ್ತಿರವೇ ಇದೆ. ಹಿರಿಯರ ಪಾದಧೂಳಿ ನಮ್ಮ ಮನೆಯಲ್ಲೂ ಬೀಳಲಿ"

-ಎಂದು ಕೆಲವರು ಮುದುಕಿಯನ್ನು ಆಹ್ವಾನಿಸಿದ್ದೂ ಉಂಟು.

ಹೋಗಿ ಬರುತ್ತಿದ್ದ ನೂರಾರು ಜನರಲ್ಲಿ ಒಬ್ಬರಾಗಿ ಯಾರ ಕಣ್ಣಿಗೂ ಬೀಳದೆ ಇರಬಹುದಾಗಿದ್ದ ಆ ದಂಪತಿಗಳು ರಾಯರ ಮನೆಯಲ್ಲಿ ದೊರೆತ ಅತಿ ಮರ್ಯಾದೆಯಿಂದ ಬಂದಿದ್ದವರೆಲ್ಲರ ಗಮನವನ್ನೂ ಸೆಳೆದರು.

ಚಪ್ಪರವನ್ನು ಬೆಳಗಿದ್ದ ದೀಪಗಳು ಒಂದೊಂದಾಗಿ ಆರಿದುವು. ಬೆಳಗಿನಿಂದ ಓಡಾಡಿ ಸುಸ್ತಾಗಿದ್ದವರೆಲ್ಲ ಮಲಗಲು ಹವಣಿಸುತ್ತಿದ್ದರು. ಕೆಲಸಮಾಡಿ ದಣಿದಿದ್ದವರೆಲ್ಲ ಅಲ್ಲಲ್ಲೇ ಜಾಗ ಹುಡುಕಿ ಸುರುಟಿಕೊಂಡರು. ದೊಡ್ಡ ಹಜಾರದಲ್ಲಿ ಮಿನುಗುತ್ತಿದ್ದ ಇರುಳು ದೀಪವನ್ನು ಬಿಟ್ಟರೆ ಮನೆಯಲ್ಲಿ ಕತ್ತಲು ಆವರಿಸಿತ್ತು.

ಬೆಳಗಿನಿಂದ ಗಿಜಿಬಿಜಿ ಎಂದು ಗದ್ದಲದಲ್ಲಿದ್ದ ಮನೆ ಮೌನದ ಆಳದಲ್ಲಿ ಅವಿತುಕೊಂಡಂತಿತ್ತು.

ರಾಯರು ಹಾಸಿಗೆಯ ಮೇಲೆ ಮಲಗಿ ಮಗ್ಗಲು ಬದಲಿಸುತ್ತಿದ್ದರು. ಈ ಸಮಾರಂಭಕ್ಕಾಗಿ ಒಂದು ತಿಂಗಳಿಂದ ಸಿದ್ಧತೆ ನಡೆದಿತ್ತು. ಪಟ್ಟಿಗಳನ್ನು ತಯಾರಿಸಿದ್ದೊ ತಯಾರಿಸಿದ್ದೆ ! ಕರೆಯುವವರ ಪಟ್ಟಿ, ತರುವ ಸಾಮಾನು ಗಳ ಪಟ್ಟಿ, ಉಡುಗೊರೆಗಳ ಪಟ್ಟಿ. ಒಂದೇ ಎರಡೇ ?

ಬಂಧು-ಮಿತ್ರರಿಗೆ ಆಹ್ವಾನಪತ್ರಿಕೆಗಳನ್ನು ಕಳಿಸುವಾಗ ರಾಯರಿಗೆ ತಟ್ಟನೆ ತಮ್ಮ ದೊಡ್ಡಪ್ಪನ ನೆನವು ಬಂತು. ಅವರು ಚಿಕ್ಕವರಾಗಿದ್ದಾಗಲೇ ಅವರ ತಂದೆ ಸಂಸಾರದೊಂದಿಗೆ ಹಳ್ಳಿಯನ್ನು ತೊರೆದುಕೊಂಡು ಮೈಸೂರಿಗೆ ಬಂದಿದ್ದರು. ಆಗ ಬಂದದ್ದೇ. ಅವರು ಮತ್ತೆ ಹಳ್ಳಿಯ ಕಡೆ ಹೋಗಲಿಲ್ಲ. ಅಲ್ಲಿಂದಲೂ ಯಾರೂ ಇವರಲ್ಲಿಗೆ ಬಂದಿರಲಿಲ್ಲ. ಒಂದು ರೀತಿಯಲ್ಲಿ ಅಲ್ಲಿನ ಸಂಪರ್ಕ ತೊರೆದಂತೇ ಇತ್ತು.

ಆದರೂ ಮನೆಯಲ್ಲಿ ಆಗಾಗ ಆಡುತ್ತಿದ್ದ ಮಾತಿನಿಂದ ಹುಟ್ಟಿದ ಹಳ್ಳಿಯೂ, ಅಲ್ಲೇ ಉಳಿದಿದ್ದ ದೊಡ್ಡಪ್ಪನೂ ಅವರ ನೆನಪಿನಿಂದ ಪೂರ್ತಿ ಮಾಸಿರಲಿಲ್ಲ.

ಮನೆಯ ಹತ್ತಿರವೇ ಇದ್ದ ಶಾಲೆ. ಅಲ್ಲಿ ಹೊಂಗೆಯ ಮರದ ನೆರಳಿನಲ್ಲಿ ಓರಿಗೆಯ ಹುಡುಗರೊಡನೆ ಆಟವಾಡುತ್ತಿದ್ದುದು

ಇವರ ಮನೆಗೆ ಹೊಂದಿಕೊಂಡಂತಿದ್ದ ದೊಡ್ಡಪ್ಪನ ಮನೆ. ಸಂಜೆಯ ವೇಳೆ ತನ್ನ ತಂದೆ ಅಣ್ಣನೊಡನೆ ಮಾತ್ನಾಡುತ್ತ ಜಗಲಿಯಲ್ಲಿ ಕೂಡು ತ್ತಿದ್ದುದು, ಇವೆಲ್ಲ ನೆನಪಿನ ವಸ್ತ್ರದ ಮೇಲೆ ಅಲ್ಲಲ್ಲಿ ಹರುಕು ಮುರುಕಾಗಿ ಉಳಿದಿರುವ ಬಣ್ಣದ ಚಿತ್ರಗಳು.

ಖಾಯಿಲೆ ಎಂದು ಒಂದು ದಿನ ಅವರನ್ನು ಮೈಸೂರಿನ ಆಸ್ಪತ್ರೆಗೆ

ಸೇರಿಸಿದ್ದರು. ನಿಜ-ಹಳ್ಳಿಯಲ್ಲಿ ಅಷ್ಟು ದೊಡ್ಡ ಆಸ್ಪತ್ರೆಯಾದರೂ ಎಲ್ಲಿತ್ತು ?

ಖಾಯಿಲೆ ಗುಣವಾದ ಮೇಲೂ ಮತ್ತೆ ಹಳ್ಳಿಗೆ ಹಿಂದಿರುಗುವ ಪ್ರಸ್ತಾಪ ಬರಲೇ ಇಲ್ಲ, ತಂದೆ ಮೈಸೂರಿನಲ್ಲೇ ಒಂದು ಕೆಲಸ ಹಿಡಿದು ಅಲ್ಲೇ ಉಳಿದು ಮಗನನ್ನು ಅಲ್ಲೇ ಶಾಲೆಗೆ ಸೇರಿಸಿದರು.

ರಾಯರ ವಿದ್ಯಾಭ್ಯಾಸವೆಲ್ಲ ಅಲ್ಲೇ ನಡೆದು, ಮದುವೆಯಾಗಿ ಅಲ್ಲೇ ವಕೀಲ ವೃತ್ತಿಯೂ ಆರಂಭಿಸಿದರು. ಗೃಹಲಕ್ಷ್ಮಿಯೊಂದಿಗೆ ಧನಲಕ್ಷ್ಮಿಯೂ ಮನೆತುಂಬಿದಳು.

ಮೊದಮೊದಲು ಕಷ್ಟಪಟ್ಟಿದ್ದರೂ ಮಗನ ಕಾಲಕ್ಕೆ ಸಿರಿ ತುಂಬಿ ಬಂದಾಗ ತಂದೆ ಹೇಳುವುದಿತ್ತು

"ಮಗೂ ಇದೆಲ್ಲಾ ನಮ್ಮ ಅತ್ತಿಗೆಯ ದಯ. ಇವತ್ತು ನಾವು ಸುಖ ವಾಗಿದ್ದರೆ ಅದಕ್ಕೆ ಕಾರಣ ಅವಳೇ! ಅವಳಿಂದಲೇ ಊರು ಬಿಟ್ಟೆದ್ದು. ಇಲ್ಲದಿದ್ದರೆ ಅಂಗೈ ಅಗಲ ಭೂಮಿಯನ್ನು ನೆಚ್ಚಿಕೊಂಡೇ ಇರಬೇಕಾಗಿತ್ತು"

ಅದೇಕೋ ಅಂದು ಆಹ್ವಾನ ಪತ್ರಗಳಿಗೆ ವಿಳಾಸ ಬರೆಯುತ್ತಿದ್ದಾಗ ತಟ್ಟನೆ ತಂದೆ ಆಡುತ್ತಿದ್ದ ಮಾತು, ಅವರೊಡನೆ ದೊಡ್ಡಪ್ಪನ ನೆನಪು ಸಹ ಬಂದು ಅವರ ಹೆಸರಿಗೆ ಒಂದು ಆಹ್ವಾನ ಪತ್ರಿಕೆ ಕಳಿಸಿಬಿಟ್ಟರು. ಆತ ಇರುವರೆ? ಎಂದು ಕೂಡ ಯೋಚಿಸಲಿಲ್ಲ. ತನ್ನ ತಂದೆ ತೀರಿಹೋಗಿ ಆರು ವರ್ಷಗಳಾಗಿದ್ದರೂ ದೊಡ್ಡಪ್ಪ ಇರಬಹುದಲ್ಲ. ಅದೇನೋ ತಟ್ಟನೆ ಹೊಳೆದ ನೆನಪು ಅದು, ಆಹ್ವಾನ ಪತ್ರ ಕಳಿಸಿದ ಮೇಲೆ ಅದರ ನೆನಪೇ ಉಳಿಯಲಿಲ್ಲ ಕಳಿಸಿರುವ ವಿಷಯವನ್ನು ತಾಯಿಗೂ ಹೇಳಿರಲಿಲ್ಲ.

ಸ್ವಲ್ಪವೂ ನಿರೀಕ್ಷಿಸದಿದ್ದ ಅವರನ್ನು ನೋಡಿದಾಗ ತಾಯಿಯ ಮುಖ ದಲ್ಲಿ ಕಾಣಿಸಿದ ಗಾಬರಿ ಕಳವಳಕ್ಕೆ ಕಾರಣ? ಆಶ್ಚರ್ಯ ಸಹಜ. ತಮಗೂ ಆಗಿತ್ತು. ಗಾಡಿಯಲ್ಲಿದ್ದವರ ಮುಖದಲ್ಲಿ ತಂದೆಯ ಹೋಲಿಕೆ ಇದ್ದುದರಿಂದ ಗುರುತಿಸಲು ಆಗಿತ್ತು.

ಆದರೂ ಆದರೂ ...ಅಮ್ಮ ಯಾಕೆ ಬೆಚ್ಚಿದಳು? ಬೇರೆಯವರು ಗಮನಿಸದಿದ್ದರೂ ತಮಗೆ ಅದು ಕಾಣಿಸಿತ್ತು.

ಉತ್ಸಾಹದ ಓಡಾಟದಲ್ಲಿದ್ದಾಗಲೂ ಆಗಾಗ ಕರೀ ನೆರಳೊಂದು ಅವರ

ಮುಖದ ಮೇಲೆ ಕಾಣಿಸಿ ಮತ್ತೆ ಮರೆಯಾಗುತ್ತಿತ್ತು.

* * *

ಇಡೀ ದಿನ ಕೆಲಸದಿಂದ ಬಳಲಿದ್ದರೂ ಸೀತಮ್ಮ ಕಣ್ಣು ಮುಚ್ಚಲಿಲ್ಲ. ಹಾಸಿಗೆಯಲ್ಲಿ ಹೊರಳುತ್ತಿದ್ದಂತೆ ಹಳೆಯ ನೆನಪುಗಳು ನುಗ್ಗಿ ಬಂದು ಅವರ ಎದೆಗೆ ಅಪ್ಪಳಿಸುತ್ತಿದ್ದವು. ನಿದ್ರೆಯಂತೂ ಬರಲಾರೆನೆಂದು ಎಲ್ಲೋ ಮರೆಯಾಗಿಬಿಟ್ಟಿತ್ತು.

ಹೇಗೋ ರಾತ್ರಿಯನ್ನು ಕಳೆದು ಬೆಳಕಿನ ಮೊದಲ ಕಿರಣ ಇಣುಕಿದೊಡನೆಯೇ ಎದ್ದು ಬಿಟ್ಟರು.

ಮನೆಯ ಹಿಂಭಾಗದಲ್ಲಿದ್ದ ದೊಡ್ಡ ಬೇವಿನ ಮರ ನಾಲ್ಕು ಕಡೆಗೂ ರೆಂಬೆಗಳನ್ನು ಚಾಚಿ ನಿಂತಿತ್ತು. ಬೆಳಗಿನ ತಂಗಾಳಿ ಎಲೆಗಳ ನಡುವೆ ತೂರಿ ಕಚಗುಳಿ ಇಟ್ಟಾಗ ಎಲೆಗಳು ನಾಚಿ, ಬಳುಕಿ ತೂಗುವಂತಿತ್ತು. ಗಾಳಿಯನ್ನು ಅಟ್ಟಿಸಿಕೊಂಡು ಬಂದಂತೆ ಹಿಂದಿನಿಂದ ಎಳೆ ಬಿಸಿಲಿನ ಕಿರಣಗಳು ಎಲೆಗಳ ನಡುವೆ ತೂರಿ ಬರಲು ಪ್ರಯತ್ನಿಸುತ್ತಿತ್ತು.

ಬೇವಿನ ಮರದ ಕೆಳಗೆ ನೆಲ ಸ್ವಚ್ಛವಾಗಿತ್ತು. ಅಲ್ಲಿ ಹುಡುಗರು ಆಡುತ್ತಿದ್ದುದರಿಂದ ಹುಲ್ಲು ಕಿತ್ತು ನೆಲವನ್ನು ಸಮ ಮಾಡಿದ್ದರು. ಗಿಡದಿಂದ ಉದುರುತ್ತಿದ್ದ ಹೂವು ಯಾರ ಅಂಕೆಗೂ ಸಿಗದೆ ನೆಲದ ಮೇಲೆ ತನ್ನ ಸಾಮ್ರಾಜ್ಯ ಸ್ಥಾಪಿಸಿತ್ತು.

ಬೇವಿನ ಮರಕ್ಕೆ ಸ್ವಲ್ಪ ದೂರದಲ್ಲಿ ಸೀತಮ್ಮ ತಾವೇ ಎದುರಿಗೆ ನಿಂತು ಆಳಿನ ಕೈಲಿ ಗುಂಡಿ ತೋಡಿಸುತ್ತಿದ್ದರು. ಆ ಕಡೆಗೆ ಬಂದ ರಾಯರು ಒಂದು ಕ್ಷಣ ನಿಂತು ನೋಡಿ ಆಶ್ಚರ್ಯದಿಂದ ಕೇಳಿದರು–

"ಯಾಕಮ್ಮ ಇದು ? ಗಿಡ ಹಾಕಲು ಇವತ್ತು ನಿನಗೆ ಬಿಡುವಿದೆಯೆ ? ನೆಂಟರೆಲ್ಲ ಹೊರಡುತ್ತಿದ್ದಾರೆ."

ಸೀತಮ್ಮ ಸಣ್ಣಗೆ ನಕ್ಕು–

"ಅಗತ್ಯವಾದ ಎಲ್ಲ ಕೆಲಸಗಳಿಗೂ ಬಿಡುವು ಮಾಡಿಕೋ ಬೇಕು"

ಎಂದರು.

ಅದೇ ಹೊತ್ತಿಗೆ ಮುಂಜಿಯಾದ ಹುಡುಗ ಅರಿಶಿನ ಅದ್ದಿದ್ದ ಪಂಚೆ

ಉಟ್ಟುಕೊಂಡು ಅಲ್ಲಿಗೆ ಓಡುತ್ತ ಬಂದ. ಬೆಳ್ಳಿ ಪಂಚಪಾತ್ರೆಯಲ್ಲಿದ್ದ ನೀರನ್ನು ತುಳಸಿಕಟ್ಟೆಗೆ ಸುರಿದ.

"ಶ್ರೀನಿಧಿ ...ಇಲ್ಲಿ ಬಾ"

–ಸೀತಮ್ಮ ಕರೆದರು.

ಹುಡುಗ ಹತ್ತಿರ ಬಂದ.

"ನಿನಗೆ ಮುಂಜಿ ಆಯಿತು ಅಲ್ವೇ ?"

"ಆಯ್ತಲ್ಲ ನಿನ್ನೆ!"

"ನೀನೀಗ ಬ್ರಹ್ಮಚಾರಿ. ಹೊತ್ತುವೇಳೆ ಇಲ್ಲದೆ ಸಿಕ್ಕಿದ್ದನ್ನು ತಿನ್ನ ಬಾರದು. ತಿಳೀತಾ ? ಅಗ್ನಿಕಾರ್ಯ ಆದಮೇಲೆ ನಾನೇ ನಿನಗೆ ತಿಂಡಿ ಕೊಡ್ತೀನಿ ಬೇರೆ ಏನೂ ತಗೋಬೇಡ. ಇನ್ನು ಎರಡು ದಿನ ನಿಯಮ. ಆಮೇಲೆ ಬೇಕಾದ್ದು ತಿನ್ನುವಿಯಂತೆ."

"ಹಾಗೇ ಆಗಲಿ"

ಹುಡುಗ ಬಂದಂತೆ ಹಾರಿಹೋದ.

ಹಳ್ಳಿಯ ಎಲ್ಲಾ ಮುಜುಗರವನ್ನು ಮರೆತು ವೃದ್ಧ ದಂಪತಿಗಳು ಹಾಯಾಗಿ ಎರಡು ದಿನ ಇದ್ದು ಊರಿಗೆ ಹೊರಟರು.

ಎಲ್ಲರಿಗಿಂತಲೂ ಭಾರಿಯಾದ ಉಡುಗೊರೆ ಅವರಿಗೆ ದೊರೆಯಿತು. ಗೇಣಂಚಿನ ಹೊಸಸೀರೆ ಧರಿಸಿ ಮುದುಕಿ ಗಾಡಿ ಹತ್ತಿದರು. ಎರಡು ಬುಟ್ಟಿ ತುಂಬ ತಿಂಡಿಯನ್ನು ಸೀತಮ್ಮ ತಾನೇ ತಂದು ಗಾಡಿಯಲ್ಲಿ ಇಟ್ಟರು.

ಅವರನ್ನು ಬೀಳ್ಕೊಡಲು ಇಡೀ ಸಂಸಾರವೇ ಮುಂಬಾಗಿಲಲ್ಲಿ ನೆರೆದಿದ್ದರು. ಗಾಡಿ ಚಲಿಸಿತು.

"ಬಹಳ ಅದ್ದೂರಿಯಾಗೆ ನಡೆಸಿದೆಯಪ್ಪ, ಸಂತೋಷವಾಯ್ತು"

ಮುದುಕಿ ಉಸುರಿದರು.

"ಎಲ್ಲಾ ನಿಮ್ಮ ದಯ, ಆಶೀರ್ವಾದ."

ತಾಯಿ ಮಗ ಇಬ್ಬರೂ ಹೇಳಿದರು.

ಗಾಡಿ ಮರೆಯಾದ ಮೇಲೆ ಸೀತಮ್ಮ ತಮ್ಮ ಕೋಣೆಗೆ ಬಂದು ಹಾಸಿಗೆಯ ಮೇಲೆ ಉರುಳಿ ನಿಟ್ಟುಸಿರು ಬಿಟ್ಟರು.

ಅವರ ಹಿಂದೆಯೇ ಒಳಗೆ ಬಂದ ರಾಯರು ತಾಯಿಯ ಹತ್ತಿರ ಕುಳಿತು

ಕೇಳಿದರು :

"ಬಹಳ ಆಯಾಸವಾಗಿರಬೇಕು ನಿನಗೆ, ಇಷ್ಟು ಜನ ಇದ್ದರೂ ನಿನಗೆ ಕೆಲಸ ಇದ್ದೇ ಇತ್ತು."

"ಮದುವೆ ಮುಂಜಿ ಎಂದ ಮೇಲೆ ಇವೆಲ್ಲ ಇದ್ದದ್ದೆ. ಎರಡು ದಿನ ಸುಧಾರಿಸಿಕೊಂಡರೆ ಸರಿಹೋಗುತ್ತೆ."

ಒಂದು ಕ್ಷಣ ಮೌನ ಯಾವುದೋ ಮಾತನ್ನು ಕೇಳಬೇಕೆಂದು ಇಬ್ಬರೂ ಯೋಚಿಸುವಂತಿತ್ತು. ಕೊನೆಗೆ ಮಗನೇ ಬಾಯಿ ಬಿಡಬೇಕಾಯ್ತು.

"ಅವತ್ತು ದೊಡ್ಡಪ್ಪ ದೊಡ್ಡಮ್ಮ ಬಂದಾಗ ನಿನಗೆ ಬಹಳ ಆಶ್ಚರ್ಯ ವಾಗಿರಬೇಕು ಅಲ್ವೇ ?"

"ಹೂಂ ..ಅವರಿಗೆ ಹೇಗೆ ಗೊತ್ತಾಯ್ತೊ ?"

"ನಾನೇ ಒಂದು ಆಹ್ವಾನ ಪತ್ರ ಕಳಿಸಿದ್ದೆ. ಆಮೇಲೆ ಆ ವಿಷಯ ನಾನೂ ಮರೆತುಬಿಟ್ಟೆ. ನಿನಗೂ ಹೇಳಲಿಲ್ಲ. ಅಪ್ಪ ಇದ್ದಾಗ 'ಅವರ ಉಪಕಾರದಿಂದಲೇ ನಾವು ಇಷ್ಟರಮಟ್ಟಿಗೆ ಇರೋದು"–ಎನ್ನುತ್ತಿದ್ದರು ಏನು ಉಪಕಾರವೋ ಅವರು ಹೇಳಲೇ ಇಲ್ಲ."

"ಕೆಲವು ವಿಚಾರ ತಿಳಿದುಕೊಳ್ಳೋದಕ್ಕಿಂತ ಅಜ್ಞಾನದ ಮರೆಯಲ್ಲಿ ಇರೋದೇ ವಾಸಿ. ಹುಡುಗನ ಮನಸ್ಸು ಕಹಿ ಮಾಡಬಾರ್ದು. ಕಾಲ ಬಂದಾಗ ಹೇಳಿದರಾಯ್ತು ಎಂದಿದ್ದರು."

"ನಾನು ಈಗ ಹುಡುಗನಲ್ಲ, ಮಗನ ಮುಂಜಿ ಮಾಡುವಷ್ಟು ದೊಡ್ಡವ ನಾಗಿದೀನಿ! ಇನ್ನೂ ಕಾಲ ಬಂದಿಲ್ಲ ಅಂತೀಯಾ ? ನಾನೂ ಅಂದಿನಿಂದ ನಿನ್ನ ಗಮನಿಸುತ್ತಲೇ ಇದ್ದೆ. ಏನೋ ಆತಂಕ. ಕಳವಳ ನಿನ್ನ ಮುಖದಲ್ಲಿ. ಉತ್ಸವದ ಸಮಯದಲ್ಲಿ ಅವರು ಬರುವಂತೆ ಮಾಡಿ ನಿನ್ನ ಸಂತೋಷ ಭಂಗ ಮಾಡಿದೆನೋ ಏನೋ ?"

"ಒಂದು ರೀತೀಲಿ ಅವರು ಬಂದದ್ದು ಒಳ್ಳೇದಾಯ್ತು. ಏನೆಂದರೂ ಹಿರಿಯರು ...

"ಅಲ್ಲದೆ ಉಪಕಾರಿಗಳು "

"ಹೂಂ ..ಉಪಕಾರಿಗಳು."

"ಅದೇನು ಉಪಕಾರ ? ನನಗೂ ತಿಳಿದಿದ್ದರೆ .."

ಸೀತಮ್ಮ ಸ್ವಲ್ಪ ಸಮಯ ಯೋಚಿಸುವಂತೆ ಕುಳಿತಿದ್ದು ನಂತರ ಹತ್ತಿರ ಯಾರೂ ಇಲ್ಲವೆಂದು ದೃಢಮಾಡಿಕೊಂಡು ಮೆಲ್ಲಗೆ ಹೇಳಿದರು-

"ನಿಮ್ಮ ದೊಡ್ಡಮ್ಮನಿಗೆ ಮಕ್ಕಳಿರಲಿಲ್ಲ. ಹಲವು ದೇವರಿಗೆ ಹರಕೆ ಹೊತ್ತರೂ ಆಗಲಿಲ್ಲ. ಅದೇ ವ್ಯಥೆಯಲ್ಲಿ-ಏನೇನೋ ಅಭ್ಯಾಸ ಮಾಡಿಕೊಂಡರಂತೆ.

ನನಗೆ ಒಂದು ಹೆಣ್ಣು ಮಗು ಆಯ್ತು, ಮನೇಲಿ ದಿಕ್ಕಿಲ್ಲ. ಸಹಾಯಕ್ಕೆಂದು ಒಬ್ಬರು ನೆಂಟರು ಬಂದಿದ್ದರು. ಆಕೆ ನಮ್ಮ ಅತ್ತೆಗೆ ಏನೋ ಬಳಗ. ಆಗಾಗ ಬರ್ತಿದ್ದರಂತೆ. ಅಲ್ಲಿನ ವಿಷಯವೆಲ್ಲಾ ತಿಳಿದವರು ಅವರು. ಮಗು ಹುಟ್ಟಿ ಐದು ದಿನವಾಗಿತ್ತು. ನಾನು ಬೆಚ್ಚಗೆ ಹೊದ್ದು ಮಲಗಿದ್ದೆ. ಆಕೆ ನನಗೆ ಎಲ್ಲಾ ಉಪಚಾರ ಮಾಡಿ ಸ್ನಾನಕ್ಕೆಂದು ಕೆರೆಗೆ ಹೋದರು. ಆ ಹೊತ್ತಿನಲ್ಲಿ ನಿಮ್ಮ ದೊಡ್ಡಮ್ಮ ಬಂದು ಮಾತಾಡಿಸಿದರು-

"ನಿದ್ರೆ ಮಾಡ್ತಿದೀಯಾ ಸೀತಾ ?"

"ಬನ್ನಿ ಅಕ್ಕ."

"ಮಗು ಏನ್ಮಾಡ್ತಿದೆ ?"

"ಇನ್ನೇನು ಕೆಲಸ ಅದಕ್ಕೆ. ನಿದ್ರೆ ಮಾಡ್ತಿದೆ."

"ಎಷ್ಟು ಮುದ್ದಾಗಿದೆ ಮಗು ! ಎತ್ತಿಕೊಳ್ಳೋಣ ಎಂತ ಆಸೆ ಆಗ್ತಿದೆ."

"ಈಗ ಮುಟ್ಟಿದರೆ ಸ್ನಾನ ಮಾಡಬೇಕಲ್ಲ !"

"ಮಾಡಿದರಾಯ್ತು."

-ಎನ್ನುತ್ತ ಆಕೆ ಒಳಗೆ ಬಂದರು. ಮಲಗಿದ್ದ ಮಗೂನ ಎತ್ತಿ ತೊಡೆಯ ಮೇಲೆ ಮಲಗಿಸಿಕೊಂಡರು.

"ಮಗು ಬಿಕ್ಕಳಿಸ್ತಾ ಇದೆ. ಗಂಟಲು ಒಣಗಿರಬೇಕು. ಸ್ವಲ್ಪ ಹರಳೆಣ್ಣೇ ಚೀಪಿಸಲೆ ?"

-ಎಂದರು

ನಾನು ಹೂಂಗುಟ್ಟಿದೆ. ಕತ್ತಲು ಕೋಣೆ. ಸ್ವಲ್ಪ ಹೊತ್ತು ಕೂತಿದ್ದು ಆಕೆ ಹೋದರು. ಮಗು ಅತ್ತು ಗಲಾಟೆ ಮಾಡಲಿಲ್ಲ. ನಾನೂ ಹಾಯಾಗಿ ನಿದ್ರೆ ಮಾಡಿಬಿಟ್ಟೆ.

ಕೆರೆಗೆ ಹೋಗಿದ್ದಾಕೆ ಬಂದು ಅಡಿಗೆ ಊಟ ಮುಗಿಸಿ, ನಿನಗೂ

ಊಟಕ್ಕೆ ಹಾಕಿ, ಒಳಗಿನ ಕೆಲಸ ಮುಗಿಸಿ ನನ್ನ ಬಳಿ ಬಂದರು. ಮೊರದಲ್ಲಿ ಮಲಗಿದ್ದ ಮಗು ಮೈಯೆಲ್ಲ ಹಸುರಾಗಿ ಅಸು ನೀಗಿತ್ತು.

ಆಕೆ "ಅಯ್ಯೋ" ಎಂದು ಕಿರುಚಿ ಯಾರು ಬಂದಿದ್ದರು ಎಂದು ಕೇಳಿದರು.

"ಯಾರು....? ನಮ್ಮ ಅಕ್ಕ ಬಂದು ಮಗು ಎತ್ತಿಕೊಂಡಿದ್ದರು" ಎಂದೆ ಗಾಬರಿಯಿಂದ.

"ಇನ್ನೆಲ್ಲಿಯ ಮಗು? ಪಾಪಿ ಮಗೂಗೆ ಎಣ್ಣೆಯಲ್ಲಿ ವಿಷಬೆರೆಸಿ ಹಾಕಿದಾಳೆ"

-ಎಂದರು.

ನಾನು ಬುದ್ಧಿ ಹೋದವಳಂತಾದೆ. ಅಂದಿನಿಂದ ನಾವು ಅವರ ಮನೆಗೆ ಹೋಗ್ತಿರಲಿಲ್ಲ, ದೂರವಾಗೇ ಇದ್ದೆವು. ಕಾಲಕಳೆದಂತೆ ಅದು ಹಳೆಯ ನೆನಪು. ಅವರ ಮೇಲಿನ ಅನುಮಾನವೂ ಮಾಸಿತು.

"ಮಗುವಿಗೆ ಏನಾಗಿತ್ತೋ? ನಾವೇ ತಪ್ಪು ತಿಳಿದಿರಬಹುದು"

-ಎನ್ನುವಂತಾಯ್ತು.

ಒಂದು ದಿನ ನೀನು ಶಾಲೆಗೆ ಹೋಗಿದ್ದಾಗ ಅಲ್ಲೇ ವಾಂತಿ ಆಯ್ತಂತೆ. ಮನೆಗೆ ಹೊತ್ತು ತಂದರು. ಜ್ಞಾನವೇ ಇರಲಿಲ್ಲ. ಜೊತೆಯ ಹುಡುಗರನ್ನು ವಿಚಾರಿಸಿದಾಗ-

"ಒಬ್ಬ ಹೆಂಗಸು ಆಟದ ಬಿಡುವಿನಲ್ಲಿ ಬಂದು ಹುರಿಹಿಟ್ಟು ಬೆಲ್ಲ ತಿನ್ನಲು ಕೊಟ್ಟಳು"

-ಎಂದರು. ಆ ಹೆಂಗಸು ನಿನ್ನ ದೊಡ್ಡಮ್ಮನೆಂದು ಗೊತ್ತಾಯ್ತು.

ಈ ದಾಯಾದಿಗಳ ಹತ್ತಿರದಲ್ಲಿ ಇರೋದು ಸರಿಯಲ್ಲವೆಂದು ನಿರ್ಧರಿಸಿ ನಿಮ್ಮ ತಂದೆ ಅದೇ ಮುಖಕ್ಕೆ ಗಾಡಿಯಲ್ಲಿ ನಿನ್ನನ್ನು ಹಾಕಿಕೊಂಡು ಇಲ್ಲಿನ ಆಸ್ಪತ್ರೆಗೆ ತಂದರು. ದೇವರು ದೊಡ್ಡವನು. ಹಿರಿಯರ ಪುಣ್ಯ. ಮೂರು ದಿನದ ಮೇಲೆ ನೀನು ಮೊದಲಿನಂತಾದೆ. ಮತ್ತೆ ಹಳ್ಳಿಯ ಕಡೆ ಮುಖ ತಿರುಗಿಸಲಿಲ್ಲ. ಅದೂ ಒಳ್ಳೆಯದೇ ಆಯ್ತು. ಆ ಮಗು ಈಗ ಇದ್ದಿದ್ದರೆ.... ನಿನ್ನ ತಂಗಿ ನಿನಗೆ ನೆರವಾಗಿ ನಿಲ್ಲುತ್ತಿದ್ದಳು. ಎಂತಹ ಮುದ್ದಾಗಿತ್ತು ....ಎಂದರೇ...."

ಗಾಯ ಎಷ್ಟು ಹಳೆಯದಾದರೇನು ? ಅದರ ನೆನಪು ಆಕೆಯ ಕಣ್ಣಲ್ಲಿ ನೀರು ತರಿಸಿತು.

"ಅಮ್ಮ....ಗುಣಿ ತೋಡಿಸಿದೆಯಲ್ಲ ಯಾಕೆ ?"

ರಾಯರ ವಕೀಲ ಬುದ್ಧಿಗೆ ಆ ಗುಣಿಗೂ ಈ ಕತೆಗೂ ಏನೋ ಗಂಟು ಇದೆ ಎಂದು ತೋರಿತ್ತು.

"ನೋಡಪ್ಪ-ನಿಮ್ಮ ದೊಡ್ಡಮ್ಮ ಒಂದು ಬುಟ್ಟಿ ತುಂಬ ತಿಂಡಿ ತಂದಿದಾರೆ ಹುರಿಗಾಳು, ಪುಳ್ಳಂಗಾಯುಂಡೆ, ಗುಳುಪಾವಟೆ ಎಲ್ಲ ಇದೆ. ಅದನ್ನು ಯಾರಿಗೆ ಕೊಡಲೂ ಧೈರ್ಯವಿಲ್ಲ, ತಿಪ್ಪೆಗೆ ಎಸೆಯಲೂ ಭಯ. ನಾಯಿಗಳು ಕಾಗೆಗಳು ತಿಂದರೆ ? ಪಾಪ. .ಅವೂ ಪ್ರಾಣಿಗಳು. ಆದರಿಂದ ಗುಣಿಯಲ್ಲಿ ಅವನ್ನೆಲ್ಲ ತುಂಬಿ ಮಣ್ಣು ಮುಚ್ಚಿದರೆ ನಿಶ್ಚಿಂತೆಯಾಗಿರುತ್ತೆ. ಈ ಮೂರು ದಿನದಿಂದ ಶ್ರೀನಿಧೀನ ನಿಧಿಯ ಹಾಗೇ ಕಾದೆ. ದೇವರು ದೊಡ್ಡವನು."

"ದೇವರ ವಿಷಯ ನನಗೆ ಅಷ್ಟಾಗಿ ತಿಳಿಯದು, ಹತ್ಯಾಕಾರಿಯನ್ನು "ಉಪಕಾರಿ" ಎನ್ನುತ್ತ ಉಪಚಾರ ಮಾಡಿದೆಯಲ್ಲ. ಆ ದೊಡ್ಡತನ ಮಾತ್ರ ಅರ್ಥವಾಗ್ತಿದೆ."

ರಾಯರು ಧನ್ಯತೆಯಿಂದ ಹೊರಗೆ ಬಂದರು.

# ಕಂಕಣ

ಯಾವ ಮುನ್ಸೂಚನೆಯೂ ಇಲ್ಲದೆ ಅನಿರೀಕ್ಷಿತವಾಗಿ ನರಸಿಂಹಯ್ಯ ಮಗನೊಡನೆ ಬಂದಾಗ ಮನೆಯವರಿಗೆ ಆಶ್ಚರ್ಯದೊಂದಿಗೆ ಸಂತೋಷವೂ ಆಗಿತ್ತು. ಏಕೆಂದರೆ ನರಸಿಂಹಯ್ಯ ಮನೆಬಿಟ್ಟು ಹೊರಡುವುದೇ ಅಪರೂಪ.

"ನಂಜನಗೂಡಿಗೆ ದೇವರ ಸೇವೆಗೆ ಬಂದಿದ್ದೆ. ಹಾಗೇ ನಿಮ್ಮನ್ನೆಲ್ಲ ನೋಡೋಣವೆಂದು ಇಲ್ಲಿಗೂ ಬಂದೆ"

–ಯಾರೂ ಕೇಳುವ ಮೊದಲೇ ಅವರು ತಾವು ಬಂದುದಕ್ಕೆ ವಿವರಣೆ ಕೊಟ್ಟರು. ಮನೆಯವರ ಅಂದರೆ ಗೆಳೆಯ ಅವನ ಹೆಂಡತಿ ಇಬ್ಬರ ಮಾತಿಗೆ ಕಟ್ಟುಬಿದ್ದು ಒಂದು ದಿನ ಅಲ್ಲೇ ಉಳಿದರು.

"ನರಸಿಂಹಯ್ಯನದು ದೂರ್ವಾಸ ಗೋತ್ರವೋ ಏನೋ?"

ಎಂದು ಅವರ ಪರಿಚಿತರು ಹಾಸ್ಯ ಮಾಡುವುದಿತ್ತು. ಹಾಗೆಂದ ಮಾತ್ರಕ್ಕೆ ಅವರಿಗೆ ಸ್ನೇಹಿತರ ಕೊರತೆ ಎಂದೂ ಇರಲಿಲ್ಲ.

ಕೋಪ ಮೂಗಿನ ತುದಿಯಲ್ಲೇ ಇದ್ದರೂ ಮನಸ್ಸಿಗೆ ತೋರಿದ್ದನ್ನು ಹಿಂದು ಮುಂದು ನೋಡದೆ, ಮುಖ ಕತ್ತರಿಸಿದಂತೆ ತಟ್ಟನೆ ಎದುರಿಗೆ ಆಡಿಬಿಡುತ್ತಿದ್ದರೂ ಅವರ ಹೃದಯ ಮಾತ್ರ ಶುದ್ಧ ಅಪರಂಜಿ ಎಂದು ಎಲ್ಲರಿಗೂ ತಿಳಿದಿತ್ತು.

ಮಾತು ಎಷ್ಟು ಒರಟೋ ಖಂಡಿತವೋ ಹೃದಯ ಅಷ್ಟೇ ಮೃದು. ಅಲ್ಲದೆ ಅವರ ಮನಸ್ಸಿನಲ್ಲಿ ಕ್ಷುದ್ರ ವಿಚಾರಕ್ಕೆ ಎಡೆಯೇ ಇಲ್ಲ.

ತತ್ವನಿಷ್ಠ ಜೀವನ ಅವರದ್ದು. ಎರಡು ವರ್ಷದ ಮಗನನ್ನು ಬಿಟ್ಟು ಹೆಂಡತಿ ತೀರಿಕೊಂಡರೂ ಮತ್ತೆ ಮದುವೆ ಆಗಲಿಲ್ಲ. ತಾಯಿಯ ಕೊರತೆ ತೋರದಂತೆ ಮಗನನ್ನು ಬೆಳೆಸಿ, ವಿದ್ಯೆ ಕಲಿಸಿ ದೊಡ್ಡವನನ್ನು ಮಾಡಿದ್ದರು.

ನರಸಿಂಹಯ್ಯ ಆ ಊರಿಗೆ ಬಂದಿರುವುದು ತಿಳಿದ ಕೂಡಲೇ ಸ್ನೇಹಿತರ

ಹಿಂಡೇ ಅವರನ್ನು ನೋಡಲು ಧಾವಿಸಿಬಂದಿತು. ಪ್ರತಿಯೊಬ್ಬರೂ ತಮ್ಮ ಮನೆಗೇ ಬಂದು ಬಿಡಾರಮಾಡಬೇಕಿತ್ತೆಂದು ಆಕ್ಷೇಪಿಸುವವರೇ! ಹಾಗೆ ಬಂದವರಲ್ಲಿ ಮತ್ತು ಗೆಳೆಯನನ್ನು ತರಾಟೆಗೆ ತೆಗೆದುಕೊಂಡವರಲ್ಲಿ ಜನಾರ್ಧನ ಪಂಡಿತರೂ ಒಬ್ಬರು

ಪಂಡಿತರು ವೈದ್ಯ ಕಲಿತವರಲ್ಲ ಶಾಸ್ತ್ರ ಅಭ್ಯಾಸ ಮಾಡಿದವರಲ್ಲ. ಆದರೂ ಊರಿನಲ್ಲಿ ಎಲ್ಲರೂ ಅವರನ್ನು ಪಂಡಿತರೇ ಎಂದು ಕರೆಯುವುದು ರೂಢಿ.

ತಂದೆಗಿಂತ ಎತ್ತರವಾಗಿ ಬೆಳೆದಿದ್ದ ವೇಣುಗೋಪಾಲನನ್ನು ನೋಡಿ ಪಂಡಿತರು–

"ಮಗ ಎಷ್ಟು ದೊಡ್ಡವನಾಗಿದಾನೆ. ಮದುವೆ ಮಾಡಲ್ಲವೇ ನರಸಿಂಹ ?"

–ಎಂದರು ಸಲಿಗೆಯಿಂದ.

"ಹೂಂ . ಸರಿಯಾದ ಹೆಣ್ಣು ಬಂದರೆ ಮಾಡ್ಬೇಕು "

ಮದುವೆಯ ಮಾತು ಬಂದ ಕೂಡಲೇ ವೇಣು ಹೊರಗೆ ಜಾರಿದ.

"ಹೆಣ್ಣು ಹುಡುಗೀರ ಹಾಗೆ ನಾಚ್ಕೋತಾನಲ್ಲೋ ನಿನ್ನ ಮಗ ಈ ಸಿಂಹದ ಹೊಟ್ಟೇಲಿ ಮೊಲದ ಸ್ವಭಾವದ ಹುಡುಗ ಹುಟ್ಟಿದಾನಲ್ಲ! ನನ್ನ ದೃಷ್ಟೀಲಿ ಒಂದು ಹುಡುಗಿ ಇದೆ. ಈಗ ನಿನ್ನ ಮಗನನ್ನು ನೋಡಿದ ಮೇಲೆ, ಅವನಿಗೆ ಸರಿಯಾದ ಜೊತೆ ಎಂದು ತೋರ್‍ತಿದೆ. ಬಹಳ ಒಳ್ಳೇ ಹುಡುಗಿ. ಶಾಂತ ಸ್ವಭಾವ, ನೋಡೋಕೂ ಲಕ್ಷಣವಾಗಿದಾಳೆ "

"ಪರವಾಗಿಲ್ಲವೇ ? ಒಳ್ಳೇ ಹುಡುಗೀನೇ ಆರಿಸಿದೀಯಲ್ಲ. ಇದೇ ಊರಿನವರೇನು ?"

"ಇದೇ ಊರಲ್ಲವಾದರೂ, ಬಹಳ ದೂರವಿಲ್ಲ. ನಾಳೆ ನಾಗಪ್ಪನ್ನ ಇಲ್ಲಿಗೇ ಬರಮಾಡಿ, ಪರಿಚಯ ಮಾಡಿಕೊಡ್ತೀನಿ ಮುಂದೆ ನೀವು ನೀವು ಮಾತಾಡಿ."

ನರಸಿಂಹಯ್ಯನ ಹತ್ತಿರ ಟೊಳ್ಳುಮಾತಾಡುವ ಧೈರ್ಯ ಆತ್ಮೀಯ ಗೆಳೆಯರಾದ ಪಂಡಿತರಿಗೂ ಇರಲಿಲ್ಲ. ಅವರು ಮಾತುಕೊಟ್ಟಂತೆ ಮರುದಿನ ಬೆಳಿಗ್ಗೆ ಹುಡುಗಿಯ ತಂದೆ ನಾಗಪ್ಪನನ್ನು ಕರೆದುಕೊಂಡು ಬಂದೇಬಿಟ್ಟರು.

ಸರಿ. ರೂಢಿಯಂತೆ ಮೊದಲ ಹಂತದ ಮಾತುಗಳು ಮುಗಿದ ಮೇಲೆ ನಾಗಪ್ಪ ಅವರನ್ನು ಸಂಜೆ ತಮ್ಮ ಮನೆಗೆ ಭೋಜನಕ್ಕೆ ಬರಬೇಕೆಂದೂ ಆಹ್ವಾನಿಸಿದರು.

"ಬರೋದೇನೋ ಸರಿ. ಅದರೆ ಊಟದ ಮಾತು ಬೇಡ."

ನರಸಿಂಹಯ್ಯ ಔತಣವನ್ನು ಒಪ್ಪಿಕೊಳ್ಳಲಿಲ್ಲ.

ನಾಗಪ್ಪ ಪಂಡಿತರ ಕಡೆ ನೋಡಿದರು. ಪಂಡಿತರಿಗೆ ಆ ನೋಟದ ಅರ್ಥವಾಯ್ತು. ಅವರು ಮಧ್ಯಸ್ಥಿಕೆ ವಹಿಸಿ-

"ನರಸಿಂಹ-ನಿನಗೆ ನಾಗಪ್ಪನ ಮನೆಯ ವಿಚಾರ ತಿಳಿದಿಲ್ಲ. ಅತಿಥಿ ಸತ್ಕಾರಕ್ಕೆ ಹೆಸರಾದ್ದು ಅವರ ಮನೆತನ ಅವರ ಅಪೇಕ್ಷೆ ಮನ್ನಿಸಿದರೆ ನಿನಗೂ ಭೂಷಣ, ಅವರಿಗೂ ಮರ್ಯಾದೆ. ನನಗಂತೂ ತುಂಬಾ ಸಂತೋಷವಾಗುತ್ತೆ. ಒಪ್ಪಿಕೊ, ಇಲ್ಲವೆನ್ನಬೇಡ" ಎಂದರು.

ಗೆಳೆಯನ ಬಲವಂತಕ್ಕೆ ಮಣಿದು ನರಸಿಂಹಯ್ಯ ಸಂಜೆ ಬರುವುದಾಗಿ ಒಪ್ಪಿಗೆ ಕೊಟ್ಟರು

* * *

ನಾಗಪ್ಪ ಇದ್ದುದು ಸಣ್ಣ ಊರು ಅಲ್ಲಿ ಎಲ್ಲಾ ಸಾಮಾನುಗಳು ಸಿಗುತ್ತಿರಲಿಲ್ಲ. ಇವರು ಬರಲು ಒಪ್ಪಿಗೆಕೊಟ್ಟ ಮೇಲೆ ನಾಗಪ್ಪ ಸೀದಾ ಮಾರ್ಕೆಟ್ಟಿಗೆ ಹೋಗಿ ಬೇಕಾಗಬಹುದಾದ ಸಾಮಾನುಗಳನ್ನೆಲ್ಲ ತೆಗೆದುಕೊಂಡೇ ಊರಿಗೆ ಹೋದರು.

ಅವರಿಗೆ ಹೀಗೆ ಎಷ್ಟೋ ಸಲ ಸಾಮಾನು ತಂದು ಅಭ್ಯಾಸವಿತ್ತಾಗಿ ಏನುಬೇಕೆಂದು ಸುಲಭವಾಗಿ ಊಹಿಸಿದ್ದರು.

ನಾಗಪ್ಪ ಮನೆಗೆ ಹೋಗಿ ಸುದ್ದಿ ತಿಳಿಸಿದಾಗ ರಂಗಮ್ಮ ಹುಬ್ಬುಗಂಟಿಕ್ಕಿ ಸಿಡಿಮಿಡಿ ಗುಟ್ಟಿದರೂ, ತಕ್ಷಣವೇ ಸಮಾಧಾನ ತಂದುಕೊಂಡು ಭಾವಿ ಬೀಗರನ್ನು ಸತ್ಕರಿಸಲು ತಯಾರಾದರು.

ಭಾರತಿಯ ಮದುವೆ ಎಂದಿದ್ದರೂ ಮಾಡಲೇಬೇಕಾದ ಕರ್ತವ್ಯ. ಅದು ತಪ್ಪಿದ್ದಲ್ಲ. ಬೆಳೆದ ಹುಡುಗೀನ ಮನೇಲಿ ಕೂರಿಸಿಕೊಂಡಿರೋದು ಏನು ಸುಖ? ಅವಳದೊಂದು ಹೊಣೆ ಕಡಿಮೆಯಾದರೆ, ಗಂಡು ಹುಡುಗರದ್ದು

ಯೋಚನೆಯಿಲ್ಲ. ಅಲ್ಲದೆ ಅವರು ಇನ್ನೂ ಚಿಕ್ಕವರು.

ನೆರೆಮನೆಯ ಮುದುಕಿಯನ್ನು ಅಡಿಗೆಗೆ ಗೊತ್ತುಮಾಡಿ ಸಕ್ಕರೆಒಬ್ಬಟ್ಟು ಮಾಡಲು ಕುಳಿತರು ರಂಗಮ್ಮ. ಭಾರತಿಯ ನೆರವು ಎಲ್ಲ ಕೆಲಸಕ್ಕೂ ಇದ್ದದ್ದೆ. ಕೆಲಸಕ್ಕೆ ಹೆದರುವ ಸೋಮಾರಿಯಲ್ಲ ಭಾರತಿ.

ರಂಗಮ್ಮನ ಅಚ್ಚುಮೆಚ್ಚಿನ ಭಕ್ಷ್ಯ ಸಕ್ಕರೆ ಒಬ್ಬಟ್ಟು ಆಕೆಗೆ ಚೆನ್ನಾಗಿ ಮಾಡಲು ಬರುತ್ತಿದ್ದುದು ಅದೊಂದೇ ಅದನ್ನು ತಿಳಿದಿದ್ದ ನಾಗಪ್ಪ ಅದಕ್ಕೆ ಬೇಕಾಗುವ ಸಾಮಾನುಗಳನ್ನು ತಂದಿದ್ದರು.

ಕೆಲಸವನ್ನೆಲ್ಲ ಮುಗಿಸಿ ಭಾರತಿ ಸರಳವಾಗಿ ಅಲಂಕರಿಸಿಕೊಂಡಳು ಗಂಡುಹುಡುಗರೂ ನಾಗಪ್ಪನೂ ಸೇರಿ ಮನೆಯನ್ನು ಚೊಕ್ಕಟ ಮಾಡಿದರು.

ರಂಗಮ್ಮನ ಸ್ವಭಾವಕ್ಕೆ ಹೊಂದಿಕೊಂಡಂತೆ ಅವರ ಧ್ವನಿಯೂ ಗಡುಸು. ಮಾತಾಡಿದರೆ ಅವರ ಕಂಚಿನ ಕಂಠ ಜಾಗಟೆ ಬಾರಿಸಿದಂತೆ ಬೀದಿಯ ಕೊನೆಗೂ ಕೇಳಿಸುತ್ತಿತ್ತು. ಅವರು ಒಳಗಡೆ ಕೆಲಸ ಮಾಡುತ್ತ ನಡುನಡುವೆ ಕುಳಿತಲ್ಲಿಂದಲೇ ಹುಡುಗರಿಗೆ ಏನಾದರೂ ಮಾಡುವಂತೆ ಹೇಳಿದಾಗ, ನೆರೆಹೊರೆಯವರೆಲ್ಲ 'ಓ ಇವತ್ತು ರಂಗಮ್ಮನ ಮನೇಲಿ ಏನೋ ವಿಶೇಷ ಇರಬೇಕು'– ಎಂದುಕೊಂಡರು.

ಪಂಡಿತರು ಹೊತ್ತಿಗೆ ಸರಿಯಾಗಿ ಟ್ಯಾಕ್ಸಿ ತಂದು ಮನೆಯ ಮುಂದೆ ನಿಲ್ಲಿಸಿದರು. ತಂದೆ ಮಗನ ಜೊತೆಗೆ ನರಸಿಂಹಯ್ಯ ಇಳಿದುಕೊಂಡಿದ್ದ ಅವರ ಬಂಧುಗಳ ಮನೆಯ ಯಜಮಾನರು, ಯಜಮಾನಿತಿ, ಪಂಡಿತರ ಬಲವಂತಕ್ಕೆ ಕಾರು ಹತ್ತಲೇ ಬೇಕಾಯ್ತು.

ನಾಗಪ್ಪ ಬಾಯ್ತುಂಬ ಉಪಚಾರ ಮಾಡಿ ಬಂದವರನ್ನು ಸ್ವಾಗತಿಸಿದರು.

ಎಲ್ಲಾ ಮಾಮೂಲಿನಂತೆ ನಡೆಯಿತು.

ಬಂದವರು ನಿಂಬೆಹಣ್ಣಿನ ಪಾನಕವನ್ನು ಸವಿಯುತ್ತಿದ್ದಾಗ, ಭಾರತಿಯನ್ನು ತೋರಿಸುವ ಕಾರ್ಯಕ್ರಮ.

ಭಾರತಿ ಲಕ್ಷಣವಾದ ಹುಡುಗಿ, ವೇಣುಗೋಪಾಲ ಮೊದಲ ನೋಟಕ್ಕೆ ಸುಸ್ತು!

"ಒಂದು ಹಾಡು ಹೇಳೇ ತಾಯಿ."

ಇವರ ಜೊತೆ ಬಂದಿದ್ದ ಹೆಂಗಸು ಕೇಳಿದರು.

ಹುಡುಗಿ ತನಗೆ ಬಂದ ಒಂದೆರಡು ಹಾಡುಗಳನ್ನು ಸಂಕೋಚದಿಂದಲೇ ಹೇಳಿ ಒಳಗೆ ಜಾರಿದಳು.

ಆಮಾತು ಈಮಾತು ಆಡ್ತಿರುವಾಗ ಒಳಗಿನಿಂದ 'ಊಟಕೆ ಸಿದ್ಧವಾಗಿದೆ' ಎಂಬ ಸೂಚನೆ ಬಂತು.

ಪಂಡಿತರ ಬಲಾತ್ಕಾರಕ್ಕೆ ಒಪ್ಪಿಕೊಂಡಿದ್ದರೂ ನರಸಿಂಹಯ್ಯನಿಗೆ ಅಲ್ಲಿ ಊಟ ಮಾಡಲು ಇಷ್ಟವಿಲ್ಲ. ಇದು ಅನವಶ್ಯಕವಾದ ತೊಂದರೆ ಎಂದೇ ಅವರ ಮತ. ಆದರೆ ಮಾಡೋದೇನು ? ಒಪ್ಪಿ ಬಂದುದಾಗಿದೆ.

"ಜನಾರ್ಧನ ನೀನು ನನ್ನ ದಾಕ್ಷಿಣ್ಯಕ್ಕೆ ಗುರಿಮಾಡಿದೆ"

-ಎಂದು ಪಂಡಿತರ ಕಿವಿಯಲ್ಲಿ ಉಸುರಿದರು.

"ಇರಲಿ ಬಾರಯ್ಯ ನಿನ್ನಂಥ ಅತಿಥಿಯನ್ನು ಸತ್ಕರಿಸುವ ಅವಕಾಶವನ್ನು ನಾಗಪ್ಪನಿಂದ ಕಸಿಯಬಾರದು"

ಎಂದು ಮೆಲ್ಲಗೆ ಹೇಳಿ ಕಣ್ಣು ಮಿಟುಕಿಸಿದರು.

"ಏಳಿ .. ಕಾಲು ತೊಳೆದುಕೊಳ್ಳಿ"

-ನಾಗಪ್ಪ ಒಗೆದ ಟವಲುಗಳನ್ನು ಮುಂದೆ ಒಡ್ಡಿದರು

ಸಾಲಾಗಿ ಹಾಕಿದ್ದ ಕುಡಿಬಾಳೆ ಎಲೆಯ ಮುಂದೆ ಎಲ್ಲರೂ ಕೂತರು ಥಳಥಳನೆ ಹೊಳೀತಿದ್ದ ಬಟ್ಟಲುಗಳಲ್ಲಿ ಕೇಸರಿ, ಯಾಲಕ್ಕಿ ಬೆರಸಿದ ನೀರು ಬಾಯಾರಿಕೆಗೆ ಆಹ್ವಾನ ನೀಡಿತ್ತು.

ಒಳಗಡೆ ಏನೋ ಪಾತ್ರೆ ಉರುಳಿದ ಸದ್ದು.

"ಈ ಹಾಳು ಮುಂಡೇದನ್ನ ಎಲ್ಲಾದರೂ ಹೊರಗೆ ಅಟ್ಟಿ"

ರಂಗಮ್ಮ ಗರ್ಜಿಸಿದರು

ಹೊರಗೆ ಎಲೆಯ ಮುಂದೆ ಕೂತಿದ್ದವರಿಗೆ ಗುಡುಗು ಸಿಡಿಲುಗಳ ಆರ್ಭಟದ ನೆನಪು ಬಂತು.

ನರಸಿಂಹಯ್ಯ ಹುಬ್ಬೇರಿಸಿ ಪಂಡಿತರ ಮುಖ ನೋಡಿದರು. ಪಂಡಿತರು ಎದುರು ಗೋಡೆಯ ಮೇಲಿದ್ದ ವೆಂಕಟರಮಣನ ಪಾದಗಳನ್ನು ದಿಟ್ಟಿಸಿದರು.

ನಾಗಪ್ಪ ಸ್ಥಿತಪ್ರಜ್ಞನಂತೆ ತಲೆ ತಗ್ಗಿಸಿ ಊಟ ಮಾಡುತ್ತಿದ್ದರೂ ನಡುನಡುವೆ ಪಕ್ಕದಲ್ಲಿದ್ದ ಅತಿಥಿಗಳಿಗೆ ಉಪಚಾರ ನಡೆದೇ ಇತ್ತು.

"ನಮ್ಮನೆ ಅಡುಗೆ ಖಾರವ್ವೋ ಏನೋ ? ತುಪ್ಪ ಬಡಿಸ್ಲ."

–ನಾಗಪ್ಪ ಮಡದಿಗೆ ಹೇಳಿದರು.

"ಏನೂ ಬೇಡ. ಅಡುಗೆ ದಿವಿನಾಗಿದೆ. ಇಷ್ಟು ಖಾರ ಇರದಿದ್ದರೆ ಅಡುಗೆ ಏನು ರುಚಿ ?"

ಪಂಡಿತರು ಬಾಯಿತುಂಬಾ ಹೊಗಳಿ, ನಾಲಗೆ ಚಪ್ಪರಿಸುತ್ತ ಮಾಡಿದ ಪದಾರ್ಥಗಳಿಗೆ ನ್ಯಾಯ ದೊರಕಿಸುತ್ತಿದ್ದರು.

"ನೀವು ಬಹಳ ತೊಂದರೆಪಟ್ಟಿರಿ. ಊಟ ತಿಂಡಿ ಮುಂದೆ ಇದ್ದೇ ಇದೆಯಲ್ಲ ? ಸುಮ್ಮನೆ ನಿಮಗೆ ಶ್ರಮ. ನಮಗೂ ಸಂಕೋಚ."

ನರಸಿಂಹಯ್ಯ ತಮ್ಮ ಅಭಿಪ್ರಾಯ ಹೇಳಿದರು.

"ತಾವು ಹಾಗೆ ಭಾವಿಸಬಾರದು. ನೀವು ಬಂದದ್ದೇ ನಮ್ಮ ಭಾಗ್ಯ. ಶ್ರಮ ಎಂಥದು ?"

ಅರ್ಧ ಊಟ ಮುಗಿದಿತ್ತು. ಆ ದಿನದ ಮುಖ್ಯವಾದ ಭಕ್ಷ್ಯ ಸಕ್ಕರೆ ಒಬ್ಬಟನ್ನು ಒಂದು ದೊಡ್ಡ ತಟ್ಟೇಲಿ ಇಟ್ಟುಕೊಂಡು ರಂಗಮ್ಮ ಬಡಿಸಲು ತಂದರು. ಅದನ್ನು ಮಾಡುವುದರಲ್ಲಿ ನುರಿತ ಕೈ ಅವರದು. ಆ ದಿನ ಬಾಳೆಲೆ ದೊಡ್ಡದಾಗಿದ್ದುದರಿಂದ ಒಬ್ಬಟ್ಟೂ ದೊಡ್ಡದಾಗಿದ್ದು ಒಳ್ಳೇ ಮಂಡಿಗೆ ಯಂತಿತ್ತು.

ಎಡ ಅಂಗೈಲಿ ಭಾರವಾಗಿದ್ದ ತಟ್ಟೆ ಇತ್ತು. ಬಲಗೈಲಿ ಎರಡು ಬಟ್ಟಲುಗಳು. ಹಾಲು, ಸಕ್ಕರೆಯದು. ಇದ್ದಕ್ಕಿದ್ದಂತೆ ರಂಗಮ್ಮ ಹಾವು ಮೆಟ್ಟಿದವರಂತೆ ಬೆಚ್ಚಿ ನೆಟ್ಟಗೆ ನಿಂತರು.

ಏನು ? ಏನಿದು ?

ಅವರ ಎರಡು ಕಾಲುಗಳ ನಡುವೆ ಬೆಕ್ಕು ನಿಂತುಕೊಂಡು ಮೈಯನ್ನು ಬಿಲ್ಲಿನಂತೆ ಬಗ್ಗಿಸಿ, ಬಾಯಿ ತೆರೆದು ಜೋರಾಗಿ ಆಕಳಿಸಿ–

"ಮ್ಯಾಂವ್ ..." ಎಂದಿತು.

ಮನೆಯಲ್ಲಿ ಮುದ್ದಾದ ಮಕ್ಕಳಿದ್ದರೂ, ರಂಗಮ್ಮನ ಪ್ರೀತಿಯನ್ನು ಪಡೆಯುವ ಭಾಗ್ಯವಿದ್ದುದು ಆ ಬೆಕ್ಕಿಗೆ ಮಾತ್ರ.

"ಚೀಲೀ .. ಚೀಲೀ ..." ಎನ್ನುತ್ತ ಸದಾ ಅದನ್ನು ತೊಡೆಯ ಮೇಲ ಏರಿಸಿಕೊಂಡು ಮುದ್ದಾಡುತ್ತಿದ್ದರು, ಆಕೆ. ಅದು ಒಂದೊಂದು ಸಲ

ಬಾಯ್ಬಿಟ್ಟು "ಮ್ಯಾಂವ್" ಎನ್ನುತ್ತ ರಾಗ ಎಳೆದಾಗಲೂ ಅದಕ್ಕೆ ಒಂದೊಂದು ಹೊಸ ಅರ್ಥ ಕಲ್ಪಿಸುತ್ತಿದ್ದರು.

ಅಂದು ಕೆಲಸದ ಆತುರದಲ್ಲಿದ್ದ ರಂಗಮ್ಮನಿಗೆ ಅದನ್ನು ಮುದ್ದು ಮಾಡಲು ಅವಕಾಶವೇ ಆಗಿರಲಿಲ್ಲ. ಒಲೆಯ ಹತ್ತಿರ ಮೈ ಕಾಯಿಸಿ ಕೊಳ್ಳುತ್ತ ಮಲಗಿದ್ದ ಚೀಲಿ, ಒಡತಿ ತನಗೆ ಹಾಲು ಅನ್ನ ಇಡುವುದನ್ನು ಮರೆತು ಕೆಲಸದಲ್ಲಿ ಮೈಮರೆತಿದ್ದಾಗ ಅವರನ್ನೇ ದಿಟ್ಟಿಸಿ ನೋಡುತ್ತಿದ್ದುದು, ಅವರು ಬಡಿಸಲು ಹೊರಗೆ ಬಂದಾಗ ಅವರನ್ನು ಅನುಸರಿಸಿ ಬಂದು, ಕಾಲುಗಳ ನಡುವೆ ತೂರಿ, ತನ್ನ ಉಗುರುಗಳ ಪರಿಚಯವೂ ಒಂದಿಷ್ಟು ಆಗುವಂತೆ ಮಾಡಿತ್ತು.

ಮನೆಯ ಮಕ್ಕಳಿಗಿಂತ ಹೆಚ್ಚಾಗಿ ಹಾಲು ಮೊಸರುಗಳನ್ನು ಗಿಟ್ಟಿಸಿ ಕೊಳ್ಳುತ್ತಿದ್ದ ಚೀಲಿ ಚೆನ್ನಾಗಿ ಕೊಬ್ಬಿ ಬೆಳೆದು ಹುಲಿಯ ಮರಿಯಂತೆ ಆಗಿತ್ತು

"ಚೀಲಿ" ಮುದ್ದಾದರೂ ಅದರ ಉಗುರಿನ ಕಚಗುಳಿ ಮುದ್ದಿನ ಅನುಭವಕೊಡಲು ಸಾಧ್ಯವೆ? ಬೆಕ್ಕಿಗೂ ಯಜಮಾನಿಯಲ್ಲಿ ಪ್ರೀತಿಯಿತ್ತು. ಅದು ಬೇಕೆಂದು ಉಗುರನ್ನು ಹೊರಕ್ಕೆ ತೆಗೆದಿರಲಾರದು. ಆಕಳಿಸಿ ಮೈಮುರಿಯುವಾಗ ಉಗುರಿನ ಕೊಂಚ ಭಾಗ ತಾನಾಗಿ ಹೊರಗೆ ಕಾಣಿಸಿತ್ತು.

ಆದರೆ ...ಆ ಸ್ಪರ್ಶದ ಅನುಭವ !

ರಂಗಮ್ಮ ಹೆದರಿ ತಟ್ಟೆಯನ್ನು ಎತ್ತಿ ಹಾಕದಿದ್ದುದು ಊಟ ಮಾಡುತ್ತಿದ್ದವರ ಪುಣ್ಯ.

ಒಡತಿಯ ಅನಾದರ ಚೀಲಿಗೆ ಸಹಿಸಲಿಲ್ಲ. ಅದು ಮತ್ತೆ ಮತ್ತೆ ಬಾಯಲ್ಲಿ ಸದ್ದು ಹೊರಡಿಸುತ್ತ ತನ್ನ ಹಸುರು ಕಣ್ಣುಗಳಲ್ಲಿ ದೈನ್ಯತೆ ಸೂಸುತ್ತ ಅವರನ್ನು ದಿಟ್ಟಿಸಿತು.

ಪಾಪ-ರಂಗಮ್ಮ ತಾನೇ ಏನು ಮಾಡಬೇಕು? ಎರಡು ಕೈಗಳಿಗೂ ಬಿಡುವಿಲ್ಲ. ಅಲ್ಲದೆ ಎಲ್ಲರ ಎದುರಿಗೆ ಕೈಲಿದ್ದುದನ್ನು ಕೆಳಗಿಟ್ಟು ಅದನ್ನು ಮುದ್ದು ಮಾಡುವುದು ಸಾಧ್ಯವೇ ?

ಮುಜಗರಕ್ಕೆ ಇಷ್ಟೇ ಸಾಲದು ಎನ್ನುವಂತೆ "ಚೀಲಿ"ಯ ಉಗುರು

ಸೋಕಿದ ಕಡೆ ಉರಿ ಕಾಣಿಸಿ ರಂಗಮ್ಮನ ಸಹನ ಕಲಕಿತು.

"ಈ ಮುಂಡೇದನ್ನ ಹೊರಗೆ ಅಟ್ಟಿ ಬಾಗಿಲು ಹಾಕಿರೊ ಎಂದೆ ಒಬ್ಬರೂ ಕಿವಿಗೆ ಹಾಕಿಕೊಳ್ಳಲಿಲ್ಲ"

ನಾಟಕದಲ್ಲಿನ ಸ್ವಾಗತ ಭಾಷಣದಂತೆ ರಂಗನು ತಮ್ಮಲ್ಲೇ ಗೊಣಗಿಕೊಳ್ಳುತ್ತ ಕಾಲಿನಲ್ಲಿ "ಚೀಲಿ"ಯನ್ನು ತಳ್ಳಿದರು.

ಅವರು ಉದ್ದೇಶಿಸಿದುದಕ್ಕಿಂತ ಹೆಚ್ಚು ಕಸುವು ಕಾಲಿಗೆ ಬಂದಿ ಬಹುದು. ಬೆಕ್ಕು ಒಂದು ಮಾರು ದೂರ ಎಸೆದಂತಾಗಿ ಮುಂದುಗಡೆ ಕೂತಿದ್ದ ಪಂಡಿತರ ಎಲೆಯನ್ನು ಸವರಿಕೊಂಡು ಅಷ್ಟು ದೂರ ಹೋಗಿಬಿದ್ದುದು, ಮತ್ತೆ ಎದ್ದು ತಲೆ ಕೊಡವಿಕೊಂಡು ಮುಂಗಾಲನ್ನು ನಾಲಿಗೆಗೆ ಸವರಿ ಅದರಿಂದ, ಮುಖ ಒರೆಸಿಕೊಂಡು ಓಡಿಹೋಯ್ತು.

ಒಂದು ಕ್ಷಣದಲ್ಲಿ ಇಷ್ಟೆಲ್ಲ ನಡೆದುಹೋಗಿ, ಮರುಕ್ಷಣ ವಾತಾವರಣ ಗಂಭೀರವಾಗಿ ರುದ್ರಮೌನ ನೆಲೆಸಿತು.

ದೊಡ್ಡವರ ಎದುರು ಸಾಲಿನಲ್ಲಿ ಊಟಕ್ಕೆ ಕುಳಿತಿದ್ದ ಹುಡುಗರಿಗೆ ಸಂದರ್ಭದ ಗಭೀರತೆಯ ಅರಿವು ಆಗಿರಲಿಕ್ಕಿಲ್ಲ. ಒತ್ತಿಬಂದ ನಗುವನ್ನು ಹತ್ತಿಕ್ಕಲಾರದೆ ಜೋರಾಗಿ ನಕ್ಕುಬಿಟ್ಟರು.

ನಗುವನ್ನು ನಿಲ್ಲಿಸಲೆಂದು ನಾಗಪ್ಪ ಕಣ್ಣನ್ನು ದೊಡ್ಡದಾಗಿ ಅರಳಿಸಿ ಸನ್ನೆ ಮಾಡಿದರು.

ಊಹೂಂ ...ಅದರಿಂದ ಏನೂ ಉಪಯೋಗವಾಗಲಿಲ್ಲ. ಹುಡುಗರು ನಾಗಪ್ಪನ ಕಡೆ ನೋಡಲೇ ಇಲ್ಲ. ಕಣ್ಣನ್ನು ಕಿರಿದುಗೊಳಿಸಿ ನಗುತ್ತಿದ್ದವರು ಕೊನೆಗೆ ಸುಸ್ತಾಗಿ ಸುಮ್ಮನಾದರು.

ಅಲ್ಲಿಗೆ ಊಟದ ಸೊಗಸು ಮುಕ್ತಾಯವಾಯ್ತು. ಮುಂದೆ ಯಾರಿಗೂ ಊಟ ರುಚಿಸಲಿಲ್ಲ. ಪಂಡಿತರಂತೂ ಬೆಕ್ಕಿನ ಮೈಸೋಕಿದ ಎಲೆಗೆ ಮತ್ತೆ ಕೈ ಹಾಕಲೇ ಇಲ್ಲ ಲೋಟಕ್ಕೆ ಒಂದು ಸೌಟು ಮಜ್ಜಿಗೆ ಹಾಕಿಸಿಕೊಂಡು ಕುಡಿದು ಕೈ ತೊಳೆಯಲು ಎದ್ದರು.

ನಾಗಪ್ಪನ ಮುಖ ಕಪ್ಪಿಟ್ಟಿತು. ಸಂಸಾರದಲ್ಲಿ ಸಣ್ಣಪುಟ್ಟ ಸೋಲುಗಳನ್ನು ಅಪ್ಪಿದ್ದರೂ, ಇಂಥ ಅವಮಾನ ಹಿಂದೆ ಎಂದೂ ಆಗಿರಲಿಲ್ಲ ಈ ದಿನದ ಸತ್ಕಾರಕ್ಕಾಗಿ ಇದ್ದ ಸ್ವಲ್ಪ ಅವಧಿಯಲ್ಲೇ ಎಷ್ಟು ಸಿದ್ಧಮಾಡಿದ್ದರು

ಆತ! ಎಲ್ಲವೂ ಒಂದು ನಿಮಿಷದಲ್ಲಿ ಬಯಲಾಗಿ, ಅವರ ಶ್ರಮವೆಲ್ಲ ನೀರಿನ ಹೋಮ ಮಾಡಿದಂತೆ ಆಗಿತ್ತು.

ಇದೇಕೆ ಹೀಗಾಯ್ತು ? ಈ ಉತ್ಸಾಹಭಂಗ ಯಾವ ಪಾಪದ ಫಲ ನಡೆದು ಹೋದ ಈ ಅಪ್ರಿಯ ಘಟನೆಗಾಗಿ ಯಾರಿಗೆ ತಪ್ಪು ಹೊರಿಸಬಹುದ ಆ ಹುಡುಗಿಯ ಅದೃಷ್ಟ ಹೇಗಿದೆಯೋ ?

ನಾಗಪ್ಪನ ತಲೆ ಕಾದು ಕೆಂಡದಂತಾಯ್ತು.

ಮನದ ಉಮ್ಮಳಕ್ಕೆ ನಗುವಿನ ತೆರೆಹಾಕಿ ನಾಗಪ್ಪ ಎಲ್ಲರನ್ನೂ ಮುಂ ಗಡೆಯ ರೂಮಿಗೆ ಬರುವಂತೆ ಕರೆದರು

ಅಲ್ಲಿ ಹಾಸಿದ್ದ ಜಮಖಾನೆಯ ಮೇಲೆ ತಟ್ಟೆಗಳಲ್ಲಿ ಹಣ್ಣುಗಳು, ಎ ಅಡಿಕೆ ಇಟ್ಟಿದ್ದರು. ಊದುಬತ್ತಿಯ ನವಿರಾದ ವಾಸನೆ ಆವರಣವನ್ನು ಹ ಗೊಳಿಸಿತ್ತು

ನರಸಿಂಹಯ್ಯ ಅದೊಂದನ್ನೂ ಗಮನಿಸಲಿಲ್ಲ. ರೂಮಿಗೆ ಬಂದವ ಗೂಟದಲ್ಲಿದ್ದ ಕೋಟನ್ನೂ ಪೇಟವನ್ನೂ ಧರಿಸಿಕೊಂಡು ಪಂಡಿತರ ಕಡೆ ತಿರು

"ಹೊರಡೋಣವೇ ಇನ್ನು ?"–ಎಂದರು.

ಭಾರತಿ ಮತ್ತೊಮ್ಮೆ ಕಣ್ಣಿಗೆ ಬೀಳುವಳೇನೋ ಎಂಬ ನಿರೀಕ್ಷೆಯಿಂ ಒಳ ಬಾಗಿಲನ್ನು ನಿಟ್ಟಿಸುತ್ತಿಗ್ದ ವೇಣು ತಂದೆಯ ದನಿ ಕೇಳಿ ತಟ್ಟನೆ ಎದ ನಿಂತ.

ನಾಗಪ್ಪ ತಟ್ಟೆಯಲ್ಲಿದ್ದ ವೀಳ್ಯವನ್ನು ಅವರ ಮುಂದೆ ಹಿಡಿದು "ಯಜಮಾನರೇ ನಮ್ಮಿಂದ ಏನಾದ್ರೂ ತಪ್ಪಾಗಿದ್ದರೆ ಮನಸ್ಸಿಗೆ ತೆಗೆದುಕೊಳ್ಳ ಕ್ಷಮಿಸಬೇಕು"–ಎಂದು ಕೇಳಿಕೊಂಡರು.

ನರಸಿಂಹಯ್ಯ ಒಂದು ಚೂರು ಅಡಿಕೆ ಬಾಯಿಗೆ ಎಸೆದುಕೊಂಡು "ನಮಸ್ಕಾರ ಬರ್ತೀವಿ. ತಮಗೆ ಬಹಳ ತೊಂದರೆಯಾಯ್ತು" ಎನ್ನುತ್ತ ಕಾ ನೆಡೆಗೆ ಧಾವಿಸಿದರು

ಇತ್ತ ಪಂಡಿತರು ವೇಣುವನ್ನು ಒಂದು ಪಕ್ಕಕ್ಕೆ ಕರೆದು-"ಏನಯ್ಯಾ ಭಾರತಿ ನಿನಗೆ ಒಪ್ಪಿಗೆಯಾದಳೆ ?"ಎಂದು ಕೇಳಿದರು.

"ಇನ್ನೆಲ್ಲಿಯ ಭಾರತಿ ? ನನ್ನ ಒಪ್ಪಿಗೆಯಿಂದ ಏನು ಉಪಯೋಗ ? ವೇಣು ನಿಟ್ಟುಸಿರುಬಿಟ್ಟ.

"ಇರಲಿ ಹೇಳು."

"ನಾನೇನೋ ಹುಡುಗೀನ ಮೆಚ್ಚಿದೆ. ಆದರೆ ಅಪ್ಪ ... ? ಅವರಾಗಲೇ ಒಂದೂ ಮಾತಾಡದೆ ಕಾರಿನಲ್ಲಿ ಮುಂಡಿಸಿದಾರೆ."

"ನಿನ್ನ ಒಪ್ಪಿಗೆ ಮುಖ್ಯ. ಉಳಿದುದನ್ನು ನನಗೆ ಬಿಡು. ನರಸಿಂಹನ ದೊಡ್ಡತನದಲ್ಲಿ ನನಗೆ ಪೂರ್ಣ ವಿಶ್ವಾಸವಿದೆ "

ಪಂಡಿತರು ಜೋಲುಮುಖ ಹಾಕಿಕೊಂಡು ನಿಂತಿದ್ದ ನಾಗಪ್ಪನ ಬೆನ್ನು ತಟ್ಟಿ "ಹೋಗಿ ಬರೋಣವೇ ? ಏನೂ ಯೋಚನೆ ಬೇಡ, ದೇವರಿದಾನೆ. ನರಸಿಂಹಯ್ಯ ಕಾಗದ ಹಾಕ್ತಾರೆ" ಎಂದು ಹೇಳಿ ವೇಣುವಿನೊಡನೆ ಕಾರು ಹತ್ತಿದ್ದರು

* * *

ಕಾರು ಊರಿನತ್ತ ಸಾಗಿದಂತೆ ತಣ್ಣಗೆ ಗಾಳಿ ಬೀಸಿ ಕಾದಿದ್ದ ತಲೆಗಳು ತಂಪಾದರೂ ದಾರಿಯಲ್ಲಿ ಯಾರೂ ಮಾತಾಡಲಿಲ್ಲ. ಬಾಯಿಬಿಟ್ಟರೆ ಅಂಕೆ ತಪ್ಪಿ ಯಾವ ಮಾತು ಹೊರಗೆ ಬರುವುದೋ ಎಂದು ಹೆದರಿದಂತಿತ್ತು.

ಮನೆಗೆ ಬಂದಕೂಡಲೇ ವೇಣು ಸರಸರನೆ ಒಳಗೆ ನಡೆದ. ನರಸಿಂಹಯ್ಯ ಆವರಣದಲ್ಲಿದ್ದ ಕಲ್ಲುಹಾಸಿನ ಮೇಲೆ ಉಸ್ಸೆಂದು ಕುಳಿತರು.

"ಜನಾರ್ದನ ಆ ಅನಿಷ್ಟ ಪ್ರಾಣಿ ಎದುರಿಗೆ ಬಂದರೇ ಒಳ್ಳೆಯ ಕೆಲಸಕ್ಕೆ ಹೊರಟೋರು ಶಕುನ ಆಗಲಿಲ್ಲ ಅಂತಾರೆ. ಅಂಥದರಲ್ಲಿ ಅದು ನಮ್ಮ ಎಲೆ ದಾಟಕೊಂಡು ಹಾರಿತಲ್ಲ ? ಎಂತಹ ಆಭಾಸ !" ಎಂದರು.

"ಒಂದೊಂದು ಸಲ ನಮ್ಮ ಕೈಮೀರಿ ಅಚಾತುರ್ಯ ನಡೆದುಹೋಗುತ್ತೆ. ಮನೇಲಿ ಸಾಕಿರುವ ಪ್ರಾಣಿ ಅದು. ಅಲ್ಲದೆ ಅದು ನಮ್ಮ ದಾರೀಗೆ ಅಡ್ಡ ಬರಲಿಲ್ಲ" ಪಂಡಿತರು ಗಂಭೀರವಾಗಿ ಹೇಳಿದರು.

"ಹಾಗೋ ನಿನಗಾಗಿ ಅದನ್ನೂ ಒಪ್ಪಿಕೊಳ್ಳೋಣ. ಆದರೆ ನೀನೇ ಹೇಳಿದ ಹಾಗೆ ವೇಣು ಬಹಳ ಮೆದುಗ. ಆ ಹುಡುಗಿ ತಾಯಿಯಂತಾದರೆ ಅವನ ಗತಿ ಏನು ? ಈಗ ನೆನಸಿಕೊಂಡರೂ ಮೈ ಜುಂ ಎನ್ನುತ್ತೆ. ತಾಯಿಯಂತೆ ಮಗಳು ಎಂತ ಗಾದೆಯೇ ಇದೆ."

"ಅದು ನನಗೂ ಗೊತ್ತು. ಆದರೆ....ಭಾರತಿ ರಂಗಮ್ಮನ ಮಗಳಲ್ಲ !"

"ಆಂ....ಏನು ಹಾಗೆಂದರೆ ?"

"ಅವಳು ಮಲತಾಯಿ. ಆಕೆಯ ಹಿಡಿತದಿಂದ ಆ ಹುಡುಗಿನ ಪಾರು ಮಾಡಿದರೆ ದೇವರು ಮೆಚ್ಚುವ ಕೆಲಸ ಅದು. ವೇಣು ಅವಳನ್ನು ಮೆಚ್ಚಿದಾನೆ."

"ಅದೇನೋ ಸರಿಹೋಯ್ತು. ಹುಡುಗಿ ಕಣ್ಣು ಮೂಗು ನೇರವಾಗಿ ಲಕ್ಷಣವಾಗಿದಾಳೆ. ಪ್ರಾಯದ ಹುಡುಗ ಮೆಚ್ಚಿಕೊಂಡ. ಆದರೆ....ಏನೆಂದರೂ ಆ ತಾಯೀನ ನೆನಸಿಕೊಂಡರೆ ..."

"ನಾನು ಹೇಳಿದೆನಲ್ಲ. ಆಗಲೇ. ಇರುವ ಸ್ಥಿತಿ ಇದು. ಹುಡುಗಿ ತೀರಾ ಮೆದುಗಿ. ನಾನು ಆಗಾಗ ಅವರ ಮನೆಗೆ ಹೋಗೋದುಂಟು. ವಿಷಯವೆಲ್ಲ ಗೊತ್ತು. ರಂಗಮ್ಮನ ದೊಡ್ಡ ಗಂಟಲು ಎಲ್ಲರಿಗೂ ಗೊತ್ತಿದೆ. ಎಲ್ಲಕ್ಕಿಂತ ಆಶ್ಚರ್ಯದ ಸಂಗತಿ ಎಂದರೆ. . ಆ ಬೆಕ್ಕು ಹಾರಿದಾಗ ನೀನು ತಟ್ಟನೆ ಏನು ಹೇಳುವೆಯೋ ಎಂದು ನನಗೆ ಹೆದರಿಕೆ ಆಗಿತ್ತು. ತೋರಿದ್ದನ್ನು ಆಡದೆ ಉಳಿಸಿಕೊಳ್ಳುವವನಲ್ಲ ನೀನು."

ನರಸಿಂಹಯ್ಯ ನಕ್ಕು ಹೇಳಿದರು-

"ನಿನ್ನ ಮಾತು ನಿಜ. ಹಾಗೆ ತೋರಿದ್ದನ್ನ ಆಡಿಬಿಡುವುದು ನನ್ನ ಜಾಯಮಾನಕ್ಕೇ ಬಂದುದು. ಆಡಿಯೂ ಬಿಡ್ತಿದ್ದೆ. ಆದರೆ ಪಾಪ.... ಆ ನಾಗಪ್ಪನವರ ಮುಖ ನನ್ನ ನಾಲಿಗೆಗೆ ಕಡಿವಾಣ ಹಾಕಿತು. ಇನ್ನು ಅಲ್ಲಿದ್ದರೆ ಏನಾದರೂ ಮಾತು ಬರಬಹುದೆಂದು ತಟ್ಟನೆ ಹೊರಟು ಬಿಟ್ಟೆ ಪಾಪ....ಪಾಪ ..."

"ಅಂದರೇ . ?"

ನರಸಿಂಹಯ್ಯ ತಮ್ಮ ಬಕ್ಕತಲೆಯನ್ನು ನಿಧಾನವಾಗಿ ಸವರಿಕೊಂಡರು. ಹಣೆಯ ಮೇಲಿನ ನೆರಿ ಮರೆಯಾಗಿ ನಗುವಿಗೆ ಜಾಗಮಾಡಿಕೊಟ್ಟಿತು.

"ಅಂದರೇ ...ಹುಡುಗೀನ ಒಪ್ಪಿಕೊಂಡಿದೇವೆ. ಅವರಿಗೆ ತಿಳಿಸಿಬಿಡು."

# ಅವಳ ಪ್ರೇಮ

ನೀಳವಾದ ಎರಡು ಜಡೆಗಳಲ್ಲಿ ಒಂದು ಭುಜದ ಮೇಲಿಂದ ಇಳಿದು ಬಂದು ಎದೆಯ ಉಬ್ಬಿನ ಮೇಲೆ ಹರಿದು, ಬಳುಕಿ ನಿಂತಿತ್ತು. ತನಗೆ ಆ ಸೌಭಾಗ್ಯ ಇಲ್ಲವಲ್ಲ ಎಂದೋ ಏನೋ ಇನ್ನೊಂದು ಜಡೆ ಮುನಿದು ಬೆನ್ನಿನ ಆಶ್ರಯ ಪಡೆದು ಕಣ್ಣಿಗೆ ಮರೆಯಾಗಿತ್ತು.

ಜಡೆಯಿಂದ ತೂಗುವ ಕನಕಾಂಬರದ ದಂಡೆ ಕೆಂಪು ಕೆನ್ನೆಗೆ ಮತ್ತಷ್ಟು ಕೆಂಪು ಬಳಿಯಲು ಸಾಹಸ ಪಡುತ್ತಿತ್ತು.

ಹಣೆಯ ರಂಗಸ್ಥಳದ ಮೇಲೆ ಮುಂಗುರುಳು ನರ್ತನದ ಅಭ್ಯಾಸ ನಡೆಸಿತ್ತು. ದೊಡ್ಡದಾದ ಕಣ್ಣುಗಳು ಮತ್ತಷ್ಟು ದೊಡ್ಡದಾಗಿ ಕಾಣುವಂತೆ ಕಪ್ಪಿನ ಗೆರೆ ಎಳೆದಳು ಮನೋರಮ. ಕಣ್ಣಿಗೆ ಹಚ್ಚಿದ ಕಾಡಿಗೆ ಕೈಬೆರಳಿಗೆ ಅಂಟಿತ್ತು. ಅದನ್ನು ರೆಪ್ಪೆಯ ಕೂದಲಿಗೆ ಸವರಿ ಪಟಪಟನೆ ಬಡಿದು ಅದರ ಪರಿಣಾಮವನ್ನು ನೋಡಿ ಹಿಗ್ಗಿನಿಂದ ನಗು ಮುಖದ ತುಂಬ ಅರಳಿತು. ಪುಟ್ಟ ಬಾಯಿ ವಕ್ರವಾಗಿ, ಅದನ್ನು ದಿಟ್ಟಿಸಿದ ಚೆಲುವೆ ನಕ್ಕಳು.

ಎದುರಿನ ಕನ್ನಡಿ ಹೆಮ್ಮೆಯಿಂದ ಆ ಚೆಲುವನ್ನು ಪ್ರತಿಬಿಂಬಿಸಿತು.

ಹೆಚ್ಚು ಎನಿಸಿದ ಪೌಡರನ್ನು ಹತ್ತಿಯಿಂದ ಒರಸಿ ಕುಂಕುಮದ ತಿಲಕ ಇಟ್ಟಳು. ಕತ್ತನ್ನು ಎಡಕ್ಕೂ ಬಲಕ್ಕೂ ವಾಲಿಸಿ ಮುಖದ ಅಂದವನ್ನು ತೂಗಿ ನೋಡಿದಳು.

"ಈ ಗುಲಾಬಿ ಸೀರೆಯಲ್ಲಿ ನೀನು ರತಿಯಂತೆ ಕಾಣಿಸುವೆ"–ಸತೀಶ ಹಿಂದೊಮ್ಮೆ ಹೇಳಿದ್ದ.

ಇಂದೂ ಅದೇ ಗುಲಾಬಿ ಸೀರೆ ಉಟ್ಟು ಕರಿಯ ಸ್ಯಾಟಿನ್ ರವಿಕೆ ಹಾಕಿಕೊಂಡಿದ್ದಳು. ಕಪ್ಪು ಹಿನ್ನೆಲೆಯಲ್ಲಿ ಎರಡು ಎಳೆಯ ಮುತ್ತಿನ ಸರ ಹೆಚ್ಚು ಸ್ಫುಟವಾಗಿ ಕಾಣಿಸುತ್ತಿತ್ತು.

"ಎರಡು ದಶಕವನ್ನು ಕಳೆದ ಸವಿನೆನಪಿಗೆ!"

ಅವಳ ಇಪ್ಪತ್ತನೆಯ ಹುಟ್ಟುಹಬ್ಬದಂದು ಸತೀಶ ಅವಳಿಗೆ ಕೊಟ್ಟ ಉಡುಗೆರೆ ಅದು.

ಎಷ್ಟು ದಿನವಾಯ್ತು ? ಆಗಿದ್ದೀತು ಎರಡು ತಿಂಗಳು.

ಅಂದೂ ಹೀಗೇ ಕನ್ನಡಿಯ ಮುಂದೆ ನಿಂತಿದ್ದಾಗ ಹಿಂದಿನಿಂದ ಬಂದು ಕೊರಳಿಗೆ ಸರ ತೊಡಿಸಿದ್ದ ಸತೀಶ.

ಆ ನೆನಪಿನಿಂದ ಕೆನ್ನೆ ರಂಗೇರಿತು.

ತುಂಟು ಹುಡುಗ ! ತನ್ನನ್ನು ರೇಗಿಸುವುದೆಂದರೆ ಅದೆಷ್ಟು ಆಸೆಯೋ? ರೇಗಿಸಿ ಅಳಿಸಿ ಮತ್ತೆ ನಗಿಸುವ ಆಟ

ಈ ಆಟ ಕೊನೆಯಿಲ್ಲದ ಆಟ. ಜೀವನದ ಉದ್ದಕ್ಕೂ ಹೀಗೆ ಆಟವಾಡುತ್ತ ದಾರಿ ಸವೆಯುವಂತಿದ್ದರೆ ?

ಇದ್ದಕ್ಕಿದಂತೆ ಮನೋರಮಳ ಹುಬ್ಬು ಗಂಟಿಕ್ಕಿತು.

ಯಾವ ಬೇಸರವೋ...... ?

ಏನು ಮಾಡ್ತಿದಾರೆ ಇವರು ?ಈಗಲಾದರೂ ಬಂದು ತಾನು ಸಿಂಗರಿಸಿಕೊಂಡಿರೋದನ್ನ ನೋಡಬಾರದೆ ?

"ಏಕೆ ಇಷ್ಟು ಶೃಂಗಾರ ?ಯಾವ ದಿಗ್ವಿಜಯಕ್ಕೆ ಹೊರಟದಿ ?"

ಎಂದುಕೇಳಿದರೆ ... ಆಗಲಾದ್ರೂ.

ಥೂ... ಆಗಲೂ ನಾನಾಗಿ ಹೇಳಲ್ಲ. ಅವರೇ ಊಹಿಸಿ ನೆನಪು ಮಾಡಿಕೊಳ್ಳಲಿ. ಈ ಗಂಡಸರೇ ಅಷ್ಟು, ಸ್ವಾರ್ಥಿಗಳು.

ನೋಡಿದ ಕೊಡಲೇ ಸಿಹಿತಿಂಡಿಯನ್ನು ಕಂಡ ಮಗುವಿನಂತೆ ಓಡೋಡಿ ಬರ್‍ತಾರೆ. ಯಾರಾದರೂ ಇರುವರೇ ಎಂದೂ ಗಮನಿಸುವುದಿಲ್ಲ.

ಅದೊಂದು ದಿವಸ ಕರೆಗಂಟೆ ಕೇಳಿ ಬಾಗಿಲು ತೆಗೆಯಲು ಹೋದಾಗ ಹೊಸಲಿನ ಬಳಿಯೇ ನಿಂತು ಮುದ್ದಿಸಲಿಲ್ಲವೇ ?

"ಛೆ... ಛೆ..." ಎಂದಿತು ನಾಚಿಕೆ.

ಅಂದರೆ ಅವಳಿಗೆ ಮುದ್ದು ಬೇಡವೆಂದಲ್ಲ. ಅದಕ್ಕೆ ಹೊತ್ತು ವೇಳೆ ಇಲ್ಲವೇ ?

"ಕರೆಗಂಟೆ ಕೇಳಿಸಿಕೊಂಡು ಅಮ್ಮನೂ ಬಾಗಿಲು ತೆಗೆಯಲೆಂದು ಹಿಂದಿನಿಂದ ಬಂದುಬಿಟ್ಟರೆ ಏನು ಗತಿ. ನಿಮಗೆ ಏನೂ ತಿಳಿಯಲ್ಲ."

ಮುಖ ಕೆಂಪಗೆ ಮಾಡಿಕೊಂಡು ರೇಗಿದ್ದಳು ಮನೋರಮ.

"ಬರಲೇಳು. ಮಕ್ಕಳು ಆಟಾ ಆಡ್ತಿದಾರೆ ಅಂದುಕೋತಾರೆ!"

ಅವಳಿಗಿಂತ ಒಂದು ಮೊಳ ಎತ್ತರವಾಗಿದ್ದ ಸತೀಶ ತಲೆ ಬಗ್ಗಿಸಿದ್ದಂತೆ ಉತ್ತರಕೊಟ್ಟ.

ಅವನನ್ನು ಆ ನಿಲುವಿನಲ್ಲಿ ಕಂಡಾಗ ಮನೋರಮಳಿಗೆ ಬಹಳ ಮೆಚ್ಚಿಗೆ. ಕೋಪ ಹಾರಿ ಹೋಗುತ್ತಿತ್ತು, ತಲೆ ತಪ್ಪಿಸಿಕೊಂಡು.

ನಿಜವಾಗಿ ಏನು ಮಾಡ್ತಿರಬಹುದು? ಅಥವಾ ಹೇಳದೆ ಹಾಗೇ ಹೊರಗೆ ಹೊರಟು ಹೋದರೋ?

ಇಲ್ಲ ಇಲ್ಲ. ಅದೆಂದಿಗೂ ಸಾಧ್ಯವಿಲ್ಲ.

"ಸತೀಶ್ " ಮನೋರಮ ರಾಗವಾಗಿ ಕೂಗಿದಳು. ಇನ್ನು ಅವಳಿಂದ ಸುಮ್ಮನಿರುವುದು ಆಗದಾಯ್ತು.

ಅವಳು ದಿನದಲ್ಲಿ ಎಷ್ಟೋ ಸಲ ಹಾಗೇ ಕರೆಯುವಳು. ಹಾಗೆ ಕರೆದಾಗಲೆಲ್ಲ ಮಾವಿನಮರದಲ್ಲಿ ಅವಿತಿದ್ದ ಕೋಗಿಲೆ ಕೆಳಗೆ ಬಂದು ಕೂತಿದೆಯೇನೋ ಎನಿಸುವುದು ಸತೀಶನಿಗೆ:

"ಗಂಡನನ್ನು ಹೆಸರು ಹಿಡಿದು ಕೂಗಬಾರದು. ನಮ್ಮ ಕಾಲದಲ್ಲಿ ಎಂತಹ ಸಮಯದಲ್ಲೂ ಹೆಸರು ಹೇಳ್ತಿರಲಿಲ್ಲ ಹಾಗೆ ಹೇಳಲೇಬೇಕಾಗಿ ಬಂದರೆ ಒಂದ ಕಾಗದದ ಮೇಲೆ ಬರೆದು ತೋರಿಸುತ್ತಿದ್ದೆ. ನುಡಿಗೆ ನೂರು ಸಲ ಮಕ್ಕಳನ್ನು ಕರೆಯೋಹಾಗೆ ಕೂಗ್ತಿಯಲ್ಲೇ"

–ಎಂದು ವೆಂಕಮ್ಮ ಹೇಳಿದರೂ, ಮಗಳ ಕೋಕಿಲ ಕಂಠ ಕೇಳಿದಾಗ ಅವರ ತಪ್ಪು ಒಪ್ಪು ಲೆಕ್ಕಾಚಾರ ಎತ್ತಲೋ?

ತಾಯಿಯ ಮಾತು ನೆನಪಿಗೆ ಬಂದಾಗ ಮನೋರಮ–

"ಡಾರ್ಲಿಂಗ್" ಎಂದು ಅಷ್ಟೇ ರಾಗವಾಗಿ ಕರೆದರೂ, ಅವನು ಎದುರಿಗೆ ಕಾಣಿಸದಿದ್ದಾಗ ಅವನ ಹೆಸರು ತಾನೇ ತಾನಾಗಿ ನಾಲಿಗೆಯ ಮೇಲೆ ನಲಿಯುವುದು.

ಸತೀಶ ಬರಲಿಲ್ಲ. ಅವನಿಗೆ ಆ ಕರೆ ತಲುಪಲಿಲ್ಲವೇನೋ?

ಮನೋರಮ ಎಂದೂ ತಾಳ್ಮೆಗೆ ಹೆಸರಾದವಳಲ್ಲ. ಏನೋ ಆಸೆಯಿಂದ ಯಾವುದೋ ನಿರೀಕ್ಷೆಯಿಂದ, ಅಲಂಕರಿಸಿಕೊಂಡು ಎಷ್ಟು ಹೊತ್ತು

ಕಾಯುವುದು ?

ಮನೋರಮ ಸರಸರನೆ ಮೆಟ್ಟಿಲುಗಳನ್ನು ಇಳಿದು ಬಂದಳು.

ವೆಂಕಮ್ಮ ಕಾಲು ನೀಡಿಕೊಂಡು ಮಂಡಿಗೆ ತೈಲ ಹಚ್ಚಿ ನೀವುತ್ತಿದ್ದರು. ಮನೋರಮನನ್ನು ಬೆಳೆಸಿದಷ್ಟೇ ಶ್ರದ್ಧೆಯಿಂದ ಆಕೆ ತಮ್ಮ ವಾಯುನೋವನ್ನೂ ಕಾಪಾಡಿಕೊಂಡು ಬಂದಿದ್ದರು.

ಆ ಮಂಡಿಗೆ ಎಷ್ಟು ತೈಲವೋ ? ಎಷ್ಟು ಬಿಸಿ ನೀರು ಸುರಿದಿದ್ದರೋ ? ಅವರಿಗೇ ಗೊತ್ತು !

"ಎಲ್ಲಮ್ಮ ಇವರು ?" ಕೋಕಿಲ ಕಂಠ ಕೋಮಲತೆಯನ್ನು ಕಳೆದುಕೊಂಡು ಕರ್ಕಶವಾಗಿತ್ತು.

"ಯಾರು ? .. ಸತೀಶನೇ ?"

"ಇನ್ಯಾರು ..ನನಗೆ ಇರೋದು ಒಬ್ಬರೇ...."

ನಾಲಿಗೆ ಕಚ್ಚಿ ಮಾತು ತಡೆದಳು ಮನೋರಮ.

"ಇದೀಗ ಹೊರಗೆ ಹೋದ. ನಿನಗೆ ಹೇಳಲಿಲ್ಲವೆ ?"

"ಹೇಳಿದ್ದರೆ ನಿನ್ನ ಯಾಕೆ ಕೇಳ್ತಿದ್ದೆ ? ಕಾಫಿ ಕುಡಿದು ಕೆಳಗೆ ಬಂದೋರು ಪುನಃ ಬರಲಿಲ್ಲ. ನಾನೂ ಕಾದೂ ಕಾದೂ "

ವೆಂಕಮ್ಮ ಕಣ್ಣು ಅರಳಿಸಿ ಮಗಳ ಅಲಂಕಾರವನ್ನು ನೋಡಿದರು. ಎಲ್ಲಿಗೋ ಹೋಗುವ ಎಣಿಕೆ ಇತ್ತೇನೋ ? ಆದರೆ ಅದೇಕೆ ಸತೀಶ ಅವಳಿಗೆ ಹೇಳದೆ ಹೋದ.

"ಅಮ್ಮಾ .. ಬಾಗಿಲು ಹಾಕಿಕೊಳ್ಳಿ" ಎಂದು ಹೇಳಿದ.

"ಹೂಂ.... ಹೇಳದೆ ಏನು ಮಾಡ್ತಾರೆ ? ನಾನೂ ಜೊತೆಗೆ ಬರ್‍ತೀ ಎಂದು ಹೆದರಿಕೊಂಡರೇನೋ ?"

"ಎಲ್ಲಾದರೂ ಹೋಗಬೇಕಿತ್ತೆ ಮನೂ ?"

–ತಾಯಿ ಅನುಕಂಪದಿಂದಲೇ ಕೇಳಿದರು.

"ಸೀರೆ ಕೊಳ್ಳಬೇಕಿತ್ತು. ಮಾರ್ಕೆಟ್ ಕಡೆ ಹೋಗೋಣ ಎಂದಿದ್ದರು ಮೊನ್ನೆ."

"ಬಟ್ಟೆಗೆ ಅದೆಷ್ಟು ದುಡ್ಡು ಹಾಕ್ತಿಯೋ ಮನೂ ? ಎರಡು ಪೆಟ್ಟಿಗೆ ಹಿಡಿಸದಷ್ಟು ಸೀರೆ ಇದೆ. ಮತ್ತೆ ಸೀರೆ ಯಾಕೆ ? ಅವನೂ ಹಾಗೇ ನಿನ

ಕುಣಿತಕ್ಕೆ ತಾಳ ಹಾಕ್ತಾನೆ"-ಆಕೆಗೆ ಸ್ವಲ್ಪ ಬೇಸರ, ಪ್ರೀತಿಯ ಮಗಳಾದರೆ ಏನು? ಯಾವುದಕ್ಕೂ ಮಿತಿ ಇರಬೇಕು.

"ನಮ್ಮ ಮದುವೆ ಆಗಿ ಇವತ್ತಿಗೆ ಎರಡು ವರ್ಷ ಆಯ್ತು. ನಿನಗೆ ಗೊತ್ತಿಲ್ಲವೇ?"

"ಗೊತ್ತಿಲ್ಲದೆ ಏನು? ಎಲ್ಲೋ ಹೋಗಿದಾನೆ. ಬರ್ತಾನೆ ಬಿಡು."

ಎಷ್ಟು ಹಗುರವಾಗಿ ಹೇಳ್ತಾಳೆ ಅಮ್ಮ? ತಾನು ಅವರನ್ನು ಎಷ್ಟೊಂದು ಪ್ರೀತಿಸುತ್ತೇನೆ ಅನ್ನೋದು ಅವಳಿಗೇನು ಗೊತ್ತು?

"ನಾನು ಅವರನ್ನ ತುಂಬಾ ಪ್ರೀತಿಸ್ತೀನಿ ಅಮ್ಮ. ಅವರು ಸ್ವಲ್ಪ ಉದಾಸೀನ ಮಾಡಿದರೂ ಸಹಿಸಲ್ಲ."

ಕಣ್ಣಲ್ಲಿ ನೀರು ತುಂಬಿತು. ಮಳೆ ಹನಿಯ ನಡುವೆ ಬಿಸಿಲು ತೂರಿ ಬಂದಂತೆ ಒಂದು ಸಣ್ಣ ಆಸೆ ನುಸುಳಿತು.

ನನಗೆ ಏನಾದರೂ ಉಡುಗೊರೆ ತರಲು ಹೋಗಿದ್ದಾರು.

ಯೋಚನೆ ಹಿತವಾಗಿತ್ತು. ಕಣ್ಣೀರು ಮರೆಯಾಗಿ ಮತ್ತೆ ನಗು ವ್ಯಾಪಿಸಿತು.

ಮನೋರಮ ಸುಪ್ರೀತಳಾಗಿ ಒಂದು ಕಾದಂಬರಿ ಹಿಡಿದುಕೊಂಡು ಸತೀಶನಿಗೆ ಕಾಯುತ್ತ ಕುಳಿತಳು

"ಮನೂ ಗಂಡನ್ನ ಅದೆಷ್ಟು ಪ್ರೀತಿಸ್ತಾಳೆ"-ಮಗಳು ಹೇಳಿದ ಮಾತನ್ನೇ ನೆನೆಯುತ್ತ ತಾಯಿಯ ಅಂತಃಕರಣ ಹಿಗ್ಗಿತು. ಮಗಳನ್ನು ಮೆಲ್ಲಗೆ ಕೂಗಿ ಅವಳು ಓದಿನಲ್ಲಿ ಮುಳುಗಿ ಉತ್ತರ ಕೊಡದಿದ್ದಾಗ ಆಕೆ ಮತ್ತೆ ಮಂಡಿಯ ಕಡೆ ಗಮನ ಹರಿಸಿದರು.

* * *

"ಕಾಲುನೋವು ಹೇಗಿದೆ ಅಜ್ಜಿ?"

ಒಳಗೆ ಬರುತ್ತಲೇ ಕಲ್ಯಾಣಿ ವಿಚಾರಿಸಿದಳು

"ಓ . ನೀನಾ? ಬಾಮ್ಮ. ಕಾಲು ನೋವನ್ನ ಏನು ಕೇಳ್ತಿ? ನಾನು ಇರೋವರೆಗೂ ಅದೂ ಇರುತ್ತೆ"

ಇವರ ಮನೆಯ ಹಿಂಭಾಗದಲ್ಲಿದ್ದ ಒಂದು ಸಣ್ಣ ಕೋಣೆಯಲ್ಲಿ

ಕಲ್ಯಾಣಿ ಅವಳ ಗಂಡ ಸಂಸಾರ ಹೂಡಿದ್ದರು. ಒಂದು ಸಲ ಏನೋ ಖಾಯಿಲೆ ಆಗಿ ಮಾರುತಿಯ ಒಂದು ಕಾಲು ಎಳೆದುಕೊಂಡಿತ್ತು. ಅಂದಿನಿಂದ ಸಂಸಾರ ತೂಗಿಸುವ ಹೊಣೆ ಕಲ್ಯಾಯದೆ.

"ಏನು ಮಾಡ್ತಿದ್ದ ನಿನ್ನ ಮಾರುತಿರಾಯ ?"

"ಮಾಡೋದೇನು ಹೊಗೆಸೊಪ್ಪು ಅಗೀತಾ ಕೂತಿದ್ದರು. ಆ ಕೈಗೆ ಏನಾದರೂ ಕೆಲಸ ಬೇಕಲ್ಲ ? ಇಲ್ಲ ನಶ್ಯ ತೀಡೋದು "

ಕಲ್ಯಾಣಿ ನಗುತ್ತಲೇ ಆ ಮಾತು ಹೇಳಿದಳು. ಮಕ್ಕಳು ಕೆಟ್ಟ ಚೇಷ್ಟೆ ಮಾಡಿದಾಗ ಕೋಪ ಬಂದರೂ ಆ ಚೇಷ್ಟೆಯಲ್ಲೇ ಸಂತೋಷವನ್ನು ಅನುಭವಿಸುವ ತಾಯಿಯ ನುಡಿಯಂತಿತ್ತು.

"ಕಲ್ಯಾಣಿ ಹೇಗೂ ನಿಂತಿದ್ದಿ ಒಂದು ಕೆಲ್ಸ ಮಾಡ್ತೀಯ ?"

"ಹೇಳಿ, ಅದಕ್ಕೇನು ?"

"ಆ ಹತ್ತೀ ಬುಟ್ಟಿ ಕೊಡು. ಮಾತಾಡ್ತಾ ಒಂದಿಷ್ಟು ಹೂಬತ್ತಿ ಹೊಸೀತೀನಿ. ಹಾಗೇ ಒಂದು ಪಾತ್ರೇಲಿ ನೀರು ತಾ. ಕೈ ಜಿಡ್ಡಾಗಿದೆ."

"ಮನೋರಮಾ ಎಲ್ಲಿ ?"

"ಏನೋ ಓದ್ತಾ ಕೂತಿದಾಳೆ. ಹೊತ್ತು ಕಳೀಬೇಕಲ್ಲ !"

ಕಲ್ಯಾಣಿ ಮನೋರಮ ಸುಮಾರು ಒಂದೇ ವಯಸ್ಸಿನವರು. ಮನೋರಮಳಿಗೆ ತಾನು ದೊಡ್ಡ ಮನುಷ್ಯಳೆಂಬ ಹೆಮ್ಮೆ ಇರಲಿಲ್ಲ. ಕಲ್ಯಾಣಿ ಎದುರಿಗೆ ಸಿಕ್ಕಾಗಲೆಲ್ಲ ಬಾಯಿತುಂಬಾ ಮಾತಾಡಿಸುವಳು.

ಮನೆಯ ಹಿಂಭಾಗದಲ್ಲಿ ನಲ್ಲಿಕಟ್ಟೆಯ ಹತ್ತಿರ ದೊಡ್ಡ ಚಪ್ಪರ ಹಾಕಿ ಮಲ್ಲಿಗೆ, ಜಾಜಿ ಬಳ್ಳಿಗಳನ್ನು ಅದಕ್ಕೆ ಹಬ್ಬಿಸಿದ್ದರು. ಅದರ ಮಗ್ಗುಲಿಗೇ ಕನಕಾಂಬರದ ಗಿಡಗಳು.

ಮನೋರಮ ಹೂವೂ ಕೊಯ್ಯಲೆಂದು ಬಂದಾಗ ನಲ್ಲಿಯ ಹತ್ತಿರ ಕೆಲಸ ಮಾಡುವ ಕಲ್ಯಾಣಿ ಸಿಕ್ಕುವಳು

ಇಬ್ಬರೂ ಎಷ್ಟೋ ಹೊತ್ತು ಮಾತಿನಲ್ಲಿ ಕಳೆಯುವರು.

ಒಂದು ದಿನ ಹೀಗೆ ಹೂವು ಬಿಡಿಸುತ್ತಿದ್ದಾಗ ಕಲ್ಯಾಣಿಯ ಮನೆಯಿಂದ ಕೂಗಾಟ, ರಪರಪ ಹೊಡೆದ ಸದ್ದು ಕೇಳಿಸಿತು. ಮನೋರಮ ಬೆಚ್ಚಿದಳು

ಕಲ್ಯಾಣಿ ಓಡುತ್ತ ಹೊರಗೆ ಬಂದಳು. ಮಾರುತಿ ಸೌದೆ ತುಂಡು ಹಿಡಿದುಕೊಂಡು ಅವಳನ್ನು ಹೊಡೆಯಲು ಅಟ್ಟಿಸಿಕೊಂಡು ಬರುತ್ತಿದ್ದ. ಕೈಲಿ ಹೊಡೆದು ಸಾಕಾಗಿ ಸೌದೆ ತುಂಡನ್ನು ತಂದಂತಿತ್ತು.

ಕೆದರಿದ ಕೂದಲು, ಸಡಿಲವಾಗುತ್ತಿದ್ದ ಪಂಚೆ, ಮುಖದ ಮೇಲೆ ಕೋಪದ ಹುಚ್ಚು ಕಳೆ. ಓಡುತ್ತ ಬಂದವನು ಮನೋರಮೆಯನ್ನು ನೋಡಿ ಸೌದೆಯನ್ನು ಒಂದು ಪಕ್ಕಕ್ಕೆ ಎಸೆದು–

"ಕತ್ತೇ ಮುಂಡೆ ಮತ್ತೆ ಮನೆಗೆ ಬಾ ಮಾಡ್ತೀನಿ"

ಎಂದು ಜೋರಾಗಿ ಕಿರುಚಿದ.

ಬಾಗಿಲನ್ನು ಧಡಾರನೆ ಮುಚ್ಚಿ ಅಗುಣಿ ಹಾಕಿದ.

ಕಲ್ಯಾಣಿ ನಡುಗುತ್ತಿದ್ದಳು ಮಾರುತಿಯ ನಾಲ್ಕು ಬೆರಳುಗಳೂ ಅವಳ ಕೆನ್ನೆಯ ಮೇಲೆ ಅಚ್ಚು ಒತ್ತಿದ್ದುವು

"ಕಲ್ಯಾಣಿ ..ಏನಾಯ್ತು? ಮಾರುತಿಗೆ ಸಮುದ್ರ ದಾಟಿದ ಆವೇಶ ಬಂದಿದೆಯಲ್ಲ?"

–ಎಂದು ಅವಳ ಕೈಹಿಡಿದು ಸಂತೈಸಿದಳು, ಮನೋರಮ.

ಕಲ್ಯಾಣಿ ಕಣ್ಣೀರು ಹರಿಸಿದಳು. ಅವಳಿಗೆ ಈ ಹೊಡೆತ ಬೈಗಳು ಹೊಸವಲ್ಲ. ದಿನಾ ಇದ್ದದ್ದೆ. ಆದರೆ ಮನೋರಮಳ ಎದುರಿಗೆ ಈ ಪ್ರಸಂಗ ನಡೆದಾಗ ನಾಚಿಕೆಯಿಂದ ತಲೆ ತಗ್ಗಿಸುವಂತಾಗಿತ್ತು.

"ನಾನು ಸಾಯಬೇಕು ಮನೋರಮ. ಆಗ್ಲೇ ನನಗೆ ಮುಕ್ತಿ"

ಕಲ್ಯಾಣಿ ಅಳುವಿನ ನಡುವೆ ಬಿಕ್ಕಿದಳು.

ಮನೋರಮ ಅವಳನ್ನು ಹತ್ತಿರದ ಚಪ್ಪರದ ಬಳಿಗೆ ಕರೆದೊಯ್ದು, ತಾನೂ ಹತ್ತಿರ ಕುಳಿತು ಎಷ್ಟೋ ಸ್ವಾಂತನದ ಮಾತು ಹೇಳಿದಳು.

ಕಲ್ಯಾಣಿಗಿಂತ ಹೆಚ್ಚಾಗಿ ಅವಳೇ ನಡುಗುವಂತಿತ್ತು

ಅಬ್ಬ .ಆ ಪಶುವರ್ತನೆ, ಅವಾಚ್ಯ ಬೈಗಳು ಒಬ್ಬ ಗಂಡಸು ತನ್ನ ಹೆಂಡತಿಗೆ ಹೀಗೆ ಅನ್ನಬಹುದೆಂದು ಅವಳಿಂದ ಯೋಚಿಸಲೂ ಆಗದು.

ಬರಿಯ ಚಿನ್ನ, ರನ್ನ, ಡಾರ್ಲಿಂಗ್ ಇವುಗಳಲ್ಲೇ ಅವಳ ಪ್ರಪಂಚ ನಡೆದಿತ್ತು. ಹೆಂಡತೀನ ಹೊಡೆಯೋದು? ಅದರಲ್ಲೂ ತನ್ನನ್ನು ಕೂರಿಸಿ, ಹೊರಗೆ ದುಡಿದು ತಂದುಹಾಕಿ ಮಕ್ಕಳನ್ನು ಸಾಕುವಂತೆ ಸಾಕುತ್ತಿರುವ ಹೆಂಡತೀನ?

ಛೆ.. ಛೆ ಮನೋರಮಳಿಗೆ ತಲೆ ತಿರುಗಿತು. ಅವಳ ಆತಂಕ ನೋಡಿ ಕಲ್ಯಾಣಿಯೇ ಧೈರ್ಯ ಹೇಳಿದಳು

"ಈ ನೋಟ ಮರೆತು ಬಿಡಿ. ನಿಮ್ಮ ಕಣ್ಣಿಗೆ ಬೀಳಬಾರದಿತ್ತು. ಅಮ್ಮನಿಗೂ ಹೇಳ್ಬೇಡಿ. ಏನೋ ಬ್ರಾಹ್ಮಣಾಂತ ಒಂದು ದಾನ ದಕ್ಷಿಣೆ ಕೊಡ್ತಾರೆ. ಅವರ ಮನಸ್ಸು ರೋಸಿದರೆ ಅದೂ ನಿಂತು ಹೋಗುತ್ತೆ."

"ಮರೆಯೋದೇ .? ಎಂದಿಗೂ ಸಾಧ್ಯವಿಲ್ಲ. ಈ ಪಶೂನ ನೀನಾಗುವ ಹೊತ್ತಿಗೆ ಸಾಕ್ತಾ ಇದಿ... "

"ಸಾಕ್ದೆ ಏನು ಮಾಡ್ಲಿ ? ಅವನು ನನ್ನ ಗಂಡ "

"ಅದೇನೋ .ನಿನ್ನ ಮಾತೇ ಅರ್ಥವಾಗಿಲ್ಲ ಹಾಳಾಗಿ ಹೋಗ್ಲಿ. ಈಗ ನನ್ನ ಜೊತೆ ಬಂದು ಹಾಯಾಗಿ ನಮ್ಮನೇಲಿ ಮಲಗಿಬಿಡು ಅವನು ಬಂದು 'ತಪ್ಪಾಯ್ತು' ಎಂದು ಕ್ಷಮೆ ಕೇಳುವವರೆಗೆ ಹೋಗ್ಬೇಡ. ನಿನ್ನದೇ ತಪ್ಪು. ಸ್ವಲ್ಪ ಬಿಗಿಯಾಗಿರೋದನ್ನ ಕಲಿ."

ಅಲ್ಲಿಗೆ ಈ ಮಾತು ಮುಗಿದಿತ್ತು. ಕಲ್ಯಾಣಿ ಕಲಿತಳೋ ಬಿಟ್ಟಳೋ ? ಮಾರುತಿಯ ನಡತೆಯಲ್ಲಿ ಸ್ವಲ್ಪವೂ ಬದಲಾವಣೆ ಆಗಲಿಲ್ಲ. ಮನೆಯಲ್ಲಿ ದಿನಾ ರಗಳೆ ರಂಪ ಇದ್ದದ್ದೆ.

ಮನೋರಮ ಹೇಳದಿದ್ದರೂ ವೆಂಕಮ್ಮನಿಗೆ ಎಲ್ಲ ಗೊತ್ತು

ಆಕೆಗೇನು ಕಣ್ಣು, ಕಿವಿ ಇಲ್ಲವೇ ?

ಆದರೂ ಪ್ರಪಂಚವನ್ನು ಕಂಡಿದ್ದ ಇವರು ಮನೋರಮಳಷ್ಟು ಬೇಸರ ಪಡಲಿಲ್ಲ.

ಕಲ್ಯಾಣಿ ಬಂದಾಗ ಏನಾದರೂ ತಿಂಡಿ ಇದ್ದರೆ ಕೊಡುವರು. ಒಗ್ಗರಣೆಗೆ ಸಾಸುವೆ ಇಲ್ಲದಾಗ, ಮತ್ತೇನಾದರೂ ಸಣ್ಣಪುಟ್ಟ ಸಾಮಾನು ಬೇಕಾದರೆ ಕೊಡುವುದಲ್ಲದೆ-

"ಏನಾದ್ರೂ ಬೇಕಾದ್ರೆ ಬಾಮ್ಮ. ಸಂಕೋಚ ಪಟ್ಕೋಬೇಡ ಆ ಎಡವಟ್ಟು ಗಂಡನ್ನ ಕಟ್ಕೊಂಡು ನೀನಾಗುವ ಹೊತ್ತಿಗೆ ಏಗ್ತಿದ್ದಿ. ಪಾಪ .. ಪಾಪ .."

–ಎನ್ನುವರು.

ವೆಂಕಮ್ಮ ಹೂಬತ್ತಿ ಹೊಸೆಯಲು ಆರಂಭಿಸಿದಾಗ ಕಲ್ಯಾಣಿಯೂ

ಜೊತೆಗೆ ಕೈಹಾಕಿದಳು. ಮಾತು ನಡೆದಿದ್ದಂತೆ ಹತ್ತಿಯ ರಾಶಿ ಕರಗಿತು.

ಉಟ್ಟಿದ್ದುದು ಮನೋರಮೆ ಕೊಟ್ಟ ಸುಮಾರಾಗಿ ಹಳೆಯದಾಗಿದ್ದ ಸೀರೆ ಚಪ್ಪರದ ಕೆಳಗೆ ಉದುರಿದ್ದ ಹೂವುಗಳನ್ನು ಆರಿಸಿ ಕಟ್ಟಿದ್ದ ದಂಡೆ ಮುಡಿಯಲ್ಲಿ ಒಪ್ಪವಾಗಿ ಕುಳಿತಿತ್ತು.

ಬಾಯಿ ತುಂಬ ಅವನದೇ ಮಾತು. ಕೆಟ್ಟುದರಲ್ಲಿ ಒಳಿತನ್ನು ಹುಡುಕುವ ಚಪಲ, ಕಲ್ಯಾಣಿಗೆ.

"ಅವರು ನಿಜವಾಗಿ ಕೆಟ್ಟವರಲ್ಲ. ಕಾಲು ಹೀಗಾದ ಮೇಲೆ ಕೋಪ ಹೆಚ್ಚಾಗಿದೆ. ಯಾರ ಮೇಲೆ ತೋರಿಸಬೇಕು ಹೇಳಿ?"

ವೆಂಕಮ್ಮ ಅವನನ್ನು ಏನೋ ಹೇಳಿದಾಗ ಕಲ್ಯಾಣಿ ಹೇಳಿದ ಸಮಾಧಾನ ಅದು

"ಹೋಗ್ಲಿ ಬಿಡು ನಿನ್ನ ಗಂಡನ್ನ ಅಂದರೆ ನಿನ್ನ ಮುಖ ಚಿಕ್ಕದಾಗುತ್ತೆ. ಹೇಗೊ ಚೆನ್ನಾಗಿರಿ. ಆದ್ರೆ ನಿನ್ನ ಹೊಡೆದು ಬಡಿದು ಮಾಡೋದನ್ನ ಬಿಟ್ಟರೆ ಸರಿ. ಅಷ್ಟು ಸಾಕು."

ವೆಂಕಮ್ಮ ಕುಂಟುತ್ತ ಒಳಗೆ ಹೋದವರು, ಒಂದು ತಟ್ಟೆಯಲ್ಲಿ ನಾಲ್ಕು ಕೋಡುಬಳೆ ಇಟ್ಟು ಕಲ್ಯಾಣಿಗೆ ಕೊಟ್ಟರು.

"ಅಜ್ಜಿ... ನನಗೆ ಹೇಳಿದ್ದರೆ ನಾನೇ ಒಳಗಿನಿಂದ ತರ್ತಿದ್ದೆ. ಸುಮ್ಮನೆ ಒದ್ದಾಡ್ಕೊಂಡು ನೀವೇ ಎದ್ದಿರಲ್ಲ

ಒಂದು ಚೂರು ಕೋಡುಬಳೆ ಮುರಿದು ಬಾಯಿಗೆ ಹಾಕಿಕೊಂಡು ಉಳಿದುದನ್ನು ಅಲ್ಲೇ ಬಿದ್ದಿದ್ದ ಕಾಗದದಲ್ಲಿ ಸುತ್ತಿಕೊಂಡು ಎದ್ದು ನಿಂತಳು ಕಲ್ಯಾಣಿ.

"ತುಂಬಾ ಚೆನ್ನಾಗಿದೆ. ಬಾಯಿಗೆ ಹಾಕಿಕೊಂಡರೆ ಕರಗಿಹೋಗುತ್ತೆ. ಕೊಡುಬಳೆ ನೀವು ಮಾಡೋ ಹಾಗೆ ಯಾರೂ ಮಾಡಲ್ಲ"-

ಬಾಯಿತುಂಬ ಬಂತು ಹೊಗಳಿಕೆ.

"ಕೊಟ್ಟಿರೋದೆ ಸ್ವಲ್ಪ. ಅದನ್ನ ಇಲ್ಲೇ ತಿನ್ನು. ಮನೆಗೆ ಹೋದರೆ ನಿಂಗೇನು ಉಳಿಯುತ್ತೆ?"

"ಇಲ್ಲ ಅಜ್ಜಿ, ಇಬ್ಬರಿಗೂ ಆಗುತ್ತೆ ಅವರಿಗೆ ಕೋಡುಬಳೆ ಅಂದರೆ ತುಂಬ ಇಷ್ಟ"

ಕುಂಕುಮ ಇಟ್ಕೊಂಡು ಕಲ್ಯಾಣಿ ಹೊರಟು ಹೋದಳು.

ಈ ಹುಡುಗಿಗೆ ಆ ಗಂಡನ ಮೇಲೆ ಎಷ್ಟು ಪ್ರೀತಿ ಎಂದುಕೊಂಡರು ವೆಂಕಮ್ಮ. ಅವನ ಯಾವ ತಪ್ಪೂ ಅದರಲ್ಲಿ ಕೊಚ್ಚಿಹೋದರೆ ಆಶ್ಚರ್ಯವಿಲ್ಲ... ಎನಿಸಿತು.

ಕಾದಂಬರಿ ಮುಗಿಸಿ ಮನೋರಮ ಒಳಗೆ ಬಂದಳು.

"ಯಾರು ಮಾತಾಡ್ತಿದ್ದದ್ದು ? ಕಲ್ಯಾಣಿ ಬಂದಿದ್ದಳೆ?"

–ಎಂದು ಕೇಳಿದಳು.

"ಹೂಂ..."

ಏನೋ ಯೋಚಿಸುತ್ತಿದ್ದ ವೆಂಕಮ್ಮ ಚುಟುಕಾಗಿ ಉತ್ತರ ಕೊಟ್ಟರು.

ಅದೇ ವೇಳೆಗೆ ಕರೆಗಂಟೆ ಬಾರಿಸಿತು.

ಮನೋರಮ ಹಾರಿಹೋಗಿ ಬಾಗಿಲು ತೆಗೆದಳು. ಸತೀಶ ಬರಿಗೈಲಿ ನಿಂತಿದ್ದ. ಅವನು ಉಡುಗೊರೆ ತಂದಿರಲಿಲ್ಲ. ಅವನಿಗೆ ತಮ್ಮ ಮದುವೆಯ ದಿನ ನೆನಪಿನಿಂದ ಜಾರಿಹೋಗಿತ್ತು.

ನೆನಪು ಜಾರಿದ್ದರೂ ಮುಖದಲ್ಲಿನ ನಗೆ ಸ್ಥಿರವಾಗಿತ್ತು.

"ನನಗಾಗಿ ಕಾಯ್ತಿದ್ದೆಯ ಚಿನ್ನ ? ಎಲ್ಲೋ ಅವಸರಗಲ್ಲಿ ನಿಂತಿದ್ದ ಹಾಗೇ ಹೊರಟುಬಿಟ್ಟೆ."

ಸತೀಶ ಹತ್ತಿರ ಬಂದ. ಮಡದಿ ಮೋಹಕವಾಗಿ ಕಂಡಳು. ಅವಳು ಹೊರಗೆ ಹೋಗಲು ತಯಾರಾಗಿ ಕಾಯುತ್ತಿದ್ದಳೆಂದು ಅವನಿಗೆ ತೋರಲೇ ಇಲ್ಲ.

ಸರ್ರನೆ ಎರಡು ಹೆಜ್ಜೆ ಹಿಂದಕ್ಕೆ ಹಾರಿದ ಮನೋರಮ ತಾಯಿಯ ಹತ್ತಿರ ಬಂದು–

"ಅಮ್ಮ .ನಿನ್ನ ಅಳಿಯ ಬಂದಿದಾರೆ. ಅವರಿಗೆ ಏನು ಬೇಕೋ ಬಡಿಸು. ನನಗೆ ತಲೆನೋಯ್ತಿದೆ. ಮಲಕ್ಕೋತೇನೆ"

–ಎಂದು ಮನೋರಮ ಮಹಡಿಯತ್ತ ನಡೆದಳು.

# ರತ್ನ ವಿಲಾಸ

ಬಹಳ ದಿವಸಗಳಿಂದ ಖಾಲಿ ಇದ್ದ ಆ ಸಣ್ಣಮನೆಯಲ್ಲಿ ಜನರ ಓಡಾಟ ವನ್ನು ನೋಡಿ, ಬೀದಿಯಲ್ಲಿ ಓಡಾಡುತ್ತಿದ್ದವರು ಕುತೂಹಲದಿಂದ ಒಂದು ಕ್ಷಣ ನಿಂತುಕೊಂಡು ನೋಡಿ ಮುಂದೆ ಹೋಗುತ್ತಿದ್ದರು. ಮನೆಯ ಮಾಲೀಕ ಜನಾರ್ಧನಯ್ಯ ತಾನೇ ಎದುರಿಗೆ ನಿಂತುಕೊಂಡು, ಆಳುಗಳಿಂದ ಮನೆಯನ್ನು ಚೊಕ್ಕಟಮಾಡಿಸುತ್ತಿದ್ದ. ಜೊತೆಗೆ ಸುಣ್ಣ, ಬಣ್ಣ, ರಿಪೇರಿ ಕೆಲಸಗಳೂ ಆಗುತ್ತಿದ್ದುವು.

ಏಳೆಂಟು ತಿಂಗಳುಗಳಿಂದ ಖಾಲಿಬಿದ್ದು ಬಾಡಿಗೆಗೆ ಸೊನ್ನೆ ಬಿದ್ದಿದ್ದ ರಿಂದ, ಜನಾರ್ಧನಯ್ಯ ಕುಗ್ಗಿಹೋಗಿದ್ದ. ಅದಕ್ಕೆ ಕಾರಣನಾಗಿದ್ದ, ಆ ಮನೆಯಲ್ಲೇ ಸತ್ತಿದ್ದ ಮುದುಕನನ್ನೂ ಶಪಿಸುತ್ತಿದ್ದ.

ಅವನ ಕೋಪಕ್ಕೆ ಕಾರಣವಿತ್ತು.

ಮುದುಕ ಹೋದ ಮೇಲೆ ಯಾರೂ ಆ ಮನೆಗೆ ಬಾಡಿಗೆಗೆ ಬಂದಿರಲಿಲ್ಲ. ಹೊರಗಿನವರು ಒಬ್ಬಿಬ್ಬರು ಬಂದು ಕೇಳಿ ಹೋದವರು ಪುನಃ ಮುಖ ತೋರಿಸದೆ ಹೊರಟುಹೋಗಿ ಬೇರೇ ಮನೆ ವಿಚಾರಿಸುತ್ತಿದ್ದರು. ಬಂದವರಿಗೆ ಯಾರಾದರೂ ಮುದುಕನ ಸಾವಿನ ವಿಚಾರ ತಿಳಿಸಿ ಹೆದರಿಸುತ್ತಿದ್ದರು.

ಪರಿಸ್ಥಿತಿ ಹೀಗಿರುವಾಗ ಯಾರೋ ದೂರದ ಊರಿನವರು ಬಂದು ಆ ಮನೆಯನ್ನು ಕೇಳಿದಾಗ ಜನಾರ್ಧನಯ್ಯನಿಗೆ ಸಂತೋಷವಾಗಿತ್ತು. ಅಲ್ಲದೆ ಬಂದವರು ಚೌಕಾಶಿ ಮಾಡದೆ ಒಂದೇ ಮಾತಿನಲ್ಲಿ ಅವನು ಕೇಳಿದ ಬಾಡಿಗೆಗೆ ಒಪ್ಪಿದ್ದರಿಂದ, ಅವನು ಉತ್ಸಾಹದಿಂದ ಸ್ವಲ್ಪ ಧಾರಳವಾಗಿಯೇ ದುಡ್ಡು ಖರ್ಚುಮಾಡಿ ರಿಪೇರಿ ಮಾಡಿಸುತ್ತಿದ್ದ.

ಬರುವವರು ಯಾರೆಂದು ಒಬ್ಬರಿಗೂ ಗೊತ್ತಿಲ್ಲ. ಚಾಡಿ ಹೇಳಿ ಓಡಿಸಲು ತಯಾರಾಗಿದ್ದ ನೆರೆಹೊರೆಯವರಿಗೆ ಸ್ವಲ್ಪ ನಿರಾಶೆಯೇ ಆಯ್ತು.

ಕೆಲಸವೆಲ್ಲ ಮುಗಿದ ಮೇಲೆ ಒಂದು ದಿನ ಗಾಡಿಯಲ್ಲಿ ಸ್ವಲ್ಪ ಸಾಮಾನು ಹಾಕಿಕೊಂಡು ಅವರು ಬಂದರು.

ಹೆಚ್ಚು ಜನವೇನೂ ಇಲ್ಲ. ತಂದೆ ಮತ್ತು ಮಗಳು, ಇಬ್ಬರೇ.

ಬಂದವರನ್ನು ನೋಡಲು ಆಸಕ್ತಿಯಿಂದ ಸುಳಿದಾಡುತ್ತಿದ್ದ ಜನ ಬಂದವರ ತೀರಾ ಸಾಧಾರಣವಾದ ಉಡುಪನ್ನೂ, ಅವರು ತಂದಿದ್ದ ಹರಕು ಮುರುಕು ಸಾಮಾನುಗಳನ್ನೂ ನೋಡಿ, ಬೇಸರದಿಂದ "ಇಷ್ಟೇನೇ?" ಎಂದು ಕೊಂಡು ತಮ್ಮ ದಾರಿ ಹಿಡಿದರು.

ಎರಡು ಮೂರು ದಿನಗಳಲ್ಲಿ ಮನೆಯಲ್ಲೇ ಒಂದು ಸಣ್ಣ ಅಂಗಡಿ ಶುರುವಾಯ್ತು. ಪೆಪ್ಪರಮೆಂಟಿನಿಂದ ಸೂಜಿದಾರದವರೆಗೆ ಎಲ್ಲ ಸಾಮಾನು ಗಳೂ ಇದ್ದುವು ನೆರೆಯಲ್ಲಿ ಸಮೀಪದಲ್ಲಿ ಸಾಮಾನುಗಳು ಸಿಗುವುವೆಂದಾದ ಮೇಲೆ 'ಇಷ್ಟೇನೇ' ಎಂದುಕೊಂಡು ಹೋಗಿದ್ದ ಜನ ಕೂಡ ಅಲ್ಲಿಗೆ ಬರುವಂತಾಯ್ತು.

ವ್ಯಾಪಾರಕ್ಕೆಂದು ಕೆಲವರು ಬಂದರೆ, ಕುಳಿತು ಹರಟೆ ಕೊಚ್ಚಲು ಹಲವರು ಬರುತ್ತಿದ್ದರು. ಯಾವ ಉದ್ಯೋಗವೂ ಇಲ್ಲದೆ ಹಿರಿಯರು ಮಾಡಿಟ್ಟ ಆಸ್ತಿಯನ್ನು ಕೂತು ಉಣ್ಣುತ್ತಿದ್ದ ಗುಂಡಯ್ಯನಂತೂ ದಿನದ ಹೆಚ್ಚು ಭಾಗವನ್ನು ಇವರ ಅಂಗಡಿಯಲ್ಲೇ ಕಳೆಯುತ್ತಿದ್ದ. ಅವನಿಂದ ರಾಮಚಂದ್ರಯ್ಯನಿಗೆ ಊರಿನವರ ಪರಿಚಯವಾದುದರ ಜೊತೆಗೆ ಗಿರಾಕಿ ಗಳು ಇಲ್ಲದಿದ್ದಾಗ ಮಾತಾಡಲು ಜೊತೆ ಸಿಕ್ಕಂತಾಗಿತ್ತು ಅಲ್ಲದೆ ವ್ಯಾಪಾರದಲ್ಲೂ ಅವರಿಗೆ ಗುಂಡಯ್ಯನಿಂದ ಆದ ಸಹಾಯ ಅಷ್ಟಿಷ್ಟಲ್ಲ.

ಸಿಗರೇಟ್ ಕೊಳ್ಳಲೆಂದು ಅವರ ಅಂಗಡಿಗೆ ಮೊದಲು ಸಲ ಬಂದ ಗುಂಡಯ್ಯ ಸ್ವಲ್ಪ ಹೊತ್ತಿನಲ್ಲೇ ರಾಮಚಂದ್ರಯ್ಯ ವ್ಯಾಪಾರಕ್ಕೆ ಹೊಸಬ ರೆಂದು ತಿಳಿದುಕೊಂಡ ಒಂದಾಣೆ ನಾಣ್ಯವನ್ನು ಹಿಡಿದುಕೊಂಡ ಸಕ್ಕರೆ ಕೇಳಲು ಬಂದ ಹುಡುಗಿಗೆ, ಸ್ವಲ್ಪವೂ ಹಿಂದು ಮುಂದು ನೋಡದೆ ಅರ್ಧಪಾವಿನಷ್ಟು ಸಕ್ಕರೆ ಕೊಟ್ಟಾಗ, ಗುಂಡಯ್ಯ ಆಶ್ಚರ್ಯದಿಂದ ಮೂಗಿಗೆ ಬೆರಳು ಹಚ್ಚಿಕೊಂಡ. ಆ ಹುಡುಗಿ ಹೋಗುವವರೆಗು ಸುಮ್ಮನಿದ್ದು,

"ಸ್ವಾಮಿ ತಮ್ಮೂರು ಯಾವುದು? ಎಲ್ಲಿಂದ ದಯಮಾಡಿಸಿದಿರಿ?

ಎಂದು ಕೇಳಿದ.

"ಭೀಮಾವರದ ಹತ್ತಿರ ಇದ್ದೆವು"

ಎಂದರು ರಾಮಚಂದ್ರಯ್ಯ.

ಸಿಗರೇಟು ಕೊಳ್ಳಲು ಬಂದವನಿಗೆ ನಮ್ಮ ಪರಿಚಯವೇಕೆ ಎನಿಸಿದರೂ, ಮೊದಲದಿನವೇ ಊರಿನವರ ಬಳಿ ಒರಟಾಗಿ ಮಾತಾಡಿದರೆ ತಮ್ಮ ವ್ಯಾಪರಕ್ಕೆ ಹಾನಿ ಎಂದುಕೊಂಡು ನಗುತ್ತಲೇ ಉತ್ತರಕೊಟ್ಟರು

ಅವರ ನಗು ಗುಂಡಯ್ಯನಿಗೆ ಆಹ್ವಾನಕೊಟ್ಟಂತಾಯ್ತು. ಆವನು ಸಿಗರೇಟ್ ಹಚ್ಚಿಕೊಂಡು ಸೇದುತ್ತ ಆರಾಮವಾಗಿ ಅಲ್ಲೇ ಮಾತಿಗೆ ಕುಳಿತ

"ಇಷ್ಟುದೂರ ಬಂದಿರಲ್ಲ ?"

"ಏನೋಪ್ಪ ಮನೆಯಾಕೆ ಹೋದಮೇಲೆ ಅಲ್ಲಿನ ಜೀವನವೇ ಬೇಸರ ವಾಯ್ತು. ಇದ್ದ ಕಲಸವನ್ನೂ ಬಿಟ್ಟು ಬಂದ್ಬಿಟ್ಟೆ ಹುಡುಗಿಗೆ ತಾಯಿ ಯಂತೂ ಇಲ್ಲ, ಅಜ್ಜಿಯ ಮನೆಯವರಾದರೂ ಹತ್ತಿರ ಇರಲಿ ಎನಿಸಿತು. ಅವರೆಲ್ಲ ಈ ಕಡೆಯವರೆ"

"ಅಲ್ಲಿ ಸಕ್ಕರೆ ಕಾರ್ಖಾನೆ ಇಟ್ಟಿದ್ದಿರೇನು ?"

"ಇಲ್ಲವಲ್ಲ ! ಹಾಗೇಕೆ ಕೇಳ್ತೀರಿ ?"

"ಒಂದಾಣೆಗೆ ಅರ್ಧಪಾವು ಸಕ್ಕರೆ ಕೊಟ್ಟಿರಲ್ಲ ? ಅದಕ್ಕೆ ಕೇಳ್ದೆ"

ರಾಮಚಂದ್ರಯ್ಯ ಸ್ವಲ್ಪ ಪೆಚ್ಚಾದರು, ತಾವು ಮಾಡಿದ ವ್ಯಾಪಾರ ಸರಿಯಾಗಲಿಲ್ಲ ಎನಿಸಿತು ನಗುವಿನಲ್ಲಿ ತಪ್ಪನ್ನು ಮರೆಸುತ್ತ,

"ನೋಡಿ, ಅಂಗಡಿ ಆರಂಭಿಸುವಾಗ ನ್ಯಾಯವಾಗಿ ಊರವರನ್ನು ಕರೆದು ಸಿಹಿ ಹಂಚಬೇಕು ದೇವರು ನನಗೆ ಅಷ್ಟು ಅನುಕೂಲ ಕೊಟ್ಟಿಲ್ಲ ಅದರಿಂದ ಮೊದಲುದಿನ ಹೆಣ್ಣು ಮಗು ಸಕ್ಕರೆ ಕೊಳ್ಳಲು ಬಂದಾಗ ಸ್ವಲ್ಪ ಹೆಚ್ಚಾಗಿ ಕೊಟ್ಟೆ ಅಷ್ಟೆ"

"ನೀವು ಅಲ್ಲೂ ಅಂಗಡಿ ಇಟ್ಟಿದ್ದಿರ ?"

"ಇಲ್ಲ. ಯಾರ ಬಳಿಯೋ ಕೆಲಸಕ್ಕಿದ್ದೆ. ಈಗ ಪುನಃ ಇನ್ನೊಬ್ಬರ ಕೈಕೆಳಗೆ ಕೆಲಸ ಮಾಡುವ ಮನಸ್ಸಿಲ್ಲ. ಅದಕ್ಕೇ ಕೂತಕಡೆ ನಾಲ್ಕು ಕಾಸು ಸಂಪಾದಿಸಲು ಇದೇ ಸರಿಯೆಂದು ಅಂಗಡಿ ಹಾಕುವ ಯೋಚನೆ ಮಾಡಿದ್ದು.

ನಾನು ಕೆಲಸಕ್ಕೆಂದು ಹೊರಗೆ ಹೋದರೆ ಮನೆಯಲ್ಲಿ ಹುಡುಗಿ ಒಬ್ಬಳೇ ಆಗ್ತಾಳೆ"

"ಇಷ್ಟು ಜಾಗ ಸಾಕೇ ?"

"ಸಾಕು ಮನೆಯ ಹಿಂದುಗಡೆ ಎರಡು ರೂಮಿನಲ್ಲಿ ವಾಸ. ಇಲ್ಲಿ ಅಂಗಡಿ, ನಮ್ಮಿಬ್ಬರಿಗೆ ಎಷ್ಟಾಗಬೇಕು ?"

ಅಷ್ಟರಲ್ಲಿ ಒಬ್ಬ ಹುಡುಗ ಬಂದು,

"ತೊಗರೀಬೇಳೆ ರೂಪಾಯಿಗೆ ಎಷ್ಟು ಸೇರು ?"

–ಎಂದು ವಿಚಾರಿಸಿದ.

ರಾಮಚಂದ್ರಯ್ಯ ಮೇಜಿನ ಡ್ರಾಯರನ್ನು ತೆಗೆದು, ಪದಾರ್ಥಗಳ ಬೆಲೆಯನ್ನು ಗುರುತುಹಾಕಿಕೊಂಡಿದ್ದ ಪುಸ್ತಕಕ್ಕಾಗಿ ಹುಡುಕಿದರು ಅದು ಎಲ್ಲೂ ಕಾಣಿಸಲಿಲ್ಲ. ಸಾಮಾನುಸಾಗಿಸುವ ಗಡಿಬಿಡಿಯಲ್ಲಿ ಅದು ಯಾವ ಸಂದಿನಲ್ಲೋ ಸೇರಿಹೋಗಿತ್ತು.

"ಹೊತ್ತಾಯ್ತು. . ಬೆಲೆ ಹೇಳಿ ಸ್ವಾಮಿ"

ಹುಡುಗ ಅವಸರಮಾಡಿದ

"ತಾಳು ಮಗು, ನೋಡಿ ಹೇಳ್ತೀನಿ"

ಪುನಃ ಎಲ್ಲಕಡೆಯೂ ನೋಡಿದ್ದಾಯ್ತು. ಪುಸ್ತಕ ಸಿಕ್ಕಲಿಲ್ಲ. ಬೇಜಾರಾಗಿ ರಾಮಚಂದ್ರಯ್ಯ 'ನಾಗೂ' ಎಂದು ಮಗಳನ್ನು ಕೂಗಿದರು.

ಒಳಗೆ ಏನೋಕೆಲಸ ಮಾಡ್ತಿದ್ದ ಹುಡುಗಿ ಕೈ ಒರಸಿಕೊಳ್ಳುತ್ತ ಬಂದು,

"ಏನಣ್ಣ ?" ಎಂದಳು.

"ಸಾಮಾನಿನ ಬೆಲೆ ಗುರ್ತು ಹಾಕಿತ್ತಲ್ಲ ? ಆ ಪುಸ್ತಕ ಎಲ್ಲಿ ಮಗು ?"

"ಮೇಜಿನಲ್ಲೇ ಇತ್ತು "

"ಇಲ್ವಲ್ಲಮ್ಮ. ಅಲ್ಲಿದ್ದರೆ ನಿನ್ನೇಕೆ ಕೂಗ್ತಿದ್ದೆ ? "

"ಒಳಗೆ ನನ್ನ ಪುಸ್ತಕಗಳ ಜೊತೆ ಏನಾದರೂ ಸೇರಿದೆಯೋ ಏನೋ ನೋಡ್ತೀನಿ " ಎಂದು ಚಕ್ಕನೆ ನಾಗು ಒಳಗೆ ಹೋದಳು.

"ಹೊತ್ತಾಯ್ತು ಬೇಳೆ ಇದೆಯೋ ಇಲ್ವೋ ? "

ಎಂದು ಹುಡುಗ ಎಚ್ಚರಿಕೆ ಕೊಟ್ಟ. ರಾಮಚಂದ್ರಯ್ಯನ ಹುಡುಕಾಟ ನಡದೇ ಇತ್ತು. ಸಾಮಾನುಗಳೆಲ್ಲ ಸರಿಯಾಗಿ ವ್ಯವಸ್ಥೆಯಾಗುವ ಮೊದಲೇ

ಅಂಗಡಿಯ ಬಾಗಿಲು ತೆರೆಯಬಾರದಿತ್ತು ಎನಿಸಿತು.

ಅವರ ತೊಳಲಾಟ ನೋಡಲಾರದೆ ಗುಂಡಯ್ಯ,

"ಬೇಳೆ ರೂಪಾಯಿಗೆ ಒಂದು ಸೇರು. ಎಷ್ಟು ಬೇಕಪ್ಪ ?"ಎಂದ.

"ಒಂದು ರೂಪಾಯಿಗೆ ಒಂದು ಸೇರೇ ? ಪೇಟೇಲಿ ಹದಿನೈದು ಆಣೆಗೆ ಒಂದು ಸೇರು ಕೊಡ್ತಾರೆ"

"ಕೊಡ್ತಾರೆ ನಿಜ. ಆದರೆ ಇದು 'ಅಮರಾವತಿ' ಬೇಳೆ. ಎಲ್ಲೂ ಒಂದು ರೂಪಾಯಿಗೆ ಕಡಿಮೆ ಇಲ್ಲ. ಬೇಕಾದ್ರೆ ವಿಚಾರಿಸಿಕೊಂಡು ಬಾ. ಅಲ್ಲದೆ ಪೇಟೆ ಇಲ್ಲಿದೆಯೆ ? ಅಷ್ಟುದೂರ ಹೋಗಬೇಡ್ವೆ ?"

ಎಂದು ಗುಂಡಯ್ಯ ರಾಮಚಂದ್ರಯ್ಯನವರ ಪರವಾಗಿ ತಾನೇ ಮಾತಾಡಿದ

"ಹೋಗ್ಲಿ ಅರ್ಧಸೇರು ಕೊಡಿ"

ರಾಮಚಂದ್ರಯ್ಯ ಸೇರು ಪಾವುಗಳಿಗಾಗಿ ಹುಡುಕುತ್ತಿರುವಾಗಲೇ ಗುಂಡಯ್ಯ ಎದ್ದು ಚೀಲದ ಸಂದಿನಿಂದ ಪಾವು ತೆಗೆದು ಬೇಳೆ ಅಳೆದುಕೊಟ್ಟು ದುಡ್ಡು ತೆಗೆದುಕೊಂಡು ರಾಮಚಂದ್ರಯ್ಯನಿಗೆ ಕೊಟ್ಟ. ಅವರಿಗೆ ಬಹಳ ಸಂತೋಷವಾಯ್ತು.

"ಬಹಳ ಉಪಕಾರವಾಯ್ತು. ತಮ್ಮ ಹೆಸರೇನೋ ?" ಎಂದರು

"ನನ್ನ ಹೆಸರು ಗುಂಡಯ್ಯ"

"ಹೀಗೆ ಬರ್‍ತಿರೀ ಸ್ವಾಮಿ, ನಾನೂ ಈ ಕಸುಬಿಗೆ ಹೊಸಬ"

"ಆಗ್ಲಿ ಅದಕ್ಕೇನಂತೆ ? ನನಗೂ ಹೊತ್ತು ಕಳೆಯಲು ಒಂದು ದಾರಿ"

ಇಷ್ಟು ಹೇಳಿ ಗುಂಡಯ್ಯ ನಗುತ್ತಾ ಹೊರಟುಹೋದ.

ಹೀಗೇ ಒಂದೆರಡುವಾರ ಕಳೆಯುವುದರೊಳಗೆ ಗುಂಡಯ್ಯನ ಜೊತೆಯಲ್ಲಿ ಕುಳಿತು, ರಾಮಚಂದ್ರಯ್ಯ ವ್ಯಾಪಾರದ ಅನೇಕ ಜಾಣತನಗಳನ್ನು ಕಲಿತರು. ಗುಂಡಯ್ಯನೂ ಸ್ವತಃ ವ್ಯಾಪಾರಿಯಲ್ಲವಾದರೂ, ಅಂಗಡಿಗಳಲ್ಲಿ ಹರಟೆಗೆ ಕುಳಿತು ಕೆಲವು ವಿಷಯಗಳನ್ನು ತಿಳಿದುಕೊಂಡಿದ್ದ. ದಿನಗಳು ಕಳೆದಂತೆ ಅವರಿಬ್ಬರ ನಡುವೆ ಸ್ನೇಹವೂ ಬೆಳೆಯುತ್ತಾ ಬಂತು. ದಿನದಿನಕ್ಕೆ ಅಂಗಡಿಗೆ ಬರುವ ಗಿರಾಕಿಗಳೂ ಹೆಚ್ಚಿದರು.

ಅಷ್ಟು ಸಣ್ಣ ಅಂಗಡಿಯಲ್ಲಿ ಎಲ್ಲ ಸಾಮಾನೂ ಸಿಕ್ಕುವುದು ಕೆಲವರಿಗೆ

ಆಶ್ಚರ್ಯ. ಯಾರು ಯಾವ ಸಾಮಾನು ಕೇಳಿದರೂ ರಾಮುಚಂದ್ರಯ್ಯ 'ಇಲ್ಲ' ಎನ್ನುತ್ತಿರಲಿಲ್ಲ

"ನಾಳೆ ಬನ್ನಿ, ಸಾಮಾನು ಬರುವುದಿದೆ"

ಎನ್ನುತ್ತಿದ್ದರು ನಾಳೆಯ ಹೊತ್ತಿಗೆ ಆ ಸಾಮಾನು ಗಿರಾಕಿಗೆ ಸಿಕ್ಕುತ್ತಿತ್ತು.

ದಿನದ ಹೆಚ್ಚು ಭಾಗವನ್ನು ಗುಂಡಯ್ಯ ಅಂಗಡಿಯಲ್ಲಿ ಕಳೆದರೂ, ಮನೆಯ ಒಳಗೆ ಅವರ ಜೀವನ ಹೇಗಿದೆ ಎಂದು ಅವನಿಗೆ ಗೊತ್ತಿರಲಿಲ್ಲ. ವ್ಯಾಪಾರ ದಿನದಿನಕ್ಕೆ ಹೆಚ್ಚುತ್ತಿದ್ದರೂ ತಂದೆ ಮಗಳ ಬಡತನದ ಉಡುಪಿನಲ್ಲಿ ಬದಲಾವಣೆ ಇರಲಿಲ್ಲ. ರಾಮುಚಂದ್ರಯ್ಯ ಊರಿಗೆ ಬಂದ ದಿನ ಹಾಕಿಕೊಂಡಿದ್ದ ಬಣ್ಣ ಮಾಸಿದ ಹಳೆಯ ಕೋಟಿನಲ್ಲೇ ಕಾಲಕಳೆಯುತ್ತಿದ್ದರು

ಒಂದು ದಿನ ಸಂಜೆ ಇದ್ದಕ್ಕಿದಂತೆ ದೊಡ್ಡ ಮಳೆ ಶುರುವಾಯ್ತು. ಗಂಟೆ ಎಂಟಾದರೂ ಮಳೆ ನಿಲ್ಲುವ ಸೂಚನೆ ತೋರಲಿಲ್ಲ. ತಂದ ಮಗಳನ್ನು ಕೂಗಿ, "ನಾಗು ಬಹಳ ಛಳಿ. ಎರಡು ಬಟ್ಟಲು ಕಾಫಿ ಮಾಡ್ತೀಯಾ?"

–ಎಂದರು.

ಹತ್ತು ನಿಮಿಷಗಳಲ್ಲಿ ನಾಗು 'ಕಾಫಿ ಆಗಿದೆ' ಎಂದು ಹೇಳಿದಳು.

"ಬನ್ನಿ ಗುಂಡಯ್ಯ; ಒಳಗೆ ಹೋಗಿ ಕಾಫಿ ತಗೋಳೋಣ"

–ಎಂದು ಹೇಳಿ ಎದ್ದರು

ಗುಂಡಯ್ಯನಿಗೆ ಕಾಫಿ ಕುಡಿಯುವ ಆತರವಿಲ್ಲದಿದ್ದರೂ, ಒಳಗೆ ಹೋಗಿ ಮನೆ ನೋಡುವ ಕುತೂಹಲವಿತ್ತು. ಅದರಿಂದ ಎರಡನೆಯ ಸಲ ಹೇಳಿಸಿಕೊಳ್ಳದೆ ಒಳಗೆ ಹೋದ.

ಒಳಗಡೆ ಹಜಾರದಲ್ಲಿ ಒಂದು ಚಿಕ್ಕ ಮೇಜು ಹಾಕಿತ್ತು. ಅದರ ಎರಡು ಕಡೆಗೂ ಮಡಿಸುವ ಕುರ್ಚಿಗಳು. ಮೇಜಿನ ಮೇಲೆ ಒಂದೆರಡು ಇಂಗ್ಲಿಷ್ ಪುಸ್ತಕಗಳು. ಚರ್ಮದ ರಟ್ಟು ಹಾಕಿದ್ದ ಪುಸ್ತಕದ ಮೇಲೆ ಚಿನ್ನದಂತೆ ಹೊಳೆಯುವ ಅಕ್ಷರಗಳು.

ಗುಂಡಯ್ಯ ಒಂದು ಪುಸ್ತಕ ಕೈಗೆ ತೆಗೆದುಕೊಂಡ, ಭಾರವಾಗಿತ್ತು. ಅದನ್ನು ಹಾಗೇ ಕೆಳಗಿಟ್ಟು,

"ಇಷ್ಟು ದೊಡ್ಡ ಪುಸ್ತಕ ಯಾರು ಓದೋರು?"

–ಎಂದು ಆಶ್ಚರ್ಯದಿಂದ ಕೇಳಿದ.

"ನಾಗೂನೇ ಓದ್ತಾಳೆ ಅವಳು ಅಲ್ಲಿದ್ದಾಗ ಕಾಲೇಜಿನಲ್ಲಿ ಕಲೀತಿದ್ದಳು"

ನಾಗು ಎರಡು ಬಟ್ಟಲಿನಲ್ಲಿ ಕಾಫಿ ತಂದಳು. ಬೆಳ್ಳಗೆ ಬೆಳಗಿದ್ದ ಕಂಚಿನ ಲೋಟ, ಅವಳ ಕೈಲಿದ್ದ ಒಂದು ತೆಳನೆಯ ಚಿನ್ನದ ಬಳೆಯೊಂದಿಗೆ ಸ್ಪರ್ಧಿಸುವಂತೆ ಹೊಳೆಯುತ್ತಿತ್ತು.

ಆ ಬಡತನದಲ್ಲೂ ಎಂತಹ ಅಚ್ಚುಕಟ್ಟು! ಮನೆಯಲ್ಲಿ ಹುಡುಕಬೇಕೆಂದರೂ ಒಂದು ಧೂಳಿನ ಕಣ ಸಿಕ್ಕುವಂತಿರಲಿಲ್ಲ ಎಲ್ಲವೂ ಅಚ್ಚುಕಟ್ಟಾಗಿ ಪರಿಷ್ಕಾರವಾಗಿದ್ದು, ಸಿರಿವಂತಿಕೆಗೂ ಮೀರಿದ ಸರಳ ಸೌಂದರ್ಯದಿಂದ ಕೂಡಿತ್ತು ಗುಂಡಯ್ಯ ಕಾಫೀ ಲೋಟವನ್ನು ತುಟಿಗೆ ಹಚ್ಚಿ ಮೈ ಮರೆತಂತೆ ಕುಳಿತಿದ್ದ

ರಾಮಚಂದ್ರಯ್ಯ ತಮ್ಮ ಲೋಟವನ್ನು ಬರಿದು ಮಾಡಿ,

"ಇನ್ನಷ್ಟು ಕಾಫಿ ತರಿಸಲೆ ?"

"ಬೇಡಿ ಸ್ವಾಮಿ, ಎಂತಹ ಸೊಗಸಾದ ಕಾಫಿ! ನನ್ನ ಜನ್ಮದಲ್ಲಿ ಕುಡಿದಿರಲಿಲ್ಲ. ನಾನೂ ತಕ್ಕಮಟ್ಟಿಗೆ ಸ್ಥಿತಿವಂತನೇ. ನಮ್ಮ ಮನೇಲಿ ಏನಿಲ್ಲವೆಂದರೂ ತಿಂಗಳಿಗೆ ಕಾಫಿಗೇ ನೂರು ರೂಪಾಯಿಯ ಮೇಲೆ ಖರ್ಚಾಗುತ್ತೆ. ಆದರೂ ಇಂತಹ ಕಾಫಿ ಕುಡಿದಿಲ್ಲ. ನೀವು ತರಿಸುವ ಪುಡಿ ನಮಗೂ ಕೊಡಿ"

"ಆಗ್ಲಿ . ಆದಕ್ಕೇನಂತೆ ?"

ರಾಮಚಂದ್ರಯ್ಯ ಮುಗುಳ್ನಗೆಯಿಂದ ಹೇಳಿದರು.

"ನಾಳೆ ನಮ್ಮ ಮನೆಯವಳನ್ನು ಕಳಿಸ್ತೇನೆ ಅವಳಿಗೂ ಈ ಕಾಫಿಯ ರುಚಿ ತೋರಿಸಮ್ಮ."

–ಎಂದು ಗುಂಡಯ್ಯ ನಾಗೂಗೆ ಹೇಳಿದ. ನಾಗು ನಕ್ಕಳಷ್ಟೆ, ಉತ್ತರ ಕೊಡಲಿಲ್ಲ

ಮಳೆ ಜೋರಾಗುತ್ತ ಬಂತು. ಹಳೆಯ ಮನೆ ಅಲ್ಲಲ್ಲಿ ಸೋರಲು ಮೊದಲಾಯ್ತು.

"ಅಣ್ಣಾ ...ಅಡಿಗೆ ಮನೆಯಲ್ಲೆಲ್ಲ ನೀರು ತುಂಬ್ತಿದೆ"

ನಾಗು ಒಳಗಿನಿಂದ ದೂರು ತಂದಳು

"ಮಳೆ ನಿಲ್ಲಲಿ, ನೀರನ್ನು ತುಂಬಿ ಹೊರಗೆ ಹಾಕೋಣ"

–ಎಂದು ತಂದೆ ಸಮಾಧಾನದಿಂದ ಉತ್ತರ ಕೊಟ್ಟರು.

"ಮಲಗೋ ಜಾಗದಲ್ಲೆಲ್ಲ ನೀರು ಸೋರಿ, ಬಟ್ಟೆಯೆಲ್ಲ ಒದ್ದೆಯಾಗಿದೆ"

ಎಂದಾಗ ನಾಗುವಿನ ಧ್ವನಿಯಲ್ಲಿ ಅಳು ಬೆರೆತಿತ್ತು. ಈ ಸ್ಥಿತಿಯಲ್ಲಿ ರಾತ್ರಿ ಕಳೆಯುವುದು ಹೇಗೆ? ಎಂಬ ಕಳವಳವಿತ್ತು.

"ಏನಾದ್ರೂ ಮಾಡೋಣ ಮಗು"

ತಂದೆ ಧೈರ್ಯ ಹೇಳಿದರು.

ಸ್ವಲ್ಪ ಹೊತ್ತಿನಲ್ಲಿ ಗುಂಡಯ್ಯನ ಮನೆಯ ಆಳು ಗಾಡಿ ತೆಗೆದುಕೊಂಡು ಬಂದ ಗುಂಡಯ್ಯ ಹೊರಟು ನಿಂತವನು ಸುತ್ತಲೂ ನೋಡಿ.

"ಯಜಮಾನ್ರೆ. ಈ ಹೊತ್ತು ಇಲ್ಲಿ ಮಲಗಲು ಸಾಧ್ಯವಿಲ್ಲ. ನಾಗಮ್ಮನನ್ನೂ ಕರೆದುಕೊಂಡು ನಮ್ಮ ಮನೆಗೇ ಬನ್ನಿ. ಅಲ್ಲೇ ಮಲಗುವಿರಂತೆ. ಬೆಳಗ್ಗೆ ಜನಾರ್ದನಯ್ಯನಿಗೆ ಹೇಳಿ ಏನಾದ್ರೂ ಮಾಡಿಸೋಣ. ತಾವೇನೂ ಸಂಕೋಚ ಪಡಬೇಡಿ"

–ಎಂದು ಕೇಳಿಕೊಂಡ.

"ಬೇಡೀಪ್ಪ, ಏಕೆ ಇಲ್ಲದ ತೊಂದರೆ? ಬಟ್ಟೇಲಿ ಒರಸಿಬಿಟ್ಟರೆ ಆರುತ್ತೆ. ಕರೆದಿರಲ್ಲ, ಅಷ್ಟೇ ಸಂತೋಷ. ನೀವು ಹೊರಡಿ ಹೊತ್ತಾಯ್ತು."

ಗುಂಡಯ್ಯ ಹೊರಟುಹೋದ. ನಾಗು ತಂದೆಯ ಹತ್ತಿರ ಬಂದು,

"ಯಾವ ತಪ್ಪಿಗಾಗಿ ಈ ಶಿಕ್ಷೆ ಅಣ್ಣಾ?"

ಎಂದಳು. ಅವಳ ಕಣ್ಣಿನಲ್ಲಿ ನೀರು ತುಂಬಿ ಧ್ವನಿ ಭಾರವಾಗಿತ್ತು.

"ಇದು ಶಿಕ್ಷೆಯಲ್ಲ ಮುಂದಿನ ಸುಖಕ್ಕೆ ಸೋಪಾನ ಮಗು"

ಎಂದು ಹೇಳಿ ತಲೆ ಸವರಿದರು.

* * *

ಬೆಳಗ್ಗೆ ಗುಂಡಯ್ಯ ಎದ್ದವನೇ ರಾಮಚಂದ್ರಯ್ಯನವರ ಮನೆಗೆ ಬಂದ, ಬಾಗಿಲಿಗೆ ಬೀಗ ಹಾಕಿತ್ತು.

"ಎಲ್ಲಿ ಹೋದರೋ ಮುದುಕ? ನಾನು ಅಷ್ಟು ಕರೆದರೂ ಬರಲಿಲ್ಲ. ಮನೆಯೆಲ್ಲ ಸೋರಿ ನೀರು ನಿಂತಿತ್ತು. ಬೇಜಾರಾಗಿ ಎಲ್ಲೋ ಹೋಗಿದಾರೆ"

ಎಂದುಕೊಂಡು ಸ್ವಲ್ಪ ಹೊತ್ತು ಮುಚ್ಚಿದ್ದ ಬಾಗಿಲು ನೋಡುತ್ತ

ನಿಂತಿದ್ದು ತಿರುಗಿ ಹೊರಟು ಹೋದ.

ಮನೆಯಲ್ಲೂ ಅವನಿಗೆ ಅವರದೇ ಯೋಚನೆ ಅವನಿಗೇ ತಿಳಿಯದಂತೆ ಅವರ ಬಗೆಗೆ ಅವನಲ್ಲಿ ಒಂದು ರೀತಿಯಾದ ಆತ್ಮೀಯತೆ ಬೆಳೆದು ಬಂದಿತ್ತು. ಅವರ ನಡೆ ನುಡಿ ಎಲ್ಲದರಲ್ಲೂ ಒಂದು ಬಗೆಯ ದೊಡ್ಡಸ್ತಿಕೆ ಕಾಣಿಸುತ್ತಿತ್ತು. ಅವನು ಬೆರೆಯುತ್ತಿದ್ದ ಇತರ ಜನಗಳಿಗಿಂತ ಬೇರೆಯಾಗಿದ್ದರು ಅವರು ಅದೇ ಆ ಆಕರ್ಷಣೆಗೆ ಕಾರಣವಿರಬಹುದು

ಮಧ್ಯಾಹ್ನ ಅವರ ಮನೆಗೆ ಹೋಗಬೇಕೆಂದು ಗುಂಡಯ್ಯ ಯೋಚಿಸುತ್ತಿರುವಾಗಲೇ ಶ್ರೀನಾಥ ಅವನನ್ನು ಹುಡುಕಿಕೊಂಡು ಬಂದ

"ಬಾರಯ್ಯ ದೊರೆ, ಯಾವಾಗ ಬಂದೆ ?"

"ರಾತ್ರೆ ಬಂದೆ, ಈಗ ಪುನಃ ಬೆಂಗಳೂರಿಗೆ ಹೊರಟಿದ್ದೇನೆ. ಅಷ್ಟರಲ್ಲಿ ಒಂದ್ಸಲ ನಿನ್ನ ನೋಡಬೇಕೆಂದು ಬಂದೆ"

"ಸಂತೋಷಾಪ್ಪ, ಅಷ್ಟು ವಿಶ್ವಾಸ ಇಟ್ಟಿದೀಯಲ್ಲ ಓದಿ ದೊಡ್ಡ ಪರೀಕ್ಷೆ ಮಾಡಿದೆ, ಲಕ್ಷಾಧಿಕಾರಿಯಾಗುತ್ತಿದೀಯೆ ಆದರೂ ನಮ್ಮನ್ನು ಮರೆತಿಲ್ಲವಲ್ಲ ! ಇದೇನು ಇಷ್ಟು ಅವಸರ ? ನಿನ್ನೆ ರಾತ್ರೆ ಬಂದು ಈಗ ಹೊರಟಿದೀಯೆ ? ಒಂದು ತಿಂಗಳು ಇರ್ತಾನೆ ಎಂತ ನಿಮ್ಮ ಅಪ್ಪ ಹೇಳಿದ್ದರು"

"ಇರಬೇಕೆಂದೇ ಬಂದಿದೇನೆ, ಅಮ್ಮನಿಗೆ ಹುಷಾರಿಲ್ಲ. ಡಾಕ್ಟರು ಯಾವುದೋ ಔಷಧಿ ಬೇಕೆಂದು ಹೇಳಿದಾರೆ. ಇಲ್ಲಿ ಸಿಕ್ಕಲಿಲ್ಲ. ಅದನ್ನು ತರಬೇಕೆಂದು ಇಷ್ಟು ಬೇಗ ಬೆಂಗಳೂರಿಗೆ ಹೊರಟಿದೇನೆ"

"ಯಾವ ಔಷಧಿ ಹೇಳು ನಮ್ಮ ಅಯ್ಯನವರ ಅಂಗಡೀಲಿ ಸಿಕ್ಕಿದರೂ ಸಿಕ್ಕಬಹುದು ಕಳೆದವಾರ ಯಾರಿಗೋ ತರಿಸಿಕೊಟ್ಟಿದ್ದರು"

"ಯಾವುದಪ್ಪ ಈ ಹೊಸ ಅಂಗಡಿ ? ನಾನು ನೋಡೇ ಇಲ್ಲ"

"ನೀನು ನೋಡಲು ಕಾರಣವಿಲ್ಲ. ಅವರು ಈಗ ಹೊಸದಾಗಿ ಬಂದಿದಾರೆ. ಮನೇಲೇ ಒಂದು ಹೊಸ ಅಂಗಡಿ ತೆರೆದಿದಾರೆ. ಏನು ಬೇಕಾದರೂ ಅಲ್ಲಿ ಸಿಕ್ಕುತ್ತೆ"

"ಹಾಗಾದ್ರೆ ನೋಡೋಣ ನಡಿ ಔಷಧಿ ಇಲ್ಲೇ ಸಿಕ್ಕಿಬಿಟ್ಟರೆ ಬೆಂಗಳೂರಿಗೆ ಹೋಗೋದು ತಪ್ಪುತ್ತೆ"

ಇಬ್ಬರೂ ರಾಮಚಂದ್ರಯ್ಯನವರ ಮನೆಯತ್ತ ನಡೆದರು. ದಾರೀಲಿ

ಗುಂಡಯ್ಯ,

"ನಿನ್ನ ಮದುವೆಯ ವಿಚಾರ ಏನಾಯ್ತು ?" ಎಂದ

"ಇನ್ನೂ ಒಂದೂ ನಿಶ್ಚಯವಿಲ್ಲ. ಅಪ್ಪ ಮಾತ್ರ ಅದೇ ಆಗಬೇಕೆಂದು ಮನಸ್ಸು ಮಾಡಿಬಿಟ್ಟಿದಾರೆ"

"ಮಾಡದೆ ಉಂಟೆ ? ಲಕ್ಷಾಂತರರೂಪಾಯಿ ಆಸ್ತಿ ಬರುವಾಗ ! ಮನೆಗೆ ಬರುವ ಲಕ್ಷ್ಮಿಯನ್ನು ಯಾರು ಬೇಡ ಎಂತಾರೆ ? ನಿನ್ನ ಓದಿಗಾಗಿ ಅವರೇನು ಸ್ವಲ್ಪ ಸಾಲಮಾಡಿರುವರೇ ?"

"ಅದೆಲ್ಲಾ ಸರಿ, ಆದರೆ ನನಗೇ ಏಕೋ ಮನಸ್ಸಿಲ್ಲ. ಗುಂಡಣ್ಣ"

"ಯಾಕೋ ನಿನಗೇನು ರೋಗ ? ಕನ್ಯೆ ಚೆನ್ನಾಗಿಲ್ಲವೇ ?"

"ನಾನು ನೋಡಿದ್ದರೆ ತಾನೇ ನಿನಗೆ ಹೇಳೋದು ?"

"ಹುಡುಗೀನ ನೋಡದ ಮದುವೆ ಆಗ್ತೀಯೇನು ?"

"ಹಾಗೇನಿಲ್ಲ ಅಮ್ಮ ಹುಷಾರಾದಮೇಲೆ ನಾವೆಲ್ಲ ಒಂದು ದಿನ ಅವರ ಮನೆಗೆ ಹೋಗುವುದೆಂದು ತೀರ್ಮಾನವಾಗಿದೆ ಆದರೆ ನನಗೇ ಇಷ್ಟವಿಲ್ಲದಿರುವಾಗ ಹುಡುಗೀನ ನೋಡುವ ನಾಟಕ ಏಕೆ ? ಎಂತ ಯೋಚಿಸ್ತಿದೇನೆ"

"ನಿನಗೇಕೆ ಇಷ್ಟವಿಲ್ಲ ಕೇಳಬಹುದೆ ?"

"ಸ್ವಲ್ಪ ಯೋಚನೆ ಮಾಡು ಗುಂಡಣ್ಣ. ಜಮೀನ್ದಾರ ಹಿರಣ್ಣಯ್ಯನವರು ತಮ್ಮ ಒಬ್ಬಳೇ ಮಗಳನ್ನು ನಮ್ಮಂಥವರ ಮನೆಗೆ ಕೇಳಬೇಕಾದರೆ ಅದರಲ್ಲಿ ಏನೋ ಉದ್ದೇಶವಿರಬೇಕು ನಾವು ಯಾವರೀತಿಯಲ್ಲೂ ಅವರ ಮಟ್ಟಕ್ಕೆ ಬರಲಾರೆವು"

"ನೀನು ವಿದ್ಯಾವಂತ. ನಿನ್ನ ರ್‍ಯಾಂಕುಗಳು ನೀನು ಬುದ್ಧಿವಂತನೆಂದು ಸಾರಿ ಸಾರಿ ಹೇಳುತ್ತಿವೆ"

"ಶ್ರೀಮಂತ ವರ್ಗದಲ್ಲೂ ಬುದ್ಧಿ ಇರುವವರೂ, ವಿದ್ಯೆಗಳಿಸಿದವರೂ ಅನೇಕರಿದ್ದಾರೆ ನನ್ನ ಮೇಲೇಕೆ ಅವರ ದೃಷ್ಟಿ ಬಿತ್ತು ?"

"ಯಾರೋ ಜೋಯಿಸರು ನಿನ್ನ ಜಾತಕ ಬಹಳ ಚೆನ್ನಾಗಿದೆ ಅವರ ಮಗಳಿಗೆ ಅಷ್ಟು ಉತ್ತಮವಾದ, ಹೊಂದಿಕೆಯಾಗುವ ಜಾತಕ ಬೇರೆ ಸಿಗಲಾರದು ಎಂದು ಹೇಳಿಬಿಟ್ಟಿದಾರೆ. ಹಿರಣ್ಣಯ್ಯನವರಿಗೆ ಜಾತಕದಲ್ಲಿ ಬಹಳ ನಂಬಿಕೆ"

"ಇದೆಲ್ಲ ನಿನಗೆ ಹೇಗೆ ಗೊತ್ತು ?"

"ಹೇಗೆಂದರೆ ? ಎಲ್ಲರಿಗೂ ಗೊತ್ತು. ನಿನ್ನ ಮದುವೆಯ ವಿಷಯ ಈಗ ಊರಿನಲ್ಲಿ ಎಲ್ಲರ ಮನೆಮಾತಾಗಿದೆ. ರಾಮಚಂದ್ರಯ್ಯನವರ ಅಂಗಡಿಗೆ ಬರುವವರೊಡನೆ ಕೇಳಿ ನನಗೂ ಗೊತ್ತು."

"ಹಾಗಾದರೆ ಹುಡುಗಿಯ ವಿಷಯವೂ ಗೊತ್ತಿರಬೇಕಲ್ಲ ?"

"ಹಾಗೆಂದರೇನೋ ?"

"ಹುಡುಗಿ ಚೆನ್ನಾಗಿಲ್ಲವಂತೆ. ಸಾಕಷ್ಟು ತಲೆಯೂ ಬೆಳೆದಿಲ್ಲ. ಎಂದು ನನ್ನ ಸ್ನೇಹಿತ ಹೇಳಿದ"

"ನೋಡು . ಇದರಲ್ಲಿ ಬೇರೆಯವರ ಮಾತನ್ನು ಪೂರ್ತಿ ನಂಬಬಾರದು. ದೇವರು ನಮಗೆ ಕಣ್ಣು, ಬುದ್ಧಿ ಕೊಟ್ಟಿರೋದು ಏಕೆ ? ನಿನ್ನ ಸ್ನೇಹಿತ ನಿನಗೆ ಅದೃಷ್ಟ ಒಲಿಯುವುದು ಸಹಿಸಲಾರದೆ ಹೇಳಿರಬಹುದು. ಹಾಗೇನಾದರೂ ಇದ್ದರೆ ಇಷ್ಟು ಜನರ ಪೈಕಿ ಯಾರ ಬಾಯಿಯಲ್ಲಾದರೂ ಬರ್ತಿತ್ತು. ಇಂತಹ ಸುದ್ದಿಗಳನ್ನು ಮುಚ್ಚಿಡೋದು ಸಾಧ್ಯವೇ ?"

"ನಿನಗೆ ಅವರ ಪರಿಚಯವಿದೆಯೆ ಗುಂಡಣ್ಣ ?"

"ಇಲ್ಲಪ್ಪ, ಕೇಳಬಲ್ಲೆ. ಬಹಳ ದೊಡ್ಡ ಮನುಷ್ಯರು. ಅಂದರೆ ಒರಿಯ ದುಡ್ಡಿನಲ್ಲ ಮಾತ್ರ ಅಲ್ಲ. ಗುಣದಿಂದಲೂ ಅವರಿಗೆ ಸಮಾನರಿಲ್ಲ ಎಂದು ಹೇಳ್ತಾರೆ, ಜನ. ಆದರೇನು ? ಅವರಿಗೆ ಹೃದಯದ ಖಾಯಿಲೆ. ಯಾವ ಗಳಿಗೆಗೆ ಏನೋ ? ಅದಕ್ಕೇ ಮಗಳಿಗೆ ಮದುವೆ ಮಾಡುವ ಆತುರ"

"ಹಾಗಾದ್ರೇ . ನಾನು ಅಲ್ಲಿಗೆ ಹೋಗಿ ಹುಡುಗಿಯನ್ನು ನೋಡೋದೇ ವಾಸಿ ಅಂತೀಯಾ ?"

"ಹೂಂ .. ನನ್ನ ಅಭಿಪ್ರಾಯ ಅದೆ. ಮನಸ್ಸಿನಲ್ಲಿ ಯಾವ ಬೇಜಾರೂ ಇಟ್ಕೊಳ್ಳದೆ ಹೋಗು. ಆಮೇಲೆ ಮುಂದಿನ ಮಾತು. ಬೇಕಾದ್ರೆ ನಾನೂ ಜೊತೆಗೆ ಬರ್ತೀನಿ. ಇನ್ನೊಂದು ವಿಷಯ ಕೇಳಿದೆನಲ್ಲ ನಿಜವೇ ?"

"ಯಾವುದು ?"

ಮದುವೆಯಾದ ಕೂಡ್ಲೆ ನೀನು ಅಮೆರಿಕೆಗೆ ಹೋಗುವೆಯಂತಲ್ಲ ?"

"ಆ ಆಸೆ ನನಗೆ ಮೊದಲಿನಿಂದಲೂ ಇದೆ. ನನ್ನ ವಿದ್ಯೆಯ ಅಲ್ಲಿ ಮುಂದುವರೆಸಬೇಕೆಂದು ಎಂದಿನಿಂದಲೋ ನಿನಗೆ ಹೇಳ್ತಿದ್ದೆ"

"ಹಾಗಾದ್ರೆ ಈ ಸಂಬಂಧದಲ್ಲಿ ಅದೇ ದೊಡ್ಡ ಆಕರ್ಷಣೆ ಅಲ್ವೇ ?"

ಶ್ರೀನಾಥ ಮುಗುಳ್ನಗೆ ನಕ್ಕು ಸುಮ್ಮನಾದ. ಆ ವೇಳೆಗೆ ರಾಮಚಂದ್ರಯ್ಯನವರ ಮನೆ ಸಿಕ್ಕಿತು ಗುಂಡಯ್ಯ ಅದನ್ನು ಶ್ರೀನಾಥನಿಗೆ ತೋರಿಸುತ್ತ,

ಇದೇ ರಾಮಚಂದ್ರಯ್ಯನವರ ಅಂಗಡಿ. ಯಾಕೋ ಬಾಗಿಲು ತೆಗೆದಿಲ್ಲ. ಬೆಳಗ್ಗೆ ಬಂದಾಗ ಬೀಗಾನೇ ಹಾಕಿತ್ತು ಈಗ ಒಳಗಿರಬಹುದು " ಎಂದ

"ಇಷ್ಟು ಸಣ್ಣ ಮನೇಲಿ ಅಂಗಡಿ ಇಟ್ಟಿದ್ದಾರೆಯೇ? ನನಗೇನೋ ಇಲ್ಲಿ ಔಷಧಿ ಸಿಕ್ಕುವುದು ಅನುಮಾನ ನನ್ನ ಸುಮ್ಮನೆ ಇಷ್ಟು ದೂರ ಕರೆದುಕೊಂಡು ಬಂದೆ "

"ನೋಡೋಣ ಬಾಪ್ಪಾ ಈಗಲೇ ಔಷಧಿ ಸಿಕ್ಕಲ್ಲ ಎಂಬ ಸಿದ್ಧಾಂತ ಮಾಡ್ಬೇಡ "

ಬಾಗಿಲಿಗೆ ಒಳಗಿನಿಂದ ಅಗಣಿ ಹಾಕಿತ್ತು ಗುಂಡಯ್ಯ ಬಾಗಿಲು ಬಡಿದು 'ರಾಮಚಂದ್ರಯ್ಯ ' ಎಂದು ಕೂಗಿದ

ಎರಡು ಮೂರು ಸಲ ಕೂಗಿದ ಮೇಲೆ ನಾಗು ಒಳಗಿನಿಂದ ಬಂದಳು. ನಿದ್ರೆಮಾಡಿ ಎದ್ದಿದ್ದ ಆಲಸ್ಯವನ್ನು ಸೂಚಿಸುವ ಮುಖ. ಕೆದರಿದಂತಿದ್ದ ಮುಂಗುರುಳು ಅವಳು ಉಟ್ಟಿದ್ದ ಕರಿಯ ಮಡಿಸೀರೆ ಯಾವ ರೀತಿಯಲ್ಲೂ ಅವಳ ಚೆಲುವನ್ನು ಮುಚ್ಚಿಡಲಾರದೆ ನಾಚಿ ಮುದುರಿದಂತಿತ್ತು. ಬೆಳಗಿನಿಂದ ಎಷ್ಟು ಜನ ಹೀಗೆ ಬಾಗಿಲು ತಟ್ಟಿ ಕೂಗಿದರೋ ? ಬೇಸರ ಅವಳ ಮುಖದ ಮೇಲೆ ಕಾಣಿಸುತ್ತಿತ್ತು.

'ರಾಮಚಂದ್ರಯ್ಯ ಇಲ್ಲವೇ " ಗಂಡಣ್ಣ ಪ್ರಶ್ನಿಸಿದ

"ಇದಾರೆ . ಒಳಗೆ ಮಲಗಿದಾರ"

ನಾಗು ಬಾಗಿಲು ತೆಗೆಯುತ್ತ ಹೇಳಿದಳು

"ಹುಷಾರಿಲ್ಲವೇ ?"

"ಇಲ್ಲ ಬೆಳಗಿನಿಂದ ಅವರು ಎದ್ದೇ ಇಲ್ಲ. ರಾತ್ರಿ ಮಳೇಲಿ ನೆನೆದದ್ದು ವಿರೋಧವಾಯ್ತು"

"ನಾನು ಮನೆಗೆ ಬರುವಂತೆ ಕರೆದೆ, ಅವರು ಒಪ್ಪಲಿಲ್ಲ.'

ಇವರ ಮಾತು ನಡೆದಿದ್ದಾಗ ಶ್ರೀನಾಥ ಸಭ್ಯತೆಯನ್ನೂ ಮರೆತು. ನಾಗುವನ್ನು ನೋಡಿದ. ಅವನು ಮರೆತದ್ದು ಸಭ್ಯತೆ ಒಂದೇ ಅಲ್ಲ, ತಾನು

ಬಂದಿರುವುದು ತಾಯಿಯ ಓಷಧಿಗಾಗಿ ಎಂಬುದನ್ನೂ ಮರೆತಿದ್ದ.

ಅವನ ನೋಟದ ತೀಕ್ಷ್ಣತೆ ನಾಗೂನ ತಿವಿದಂತಾಯ್ತು. ನಿದ್ರೆಯ ಮುಬ್ಬಿನಿಂದ ಹೊರಗೆ ಬಂದು, ಮೊದಲ ಬಾರಿಗೆ ಗುಂಡಯ್ಯನ ಹಿಂಬಾಗದಲ್ಲಿ ನಿಂತಿದ್ದ ಶ್ರೀನಾಥನನ್ನು ಗಮನಿಸಿದಳು. ಒಂದು ಕ್ಷಣ ಅವಳ ನೋಟ ಅವನ ಮುಖದಲ್ಲಿ ನೆಟ್ಟಿತು. ಮರುಕ್ಷಣದಲ್ಲಿ, ಯಾರೋ ಹೊಸಬರು ಬಂದಿರುವಾಗ ತಾನು ಹೀಗೆ ಹೊರಗೆ ಬಂದೆನಲ್ಲ ಎನಿಸಿ, ಸಂಕೋಚವಾಯ್ತು. ಸರಗು ಸರಿ ಮಾಡಿಕೊಳ್ಳುತ್ತ ಗುಂಡಯ್ಯನಿಗೆ,

'ಒಳಗೆ ಬನ್ನಿ"

ಎಂದು ಕರೆದು ಸರ್ರನೆ ಒಳಕ್ಕೆ ಹೋದಳು.

ರಾಮಚಂದ್ರಯ್ಯ ಚಾಪೆಯ ಮೇಲೆ ಕಂಬಳಿ ಹೊದ್ದು ಮಲಗಿದ್ದವರು ಇವರನ್ನು ನೋಡಿ 'ಬನ್ನಿ ಬನ್ನಿ' ಎಂದು ಸ್ವಾಗತಿಸಿದರು.

"ಏನಾಯ್ತು ? ರಾತ್ರೆ ಹುಷಾರಾಗಿದ್ದಿರಲ್ಲ ?"

ಗುಂಡಯ್ಯ ಚಾಪೆಯ ಮೇಲೆ ಅವರ ಹತ್ತಿರ ಕುಳಿತುಕೊಳ್ಳುತ್ತ ಕೇಳಿದ. ಶ್ರೀನಾಥ ಸ್ವಲ್ಪ ದೂರದಲ್ಲಿ ಎದೆಯ ಮೇಲೆ ಕೈಕಟ್ಟಿ ನಿಂತಿದ್ದ.

"ಏನೋ ಸ್ವಲ್ಪ ಜ್ವರ, ಕೆಮ್ಮು, ಅಷ್ಟೆ. ಈ ಶೀತ ನನಗೆ ಆಗಲ್ಲ ವಯಸ್ಸಾಯ್ತು, ಸ್ವಲ್ಪ ಹಚ್ಚು ಕಡಿಮೆ ಆದರೆ ಅಷ್ಟೇ ಅಗಾಧವಾಗಿ ಬಿಡುತ್ತೆ. ಇವರು ಯಾರೋ ಗೊತ್ತಾಗಲಿಲ್ಲ"

"ಇವನು ನನ್ನ ಸ್ನೇಹಿತ ಶ್ರೀನಾಥ, ಮೇಷ್ಟ್ರು ಶ್ರೀಕಂಠಯ್ಯನವರ ಮಗ"

"ನಮಸ್ಕಾರ, ಕೂತ್ಕೊಳ್ಳಿಪ್ಪ ನಾಗೂ ಇನ್ನೊಂದು ಚಾಪೆ ತಗೊಂಡು ಬಾಮ್ಮ. ಇವರೇನೇ ಶ್ರೀಕಂಠಯ್ಯನವರ ಮಕ್ಕಳು ? ಒಂದೆರಡು ದಿನದಲ್ಲಿ ಬರ್ತಾರೆ ಎಂತ ಯಾರೋ ಹೇಳಿದರು. ನಿಮ್ಮ ಪರಿಚಯವಾದದ್ದು ಸಂತೋಷ. ಅಕಸ್ಮಾತ್ ಬಡವರ ಮನೆಗೆ ಬಂದಿರಿ"

ರಾಮಚಂದ್ರಯ್ಯ ಉಪಚಾರಕ್ಕೆ ಆ ಮಾತು ಆಡಿರಲಿಲ್ಲ. ಶ್ರೀನಾಥನನ್ನು ನೋಡಿ ಆನಂದದಿಂದ ಅವರ ಮುಖ ಅರಳಿತ್ತು.

ನಾಗು ಒಳಗಿನಿಂದ ಒಂದು ಚಾಪೆ ತಂದು ಹಾಸಿದಳು. ಶ್ರೀನಾಥ ಅದರ ಮೇಲೆ ಸ್ವಲ್ಪ ದೂರದಲ್ಲಿ ಕುಳಿತುಕೊಂಡು ತನ್ನ ಸುತ್ತ ಕಣ್ಣಾಡಿಸಿ

ನೋಡಿದ ನಾಗು ತಂದೆಯ ಬಳಿ ಇದ್ದ ಲೋಟವನ್ನು ಎತ್ತಿಕೊಂಡು ಒಳಗೆ ಹೊರಡುವುದರಲ್ಲಿದ್ದಳು. ನಾಗುವಿನ ಕೈಲಿ ಪಾತ್ರೆ ನೋಡಿದೊಡನೆಯೇ ಗುಂಡಯ್ಯನಿಗೆ ಹಿಂದಿನ ರಾತ್ರಿ ಕುಡಿದಿದ್ದ ಕಾಫಿಯ ನೆನಪಾಗಿ ಬಾಯಲ್ಲಿ ನೀರೂರಿತು.

"ತಾಯಿ ನಾಗಮ್ಮ ರಾತ್ರಿ ಎಂಥಾ ಸೊಗಸಾದ ಕಾಫಿಕೊಟ್ಟೆ ! ಇನ್ನೂ ನಾಲಿಗೆ ರುಚಿ ಹೋಗಿಲ್ಲ. ರಾಮಚಂದ್ರಯ್ಯ ನಿಜವಾಗಿ ಪುಣ್ಯವಂತರು ಬೇಕೆನಿಸಿದಾಗ ನಿನ್ನ ಕೈಲಿ ಅಂಥ ಕಾಫಿ .."

ರಾಮಚಂದ್ರಯ್ಯನಿಗೆ ಆ ಪೀಠಿಕೆ ಅರ್ಥವಾಯ್ತು. ಮಗಳ ಕಡೆ ನೋಡಿ,

"ಹಾಲಿದ್ದರೆ ಎರಡು ಬಟ್ಟಲು ಕಾಫಿ ಮಾಡ್ತೀಯ ?"

–ಎಂದು ನಗುತ್ತ ಕೇಳಿದರು.

ಅವರ ತಾಪತ್ರಯ ಏನೋ ? ಈ ಗುಂಡಣ್ಣ ಶುದ್ಧ ಒರಟ. ಎಂದುಕೊಂಡ ಶ್ರೀನಾಥ, ರಾಮಚಂದ್ರಯ್ಯನಿಗೆ,

"ಬೇಡ . ಬೇಡ. ಈಗೇಕೆ ಕಾಫಿ ? ಸುಮ್ಮನೆ ತೊಂದರೆ" ಎಂದ.

"ಸಧ್ಯ ನೀನು ಸುಮ್ನಿರು ಮಾರಾಯ. ನನಗೂ ಕಾಫಿ ಇಲ್ಲದಂತೆ ಮಾಡ್ಬೇಡ ಇವತ್ತು ನಾಗಮ್ಮನ ಕೈ ಕಾಫಿ ರುಚಿನೋಡು ನಾಳೆ ನಿನ್ನ ಈ ವೇದಾಂತ ಎಲ್ಲಿ ಓಡುತ್ತೊ ?"

"ಇರಲಿ ಬಿಡಿ. ಹೇಗೂ ನನಗೂ ಬೇಕಾಗಿತ್ತು. ನಿಮ್ಮ ಜೊತೆ ನನಗೂ ಆಗುತ್ತೆ "

–ಎಂದು ರಾಮಚಂದ್ರಯ್ಯ ಉಪಾಯವಾಗಿ ಹೇಳಿದರು.

"ನೋಡಿ ...ರಾತ್ರಿಯೆಲ್ಲ ನನಗೆ ಸರಿಯಾಗಿ ನಿದ್ರೆ ಬರಲಿಲ್ಲ. ಮನೆಯೆಲ್ಲ ಸೋರಿನಿಂತಿತ್ತು. ನೀವಿಬ್ಬರೂ ಎಷ್ಟು ಪಾಡು ಪಡುವಿರೋ ? ಎಂದು ಯೋಚನೆಯಾಯ್ತು."

"ಅದು ನಿಮ್ಮ ವಿಶ್ವಾಸ"

"ಬೆಳಗ್ಗೆ ಎದ್ದವನೇ ಜನಾರ್ದನಯ್ಯನ ಮನೆಗೆ ಹೋಗಿ, ಜಗಳವಾಡಿ ಬಂದೆ. ಶುದ್ಧ ಜುಗ್ಗ ಅವನು, ಬಾಡಿಗೆ ಮಾತ್ರಾ ಬೇಕು, ಅವರ ಅನುಕೂಲ ನೋಡಬೇಡವೇ ? ಈಗ ಬರ್ರೋದಾಗಿ ಹೇಳಿದಾನೆ"

"ಪಾಪ ...ಅವರು ತಾನೇ ಏನು ಮಾಡ್ತಾರೆ? ನಾವು ಬರೋದಕ್ಕೆ ಮುಂಚೆ ಎಲ್ಲ ರಿಪೇರಿ ಮಾಡ್ಸಿದ್ದರಂತೆ"

"ಸುಮ್ಮನೆ ಮೇಲೆ ಮೇಲೆ ಕೈ ಆಡಿಸಿ ಬಿಟ್ಟರೆ ಆಯ್ತೆ? ಅವನು ಸರಿಯಾಗಿ ಕಾಸುಬಿಚ್ಚಿ ಕೆಲಸ ಮಾಡ್ಸಿದ್ದರೆ ಮನೆ ಹೀಗಿರ್‍ತಿತ್ತೆ?"

"ನಾವು ಕೊಡೋ ದುಡ್ಡಿಗೆ ಇನ್ನು ಯಾವ ಅರಮನೆ ಸಿಕ್ಕೀತು?"

"ಒಳ್ಳೆಯ ತರ್ಕ ನಿಮ್ಮದು, ಹಾಗಂತ ಮಳೆಯ ನೀರೆಲ್ಲಾ ಮನೆಯ ಒಳಗೇ ಬೀಳ್ತಿದ್ದರೆ ಹೇಗೆ ಸ್ವಾಮಿ? ಮತ್ತಾಗಿದ್ದರೆ ಈ ಕಾಲದಲ್ಲಿ ಯಾವುದೂ ನಡೆಯಲ್ಲ ಬಾಯಿ ಮಾಡಿದರೆ ಬದುಕಬಹುದು"

ರಾಮಚಂದ್ರಯ್ಯನ ಮುಖದಲ್ಲಿ ನಗು ಕಾಣಿಸಿತು. ಕೂಡಲೇ ಕೆಮ್ಮು ಷುರುವಾಗಿ ಮುಖ ಮುದುರಿ ನಗು ಅಲ್ಲೇ ಮರೆಯಾಯ್ತು ಅವರು ಕೆಮ್ಮುವ ರೀತಿ ನೋಡಿ ಗುಂಡಯ್ಯನಿಗೆ ಹೆದರಿಕೆಯಾಯ್ತು ಎಲ್ಲಿ ಉಸಿರು ಸಿಕ್ಕಿಕೊಳ್ಳುವುದೋ ಎನ್ನುವಂತೆ ಅವರು ಒಂದೇಸನು ಕೆಮ್ಮುತ್ತಿದ್ದರು.

ಒಂದು ತಟ್ಟೆಯಲ್ಲಿ ಕಾಫಿ ಬಟ್ಟಲುಗಳನ್ನು ಇಟ್ಟುಕೊಂಡು ಬರ್‍ತಿದ್ದ ನಾಗು, ತಟ್ಟೆಯನ್ನು ಮೇಜಿನ ಮೇಲಿಟ್ಟು, ಬೇಗ ತಂದೆಯ ಬಳಿಗೆ ಓಡಿ ಬಂದಳು ಅವರನ್ನು ಮೆಲ್ಲಗೆ ಎಬ್ಬಿಸಿ ಕೂರಿಸಿ, ಬೆನ್ನು ಸವರುತ್ತ,

"ರಾಮಾ!" ಎಂದಳು.

"ಹೆದರ್‍ಬೇಡ ಮಗು, ರಾಮ ಎಂದಿಗೂ ಕೈಬಿಡೋದಿಲ್ಲ"

ಕೆಮ್ಮಿನ ನಡುವೆಯೇ ತಂದೆ ಮಗಳಿಗೆ ಧೈರ್ಯ ಹೇಳಿದರು

"ಅಣ್ಣ ..ಡಾಕ್ಟರನ್ನು ಕರೆಸೋಣ"

"ಡಾಕ್ಟರೇ ? ಅವರು ಸುಮ್ಮನೆ ಬರ್‍ತಾರೆಯೆ? ಸಂಜೆಯ ಹೊತ್ತಿಗೆ ಜ್ವರ ಬಿಟ್ಟಿದ್ದರೆ ನಾನೇ ಷಾಪಿನವರೆಗೆ ಹೋದರಾಯ್ತು"

ಶ್ರೀನಾಥನಿಗೆ ತಾನು ಬಂದುದು ಔಷಧಿಗಾಗಿ ಎಂದು ತಟ್ಟನೆ ನೆನಪಾಯ್ತು. ಗುಂಡಯ್ಯನ ಗಮನವೆಲ್ಲ ಕಾಫಿಯ ಕಡೆಗೇ ಇತ್ತು. ತಂದಿರುವ ಕಾಫಿ ಕೊಡದೆ ಈ ಹುಡುಗಿ ಹೀಗೆ ಕೂತು ಬಿಟ್ಟಳಲ್ಲ ಕಾಫಿ ಆರಿಸರೆ ಏನು ಚೆನ್ನ? ಎಂದು ತನ್ನಷ್ಟಕ್ಕೆ ಯೋಚಿಸುತ್ತಿದ್ದ.

ತಂದೆ ಕಷ್ಟಪಡುವುದನ್ನು ನೋಡಿ ನಾಗುವಿಗೆ ಕಣ್ಣೀರು ಬಂದಿತ್ತು. ತಲೆ ತಗ್ಗಿಸಿ ಕುಳಿತು ಅವರ ಬೆನ್ನು ಸವರುತ್ತಿದ್ದಳು.

ಕೆಮ್ಮು ಕಡಿಮೆ ಆಯ್ತು, ರಾಮಚಂದ್ರಯ್ಯ ಸ್ವಲ್ಪ ಸುಧಾರಿಸಿಕೊಂಡು "ಕಾಫಿ ಆರಿ ಹೋಗುತ್ತಲ್ಲ ನಾಗು" ಎಂದು ಎಚ್ಚರಿಸಿದರು.

ನಾಗು ಎದ್ದು ಎಲ್ಲರಿಗೂ ಕಾಫಿ ಕೊಟ್ಟಳು ಕಾಫಿ ಕುಡಿದ ಮೇಲೆ ಶ್ರೀನಾಥನಿಗೆ ಗುಂಡಯ್ಯನ ಹೊಗಳಿಕೆ ಸತ್ಯ ಎನಿಸಿತು. ರಾಮಚಂದ್ರಯ್ಯನವರ ಬಡತನದಲ್ಲಿ ಈ ಮಗಳು ಎಂತಹ 'ಭಾಗ್ಯ' ಎಂದುಕೊಂಡ

"ಬೆಳಗ್ಗೆ ನಾನು ಎದ್ದವನೇ ಇಲ್ಲಿಗೆ ಬಂದಿದ್ದ, ಮನಸ್ಸು ನಿಲ್ಲಲಿಲ್ಲ ಆದರೆ ಬಾಗಿಲಿಗೆ ಬೀಗ ಹಾಕಿತ್ತು."

ಗುಂಡಯ್ಯ ಮೆಲ್ಲಗೆ ಮಾತು ತೆಗೆದ, ಅಯ್ಯನವರು ಅಷ್ಟು ಬೇಗ ಎಲ್ಲಿ ಹೋಗಿದ್ದರೆಂದು ತಿಳಿಯುವ ಕುತೂಹಲ ಅವನಿಗೆ

"ಬೆಳಗ್ಗೇನೇ ..? ಓ ಆಗ ತಿರುಗಾಡೋಣವೆಂದು ಸ್ವಲ್ಪ ದೂರ ಹೋಗಿದ್ದೆ- ನಾಗುವಿಗೆ ಇಡೀ ರಾತ್ರೆ ನಿದ್ರೆ ಇಲ್ಲ. ನೀರು ಸೋರದೇ ಇದ್ದ ಒಂದು ಮೂಲೇಲಿ ಕುಳಿತೇ ರಾತ್ರೆ ಕಳೆದಿದ್ದೆವು. ನೆಲ ಆರಿದಮೇಲೆ ಬೆಳಗಿನ ಝಾವದಲ್ಲಿ ಹುಡುಗಿ ಆಗತಾನೇ ಕಣ್ಣು ಮುಚ್ಚಿದ್ದಳು. ಅವಳನ್ನು ಎಬ್ಬಿಸೋದು ಏಕೆ ಎಂತ ಹೊರಗಿನಿಂದ ಬಾಗಿಲು ಹಾಕಿಕೊಂಡು ಹೋಗಿದ್ದೆ. ಆಗಲೇ ನೀವು ಬಂದಿರಬೇಕು"

"ಒಂದು ದಿನ್ನ ತಿರುಗಾಡೋದನ್ನ ಬಿಡಲಾರಿರಾ? ಬೆಳಗ್ಗೆಯೂ ತುಂತುರು ಮಳೆ ಇದ್ದೇ ಇತ್ತು"

"ಏನು ಮಾಡೋದು ಸ್ವಾಮೀ, ಬಹಳ ದಿನದ ಅಭ್ಯಾಸ. ಬಿಡೋದು ಕಷ್ಟ. ಅಲ್ಲಿಂದ ಬಂದವನೇ ಮಲಗಿಬಿಟ್ಟೆ. ಆ ಹುಡುಗಿಗೆ ಬೆಳಗಿನಿಂದ ಒಂದು ಘಳಿಗೆಯೂ ಬಿಡುವಿಲ್ಲ. ಯಾರಾದರೂ ಸಾಮಾನಿಗಾಗಿ ಬರ್‍ತಾನೇ ಇದಾರೆ. ಬಂದ ಗಿರಾಕೀನ ಕಳಿಸಿಬಿಟ್ಟರೆ ವ್ಯಾಪಾರ ನಡೀಬೇಕಲ್ಲ?"

ಶ್ರೀನಾಥನಿಗೆ ಮತ್ತೊಮ್ಮೆ ಔಷಧಿಯ ನೆನಪಾಯ್ತು. ತನ್ನ ಜೇಬಿನಿಂದ ಚೀಟಿ ತೆಗೆದು,

"ಈ ಔಷಧಿ ನಿಮ್ಮಲ್ಲಿದೆಯೆ?" ಎಂದು ಕೇಳಿದ.

ರಾಮಚಂದ್ರಯ್ಯ ಅದನ್ನು ನೋಡಿಕೊಂಡು,

"ಇರಬೇಕು, ಕಳೆದವಾರ ತರಿಸಿದ್ದೆ, ಅದರಲ್ಲಿ ಇನ್ನೂ ಒಂದೆರಡು ಬಾಟಿಲ್ ಇರಬೇಕು." ಎಂದು ಹೇಳಿ, 'ನಾಗೂ' ಎಂದು ಮಗಳನ್ನು ಕೂಗಿದರು

" ಏನಣ್ಣಾ ಕರೆದದ್ದು ? "

" ಈ ಔಷಧಿ ಇದೆಯೇ ನೋಡಮ್ಮ ? "

ನಾಗೂ ಚೀಟಿ ಕೈಗೆ ತೆಗೆದುಕೊಂಡು ನೋಡಿ ' ಇದೆ 'ಎಂದಳು

" ತಂದು ಕೊಡಮ್ಮ "

ನಾಗು ಅಂಗಡಿಯಂತಿದ್ದ ಮನೆಯ ಭಾಗಕ್ಕೆ ಹೋಗಿ, ಬೀರುವಿನಿಂದ ಒಂದು ಶೀಷೆ ತಂದಳು. ರಾಮಚಂದ್ರಯ್ಯ ಅದನ್ನು ತಿರುಗಿಸಿ ನೋಡಿ ಶ್ರೀನಾಥನಿಗೆ ಕೊಟ್ಟು, ಮಗಳನ್ನು

"ಇನ್ನೂ ಎಷ್ಟಿದೆಯಮ್ಮ ?"

–ಎಂದು ಕೇಳಿದರು.

"ಇನ್ನು ಒಂದು ಶೀಷೆ ಇದೆ"

"ಬೆಲೆ ಎಷ್ಟು ?"

–ಶ್ರೀನಾಥ ಕೇಳಿದ

"ಅದರ ಮೇಲೇ ಬರೆದಿದೆ ನೋಡಿ"

–ನಾಗು ಹೇಳಿದಳು.

"ಆರೂ ಕಾಲು ; ನನ್ನ ಹತ್ತಿರ ಎರಡು ರೂಪಾಯಿ ಮಾತ್ರ ಇದೆ. ಬಾಕಿ ನಾಳೆ ತಂದುಕೊಟ್ಟರೆ ಆದೀತೇ ?"

"ಅಯ್ಯೋ ಅದಕ್ಕೇನಂತೆ ಬಿಡಿ. ದುಡ್ಡು ಎಲ್ಲಿ ಹೋಗುತ್ತೆ ?"

–ಎಂದು ರಾಮಚಂದ್ರಯ್ಯ ಹೇಳಿದರು.

"ನಿಮ್ಮಲ್ಲಿ ಔಷಧಿ ಸಿಕ್ಕಿದ್ದು ಬಹಳ ಅನುಕೂಲವಾಯ್ತು. ಇಲ್ಲದಿದ್ದರೆ ನಾನು ಬೆಂಗಳೂರಿಗೆ ಓಡಬೇಕಾಗಿತ್ತು. ಖರ್ಚೂ ಉಳೀತು ; ಶ್ರಮವೂ ತಪ್ಪಿತು. ಇನ್ನೊಂದು ಬಾಟಲ್ ಹಾಗೇ ಇಟ್ಟರಿ, ನಾಳೆ ಬರುವಾಗ ಡಾಕ್ಟರನ್ನು ಕೇಳಿಕೊಂಡು ಬಂದು ಅದನ್ನೂ ತಗೋತೇನೆ. ಆಮೇಲೆ ಪುನಃ ಬೇಕಾದರೆ ?"

"ನೀವೇನೂ ಯೋಚಿಸ್ಬೇಡಿ, ಎಷ್ಟು ಬೇಕಾದ್ರೂ ತರಿಸಿ ಕೊಡ್ತೀನಿ"

–ರಾಮಚಂದ್ರಯ್ಯ ಹೇಳಿದರು.

"ಇನ್ನು ಹೊರಡೋಣವೆ ಗುಂಡಣ್ಣ ? ಪಾಪ....ಅವರು ಸ್ವಲ್ಪ ವಿಶ್ರಾಂತಿ ಪಡೆಯಲಿ."

ಶ್ರೀನಾಥ ಎದ್ದುನಿಂತ. ರಾಮುಚಂದ್ರಯ್ಯನಿಗೆ ಕೈ ಮುಗಿದು, ಒಳ ಬಾಗಿಲಿನಲ್ಲಿ ನಿಂತಿದ್ದ ನಾಗುವಿಗೂ ಕೈ ಜೋಡಿಸಿ ಹೊರಟ. ಗುಂಡಯ್ಯ ಅವನನ್ನು ಹಿಂಬಾಲಿಸಿ ಬಂದವನು,

"ನೋಡು ಶ್ರೀನಾಥ. ..ನೀನು ಎಷ್ಟಾದರೂ ಓದಿದೋನು ಅದಕ್ಕೇ ಬರುವಾಗ ಆ ಹುಡುಗಿಗೂ ಕೈ ಮುಗಿದು ಬಂದೆ. ನಾನು ದಿನಾ ಬರ್‍ತಿದ್ದರೂ ನನಗೆ ಅದು ತೋರಿರಲಿಲ್ಲ ಆ ಹುಡುಗಿ 'ಇವನೆಲ್ಲೋ ಹಳ್ಳಿಯ ಗುಗ್ಗು ಎಂದು ಕೊಂಡಿರ್‍ತಾಳೆ' ಎಂದ

"ಅವರೂ ಹಳ್ಳಿಯವರೆ"

"ಅಲ್ಲಪ್ಪ ಅವರಿನ್ನೂ ಮೊನ್ನೆ ಮೊನ್ನೆ ಬಂದವರು ಭೀಮಾವರದ ಕಡೆಯವರಂತೆ ಹುಡುಗಿ ಇಲ್ಲಿಗೆ ಬರುವವರೆಗೆ ಕಾಲೇಜಿನಲ್ಲಿ ಕಲೀತಿದ್ದಳಂತೆ"

"ನನಗೂ ಹಾಗೇ ತೋರಿತು ಕೇವಲ ಅಪ್ಪನಿಗೆ ಅನ್ನ ಬೇಯಿಸಿ ಹಾಕುತ್ತ ಕುಳಿತಿರುವ ಹುಡುಗಿಯಲ್ಲ ಎಂದು ನೋಡಿದ ಕೂಡಲೇ ಗೊತ್ತಾಯ್ತು ಬಹಳ ಚುರುಕಾಗಿದಾಳೆ ಹುಡುಗಿ, ಬೂದಿ ಮುಚ್ಚಿದ ಕೆಂಡದಂತೆ ಎಂದು ಯಾರಿಗಾದರೂ ಎನಿಸೀತು. ಅಲ್ಲದೆ ಬಹಳ ಲಕ್ಷಣವಾಗಿ ..."

"ಹೋ ..ಹೋ....ಸಿದಾನ ಮಗು. ವರ್ಣನೆಗೇ ಮೊದಲು ಮಾಡಿದೆ ಯಲ್ಲ, ನಿಮ್ಮ ಅಪ್ಪ ನಿನಗೆ ಲಗ್ನದ ಏರ್ಪಾಡು ಮಾಡ್ತಿದಾರೆ ಅನ್ನೋದು ಮರೆತು ಹೋಯ್ತೆ? ಅಲ್ಲದೆ ರಾಮುಚಂದ್ರಯ್ಯ ಬಹಳ ಬಡವರು ನಿಮ್ಮ ತಂದೆ ಅವರನ್ನು ಕಣ್ಣೆತ್ತಿ ನೋಡಲಿಕ್ಕೇ ಇಲ್ಲ."

"ನೀನು ಇಲ್ಲದ ಅರ್ಥ ಮಾಡಬೇಡ ಗುಂಡಣ್ಣ, ಚೆನ್ನಾಗಿರೋದನ್ನ ಚೆನ್ನಾಗಿದೆ ಎಂದರೆ ತಪ್ಪೆ ?"

"ದೂರದ ಮೆಚ್ಚಿಕೆಯಾದರೆ ಬಾಧಕವಿಲ್ಲ."

* * *

ಔಷಧಿಯ ದುಡ್ಡನ್ನು ಜೇಬಿಗೆ ಹಾಕಿಕೊಂಡು, ಶ್ರೀನಾಥ ಮಾರನೇ ದಿನ ರಾಮುಚಂದ್ರಯ್ಯನ ಮನೆಗೆ ಹೊರಟ. ಗುಂಡಯ್ಯನ ಮನೆಯ ಮುಂದೆ ಬಂದಾಗ ಅವನ ಹೆಂಡತಿ ಬಾಗಿಲಲ್ಲೇ ನಿಂತಿದ್ದಳು.

"ಗುಂಡಣ್ಣ ಇಲ್ಲವೇ ?" ಶ್ರೀನಾಥ ಕೇಳಿದ.

"ಇಲ್ಲ. ಈಗ ಸ್ವಲ್ಪ ಹೊತ್ತಿನಲ್ಲಿ ಹೊರಗೆ ಹೋದರು" ಎಂದಳು.

ಶ್ರೀನಾಥ ಬಂದಾಗ ಅಂಗಡಿಯ ಬಾಗಿಲು ತೆಗೆದಿತ್ತು. ನಾಗು ಅಲ್ಲಿ ಬಂದಿದ್ದ ಹುಡುಗಿಗೆ ಏನೋ ಸಾಮಾನನ್ನು ಪೊಟ್ಟಣ ಕಟ್ಟಿ ಕೊಡುತ್ತಿದ್ದವಳು ಅವನನ್ನು ನೋಡಿ ನಸುನಕ್ಕು 'ಬನ್ನಿ' ಎಂದಳು.

ಶ್ರೀನಾಥ ಒಳಗೆ ಬಂದು ಅಲ್ಲಿದ್ದ ಜಾಯಿಕಾಯಿ ಮರದ ಪೆಟ್ಟಿಗೆಯ ಮೇಲೆ ಕುಳಿತುಕೊಂಡ ಸಾಮಾನು ತೆಗೆದುಕೊಂಡು ಹುಡುಗಿ ಹೊರಟು ಹೋದಳು ಶ್ರೀನಾಥ ಜೇಬಿನಿಂದ ದುಡ್ಡು ತೆಗೆದು ಅವಳ ಮುಂದಿಟ್ಟ.

"ನಿಮ್ಮ ತಂದೆಯವರು ಹೇಗಿದ್ದಾರೆ ?"

–ಎಂದು ವಿಚಾರಿಸಿದ.

"ಇವತ್ತು ಸ್ವಲ್ಪ ವಾಸಿ, ಜ್ವರ ಕಡಿಮೆಯಾಗಿದೆ. ಆದರೆ ಇನ್ನೂ ಕೆಮ್ಮು ನಿಂತಿಲ್ಲ. ಅದರದ್ದೇ ತೊಂದರೆ, ಒಂದುಸಲ ಕೆಮ್ಮು ಬಂದರೆ ಸುಧಾರಿಸಿ ಕೊಳ್ಳೊಕೆ ಒಂದು ಘಂಟೆ ಬೇಕು"

"ಸಾಯಂಕಾಲ ಡಾಕ್ಟರ ಹತ್ತಿರ ಹೋಗಿದ್ದರೆ ?"

"ಇಲ್ಲ .ಅವರಿಗೆ ಏಳಲಿಕ್ಕೇ ಆಗಲಿಲ್ಲ. ನಾನೇ ಹೋಗಿ ಔಷಧಿ ತಂದೆ"

"ಇವತ್ತೂ ಹೋಗ್ಬೇಕೆ ?"

"ಹೂಂ . ಈಗ ಹೋಗ್ತೇನೆ"

"ನೀವು ತಪ್ಪು ತಿಳಿಯದಿದ್ದರೆ ನಾನು ಒಂದು ಮಾತು ಹೇಳ್ತೀನಿ"

"ಹೇಳಿ ..ಅದಕ್ಕೇನು ?"

"ನೀವು ಔಷಧಿಗೆ ಹೋದರೆ ಇಲ್ಲಿ ಅವರ ಹತ್ತಿರ ಯಾರು ಇರ್ತಾರೆ?"

"ಯಾರೂ ಇಲ್ಲ, ಬಾಗಿಲು ಮುಂದೆ ಮಾಡ್ಕೊಂಡು ಹೋಗ್ತೀನಿ ಅಕಸ್ಮಾತ್ ಗುಂಡಯ್ಯನವರು ಬಂದರೆ ಅವರು ಅಣ್ಣನ ಹತ್ತಿರ ಇರ್ತಾರೆ"

"ಆ ಚೀಟಿ ಕೊಟ್ಟರೆ ನಾನು ಹೋಗಿ ಔಷಧಿ ತಂದುಕೊಡ್ತೀನಿ."

"ಬೇಡ ಸುಮ್ಮನೆ ನಿಮಗೆ ತೊಂದರೆ"

"ತೊಂದರೆಯೇನಿಲ್ಲ, ನಾನು ಹೇಗೂ ಅಲ್ಲಿಗೇ ಹೊರಟಿದ್ದೇನೆ ನಮ್ಮ ತಾಯಿಗೆ ಔಷಧಿ ತರಬೇಕು. ಜೊತೇಲಿ ಇದನ್ನೂ ತಂದರಾಯ್ತು."

"ನಿಮ್ಮ ತಾಯಿಯವರಿಗೆ ಹುಷಾರಿಲ್ಲವೆ ?"

"ಇಲ್ಲ. ಅವರಿಗೆಂದೇ ರಾತ್ರಿ ಔಷಧಿ ತೆಗೆದುಕೊಂಡದ್ದು.ಎರಡು ಹೊತ್ತು ತೆಗೆದುಕೊಂಡಿದಕ್ಕೇ ಅವರಿಗೆ ಎಷ್ಟೋ ಅನುಕೂಲವಾಗಿದೆ. ನಿಮ್ಮ ಹತ್ತಿರ ಇರೋದನ್ನೂ ನನಗೇ ಕೊಟ್ಬಿಡಿ. ಅದಕ್ಕೂ ಸೇರಿಸಿ ದುಡ್ಡು ತಂದಿದೇನೆ"

ನಾಗು ದುಡ್ಡು ತೆಗೆದುಕೊಂಡು ಒಳಗಿಟ್ಟು ಔಷಧಿ ತಂದುಕೊಟ್ಟಳು. ಶ್ರೀನಾಥ ರಾಮಚಂದ್ರಯ್ಯನ ಔಷಧಿ ಚೀಟಿಯನ್ನು ತೆಗೆದುಕೊಂಡು ಡಾಕ್ಟರ ಷಾಪಿಗೆ ಹೋದ.

ಮೂರನೇದಿನ ನಾಗು ತಂದೆಗಾಗಿ ಸ್ವೆಟರ್ ಹೆಣೆಯುತ್ತ ಕುಳಿತಿದ್ದಳು. ನಡುನಡುವೆ ತಲೆ ಎತ್ತಿ ತಂದೆಯೊಡನೆ ಮಾತಾಡುತ್ತಿದ್ದಳು. ಆಗ ಇದ್ದಕ್ಕಿದಂತೆ ಶ್ರೀನಾಥ ಬಂದು ಬಾಗಿಲು ತಟ್ಟಿದ. ನಾಗು ಬಾಗಿಲು ತೆಗೆದಾಗ ಅವನೊಡನೆ ಡಾಕ್ಟರೂ ಇದ್ದರು. ಅವಳಿಗೆ ಸ್ವಲ್ಪ ಆಶ್ಚರ್ಯವಾದರೂ, ಅದನ್ನು ತೋರಿಸಿಕೊಳ್ಳದೆ ಎಂದಿನಂತೆ ನಗುಮುಖದಿಂದ,

"ಬನ್ನಿ" ಎಂದು ಒಳಗೆ ಕರೆದುಕೊಂಡು ಹೋದಳು.

ರಾಮಚಂದ್ರಯ್ಯ ಹಾಸಿಗೆ ಸುರುಳಿಗೆ ಒರಗಿಕೊಂಡು ಕುಳಿತಿದ್ದರು. ಡಾಕ್ಟರನ್ನು ನೋಡಿದಕೂಡಲೆ ಶ್ರೀನಾಥ ಅವರನ್ನು ಕರೆದುಕೊಂಡು ಬಂದಿರಬೇಕೆಂದು ತೋರಿತು.

"ಹೇಗಿದ್ದೀರಿ ?"

ಡಾಕ್ಟರು ವಿಚಾರಿಸಿದರು.

"ಜ್ವರ ಬಿಟ್ಟಿದೆ. ಆದರೂ ಬಹಳ ನಿತ್ರಾಣ ಎದ್ದು ನಿಲ್ಲುವುದೇ ಸಾಧ್ಯವಿಲ್ಲ. ಎಲ್ಲ ಹೊರೆಯನ್ನು ಹುಡುಗಿಯ ಹೆಗಲಮೇಲೆ ಹಾಕಿ ಬಿಟ್ಟು, ಹಾಸಿಗೆಗೇ ಗಂಟು ಬಿದ್ದಿದೇನೆ"

"ಒಂದು ಇಂಜಕ್ಷನ್ ತಗೋತೀರಾ ?"

ತಂದೆ ಮಗಳ ಮುಖ ನೋಡಿದರು.

"ಅಗತ್ಯವಿದ್ದರೆ ಕೊಡಿ, ಅವರೇನೂ ಬೇಡ ಎನ್ನಲ್ಲ"

ಎಂದು ಅವರ ಪರವಾಗಿ ಶ್ರೀನಾಥ ತಾನೇ ಉತ್ತರ ಕೊಟ್ಟ. ತಂದೆಯಾಗಲೀ ಮಗಳಾಗಲೀ ಬಾಯಿಬಿಡಲು ಅವಕಾಶವನ್ನೇ ಕೊಡಲಿಲ್ಲ.

ಡಾಕ್ಟರು ಇಂಜಕ್ಷನ್ ಚುಚ್ಚಿ, ಚೀಟಿಯಲ್ಲಿ ಒಂದು ಟಾನಿಕ್ಕಿನ ಹೆಸರು ಬರೆದುಕೊಟ್ಟು,

"ನೀವೇ ಔಷಧಿಗಳನ್ನು ತರಿಸುವಿರಂತೆ, ನಿಮ್ಮಲ್ಲಿ ಇದು ಇದ್ದರೆ ತಗೊಳ್ಳಿ" ಎಂದರು

ಶ್ರೀನಾಥ ಡಾಕ್ಟರನ್ನು ಬಾಗಿಲುವರೆಗೆ ಕಳಿಸಿ ಹಿಂದಕ್ಕೆ ಒಂದ ರಾಮಚಂದ್ರಯ್ಯ ಕೈನೀಡಿ ಅವನನ್ನು ಹತ್ತಿರ ಕೂರಿಸಿಕೊಂಡರು.

"ಏಕೆ ಇಷ್ಟೆಲ್ಲ ತೊಂದರೆ ತಗೋತೀರಿ ಶ್ರೀನಾಥ ? ಡಾಕ್ಟರನ್ನು ಕರೆಯದಿದ್ದರೂ ನಡೀತಿತ್ತು" ಎಂದರು.

"ತೊಂದರೆ ಏನಿಲ್ಲ, ನಮ್ಮ ತಾಯೀನ ನೋಡಲು ಬಂದಿದ್ದರು. ಹಾಗೇ ಇಲ್ಲಿಗೂ ಕರೆದುಕೊಂಡು ಬಂದೆ. ಮನುಷ್ಯರು ಒಬ್ಬರಿಗೊಬ್ಬರು ನೆರವಾಗದಿದ್ದರೆ ಹೇಗೆ . .?"

"ಹಾಗಲ್ಲ .ಅವರು ಮನೆಗೆ ಬಂದರೆ ಕೈತುಂಬ ಫೀಸು ಕೊಡಬೇಕು. ನಮ್ಮ ಸ್ಥಿತಿ ನಿಮಗೇ ಗೊತ್ತೆ ಇದೆ."

"ಅದನ್ನು ನಿಮ್ಮ ಕೈಲಿ ಕೊಡಿಸುವುದಿಲ್ಲ."

"ಅದು ನನಗೆ ಗೊತ್ತು, ಅದಕ್ಕೇ ಹೇಳ್ತಿರೋದು ನಿಮ್ಮ ತಂದೆ ಏನೆಂದಾರು ?"

"ನಾನು ದುಡ್ಡಿಗಾಗಿ ಅವರನ್ನು ಕೇಳಲ್ಲ ನನಗೆ ಮುಂಬಯಿಯಿಂದ ಕೆಲಸಕ್ಕೆ ಆರ್ಡರ್ ಬಂದಿದೆ"

"ಕೆಲಸವಾಯ್ತೇ ? ಬಹಳ ಸಂತೋಷ. ದೇವರು ನಿಮ್ಮನ್ನು ಕಾಪಾಡಲಿ. ನೀವು ಅಲ್ಲಿಗೆ ಯಾವಾಗ ಹೊರಡ್ತೀರಿ ?"

"ಇನ್ನೂ ಹತ್ತು ಹನ್ನೆರಡು ದಿವಸ ಅವಕಾಶವಿದೆ"

ನಾಗು ಮೂರು ಬಟ್ಟಲಿನಲ್ಲಿ ಕಾಫಿ ತಂದಳು. ಈ ದಿನ ತಂದೆ ಹೇಳಲೆಂದು ಕಾಯಲಿಲ್ಲ. ಅವರಿಬ್ಬರಿಗೂ ಕೊಟ್ಟು ತಾನೂ ಕುಡಿದಳು. ಕಾಫಿಯನ್ನು ಸವಿಯುತ್ತ ಶ್ರೀನಾಥ,

"ಗುಂಡಣ್ಣ ಯಾಕೋ ಬರಲಿಲ್ಲ, ಅವನಿಗೆ ನಿಮ್ಮ ಮನೆ ಕಾಫಿ ಎಂದರೆ ಬಹಳ ಮೆಚ್ಚಿಗೆ" ಎಂದ

"ಯಾಕೋ ಅವರು ಮೂರುದಿನದಿಂದ ಬಂದಿಲ್ಲ ಊರಿನಲ್ಲಿದಾರೋ ಇಲ್ಲವೋ ? ಅವರು ಇದ್ದರೆ ನಾಗೂಗೆ ಸ್ವಲ್ಪ ಅನುಕೂಲವಾಗಿತ್ತು. ಅವಳಿಗೆ ನನ್ನ ಸೇವೆಯೇ ಸಾಕಾಗಿದೆ. ಅಂಗಡಿಯ ಹೊರೆಯಾದರೂ ತಪ್ಪುತ್ತಿತ್ತು"

"ನಾನು ಬೇಕಾದ್ರೆ ಆ ಕೆಲಸ ಮಾಡಬಲ್ಲೆ"

"ಲಕ್ಷಣವಾಯ್ತು, ನಿಮ್ಮಂತಹ ಓದಿರೋರನ್ನ ಅಂಗಡಿ ಮುಂದೆ ಕೂರಿಸಲಿ? ನೋಡಿದವರು ಏನೆಂದಾರು ?"

"ಅಂಗಡಿಮುಂದೇಕೆ ಕೂತಿರ್ಬೇಕು? ಯಾರಾದರೂ ಬಂದಾಗ ಸಾಮಾನು ಕೊಟ್ಟುಬಿಟ್ಟು, ನಿಮ್ಮ ಹತ್ತಿರವೇ ಮಾತಾಡ್ತಿರೋದು"

ಆ ಮಾತಿಗೆ ತಂದೆ ಮಗಳು ಇಬ್ಬರೂ ನಕ್ಕರು

ರಾಮಚಂದ್ರಯ್ಯ ನಿದಾನವಾಗಿ ಚೇತರಿಸಿಕೊಳ್ಳುತ್ತಿದ್ದರು. ಆ ಅವಧಿಯಲ್ಲಿ ಶ್ರೀನಾಥ ದಿನವೂ ಅಲ್ಲಿಗೆ ಬರ್‍ತಿದ್ದ. ತಂದೆ ಮಗಳ ಸಹವಾಸದಲ್ಲಿ ಅವನಿಗೆ ದಿನ ಕಳೆದುದೇ ಗೊತ್ತಾಗುತ್ತಿರಲಿಲ್ಲ. ಹುಡುಗರಿಬ್ಬರೂ ನಗುತ್ತ ಮಾತಾಡುತ್ತಿದ್ದರೆ ಅವನ್ನು ನೋಡುತ್ತ ರಾಮಚಂದ್ರಯ್ಯ,

"ನರಳುತ್ತ ಮಲಗಿರುವುದರಲ್ಲೂ ಸುಖವಿದೆ"

ಎಂದುಕೊಳ್ಳುತ್ತಲಿದ್ದರು

ಶ್ರೀನಾಥ ಹೊರಡುವ ದಿನ ಹತ್ತಿರವಾದಂತೆ ಮನೆಯಲ್ಲಿ ಅವನ ಪ್ರಯಾಣಕ್ಕೆ ಸಿದ್ಧತೆ ನಡೆಯುತ್ತಿತ್ತು. ಅವನ ತಾಯಿ ಹುಷಾರಾಗಿ ಈಗ ಓಡಾಡುತ್ತಿದ್ದರು ತಂದೆ ಅವನಿಗೆ ಹೇಳಿದರು,

"ಹಿರಣ್ಣಯ್ಯನವರು ಕಾಗದ ಬರೆದಿದಾರೆ ಅವರ ಮನೆಗೆ ನಾವು ಎಂದು ಹೋಗೋಣ? ನೀನು ಹೊರಡುವುದರಲ್ಲಿ ಒಂದು ನಿಶ್ಚಯವಾಗಿಬಿಟ್ಟರೆ, ಒಂದೆರಡು ತಿಂಗಳು ಬಿಟ್ಟು ನಿನಗೆ ರಜೆ ಸಿಕ್ಕಿದಾಗ ಲಗ್ನಮಾಡಬಹುದು"

"ಈಗಲೇ ಅಲ್ಲಿಗೆ ಹೋಗೋದು ನನಗೆ ಇಷ್ಟವಿಲ್ಲ"

ಮಗ ನುಡಿದ.

"ಅವರನ್ನು ಕಾಯಿಸೋದು ಚೆನ್ನಾಗಿರಲ್ಲ"

"ಅವರಿಗೆ ಅಷ್ಟು ಆತುರವಾದರೆ ಬೇರೆ ಕಡೆ ನೋಡಿಕೊಳ್ಳಲಿ"

"ಎರಡು ಕಾಸು ಸಂಪಾದಿಸುವ ಹಾಗಾಯ್ತೆಂದು ಈಗ ಅಷ್ಟು ಜಂಭ ಮಾಡಬಾರದಪ್ಪ. ಅವರಿಗೆ ಅಂದಿನಿಂದಲೂ ಬರುವುದಾಗಿ ಹೇಳಿ ಬಿಟ್ಟು ಈಗ ಹೋಗದೇ ಇದ್ದರೆ ಏನೆಂದುಕೋತಾರೆ ?"

"ಅದಕ್ಕೆ ನಾನು ಹೊಣೆಯ? ನನಗೆ ಆ ಸಂಬಂಧ ಇಷ್ಟವಿಲ್ಲ ದೊಡ್ಡವರ ಸಹವಾಸ ನಮಗೆ ಬೇಡ. ನಮ್ಮ ಅಂತಸ್ತಿಗೆ ತಕ್ಕಂತೆ ಯಾವುದಾದ್ರೂ.."

"ಅಯ್ಯೋ ..ನಾನು ಹೇಳಲಿಲ್ವೇ ? ಎರಡು ಹೊತ್ತೂ ಆ ಮುದುಕನ ಅಂಗಡೀಲಿ ಅವನ ಮಗಳೊಡನೆ ಚಕ್ಕಂದ ಆಡ್ತಾ ಕೂತಿರ್ತಾನೆ, ಎಂತ ನೆರೆ ಹೊರೆಯುವರೆಲ್ಲ ಹೇಳಿದರು ನಾನು ನಂಬಿರಲಿಲ್ಲ, ನನ್ನ ಮಗ ಅಂಥವನಲ್ಲ ಎಂದು ದಬಾಯಿಸಿಬಿಟ್ಟೆ. ಮನೆಗೆ ಬರೋ ಲಕ್ಷ್ಮೀನ ಬಿಟ್ಟುಬಿಟ್ಟು, ಯಾವುದೋ ಹುಡುಗೀನ ...ಈ ಪಾಪಿಗೆ ಅಂಥ ಒದೃಷ್ಟ ಎಲ್ಲಿ ಬಂಬೇಕು ?"

ಮುಂದೆ ಮಾತಾಡಲಾರದೆ ಆಕೆ ಗಳಗಳನೆ ಅತ್ತುಬಿಟ್ಟರು.

"ನೀನು ಸುಮ್ನಿರೇ . ಮಗೂ ಒಂದು ಸಲ ಅಲ್ಲಿಗೆ ಹೋಗಿ ಬರೋಣ ಹುಡುಗಿ ನಿನಗೆ ಒಪ್ಪಿಗೆಯಾಗದಿದ್ದರೆ, ನಿನ್ನ ಬಲವಂತ ಮಾಡಲ್ಲ'

ಶ್ರಿನಾಥನಿಗೆ ಏನು ಹೇಳಬೇಕೋ ಗೊತ್ತಾಗಲಿಲ್ಲ. ಅಷ್ಟರಲ್ಲಿ ಗುಂಡಯ್ಯ ಅಲ್ಲಿಗೆ ಬಂದ. 'ಬದುಕಿದೆ' ಎಂದುಕೊಂಡು ಶ್ರೀನಾಥ ಹೊರಗೆ ಜಾರಿದ

"ಗುಂಡಣ್ಣ ಒಳಗೆ ಬಾಪ್ಪ. ನೀನಾದ್ರೂ ಇವನಿಗೆ ಬುದ್ಧಿ ಹೇಳು" ತಾಯಿ ಕೂಗಿದರು.

"ಹೊರಗೆ ತಿರುಗಾಡಿಕೊಂಡು ಬರೋವಾಗ ಬರ್ತಾನೆ ಅಮ್ಮ"

ಶ್ರೀನಾಥ ಅಲ್ಲಿಂದಲೇ ಕೂಗಿ ಗುಂಡಯ್ಯನೊಡನೆ ಬೀದಿಗಿಳಿದ.

"ಏನೋ ಇದು ಅವಾಂತರ ?"ದಾರಿ ತುಳಿಯುತ್ತ ಗುಂಡಯ್ಯ ಕೇಳಿದ.

"ಹಿಂಣ್ಣಯ್ಯನವರ ಮನೆಗೆ ಹುಡುಗಿ ನೋಡಲು ಹೋಗ್ಬೇಕಂತೆ"

"ಹೋಗು ನಿನಗೆ ಒಪ್ಪಿಗೆ ಆಗದಿದ್ರೆ ಆಗಲ್ಲ ಎಂದು ಹೇಳ್ಬಿಡು ಅದಕ್ಕೇಕೆ ಇಷ್ಟು ರಾದ್ಧಾಂತ ?"

"ನನಗೆ ವ ನಸ್ಸಿಲ್ಲ, ಹಾಗೆಲ್ಲಾ ಸುಮ್ಮನೆ ಹೋಗಬಾರ್ದು. ಕಂಡವರ ಮನೆಯ ಹೆಣ್ಣುಮಕ್ಕಳೆಂದರೆ ಅಷ್ಟು ಅಗ್ಗವೇ ?"

"ನಿನಗೆ ಬುದ್ಧಿ ಇಲ್ಲ"

ಇಬ್ಬರೂ ರಾಮಚಂದ್ರಯ್ಯನ ಮನೆಯ ಹತ್ತಿರ ಬಂದರು. ಬಾಗಿಲಿಗೆ ಬೀಗ ಹಾಕಿತ್ತು.

"ಆರೇ ..ಎಲ್ಲಿ ಹೋದ್ರೋ ಅಯ್ಯನೋರು?"–ಗುಂಡಯ್ಯನಿಗೆ ಆಶ್ಚರ್ಯ

"ಅವರೆಲ್ಲಿ ಹೋಗ್ತಾರೆ ? ಇಲ್ಲೇ ಎಲ್ಲಾದ್ರೂ ತಿರುಗಾಡಲು ಹೋಗಿ ದ್ದಾರು. ನೀನೆಲ್ಲಿ ಹೋಗಿದ್ದೆ ಮಹರಾಯ ? ನಿನ್ನ ನೋಡಿ ಎಷ್ಟು ದಿನ ವಾಯ್ತು ? ರಾಮಚಂದ್ರಯ್ಯ ದಿನವೂ ಜ್ಞಾಪಿಸಿಕೋತಿದ್ರು"

"ನೀನು ...? ದಿನ ಇಲ್ಲಿಗೆ ಬರ್ತಿದ್ದೆಯ ?"

"ಇನ್ನೇನು ಮಾಡೋದು ? ಆತ ಹಾಸಿಗೆ ಹಿಡಿದು ಮಲಗಿ ಬಿಟ್ಟರು. ಮನೇಲಿ ನಾಗು ಒಬ್ಬಳೆ."

"ಓಹೋ ...ಆಗ್಩ೇ 'ನಾಗು' ಎನ್ನುವಷ್ಟು ಸಲಿಗೆ ಬಂದುಬಿಟ್ಟಿದೆ"

ಶ್ರಿನಾಥ ನಕ್ಕು ಬಿಟ್ಟ.

"ನೀನು ಹೇಳದೆ ಕೇಳದೆ ಎಲ್ಲಿ ಹೋಗಿದ್ದೆ ?" ಎಂದು ಮಾತು ಬದಲಿಸಿದ

"ಬೆಂಗಳೂರಿನಲ್ಲಿ ಸ್ವಲ್ಪ ಕೆಲಸವಿತ್ತು. ನಿಂತ ಘಳಿಗೇಲಿ ಹೊರಟು ಬಿಟ್ಟೆ. ಯಾರಿಗೂ ತಿಳಿಸಕ್ಕೂ ಆಗ್ಲಿಲ್ಲ. ಅಯ್ಯನೋರು ಈಗ ಹುಷಾರಾಗಿ ದಾರೆ ತಾನೇ ?"

ಶ್ರೀನಾಥ ಬಾಯಿ ಬಿಡುವ ಮೊದಲೇ ಮನೆಯ ಮುಂದೆ ದೊಡ್ಡದಾದ ಕಾರು ಬಂದು ನಿಂತಿತು. ನಾಗು ಮೊದಲು ಇಳಿದವಳು ಕೈಹಿಡಿದು ತಂದೆಯನ್ನು ಇಳಿಸಿಕೊಂಡಳು. ಅವಳು ಅದೇ ಹಳೆಯ ನೂಲಿನ ಸೀರೆ ಉಟ್ಟಿದ್ದರೂ, ರಾಣಿಗೆ ಒಪ್ಪುವ ಠೀವಿ ಅವಳು ಕಾರಿನಿಂದ ಇಳಿದಾಗ ಕಾಣಿಸಿತು.

ರಾಮಚಂದ್ರಯ್ಯ ಮೆಲ್ಲಗೆ ನಡೆಯುತ್ತ ಹತ್ತಿರ ಬಂದರು. ಕಾರು ಹೊರಟು ಹೋಯ್ತು.

"ಶ್ರೀನಾಥ ಎಷ್ಟು ಹೊತ್ತಾಯ್ತು ಬಂದು ? ಎಲ್ಲಿ ಹೋಗಿದ್ದಿರಿ ಗುಂಡಯ್ಯ ?"

ಎಂದು ಇಬ್ಬರನ್ನೂ ಒಟ್ಟಿಗೆ ಮಾತಾಡಿಸಿದರು.

ನಾಗು ಬೀಗ ತೆಗೆದಳು, ಎಲ್ಲರೂ ಒಳಗೆ ಹೋದರು. ಅವರಿಬ್ಬರ ಕಣ್ಣಿನಲ್ಲಿ ಕಾಣಿಸುತ್ತಿದ್ದ ಪ್ರಶ್ನೆ ಗಮನಿಸಿ ರಾಮಚಂದ್ರಯ್ಯ ತಾವೇ ಹೇಳಿದರು ;

"ಹಿರಣ್ಣಯ್ಯನವರು ಹೇಳಿಕಳಿಸಿದ್ದರು, ಅಲ್ಲಿಗೆ ಹೋಗಿದ್ದೆವು"

"ಅವರು ತಮಗೆ ಗೊತ್ತೆ ?"

ಗುಂಡಯ್ಯ ಆತುರದಿಂದ ಕೇಳಿದ.

"ಗೊತ್ತಿಲ್ಲದೆ ಏನು ? ಚೆನ್ನಾಗಿ ಗೊತ್ತು. ಮಗಳ ಮದುವೆ ಮಾಡಲು ಓಡಾಡ್ತಿದ್ದಾರೆ. ನನಗೆ ಹುಷಾರಿಲ್ಲವೆಂದು ಗೊತ್ತಾಯ್ತಂತೆ. ಕಾರು ಕಳಿಸಿದ್ದರು."

"ಅವರ ಮಗಳ ಹೆಸರೇನು ?"

"ನಾಗರತ್ನ, ರತ್ನ ..ರತನ್ ಎಂದೆಲ್ಲ ಕರೀತಾರೆ"

"ಹೇಗಿದಾಳೆ ಸ್ವಾಮಿ ಹುಡುಗಿ ?"

ಗುಂಡಯ್ಯನಿಗೆ ಕುತೂಹಲವನ್ನು ತಡೆಯುವ ಅಭ್ಯಾಸವೇ ಇರಲಿಲ್ಲ. ರಾಮಚಂದ್ರಯ್ಯ ನಕ್ಕುಕೇಳಿದರು,

"ಗುಂಡಯ್ಯ, ಏನು ಸಮಾಚಾರ? ಹುಡುಗಿಯ ವಿಷಯಕ್ಕೆ ಇಷ್ಟು ಆಸಕ್ತಿ?"

"ನನ್ನ ಸ್ನೇಹಿತರೊಬ್ಬರಿಗೆ ಆ ಹುಡುಗೀನ ಕೇಳಿದ್ದರು. ಅದಕ್ಕೆ ಕೇಳ್ದೆ ಅಷ್ಟೆ. ದೊಡ್ಡವರ ಮನೆ ಹುಡುಗಿ ಚೆನ್ನಾಗಿಯೇ ಇರಬೇಕು"

"ನೋಡಿ, ಅದನ್ನು ನಾನು ಹೇಳೋದು ಕಷ್ಟ. ಹೆಣ್ಣುಮಕ್ಕಳ ರೂಪು ನೋಡುವವರ ದೃಷ್ಟೀನ ಅವಲಂಬಿಸಿದೆ. ನನಗೆ ನಾಗು ಬೇರೆ ಅಲ್ಲ. ರತ್ನ ಬೇರೆ ಅಲ್ಲ. ನಮ್ಮ ಮಕ್ಕಳು ಹೇಗಿದ್ದರೂ ಚೆಂದ. ಈಗ ಯಾರಾದರೂ ನನ್ನ, 'ನಿಮ್ಮ ಹುಡುಗಿ ಹೇಗಿದಾಳೆ?' ಎಂದು ಕೇಳಿದ್ರೆ .. 'ನಮ್ಮ ಹುಡುಗಿಯಷ್ಟು ಲಕ್ಷಣವಾಗಿರೋರನ್ನ ಬೇರೆ ನೋಡಿಲ್ಲ' ಎಂದೇ ಹೇಳಬೇಕಾಗುತ್ತೆ ಪ್ರೇಮ ಕುರುಡು ಎಂದು ಕೇಳಿಲ್ಲವೇ? ನೀವು ಏನಂತೀರಿ ಶ್ರೀನಾಥ್.....?"

ಶ್ರೀನಾಥ್ ನಕ್ಕುಬಿಟ್ಟ. ಇಂತಹ ಮಾತುಗಳಿಗೆ ಉತ್ತರ ಹೇಳುವುದಕ್ಕಿಂತ, ಮೌನವಾಗಿರುವುದೇ ಕ್ಷೇಮ ಎಂದು ಅವನು ತಿಳಿದಿದ್ದ.

ನಾಗು ಒಳಗಡೆ ತಟ್ಟೆ ಬಟ್ಟಲುಗಳ ಸದ್ದು ಮಾಡುತ್ತಿದ್ದಳು. ಅದನ್ನು ಕೇಳಿಯೇ ಗುಂಡಯ್ಯನ ಮುಖ ಅರಳಿತು. ಸ್ವಲ್ಪ ಹೊತ್ತಿನಲ್ಲಿ ಕಾಫಿ ಬಂತು. ನಾಗು ಒಂದು ಬಟ್ಟಲನ್ನು ಗುಂಡಯ್ಯನಿಗೆ ಕೊಡುತ್ತ,

"ಕಾಫಿ ಕುಡಿಯುವಾಗಲೆಲ್ಲ ನಿಮ್ಮ ನೆನಪಾಗುತ್ತಿತು." ಎಂದಳು

"ನಾನಿಲ್ಲದಿದ್ದರೇನು? ಶ್ರೀನಾಥ ಇದ್ದನಲ್ಲ "

"ನಿಮ್ಮ ಸ್ನೇಹಿತರಿಗೆ ನಿಮ್ಮಷ್ಟು ಕಾಫಿಯ ಹಂಬಲವಿಲ್ಲ, ಅವರೆಂದೂ ನನ್ನ ಕಾಫಿ ಮೆಚ್ಚಿಕೊಂಡಿಲ್ಲ"

"ಅವನ ಹಂಬಲ ಬೇರೆ ಇರಬಹುದು. ಹಾಗೇ ಮೆಚ್ಚಿಗೆಯೂ ಬೇರೆಯೇ ಇರಬಹುದು."

ಅಲ್ಲಿಗೆ ಬಂದಾಗಿನಿಂದ ಅವರ ಕಣ್ಣುಗಳ ಮೂಕ ಸಂಭಾಷಣೆಯನ್ನು

ಗಮನಿಸಿದ್ದ ಗುಂಡಯ್ಯ ಹೇಳಿದ. ಮತ್ತೆ ರಾಮಚಂದ್ರಯನನ್ನು ಉದ್ದೇಶಿಸಿ,

"ಪೂರಾ ಮಲಗಿದ್ದಿರಂತೆ, ಶ್ರೀನಾಥ ಹೇಳಿದ. ನಾನು ಯಾವುದೋ ತರಲೆ ವ್ಯಾಜ್ಯ ಕಟ್ಕೊಂಡು ಬೆಂಗಳೂರಿಗೆ ಹೋಗಿಬಿಟ್ಟೆ. ಎಷ್ಟು ತೊಂದರೆಯಾಯ್ತೋ ನಿಮಗೆ?" ಎಂದ.

"ತೊಂದರೆ ಏನೋ ಆಯ್ತು. ನಿಮ್ಮನ್ನ ನೆನೆಸದೆ ಇದ್ದ ದಿನವೇ ಇಲ್ಲ. ನಿಮ್ಮ ಸ್ನೇಹಿತರನ್ನು ಪರಿಚಯ ಮಾಡಿಕೊಟ್ಟಿದ್ದು ಬಹಳ ಉಪಕಾರವಾಯ್ತು. ಅವರು ಆ ಹೊತ್ತಿನಲ್ಲಿ ಮಾಡಿದ ಸಹಾಯ ಈ ಜನ್ಮದಲ್ಲಿ ಮರೆಯುವಂತಿಲ್ಲ"

ರಾಮಚಂದ್ರಯ್ಯ ಸರಳವಾಗಿ ಮಾತಾಡಿದರು.

"ಉಪಕಾರ ಮಾಡುವವರೆಲ್ಲ ಕೇವಲ ನಿಸ್ವಾರ್ಥ ಬುದ್ಧಿಯಿಂದಲೇ ಮಾಡ್ತಾರೆಂದು ಹೇಳಲಿಕ್ಕಾಗಲ್ಲ. ಅಲ್ಲದೆ ಮನುಷ್ಯರಿಗೆ ಕೃತಜ್ಞತೆಯನ್ನು ತೋರಿಸಕೊಳ್ಳಲು ಹಲವು ದಾರಿಗಳಿವೆ"

ಗುಂಡಯ್ಯ ಅರ್ಥಗರ್ಭಿತವಾಗಿ ನುಡಿದ. ಅದನ್ನು ಕೇಳಿದ ನಾಗುವಿನ ಕೆನ್ನೆಗಳು ಗುಲಾಬಿಯಂತಾದುವು.

ಶ್ರೀನಾಥ ಅವನನ್ನು ತಿವಿದು ಎಬ್ಬಿಸಿ,

"ಗುಂಡಣ್ಣ ಹೊರಡೋಣ"

—ಎಂದು ಅವಸರಪಡಿಸಿದ.

ಗೆಳೆಯರಿಬ್ಬರೂ ಹೊರಟರು. ಸ್ವಲ್ಪದೂರ ಹೋದಮೇಲೆ ಶ್ರೀನಾಥ,

"ಗುಂಡಣ್ಣ, ಅಮ್ಮ ನಿನ್ನ ನೋಡಬೇಕೆನ್ನುತ್ತಿದ್ದರು. ಈಗ ನಮ್ಮ ಮನೆಗೇ ಹೋಗೋಣ. ನೀನು ಹೆಜ್ಜೆ ಹಾಕ್ತಿರು, ಐದು ನಿಮಿಷದಲ್ಲಿ ಬಂದು ಬಿಡ್ತೀನಿ. ರಾಮಚಂದ್ರಯ್ಯನವರಿಗೆ ಔಷಧಿ ಕಡೇದು ಸ್ವಲ್ಪ ಚಿಲ್ಲರೆ ಕೊಡಬೇಕಾಗಿತ್ತು, ಮರೆತೇ ಬಿಟ್ಟಿದ್ದೆ"

ಎಂದು ಗುಂಡಯ್ಯನ ಹತ್ತಿರ ಹೇಳಿ, ಅವನ ಉತ್ತರಕ್ಕಾಗಿ ಕಾಯದೆ ಶ್ರೀನಾಥ ಹಿಂದಿರುಗಿ ರಾಮಚಂದ್ರಯ್ಯನವರ ಮನೆಗೆ ಬಂದ. ಅವನ ಹೆಜ್ಜೆಯ ಸದ್ದು ಕೇಳಿ ಅವರು ತಲೆ ತಿರುಗಿಸಿ ನೋಡಿದರು.

"ಏನು ಶ್ರೀನಾಥ ಪುನಃ ಬಂದಿರಲ್ಲ. ಏನಾದರೂ ಹೇಳುವುದಿತ್ತೆ?"

"ನಿನ್ನೆ ನಿಮ್ಮೊಡನೆ ಪ್ರಸ್ತಾಪ ಮಾಡಿದ್ದೆನಲ್ಲ ಆ ವಿಷಯ, ಯೋಚನೆ

ಮಾಡಿದಿರ ? ನಾಗೂನ ಕೇಳಿ ಇವತ್ತು ಉತ್ತರ ಕೊಡುವುದಾಗಿ ಹೇಳಿದ್ದಿರಿ. ಗುಂಡಣ್ಣನ ಎದುರಿಗೆ ಕೇಳಲು ಸಂಕೋಚವಾಯ್ತು. ಅಲ್ಲದೆ ನಮ್ಮ ತಂದೆ ಯಂತೆ ಅವನೂ ಹಿರಣ್ಣಯ್ಯನವರ ಪಕ್ಷಪಾತಿಯೆ !"

ರಾಮಚಂದ್ರಯ್ಯ ಏನೋ ಯೋಚಿಸುತ್ತ ಒಂದು ಕ್ಷಣ ಸುಮ್ಮನಿದ್ದರು. ನಾಗು ಹೆಣಿಗೆ ಸಾಮಾನು ಎತ್ತಿಕೊಂಡು ಒಳಗೆ ಹೋಗುತ್ತ ಶ್ರೀನಾಥನ ಕಡೆಗೆ ನಗುವಿನ ಸಮ್ಮೋಹನಾಸ್ತ್ರ ಬೀರಿದಳು. ಅದರಿಂದ ಶ್ರೀನಾಥ ಎಚ್ಚೆತ್ತು ಕೊಳ್ಳುವ ಮೊದಲೇ ರಾಮಚಂದ್ರಯ್ಯ ಹೇಳಿದರು,

"ನಿಮಗೆ ಮಗಳನ್ನು ಕೊಡಲು ನನಗೆ ಬಹಳ ಸಂತೋಷ. ಈ ಮುಪ್ಪಿ ನಲ್ಲಿ ನಿಮ್ಮಂತಹ ಮಗ ದೊರೆತದ್ದು ನನ್ನ ಭಾಗ್ಯ. ಆದರೆ ನಿಮ್ಮ ಹಿರಿಯರು ಇದಕ್ಕೆ ವಿರೋಧವಾಗಿದಾರೆ. ಕೊನೆಯವರೆಗೆ ಅವರಿಂದ ದೂರವಾಗಬೇಕಾಗ ಬಹುದು ನೀವು ಇದರ ಯೋಚನೆ ಮಾಡಿರುವಿರಾ?"

"ಮಾಡಿದೇನೆ. ಅವರು ಕೊನೆಯವರೆಗೆ ದೂರವಾಗುವುದಿಲ್ಲ. ಹಿರಣ್ಣಯ್ಯ ನವರ ಆಸ್ತಿ ಅವರನ್ನು ಮರುಳುಗೊಳಿಸಿದೆಯೇ ಹೊರತು, ನಿಮ್ಮ ಮೇಲೆ ಅವರಿಗೆ ದ್ವೇಷವಿಲ್ಲ ಆಸ್ತಿ ಸಿಗುವುದಿಲ್ಲವೆಂದು ಖಂಡಿತವಾದ ಮೇಲೆ ಸರಿ ಹೋಗ್ತಾರೆ ನಾವೂ ನಿಮ್ಮಂತೆ ಬಡವರೆ"

"ನಿಮ್ಮಿಷ್ಟ ಹಾಗಿದ್ದರೆ ನನ್ನ ಅಭ್ಯಂತರವೇನಿಲ್ಲ"

"ನಾಗು ಏನೆಂದಳು ?"

"ಅವಳನ್ನೇ ಕೇಳಿ"

"ಇನ್ನೊಂದು ಮಾತು, ನಿಮಗೆ ಈಗಲೇ ತಿಳಿಸೋದು ಒಳ್ಳೆಯದು."

"ಹೇಳಿ, ಅದಕ್ಕೇಕೆ ಸಂಕೋಚ ?"

"ನನ್ನ ಮದುವೆಯಾದರೂ ನಾಗು ಇನ್ನೂ ಕೆಲವು ದಿವಸ ಬಡತನದ ಬಾಳನ್ನು ಅನುಭವಿಸಬೇಕು. ತಂದೆ ನನ್ನ ಓದಿಗಾಗಿ ಬಹಳ ಸಾಲ ಮಾಡಿದಾರೆ. ಅಲ್ಲದೆ ಸಂಸಾರವೂ ದೊಡ್ಡದು. ಅದು ತೀರುವವರೆಗೆ ನನ್ನ ಸಂಬಳವೆಲ್ಲ ನನ್ನದು ಎಂದು ನಾನು ಹೇಳಿಕೊಳ್ಳುವಂತಿಲ್ಲ. ಅವಳಿಗೆ ಅದು ಒಪ್ಪಿಗೆಯೆ?"

"ನ್ಯಾಯವಾದುದಕ್ಕೆ ಎಲ್ಲರೂ ಒಪ್ಪಬೇಕು"

"ನಿಮಗೆ ನಾಗುವನ್ನು ಬಿಟ್ಟರೆ ಬೇರೆ ಯಾರೂ ಇಲ್ಲ ನಿಮ್ಮಿಂದ ಅವಳನ್ನು ಅಗಲಿಸುವಷ್ಟು ಕ್ರೂರಿಯಲ್ಲ ನಾನು. ಮುಂಬಯಿಗೆ ಹೋಗಿ

ಮನೆ ನೋಡಿ ಕಾಗದ ಹಾಕ್ತೀನಿ. ಮಗಳೊಡನೆ ಅಲ್ಲಿಗೆ ಬಂದು ನಮ್ಮೊಡನಿರಬೇಕು. ಮದುವೆಯ ಶಾಸ್ತ್ರವೂ ಅಲ್ಲೇ ಆಗಲಿ. ತಂದೆಗೆ ಎದುರಾಗಿ ನಿಂತು ಇಲ್ಲಿ ಮದುವೆಯಾಗುವುದು ಸಾಧ್ಯವಿಲ್ಲ"

ರಾಮಚಂದ್ರಯ್ಯನ ಕಣ್ಣಿನಲ್ಲಿ ನೀರು ಉಕ್ಕಿತು. ನಡುಗುವ ಕೈಗಳಿಂದ ಅವನ ತಲೆ ಸವರಿದರು. ಮಾತಾಡಲು ಸಾಧ್ಯವಾಗಲಿಲ್ಲ

ಅವನನ್ನು ಕಳಿಸಲು ನಾಗು ಬಾಗಿಲವರೆಗೆ ಬಂದಳು. ಶ್ರೀನಾಥ ಅವಳ ಕೈ ಹಿಡಿದುಕೊಂಡು,

"ನಾಗು ...ನಾನು ನಿನಗೆ ಒಪ್ಪಿಗೆ ಆಯ್ತು ? ನಿಮ್ಮ ತಂದೆ ನಿನ್ನೇ ಕೇಳುವಂತೆ ಹೇಳಿದಾರೆ" ಎಂದ.

ನಾಗು ಕೊರಳು ಕೊಂಕಿಸಿ ನಕ್ಕಳು. ಆ ನಗುವಿನಲ್ಲಿ ಶ್ರೀನಾಥನ ನೂರು ಪ್ರಶ್ನೆಗಳಿಗೆ ಉತ್ತರ ಸಿಕ್ಕಿತು.

"ಸಾಧ್ಯವಾದರೆ ಹೊರಡುವುದಕ್ಕೆ ಮುಂಚೆ ಇನ್ನೊಂದು ಸಲ ಬರ್ತೀನಿ. ಇಲ್ಲದಿದ್ದರೆ ಪುನಃ ಮುಂಬಯಿಯಲ್ಲೇ ಭೇಟಿ. ಉಳಿದ ವಿಚಾರವೆಲ್ಲ ನಿಮ್ಮ ತಂದೇನೇ ಹೇಳ್ತಾರೆ"

ಶ್ರೀನಾಥ ಹೊರಟು ಬೇಗೆ ಬೇಗ ನಡೆಯುತ್ತ ಮನೆಗೆ ಬಂದ. ಅಲ್ಲಿ ಒಂದು ಚಿಕ್ಕ ಸಭೆಯೇ ಸೇರಿತ್ತು. ಮನೆಯವರ ಧ್ವನಿಯನ್ನು ಮೀರಿ ಗುಂಡಯ್ಯನ ಧ್ವನಿ ಜೋರಾಗಿ ಕೇಳಿಸುತ್ತಿತ್ತು.

"ಬಂದೆಯಾ ಮಾರಾಯ, ಎಷ್ಟು ಕಾಯೋದು ನಿನಗೆ."

"ಮಗೂ ...ಗುಂಡಣ್ಣನೂ ನನ್ನಂತೆಯೇ ಹೇಳ್ತಾನೆ. ಯಾವ ದೃಷ್ಟಿಯಿಂದ ನೋಡಿದರೂ ನೀನು ಹಿರಣ್ಣಯ್ಯನವರ ಮನೆಗೆ ಹೋಗುವುದೇ ಸರಿ ಎಂತ ನಾವೆಲ್ಲ ತೀರ್ಮಾನಿಸಿದ್ದೇವೆ"

—ತಂದೆ ಹೇಳಿದರು.

"ನನ್ನ ಮಾತು ತೆಗೀಬೇಡ, ನಾನು ಎಷ್ಟಾದರೂ ನಿನ್ನ ತಾಯಿ. ನಾನು ಹೇಳುವುದೆಲ್ಲ ನಿನ್ನ ಹಿತಕ್ಕೆ...."

–ಎಂದರು ತಾಯಿ.

"ನನ್ನದೂ ಅದೆ! ಅಭಿಪ್ರಾಯ"

–ಗುಂಡಯ್ಯ ದನಿಗೂಡಿಸಿದ.

ಶ್ರೀನಾಥನಿಗೆ ಎಲ್ಲಿಗಾದರೂ ಓಡಿಹೋಗಬೇಕೆನಿಸಿತು. ಆದರೆ ಸಂದರ್ಭ ಓಡುವಂತಹುದಲ್ಲ, ಮುಖಕೊಟ್ಟು ಎದುರಿಸಬೇಕಾದದ್ದು.

"ಗುಂಡಣ್ಣ, ಇಷ್ಟವಿಲ್ಲದಿದ್ದರೂ ಹೋಗಲೇಬೇಕೆಂದು ನೀನೂ ಹೇಳ್ತೀಯ ?"

"ಹೋಗೋದರಲ್ಲಿ ತಪ್ಪೇನಿಲ್ಲ"

"ಹುಡುಗಿ ನನಗೆ ಒಪ್ಪಿಗೆಯಾಗದಿದ್ದರೆ ?"

"ನಿನ್ನ ಬಲವಂತ ಮಾಡುವುದಿಲ್ಲವೆಂದು ನಿನ್ನೆಯೇ ಹೇಳಿದೀನಲ್ಲ !"

–ಎಂದುಶ್ಶಿತಂದೆ ಭರವಸೆಕೊಟ್ಟರು.

ಅಲ್ಲಿ ಹೋಗಿ ನೋಡಿದ ಮೇಲೆ ಒಪ್ಪುವನೆಂದು ಎಲ್ಲರಿಗೂ ದೂರದ ಆಸೆ.

"ಹಾಗಾದರೆ ಸರಿ, ನಿಮ್ಮೆಲ್ಲರ ಮಾತಿಗೆ ನಾನು ಹೊರತಲ್ಲ."

ಗುಂಡಯ್ಯ ಹೊರಟು ನಿಂತ. ಶ್ರೀನಾಥ ಸ್ವಲ್ಪದೂರ ಅವನೊಡನೆ ನಡೆದ. ದಾರೀಲಿ ಅವನು ತಟ್ಟನೆ,

"ಗುಂಡಣ್ಣ, ನಾನು ನಾಗೂನ ಮದುವೆಯಾಗಬೇಕೆಂದು ನಿಶ್ಚಯಿಸಿ ದೇನೆ" ಎಂದ.

"ಯಾವಾಗಿದಿಂದ ?"

ಕತ್ತಲಲ್ಲಿ ಅವನ ಧ್ವನಿ ಗಡುಸಾಗಿತ್ತು.

"ಅವಳನ್ನು ನೋಡಿದ ದಿನದಿಂದ"

"ಅಮೆರಿಕಕ್ಕೆ ಹೋಗಬೇಕೆಂದು ಕನಸುಕಾಣ್ತಿದ್ದೆ ?"

"ಹೌದು, ಈಗಲೂ ಆಸೆ ಇದೆ. ಆದರೆ ಅದಕ್ಕಾಗಿ ಬೇಡದ ಹುಡುಗಿ ಯನ್ನು ಮದುವೆಯಾಗಲು ಸಿದ್ಧವಾಗಿಲ್ಲ"

"ಮತ್ತೆ ? ಅವರ ಮನೆಗೆ ಬರಲು ಒಪ್ಪಿದೆಯಲ್ಲ ?"

"ನಿಮ್ಮೆಲ್ಲರ ಬಲವಂತಕ್ಕೆ ಒಪ್ಪಿದೇನೆ. ಆದರೆ ಅದರಲ್ಲೇನೂ ಮೋಸ ವಿಲ್ಲ. ನನ್ನ ಇಷ್ಟ ಮೊದಲೇ ತಿಳಿಸಿಬಿಡ್ತೇನೆ"

"ಏನೋಪ್ಪ ನಿನ್ನ ರೀತಿ ಅರ್ಥವೇ ಆಗಲ್ಲ. ನಾವೆಲ್ಲ ದಡ್ಡರು"

* * *

ಹಿರಣ್ಣಯ್ಯನವರ ಮನೆಯಲ್ಲಿ ಬರಲಿರುವ ಬೀಗರ ಸ್ವಾಗತಕ್ಕೆ ಎಲ್ಲ

ಸಿದ್ಧತೆಯೂ ನಡೆದಿತ್ತು. ಜಮೀನ್ದಾರರ ದೊಡ್ಡಸ್ತಿಕೆಗೆ ಒಪ್ಪುವಂತೆ ಎಲ್ಲವೂ ಏರ್ಪಾಡಾಗಿತ್ತು. ದೊಡ್ಡ ಮನೆಯನ್ನು ನೋಡುವವರ ಕಣ್ಣು ಕುಕ್ಕುವಂತೆ ಅಲಂಕರಿಸಿದ್ದರು. ಆಳುಕಾಳುಗಳು ಕೂಡಾ ಹೊಸ ಬಟ್ಟೆಗಳನ್ನು ಹಾಕಿ ಕೊಂಡು ಉತ್ಸಾಹದಿಂದ ಓಡಾಡುತ್ತಿದ್ದರು ಸೋಫಾ, ಕುರ್ಚಿಗಳಿಂದ ಅಲಂಕೃತವಾಗಿದ್ದ ಹಾಲಿನಲ್ಲಿ ಊದುಬತ್ತಿಯ ವಾಸನೆ ಹರಡಿತ್ತು.

ಹಿರಣ್ಣಯ್ಯನವರು ಸಂಧ್ಯಾವಂದನೆ, ಗೀತಾ ಪಾರಾಯಣವನ್ನು ಮುಗಿಸಿಕೊಂಡು ಅಲ್ಲಿಗೆ ಬಂದರು. ಆಳು ರಾಮು ಆ ದಿನದ ಟಪಾಲನ್ನು ತಂದು ಮುಂದಿಟ್ಟ.

ಕಾಗದಗಳನ್ನು ನೋಡಿದ ಮೇಲೆ ಹಿರಣ್ಣಯ್ಯನವರು,

'ರತ್ನಾ....' ಎಂದು ಮಗಳನ್ನು ಕೂಗಿದರು.

'ಬಂದೇ ...' ಎನ್ನುತ್ತ ರತ್ನ ಒಳಗಿನಿಂದ ಬಂದಳು.

ರತ್ನ ಯಾವಾಗಲೂ ಅಲಂಕಾರ ಪ್ರಿಯೆ. ಲಕ್ಷಾಧೀಶ್ವರನ ಒಬ್ಬಳೇ ಮಗಳಿಗೆ ಒಪ್ಪುವಂತೆ ಇರುತ್ತಿದ್ದಳು ಈ ದಿನ ಅವಳ ಅಲಂಕಾರ ಕಣ್ಣು ಕೋರೈಸುವಂತಿತ್ತು. ಅವಳು ಬಂದೊಡನೆ ಮನೆ ಬೆಳಕಾದಂತಾಯ್ತು,

"ಈ ಕಾಗದ ನೋಡು ತಾಯಿ"

"ಯಾರದ್ದು ?"

"ಶ್ರೀನಾಥ ಬರೆದಿದಾನೆ"

ರತ್ನ ಕಾಗದ ತೆಗೆದುಕೊಂಡು ನೋಡಿದಳು.

"ಪೂಜ್ಯರಾದ ಹಿರಣ್ಣಯ್ಯನವರಿಗೆ ನಮಸ್ಕಾರಗಳು. ತಮ್ಮ ಮತ್ತು ನನ್ನ ಹಿರಿಯರ ಅಪೇಕ್ಷೆಯಂತೆ ನಾನು ತಮ್ಮ ಮನೆಗೆ ತಮ್ಮ ಮಗಳನ್ನು ನೋಡಲು ಬರಲಿದ್ದೇನೆ. ಆದರೆ ನನಗೆ ಈ ಮದುವೆ ಇಷ್ಟವಿಲ್ಲ. ಕೇವಲ ದೊಡ್ಡವರ ಬಲವಂತಕ್ಕೆ ಬರುವೆನಷ್ಟೆ. ಹೆಣ್ಣುಮಗಳ ಅವಹೇಳನ ನನಗೆ ಸಹಿಸದು ನನಗೂ ಅಕ್ಕತಂಗಿಯರಿದಾರೆ. ನಾನು ಬಂದು ಅನಂತರ ಮದುವೆ ಒಲ್ಲೆ ನೆಂದು ಹೇಳಿದ ಮಾತ್ರಕ್ಕೆ ತಮ್ಮ ಹುಡುಗಿಯ ವ್ಯಕ್ತಿತ್ವಕ್ಕೆ ಕುಂದಿಲ್ಲ. ನನಗೆ ಆ ಉದ್ದೇಶವೇ ಇಲ್ಲ. ಬೇರೆ ಹುಡುಗಿಯಲ್ಲಿ ನನ್ನ ಮನಸ್ಸು ಸೆರೆ ಯಾಗಿದೆ. ದೊಡ್ಡವರಾದ ನಿಮ್ಮಲ್ಲಿಗೆ ಅನೇಕ ಅತಿಥಿ ಅಭ್ಯಾಗತರು ಬರುತಿರು ತ್ತಾರೆ ನಿಮ್ಮ 'ರತ್ನ ವಿಲಾಸ' ಅತಿಥಿ ಸತ್ಕಾರಕ್ಕೆ ಹೆಸರುವಾಸಿಯಾಗಿದೆ. ಇದು ಅಂತಹುದೆ ಒಂದು ಸಂದರ್ಭ, ಬರುವ ಅನೇಕರಲ್ಲಿ ಇವನೂ ಒಬ್ಬರು

ಎಂತ ತಿಳಿಯಬೇಕಲ್ಲದೆ, ಅದಕ್ಕಿಂತ ಹೆಚ್ಚು ಮಹತ್ವಕೊಡಬಾರದು ಈ ವಿಷಯ ತಮ್ಮಲ್ಲೇ ಇರಲಿ, ನಮ್ಮ ತಂದೆಯವರ ಮನಸ್ಸು ನೋಯಿಸಲು ನನಗೆ ಇಷ್ಟವಿಲ್ಲ. ನಿಮ್ಮ ಭಾವನೆಗಳಿಗೂ ಅದೇ ಗೌರವ ಕೊಡಲು ಇಷ್ಟ ..."

ತಮ್ಮವ,
ಶ್ರೀನಾಥ

ಕಾಗದ ಓದಿ ಮುಗಿಸಿದಂತೆ ರತ್ನನ ಮುಖದಲ್ಲಿ ಮುಗುಳುನಗೆ ಲಾಸ್ಯ ಮಾಡಿತು. ಮಗಳ ಭಾವವನ್ನು ಗ್ರಹಿಸಿ ಹಿರಣ್ಣಯ್ಯನವರು ಮೆಚ್ಚಿಗೆಯಿಂದ,

"ಬಹಳ ದೊಡ್ಡ ಮನುಷ್ಯ ." ಎಂದರು.

"ಬೀಗರನ್ನು ಕರೆತಂದ ಹಿರಣ್ಣಯ್ಯನವರ ಕಾರು ಮನೆಯ ಮುಂದೆ ನಿಂತಿತ್ತು. ಬಾಗಿಲಲ್ಲಿ ನಿಂತಿದ್ದ ಅವರ ಮ್ಯಾನೇಜರು ಅವರನ್ನು ಮರ್ಯಾದೆ ಯಿಂದ ಇದಿರುಗೊಂಡು ಒಳಕ್ಕೆ ಕರೆದುಕೊಂಡು ಬಂದ.

ಅವರ ಮನೆಯನ್ನು ನೋಡಿಯೇ ಬಂದವರು ಬೆರಗಾದರು. ಮನೆಯ ವೈಭವವನ್ನು ನೋಡಿದ ಬೀಗಿತ್ತಿ ಮನಸ್ಸಿನಲ್ಲಿ,

"ಹುಡುಗನ ತಲೆಯಲ್ಲಿ ಮೂರುಕಾಸಿನ ಬುದ್ಧಿಯಾದರೂ ಇದ್ದರೆ ಈ ಸಂಬಂಧ ಬಿಡಲ್ಲ" ಎಂದುಕೊಂಡರು.

ಗುಂಡಯ್ಯ ಸ್ನೇಹಿತನ ಅದೃಷ್ಟವನ್ನು ನೆನೆದು ಹಿಗ್ಗಿದ. ಶ್ರೀನಾಥ ಏನಾದರೂ ಹೇಳಿರಲಿ, ಈ ಬಲೆಯಿಂದ ಪಾರಾಗುವುದು ಸುಲಭವಲ್ಲ ಎಂದು ಕೊಂಡ.

ಶ್ರೀಕಂಠಯ್ಯನವರು ಠೀವಿಯಿಂದ ಗಂಭೀರವಾಗಿ ನಡೆಯುತ್ತ, ತಾವು ಗಂಡಿನ ತಂದೆ ಎಂದು ಎಲ್ಲರಿಗೂ ನೆನಪು ಕೊಡುವಂತೆ ಬರುತ್ತಿದ್ದರು.

ಹಾಲಿನಲ್ಲಿ ಬಾಗಿಲಿನ ಪಕ್ಕಕ್ಕೆ ಇದ್ದ ಸೋಫಾದಲ್ಲಿ ಕುಳಿತಿದ್ದ ಹಿರಣ್ಣಯ್ಯನವರು ಇವರನ್ನು ನೋಡಿದೊಡನೆ ಎದ್ದು ಕೈ ಮುಗಿಯುತ್ತ ಮುಂದೆ ಬಂದರು. ಅವರ ಸರಳವಾದ ಉಡುಪು ಬಂದವರನ್ನು ನಾಚಿಸು ವಂತಿತ್ತು. ಎಲ್ಲರ ಹಿಂದಿನಿಂದ ನಿರಾಸಕ್ತಿಯಿಂದ ಬರುತ್ತಿದ್ದ ಶ್ರೀನಾಥ ಮನೆಯ ಯಜಮಾನರನ್ನು ನೋಡಿ ಬೆಚ್ಚಿಬಿದ್ದ.

ಅವನ ಮಗ್ಗುಲಲ್ಲಿ ಬರುತ್ತಿದ್ದ ಗುಂಡಯ್ಯನ ತೆರೆದ ಬಾಯನ್ನು ಹಿರಣ್ಣಯ್ಯ ಕಣ್ಸನ್ನೆಯಿಂದ ಸುಮ್ಮನಾಗಿಸಿದರು.

"ದಯಮಾಡಿಸಬೇಕು" ಎಂದು ಸ್ವಾಗತಿಸಿದರು ನಗುತ್ತ.

ಬೀಗಿತ್ತಿಯನ್ನು ನೋಡಿ, "ನಮ್ಮ ಮನೇಲಿ ತಮ್ಮನ್ನು ಬರಮಾಡಿಕೊಳ್ಳಲು ಯಜಮಾನಿತಿ ಇಲ್ಲ, ಕ್ಷಮಿಸಬೇಕು" ಎನ್ನುತ್ತ.

"ರತ್ನಾ ...ಅವರನ್ನು ಒಳಗೆ ಕರಿ. ಈಗ ನೀನೇ ಅವರನ್ನು ನೋಡಿಕೊಳ್ಳಬೇಕು" ಎಂದರು.

ಪಕ್ಕದ ರೂಮಿನಿಂದ ರತ್ನ ಬಂದಳು. ತಾನು ಸ್ವಾಗತಿಸಬೇಕಾಗಿದ್ದ ಯಜಮಾನಿಯನ್ನು ನೋಡುವ ಮೊದಲು, ಅವಳ ನೋಟ ಶ್ರೀನಾಥನನ್ನು ಅರಿಸಿ ಓಡಿತ್ತು. ಅವನ ಮುಖದಲ್ಲಿ ಆಶ್ಚರ್ಯವನ್ನಾಗಲೀ, ಸಂತೋಷವನ್ನಾಗಲೀ ಗುರುತಿಸಬಹುದೆಂದು ಅವಳು ನಿರೀಕ್ಷಿಸಿದ್ದರೆ, ಅವಳಿಗೆ ನಿರಾಶೆಯಾಗಿರಬೇಕು. ಶ್ರೀನಾಥ ಅವಳ ಕಡೆ ನೋಡುತ್ತಿರಲಿಲ್ಲ, ಗೋಡೆಯಮೇಲಿದ್ದ ಯಾವುದೋ ದೇವರ ಪಟವನ್ನು ಆಸಕ್ತಿಯಿಂದ ನೋಡುತ್ತಿದ್ದ.

ಒಳಗಿನ ತೊಟ್ಟಿಯಲ್ಲಿ ಬೀಗರಿಗೆ ಊಟದ ಏರ್ಪಾಡಿತ್ತು. ಅಲ್ಲಿ ಮನೆಯ ನೆಂಟರೆಲ್ಲ ನೇರಿದ್ದರು. ಶ್ರೀನಾಥನ ತಾಯಿಯನ್ನು ಅಲ್ಲಿ ಕೂರಿಸಿ, ರತ್ನ ತನ್ನ ರೂಮಿಗೆ ಬಂದಳು. ಪಟವನ್ನು ನೋಡುತ್ತಿದ್ದ ಶ್ರೀನಾಥ ಅವಳನ್ನು ಹಿಂಬಾಲಿಸಿ ಒಳಗೆ ಹೋದ.

"ಬಡವನನ್ನು ಆಟವಾಡಿಸಬೇಕೆಂದು ಆಸೆಯಾಯ್ತೆ ನಾಗು?" ಅವಳು ಮಾತಾಡಲು ಬಾಯಿ ತೆರೆಯುವ ಮೊದಲೇ ಶ್ರೀನಾಥ ಕೇಳಿದ.

"ನಾನು ಈ ವಿಷಯದಲ್ಲಿ ನಿರಪರಾಧಿ. ಎಲ್ಲವೂ ತಂದೆಯವರದ್ದೆ ಆಲೋಚನೆ. ನಿನ್ನೆ ಮೊನ್ನೆಯವರೆಗೂ ನನಗೆ... ...."

ಮಾತು ಮುಗಿಯುವ ಮೊದಲು ಹಿರಣ್ಣಯ್ಯನವರು ಒಳಗೆ ಬಂದರು. ಹಿಂದಿನಂತೆ ಅದೇ ವಿಶ್ವಾಸದಿಂದ,

"ಶ್ರೀನಾಥ . ನೀನು ತಪ್ಪು ತಿಳಿಯಬಾರದು. ನಿಮ್ಮ ಮುಂದಿನ ಸುಖದ ದೃಷ್ಟಿಯಿಂದ ನಾನೇ ಆ ರೀತಿ ಮಾಡಿದ್ದು. ನಿಮ್ಮ ಪ್ರೇಮ ಇಲ್ಲಿನ ಕ್ಷುದ್ರ ಸುಖಸಾಧನಗಳನ್ನು ಮೀರಿ, ಅಮರವಾಗಿರಬೇಕೆಂದೇ ನನ್ನ ಹಾರೈಕೆ. ಅದರ ಸಾಧನೆಗಾಗಿ ನಾನೂ ಬಹಳ ಕಷ್ಟಪಡಬೇಕಾಯ್ತು ಮಗೂ ಎಂದರು.

ಶ್ರೀನಾಥನ ಕಣ್ಣುಗಳಲ್ಲಿ ಕಂಬನಿ ಮಿನುಗಿತು. ಸಾಯಂಕಾಲ ಊಟ ಉಪಚಾರವೆಲ್ಲಾ ಮುಗಿದು, ಬೀಗರು ಹೊರಟಾಗ ಗುಂಡಯ್ಯ, ಹಿರಣ್ಣಯ್ಯ

ನವರು ಒಬ್ಬರೇ ಇದ್ದ ಸಮಯ ಸಾಧಿಸಿ,

"ಎಂಥ ಆಟ ಕಟ್ಟಿಬಿಟ್ರಿ ಯಜಮಾನ್ರೆ, ನನಗೂ ಗೊತ್ತಾಗಲಿಲ್ಲ" ಎಂದ.

"ಗುಂಡಯ್ಯ ಅದರಿಂದ ನಷ್ಟವೇನೂ ಆಗಲಿಲ್ಲ. ನಿಮ್ಮಂಥ ಸ್ನೇಹಿತರು ಸಿಕ್ಕೋದು ಸುಲಭವೇ? ನೀವೇ ಯೋಚನೆಮಾಡಿ. ನಾನು ಖಾಯಿಲೆ ಮನುಷ್ಯ. ರತ್ನನ ಭವಿಷ್ಯ ಭದ್ರವಾಗಿರಬೇಕೆಂದು ನನ್ನ ಇಷ್ಟ. ಅಲ್ಲದೆ ರತ್ನ ಬಹಳ ಜಾಣೆ. ಅವಳ ರೂಪ, ಗುಣ ಎಲ್ಲವನ್ನೂ ನನ್ನ ಆಸ್ತಿಯ ಪೊದೆ ಮುಚ್ಚಿ ಬಿಟ್ಟಿತ್ತು. ಆ ಪೊದೆಯ ಹೊರಗೆ ತನ್ನ ಶಕ್ತಿಯಿಂದಲೇ ಅವಳು ತನಗೆ ಒಪ್ಪುವ ವರನನ್ನು ಸಂಪಾದಿಸಲಿ ಎಂದು ಆಸೆಯಿತ್ತು. ನಿಮ್ಮಂತಹ ಸ್ನೇಹಿತರ ನೆರವಿನಿಂದ ಅದು ಸಾಧ್ಯವಾಯ್ತು"

ಎಂದು ಹೇಳಿ ನಗುತ್ತ ಎಲ್ಲರನ್ನೂ ಬೀಳ್ಕೊಟ್ಟರು.

# ಒಲುಮೆಯ ಸುಳಿಯಲ್ಲಿ

"ಯಾರು ಬೇಕಾಗಿತ್ತು ?"

"ಡಾಕ್ಟರ ಮನೆ ಇದೇನೇ ?"

"ಹೌದು— ಇದೇ ಯಾರನ್ನು ನೋಡಬೇಕು ?"

"ಡಾಕ್ಟರನ್ನು ಸ್ವಲ್ಪ ಕಾಣಬೇಕಿತ್ತು."

"ಅವರನ್ನು ಕಾಣಬೇಕಾದರೆ ಆಸ್ಪತ್ರೆಗೆ ಹೋಗಬೇಕು. ಇಲ್ಲಿ ಬಂದರೆ ?

"ಆಸ್ಪತ್ರೆಗೇ ಹೋಗಿದ್ದೆವಪ್ಪ. ಮನೆಗೆ ಇದೇತಾನೇ ಹೋದರು ಎಂದರು ಆದರಿಂದ ಮನೆ ಹುಡುಕಿಕೊಂಡು ಬಂದೆ."

"ಅವರು ಇಷ್ಟು ಹೊತ್ತಿನಲ್ಲಿ ಯಾರನ್ನೂ ನೋಡಲ್ಲ. ಊಟಮಾ ಮಲಗಿದಾರೆ. ನಾಳೆ ಬೇಗ ಆಸ್ಪತ್ರೆಗೆ ಹೋಗಿ"

"ನಾವು ಎಷ್ಟು ದೂರದಿಂದ ಬಂದಿದೇವೆ ಗೊತ್ತೇ ?"

ಮುದುಕರ ಧ್ವನಿಯಲ್ಲಿ ಆಯಾಸದ ಜೊತೆಗೆ ದೈನ್ಯವೂ ಇಣುಕಿತ್ತು

"ನಿಜವಾಗಿ ? ಎಲ್ಲಿಂದ ಬರ್‍ತಿದೀರಿ ?"

—ಹುಡುಗ ನಗುತ್ತ ಕೇಳಿದ, ಮುದುಕರ ದೈನ್ಯ ಅವನಲ್ಲಿ ಹಾಸ್ಯವನ್ನು ಮಾತ್ರ ಎಚ್ಚರಿಸಿದಂತೆ ಕಾಣಿಸಿತು.

"ದೂರದ ಮಾತು ಹೇಳ್ತಿದೀರಿ. ಡಾಕ್ಟರನ್ನು ನೋಡಲು ನೂರಾರ ಮೈಲಿಗಳ ದೂರದ ಊರಿನಿಂದ ಜನ ಬರ್‍ತಾರೆ. ಅದು ನಿಮಗೆ ಗೊತ್ತೋ?

ಹುಡುಗ ಪುನಃ ಕೇಳಿದ.

"ಅದೆಲ್ಲಾ ನನಗೇನು ಗೊತ್ತು ? ನಮ್ಮ ಕಷ್ಟ ನಮಗೆ ಡಾಕ್ಟರಿ ತೊಂದರೆ ಕೊಡೋದು ಬೇಡ. ಪಾಪ, ಆಯಾಸವಾಗಿರುತ್ತೆ, ಮಲಗಿರಲಿ. ಮರದ ಕೆಳಗೆ ಕೂತಿದ್ದು ಅವರು ಎದ್ದ ಮೇಲೆ ಪುನಃ ಬರ್‍ತೀನಿ. ಬಾಗಿಲು ಹಾ ಕೊಳ್ಳಪ್ಪ. ಬಾ ತಾಯಿ ಹೋಗೋಣ"

ಈ ಮಾತುಗಳೆಲ್ಲ ಕನಸಿನಲ್ಲಿ ಕೇಳಿದಂತೆ ಕೇಳಿಸಿದುವು. ಊಟ ಮುಗಿ

ರೂಮಿಗೆ ಬಂದಾಗ ಎರಡು ಗಂಟೆ. ಕುರ್ಚಿಯ ಬೆನ್ನಿಗೆ ಒರಗಿ ಪತ್ರಿಕೆ ನೋಡು ತಿದ್ದಂತೆ, ಪತ್ರಿಕೆ ಜಾರಿ ಕೆಳಗೆ ಬಿತ್ತು.

ಕಣ್ಣು ಬಿಟ್ಟು ಕೆಳಗೆ ಬಿದ್ದಿದ್ದ ಪತ್ರಿಕೆಯನ್ನು ಕೈಗೆ ಎತ್ತಿಕೊಂಡಾಗ ಹೊರಗೆ ಮಾತನಾಡಿದ್ದು ಕೇಳಿಸಿತು.

ಹಾಗದರೆ ನಾನು ಈವರೆಗೆ ಕೇಳಿಸಿಕೊಂಡ ಮಾತುಗಳು ಇಲ್ಲೇ. ಕನಸಲ್ಲ

"ರಾಜಾ ......" ಎಂದು ಕೂಗಿದೆ, ಪತ್ರಿಕೆಯಲ್ಲಿದ್ದ ಲೇಖನದ ಮೇಲೆ ಕಣ್ಣು ಓಡಿಸುತ್ತ

"ಕೂಗಿದಿರಾ ಮಾವ ?"

"ಯಾರು ಬಂದಿರೋರು ?"

"ಕೊನೆಗೂ ಅವರು ಗಲಾಟೆ ಮಾಡಿ ಎಬ್ಬಿಸಿಬಿಟ್ಟರು. ನಾನು ಎಷ್ಟೋ ಹೇಳಿದೆ, ನಮ್ಮ ಜನಕ್ಕೆ ಬುದ್ಧಿ ಬರಬೇಕಾದರೆ ..."

"ನಾನು ಮಲಗಿರಲಿಲ್ಲ. ಪತ್ರಿಕೆ ನೋಡ್ತಿದ್ದೆ. ಯಾರು ಅವರು ?"

"ಯಾರೋ ಗೊತ್ತಿಲ್ಲ. ಒಬ್ಬರು ಮುದುಕರು, ಒಬ್ಬ ಹುಡುಗೀನ ಕರಕೊಂಡು ಬಂದಿದಾರೆ. ಆಸ್ಪತ್ರೆಗೆ ಹೋಗುವಂತೆ ಹೇಳಿದೆ."

"ಹೋದರೋ ಇಲ್ಲವೋ ?"

"ಹೋಗಿಲ್ಲ ಎಷ್ಟು ಹೊತ್ತಾದರೂ ನಿಮ್ಮನ್ನು ನೋಡಿಯೇ ಹೋಗ ಬೇಕೆಂದು ಹಟತೊಟ್ಟು ಬಂದಿರುವಂತಿದೆ."

"ಹಾಗೇನು ? ರೋಗಿಗಳನ್ನು ನೋಡುವ ರೂಮಿನಲ್ಲಿ ಕೂರಿಸು. ಅವರ ತೊಂದರೆ ಎಂತಹುದೋ ?"

ಷರಟನ್ನು ತಗುಲಿಸಿಕೊಂಡು ಕ್ರಾಪಿನ ಮೇಲೆ ಬಾಚಣಿಗೆಯನ್ನು ಆಡಿಸಿ ಹೊರಗೆ ಬಂದಾಗ, ಕುರ್ಚಿಯ ಮೇಲೆ ಕೂತಿದ್ದ ಮುದುಕರು ಝುಗ್ಗನೆ ಎದ್ದು ಕೈ ಜೋಡಿಸಿದರು.

ಅವರಿಗೆ ಪ್ರತಿವಂದನೆ ಮಾಡಿ—

"ಕುಳಿತುಕೊಳ್ಳಿ- ಏನು ಬಂದಿದ್ದು ?"

-ಎಂದು ಕೇಳಿ ಕುತೂಹಲದಿಂದ ಅವರ ಕಡೆ ನೋಡಿದೆ.

ಅವರು ಉಟ್ಟಿದ್ದ ತೀರಾ ಸಾಧಾರಣವಾದ ಉಡುಪು ಅವರ ಬಡತನ

ವನ್ನು ಸಾರಿ ಹೇಳುವಂತಿದ್ದರೆ, ಅವರ ಸಾತ್ವಿಕ ತೇಜಸ್ಸು, ಪಾಂಡಿತ್ಯ ಇವುಗಳನ್ನು ಅವರ ಮುಖದ ದೈನ್ಯ ಮರೆ ಮಾಚಲು ಅಸಮರ್ಥವಾಗಿತ್ತು.

ದಾರಿದ್ರ್ಯ, ರೋಗ— ಇವೆರಡೂ ಸಾಮಾನ್ಯ ಮನುಷ್ಯ ಎದುರಿಸಲೇಬೇಕಾದ ಎರಡು ಶತ್ರುಗಳು.

ಈ ಹೋರಾಟ ದಿನವೂ ನಡೆದದ್ದೇ. ನನ್ನ ಬಳಿ ಬರುವ ರೋಗಿಗಳಲ್ಲಿ ಅನೇಕರು ಅಂತಹವರೆ. ರೋಗಿಗಳು, ರೋಗ, ಅದನ್ನು ಅನುಭವಿಸುವವರ ತೊಂದರೆ, ಯಾವುದೂ ನನಗೆ ಹೊಸದಲ್ಲ.

ನಿತ್ಯ ನೋಟ. ಆದರೂ ....

ಇವರನ್ನು ನೋಡದೆ ಹಿಂದಕ್ಕೆ ಕಳುಹಿಸದೆ, ನೋಡಿದ್ದು ಒಳ್ಳೆಯದಾಯಿತು. ವಯಸ್ಸಾದ ಮುದುಕರು. ಜೊತೆಗೆ ಹುಡುಗಿ. ಬಿಸಿಲಿನಲ್ಲಿ ನಡೆದು ಬಂದಿದ್ದಾರು.

ಆದರೂ ಕೇಳಿದೆ —

"ಏನಾಗಿದೆ ಹುಡುಗಿಗೆ? ಆಸ್ಪತ್ರೆಗೇ ಬಂದಿದ್ದರೆ ಚೆನ್ನಾಗಿತ್ತು"

"ಸ್ವಾಮಿ ಬೆಳಿಗ್ಗೆ ಏಳು ಗಂಟೆಗೆ ಮನೆ ಬಿಟ್ಟವರು ಮೊದಲು ಆಸ್ಪತ್ರೆಗೇ ಹೋದೆವು. ತಾವು ಸಿಕ್ಕಲಿಲ್ಲ. ಆಪರೇಷನ್ ಇದೆ ಈ ದಿನ ಅವರು ಸಿಗುವುದು ಕಷ್ಟ ಎಂದರು. ಹಾಗೂ ಕಾದೆವು. ಆ ಮೇಲೆ ಮನೆಗೆ ಹೋದರು ಎಂದರು. ಹುಡುಗಿಗೆ ಕಣ್ಣು ನೋವು ಬಂದು ನಾಲ್ಕು ತಿಂಗಳಾಯ್ತು."

"ಮತ್ತೆ ? ಈಗ ತೋರಿಸಲು ಬರ್ತಿದೀರಿ ?"

"ಆಗಿನಿಂದಲೂ ಅಲ್ಲಿ ಇಲ್ಲಿ ತೋರಿಸಿದೆವು. ಮೊದಲು ಮನೇಲೇ ತಿಳಿದ ಔಷಧಿ ಮಾಡಿದೆವು ಏನೂ ಪ್ರಯೋಜನವಾಗಲಿಲ್ಲ. ದಿನ ದಿನಕ್ಕೆ ಹೆಚ್ಚೇ ಆಯ್ತು. ಎಲ್ಲರೂ 'ಸರಿಯಾದವರಿಗೆ ತೋರಿಸಿ' ಇಲ್ಲದಿದ್ದರೆ ಕಣ್ಣೇ ಹೋದೀತು, ಅಂತ ಹೆದರಿಸಿದರು. ಹೆಣ್ಣು ಹುಡುಗಿ ಸ್ವಾಮಿ. ಹಾಗೇನಾದರೂ ಆದರೆ ಗತಿ ? ಎಂದುಕೊಂಡು ನಿಮ್ಮ ಹತ್ತಿರ ಬಂದೆ. ಬಡವರನ್ನು ಕಾಪಾಡಬೇಕು" ಎಂದರು.

"ಬಾಮ್ಮ ಈ ಕಡೆ, ನೋಡೋಣ" ಎಂದೆ.

ಹುಡುಗಿ ಬಾಗಿಲ ಹಿಂದೆ ನಿಂತಿದ್ದವಳು ಲಜ್ಜೆಯಿಂದ ಹತ್ತಿರ ಬಂದಳು. ಕಿಟಕಿಯ ಹತ್ತಿರ ಹೋಗಿ ತಲೆ ಹಿಡಿದೆತ್ತಿ ನೋಡಿದೆ.

ನನಗೆ ಮುದುಕರ ಮೇಲೆ ವಿಪರೀತ ಸಿಟ್ಟು ಬಂತು. ಎಂತಹ ಜನರು? ರೋಗ ಮಿಾರುವವರೆಗೂ ಡಾಕ್ಟರ ಬಳಿಗೆ ಬರುವ ಯೋಚನೆಯನ್ನೇ ಮಾಡುವುದಿಲ್ಲ.

ಇವರಿಗೆ ಏನು ಹೇಳಲಿ ಎಂದು ಯೋಚಿಸುತ್ತಿದ್ದೆ.

ಕಾತರದಿಂದ ನನ್ನನ್ನೇ ನೋಡುತ್ತಿದ್ದ ಮುದುಕರು.

"ಸ್ವಾಮಿ ಕಣ್ಣು ಬರುವ ಸಂಭವವಿಲ್ಲವೆ? ಎಂದು ಕೇಳಿದರು.

ಹುಡುಗಿ ಅರಿಶಿನದ ಬಟ್ಟೆಯಿಂದ ಕಣ್ಣು ಒರೆಸಿಕೊಳ್ಳುತ್ತ ನಿಂತಿದ್ದವಳು, ಅರಳಿದ ಕಣ್ಣುಗಳಿಂದ ನನ್ನ ಕಡೆ ನೋಡಿದಳು

ಒಂದೇ ಸಲಕ್ಕೆ ನಿರಾಶೆಯಾಗುವಂತೆ ಮಾತಾಡಿ ಹುಡುಗಿಯನ್ನು ನಿರಾಶೆಗೊಳಿಸಲು ಮನಸ್ಸು ಬರಲಿಲ್ಲ.

"ನೀವು ಬಹಳ ತಡವಾಗಿ ನನ್ನ ಬಳಿ ಬಂದಿರಿ. ಆದರೂ ಇನ್ನೂ ಆಸೆಯಿದೆ ನನ್ನ ಕೈಲಾದ ಪ್ರಯತ್ನ ಮಾಡ್ತೇನೆ. ಇದರ ಮೇಲೆ ದೇವರ ಇಚ್ಛೆ ಇದ್ದಂತೆ ಆಗಲಿ"

–ಎಂದು ಹೇಳಿ ಔಷಧಿ ಹಾಕಿದೆ.

"ನಾಳೆ ಆಸ್ಪತ್ರೆಗೆ ಕರೆದುಕೊಂಡು ಬನ್ನಿ ಮರೀಬೇಡಿ. ಪ್ರತಿ ದಿನವೂ ಬಂದು ಔಷಧಿ ಹಾಕಿಸಿಕೋಬೇಕು"

–ಎಂದು ಹೇಳಿದೆ.

"ಸ್ವಾಮಿ, ಆಸ್ಪತ್ರೆಗೇ ಬರಬೇಕೆ?"

"ಹೌದು. ಬೆಳಿಗ್ಗೆ ಕರೆದುಕೊಂಡು ಬನ್ನಿ"

"ನೋಡಿ ಆಸ್ಪತ್ರೆ ನಮ್ಮ ಮನೆಗೆ ಬಹಳ ದೂರ. ಗಾಡಿಯಲ್ಲಿ ಬರಲು ಅನುಕೂಲವಿಲ್ಲ. ಹುಡುಗೀನ ಕೈಹಿಡಿದುಕೊಂಡು ನಡೆಸಿಕೊಂಡು ಬರೋದು ಬಹಳ ಪ್ರಯಾಸ. ತಾವು ಅನಾಥಳ ಮೇಲೆ ದಯೆಯಿಟ್ಟು ಮನೆಗೇ ಬರುವುದಕ್ಕೆ ಅವಕಾಶ ಕೊಟ್ಟರೆ ನನಗೆ ಎಷ್ಟೋ ಉಪಕಾರವಾದಂತೆ. ತಮಗೂ ಪುಣ್ಯ ಬರುತ್ತೆ"

–ಎಂದು ಕೇಳಿಕೊಂಡರು.

ನನಗೆ ಪುಣ್ಯ ಬೇಕಾಗಿರಲಿಲ್ಲ. ಹುಡುಗಿಯ ಕಡೆ ತಿರುಗಿದೆ. ನಾನು ಏನು ಹೇಳುವೆನೋ ಎಂಬ ಶಂಕೆಯಿಂದ ಅವಳು ಒಂದು ತರಹ ಮುಖ

ಮಾಡಿಕೊಂಡು ನಿಂತಿದ್ದಳು. ಹೆಚ್ಚು ಯೋಚಿಸದೆ–

"ಪರವಾಗಿಲ್ಲ. ನಾಳೆಯಿಂದ ಇದೇ ಹೊತ್ತಿಗೆ ಇಲ್ಲಿಗೇ ಬನ್ನಿ" ಎಂದೆ.

ಕೋಲೂರಿಕೊಂಡು ಮುದುಕರು ಹೊರಟರು. ಹುಡುಗಿ ಅವರನ್ನು ಹಿಂಬಾಲಿಸಿದಳು. ಹೋಗುವ ಮೊದಲು ನನ್ನ ಹೃದಯದಲ್ಲಿ ಬಿರುಗಾಳಿ-ಯನ್ನಬ್ಬಿಸಿದ್ದಳು ಹುಡುಗಿ.

ಒಳಗೆ ಹೋಗಿ ಹಾಸಿಗೆಯ ಮೇಲೆ ಉರುಳಿಕೊಂಡೆ. ಮನಸ್ಸು ಏನೋ ಒಂದು ಬಗೆಯಾಗಿತ್ತು. ನನ್ನ ವೃತ್ತಿಯಲ್ಲಿ, ಕಷ್ಟದಲ್ಲಿರುವವರನ್ನು ಎಷ್ಟೋ ಜನರನ್ನು ನೋಡಿದ್ದೆ. ಆದರೆ ಎಂದೂ ಈ ಬಗೆಯ ಕಳವಳಕ್ಕೆ ಗುರಿಯಾಗಿರಲಿಲ್ಲ. ಈ ದಿನ ನೋಡಿದ ಮುದುಕರ ಸ್ಥಿತಿ ಹೃದಯವನ್ನು ಮುಟ್ಟುವಂತಿತ್ತು. ಅಲ್ಲದೆ ಆ ಹುಡುಗಿಯ ಎಳೆಯ ಮುಖ, ಸರಳವಾದ ನೋಟ ಅಂತಹುದೇ ಮತ್ತೊಂದು ಮುಖದ ನೆನಪನ್ನು ತಂದಿತು. ಎದೆ ಯಲ್ಲಿ ಮರೆಯಾಗಿದ್ದ ನೋವು ಭುಗ್ಗೆಂದು ಮೇಲೆದ್ದಿತು.

ನನ್ನ ಇಂದಿರಾ ಹೀಗೇ ಇರಲಿಲ್ಲವೇ? ದೊಡ್ಡವಳಾಗಿದ್ದರೂ ಇದೇ ಸರಳತೆ; ಬಾಲೆಯ ಮುಗ್ಧತೆ ಮುಖದ ಮೇಲೆ. ತನ್ನ ನಗುವಿನಿಂದ ನನ್ನ ಬಾಳನ್ನು ಬೆಳಗುತ್ತಿದ್ದಳು.

ಕೊಟ್ಟು ಕಿತ್ತುಕೊಳ್ಳುವುದು ವಿಧಿಯ ಆಟವೋ? ಅವಳು ಹೋದಾಗಿನಿಂದ ಮನಸ್ಸು, ಮನೆ ಎಲ್ಲವೂ ಶೂನ್ಯವಾಗಿತ್ತು. ಆ ಅಂಧಕಾರದಲ್ಲಿ ಇಂದು ಒಮ್ಮೆ ಮಿಂಚು ಸುಳಿದಂತಾಗಿ ಹಿಂದಿನ ನೆನಪೆಲ್ಲ ಮರುಕಳಿಸಿತು.

ಇಂದಿರೆಯೊಡನೆ ಸುಖವಾಗಿದ್ದ ಕಾಲ ಎಷ್ಟು ಚೆನ್ನಾಗಿತ್ತು? ಬೆಳಗಾಗೆದ್ದು ಹೂದೋಟಕ್ಕೆ ಹೋಗಿ ಆಗ ತಾನೇ ಅರಳಿದ ಗುಲಾಬಿಯನ್ನು ನೋಡಿದಂತಾಗುತ್ತಿತ್ತು. ಅವಳನ್ನು ನೋಡಿದರೆ, ಅದೇ ಕೋಮಲತೆ, ಅದೇ ಪ್ರಫುಲ್ಲತೆ.

ನೆನಪು ನುಗ್ಗಿ ಬರುವಾಗ ಬರೀ ಸಿಹಿ ನೆನಪೇ ಬರುವುದಿಲ್ಲವಲ್ಲ! ತಾಯಿಯಾಗಲಿದ್ದ ಇಂದಿರೆಯನ್ನು ತೌರಿನವರು ಬಂದು ಕರೆದುಕೊಂಡು ಹೋದರು.

ಅಲ್ಲಿಗೆ ಹೊರಡುವ ದಿವಸ ಇದೇ ಮಂಚದ ಮೇಲೆ ಕುಳಿತು ಎಷ್ಟು ಮಾತಾಡಿದರೂ ತೀರದು. ನನ್ನ ಯೋಗಕ್ಷೇಮ ಸರಿಯಾಗಿ ನೋಡಿಕೊಳ್ಳು

ವಂತೆ ಎಷ್ಟು ಹೇಳಿದಳು ?

ರೈಲು ಹೊರಟಾಗ ಕಿಟಕಿಯಲ್ಲಿ ಮುಖ ಹೊರಗೆ ಹಾಕಿ ಕೈಬೀಸುತ್ತಿದ್ದಾಗ ಅವಳನ್ನು ನೋಡಿದ್ದೇ ಕೊನೆ.

ಇಂದಿರ ಪುನಃ ಬರಲಿಲ್ಲ.

ಅವಳ ಸಾವಿನ ವಾರ್ತೆಯನ್ನು ಹೊತ್ತ ತಂತಿ ಬಂದಿತ್ತು.

ಮಲಗಿದ್ದಂತೆ ಕಣ್ಣು ಮಸಕಾಯಿತು. ಅಡಿಗೆಯವನು ಕಾಫಿ ತಂದಿಟ್ಟು ಸದ್ದು ಮಾಡಿದಾಗ ಕಣ್ಣು ಒರೆಸಿಕೊಂಡು ಎದ್ದೆ.

* * *

ಹೊರಗೆ ಹೊರಟು ಕಾರಿನ ಬಾಗಿಲು ಹಾಕುವುದರಲ್ಲಿದ್ದಾಗ ರಾಜ ಹತ್ತಿರ ಬಂದು,

"ನೀವು ಬರುವುದು ಬಹಳ ಹೊತ್ತಾಗುವುದೇ ಮಾವ?"

–ಎಂದು ವಿಚಾರಿಸಿದ.

"ಅರ್ಧ ಗಂಟೆ ಆಗಬಹುದು. ಯಾಕೆ?"

"ರಾಮಣ್ಣನವರು ಔಷಧಿಗೆ ಬರುವ ಹೊತ್ತು. ಅದಕ್ಕೆ ಕೇಳಿದೆ."

"ಬಂದರೆ ಸ್ವಲ್ಪ ಹೊತ್ತು ಕುಳಿತಿರುವಂತೆ ಹೇಳು. ಸ್ವಲ್ಪ ಹೆಚ್ಚು ಕಡಿಮೆ ಬಂದುಬಿಡ್ತೇನೆ. ಇವರನ್ನು ಕೆಲವು ದಿನಗಳ ಹಿಂದೆ ಇಲ್ಲಿ ಕೂರಗೊಡದೆ ಹೊರಗೆ ಕಳಿಸಲು ಯೋಚಿಸಿದ್ದೆ. ಈಗ ಕಾಯುವರಲ್ಲಾ ಎಂಬ ಅನುತಾಪ! ನೆನಪಿದೆಯೆ? ನಿನಗೆ ...."

ನಗುವನ್ನು ತಡೆದುಕೊಂಡು ಕೇಳಿದೆ.

"ಹೌದು ಮಾವ–ನೆನಪಿದೆ, ಅದನ್ನು ಮರೆಯುವುದು ಸಾಧ್ಯವಿಲ್ಲ" ರಾಜ ಕೆಂಪು ಮುಖದಿಂದ ಹೇಳಿದ.

ಒಂದು ಗಂಟೆಯ ವೇಳೆ ನಾನು ಮನೆಗೆ ಹಿಂದಿರುಗಿದಾಗ ರಾಮಣ್ಣನವರು ಕೋಲನ್ನು ಮೂಲೆಯಲ್ಲಿಟ್ಟು ಆರಾಮವಾಗಿ ಕುರ್ಚಿಯ ಮೇಲೆ ಮಂಡಿಸಿದ್ದರು. ಅವರ ಮುಂದೆ ಪತ್ರಿಕೆ, ಮಾಸಪತ್ರಿಕೆಗಳ ರಾಶಿಯನ್ನೇ ಸುರಿದಿದ್ದ ರಾಜ. ಸ್ವಲ್ಪ ದೂರದಲ್ಲಿ ಕುಳಿತಿದ್ದ ಹುಡುಗಿಯೊಡನೆ ರಾಜ ಹರಟುತ್ತಿದ್ದ.

"ನಮಸ್ಕಾರ ದೇವರು"

"ನಮಸ್ಕಾರ, ಕಾಯಬೇಕಾಯ್ತು ನೀವು. ಬಂದು ಬಹಳ ಹೊತ್ತಾಯ್ತೆ?"

"ಸ್ವಲ್ಪ ಹೊತ್ತಾಯ್ತು. ತಮ್ಮ ಕೆಲಸದ ನಡುವೆ ನಮಗಾಗಿ ಇಷ್ಟು ಒದ್ದಾಡ್ತೀರಲ್ಲ, ಅಷ್ಟೇ ಸಾಕು. ಕಾದರೆ ನಷ್ಟವಿಲ್ಲ."

"ಹೇಗಿದೆ ಈಗ ?"

"ಎಷ್ಟೋ ಉತ್ತಮ, ತಾನೇ ಕಣ್ಣು ಬಿಟ್ಟು ಓಡಾಡ್ತಾಳೆ. ಬಾಧೆ ಕಡಿಮೆಯಾಗಿದೆ. ಕಣ್ಣಿನಲ್ಲಿ ನೀರು ಸುರಿಯುವುದೂ ನಿಂತಿದೆ."

"ಸರಿ. ಇನ್ನೂ ಒಂದು ತಿಂಗಳಾದರೂ ಚಿಕಿತ್ಸೆ ನಡೆಯಬೇಕು. ಸ್ವಲ್ಪ ಗುಣವಾಯಿತೆಂದು ಬಿಟ್ಟು ಬಿಡಬಾರದು."

"ಅಬ್ಬ–ಇನ್ನೂ ಒಂದು ತಿಂಗಳು ?"

ಮುದುಕರು ಬೆಚ್ಚಿದರು. ಪುನಃ ನಿಟ್ಟುಸಿರು ಬಿಟ್ಟು–

"ಮಾಡೋದೇನು ? ಇವೆಲ್ಲಾ ಬರುವುದೇ ಗ್ರಹಚಾರಕ್ಕೆ. ಬಂದದ್ದನ್ನು ಅನುಭವಿಸಲೇಬೇಕು" ಎಂದರು.

"ಯಾಕೆ ? ನಿಮಗೆ ಬರುವುದು ಕಷ್ಟವಾಗುವುದೇ ?"

"ಅದೆಲ್ಲಾ ಏನೆಂದು ಹೇಳಲಿ ಸ್ವಾಮಿ. ನನ್ನ ಸಂಸಾರದ ಕಷ್ಟ ತೋಡಿಕೊಂಡು ತಮ್ಮ ಮನಸ್ಸಿಗೆ ಬೇಸರ ತರುವುದು ಬೇಡ. ನಾನು ಒಬ್ಬಂಟಿಗ, ಮುಪ್ಪಿನಲ್ಲಿ ಮೊಮ್ಮಕ್ಕಳನ್ನು ಕಟ್ಟಿಕೊಂಡು...."

ಗಂಟಲು ಕಟ್ಟಿದಂತಾಗಿ ಮುದುಕರ ಮಾತು ಅಲ್ಲಿಗೇ ನಿಂತಿತು.

"ನಿಮಗೆ ಬಿಡುವಿಲ್ಲದಿದ್ದರೆ ನೀವೇ ಏಕೆ ಬರಬೇಕು ? ಹುಡುಗಿ ಕಣ್ಣು ಬಿಟ್ಟು ನಡೆಯಬಲ್ಲಳೆಂದು ಹೇಳಿದಿರಲ್ಲ. ಅವಳೇ ಬರಲಿ, ಔಷಧಿ ಹಾಕಿ ಕಳಿಸುತ್ತೇನೆ, ನೀವು ಬರಬೇಕಾದ ಅಗತ್ಯವಿಲ್ಲ."

ಮುದುಕರು ಅದಕ್ಕೆ ಒಪ್ಪಿದರು.

ಮನಸ್ಸಿನಲ್ಲಿ ಹರಸಿರಲೂಬಹುದೆಂದು ಅವರ ಮುಖ ನೋಡಿದಾಗ ತೋರಿತು.

ಒಂದು ದಿನ ಆಸ್ಪತ್ರೆಯಿಂದ ಬಂದಾಗ ಹುಡುಗಿ ಆಗಲೆ ಬಂದು ಬಾ ಗಡೆ ಕುಳಿತಿದ್ದಳು. ಮುಂದುಗಡೆ ಹಾಲಿನಲ್ಲಿ ಹಿಂದಿನ ದಿನ ಗುಣವಾ

ಮನೆಗೆ ಹೋದ ರೋಗಿಯ ಕಡೆಯವರು ಹೂವು ಹಣ್ಣುಗಳನ್ನು ತಂದಿಟ್ಟು ಕೊಂಡು ನನಗಾಗಿ ಕಾದಿದ್ದರು.

ಅದನ್ನು ತೆಗೆದುಕೊಂಡು ಒಳಗೆ ಹೋದಾಗ ಹುಡುಗಿ ಅಲ್ಲಿದ್ದ ಇಂದಿರಳ ದೊಡ್ಡ ಭಾವಚಿತ್ರವನ್ನು ನೋಡುತ್ತಿದ್ದಳು. ಕೈಲಿದ್ದ ಹಾರವನ್ನು ಭಾವ ಚಿತ್ರಕ್ಕೆ ಹಾಕಿ ಹುಡುಗಿ ಕಡೆ ತಿರುಗಿದೆ.

ಅವಳು ನಸುನಕ್ಕು–

"ಅವರಿಗೆ ಹೂವು ಇಷ್ಟವೇ ?" ಎಂದಳು.

ನಾನು ಹೌದೆಂದು ತಲೆ ಅಲ್ಲಾಡಿಸಿದೆ. ಔಷಧಿ ಹಾಕಿದ ಮೇಲೆ ಹೊರಟೆಳು.

"ಇವತ್ತು ರಾಮಣ್ಣನವರು ಬರಲಿಲ್ಲವೇ?"

"ಇಲ್ಲ. ನಾನೊಬ್ಬಳೇ ಬಂದೆ"

"ಜೊತೆಗೆ ಯಾರನ್ನಾದರೂ ಕಳಿಸಲೆ?"

"ಬೇಡ—ನಾನೇ ಹೋಗ್ತೀನಿ"

"ಔಷಧಿ ಹಾಕಿದ್ದು ಉರಿಯುತ್ತಿರಬಹುದು. ಕಣ್ಣು ಬಿಡುವುದಕ್ಕೆ ಆಗುವುದೇ ? ಸಲ್ಪ ಹೊತ್ತು ಕೂತಿರಮ್ಮ"

ಹುಡುಗಿ ಹೊರಟಿದ್ದವಳು ಪುನಃ ಕುಳಿತಳು. ನಾನು ತಟ್ಟೆಯಲ್ಲಿದ್ದ ಒಂದು ಸೇಬಿನ ಹಣ್ಣನ್ನು ಅವಳಿಗೆ ಕೊಡುತ್ತ 'ನಿನ್ನ ಹೆಸರೇನಮ್ಮ?' ಎಂದು ವಿಚಾರಿಸಿದೆ.

"ಸೀತ .."

"ರಾಮಣ್ಣನವರು ನಿನಗೆ ಏನಾಗಬೇಕು ?"

"ಅಜ್ಜ ಆಗಬೇಕು."

"ನಿನ್ನ ತಾಯಿ ತಂದೆ ಎಲ್ಲಿದ್ದಾರೆ ?"

"ನನಗೆ ತಾಯಿ ತಂದೆ ಯಾರೂ ಇಲ್ಲ. ಆದ್ದರಿಂದಲೇ ಅಜ್ಜನ ಮನೇಲಿರೋದು"

ಹುಡುಗಿ ಸಲೀಸಲಾಗಿ ಹೇಳಿದಳು. ಆ ಪ್ರಶ್ನೆ ಕೇಳಬಾರದಿತ್ತೇನೋ ಎನ್ನಿಸಿತು. ಮಾತು ಮರೆಸಲು—

"ಹಣ್ಣು ತಿನ್ನಮ್ಮ" ಎಂದೆ.

"ಮನೇಲಿ ಅಜ್ಜನಿಗೂ ಕೊಟ್ಟು ತಿನ್ತೀನಿ."

"ಹಾಗಾದರೆ ಇನ್ನೊಂದು. ಹಣ್ಣು ಕೊಡ್ತೀನಿ. ಒಂದು ನಿನಗೆ ಇನ್ನೊಂದು ಅಜ್ಜನಿಗೇ. ಸರಿಯೇ"?

ಹುಡುಗಿ ಎರಡು ಕೈಲೂ ಹಣ್ಣು ಹಿಡಿದು ನಗುತ್ತ ಓಡಿ ಹೋದಳು.

* * *

ಸೀತಳ ಒಂದು ಕಣ್ಣು ಚೆನ್ನಾಗಿ ವಾಸಿಯಾಯಿತು. ಇನ್ನೊಂದು ನಿಧಾನವಾಗಿ ಸರಿಹೋಗಬಹುದೆಂಬ ಭರವಸೆ ಬಂದಿತ್ತು.

ದಿನ ಕಳೆದಂತೆ ಅವಳ ಸಂಕೋಚ ಕಡಿಮೆಯಾಯಿತು. ಪ್ರತಿದಿನವೂ ಬರುತ್ತಿದ್ದುದರಿಂದ ಮಾತಿನಲ್ಲಿ ಸಲಿಗೆಯಿತ್ತು. ನನ್ನೊಡನೆ ಮಾತ್ರವಲ್ಲ, ರಾಜನೊಡನೆಯೂ ತಡೆಯಿಲ್ಲದೆ ಹರಟುತ್ತಿದ್ದಳು. ರಾಜನೇ ಉತ್ಸಾಹದಿಂದ ಮುಂದಾಗಿ ಅವಳನ್ನು ಮಾತಿಗೆ ಎಳೆಯುತ್ತಿದ್ದನೆಂದರೂ ತಪ್ಪಾಗಲಾರದು.

ಸೀತ ಮೊದಲಿನಂತೆ ಔಷಧಿ ಹಾಕಿಸಿಕೊಂಡು ತಕ್ಷಣ ಹೊರಡುತ್ತಿರಲಿಲ್ಲ. ಎಷ್ಟೋ ಹೊತ್ತು ಮಾತನಾಡುತ್ತ ಕುಳಿತಿರುತ್ತಿದ್ದಳು.

ನಮಗೂ ಅವಳ ಮಾತು ನಗೆ. ಮುಗ್ಧ ಕುತೂಹಲ ಪ್ರಿಯವಾಗಿ, ಮನಸ್ಸಿಗೆ ಹಿತವಾಗಿರುತ್ತಿತ್ತು.

ಮನೆಗೆ ಬಂದೊಡನೆಯೇ ಅವಳನ್ನು ನೋಡುವುದು ಮಾತನಾಡಿಸುವುದು ರೂಢಿಯಾಗಿಬಿಟ್ಟಿತು. ರಾಮಣ್ಣನವರು ನನ್ನಲ್ಲಿ ಕೃತಜ್ಞತೆಯಿಂದ ಹುಡುಗಿಯ ಮುಂದೆ ನನ್ನನ್ನು ಹೊಗಳಿ ಅವಳಿಗೆ ನನ್ನಲ್ಲಿ ಗೌರವ ಆತ್ಮೀಯತೆ ಸ್ನೇಹ ಎಲ್ಲವೂ ಬೆಳೆದಿತ್ತು.

ಕಣ್ಣು ವಾಸಿಯಾಗಿ ಸೀತ ಬಾರದಿದ್ದರೆ ಹೇಗೆ?

ಆ ಯೋಚನೆ ಹಿತವಾಗಿರಲಿಲ್ಲ.

ಒಂದು ದಿನ ಇದ್ದಕ್ಕಿದ್ದಂತೆ ಇಂದಿರಳ ವೀಣೆ ಹೊರಗೆ ಬಂದಿತ್ತು ರಾಜ ಬಟ್ಟೆಯಿಂದ ಧೂಳು ಒರಸುತ್ತಿದ್ದ.

"ಇದೇಕೆ ಇಲ್ಲಿಗೆ ಬಂತು ?"

ರಾಜನನ್ನು ಕೇಳಿದೆ,

"ಅದರ ಮೇಲೆಲ್ಲ ಜಿರಲೆ ಓಡಾಡುತ್ತಿತ್ತು. ಹೊದೆಸಿದ್ದ ಬಟ್ಟೆ ಒಗ

ಯಕ್ಕೆ ಕೊಟ್ಟೆ. ಹಾಗೆ ಒರೆನೋಣವೆಂದು ಹೊರಗೆ ತಂದೆ"

ವೀಣೆಯ ಏಳು ತಂತಿಗಳಿಂದಲೂ ಒಟ್ಟಿಗೇ ನೆನಪಿನ ನಾದ ಅಲೆ ಅಲೆಯಾಗಿ ಎದ್ದಿತು. ನನ್ನ ನೋವನ್ನು ಗಮನಿಸಿದ ರಾಜ ಪೆಚ್ಚು ಮುಖದಿಂದ ವೀಣೆ ಎತ್ತಿಕೊಂಡು ತಟ್ಟನೆ ಒಳಗೆ ಹೋದ.

ಸೀತ ಗಾಬರಿಯಿಂದ ಒಂದುಸಲ ನನ್ನ ಕಡೆಗೂ ಒಂದುಸಲ ವೀಣೆಯ ಕಡೆಗೂ ನೋಡಿದಳು. ಅವಳಿಗೆ ಏನು ಅರ್ಥವಾಯಿತೋ ಕಣ್ಣಲ್ಲಿ ನೀರು ಕಾಣಿಸಿತು.

ನಾನು ನಗಲು ಪ್ರಯತ್ನ ಪಟ್ಟೆ.

"ಸೀತಾ, ನೀನು ಬರೀ ಮಾತಿನ ಮಲ್ಲಿ ಎಲ್ಲಿ ಒಂದು ಹಾಡು ಹೇಳು ನೋಡೋಣ"

"ನನಗೆ ಹಾಡು ಬರಲ್ಲ. ಅಜ್ಜ ಶ್ಲೋಕ ಕಲಿಸಿದಾರೆ"

"ಅದನ್ನೇ ಹೇಳು"

"ಅದನ್ನೇನು ಹೇಳೋದು? ವೀಣೆಯಲ್ಲ ಪಿಟೀಲಲ್ಲ"

"ವೀಣೆ ಕಲಿತುಕೊ"ತೀಯಾ? ನಿನಗೆ ಇಷ್ಟವೇ?"

"ವೀಣೆ ..! ಯಾರು ಕಲಿಸೋರು?"

"ನಿನ್ನ ಗಂಡ ಹೇಳಿಸುತ್ತಾನೆ"

'ಗಂಡ' ಎಂಬ ಮಾತು ಕಿವಿಗೆ ಬಿದ್ದದ್ದೇ ತಡ; ಸೆರಗಿನಲ್ಲಿ ಮುಖ ಮುಚ್ಚಿಕೊಂಡು ಒಂದೇ ಓಟ ಮನೆಗೆ.

'ಹೆಣ್ಣುಮಕ್ಕಳ ಸ್ವಭಾವವೇ ಹೀಗೆ. ಮೊದಲು ಎಲ್ಲೂ ಇಲ್ಲದ ನಾಚಿಕೆ. ಆಮೇಲೆ ಅಷ್ಟು ಸಲಿಗೆ ಎಲ್ಲಿಂದ ಬರುವುದೋ?' ಎಂದುಕೊಂಡೆ. ನಗು ಬಂತು.

"ಏನಯ್ಯಾ — ಕುಳಿತುಕೊಂಡೇ ಸುಖಸ್ವಪ್ನ ಕಾಣ್ತಿರುವಂತಿದೆ" ಎನ್ನುತ್ತ ನನ್ನ ಗೆಳೆಯ ನರಹರಿ ಒಳಗೆ ಬಂದ.

"ಬಾರಯ್ಯ. ಬಹಳ ದಿನವಾಯ್ತು ನೋಡಿ. ನೀನು ಊರಿನಲ್ಲಿಲ್ಲ ವೇನೋ ಎಂದುಕೊಂಡೆ"

"ಊರಲ್ಲಿಲ್ಲದೆ ನಾನೆಲ್ಲಿ ಹೋಗಲಿ? ಏನೋ ತಾಪತ್ರಯ. ಈ ಕಡೆ ಬರಕ್ಕೇ ಆಗಲಿಲ್ಲ."

"ಹುಷಾರಾಗಿದೀ ತಾನೇ ? ಡಾಕ್ಟರ ನೆನಪು ಬಂತಲ್ಲ."

"ಹಾಗೇನಿಲ್ಲ, ಡಾಕ್ಟರ ಮನೆಗಲ್ಲ ಗೆಳೆಯನನ್ನು ನೋಡಲು ಬಂದೆ"

"ಹಾಗೋ ? ಸಂತೋಷ. ನಿಧಾನವಾಗಿ ಒಂದು ಗಳಿಗೆ ಮಾತಾಡೋಣ"

ನರಹರಿಯನ್ನ ನೋಡಿದ ರಾಜ ಅಡಿಗೆಯವನಿಗೆ ಹೇಳಿ ಕಾಫಿ ಮಾಡಿಸಿದ. ಕಾಫಿಯೊಡನೆ ಮಾತೂ ಸಾಗಿತ್ತು.

ಸಿಗರೇಟಿನ ಹೊಗೆ ರೂಮನ್ನು ತುಂಬಿದಂತೆ ಮಾತಿನ ಸದ್ದು ಕಡಿಮೆಯಾಗಿ ಮೌನ ನೆಲೆಸಿತು.

"ಎಲ್ಲಾದರೂ ಹೊರಗೆ ಹೋಗೋಣ ಬರ್‍ತೀಯ ? ಬೇರೆ ಏನಾದರೂ ಕೆಲಸವಿದೆಯೆ ?"

–ಗೆಳೆಯನನ್ನು ಪ್ರಶ್ನಿಸಿದೆ.

"ಹೋಗೋಣ ನಡಿ" ನರಹರಿ ಎದ್ದು ನಿಂತ.

ಕಾರಿನಲ್ಲಿ ಕಾರಂಜಿ ಕೆರೆಯವರೆಗೆ ಹೋಗಿ ಅಲ್ಲಿ ಇಳಿದು ನಡೆಯುತ್ತ ಹೊರಟೆವು. ಸೂರ್ಯ ಮರೆಯಾಗಿದ್ದರೂ ಕತ್ತಲು ಕವಿದಿರಲಿಲ್ಲ. ಕುಳಿತು ಕೊಳ್ಳಲು ಹಾಕಿದ್ದ ಬೆಂಚಿನ ಮೇಲು ಭಾಗಕ್ಕೆ ಹಬ್ಬಿಸಿದ್ದ ಬಳ್ಳಿಯಲ್ಲಿ ಕೆಂಪು ಹೂಗಳು ಗೊಂಚಲು ಗೊಂಚಲಾಗಿ ಅರಳಿ ನಿಂತಿತ್ತು.

ಸ್ವಲ್ಪ ದೂರದಲ್ಲಿ ಚಾಮುಂಡಿ ಬೆಟ್ಟ ಇಳಿ ಬಿಸಿಲಿಗೆ ಮೈ ಒಡ್ಡಿ ನಿಂತಿತ್ತು. ಬಂಡೆಗಲ್ಲುಗಳ ನಡುವೆ ಹಸುರು ಹೊಳಪು. ಚೆಲುವಿನ ಬಲೆ ಹರಡಿತ್ತು.

ಅದನ್ನು ನೋಡುತ್ತ ನನಗೆ ತಟ್ಟನೆ ಸೀತನ ನೆನಪಾಯ್ತು. ಅವಳು ಈಗ ನಮ್ಮೊಡನೆ ಇದ್ದರೆ ಎಷ್ಟು ಚೆನ್ನ !

ಅದು ಹೇಗೆ ಸಾಧ್ಯ ?

ಈಗೇನೋ ಕಣ್ಣಿನ ನಿಮಿತ್ತ ಬರ್‍ತಿದಾಳೆ. ಆ ಚಿಕ್ಕ ಹುಡುಗಿ ನನ್ನ ಮನಸ್ಸನ್ನು ಹೇಗೆ ತುಂಬಿದಾಳೆಂದು ಯೋಚಿಸಿದಾಗ ನನಗೆ ಆಶ್ಚರ್ಯವಾಯ್ತು.

ಪ್ರೇಮದ ಬಳ್ಳಿ ಎಲ್ಲಿ ಎಲ್ಲಿ ಹೇಗೆ ಹುಟ್ಟುವುದೆಂದು ಹೇಳಲು ಸಾಧ್ಯವಿಲ್ಲ. ಅದರ ಪ್ರಜ್ಞೆ ನಮಗೆ ಬರುವ ವೇಳೆಗೆ ಅದು ಹಬ್ಬಿ ಹೃದಯವನ್ನೆಲ್ಲ

ಆಕ್ರಮಿಸಿರುತ್ತೆ.

"ಏನು ಯೋಚಿಸುತ್ತಿದ್ದಿ ?"

ನನ್ನ ಮೌನವನ್ನು ಗಮನಿಸಿ ಗೆಳೆಯ ಕೇಳಿದ.

"ನನ್ನ ಬಳಿಗೆ ಔಷಧಿಗಾಗಿ ಒಂದು ಹುಡುಗಿ ಬರ್‍ತಿದ್ದಾಳೆ. ಅವಳ ನೆನಪು ಬಂತು. ಅವಳು ಬಂದದಿನ ಆ ಹುಡುಗಿಗೆ ಕಣ್ಣು ಬರುವುದಿಲ್ಲ ಎಂದು ಕೊಂಡಿದ್ದೆ."

"ಆ ವಿಷಯ ನನಗೂ ತಿಳಿಯಿತು!"

"ತಿಳಿಯಿತೆ? ಹೇಗೆ!"

"ರಾಮಣ್ಣನವರು ನನಗೆ ಬಂಧುಗಳು, ನೀನು ಮುತುವರ್ಜಿವಹಿಸಿ ನೋಡಿಕೊಂಡದ್ದರಿಂದ ಸರಿಹೋಯ್ತು, ಒಂದು ವೇಳೆ ದೈವೇಚ್ಛೆ ಬೇರೆಯಾಗಿ, ಆ ಹುಡುಗಿಗೆ ಕಣ್ಣು ಬರದೆ ಹೋಗಿದ್ದರೆ ತಂದೆ-ತಾಯಿ ಇಲ್ಲದ ಕುರುಡು ಹುಡುಗಿಯನ್ನು ಕಟ್ಟಿಕೊಂಡು ಆ ಮುದುಕರು ಎಷ್ಟು ಪಾಡುಪಡ ಬೇಕಾಗಿತ್ತು. ಅವರಿಗೆ ನಿನ್ನನ್ನು ಹೊಗಳಿದಷ್ಟೂ ತೃಪ್ತಿಯಿಲ್ಲ. ದೇವರೆಂದೇ ತಿಳಿದಿದಾರೆ."

"ಹೌದೆ. ನಾನು ಅವರ ಕಷ್ಟವನ್ನು ತಿಳಿಯಬಲ್ಲೆ. ಗುಣವಾಗಲೆಂದೇ ಎಲ್ಲ ರೋಗಿಗಳಿಗೂ ಚಿಕಿತ್ಸೆ ಮಾಡುತ್ತೇನೆ. ಆದರೆ ಎಂದೂ ಈ ಬಗೆಯ ಕಾತರಕ್ಕೆ ಗುರಿಯಾಗಿರಲಿಲ್ಲ. ಸೀತನಿಗೆ ಚಿಕಿತ್ಸೆ ಮಾಡಲು ಆರಂಭಿಸಿದಂದಿನಿಂದ 'ದೇವರೇ ಆ ಹುಡುಗಿಗೆ ಕಣ್ಣು ಕೊಡು' ಎಂದು ಪ್ರಾರ್ಥಿಸುತ್ತಿದ್ದೆ. ನನ್ನ ಶ್ರಮ ಸಾರ್ಥಕವಾಯ್ತು."

"ನಿನ್ನ ಕರ್ತವ್ಯ ನೀನು ಮಾಡಿದೆ. ಮುಂದಿನ ಹೊಣೆ ನಿನ್ನದಲ್ಲ ಅಲ್ಲವೇ?"

"ಬರಿಯ ಕರ್ತವ್ಯವಲ್ಲ. ಸೀತ ನನ್ನ ಬರಿದಾದ ಬಾಳನ್ನು ತುಂಬಿದಾಳೆ. ಅವಳಿಗೆ ಒಳ್ಳೆಯದಾಗಲೆಂದು ಅಂತರ್ಯದಿಂದ ಆಶಿಸಿದೆ."

"ನೀನು ಸೀತನನ್ನು ಪ್ರೀತಿಸುತ್ತೀಯ?"

"ಪುನಃ ಕೇಳ್ತಿಯಲ್ಲ. ನಿನಗೆ ಅರ್ಥವಾಗಲಿಲ್ಲವೆ?"

"ಹಾಗಿದ್ದರೆ ಅದಕ್ಕೇಕೆ ಚಿಂತೆ? ನಿನಗೆ ಇಷ್ಟವಿದ್ದರೆ ಹೇಳು. ರಾಮಣ್ಣನವರಿಗೆ ಹೇಳಿ ನಿನಗೆ ಮದುವೆ ಮಾಡಿಸುತ್ತೇನೆ."

ನಾನು ಜೋರಾಗಿ ನಕ್ಕೆ.

ನರಹರಿ ಪೆಚ್ಚಾಗಿ ನನ್ನ ಕಡೆ ನೋಡಿದ.

"ಪ್ರೀತಿ ಪ್ರದರ್ಶನಕ್ಕೆ ಮದುವೆಯಾಗುವುದೊಂದೆ ದಾರಿಯೆ ?"

"ಕ್ಷಮಿಸು. ನಿನ್ನ ಮನಸ್ಸು ಗೊತ್ತಾಗಲಿಲ್ಲ. ನಿನ್ನ ಇಷ್ಟ ಏನು ?"

"ಇಂದಿರಾ ಹೋದಾಗಿನಿಂದ ನನ್ನ ಬಾಳು ಹಾಳಾಗಿತ್ತು. ಸೀತ ತನ್ನ ಮಮತೆಯಿಂದ ಅದಕ್ಕೆ ಚೈತನ್ಯ ತುಂಬಿದ್ದಾಳೆ. ನನ್ನ ಅಕ್ಕನ ಮಗ ರಾಜ ನಿನಗೆ ಗೊತ್ತಲ್ಲ."

"ನಮಗೆ ಕಾಫಿ ತರಿಸಿ ಕೊಟ್ಟನಲ್ಲ ಅವನು ತಾನೆ ?"

"ಹೌದು. ಅವನಿಗೂ ಯಾರೂ ಇಲ್ಲ. ಸೀತನಿಗೆ ಅವನೊಡನೆ ಮದುವೆ ಮಾಡಿ, ಆ ಮಕ್ಕಳ ಸುಖದಲ್ಲಿ ನಾನು ಸಂತೋಷವನ್ನು ಕಾಣಬೇಕೆಂದಿದ್ದೇನೆ. ಸೀತನನ್ನು ನನಗೆ ಮಗಳಾಗಿ ಕೊಡುವಂತೆ ರಾಮಣ್ಣನವರಿಗೆ ಹೇಳು."

ನರಹರಿ ಒಪ್ಪಿಕೊಂಡ.

ಸಂತೋಷದಿಂದ ಅವನ ಮುಖ ಅರಳಿತ್ತು.

* * *

ರಾಜನ ವಧುವಾಗಿ ಸೀತನನ್ನು ಮನೆ ತುಂಬಿವಳು ಎಳೆತನದಲ್ಲೇ ನನ್ನಲ್ಲಿ ಅವಳು ತೋರಿಸಿದ ಮಮತೆ ದಿನ ಕಳೆದಂತೆ ತಾಯಿಯ ಪ್ರೇಮದಂತೆ ನನ್ನನ್ನು ಸುತ್ತುವರೆದಿತ್ತು. ಸೀತ ತನ್ನ ಪ್ರೇಮದಿಂದ ನನ್ನನ್ನೂ ರಾಜ ನನ್ನೂ ಬಂಧಿಸಿದ್ದಳು.

ಈಗ ನನಗೆ ಮನೆಗೆ ಬರಲು ಬೇಸರವಿಲ್ಲ. ಬಂದ ಕೂಡಲೇ ಪುಟ್ಟಿ ಇಂದಿರ ತಾಯಿಯ ಕೈಯಿಂದ ಜಾರಿ ನನ್ನ ಬಳಿಗೆ ಬರುತ್ತಾಳೆ. ಅವಳ ನಗು ಬಾಗಿಲಿನಲ್ಲೇ ನನಗೆ ಸ್ವಾಗತವನ್ನು ತೋರಿ, ಮನೆಯನ್ನೆಲ್ಲ ತುಂಬಿರುವಂತೆ ಭಾಸವಾಗುತ್ತೆ.

ಹವಳದಂತಹ ತುಟಿಗಳನ್ನು ಒಂದಾಗಿಸುತ್ತ —

"ಮ....ಮಾ....ಮಾವ"

ಎಂದು ತೊದಲಿದಾಗ ನಾನು ನನ್ನ ಶ್ರಮವೆಲ್ಲವನ್ನು ಮರೆತು, ಅದನ್ನು ನೋಡುತ್ತ ನಿಲ್ಲುತ್ತೇನೆ.

# ಮಾರ್ಗದರ್ಶಿ

ಸುರೇಶ ಮತ್ತೊಮ್ಮೆ ಗಡಿಯಾರ ನೋಡಿದ.

ಅದು ಹತ್ತನೆಯ ಸಲ.

ಅವನ ಬೇಸರವನ್ನು ಲೆಕ್ಕಿಸದೆ ಗಡಿಯಾರದ ಮುಳ್ಳು ಮುಂದೆ ಹೋಗುತಿತ್ತು. ಜೇಬಿನಿಂದ ಕೈ ವಸ್ತ್ರ ತೆಗೆದು, ಬೆವರುತ್ತಿದ್ದ ಹಣೆಯನ್ನು ಒರೆಸಿದ. ಕತ್ತಿನ ಸುತ್ತಲೂ ವಸ್ತ್ರವನ್ನು ಆಡಿಸಿದ. ಬಿಸಿಲು ನಿದಾನವಾಗಿ ಕಡಿಮೆಯಾಗುತಿತ್ತು.

"ಏನು ರೋಗವೋ ಆ ಬಸ್ಸಿಗೆ? ಅದು ಸರಿಯಾದ ಹೊತ್ತಿಗೆ ಬಂದಿದ್ದರೆ, ಈ ವೇಳೆಗೆ ರತ್ನಳ ಮನೆಯಲ್ಲಿ ಆರಾಮವಾಗಿ ಕಾಫಿ ಕುಡಿಯುತ್ತ ಮಕ್ಕಳೊಂದಿಗೆ ಆಟವಾಡುತ್ತ ಇರಬಹುದಾಗಿತ್ತು.

ಎಂತಹ ಮುದ್ದು ಮಕ್ಕಳು?

ಅವನಿಗೆ ಮಕ್ಕಳೆಂದರೆ ಪ್ರಾಣ. 'ಮಾವ....ಮಾವ' ಎನ್ನುತ್ತ ಯಾವಾಗಲೂ ಅವನಿಗೇ ಗಂಟು ಬೀಳುತ್ತಿದ್ದುವು. ಅವನ ಬಳಿ ಸಲಿಗೆ ಹೆಚ್ಚು.

"ನನ್ನ ಸಾಮಾನು ಮುಟ್ಬೇಡ್ರೋ" ಎಂದು ಗದರಿಸಿದರೂ, ಮುಟ್ಟಿದರೆ ಮಾವ ದಂಡಿಸುವುದಿಲ್ಲವೆಂದು ಮಕ್ಕಳಿಗೆ ಗೊತ್ತು.

ಅಲ್ಲದೆ ಅವನ ಬಳಿ ಬಿಸ್ಕತ್ತು, ಪೆಪ್ಪರಮೆಂಟು, ಟಾಫಿ ಎಲ್ಲ ಇರುತಿತ್ತು. ಮಕ್ಕಳಿಗೆ ಪ್ರಿಯವಾದುದೆಲ್ಲ ಇದ್ದಮೇಲೆ ಸಲಿಗೆಯಲ್ಲದೆ ಮತ್ತೇನು? ರಜಕ್ಕೆಂದು ಮಾವ ಊರಿಗೆ ಬಂದಮೇಲೆ ಮಕ್ಕಳ ಬದುಕು ವರ್ಣರಂಜಿತವಾದಂತೆ ರತ್ನಳಿಗೆ ತೋರಿತು.

ಬಾಣಂತನಕ್ಕೆಂದು ತವರಿಗೆ ಬಂದಿದ್ದ ರತ್ನ ಹೇಳುವುದಿತ್ತು,

"ಸುರೇಶ-ನೀನು ಬಂದಮೇಲೆ ಮಕ್ಕಳ ಮುಖ ಗೆಲುವಾಯ್ತು ಕಣೋ. ಇಲ್ಲಿ ಅವರಿಗೆ ಯಾರದ್ದೂ ಹೆಚ್ಚು ಸಲಿಗೆ ಇಲ್ಲ ನನ್ನೇ ಎಲ್ಲಾದಕ್ಕೂ ಪೀಡಿಸ್ತಾ ಇದ್ದರು."

"ನನಗೂ ಅಷ್ಟೆ. ಇವರ ಜೊತೆ ಆಟದಲ್ಲಿ ಹೊತ್ತು ಹೋದದ್ದೇ ಗೊತ್ತಾಗಲ್ಲ" ಎಂದಿದ್ದ.

ಆ ಮಾತಿಗೆ ಒಂದು ವರ್ಷವಾಯ್ತು. ಈಗ ಮತ್ತೆ ಬೇಸಿಗೆ ರಜ ಬಂದು, ಸುರೇಶ ಮತ್ತೆ ಊರಿಗೆ ಬಂದಿದಾನೆ.

ಈಗ ಪುಟ್ಟ ಜಾನಕಿ ಹೇಗಿದಾಳೋ ?

ಆಗ ಎರಡು ತಿಂಗಳ ಮಗು, ತೊಟ್ಟಿಲಲ್ಲಿ ಮಲಗಿ ಕೈಕಾಲು ಬಡಿಯುತ್ತ ಆಡವಾಡುತ್ತಿತ್ತು. ಈಗ ಮನೆತುಂಬ ಓಡಾಡುತ್ತಿರಬಹುದು.

ತೊಟ್ಟಿಲು ತೂಗುತ್ತ ರತ್ನ ಹಾಡು ಹೇಳುತ್ತಿದ್ದರೆ ಕೇಳುವುದಕ್ಕೆ ಏನು ಸೊಗಸು ? ಮಗುವಿನ ಮೇಲಿನ ಮಮತೆ ಹಾಡಿನೊಡನೆ ಹೊನಲಾಗಿ ಹರಿಯುತ್ತಿತ್ತು.

"ಯಾಕಳುವೆ ಎಲೆಕಂದ ಬೇಕಾದ್ದು ನಿನಗೀವೆ
ನಾಲ್ಕೆಮ್ಮೆ ಕರೆದ ನೊರೆಹಾಲು .."

"ನಮ್ಮ ಮನೇಲಿ ನಾಲ್ಕೆಮ್ಮೆ ಎಲ್ಲಿ ಬರಬೇಕು ? ಹಾಲಿನ ಬೋರಮ್ಮ ಗೂಡೇಲಿ ಬಟ್ಟೆ ಮುಚ್ಚಿಕೊಂಡು "ಹಾಲು" ಎಂದು ತರುವ ನೀರೇ ನಮಗೆ ಪಾವನ."

ಎಂದು ಸುರೇಶ ಅಕ್ಕನಿಗೆ ಹೇಳುತ್ತಿದ್ದ.

"ಇಲ್ಲಿನ ಹಾಲು ದೇವರಿಗೇ ಪ್ರೀತಿ. ನಾನು ನಮ್ಮ ಮನೆ ಎಮ್ಮೇನ ಜ್ಞಾಪಿಸಿಕೋತಿದ್ದೆ."

"ಹಾಗಾದ್ರೆ ಲೆಖ್ಖ ತಪ್ಪಾಯ್ತಲ್ಲ ಎಂಟು ಎಮ್ಮೆ ಎಂದು ಹೇಳು" ಸುರೇಶನಿಗೆ ಅಕ್ಕನ ಮನೆಯಲ್ಲಿರುವ ಎಮ್ಮೆಗಳ ಸಂಖ್ಯೆ ಗೊತ್ತು.

"ಅದೂ ತಪ್ಪೆ, ನೀನು ನೋಡಿದ ಈಚೆಗೆ ಇನ್ನೂ ಎರಡು ಹಸು ಹೆಚ್ಚಾಗಿದೆ" ರತ್ನ ಹೇಳಿದಳು

ಸುರೇಶನಿಗೆ ಬಾಯಲ್ಲಿ ನೀರೂರಿತು. ಹಾಲು, ಮೊಸರು, ಬೆಣ್ಣೆ ತುಪ್ಪ, ಈ ನಡುವೆಯಂತೂ ಅವೆಲ್ಲ ಕನಸಾಗಿದೆ.

ಮೈಸೂರು ಪಟ್ಟಣದ ಸೌಕರ್ಯಕ್ಕೂ, ಹಳ್ಳಿಯ ಸೌಖ್ಯಕ್ಕೂ ಹೊರತಾಗಿದೆ. ಮುಂಬಯಿಯಲ್ಲಿ ಸುರೇಶನಿಗೆ ಒಳ್ಳೆಯ ಹಾಲು ಸಿಕ್ಕುತಿತ್ತು. ಹಾಲಿನ ಬೂತಿನ ಮುಂದೆ ನಿಂತರೆ, ಬೆಳಗಿನ ಸೀಸೆಯಲ್ಲಿ ಮುಂದಗೆ ಮಜ್ಜಿಗೆ

ಯಂತೆ ಕಾಣುತ್ತಿದ್ದ ಹಾಲು ದೊರೆಯುತ್ತಿತ್ತು.

ಅದು ಸಿದ್ಧವಾಗಿ ಬರುತ್ತಿದ್ದ ಅರೆ ಮಿಲ್ಕ್ ಕಾಲೊನಿಯೋ ?.... ಅದೊಂದು ಕ್ಷೀರ ಸಮುದ್ರ.

ಹಳ್ಳಿಯಲ್ಲಿದ್ದ ರತ್ನಳ ಮನೆಯಲ್ಲಿ ಎಲ್ಲವೂ ಸಮೃದ್ಧಿಯೇ, ಅವಳ ಮಾವನವರು ದೊಡ್ಡ ಕುಳ, ಹೊಲ, ಗದ್ದೆ, ತೋಟ, ವ್ಯಾಪಾರ, ಲೇವಾ ದೇವಿ, ಎಲ್ಲವೂ ಇದ್ದುವು.

ಯಾವುದಕ್ಕೂ ಅಭಾವವಿಲ್ಲ.

ಆದರೂ ಅವೆಲ್ಲವನ್ನೂ ಬಿಟ್ಟು ರತ್ನ ಮೈಸೂರಿಗೇ ಬರಬೇಕಾಯ್ತು. ಅಲ್ಲಿನ ಡಾಕ್ಟರು ಅವಳು ಮೈಸೂರಿಗೆ ಹೋಗುವುದೇ ಒಳಿತೆಂದು ಅಭಿಪ್ರಾಯ ಪಟ್ಟಿದ್ದರು.

ಬೇಗ ಬೇಗ ಮಕ್ಕಳು, ಮೈಯಲ್ಲಿ ರಕ್ತವಿಲ್ಲ. ದೊಡ್ಡ ಮನೆ ಜವಾಬ್ದಾರಿ. ವಿಶ್ರಾಂತಿಯೂ ಕಡಿಮೆ. ಇದೆಲ್ಲ ಸೇರಿ ಹೆರಿಗೆಯ ಸಮಯದಲ್ಲಿ. ತಾಯಿಯ ಸನಿಹ, ವೈದ್ಯಕೀಯ ಸೌಲಭ್ಯ ಎರಡನ್ನೂ ಬಯಸಿ ಮೈಸೂರಿಗೆ ಬಂದಿದ್ದಳು.

"ಸುರೇಶ- ಮುಂದಿನ ಸಲ ರಜಕ್ಕೆ ಬಂದಾಗ ಖಂಡಿತ ನಮ್ಮೂರಿಗೆ ಬರಬೇಕು"

-ಎಂದು ಬಲವಂತವಾಗಿ ಆಹ್ವಾನ ಕೊಟ್ಟಿದ್ದಳು.

"ನಮ್ಮ ಅತ್ತೆಯವರ ಕೈಲಿ ನೀನು ಊಟಮಾಡಬೇಕು. ದೋಸೆ ಕೊಟ್ಟರೆ ಜೊತೆಗೆ ಬೇಲದಕಾಯಿ ಗಾತ್ರ ಬೆಣ್ಣೆ ಹಾಕದಿದ್ದರೆ ಅವರಿಗೆ ತೃಪ್ತಿ ಇಲ್ಲ. ಮನೆಗೆ ಅತಿಥಿಗಳು ಬಂದರೆ ಸಾಕು, ಅವರಿಗೆ ಎಷ್ಟು ಉಪಚಾರ ಮಾಡಿದರೂ ಸಾಲದು. ದಿನಕ್ಕೆ ಒಂದು ಬಗೆಯ ಊಟ, ಒಂದು ಬಗೆಯ ತಿಂಡಿ"

-ಎಂದು ಆಸೆಯನ್ನೂ ತೋರಿಸಿದ್ದಳು.

"ಆಮೇಲೆ ನನ್ನ ಗತಿ ಏನು? ಮುಂಬಯಿಗೆ ಹೋಗುವ ಹೊತ್ತಿಗೆ ಹದಿನೈದು ಪೌಂಡು ಊದಿಬಿಟ್ಟರೆ ?"

"ಏನೂ ಭಯವಿಲ್ಲ, ಒಂದು ವಾರದ ಹೊತ್ತಿಗೆ ಗಾಳಿ ಹೋದ ಬೆಲೂನಿನಂತೆ ಅಗ್ತೀಯ"

-ಎಂದು ಹಾಸ್ಯ ಮಾಡಿದ್ದಳು ರತ್ನ.

ಇನ್ನೂ ಎಷ್ಟು ಹೊತ್ತು ಕಾಯುವುದು ?

ರೈಲಿನಿಂದ ಇಳಿದು ನಿಲುವುನೆಯಲ್ಲಿ ವಿಚಾರಿಸಿದಾಗ ಮಾಸ್ತರರು-

"ಹಾಸನದಿಂದ ಬರೋ ಬಸ್ಸು ಇನ್ನು ಅರ್ಧಘಂಟೇಲಿ ಬಂದು ಬಿಡುತ್ತೆ" ಎಂದು ಹೇಳಿದ್ದರು.

ನೀಲಿಯ ವಸ್ತ್ರ ಧರಿಸಿದ್ದ ಪೋರ್ಟರು,

"ಆ ಮರದ ಹತ್ತಿರ ನಿಂತಿರಿ, ಬಸ್ಸು ಅಲ್ಲೇ ನಿಲ್ಲೋದು" -ಎಂದು ಕೈ ತೋರಿಸಿದ್ದ.

ಸುರೇಶ ಸೂಟ್‌ಕೇಸ್ ಹಿಡಿದು ಆಗಿನಿಂದ ಅಲ್ಲೇ ನಿಂತಿದ್ದ. ಹಾಗೆ ನಿಂತು ಒಂದು ಘಂಟೆಯು ಮೇಲಾಗಿತು. ನಿಂತು ಬೇಸರವಾದಾಗ ಮರದ ಬೊಡ್ಡೆಯನ್ನು ಕೈ ವಸ್ತ್ರದಿಂದ ಒರೆಸಿ ಅದರ ಮೇಲೆ ಕುಳಿತದ್ದೂ ಆಯ್ತು.

ಮತ್ತೊಮ್ಮೆ ಹೋಗಿ ಮಾಸ್ತರರನ್ನೇ ವಿಚಾರಿಸಿದರೆ ಹೇಗೆ ? ಬೇರೆ ಬಸ್ಸು ಯಾವುದಾದರೂ ಬರುವುದುಂಟೆ ? ಎಂದು ತಿಳಿದೀತು.

ಸುರೇಶ ಧಟ್ಟನೆ ಎದ್ದು ನಿಂತ.

ಆದರೆ ತಾನು ಆ ಕಡೆ ಹೋದಾಗ ಈ ಕಡೆ ಬಸ್ಸು ಬಂದು ಬಿಟ್ಟರೆ ? ಅಷ್ಟು ಹೊತ್ತಿನಿಂದ ಕಾದದ್ದು ವ್ಯರ್ಥವಾಗುವುದಿಲ್ಲವೆ ?

ಸ್ವಲ್ಪ ದೂರದಲ್ಲಿ ನಿಲುವುನೆಯ ಹೆಂಚು ಕಾಣಿಸಿತು. ಅದೊಂದು ಸಣ್ಣ ನಿಲ್ದಾಣವಾದ್ದರಿಂದ ಎಲ್ಲ ರೈಲುಗಳೂ ಅಲ್ಲಿ ನಿಲ್ಲುತ್ತಿರಲಿಲ್ಲ ಓಡಾಡುವ ಜನಗಳೂ ಕಮ್ಮಿ. ಇವನ ಜೊತೆ ರೈಲಿನಿಂದ ಇಳಿದ ಒಬ್ಬಿಬ್ಬರು ಕಾಲುಹಾದಿಯಿಂದ ತಮ್ಮ ಹಳ್ಳಿಯ ಕಡೆ ಹೊರಟು ಹೋಗಿದ್ದರು.

ಅವರನ್ನಾದರೂ ವಿಚಾರಿಸಿದರೆ ಚೆನ್ನಾಗಿತ್ತು. ಈಗ ಇಲ್ಲಿ ಕೇಳೋಣವೆಂದರೂ ಯಾರೂ ಇಲ್ಲ.

ರತ್ನ ಈ ಕೊಂಪೆಯಲ್ಲಿ ಏಕಾದರೂ ಇದಾಳೊ ?

ಇದೆಂತಹ ಯೋಚನೆ ? ಅವರ ಆಸ್ತಿ, ಮನೆ ಎಲ್ಲಾ ಇರೋದು ಇಲ್ಲಿ. ಇಲ್ಲಿರುವುದರಿಂದಲೇ ಆ ಸೌಖ್ಯ ಸಮೃದ್ಧಿ !

ಸುರೇಶನಿಗೆ ನಗು ಬಂತು.

ಗಡಿಯಾರದಂತೆ ಒಂದೇ ರೀತಿ ನಡೆಯುವ ಮುಂಬಯಿಯ ಜೀವನವೆಲ್ಲಿ? ಇದೆಲ್ಲಿ ?

ಅಲ್ಲಿ ಪ್ರತಿ ನಿಮಿಷಕ್ಕೂ ಬೆಲೆ. ಇಲ್ಲಿ ಒಂದೆರಡುಘಂಟೆ ವ್ಯತ್ಯಾಸ ವಾದರೂ ಯಾರೂ ಲಕ್ಷಿಸುವುದಿಲ್ಲ.

ಸ್ವಲ್ಪ ಮುಂಚೆ ಎತ್ತಿನ ಗಾಡಿಯೊಂದು ಬಂದಾಗ ಸುರೇಶ-

ಬಸ್ಸು ಎಷ್ಟು ಹೊತ್ತಿಗೆ ಬರುತ್ತೆ ?”

ಎಂದು ಆತಂಕದಿಂದ ಕೇಳಿದ್ದ.

“ಇನ್ನೇನು ಬರ್‍ಬೋದು. ಎಷ್ಟೋ ಸಲ ಬಸ್ಸು ನಮ್ಮೂರತಾವ ಬರೋವಾಗ, ದೀಪ ಹಾಕಿರ್‍ತಾರೆ. ಇನ್ನೂ ಬಿಸಿಲೈತೆ”

ಎಂದು ನಿರಾತಂಕವಾಗಿ ಹೇಳಿ ಮುಂದೆ ಸಾಗಿದ್ದ. ಸುರೇಶನ ಆತುರ ನೋಡಿ ನಕ್ಕಿರಲೂ ಬಹುದು

ಹೊತ್ತು ನಿದಾನವಾಗಿ ಉರುಳುತಿತ್ತು.

ಸಂಜೆ ಬಿಸಿಲಿನಲ್ಲಿ ಹೊನ್ನಿನ ಕಾಂತಿ ತಳೆದು ಮಿರುಗುತ್ತಿದ್ದ ಎಲೆಗಳು ಮತ್ತೆ ಹಸುರಾಗಿ ಕಾಣಿಸಿದುವು.

ಜೇಬಿನಿಂದ ಸಿಗರೇಟು ತೆಗೆದು ಬಾಯಿಗಿಟ್ಟು, ನಿಧಾನವಾಗಿ ಅದರ ಹೊಗೆಯನ್ನು ದಿಟ್ಟಿಸಿದ ತನ್ನ ಮುಂದೆ ಸಾಲಾಗಿ ಹರಿಯುತ್ತಿದ್ದ ಕಟ್ಟಿರುವೆ ಗಳ ಸಾಲನ್ನು ಸುರೇಶ ನಿರಾಸಕ್ತಿಯಿಂದ ನೋಡಿದ.

ಆಗಿನಿಂದ ಒಂದೇಸಮ ಓಡಾಡುತ್ತಿವೆ. ಎಲ್ಲಿಗೋ ಇವುಗಳ ಪಯಣ? ಮಧ್ಯೆ ಮಧ್ಯೆ ಒಂದನ್ನೊಂದು ಸಂಧಿಸಿದಾಗ ಮುತ್ತಿಟ್ಟು ಮುಂದೆ ಸಾಗು ತ್ತಿದ್ದುವು.

ಇದು ಯಾವ ನಿಯಮವೋ?

ದೂರದಲ್ಲಿ ಬಸ್ಸು ಬರುವ ಸದ್ದು. ಸುರೇಶ ಎಲ್ಲ ಯೋಚನೆಗಳನ್ನೂ ಕೊಡವಿ ತಟ್ಟನೆ ಎದ್ದುನಿಂತ. ಮೈಮೇಲೆ ಉದುರಿದ್ದ ಕಸ ಕಡ್ಡಿಗಳನ್ನು ಝಾಡಿಸಿ ರಸ್ತೆಯ ಪಕ್ಕಕ್ಕೆ ಬಂದ.

ಸದ್ದು ಹತ್ತಿರ ಬರುತ್ತಿತ್ತು.

ಮೈಯೆಲ್ಲ ಕಣ್ಣಾಗಿ ರಸ್ತೆಯ ಉದ್ದಕ್ಕೂ ಬಗ್ಗಿ ನೋಡಿದ. ಸ್ವಲ್ಪ ಹೊತ್ತಿನಲ್ಲಿ ಬಸ್ಸಿನ ಕೆಂಪು ಮೂತಿ ಕಾಣಿಸಿತು.

ಆದರೆ....ಬಂದದ್ದು ಬಸ್ಸಲ್ಲ, ಸೌದೆ ತುಂಬಿದ ಲಾರಿ.

ತನ್ನನ್ನು ಮುತ್ತಿದ ನಿರಾಸೆಯನ್ನು ಬದಿಗೊತ್ತಿ ಸುರೇಶ ರಸ್ತೆಯ

ಮಧ್ಯಕ್ಕೆ ಬಂದು ಎರಡು ಕೈಗಳನ್ನೂ ಅಡ್ಡವಾಗಿ ಹಿಡಿದು, ನಿಲ್ಲಿಸುವಂತೆ ಜೋರಾಗಿ ಕೂಗಿದ.

ರಸ್ತೆಯ ಪಕ್ಕದಲ್ಲಿ ನಿಂತು ಕೈ ನೀಡಿದರೆ ಲಾರಿ ನಿಲ್ಲುವುದೆಂದು ಯಾವ ಭರವಸೆ? ಆ ಮೇಲೆ ಇಡೀ ರಾತ್ರಿ ಇಲ್ಲೇ ಕಳೆಯಬೇಕಾದರೆ?

ಕರ್‍ರೆಂದು ಬ್ರೇಕಿನ ಸದ್ದು ಮಾಡುತ್ತ, ಲಾರಿ ನಿಂತಿತು.

"ಯಾರ್‍ರೀ ಅದು? .. ಮೈಮೇಲೆ ... ಎಚ್ಚರ...."

ಲಾರಿ ಡ್ರೈವರು ಥಟ್ಟನೆ ನಾಲಿಗೆಗೂ ಬ್ರೇಕು ಹಾಕಿದ.

ಕೈಲಿ ಪೆಟ್ಟಿಗೆ ಹಿಡಿದು ಸುರೇಶ ಹತ್ತಿರ ಬಂದ. ಡ್ರೈವರು ಗದರಿಸಿದ್ದನ್ನು ಗಮನಿಸುವ ಸ್ಥಿತಿಯಲ್ಲಿರಲಿಲ್ಲ ಅವನು.

"ಹಾಸನದಿಂದ ಬರೋ ಬಸ್ಸು ಯಾವಾಗ ಬರುತ್ತೆ? ಅದಕ್ಕಾಗಿ ಎಷ್ಟು ಹೊತ್ತಿನಿಂದ ನಿಂತಿದ್ದೀನಿ ಎನ್ನೋದೇ ಮರೆತು ಹೋಗಿದೆ. ಜೀವಮಾನವೆಲ್ಲಾ ಹೀಗೇ ನಿಂತಿದ್ದೇನೇನೋ ಎನಿಸಿಬಿಟ್ಟಿದೆ" ಸುರೇಶ ಹೇಳಿದ.

ಡ್ರೈವರ್ ಮಂದವಾಗಿ ನಕ್ಕ. ಪಾಪ-ಪಟ್ಟಣದ ಹುಡುಗ. ಈ ಹಳ್ಳಿ ಗಾಡಿನ ಅನುಭವ ಅವನಿಗೆ ಏನು ಗೊತ್ತು?

"ಬಸ್ಸು ಕೆಟ್ಟು ನಿಂತಿರಬಹುದು. ಇಲ್ಲದಿದ್ದರೆ ಈ ಹೊತ್ತಿಗೆ ಬರ್‍ತಿತ್ತು, ನೀವು ಎಲ್ಲಿಗೆ ಹೋಗಬೇಕು?"

ಮಾತಿನೊಂದಿಗೆ ಬೀಡಿ ಕಚ್ಚಿ ಕಡ್ಡಿ ಗೀರಿದ ಅವನು.

"ರಂಗನ ಪಾಳ್ಯಕ್ಕೆ"

"ನಾವು ಆ ಕಡೆ ಹೋಗಲ್ಲ, ಇಲ್ಲದಿದ್ರೆ ನಿಮ್ಮನ್ನೂ ಕರೀತಿದ್ದೆ"

"ಆ ಕಡೆ ಹೋಗದಿದ್ದರೆ ಬೇಡ. ನೀವು ಎಲ್ಲಿಗೆ ಹೋಗುವಿರೋ ಆ ದಾರೀಲಿ ಒಂದು ಊರು ಸಿಕ್ಕಿದರೆ ಇಳಿಸಿಬಿಡಿ. ನಾಳೆ ನೋಡಿಕೊಳ್ಳೋಣ"

"ಬನ್ನಿ ಸ್ವಾಮಿ, ಪೆಟ್ಟಿಗೆ ಕೊಡಿ"

ಡ್ರೈವರ್ ಪಕ್ಕದಲ್ಲಿ ಕೂತಿದ್ದ ಹುಡುಗ ಪಕ್ಕಕ್ಕೆ ಸರಿದು ಜಾಗಮಾಡಿ ಕೊಟ್ಟ. ಅವನಿಗೆ ವಂದನೆ ಸಲ್ಲಿಸುತ್ತ ಸುರೇಶ ಲಾರಿ ಹತ್ತಿದ.

ಎಣ್ಣೆಯ ವಾಸನೆಯನ್ನು ಹರಡಿ ಲಾರಿ ಹೊರಟಿತು. ಸುರೇಶ ನಿರಾತಂಕ ವಾಗಿ ಉಸಿರಾಡಿದ.

"ಎಲ್ಲಿಂದ ಬರ್‍ತಿದೀರಿ?"

ಬೀಡಿಯನ್ನು ಎಸೆದು ಡ್ರೈವರ್ ವಿಚಾರಿಸಿದ.

"ಮೈಸೂರಿನಿಂದ"

"ಪಾಳ್ಯದಲ್ಲಿ ಯಾರಿದಾರೆ?"

"ನಮ್ಮ ಅಕ್ಕ ಇದಾರೆ ನಾನು ಮುಂಬಯಿಯಲ್ಲಿ ಓದ್ತಿದೇನೆ. ರಜಕ್ಕೆ ಬಂದಿದ್ದೆ. ಹಾಗೇ ಅಕ್ಕನನ್ನೂ ಮಕ್ಕಳನ್ನೂ ನೋಡೋಣವೆಂದು ಬಂದೆ, ನಾನು ಬರ್ತೀನಿ ಎಂತ ಕಾಗದಾನೂ ಹಾಕಿದ್ದೆ. ಬರಲಿಲ್ಲ ಎಂತ ಅವರೆಲ್ಲ ಕಾದಿರ್ತಾರೋ ಏನೋ?"

"ನಮ್ಮ ಬಸ್ಸು ಕೆಟ್ಟುಹೋಗಿ ನಿಂತ್ಕೊಳ್ಳೋದು ಇದೇ ಮೊದ್ಲಲ್ಲ. ಅವರ್ಗೆಲ್ಲ ನಮ್ಮ ಬಸ್ಸಿನ ವಿಚಾರ ಗೊತ್ತು"

"ಅಣ್ಣಾ ...ಆ ತೋಟದತಾವ ಇಳಿದ್ಬುಟ್ಟು ಕಾಲ್ದಾರೀಲಿ ಓದ್ರೆ ರಂಗನ ಪಾಳ್ಯ ಹತ್ತಿರ ಅಲ್ವ?"

ಸುರೇಶನ ಪಕ್ಕದಲ್ಲಿ ಕೂತಿದ್ದ ಹುಡುಗ ಡ್ರೈವರಿಗೆ ಹೇಳಿದ.

"ಹೌದು . ನಂಗೆ ಅದು ಮರ್ತೇ ಹೋಗಿತ್ತು. ಹಾಗ್ಮಾಡ್ತೀರ ಸ್ವಾಮಿ ಆ ತೋಟದ ಒಳಗೆ ಕಾಲ್ದಾರಿ ಇದೆ. ತೋಟ ದಾಟಿದ ಮೇಲೆ ಬಯಲು ದೂರವೇನಿಲ್ಲ, ಸುಖವಾಗಿ ನಡೆದು ಹೋಗ್ಬಹುದು"

ಡ್ರೈವರ್ ಅನುಮೋದಿಸಿದ

ಸುರೇಶನಿಗೂ ಅದೇ ವಾಸಿ ಎನಿಸಿತು. ಕಾಣದ ಯಾವ ಊರಿಗೋ ಹೋಗಿ, ಅಲ್ಲಿ ರಾತ್ರಿ ಕಳೆದು, ಬೆಳಗ್ಗೆ ಪುನಃ ಬಸ್ಸು ಹುಡುಕಿಕೊಂಡು ಹೋಗುವುದಕ್ಕಿಂತ, ಈಗ ಹೋಗುವುದೇ ಒಳ್ಳೆಯದು. ಸ್ವಲ್ಪ ದೂರ ನಡೆದರಾಯ್ತು. ಹೇಗೂ ಇನ್ನೂ ಪೂರ್ತಿ ಕತ್ತಲಾಗಿಲ್ಲ ಎಂದುಕೊಂಡ"

ಸುರೇಶ ಜೇಬಿನಿಂದ ಎರಡು ರೂಪಾಯಿ ತೆಗೆದು ಡ್ರೈವರಿಗೆ ಕೊಟ್ಟು-

"ತುಂಬಾ ಉಪಕಾರವಾಯ್ತು" ಎಂದು ವಂದಿಸಿದ.

ಲಾರಿ ಧೂಳು ಎಬ್ಬಿಸುತ್ತ ಮುಂದೆ ಹೋಯ್ತು, ಸುರೇಶ ಒಂದು ಕೈಲಿ ಪೆಟ್ಟಿಗೆ ಹಿಡಿದುಕೊಂಡು ತೋಟದೊಳಗೆ ತೂರಿದ.

ಅಲ್ಲಿ ತೆಂಗು ಅಡಿಕೆ ಮರಗಳ ನಡುವೆ ಕತ್ತಲಾಗೇ ಇತ್ತು. ಎಡ ಬಲ ನೋಡದೆ ಕಾಲುದಾರಿಯನ್ನೇ ಅನುಸರಿಸಿ ನಡೆದ.

ತೋಟವನ್ನು ದಾಟಿ ಬಯಲಿಗೆ ಬಂದಮೇಲೆ ಅವನ ಮನಸ್ಸು ಹಗುರ

ವಾಯ್ತು. ಅಲ್ಲಿ ಇನ್ನೂ ಬೆಳಕಿತ್ತು. ಸಂಜೆಯ ತಂಗಾಳಿ ರೋಯ್ಯನೆ ಬಿಸುತಿತ್ತು.

ಸುರೇಶ ಉತ್ಸಾಹದಿಂದ ಬೇಗ ಬೇಗ ನಡೆದ ಅವನು ಸ್ವಲ್ಪ ದೂರ ನಡೆದಿರಬಹುದು, ಅಲ್ಲಿ ದಾರಿ ಎರಡಾಗಿ ಕವಲೊಡೆದಿತ್ತು.

ಮುಂದೆ ಯಾವ ಕಡೆ ಹೋಗಬೇಕು ?

ಸುರೇಶ ಒಂದು ಕ್ಷಣ ಯೋಚಿಸುತ್ತ ನಿಂತ. ತಾನು ಹಿಡಿಯುವುದು ತಪ್ಪು ದಾರಿಯಾದರೆ? ಪುನಃ ಹಿಂದಕ್ಕೆ ಇಲ್ಲಯವರೆಗೆ ಬರಬೇಕಲ್ಲ!

ಯಾರಾದರೂ ಸಿಕ್ಕರೆ ಕೇಳಬಹುದು.

ಸುರೇಶ ಸುತ್ತಲೂ ನೋಡಿದ. ದೂರದಲ್ಲಿ ಮರದ ಕೆಳಗೆ ಯಾರೋ ಕೋಲೂರಿಕೊಂಡು ನಿಂತಿರುವಂತೆ ತೋರಿತು.

"ನಮಸ್ಕಾರ ಗೌಡರೆ"

ಸುರೇಶ ಹತ್ತಿರ ಹೋಗಿ ಕೈಮುಗಿದ.

ಗೌಡ ಸುಮ್ಮನೆ ನಕ್ಕ, ಕೈ ಮುಗಿಯಲಿಲ್ಲ.

"ರಂಗನ ಪಾಳ್ಯಕ್ಕೆ ಯಾವ ಕಡೆ ಹೋಗ್ಬೇಕು ?"

ಮಗ್ಗುಲಿಗೆ ತಿರುಗಿ ಗೌಡ ಎಡಗಡೆ ರಸ್ತೆಯ ಕಡೆ ಕೈನೀಡಿ ತೋರಿಸಿದ.

"ಇಲ್ಲಿಂದ ಎಷ್ಟು ದೂರ ಆಗುತ್ತೆ ?"

ಸುರೇಶ ಪ್ರಶ್ನಿಸಿದ

"ಹತ್ತಿರವೇ ಇದೆ. ನಾನು ದಿನಾ ತಿರಗೋ ದಾರಿ ಅದು. ತುಂಬಾ ಹತ್ತಿರ. ಕೂಗಳತೆ ಇದ್ದೀತು."

"ಹಾಗಾದ್ರೆ ..ನೀವೂ ಅಲ್ಲಿಗೆ ಬರ್‍ತೀರ ?"

ಸುರೇಶ ಲವಲವಿಕೆಯಿಂದ ಕೇಳಿದ. ಜೊತೆಗೆ ಒಬ್ಬ ಪ್ರಯಾಣಿಕ ಸಿಕ್ಕಬಹುದೆಂಬ ಯೋಚನೆ ಹಿತವಾಗಿತ್ತು. ಅಲ್ಲದೆ ಮಾತಾಡುತ್ತ ನಡೆದರೆ ಆಯಾಸವೂ ಕಾಣಿಸೋದಿಲ್ಲ."

"ಇಲ್ಲ ...ನಾನು ಬರಲ್ಲ. ಯಾಕೆ ಬರಲಿ ? ನಾನು ಬರೋದು ಅವಳಿಗೆ ಇಷ್ಟವಿಲ್ಲ."

"ನೀವು ಬರೋದು ಯಾರಿಗೆ ಇಷ್ಟವಿಲ್ಲ ?"

ಸುರೇಶ ಕುತೂಹಲದಿಂದ ಕೇಳಿದ.

"ಇನ್ಯಾರಿಗೆ....? ನನ್ನ ಎಂಡ್ತಿ ನಂಜಿಗೆ. ಅವಳ್ಗೆ ನನಗಿಂತ .. ನನಗಿಂತ ..."

"ಗೌಡನ ಮಾತು ತಡವರಿಸಿತು.

ಇದೇನೋ ಮನೆಯ ಜಗಳ, ಕೆದಕದೆ ಇರೋದೇವಾಸಿ ಎಂದುಕೊಂಡು ಸುರೇಶ ನಾಲ್ಕು ಹೆಜ್ಜೆ ಮುಂದಿಟ್ಟ.

"ಸ್ವಾಮಿ ..ವಸಿ ಬನ್ನಿ"

ಗೌಡ ಹಿಂದಿನಿಂದ ಕೂಗಿದ. ಸುರೇಶ ಹತ್ತಿರ ಬಂದು,

"ಏನು ...? ಬರ್ತೀರಾ ?" ಎಂದ.

ಗೌಡ ಮನಸ್ಸು ಬದಲಿಸಿರಬಹುದೆಂದು ಅವನಿಗೆ ಚಪಲ.

"ಅವಳು ಹಿಂಗೆ ಮಾಡ್ಬೋದಾ ? ಗೆಳೆಯನ್ನ ಕೂಡ್ಕೊಂಡು ನನ್ಮೇಲೆ ದ್ವೇಷಾ ಸಾಧಿಸ್ಬೋದಾ ?"

ಕುರುಚಲು ಗಡ್ಡದಿಂದ ತುಂಬಿದ ಒರಟು ಕೆನ್ನೆಯ ಮೇಲೆ ನೀರು ಹರಿದು ಬಂದಂತೆ ಸುರೇಶನಿಗೆ ತೋರಿತು.

"ನೀವು ನಂಜೀನ ನೋಡಿಲ್ಲ, ಬಲೆ ಚೆಂದಾಗವ್ಳೆ."

ಗೌಡ ಸ್ವಲ್ಪ ಹೆಮ್ಮೆಯಿಂದಲೇ ಹೇಳಿದ.

ಸುರೇಶನಿಗೆ ಅವನನ್ನು ನೋಡಿ ಅಯ್ಯೋ ಪಾಪ ಎನಿಸಿತು. ಹೆಣ್ಣಿನ ಮುಂದೆ ಗಂಡಸು ಕೆಲವು ಸಲ ಎಷ್ಟು ಅಸಹಾಯನಾಗುತ್ತಾನೆ ಎನಿಸಿತು.

ಬೇಡದಿದ್ದರೆ ಒದ್ದು ಬರಬಾರದೆ ? ಅದಕ್ಕೇಕೆ ಅಷ್ಟು ಚಿಂತೆ ? ಅವನಿಗೆ ಧಟ್ಟನೆ ಒಂದು ಯೋಚನೆ ಬಂತು.

"ಗೌಡರೇ . ..ನಿಮಗೆ ಪಾಳ್ಯದ ಸಾಹುಕಾರರು ಗೊತ್ತು ತಾನೆ ?"

ಎಂದು ಪ್ರಶ್ನಿಸಿದ.

"ಗೊತ್ತು" ಎನ್ನುವಂತೆ ಗೌಡ ತಲೆ ಅಲ್ಲಾಡಿಸಿದ.

"ಹಾಗಾದರೆ ನನ್ನ ಜೊತೆ ಬನ್ನಿ. ಅವರ ಸೊಸೆ ನನ್ನ ಅಕ್ಕ. ನಾನು ಅಲ್ಲಿಗೇ ಹೋಗ್ತಿದೇನೆ. ಊರಿನಲ್ಲಿ ಎಲ್ಲ ಅವರ ಮಾತಿಗೆ ಬೆಲೆ ಕೊಡುವರೆಂದು ಕೇಳಿದೇನೆ. ನಾನೂ ಅವರಿಗೆ ಹೇಳ್ತೀನಿ. ಪಂಚಾಯ್ತಿ ಮಾಡಿಸಿದರಾಯ್ತು. ಹಳ್ಳೀಲಿ ಅದೆಲ್ಲ ಉಂಟಲ್ಲ ?"

"ಉಂಟು ...ಉಂಟು. ಎಲ್ಲಾ ಉಂಟು. ಆದರೆ---ಈಗ ಅದರಿಂದ

ಏನೂ ಪ್ರಯೋಜನವಿಲ್ಲ. ಸುಮ್ಮನೆ ಗಲಾಟೆ. ಇನ್ನೂ ಮೊದಲೇ ಆ ಕೆಲ್ಸ ಮಾಡಿದ್ರೆ ...?"

"ಮೊದಲು ಮಾಡಿದ್ರೆ ಚೆನ್ನಾಗಿತ್ತು, ನಿಜ. ಹಾಗೆಂತ ಏನೂ ಮಾಡದೆ ಇರೋದು ಸರಿಯೇ ?"

"ಸರಿಯಲ್ಲ ... ...ತಪ್ಪು ಅದು ನಂಗೂ ಗೊತ್ತು. ಆದರೆ ನಾನೇನು ಮಾಡ್ಲಿ ? ನಾನು ಇಲ್ಲಿಂದ ಮುಂದಕ್ಕೆ ಕಾಲು ಕೀಳುವಂತೆಯೇ ಇಲ್ಲ"

"ಏನು ಹಾಗೆಂದರೆ? ನೀವೇಕೆ ಬರಲಾರಿರಿ?"

"ನಾನು ಬರಬಾರದೆಂದೇ ಅವರಿಬ್ಬರೂ ಸೇರಿ ನನ್ನ ಇಲ್ಲಿ ಹೂಳಿದಾರೆ?

"ಹೂಳಿದಾರೆ....? ಎಲ್ಲಿ ಹೇಗೆ ?"

ಸುರೇಶನ ಧ್ವನಿ ನಡುಗಿತು. ಛಳಿಗೆ ಎಂಬಂತೆ ದೇಹ ಕಂಪಿಸಿತು.

"ಹೇಗೆ ಎಂದರೆ? ಮಚ್ಚಿನಲ್ಲಿ ಹೊಡದ್ರು. ಆಮೇಲೆ...ಆಮೇಲೆ ಹೊತ್ತು ತಂದು ಹಾಕಿದ್ರು"

ಗೌಡ ಜೋರಾಗಿ ನಕ್ಕ. ಆ ನಗು ಸುತ್ತಲೂ ಹತ್ತು ಕಂರಗಳಿಂದ ಎಂಬಂತೆ ಹೊಳಲು ಕೊಟ್ಟಿತು.

ಅದನ್ನು ಕೇಳಲು ಸುರೇಶ ನಿಲ್ಲಲಿಲ್ಲ. ತಾನು ಹೋಗುತ್ತಿರುವ ದಾರಿ ಯಾವುದು ಎಂಬುದನ್ನೂ ಗಮನಿಸದೆ, ಒಂದೇ ಉಸುರಿಗೆ ಓಡಿದ. ಅವನು ಕಣ್ಣಿಗೆ ಕಾಣಿಸದಷ್ಟು ದೂರ ಓಡಿದ ಮೇಲೂ ಹಿಂದಿನಿಂದ ಶಿಳ್ಳು ಹಾಕುವ ಕೀರಲು ಧ್ವನಿ ಅವನನ್ನು ಅಟ್ಟಿ ಬರುತ್ತಿತ್ತು.

# ತಾರಾ

ರಾಮಸ್ವಾಮಿಗೆ ರಜಾದಲ್ಲಿ ಮದ್ರಾಸಿಗೆ ಹೋಗಬೇಕೆಂದು ಆಸೆ. ಕ್ರಿಸ್‌ಮಸ್ ಸೀಸನ್ ಮದ್ರಾಸಿನಲ್ಲಿ ಬಹಳ ಚೆನ್ನಾಗಿರುತ್ತೆ. 'ಪಾರ್ಕ್-ಫೇರ'ನ್ನು ನೋಡುವುದಕ್ಕಂತೂ ಎರಡು ಕಣ್ಣು ಸಾಲದು. "ಆ ಮನೆಗಳೋ, ಅಂಗಡಿಗಳೋ ನೋಡುವುದಕ್ಕೆ ಒಂದು ಚೆನ್ನ" ಎಂದು ಯಾರೋ ಹೇಳಿಬಿಟ್ಟಿದ್ದರು. ಹೊಗಲೋ ಬೇಡವೋ ಎಂದು ಯೋಚನೆ ಮಾಡುತ್ತಿರುವಾಗ, ಆಳು ಒಂದು ಕಾಗದ ತಂದುಕೊಟ್ಟ. ಕಾಗದ ಚಂದ್ರಶೇಖರನದು. ಚಂದ್ರಶೇಖರ ರಾಮಸ್ವಾಮಿಗೆ ಹಳೇ ಸ್ನೇಹಿತ. ರಜಾದಲ್ಲಿ ಖಂಡಿತ ತಮ್ಮ ಊರಿಗೆ ಬರಬೇಕೆಂದೂ, ಹಳ್ಳಿ, ಬಡವರ ಮನೆ ಎಂದು ಉದಾಸೀನ ಮಾಡಕೂಡದೆಂದೂ, ಮನಕರಗುವ ಹಾಗೆ ಬರೆದಿದ್ದ.

ರಾಮಸ್ವಾಮಿಗೆ ಆಶ್ಚರ್ಯವಾಯಿತು. ಹಾಸ್ಟಲಿಗೆ ಹೋದರೆ ಒಂದು ಲೋಟ ಕಾಫಿ ಕೊಡುವುದೇ ಕಷ್ಟವಾಗಿತ್ತು. ಅಂಥವನು ಊರಿಗೆ ಬಾ ಎಂದು ಬರೆಯಬೇಕಾದರೆ ಏನೋ ಉದ್ದೇಶವಿರಬೇಕು. ಉದ್ದೇಶವೇನಾದರೂ ಇರಲಿ, ಈಗ ಇಲ್ಲಿಗೆ ಹೋಗಲೋ, ಅಲ್ಲಿಗೆ ಹೋಗಲೊ, ಒಂದು ಕಡೆ ಮದ್ರಾಸು—ದೊಡ್ಡ ಪಟ್ಟಣ. ನೋಡತಕ್ಕ ಸ್ಥಳ. ಜೊತೆಗೆ ಸಮುದ್ರ—ತಾನು ಎಂದೂ ನೋಡಿದಿದ್ದ ಸಮುದ್ರ. ಅದರ ವಿಚಾರವಾಗಿ ಬಹಳ ಕೇಳಿದ್ದ. ದೂರದಿಂದ ನೋಡಿದರೆ ಸಮುದ್ರ ರಾಜ ನೀಲಾಂಬರವನ್ನುಟ್ಟುಕೊಂಡು ನಲಿಯುತ್ತಿದ್ದಾನೋ ಎನ್ನುವ ಹಾಗೆ ಕಾಣುತ್ತೆ. ಸೂರ್ಯ ಹುಟ್ಟುವಾಗ ಅರುಣನ ಕಿರಣಗಳು ನೀರಿನಮೇಲೆ ಬಿದ್ದರೆ ಏನು ಸೊಗಸು ನೋಡುವುದಕ್ಕೆ! ಆ ಪರ್ವತಾಕಾರವಾದ ಅಲೆಗಳು: ದಡದಲ್ಲಿ ಹೋಗಿ ನಿಂತುಕೊಂಡರೆ ಅವು ನಮ್ಮ ಕಾಲಮೇಲೆ ಉರುಳಿಕೊಂಡು ಹೋಗುವಾಗ ಎಷ್ಟು ಚೆನ್ನಾಗಿರುತ್ತೋ! ಇನ್ನು ಆ ಮರಳೋ, ನೋಡುತ್ತಿದ್ದ ಹಾಗೆ ಬಿದ್ದು ಉರುಳಾಡಲೇ, ಅನ್ನುವ ಹಾಗೆ ಆಗುತ್ತೆ. ಅಲ್ಲಿ ಕುಳಿತು ಸಮುದ್ರ ನೋಡುತ್ತಿದ್ದರೆ ಹೊತ್ತು ಹೋದದ್ದೇ

ಗೊತ್ತಾಗುವುದಿಲ್ಲ ಇದನ್ನೆಲ್ಲಾ ಕೇಳಿದಾಗಿನಿಂದ ತಾನೂ ಒಂದು ಸಲ ಹೋಗಿ ಆ ಸುಖವನ್ನೆಲ್ಲಾ ಅನುಭವಿಸಿಯೇ ಬರಬೇಕೆಂದು ಇಷ್ಟ. ಆದರೆ ಹಳ್ಳಿಯೋಚನೆ ಬರುತ್ತಿದ್ದ ಹಾಗೆ, ಮದರಾಸಿನಲ್ಲಿ ಗುರುತು ಕಂಡನರು ಯಾರೂ ಇಲ್ಲ; ಅಥವಾ ಒಬ್ಬಿಬ್ಬರು ಇದ್ದರೂ ಆ ಮಹಾಪಟ್ಟಣದಲ್ಲಿ, ಎಲ್ಲಿ ಹುಡುಕೋದು? ಏನು ನಮ್ಮ ಊರೆ! ಯಾರಾದರೂ ಒಬ್ಬರು ದೊಡ್ಡ ಮನುಷ್ಯರ ಹೆಸರನ್ನು ಹೇಳಿದರೆ ಒಬ್ಬ ಹುಡುಗನಾದರೂ ಅವರ ಮನೆ ತೋರಿಸಿ ಬಿಡುತ್ತಾನೆ ಅಲ್ಲಿ ಇಂಥವರೆಷ್ಟು ಜನವೋ? ಅದಲ್ಲದೆ ಅಲ್ಲೇನು ಚಂದುವಿನಂಥ ಸ್ನೇಹಿತರ ಮನೆಯುಂಟೆ?

ಕೊನೆಗೆ ಹಳ್ಳಿಗೇ ಹೋಗಬೇಕೆಂದು ನಿರ್ಧರವಾಯಿತು. ಬದುಕಿದ್ದರೆ ಮದರಾಸಿಗೆ ಮುಂದಿನ ಸಲ ಹೋಗೋಣ ಎಂದುಕೊಂಡ ನಾಳೆಯಿಂದ ರಜ. ಬೆಳಗ್ಗೆ ರೈಲಿಗೆ ಹೋಗುವುದೇ ವಾಸಿ ಮಧ್ಯಾಹ್ನದ ಹೊತ್ತಿಗ ಊರಿಗೆ ಸೇರಬಹುದು ಎಂದುಕೊಂಡ ಸರಿ ಮಧ್ಯಾಹ್ನವೆಲ್ಲಾ ಬಟ್ಟೆಬರೆ ಕಟ್ಟುವ ಸಡಗರವೇ ಸಡಗರ. ಬಟ್ಟೆ, ಕನ್ನಡಿ, ಬಾಚಣಿಗೆ, ಹೇರ್‌ಆಯಿಲ್ ಸೋಪು, ಕ್ಷೌರದಕತ್ತಿ, ಟೂತ್‌ಪೌಡರ್ ಇದೆಲ್ಲದರ ಜೊತೆಗೆ ತನ್ನ ಹೊಸ ಕ್ಯಾಮರಾ—ಅಲ್ಲಿ ನ್ಯಾಚುರಲ್ ಸೀನರಿ ಫೋಟೋ ತೆಗೆಯುದಕ್ಕೆ. ಇಷ್ಟೆಲ್ಲಾ ಆಗುವ ಹೊತ್ತಿಗೆ ಸಾಯಂಕಾಲವಾಯಿತು. ಇನ್ನು ಹಾಸಿಗೆ ಕಟ್ಟುವುದೊಂದೇ ಬಾಕಿ; ಬೆಳಗ್ಗೆ ಹೊತ್ತಿಗೆ ಮುಂಚೆ ಎದ್ದು ಕಟ್ಟಿಕೊಳ್ಳುವುದು ಇವನ ಸಡಗರವನ್ನೆಲ್ಲಾ ನೋಡುತ್ತಿದ್ದ ಇವನ ತಾಯಿ ಒಳಗಿನಿಂದ ಬಂದು "ಎಲ್ಲೋ ಪ್ರಯಾಣ ಅನ್ನುವಹಾಗಿದೆಯಲ್ಲ?" ಎಂದು ಕೇಳಿದರು

"ಚಂದು ರಜದಲ್ಲಿ ತಮ್ಮೂರಿಗೆ ಬಾ ಎಂದು ಕಾಗದ ಬರೆದಿದ್ದಾನೆ. ನನಗೂ ಇಲ್ಲೇ ಇದ್ದು ಬೇಜಾರು. ಹೋಗೋಣ ಎಂತ ಇದೀನಿ. ಹೋಗಲೇ ನಮ್ಮ?"

ತಾಯಿಗೆ ನಗು ಬಂತು. ಎಂಥ ಪ್ರಶ್ನೆ? ಎಲೆ ಮುಂದೆ ಕೂತುಕೊಂಡು ಅನ್ನಕಲಸಿ, ತುತ್ತನ್ನು ತುಟಿವರಿಗೆ ತೆಗೆದುಕೊಂಡು ಹೋಗಿ, 'ಊಟ ಮಾಡಲೇ' ಎಂದು ಹೇಳಿದಹಾಗೆ. ಈಗಿನ ಕಾಲದ ಹುಡುಗರೇ ಹೀಗೇ ಎಂದುಕೊಂಡು. 'ಯಾವ ಚಂದುವೋ, ರಾಮು?' ಎಂದರು.

"ನೀನು ನೋಡಿಲ್ಲವೇನಮ್ಮ, ಅವನು ಈ ಊರಿನಲ್ಲಿದ್ದಾಗ ದಿನಾಗಲೂ

ಸಾಯಂಕಾಲ "ವಾಲಿಬಾಲ್"ಗೆ ಹೋಗುವಾಗ ನನ್ನನ್ನು ಕರೆದುಕೊಂಡು ಹೋಗಲು ಬರುತ್ತಿರಲಿಲ್ಲವೇ? ನೀನೆ ಅವನಿಗೆ ನನ್ನ ಜೊತೆಯಲ್ಲಿ ಎಷ್ಟೋ ದಿವಸ ಕಾಫಿ ಕೊಟ್ಟಿದ್ದಿ. ನೀನು ಅನ್ನುತ್ತಿರಲಿಲ್ಲವೇನಮ್ಮ "ಒಳ್ಳೆ ಸ್ನೇಹಿತನ್ನ ಸಂಪಾದಿಸಿದ್ದೀಕಣೋ, ಎಷ್ಟು ವಿಶ್ವಾಸವೋ ಅವನಿಗೆ" ಎಂದು, ಆಗಲೇ ಮರೆತುಬಿಟ್ಟೆಯಾ?"

"ಯಾರು ಕುಳ್ಳಗೆ, ಬಟ್ಟೆ ಮುಖದ ಹುಡುಗ ಬರುತ್ತಿದ್ದನಲ್ಲ, ಅವನು ತಾನೇ!"

"ಅದೆಲ್ಲಾ ನನಗೆ ತಿಳಿಯುವುದಿಲ್ಲ ಆ ವರ್ಣನೆಯೆಲ್ಲಾ ನಿನಗೇ ಸರಿ!"

"ಸರಿ ಸರಿ, ಈಗ ಗೊತ್ತಾಯಿತು ರತ್ನದಂಥ ಹುಡುಗ. ಅಗತ್ಯವಾಗಿ ಹೋಗು. ಆದರೆ ಸ್ವಲ್ಪ ಮುಂಚಿತವಾಗಿ ಹೇಳಬಾರದಾಗಿತ್ತೆ? ಮಕ್ಕಳಿರುವ ಮನೆ ಬರೀ ಕೈಯಲ್ಲಿ ಹೋಗುವುದೇ, ಏನಾದರೂ ತಿಂಡಿ ಮಾಡಿ ಕೊಡುತ್ತಿದ್ದೆ ಹೋಗಲಿ, ಅಂಗಡಿಯಿಂದ ಸ್ವಲ್ಪ ಕಿತ್ತಲೇಹಣ್ಣು, ನೇಬಿನ ಹಣ್ಣು, ಕೋಸುಗೆಡ್ಡೆ, ಮಕ್ಕಳಿಗೆ ಬಿಸ್ಕತ್ತು, ಪೆಪ್ಪರಮೆಂಟು ಇದನ್ನಾದರೂ ತೆಗೆದುಕೊಂಡು ಹೋಗು"

ಎಷ್ಟಾಗಲೀ ನನಗಿಂತ ನಮ್ಮಮ್ಮನೇ ವಾಸಿ, ನಾನು ಎಷ್ಟೇ ಬುದ್ಧಿವಂತನೆಂದುಕೊಂಡಿದ್ದರೂ, ಅವರ ಅನುಭವ ನನಗೆಲ್ಲಿ ಬರಬೇಕು ಎಂದುಕೊಂಡು "ಅಮ್ಮ ನಾನು ಹೋಗುವುದಕ್ಕೆ ಅಣ್ಣ ಒಪ್ಪುತ್ತಾರೆಯೆ?" ಎಂದು ಕೇಳಿದ.

"ನಿನಗೇಕೆ ಯೋಚನೆ, ಆ ಭಾರ ನನಗಿರಲಿ." ಎಂದರು

* * *

ಬೆಳಗ್ಗೆ ಹೊತ್ತಿಗೆ ಮುಂಚೆ ತಿಂಡಿ ಕಾಫಿ ತೆಗೆದುಕೊಂಡು ರೈಲಿಗೆ ಹೊರಟೆ. ಟ್ರಂಕು, ಹಾಸಿಗೆ, ಜೊತೆಗೆ ತಾಯಿ ಹೇಳಿದ ಬುಟ್ಟಿ ಒಂದು. ರೈಲು ಹೋಗುತ್ತಿರುವಾಗ ದಾರಿಯುದ್ದಕ್ಕೂ ನಾನಾ ಯೋಚನೆ ಬಾಯಿ ಕುರುಡೇ ಚಂದಾಗೆ. ಕಾಗದ ಬರೆದಿದ್ದರೆ ರೈಲ್ವೆ ಸ್ಟೇಷನ್ನಿಗೆ ಬರುತ್ತಿದ್ದ ಈಗ ತಾನೇ ಏನು? ಯಾರನ್ನಾದರೂ ವಿಚಾರಿಸೋದು? ಎಂದುಕೊಂಡೆ. ಅಷ್ಟು ಹೊತ್ತಿಗೆ ಮದ್ದೂರು ಬಂತು. ಹೊಟ್ಟೆಯೂ ಚುರ ಚುರ ಅನ್ನುತ್ತಿತ್ತು. ಸ್ವಲ್ಪ ಫಲಾಹಾರವೂ ಆಯಿತು. ರೈಲು ಶ್ರೀರಂಗಪಟ್ಟಣಕ್ಕೆ ಬರುವ

ಹೊತ್ತಿಗೆ ೧೧ ಘಂಟೆ ಆಗಿತ್ತು. ಇಳಿದು ಅತ್ತಿತ್ತ ನೋಡಿದ. "ಕೂಲಿ" ಎಂದು ಕೂಗಿದ. ಒಬ್ಬ ಹುಡುಗ ಓಡಿಬಂದು ಸಾಮಾನು ತೆಗೆದುಕೊಂಡ. ಟಿಕೆಟ್ಟು ಕೊಟ್ಟು ಮುಂದಕ್ಕೆ ಹೋಗುತ್ತಿರುವಾಗ ಕೂಲಿ ಆಳು, "ಯಾರ ಮನೆಗೆ ಹೋಗಬೇಕು ಸ್ವಾಮಿ ?" ಎಂದು ಕೇಳಿದ.

"ಯಾರ ಮನೆಗೂ ಇಲ್ಲಪ್ಪ, ಇಲ್ಲಿ ನಮ್ಮವರು ಯಾರೂ ಇಲ್ಲ" ಎಂದು ರಾಮು ಹೇಳಿದ.

ಹುಡುಗ ಒಳ್ಳೇ ಚುರುಕಾಗಿದ್ದ ಕೂಡಲೇ "ಹೊಳೇ ತಾವಕ್ಕೆ ಹೋಗಬೇಕೇ" ಎಂದ. ಎಲ್ಲರಂತೆ ಅವನೂ ಸ್ನಾನಕ್ಕೆ ಬಂದಿರಬಹುದೆಂದು ಹುಡುಗನ ಊಹೆ !

ರಾಮು ಹೊಳೆಗೆ ಹೋಗಬೇಕೆಂದು ಉದ್ದೇಶಿಸಿರಲಿಲ್ಲ ಆದರೂ ಅವನು ಹೇಳುತ್ತಲೂ "ಹೂ" ಎಂದ. ನದಿಗೆ ಹೋಗಿ ನೋಡುತ್ತಲೆ ಬಹು ಸಂತೋಷವಾಯಿತು ಎಲ್ಲಿ ಕೆಂಪಾಂಬುಧಿ ಕೆರೆ, ಎಲ್ಲಿ ಕಾವೇರಿ ! ಎಷ್ಟು ಸ್ವಚ್ಛವಾಗಿ ಹರಿಯುವ ತಿಳಿನೀರು, ಪುಣ್ಯಕಟ್ಟಿಕೊಳ್ಳಬೇಕೆಂಬ ಆಪೇಕ್ಷೆ ಯಿಲ್ಲದ್ದಿದ್ದರೂ, ಇಂಥ ನದಿ ಇನ್ನೆಲ್ಲಿ ತರೋಣ ? ಬೆಂಗಳೂರಿನಲ್ಲಿ ಕೊಳ ದಪ್ಪಲೆ ನೀರು ಸುರಿದುಕೊಳ್ಳುವುದು ಇದ್ದೇಇದೆ ಬಂದಾಗ ಎಲ್ಲವನ್ನೂ ಅನುಭವಿಸಿ ನೋಡಿಯೇ ಬಿಡಬೇಕು, ಎಂದುಕೊಂಡು ಸ್ನಾನಕ್ಕೆ ಇಳಿದ ಹುಡುಗ ಸಾಮಾನು ಇಟ್ಟುಕೊಂಡು ಮೆಟ್ಟಿಲಮೇಲೆ ಕೂತಿದ್ದ. ಈಜ ಬೇಕೆಂದು ಆಸೆ ರಾಮುಗೆ. ಆದರೆ ಇತ್ತ ತಾನು ಈಜುತ್ತಿರುವಾಗ ಅತ್ತ ಹುಡುಗ ಸಾಮಾನಿನೊಡನೆ ಪರಾರಿಯಾದರೆ ಯಾರನ್ನು ಕೇಳುವುದು ? ಅದೆಲ್ಲಿ ತಂಟೆ ಎಂದುಕೊಂಡು ಮೇಲಕ್ಕೆ ಬಂದು ಬಟ್ಟೆಬರೆ ಹಾಕಿಕೊಂಡು ಹೋಗುತ್ತಾ ದಾರಿಯಲ್ಲಿ ಹುಡುಗನ್ನ ನಿನ್ನ ಹೆಸರೇನೋ ?" ಎಂದು ಕೇಳಿದ.

"ನನ್ನ ಹೆಸರು ಮರಿ, ಬುದ್ಧಿ "

"ಲೋ, ಮರಿ. ರಾಂಪುರ ಇಲ್ಲಿಗೆ ಎಷ್ಟು ದೂರವೋ ?"

"ಮೂರು ಮೈಲಿ ಆಗಬಹುದು ಸ್ವಾಮಿ. ನಿಮ್ಮಂಥವರು ಒಂದು ಘಂಟೆ ಹೊತ್ತಿನಲ್ಲಿ ಅಲ್ಲಿಗೆ ಹೋಗಬಹುದು."

ಹಾಗೇ ಯೋಚನೆ ಮಾಡಿದ. ಈಗಾಗಲೇ ಹನ್ನೆರಡು ಘಂಟೆ. ಹೊಟ್ಟೆ ಒಂದು ಕಡೆ ತಾಳ ಹಾಕುತ್ತಿದೆ. ವಿಪರೀತ ಬಿಸಿಲು. ಈಗ

ಹೋಗುವುದಕ್ಕಿಂತಲೂ ಇಲ್ಲೇ ಎಲ್ಲಾದರೂ ಹೋಟೆಲು ಇದ್ದರೆ ಊಟ ಮಾಡಿಕೊಂಡು ೪ ಘಂಟೆಮೇಲೆ ಬಿಸಿಲು ತಂಪಿಸಿಕೊಂಡು ಹೋಗಬಹುದು. ಅಷ್ಟರಲ್ಲಿ ಈ ಊರನ್ನೂ ಸ್ವಲ್ಪ ನೋಡಬಹುದು ಎಂದುಕೊಂಡು, "ಮರಿ, ಇಲ್ಲಿ ಊಟದ ಹೋಟೆಲು ಇದೆಯೇನೋ ?" ಎಂದು ಕೇಳಿದ.

"ಇದೇ ಬುದ್ಧಿ, ನೀವು ದೇವರ ಗುಡಿಗೆ ಹೋಗುವುದಿಲ್ಲವೇ ? ರಂಗನಾಥನನ್ನು ನೋಡುವುದಕ್ಕೆ "

"ಇದು ಬೇರೆ ಇದೆಯೋ, ಅದನ್ನೂ ನೋಡಿಕೊಂಡು ಹೋಗೋಣ. ಎಂದುಕೊಂಡು ಅಲ್ಲಿಗೆ ಹೋದ ದೇವರ ದರ್ಶನವೂ ಆಯಿತು. ಏನು ಅಜಾನುಬಾಹು ರಂಗನಾಥ ! ಆ ಉದ್ದಕ್ಕೂ ಈ ಉದ್ದಕ್ಕೂ ಏಕವಾಗಿ ಮಲಗಿಬಿಟ್ಟಿದ್ದಾನೆ ! ರಾಮುಗೆ ದೇವರನ್ನು ನೋಡುತ್ತಲೇ ಒಂದೇ ಯೋಚನೆ ಈ ದೇವರಿಗೆ ಪಂಚೆ ಎಲ್ಲಿಂದ ತರುತ್ತಾರೆ ಅಂತ ! ಇಷ್ಟಕ್ಕೂ ರಂಗನಾಥನಿಗೇನು ಶ್ರೀಮಂತ. ಸ್ವಂತವಾಗಿ ಒಂದು ಮಗ್ಗವನ್ನೇ ಇಟ್ಟಿರಬಹುದು. ಹೇಗೆ ಶ್ರೀಮಂತ ಎಂದು ಕೇಳುತ್ತೀರೋ ಕೇಳಿ ಹೇಳುತ್ತೇನೆ— ಅವನು ಪೂಜಾರೀನ "ಅದೇನು ಸ್ವಾಮಿ ತಲೆಕೆಳಗಿರೋದು" ಎಂದು ಕೇಳಿದ. ಅದಕ್ಕೆ ಅವನು "ಕೊಳಗ ಸ್ವಾಮಿ. ಒಂದಾನೊಂದುಕಾಲದಲ್ಲಿ ರಂಗನಾಥ, ತನ್ನ ದುಡ್ಡು ಎಷ್ಟಿದೆ ಎಂದು ನೋಡಲು ಕೊಳಗದಲ್ಲಿ ಅಳೆಯುತ್ತಿದ್ದ. ಅಳದು ಅಳದು ಸಾಕಾಯಿತು ಆದರೂ ದುಡ್ಡು ಬೇರೇ ಮುಗಿಯಲಿಲ್ಲ. ಕೊನೆಗೆ ಬೇಜಾರಾಗಿ ಆ ಕೊಳಗವನ್ನೇ ತಲೆದಸಿಗಿಟ್ಟುಕೊಂಡು ಮಲಗಿ ಬಿಟ್ಟ" ಎಂದು ಹೇಳಿದ.

ಈ ಕಾಲದಲ್ಲಿ ಕೊಳಗದಲ್ಲಿ ಅಳೆಯುವಷ್ಟು ಧಾನ್ಯ ಸಿಕ್ಕುವುದೇ ಕಷ್ಟವಾಗಿರಲಾಗಿ, ದುಡ್ಡನ್ನು ಅಳೆಯಬೇಕಾದರೆ ಶ್ರೀಮಂತನಲ್ಲವೇ ?

ಅಂತೂ ದೇವರ ದರ್ಶನ ಮಾಡಿಕೊಂಡು, ಮರಿ ತೋರಿಸಿದ ಹೋಟೆಲಿಗೆ ಹೋದ. ಅಡಿಗೆ ಹೇಗಿತ್ತೆಂದು ಕೇಳಬೇಡಿ. ಹೊಟ್ಟೆ ಚೆನ್ನಾಗಿ ಕಾದಿದ್ದರಿಂದ ಅದೇ ಅಮೃತವಾಗಿತ್ತು. ಊಟ ಮಾಡಿ ಸ್ವಲ್ಪ ಸುಧಾರಿಸಿಕೊಂಡು ಊರು ನೋಡುವುದಕ್ಕೆ ಹೋದ. "ಶ್ರೀರಂಗಪಟ್ಣ ಒಳ್ಳೆ ವೈಭವವಾದ ಪಟ್ಟಣ. ಸೌಭಾಗ್ಯ ಲಕ್ಷ್ಮಿ ತಾಂಡವಾಡುತ್ತಾಳೆ" ಎಂದು ಅವರ ಅಜ್ಜ ಹೇಳುತ್ತಿದ್ದರಂತೆ. ಶ್ರೀರಂಗಪಟ್ಣ ಮೆರೆತಿದ್ದದನ್ನು ಅವರಜ್ಜ ಬಲ್ಲರು. ಈಗೇನಿದೆ ಅಲ್ಲಿ, ಎಲ್ಲಿ

ನೋಡಿದರೂ ಮುರುಕುಗೋಡೆ! ಒಂದು ತೋಟವನ್ನು ಮಾತ್ರ ಇದು "ಟಿಪ್ಪುಸುಲ್ತಾನರು ಬೇಸಿಗೆಯಲ್ಲಿ ಇರುತಿದ್ದುದು" ಎಂದು ಮರಿ ತೋರಿಸಿದ. ಅದೇನೋ ಚೆನ್ನಾಗಿತ್ತು. ನೋಡಿಕೊಂಡು ರಾಂಪುರದ ಕಡೆಗೆ ಹೊರಟ. ಒಳ್ಳೆ ಸುಟಿಯಾದ ಶಿಷ್ಯ ಸಿಕ್ಕಿದ್ದರಿಂದ ದಾರಿಯಲ್ಲಿ ಬೇಜಾರೇ ಆಗಲಿಲ್ಲ. ಹುಡುಗ ಹೇಳುತ್ತಿದ್ದ ಊರಿನ ವಿಚಾರವಾದ ಹಳೇ ಕಥೆಗಳನ್ನು ಕೇಳುತ್ತ ೫ ಘಂಟೆ ಹೊತ್ತಿಗೆ ಹಳ್ಳಿಗೆ ತಲುಪಿದ.

* * *

ಇನ್ನು ಚಂದು ಮನೆಯನ್ನು ಕಂಡುಹಿಡಿಯುವುದು ಹೇಗೆ, ಎಂದುಕೊಂಡು ಮುಂದೆ ಹೋಗುತಿರುವಾಗ ಚಂದುವೇ ಎದುರಿಗೆ ಬಂದ. ಅಕಸ್ಮಾತ್ ಎದುರಿಗೆ ಬಂದ ರಾಮುವನ್ನು ನೋಡಿ, ಅವನಿಗೆ ಮಾತೇ ಹೊರಡದು. ಕೂಡಲೇ ಸಂತೋಷದಿಂದ "ರಾಮು ಕೊನೆಗೆ ದೊಡ್ಡ ಮನಸ್ಸು ಮಾಡಿ ಬಂದುಬಿಟ್ಟೆಯಾ ನನಗೇಕೆ ಕಾಗದ ಬರೆಯಲಿಲ್ಲ?" ಎಂದಿಷ್ಟೇ ಕೇಳಿ ಆದರದಿಂದ ಅವನ ಕೈಹಿಡಿದುಕೊಂಡ.

"ನಾನು ಹೊರಡುವವರಿಗೂ ಯಾವುದನ್ನೂ ಸೆಟಲ್ ಮಾಡಿರಲಿಲ್ಲ. ಖಂಡಿತವಾದ ಕೂಡಲೆ ಹೊರಟು ಬಂದೆ. ಅದರಿಂದ ಕಾಗದ ಬರೆಯಲಾಗಲಿಲ್ಲ"

ಇಬ್ಬರೂ ಮನೆಯ ಕಡೆ ಹೊರಟರು. ಮನೆಯ ಜಗುಲಿಯಮೇಲೆ ಚಂದೂ ತಂದೆ ಯಾರ ಕೈಲೋ ಮಾತಾಡುತ್ತಾ ಕುಳಿತಿದ್ದರು. ಚಂದು ಅವರಿಗೆ "ಅಪ್ಪಾ, ಇವರೆ ರಾಮುಸ್ವಾಮಿ, ನಾನು ರಜದಲ್ಲಿ ಬನ್ನಿ ಎಂದು ಬರೆದಿದ್ದುದು ಇವರಿಗೇನೇ," ಎಂದು ಹೇಳಿದ

ಅವರು ಆದರದಿಂದ. "ಬಾಪ್ಪ, ನೀನು ಬಂದದ್ದು ಬಹಳ ಸಂತೋಷ. ಹೀಗೆ ಕೂತುಕೋ ಎಂದು ಚಾಪೆ ಕಡೆ ಕೈತೋರಿಸಿದರು.

ರಾಮು ಸಂಕೋಚದಿಂದ ಹೋಗಿ ಒಂದು ಕಡೆ ಕುಳಿತುಕೊಂಡ. ಇವನ ಸಾಮಾನನ್ನು ತೆಗೆಸಿಕೊಂಡು ಚಂದು ಒಳಗೆ ಹೋದ. ಸಾಮಾನ್ಯವಾಗಿ ಹಳ್ಳಿಯ ಮನೆಗಳಲ್ಲಿ ಕೊರಡಿಗಳು ಹೆಚ್ಚಾಗಿರುವುದಿಲ್ಲ. ಚಂದು ಮನೆಯಲ್ಲಿ ಇದ್ದುದು ಎರಡು ಕೊರಡಿ. ಒಂದರಲ್ಲಿ ಅವನ ತಂದೆ ಕಾಗದ

ಪತ್ರ ಏನೇನೋ ಇಟ್ಕೊಂಡಿದ್ದರು ಇನ್ನೊಂದರಲ್ಲಿ ಸಾಮಾನು. ಇವನು ಬರುವುದು ಗೊತ್ತಿದ್ದರೆ ಮುಂಚೆಯೇ ಎಲ್ಲವನ್ನೂ ಸಿದ್ಧಮಾಡಿರುತ್ತಿದ್ದ. ಪಾಪ! ಅವನೇನು ಬಲ್ಲ. ಬೇಗ ಬೇಗ ಸಾಮಾನೆಲ್ಲವನ್ನು ತೆಗೆಸಿ ಕಸ ಗುಡಿಸುತ್ತಿದ್ದ.

ಚಂದು ತಂದೆ ರಾಮು ಕೈಲಿ ಮಾತಾಡುತ್ತ "ನಿನ್ನ ವಿಚಾರದಲ್ಲಿ ಬಹಳ ಕೇಳಿದ್ದೇನಪ್ಪ ನಮ್ಮ ಚಂದುಗೆ ನೀನು ಇದ್ದುದು ಸ್ವಜನಗಳನ್ನು ಬಿಟ್ಟಿದ್ದೀನಿ ಅನ್ನುವಹಾಗೆ ಇಲಿಲ್ಲವಂತೆ,"

"ನಾನೇನು ಮಾಡುತ್ತಿದ್ದೆ ಸಾರ್. ಅವನ ವಿಶ್ವಾಸ ಅಷ್ಟರ ಮಟ್ಟಿಗೆ ಇದೆ. ಏನಾದರೂ ಸ್ವಲ್ಪ ಮಾಡಿದರೂ ಬೆಟ್ಟದ ಹಾಗೆ ಭಾವಿಸುತ್ತಾನೆ."

"ಹಾಗೆಯೇ ಇರಬೇಕು ಕಣಪ್ಪ. ತಾಯಿತಂದೆಗಳನ್ನು ಬಿಟ್ಟು ಪರಸ್ಥಳದಲ್ಲಿರುವವರಿಗೆ ನಿಮ್ಮಂತಹವರೇ ದಿಕ್ಕು. ದೇವರು ನಿನ್ನನ್ನು ನಾವಿರಾರು ಕಾಲ ಚೆನ್ನಾಗಿಟ್ಟಿರಲಿ" ಎಂದರು.

ಇವರು ಹೀಗೆ ಮಾತಾಡುತ್ತಿರುವಾಗ, ಹುಡುಗರೆಲ್ಲ ಒಳಗಿನಿಂದ ಬಂದು ಬಾಗಿಲ ಸಂದಿನಿಂದ ಇಣಿಕಿ ನೋಡುತ್ತಿದ್ದವು ಹುಡುಗರಿಗೆ ಬಂದಿರುವವರನ್ನು ನೋಡಬೇಕೆಂದು ಆಸೆ ಆದರೆ ಈಚೆಗೆ ಬಂದು ನೊಡಲು ಧೈರ್ಯ ಸಾಲದು. ಇದನ್ನು ತಿಳಿದು ಚಂದು ತಂದೆ, "ಬನ್ರೋ ಈಚೆಗೆ ಭಾವ ಬಂದಿದ್ದಾರೆ ಬನ್ನಿ" ಎಂದು ಕರೆದರು. ಆದರೂ ಹುಡುಗರು ಬರಲಿಲ್ಲ ಒಂದು ಹೆಜ್ಜೆ ಮುಂದಿಟ್ಟು ತಲೆಯನ್ನು ಮಾತ್ರ ಹೊರಗಡೆ ಬಗ್ಗಿಸಿದರು. ಅವರಲ್ಲಿ ಒಂದು ಚಿಕ್ಕ ಹುಡುಗನು ಮಾತ್ರ ಹೊರಗೆ ಬಂದು "ಭಾವ ಭಾವ" ಎಂದು ಕೂಗಿ ಘಟ್ಟಿಯಾಗಿ ನಕ್ಕುಬಿಟ್ಟಿತು ಅದನ್ನು ನೋಡಿ ಉಳಿದವರೂ ಘೊಳ್ಳೆಂದು ನಕ್ಕುಬಿಟ್ಟರು.

ರಾಮೂಗೆ ಅವರು ತನ್ನನ್ನು ಏಕೆ 'ಭಾವ' ಅಂದರು ಅನ್ನೋದು ಗೊತ್ತಾಗಲಿಲ್ಲ ಆಗಲೇ ಅವನ ಮನಸ್ಸಿನಲ್ಲಿ ಏನೇನೋ ಯೋಚನೆ ಹಳ್ಳಿಯವರು. ಯಾರಾದರೂ ಮನೆಗೆ ಬಂದರೆ. ಅವರನ್ನು ವಯೋನುಗುಣವಾಗಿ ಅಜ್ಜ, ಮಾವ, ಭಾವ ಎಂದು ಹೇಳುತ್ತಾರೆ ಅನ್ನೋದು ಅವನಿಗೆ ತಿಳಿಯದು. ಆದರೆ ಹುಡುಗರೆಲ್ಲ ನಕ್ಕಿದ್ದನ್ನು ನೋಡಿ ಅವನಿಗೆ ತುಂಬ ನಾಚಿಕೆಯಾಯಿತು. ಅಷ್ಟರಲ್ಲಿ ಚಂದು ಬಂದು ಒಳಕ್ಕೆ ಕರದುಕೊಂಡು ಹೋದ ಚಿಕ್ಕಮನೆ

ಯಲ್ಲಿ ಚಾಪೆಯ ಮೇಲೆ ಕುಳಿತು ಇಬ್ಬರೂ ಮಾತಾಡುತ್ತಿದ್ದರು. ಕಾಫಿ ಬಂತು. ಕುಡಿಯುತ್ತಾ ಇರುವಾಗ ರಾಮು, ಬಂದು, "ಕೆಲಸ ನೋಡು ತ್ತಿದ್ದೀಯಾ ?" ಎಂದು ಕೇಳಿದ.

"ನೋಡುತ್ತಿದ್ದೇನಪ್ಪ. ಮೂರು ನಾಲ್ಕು ಶಾನುಭೋಗತನ. ನಮ್ಮ ತಂದೆ ಒಬ್ಬರ ಕೈಯಲ್ಲೆಲ್ಲಾಗುತ್ತೆ ? ಇಷ್ಟು ದಿನವೂ ನಮ್ಮ ಚಿಕ್ಕಪ್ಪ ನೋಡಿ ಕೊಳ್ಳುತ್ತಿದ್ದರು. ಅವರು ಹೋದಮೇಲೆ ಅದಕ್ಕೇ ನನ್ನನ್ನ ಓದುಬಿಡಿಸಿ ಹಿಂದಕ್ಕೆ ಕರೆಸಿದ್ದು....ತಾಳು. ನಮ್ಮ ತಾಯಿ ಕೂಗು ಹಾಗಿದೆ. ಕೇಳಿ ಕೊಂಡು ಬರ್ತೀನಿ"

ರಾಮು "ಸ್ವಲ್ಪ ನಿಂತುಕೊ" ಎಂದು ಹೇಳಿ ಬುಟ್ಟಿಯಲ್ಲಿದ್ದ ಪೆಪ್ಪರ ಮೆಂಟು ಬಿಸ್ಕತ್ತನ್ನು ಕೈಗೆ, ತೆಗೆದುಕೊಂಡು ಬುಟ್ಟಿಯನ್ನು ಚಂದು ಕೈಗೆ ಕೊಟ್ಟ. ಅವನು ಒಳಗೆ ಹೋಗುತ್ತಲೂ ಪುನಃ ಹುಡುಗರೆಲ್ಲ ಬಂದು ಬಾಗಿಲಲ್ಲಿ ನಿಂತುಕೊಂಡರು. ಅವರ ಕಣ್ಣೆಲ್ಲಾ ರಾಮುವಿನ ಕೈಲಿದ್ದ ಪೆಪ್ಪರಮೆಂಟಿನ ಮೇಲೆ ಅವರಲ್ಲಿ ಎಲ್ಲರಿಗಿಂತಲೂ ಚಿಕ್ಕವನು ಕಿಟ್ಟು ಅವನೇ ಅವರೆಲ್ಲರ ಮುಂದಾಳು. ರಾಮು, "ಬಾ. ಕೊಡುತೀನಿ." ಎಂದು ಪೆಪ್ಪರಮೆಂಟು ತೋರಿಸಿದ. ಹುಡುಗ ಮೆಲ್ಲಗೆ ಅಂಜುತ್ತಂಜುತ್ತ ಹೋಗಿ ಕೈನೀಡಿದ. ಕೈಗೆ ಬಂದಿದ್ದೇ ತಡ ಓಡಿ ಹೋಗಿ ಜೊತೆಯವರಿಗೆಲ್ಲರಿಗೂ ತೋರಿಸಿದ. ಕೂಡಲೇ ಹುಡುಗರ ನಾಚಿಕೆಯೆಲ್ಲಾ ಎಲ್ಲಿ ಹೋಯಿತೊ 'ನಂಗೆ ಭಾವ, ನಂಗೆ ಭಾವ' ಎಂದು ಎಲ್ಲಾ ಒಟ್ಟಿಗೆ ಬಂದು ಸುತ್ತಾ ನಿಂತ ಬಿಟ್ಟವು.

"ಕುಳಿತುಕೊಳ್ಳಿ ಕೊಡುತ್ತೇನೆ" ಎಂದು ಹೇಳಿ ಹಂಚುವುದಕ್ಕೆ ಷುರು ಮಾಡಿ, "ನೀವು ಇಷ್ಟೇ ಜನವೊ ಇರೋದು ?" ಎಂದು ಕೇಳಿದ.

ಎಲ್ಲ ಸುಮ್ಮನಿದ್ದರು. ಕಿಟ್ಟು ಮಾತ್ರ, "ಅಕ್ಕ ಒಬ್ಬಳಿದ್ದಾಳೆ" ಎಂದು ಹೇಳಿದ

"ಹಾಗಾದರೆ ಸರಿ" ಎಂದು ಹೇಳಿ ಎಲ್ಲಾ ಹಂಚಿಕೊಟ್ಟು, ಆ ಹುಡ ಗಿಯೂ ಎಲ್ಲರಂತೆ ಬಂದು ತನ್ನ ಪಾಲನ್ನು ತೆಗೆದುಕೊಂಡು ಹೋಗುವಳೆಂದ ಒಂದು ಪಾಲನ್ನು ಮಾತ್ರ ತನ್ನ ಹತ್ತಿರ ಇಟ್ಟುಕೊಂಡ.

"ಕಾಲು ತೊಳೆದುಕೊ. ಏಳು" ಎಂದು ಚಂದು ಹೇಳಿದ. ಒಳಗೆ ಹೋದರೆ ಸಾಲಿಗೆ ಎರಡು ಮಣೆ. ಎರಡು ಬಾಳೆ ಎಲೆ.

ರಾಮು ನಿರೀಕ್ಷಿಸಿದ್ದಂತೆ ಅವರೆಕಾಯಿ ಹುಳಿ ಬಹಳ ಚೆನ್ನಾಗಿತ್ತು. ರಾಮುಗೆ ಚಂದು ಹಿಂದೆ ಹೇಳಿದ್ದುದು ಜಾಪಕಕ್ಕೆ ಬಂತು. "ಚಂದು ನೀನು. ಅವತ್ತು ಹ ಸ್ಟಲಿನಲ್ಲಿ ಹೇಳಿದ್ದೆಯಲ್ಲಾ. ಹಾಗೇ ಇದೆಯಪ್ಪ ನಿಮ್ಮೂರ ಅವರೇಕಾಯಿ ಹುಳಿ' ಎಂದು ಹೇಳಿದ.

"ಇದು ಅಷ್ಟೇನೂ ಚೆನ್ನಾಗಿಲ್ಲ ಬೆಳಗ್ಗೆ ಕುಯ್ದಿದ್ದದ್ದು. ಸೊಗಡೆಲ್ಲಾ ಹೋಗಿಬಿಟ್ಟಿದೆ. ಸುಮ್ಮನಿರು ನಾಳೀ ಬೆಳಗ್ಗೆ ನಾನೇ ಹೋಗಿ ಹೊಲದಿಂದ ತರುತ್ತೇನೆ" ಎಂದು ಹೇಳಿದ

ಒಳಗಿನಿಂದ "ತಾರೆ, ತಾರೆ" ಎಂದು ಚಂದು ತಾಯಿ ಕೂಗಿದರು. ರಾಮೂಗೆ ಕೂಗಿದ್ದು ಯಾರನ್ನು ಎಂದು ಗೊತ್ತಾಗಲಿಲ್ಲ. ಅವನ ಮನಸ್ಸಿನಲ್ಲಿ "ತಾರೆ" ಎಂದರೆ ಹೆಸರಿರಲಾರದು. ಈ ಹಳ್ಳಿಯಲ್ಲಿ ಅಂಥ ಹೆಸರೆಲ್ಲಿ ಬರಬೇಕು. "ತಾರೆ" ಎಂದರೆ "ಏನನ್ನೋ ಕೊಡೆ" ಎಂದು ಕೇಳಿರಬಹುದು ಅಂದು ಕೊಂಡು ಕತ್ತು ಬಗ್ಗಿಸಿಕೊಂಡು ಊಟಮಾಡುತ್ತಿದ್ದ.

ಕತ್ತಲಾಗಿದ್ದ ಹಿಂದಣ ತೊಟ್ಟಿಯಿಂದ ಹುಡುಗಿಯೊಬ್ಬಳು ಈಚೆಗೆ ಬಂದಳು. ಹುಡುಗಿ ಅಂದರೆ ಆಡುವ ಹುಡುಗಿಯಲ್ಲ. ಆಗ ತಾನೇ ಬಾಲ್ಯದ ಹೊಸ್ತಿಲನ್ನು ದಾಟುತ್ತಿರುವ ಹುಡುಗಿ. ಬಹು ಮೆಲ್ಲಗೆ ಬಂದಳು. ಕೊನೆಗೆ ಒಂದು ನೆರಿಯೂ ಶಬ್ದವಾಗಲಿಲ್ಲ. ಅವಳು ಬಂದದ್ದು ರಾಮುಗೆ ಗೊತ್ತಾಗ ಲಿಲ್ಲ. ಆದರೆ ಅವಳು ಮುಂದಕ್ಕೆ ಹೋಗಲು, ಅವನ ಎಲೆ ಮೇಲೆ ನೆರಳು ಬಿತ್ತು. ಆಗ ಕತ್ತೆತ್ತಿ ನೋಡಿದ "ತಾರೆ" ಹೊರಟು ಹೋಗಿದ್ದಳು. ಆದರೆ ಹಿಂದುಗಡೆ ನಲಿದಾಡುತ್ತಿದ್ದ ಅವಳ ಉದ್ದವಾದ ಜಡೆ ಮಾತ್ರ ಕಣ್ಣಿಗೆ ಬಿತ್ತು.

ಈಗ ಗೊತ್ತಾಯಿತು ಅವನಿಗೆ, "ತಾರೆ" ಎಂದರೆ "ಕೊಡೆ" ಎಂದಲ್ಲ, ಒಬ್ಬಳು ಹುಡುಗಿಯ ಹೆಸರು ಎಂದು.

* * *

ಬೆಳಗ್ಗೆ ಚಂದು ಹೊಲಕ್ಕೆ ಹೊರಟು ಹೋದ. "ನಾನೂ ಬರ್ತೀನಿ" ಎಂದು ರಾಮು ಹೇಳಿದ್ದಕ್ಕೆ, ಅವನು "ಬೇಡ ಅಲ್ಲಿ ದಾರಿ ಚೆನ್ನಾಗಿಲ್ಲ ನಿನಗೆ ನಿನ್ನೆಯೆಲ್ಲಾ ಆಯಾಸವಾಗಿದೆ. ನಾನು ಬೇಗ ಬಂದು ಬಿಡ್ತೇನೆ.

ಆ ಮೇಲೆ ಇಬ್ಬರೂ ಎಲ್ಲಿಯಾದರೂ ಹೋಗೋಣ." ಎಂದು ಹೇಳಿದ. ರಾಮು ತಂದೆ ಅವನು ಏಳುವ ಹೊತ್ತಿಗೇ ಎದ್ದು ಹಳ್ಳಿಯ ಕಡೆ ಹೊರಟು ಹೋಗಿದ್ದರು ಹುಡುಗರೆಲ್ಲಾ ಸ್ಕೂಲಿಗೆ ಹೋಗಿದ್ದರು. ಒಬ್ಬನೇ ಕೂತು ಕೂತು ಬೇಜಾರಾಯಿತು. ಮನೆಯ ಹಿಂದೆ ದೊಡ್ಡ ಹಿತ್ತಿಲು. ಚಂದು ತಾಯಿ ಅಡಿಗೆ ಮನೆಯಲ್ಲಿ ಏನೋ ಮಾಡುತ್ತಿದ್ದರು. ಕ್ಯಾಮಾರಾ ತೆಗೆದು ಕೊಂಡು ಅಲ್ಲಿಗೆ ಹೊರಟ. ಯಾರಾದರೂ ತನ್ನನ್ನು ನೋಡುವರೇನೋ ಎಂದುಕೊಂಡು, ಮೆಲ್ಲಗೆ ಹೋದ. ಯಾರೂ ಇರಲಿಲ್ಲ. ಹಿತ್ತಲಿನಲ್ಲಿ ತುಂಬ ಹೂ ಗಿಡಗಳೂ, ತರಕಾರಿ ಗಿಡಗಳೂ ಇದ್ದವು. ಅಲ್ಲೇ ಸುತ್ತಾಡುತ್ತಾ ಇರುವಾಗ, ಒಂದು ಕಡೆ ಸ್ವಲ್ಪ ಶಬ್ದವಾಯಿತು ತಿರುಗಿನೋಡಿದ ಹುಡುಗಿ ಯೊಬ್ಬಳು ರಾಟೆಯಲ್ಲಿ ನೂಲು ತೆಗೆಯುತ್ತ ಕುಳಿತಿದ್ದಳು. ಒಂದು ಘಳಿಗೆ ದಿಗ್ಭ್ರಮೆಹಿಡಿದವನಂತೆ ನಿಂತು ಬಿಟ್ಟ. ರಾಷ್ಟ್ರಾಭಿಮಾನ ದೇವತೆಯೇ ಹೀಗೆ ಬಂದಿರಬಹುದೆ ಎಂದುಕೊಂಡ ಮರುಕ್ಷಣದಲ್ಲಿಯೇ ಇರಲಾರದೆಂದು ತೋರಿತು. ಚೆನ್ನಾಗಿ ನೋಡಿದ. ಹುಡುಗಿಯ ಮುಖ ಪೂರ್ತಿಕಾಣು ತ್ತಿರಲಿಲ್ಲ ಒಂದು ಕೆನ್ನೆ ಮಾತ್ರ ಕಾಣುತ್ತಿತ್ತು. ಆದರೆ ಬೆನ್ನಿನ ಮೇಲೆ ನಲಿಯುತ್ತಿದ್ದ ಆ ನಿಡುಗುರುಳೇ, ಅವಳ ಗುರುತು ಮಾಡಿ ಕೊಟ್ಟಿತು ಕೂಡಲೇ ಇವಳು ತಾರೆ ಎಂದು ತಿಳಿದುಕೊಂಡ. ಅವನು ನಿಂತಿದ್ದುದು ಭಾವಿಯಕಟ್ಟೆ ಮರೆ. ನೋಡುತ್ತಾ ಮನಸ್ಸಿನಲ್ಲಿ, ಇಷ್ಟಿಲ್ಲದೆ ಕವಿಗಳು "ಉರಗವೇಣಿ" ಮುಂತಾಗಿ ವರ್ಣಿಸಿದ್ದಾರೆಯೆ ಎಂದು ಭಾವಿಸಿದ ನೂಲು ವಾಗ "ಅವಳ ಮುಖದಲ್ಲಿ ದೇಶಾಭಿಮಾನ ಉಕ್ಕುತ್ತಿತ್ತು. ಫೋಟೋ ತೆಗೆದುಕೊಳ್ಳಲೇ ಎಂದು ಯೋಚಿಸಿದ. ಮುಖ ಪೂರ್ತಿ ಕಾಣುತ್ತಿಲ್ಲನಲ್ಲ ಕಾಣದಿದ್ದರೆ ತಾನೇ ಏನು? ರವಿವರ್ಮ ಕೂಡ ತಾರೆಯ ಮುಖದ ಪಕ್ಕದ ನೋಟವನ್ನೇ ಚಿತ್ರಿಸಿದ್ದಾನೆ. ನಾನೇಕೆ ತೆಗೆಯಬಾರದು" ಅಂದುಕೊಂಡು, ಫೋಟೊ ತೆಗೆದ ಅಷ್ಟರಲ್ಲಿ ತನ್ನನ್ನು ಯಾರಾದರೂ ನೋಡಿಯಾರೆಂದು ಭಯವಾಯಿತು. ಸದ್ದಿಲ್ಲದೆ ಬಂದ ದಾರಿಯಿಂದ ಹೊರಟುಹೋದ.

ಸಾಯಂಕಾಲ ಇಬ್ಬರೂ ತಿರುಗುವುದಕ್ಕೆ ಹೊರಟರು. ರಾಮು ಯೋಚಿಸಿದ್ದಂತೆಯೇ ಆಯಿತು, ದಾರಿಯುದ್ದಕ್ಕೂ ಹೊಲದಿಂದ ಹಿಂದಕ್ಕೆ ಬರುತ್ತಿದ್ದ ರೈತರೆಲ್ಲ ಆಶ್ಚರ್ಯದಿಂದ ಮೂಗಿನ ಮೇಲೆ ಬೆರಳಿಟ್ಟುಕೊಂಡು

ಇವನನ್ನು ನೋಡುತ್ತಿದ್ದರು. ಸುತ್ತಗದ್ದೆ, ಎಲ್ಲಿ ನೋಡಿದರೂ ಆನಂದದಿಂದ ಓಡಾಡುತ್ತಿರುವ ರೈತರ ಮಕ್ಕಳು. ಸುತ್ತಾಡಿಕೊಂಡು ಕೆರೆ ಹತ್ತಿರ ಬರುವ ಹೊತ್ತಿಗೆ ಸೂರ್ಯ ಆಗತಾನೆ ಮನೆಗೆ ಹೊರಡಲು ಅನುವಾಗುತ್ತಿದ್ದ. ಕೆರೆಯ ಪಾರ್ಶ್ವದಲ್ಲಿ ಉದ್ದಕ್ಕೂ ಹೊಂಗೆ ಮರ. ಮರದ ಕೆಳಗೆ ಕುಳಿತು ಸಂಧ್ಯೆಯ ಅಪೂರ್ವ ಲಾವಣ್ಯವನ್ನು ನೋಡುತ್ತಿರುವಾಗ, ರಾಮು ಮನಸ್ಸಿನಲ್ಲಿ, "ಇದೇ ಇಷ್ಟು ರಮ್ಯವಾಗಿದೆಯಲ್ಲ, ಮದ್ರಾಸಿನ ಸಮುದ್ರ ಇನ್ನು ಹೇಗಿರುತ್ತೋ" ಎಂದು ಭಾವಿಸುತ್ತಿದ್ದ. ಹಳ್ಳಿಯ ಹೆಂಗಸರೆಲ್ಲರೂ ಒಬ್ಬೊಬ್ಬರಾಗಿ ಕೆರೆಗೆ ಬಂದು ಹೋಗುತ್ತಿದ್ದರು. ಹುಡುಗಿಯರೆಲ್ಲರೂ ಹೆಜ್ಜೆ ಮುಳುಗುವ ನೀರಿನಲ್ಲಿ ಕಾಲನ್ನಿಟ್ಟು, ನೀರು ತುಂಬಿ, ನೀರಿನಿಂದ ಅರ್ಧ ಮೇಲಕ್ಕೆತ್ತಿದ ಕೊಡಗಳನ್ನು ಎರಡು ಕೈಗಳಲ್ಲಿಯೂ ಹಿಡಿದುಕೊಂಡು ಮಾತ ನಾಡುತ್ತಿದ್ದರು. ಎಲ್ಲರ ಮುಖದಲ್ಲಿಯೂ ನಗುವಿನ ಲಹರಿ, ಸೂರ್ಯನ ಹೊಂಬಣ್ಣದ ಕಿರಣಗಳು ಮುಖದ ಮೇಲೆ ಬಿದ್ದು, ಆ ನಗುವಿಗೆ ಇನ್ನಷ್ಟು ಶೋಭೆಯನ್ನುಂಟುಮಾಡುತ್ತಿತ್ತು. ಕ್ರಮವಾಗಿ ಕತ್ತಲಾಯಿತು. ರಾಮು ಚಂದು ಮನೆಗೆ ಹೊರಟರು. ದಾರಿಯುದ್ದಕ್ಕೂ ಎಷ್ಟೋ ಮಾತು. ಮೊದ ಲಿಲ್ಲ, ಕೊನೆಯಿಲ್ಲ.

ಮಧ್ಯಾಹ್ನ ಚಿಕ್ಕಮನೆಯಲ್ಲಿ ರಾಮು ಒಬ್ಬನೇ ಕುಳಿತಿದ್ದ. ಚಂದು ತಮ್ಮ ಅವತ್ತು ಮೇಷ್ಟ್ರು ಹೊಡೆದರೆಂದು ಅಳುತ್ತಿದ್ದ. "ಮೇಸ್ಟರಿಗೆ ಹೇಳಿ ಬರ್ತೀನಿ" ಎಂದು ಚಂದು ತಮ್ಮನೊಡನೆ ಸ್ಕೂಲಿಗೆ ಹೋಗಿದ್ದ. ಇದೇ ಸಮಯವೆಂದು ರಾಮು, ತಾನು ಹಿಂದಿನ ದಿನ ತೆಗೆದಿದ್ದ ಫೋಟೋವನ್ನು ಡೆವಲಪ್ಪು ಮಾಡಿ ತೆಗೆದಿದ್ದ ಪ್ರತಿಯನ್ನು ತಿರುಗಿಸಿ ನೋಡುತ್ತಿದ್ದ. ಬಲು ಮುದ್ದಾಗಿತ್ತು. ಈ ತಾರೆಯ ಮುಂದೆ ರವಿವರ್ಮನ ಪಠ ಯಾತಕ್ಕೆ ? ತಾನು ಕ್ಯಾಮರಾ ತೆಗೆದುಕೊಂಡದ್ದು ಈಗಲೀಗ ಸಾರ್ಥಕವಾಯಿತು ಎಂದು ತನ್ನ ಜಾಣತನಕ್ಕೆ ತಾನೇ ತಲೆತೂಗುತ್ತಿದ್ದ. ಬಾಗಿಲ ಸಂದಿನಲ್ಲಿ ತಾರೆ ಮೆಲ್ಲಗೆ ಇಣಿಕಿ ನೋಡಿದಳು. ಅದು ಅವನಿಗೆ ಗೊತ್ತಾಗಲಿಲ್ಲ. ಅಣ್ಣನ ಸ್ನೇಹಿತನ ಕೈಲಿ ತನ್ನ ಫೋಟೊವನ್ನು ನೋಡಿ ತಾರೆಗೆ ಬಹಳ ನಾಚಿಕೆಯಾಯಿತು. ಕೂಡಲೇ ಓಡಿಹೋದಳು. ಸ್ವಲ್ಪ ಶಬ್ದವಾಯಿತು. ರಾಮು ಘಾಬರಿಯಿಂದ ಫೋಟೋ ಪೆಟ್ಟಿಗೆ ಒಳಗಿಟ್ಟು ತಿರುಗಿ ನೋಡಿದ. ಚಂದು ತಿಂಡಿ ಹಿಡಿದು

ಕೊಂಡು ಬರುತ್ತಿದ್ದ.

"ಏನಯ್ಯಾ, ಚಂದು ಗಾಂಧಿ ಚಳವಳಿ ನಿಮ್ಮೂರಿಗೂ ಬಂದು ಬಿಟ್ಟಿದೆ. ನಮ್ಮ ಬೆಂಗಳೂರಿಗೇ ಸರಿ ಅಂತಿದ್ದೆ "

"ಅಯ್ಯೋ ಅದೇನು ಹೇಳ್ತಿ, ನನ್ನ ತಂಗಿ, ಸರೋಜಿನೀ ಅಪರಾವತಾರ ವಾಗಿ ಬಿಟ್ಟಿದ್ದಾಳೆ. ಯಾವಾಗಲೂ, ಚರಕವಾಯಿತು ಅವಳಾಯಿತು. ಯಾರಾದರೂ ವಿದೇಶಿ ಮಾತು ಎತ್ತಿದರೆ ದೊಡ್ಡ ಲೆಕ್ಚರನ್ನೇ ಕೊಟ್ಟುಬಿಡು ತಾಳೆ."

"ಹಾಗಾದರೆ ನನಗೆ ಬೇಕಾದರೂ ಲೆಕ್ಚರ್ ಕೊಡುತ್ತಾಳೆ ಅನ್ನು ! ನಾನೂ ಕೇಳಬೇಕಲ್ಲ. ಅದಿರಲಿ, ಎಲ್ಲಿ ನಿನ್ನ ತಂಗಿ ಯಾರು ? ಎಲ್ಲೂ ಓಡಾಡಿದ್ದೇ ಕಾಣುವುದಿಲ್ಲ ಅವತ್ತು ನಿಮ್ಮ ಕಿಟ್ಟುಗೆ ಪೆಪ್ಪರಮೆಂಟು ಕೊಡುವಾಗ ಅಕ್ಕ ಒಬ್ಬಳಿದಾಳೆ ಎಂದು ಹೇಳಿದ್ದ. ಅವಳಿಗೆ ಕೊಡಬೇಕೆಂದಿದ್ದದ್ದು, ನನ್ನ ಹತ್ತಿರದಲ್ಲೇ ಇದೆ."

"ಸುಮ್ಮನಿರು ಕೊಡವಿಯಂತೆ." ಎಂದು ಹೇಳಿ "ತಾರಾ, ಕಾಫಿ ತೆಗೆದು ಕೊಂಡು ಬಾರೆ" ಎಂದು ಕೂಗಿದ.

ರಾಮುಗೆ ಎದೆ ಡವಡವ ಅನ್ನುತ್ತಿತ್ತು. ಇಷ್ಟಕ್ಕೂ ತಾರೆಯೇನು ಹುಲಿಯೆ ? ತಾರೆ ತಟ್ಟೆಯಲ್ಲಿ ಎರಡು ಬಟ್ಟಲು ಕಾಫಿ ಇಟ್ಟುಕೊಂಡು ಒಳಕ್ಕೆ ಬಂದು ಮುಂದಿಟ್ಟು, ಹೊರಟುಹೋಗುತ್ತಿದ್ದಳು. "ತಾರಾ, ನಿಂತುಕೋ, ರಾಮು ನಿನಗೆ ಪೆಪ್ಪರಮೆಂಟು ಕೊಡುತಾನಂತೆ," ಎಂದು ಚಂದು ಹೇಳಿದ

ತಾರೆ ನಿಂತುಕೊಂಡಳು. ರಾಮು ಜೇಬಿಗೆ ಕೈ ಹಾಕಿ ಬಿಸ್ಕತ್ತನ್ನೂ ಒಂದು ಪಾಕೆಟ್ ಚಾಕೊಲೇಟನ್ನೂ ಕೈಗೆ ತೆಗೆದುಕೊಂಡ. ತಾರೆ ಕೈ ನೀಡಿ ದಳು. ಕೈ ನಡುಗುತ್ತಿತ್ತು. ಅದನ್ನು ಅವಳ ಕೈಗೆ ಹಾಕುವ ಹೊತ್ತಿಗೆ, ರಾಮುಗೆ ಮೈಯೆಲ್ಲಾ ಬೆವತು ಹೋಗಿತ್ತು. ಚಾಮುಂಡಿ ಬೆಟ್ಟ ಕಡಿವ ಹಾಗೆ ! ಇವರಿಬ್ಬರ ಸ್ಥಿತಿಯನ್ನು ಕಂಡು, ಹಿಡಿಸಲಾರದಷ್ಟು ನಗು ಚಂದುಗೆ. ಆದರೂ ಏನೂ ಕಾಣದವನಂತೆ, "ತಾರಾ, ಅದರ ಮೇಲೆ, ಏನು ಬರೆದಿದೆ, ಗೊತ್ತಿದೆಯೆ ?" ಎಂದ.

"ಏನು, ಬರೆದಿದೆ ?"

"ಅವನ್ನೇ ಕೇಳು ?"

"ಉಹೂ,"

"ಯಾಕೆ, ಅವನೇನು ನಿನ್ನ ಗಂಡನೇ, ನಾಚಿಕೊಳ್ಳುವುದಕ್ಕೆ."

"ಥೂ ಹೋಗಪ್ಪ."

"ನೋಡು, ತಿನ್ನಬೇಕೆಂದು ಇಷ್ಟವಿದ್ದರೆ, ಕೇಳು. ಇಲ್ಲದೆ ಹಾಗೇ ತಿಂದೆಯೋ ಖಂಡಿತ ನಿನ್ನ ಜಾತಿ ಹೋಯಿತು."

ತಾರೆಗೆ ಉಭಯ ಸಂಕಟ. ಹುಡುಗಿ ; ತಿನ್ನ ಬೇಂಕೆಂದು ಆಸೆ ಒಂದು ಕಡೆ ಮತ್ತೊಂದು ಕಡೆ, ಕೇಳದೆ ತಿಂದರೆ ಜಾತಿ ಹೋಗುತ್ತೆಂಬ ಭಯ. ಪಾಪ! ಏನು ಮಾಡ್ತಾಳೆ ! ನಿರ್ವಾಹವಿಲ್ಲದೆ ರಾಮು ಕಡೆಗೆ ತಿರುಗಿ ಮೆಲ್ಲಗೆ, "ಇದರ ಮೇಲೆ ಏನು ಬರೆದಿದೆ ?" ಎಂದು ಕೇಳಿದಳು.

ರಾಮು ಮನಸ್ಸಿನಲ್ಲಿಯೇ ಸ್ನೇಹಿತನ ಜಾಣತನಕ್ಕೆ ಮೆಚ್ಚಿದ. ಸ್ವಲ್ಪ ನಕ್ಕು 'Made in England ಎಂದು ಬರೆದಿದೆ" ಎಂದ.

"ಏನು, ಇಂಗ್ಲೆಂಡಿನಲ್ಲಿ ಮಾಡಿದ್ದೇ, ಹಾಗಾದರೆ, ನನಗೆ ಬೇಡ."

"ಯಾಕೆ ?"

"ಅದಕ್ಕಿಂತಲೂ ನಮ್ಮ ರಾಗಿ ರೊಟ್ಟಿ, ಎಷ್ಟೋ ವಾಸಿ ಆ ವಿದೇಶಿ ವಸ್ತುವನ್ನು ತಿನ್ನದಿದ್ದರೆ ಪ್ರಾಣ ಹೋಗುತ್ತದೆಯೇ ?"

ರಾಮು ಸ್ವಲ್ಪ ಅಪ್ರತಿಭನಾದ. ಅವನು ಬೆಂಗಳೂರಿನಲ್ಲಿ ಎಷ್ಟೋ ಜನರ ಉದ್ದುದ್ದ ಭಾಷಣಗಳನ್ನು ಕೇಳಿದ್ದ. ಆದರೆ ಯಾವಾಗಲೂ ಹೀಗೆ ಆಗಿರಲಿಲ್ಲ ಕತ್ತೆತ್ತಿ ನೋಡಿದ. ತಾರೆಯ ಮುಖದ ಮೇಲೆ ಈಗ ನಾಚಿಕೆ ಇರಲಿಲ್ಲ ಕೇವಲ ಸ್ವಾಭಿಮಾನವೂ ಒಂದು ಬಗೆಯ ದರ್ಪವೂ ಕಾಣುತ್ತಿತ್ತು. ರಾಮು ಬೆಂಗಳೂರಿನಲ್ಲಿ ಅನೇಕ ಹುಡುಗಿಯರನ್ನು ನೋಡಿದ್ದ. ನಾನಾ ತರಹ ಸಿಲ್ಕ್ ಸೀರೆಗಳನ್ನುಟ್ಟು, ಸೊಟ್ಟ ಬೈತಲೆಗಳನ್ನು ತೆಗೆದು ಬ್ರೂಚ್ ರಿಬ್ಬನ್‌ನಿಂದ ಶೋಭಿತರಾಗಿದ್ದ ಅವರನ್ನು ನೋಡಿ, ಎಷ್ಟು ಚೆನ್ನಾಗಿದ್ದಾರೆ ಅಂದುಕೊಂಡಿದ್ದ. ಆದರೆ ಈಗ ಸಾಧಾರಣವಾದೊಂದು ಕರಿಯ ಪೂನಾ ಸೀರೆಯನ್ನುಟ್ಟು ಸ್ವಾಭಾವಿಕವಾದ ಸೌಂದರ್ಯದಿಂದೊಪ್ಪುತ್ತಿದ್ದ ತಾರೆಯ ಮುಂದೆ ಅವರೆಲ್ಲರ ಸೌಂದರ್ಯವು ಅಲ್ಪವಾಗಿ ಕಂಡು ಬಂದಿತು. ಹಳ್ಳಿಯಲ್ಲಿ ಪರತಂತ್ರವಲ್ಲಿರುವ ಹುಡುಗಿಗೇ ಅಷ್ಟು ದೇಶಾಭಿಮಾನವಿರುವಾಗ, ತನ್ನಂತಹವನು ಮನಸ್ಸು ಮಾಡಿದರೆ ಏನನ್ನು ತಾನೇ ಮಾಡಲು ಅಸಾಧ್ಯ

ಎಂದುಕೊಂಡ. ಸ್ವಲ್ಪ ನಾಚಿಕೆಯೂ ಆಯಿತು. ಕೂಡಲೆ

"ಇನ್ನು ಮೇಲೆ ನಾನು ಪರದೇಶಿ ಸಾಮಾನನ್ನು ತರಿಸುವುದಿಲ್ಲ," ಎಂದ.

"ಹಾಗಾದರೆ ಬಟ್ಟೆಗೇಕೆ ಇಷ್ಟೊಂದು ದುಡ್ಡು ಹಾಕಿದಿರಿ ?"

"ಅದು ಹಿಂದೆ ತಿಳಿಯದೆ ಮಾಡಿದ್ದು. ಈಗಿರುವುದನ್ನು ಸುಡುವುದಿಲ್ಲ. ಮುಂದೆ ತರಿಸುವುದಿಲ್ಲ ಈಗ ನಿನಗೆ ಕೊಟ್ಟಿರುವುದನ್ನು ತಿಂದುಬಿಡು. ಇನ್ನು ಎಂದಿಗೂ ನಾನು ಚಾಕೋಲೇಟ್ ತರುವುದಿಲ್ಲ. ನೀನು ತಿಂದರೆ ನನಗೆ ಸಮಾಧಾನ"

ಕೊನೆಯ ಮಾತನ್ನು ಸ್ವಲ್ಪ ದೈನ್ಯದಿಂದಲೇ ಹೇಳಿದ ತಾರೆಯ ಮನಸ್ಸು ಕರಗಿಹೋಯಿತು. ನಾನು ಅಷ್ಟು ಖಂಡಿತವಾಗಿ ಮಾತಾಡಬಾರ ದಾಗಿತ್ತೆಂದುಕೊಂಡಳು. ಕೂಡಲೆ ನಗುಮುಖದಿಂದ ಅದನ್ನು ಬಾಯಿಗೆ ಹಾಕಿಕೊಂಡಳು. ರಾಮುವೂ ನಕ್ಕ. ಸ್ವಲ್ಪ ನಾಚಿಕೆಯಾಯಿತು. ಹಿಂತಿರುಗಿ ನೋಡದೆ ಓಡಿಹೋದಳು.

* * *

ರಾಮು ಊರಿಗೆ ಬಂದುಬಿಟ್ಟ. ಆದರೆ ಮನಸ್ಸು ಮೊದಲಿನಂತೆ ಇರಲಿಲ್ಲ. ಕೂತರೆ ನಿಂತರೆ ಹಳ್ಳಿ, ಹಳ್ಳಿಯೊಳಗಿನ ತಾರೆ ಕಣ್ಣಿಗೆ ಕಟ್ಟಿದಂತಿತ್ತು. ಒಂದು ದಿನ ಬಟ್ಟೆ ಹೊಲಿಸಲು ಅಂಗಡಿಗೆ ಹೋದ. ಅಲ್ಲಿ ಒಂದು ಖದ್ದರ್ ಸೀರೆ ಇತ್ತು. ಕೂಡಲೆ ತಾರೆ ಜ್ಞಾಪಕ ಬಂತು. ಅದನ್ನು ಕೊಂಡುಕೊಂಡು ಪೋಸ್ಟ್ ಆಫೀಸಿಗೆ ಹೋಗಿ ಚಂದು ಹೆಸರಿಗೆ ಕಳುಹಿಸಿದ. ಕಾಗದದಲ್ಲಿ "..ನಿನ್ನ ತಂಗಿಯ ದೇಶಾಭಿಮಾನ ನೋಡಿ ತುಂಬ ಸಂತೋಷವಾಯಿತು. ಆದರಿಂದ ಅವಳಿಗೆ ನನ್ನ ಜ್ಞಾಪಕಾರ್ಥವಾಗಿ ಕಳುಹಿಸಿದ್ದೇನೆ ಮತ್ತು ನಾನೂ ಈಗ ಖಾದಿಯನ್ನೇ ಉಪಯೋಗಿಸುತ್ತಿದ್ದೇನೆಂದು ತಿಳಿಸು" ಎಂದು ಬರೆದಿದ್ದ.

ಹದಿನೈದು ದಿನವಾದರೂ ಚಂದುವಿನಿಂದ ಜವಾಬೇ ಇಲ್ಲ. ರಾಮುಗೆ ಚಿಂತೆಗೆ ಕಾರಣವಾಯಿತು. ತಾನು ಸೀರೆ ಕಳಿಸಿದ್ದರಿಂದ ಅವರಿಗೆ ಅಸಮಾಧಾನ ವಾಯಿತೋ ಏನೋ, ಎಂದುಕೊಂಡ. ಅಂತೂ ಎರಡು ಹೊತ್ತೂ ಪೋಸ್ಟು ನೋಡುವುದೇ ಕೆಲಸ. ಕೊನೆಗೆ ಒಂದು ದಿನ ಕಾಗದ ಬಂತು. ಆದರೆ ತನಗೆ ಬಂದಿರಲಿಲ್ಲ. ತಂದೆಯವರಿಗೆ. ಕಾಗದ ಬರೆದಿದ್ದವನು ತಾನು.

ಜವಾಬು ತಂದೆಗೆ. ಸ್ವಲ್ಪ ಆಶ್ಚರ್ಯವಾಯಿತು! ಅವರ ಮೇಜಿನಮೇಲಿಟ್ಟು ಹೊರಟುಹೋದ.

ಮಧ್ಯಾಹ್ನ ಅವರ ತಂದೆ ಕಾಫಿ ಕುಡಿಯುವುದಕ್ಕೆ ಒಳಗೆ ಹೋಗಿದ್ದರು. ಆ ಸಮಯ ಸಾಧಿಸಿ ಮೆಲ್ಲಗೆ ರೂಮಿಗೆ ಹೋಗಿ ನೋಡಿದ. ಕಾಗದ ಚಂದು ತಂದೆಯದು. ತಾರೆಯನ್ನು ತನಗೆ ಕೊಡುವ ವಿಚಾರವಾಗಿ ಬರೆದಿದ್ದರು. ಹಳ್ಳಿ ಶ್ಯಾನುಭೋಗರ ಮಗಳು, ನಿಜವಾಗಿ ನನ್ನ ತಂದೆ ಒಪ್ಪುವರೆ? ಅಂದು ಕೊಂಡ. ಅಷ್ಟರಲ್ಲಿ ಅವನ ದೃಷ್ಟಿ ಅರ್ಧ ಬರೆದಿದ್ದ ಮತ್ತೊಂದು ಕಾಗದದ ಮೇಲೆ ಬಿತ್ತು. ಅದು ತನ್ನ ತಂದೆ ಬರೆಯುತ್ತಿದ್ದ ಜವಾಬು. "ಈ ಕಾಲ ದಲ್ಲಿ ಮದುವೆ ವಿಚಾರದಲ್ಲಿ, ತಂದೆತಾಯಿಗಳ ಜವಾಬ್ದಾರ ಕಮ್ಮಿ ಮುಖ್ಯ ಹುಡುಗರು ಇಷ್ಟಪಡಬೇಕು. ಮಗನನ್ನು ವಿಚಾರಿಸಿ ಯಾವುದಕ್ಕೂ ಬರೆಯು ತ್ತೇನೆ" ಎಂದು ಬರೆದಿದ್ದರು. ರಾಮೂಗೆ ಸಂತೋಷದಿಂದ ಕಣ್ಣಿನಲ್ಲಿ ನೀರು ಬಂತು. ತಂದೆ ಬಂದಾರೆಂಬ ಭಯದಿಂದ ಕಾಗದವನ್ನು ಸರಿಯಾಗಿಟ್ಟು ಬೇಗ ಹೊರಗೆ ಹೊರಟುಹೋದ.

ಮದುವೆಯ ದಿನ ರಾಮು ಚಂದುವನ್ನು,

"ಏನೋ ಚಂದು, ಎಷ್ಟು ಆಟ ಹೂಡಿದೆಯೋ ಇದಕ್ಕೆ. ರಜದಲ್ಲಿ ಕಾಗದ ಬರದಿದ್ದೆಯಲ್ಲ ಆಗಲೇ ನನಗೆ ಅನುಮಾನ. ಸುಮ್ಮನೆ ನಿಮ್ಮ ತಂದೆ ಈ ವಿಚಾರವಾಗಿ ಕಾಗದ ಬರೆದಿದ್ದರೆ ಆಗುತ್ತಿರಲಿಲ್ಲವೆ?

"ನಿಜವಾಗಿ ಹೇಳು, ಈಗ ಸುಮ್ಮನೆ ಅನ್ನುತ್ತಿ. ಈಗ ನಡೆದಂತೆ ಒಂದೂ ನಡೆಯದೆ, 'ಏಕದಮ್' ನಾವು ಪ್ರಸ್ತಾಪ ಮಾಡಿದ್ದರೆ ಹಳ್ಳಿ ಹುಡುಗಿ ಎಂದು ಒಪ್ಪುತ್ತಿದ್ದೆಯಾ?"

ರಾಮು ಏನೂ ಹೇಳಲಿಲ್ಲ. ಸ್ವಲ್ಪ ನಕ್ಕು ಬಿಟ್ಟ. ಮನಸ್ಸಿನಲ್ಲಿ 'ಅದೇನೋ ಸರಿ, ನಾನು ಇಲ್ಲಿಗೆ ಬಂದು ತಾರೆಯನ್ನು ನೋಡದೆ ಇದ್ದಿದ್ದರೆ ಸಂದರ್ಭ ಹೇಗಾಗುತ್ತಿತ್ತೋ. ಅಂತೂ ಚಂದು ಜಾಣತನದಿಂದ ನನಗೆ ಅನುಕೂಲವೇ ಆಯಿತು. ಮನವೊಪ್ಪಿದ ಹೆಂಡತಿ ಸಿಕ್ಕಿದಳು ಎಂದುಕೊಂಡ.

# ಕೆಂಪು ಹೂವು

ಎದುರಿಗೆ ಬಟ್ಟಲಿನಲ್ಲಿ ಹೊಗೆ ಹಾಯುವ ಕಾಫಿ! ಹೊಗೆ ಮೇಲೇರಿ ಮೂಗಿಗೆ ವಾಸನೆ ಬಡೀತಿದೆ ಅದನ್ನು ಹೀರಲು ನಾಲಿಗೆ ತವಕಿಸುತ್ತಿದೆ.

ಆದರೂ ವಸುಮತಿಗೆ ಅದರ ಪರಿವೆಯೇ ಇಲ್ಲ. ಗರ ಬಡಿದವಳಂತೆ ಏನೋ ನೆನೆಯುತ್ತಾ ಕೂತುಬಿಟ್ಟಿದ್ದಾಳೆ.

"ವಸೂ ...ಕಾಫಿ ಆರಿಹೋಗುತ್ತೆ." ತಾಯಿ ಕೂಗಿದರು.

"ಟೆಸ್ಟ್ ಇರಬೇಕು." ತಂಗಿ ಊಹಿಸಿದಳು.

"ಇಲ್ಲಮ್ಮ.. ಅವಳಿಗೆ ಇನ್ನೂ ನಿದ್ರೆ ಪೂರ್ತಿ ಆಗಿಲ್ಲ. ಕನಸು ಕಾಣ್ತಿದ್ದಾಳೆ."

ಅಣ್ಣ ರೇಗಿಸಿದ.

"ಹೌದಣ್ಣ ...ನಿನ್ನ ಮಾತು ನಿಜ. ಆದರೆ ಕನಸು ಕಾಣ್ತಿಲ್ಲ ನಾನು. ಸ್ವಲ್ಪ ಹೊತ್ತಿಗೆ ಮುಂಚೆ ಎಂಥ ಕನಸು ಬಿತ್ತು ಅಂತ ಅದನ್ನೇ ಜ್ಞಾಪಿಸಿಕೋತಿದ್ದೆ."

"ಏನಮ್ಮ ಅಂಥದು ? ಹೇಳು."

ಎಲ್ಲರಿಗೂ ಕೇಳುವ ಆತುರ.

"ಸ್ವಲ್ಪ ಮುಂಚೆ ಎಂದೆಯಾ ?"

ಅಜ್ಜ ಕಿವಿ ನಿಮಿರಿಸಿ ಕೇಳಿದರು.

"ಹೂಂ ...ಕನಸಿನ ನಡುವೆಯೇ ತಟ್ಟನೆ ಎಚ್ಚರವಾಯ್ತು."

"ಮುಂಜಾವಿನ ಕನಸು ನಿಜವಾಗುತ್ತೆ ಅಂತಾರೆ. ಏನು ಕಂಡೆಯೇ ಮಗು ?"

ಅಜ್ಜ ಆಸಕ್ತಿಯಿಂದ ಕೇಳಿದರು.

"ಒಬ್ಬ ಹೆಂಗಸು ಬಂದಿದ್ದಳು. ."

"ಕನಸಿನಲ್ಲೇ ?"

"ಹೂಂ ...ಇನ್ನೇನು ?"

"ಅವಳು ಹೇಳಲಿ. ಮಧ್ಯೆ ಮಾತಾಡಬೇಡಿ."

ತಾಯಿ ಎಚ್ಚರಿಕೆ ಕೊಟ್ಟರು. ಅವರಿಗೂ ಕುತೂಹಲ.

"ಹೆಂಗಸು ಎಂದೆಯಲ್ಲ, ಮುತ್ತೈದೆ ತಾನೆ ?"

ಅಜ್ಜಿಯ ಪ್ರಶ್ನೆಯಲ್ಲಿ ಆತಂಕವಿತ್ತು.

"ಹೂ ...ಹಿರಿಯ ಮುತ್ತೈದೆ. ನೆರೆತ ತಲೆಗೂದಲು. ಹಣೆಯಲ್ಲಿ ಕಾಸಿನ ಅಗಲದ ಕುಂಕುಮ. ನಗು ಮುಖ...."

"ಬಹಳ ಒಳ್ಳೆಯದು. ದೊರೆ ಮಗನಂತಹ ಗಂಡ ಸಿಗ್ತಾನೆ."

"ಹೋಗಜ್ಜಿ, ನಿಮಗೆ ಅದೇ ಮಾತು. ಏನು ಹೇಳಿದರೂ ಅದಕ್ಕೇ ಗಂಟು ಹಾಕ್ತೀರಿ."

"ಬ್ರಹ್ಮ ಎಂದೋ ಗಂಟು ಹಾಕಿಬಿಟ್ಟಿರ್‍ತಾನೆ. ನಾನು ಎಷ್ಟರವಳು ? ಒಳ್ಳೆಯದಾಗಲಿ ಎಂತನುಡೀತೀನಿ ಅಷ್ಟೆ."

"ಯಾರೋ ದೇವತೆಗಳು ಸದಾ 'ಅಸ್ತು... ಅಸ್ತು' ಅಂತ ಹೇಳ್ತಾನೆ ಇರ್‍ತಾರೆ ಅಲ್ವೇ ? ನೀವೇ ಹೇಳಿದ್ದಿರಿ."

"ಹೋಗೋ ಮುರುವಾ ! ನನ್ನ ಮಾತು ನಿಮಗೆಲ್ಲಾ ಹಾಸ್ಯ. ಆ ಮುತ್ತೈದೆ ಏನಾದರೂ ಹೇಳಿದಳೇ ವಸು ?"

"ಇಲ್ಲ....ಮಾತಾಡಲೇ ಇಲ್ಲ. ಕೈಲಿ ಒಂದು ಕೆಂಪು ಹೂವಿತ್ತು. ಅದನ್ನು ನನಗೆ ಕೊಟ್ಟಳು."

"ನಿಜವಾಗಿ....?"

"ನೀನು ತಗೊಂಡೆಯ ?"

"ಗುಲಾಬಿ ಹೂವೇನು ?"

ಎಲ್ಲಾ ಒಟ್ಟೊಟ್ಟಿಗೆ ಮಾತಾಡಿದರು. ಕೆಲವರು ಅಣಕದಿಂದ ; ಕೆಲವರು ಆಸಕ್ತಿಯಿಂದ.

"ಸ್ವಲ್ಪ ಸುಮ್ಮನಿರಿ, ಹೀಗೆ ಗಲಾಟೆಮಾಡಕ್ಕೆ ಇದು ಸಂತೆಯೇ ? ಒಬ್ಬೊಬ್ಬರಾಗಿ ಮಾತಾಡಿ."

ತಾಯಿಯ ಸಲಹೆ.

"ನನಗೇನೋ ಅದು ಒಳ್ಳೆಯದೆಂದೇ ತೋರ್‍ತಿದೆ. ಮುಂಜಾನೆಯ

ಕನಸು ನಿಜವಾಗುತ್ತೆ. ಹಿರಿಯ ಮುತ್ತೈದೆ ಲಕ್ಷಣವಾಗಿ ಹೂವು ಕೊಟ್ಟ ಮೇಲೆ ಖಂಡಿತವಾಗಿ ಒಳ್ಳೆಯದಾಗುತ್ತೆ. ಸಾಕ್ಷಾತ್ ಲಕ್ಷ್ಮಿ ಕೈನೀಡಿ ಪ್ರಸಾದ ಕೊಟ್ಟಿದಾಳೆ."

ಅಜ್ಜಿ ನಂಬಿಕೆಯಿಂದ ಖಚಿತವಾಗಿ ನುಡಿದರು.

"ಓ ..ಅಪ್ಪ ಲಾಟರಿ ಟಿಕೇಟು ಕೊಂಡಿದಾರೆ. ಲಕ್ಷ್ಮಿ ಪ್ರಸಾದ ಕೊಟ್ಟ ಮೇಲೆ ಬಹುಮಾನ ಬರೋದು ಖಂಡಿತ."

ವಸುಮತಿಯ ಅಣ್ಣ ಶುಭಶಕುನ ಹೇಳಿದ ಕೂಡಲೇ ಎಲ್ಲರ ಮನಸ್ಸೂ ಲಾಟರಿ ಟಿಕೇಟಿನತ್ತ ಹಾರಿತು. ನಿಜ....ತಂದೆ ಟಿಕೇಟು ತಂದುದನ್ನು ಎಲ್ಲರೂ ನೋಡಿದ್ದರು.

ಒಟ್ಟಿಗೆ ಹತ್ತು ಟಿಕೇಟು!

"ನಿಮ್ಮೆಲ್ಲರ ಹೆಸರಿಗೂ ಒಂದೊಂದು ಇಡ್ತೀನಿ"

ಎಂದು ಅವರು ಆ ದಿನ ಹೇಳಿದಾಗ ಯಾರಿಗೂ ಏನೂ ಅನಿಸಿರಲಿಲ್ಲ. ಇವತ್ತು ಕನಸಿನಿಂದಾಗಿ ಒಮ್ಮಿಂದೊಮ್ಮೆ ಅದಕ್ಕೆ ಮಹತ್ವ ಬಂದುಬಿಟ್ಟಿದೆ.

"ಅಪ್ಪನನ್ನು ಕೇಳಿ ನಾವೆಲ್ಲ ನಮ್ಮ ನಮ್ಮ ಟಿಕೇಟು ನಮ್ಮ ಹತ್ತಿರವೇ ಇಟ್ಕೊಳ್ಳೋಣ"

ವಸುಮತಿ ದೂರಾಲೋಚನೆಯಿಂದ ಹೇಳಿದಳು.

"ಅದೂ ಸರಿಯೇ. ವಸು ಜುಗ್ಗಿ. ಅಕಸ್ಮಾತ್ ಅವಳ ಟಿಕೇಟಿಗೆ ಬಹುಮಾನ ಬಂದರೆ ಒಬ್ಬರಿಗೂ ಒಂದು ಪೈಸ ಸಹ ಕೊಡಲ್ಲ ಅವಳು."

ಅಣ್ಣ ರೇಗಿದ.

"ನೀನು ಕರ್ಣನ ಮೊಮ್ಮಗನೇನೋ? ಮಹಾ ಧಾರಾಳಿ. ನಾನೇನು! ಎಲ್ಲರೂ ಅಷ್ಟೇ. ನಿಮಗೆ ಬಂದರೆ ನೀವೂ ಕೊಡಲ್ಲ. ಬೇಕಾದರೆ ನಾನು ಬರೆದಿಡ್ತೀನಿ"

"ನನಗೆ ಬಂದರೆ ಎಲ್ಲರಿಗೂ ಸಮವಾಗಿ ಹಂಚಿ ಬಿಡ್ತೀನಿ. ಅಷ್ಟು ದುಡ್ಡು ಒಬ್ಬಳಿಗೇ ಏಕೆ?"

ತಂಗಿಯ ಔದಾರ್ಯ.

"ಮೊದಲನೇ ಬಹುಮಾನ ಎಷ್ಟೋ?"

ತಾಯಿಯ ಕುತೂಹಲ ಚಿಗುರಿತು.

"ಎಷ್ಟೇ? ಹತ್ತು ಲಕ್ಷ ರೂಪಾಯಿ. ಒಂದೇ ಗಂಟೆನಲ್ಲಿ ಹತ್ತುಲಕ್ಷ ಬರೋದೆಂದರೆ ಯೋಚಿಸೋದಕ್ಕೂ ಸಾಧ್ಯವಿಲ್ಲ !"

"ಹತ್ತು ಲಕ್ಷ! !"–

ಅಜ್ಜಿಯ ಕಿವಿ ಚುರುಕಾಯಿತು. ಮೆದುಳೂ ಲವಲವಿಕೆಯಿಂದ ಕೆಲಸ ಮಾಡಿತು. ಜಡತ್ವ, ವೈರಾಗ್ಯ, ವೇದಾಂತ ಎಲ್ಲವನ್ನೂ ಒಂದೇ ಸಲಕ್ಕೆ ಝಾಡಿಸಿ ಬಿಟ್ಟಿತು. ಹದಿನೆಂಟರ ಹುಡುಗಿಯ ಉತ್ಸಾಹದಿಂದ ಆಕೆ ಹೇಳಿದರು,

"ನೀವೆಲ್ಲಾ ಕಚ್ಚಾಡ್ತೀರಿ. ನಿಮಗೆ ಯಾರಿಗೂ ಬೇಡ. ಎಲ್ಲಾ ಟಿಕೇಟೂ ನಾನೇ ಇಟ್ಕೊಂಡರೆ ಹೇಗೆ? ನನಗೆ ಏನಾಗಬೇಕು ? ಬಂದದ್ದನ್ನು ಜಗಳವಿಲ್ಲದಂತೆ ಎಲ್ಲರಿಗೂ ಹಂಚಿಬಿಡ್ತೀನಿ."

"ನಿಮಗೆ ಸ್ವಲ್ಪವೂ ಬೇಡವೇ ?"

"ನನಗೇಕೋ? ಸೀರೆ ಒಡವೆ ಏನು ಬೇಕಾಗಿದೆ? ಒಪ್ಪತ್ತು ನೀವೇ ಹಿಟ್ಟು ಹಾಕ್ತಿದೀರಿ"

ಅಜ್ಜಿ ಬಾಯಲ್ಲಿ ಹಾಗೆ ಹೇಳಿದರೂ, ಅವರ ಮನಸ್ಸು ಬದರಿ, ಕಾಶಿ, ರಾಮೇಶ್ವರ ಎಂದೆಲ್ಲ ಯಾತ್ರೆಯ ಬೆನ್ನು ಹತ್ತಿತ್ತು.

ಎಷ್ಟು ವರ್ಷಗಳ ಆಸೆ ಅದು !

ತಾಯಿಯಂತೂ ಮಾತಾಡುವ ಶಕ್ತಿಯನ್ನೇ ಕಳೆದುಕೊಂಡು ಮೂಗಿಯಂತೆ ಕೂತುಬಿಟ್ಟರು. ಅತ್ತೆಯ ಆಸೆ ನೋಡಿ ಅವರ ಸುಪ್ತ ಆಕಾಂಕ್ಷೆಗಳೂ ಹುಚ್ಚೆದ್ದು ಕುಣಿದುವು.

ಸಾಯಲಿರುವ ಮುದುಕಿಗೇ ಅಷ್ಟು ಆಸೆ ಇರಬೇಕಾದರೆ, ತುಂಬು ಸಂಸಾರದ ಯಜಮಾನಿ, ನಡುವಯಸ್ಸಿನ ಆಕೆಯ ಆಸೆಗೆ ಲೆಕ್ಕ ಯಾರು ಹೇಳಬೇಕು ?

ಬಯಸಿ ಬಯಸಿ, ಬಯಕೆಯಾಗಿಯೇ ಉಳಿದಿದ್ದುದೆಷ್ಟೋ ?

ಅವರಮ್ಮನೇನೋ ವರಲಕ್ಷ್ಮಿ ಎಂದೇ ನಾಮಕರಣ ಮಾಡಿದ್ದರೂ, ಲಕ್ಷ್ಮಿ ಅವರಿಂದ ದೂರವೇ ಇದ್ದಳು.

ಹೆಸರು ದೊಡ್ಡದೆಂದೋ ಅಥವಾ ಮುದ್ದಿಗಾಗಿಯೋ ಲಕ್ಷ್ಮಿ ಹೋಗಿ ಮನೆಯವರೆಲ್ಲಾ ಅಚ್ಚಿ ಎಂದೇ ಕೂಗುತ್ತಿದ್ದರು. ಹೊರಗಿನವರಿಗೆ ಆಕೆ

ಅಚ್ಚಮ್ಮ. ವರಲಕ್ಷ್ಮಿಯಂತೂ ಅಲ್ಲ.

ಹೆಸರಿಗೆ ತಕ್ಕಂತೆ ನಿಜವಾಗಿ ಸಿರಿವಂತೆಯಾಗಿ ಕೇಳಿದವರಿಗೆ ಕೈಲಾದಷ್ಟು ವರ ಕೊಡುವಂತಿದ್ದರೆ ?

ಎಂತಹ ಸುಂದರವಾದ ಭಾವನೆ ? ಗುಲಾಬಿಯ ಸೊಬಗನ್ನೂ ಪರಿಮಳವನ್ನೂ ಹೊತ್ತು, ಹೃದಯದ ತುಂಬ ಹರಿದಾಡಿ, ಎಳೆನಗು ಮುಖದ ಮೇಲೆ ನಲಿಯಿತು.

ಈ ವೇಳೆಗೆ ಪ್ರತಿಯೊಬ್ಬರೂ ಬಹುಮಾನ ತಮಗೇ ಕಟ್ಟಿಟ್ಟ ಬುತ್ತಿ ಎಂದು ಖಾತ್ರಿ ಮಾಡಿಕೊಂಡು, ಅದನ್ನು ಖರ್ಚು ಮಾಡುವ ಬಗೆಗೆ ಚರ್ಚೆ ಆರಂಭಿಸಿದ್ದರು.

ಮನಸ್ಸಿನಲ್ಲಿ ಪುಟಿದು ಏಳುತ್ತಿದ್ದ ಸಾವಿರ ಆಲೋಚನೆಗಳಲ್ಲಿ ಒಂದೆರಡು ಮಾತ್ರ ಹೇಳಬಹುದು.

"ನಾನಂತೂ ಮೊದಲು ಕಾಲೇಜಿಗೆ ಶರಣ ಹೊಡೆದು, ಆರಾಮವಾಗಿ ಮನೇಲಿರ್ತೀನಿ."

ಓದಲಾರದೆ ಮುಗ್ಗುರಿಸುತ್ತಿದ್ದ ವಿದ್ಯಾರ್ಥಿ ತನ್ನ ಆಂತರ್ಯದ ಬಯಕೆ ತೋಡಿಕೊಂಡ.

"ಮುರ್ಠ್ಯಾಳ... ಕಾಲೇಜು ಬಿಟ್ಟು ಏನು ಮಾಡ್ತಾನಂತೆ ? ಮಣ್ಣು ಹೊರ್ತಾನೇನು ? ಕೇಳೇ ನಿನ್ನ ಸುಪುತ್ರನ್ನ."

ಬಚ್ಚಲಿಗೆ ಹೋಗಲೆಂದು ತಟ್ಟನೆ ಪ್ರತ್ಯಕ್ಷರಾದ ಮನೆಯ ಯಜಮಾನರು ಮಾತಿನ ಹಿನ್ನೆಲೆ ತಿಳಿಯದೆ ಕೊನೆಯ ಮಾತು ಕೇಳಿಸಿಕೊಂಡವರು ಪಂಚೆ ಮುದುರಿಕೊಂಡು ಅವಸರವಾಗಿ ಹೋಗುತ್ತ ಒದರಿ ಕೇಳಿದರು.

"ಹಿಂದು, ಮುಂದು, ಒಂದೂ ತಿಳೀದೆ ಪಾಪ ಆ ಮಗೂ ಮೇಲೆ ಯಾಕೆ ಹಾರಾಡ್ತೀರಿ ?"

ಅಚ್ಚಮ್ಮ ಯಾವಾಗಲೂ ಮಗನ ಪಕ್ಷ.

"ಕಾಲೇಜು ಬಿಟ್ಟು ಮಗೂ ಅಮ್ಮನ ಮುಂದೆ ಕೂತರೆ ನನ್ನ ಗತಿ ಏನೇ ? ನಮ್ಮಮ್ಮನ ಮಗೂ ವಿಷಯಕ್ಕೂ ಸ್ವಲ್ಪ ಸಹಾನುಭೂತಿ ಇರಲಿ ಮಾರಾಯ್ತಿ."

ತಂದೆಯ ಮಾತಿಗೆ ಎಲ್ಲರೂ ಘೊಳ್ಳೆಂದು ನಕ್ಕಾಗ ಆತನಿಗೆ ಸ್ವಲ್ಪ

ಪೆಚ್ಚಾಯ್ತು. ಯಾವುದೋ ಚರ್ಚೆ ನಡೀತಿದೆ, ಅದರ ಪರಿಣಾಮ ಆ ಮಾತು ಎಂದೂ ತೋರಿತು. ಕಾಲು ಒರೆಸಿಕೊಳ್ಳುತ್ತಾ ಎಲ್ಲರ ಮುಂದೆ ನಿಂತು ಕೇಳಿದರು.

"ಏನು ಸಮಾಚಾರ? ಎಲ್ಲಾ ಖುಷಿಯಾಗಿದೀರಿ. ನನಗೂ ಹೇಳಿ."

ಒಬ್ಬರ ಮುಖ ಒಬ್ಬರು ನೋಡಿದರು. ತಟ್ಟನೆ ಯಾರೂ ಬಾಯಿ ಬಿಡಲಿಲ್ಲ. ಮುದುಕಿಯೇ ಮುಂದಾಗಿ ಹೇಳಿದರು.

"ಅದೆಂಥದೋ ಲಾಟರಿಯಂತಲ್ಲ. ಹತ್ತು ಲಕ್ಷ ರೂಪಾಯಿ ಬರುತ್ತಂತೆ. ಬಂದ ಮೇಲೆ ಓದು ಯಾಕೆ ಅಂತ ಹೇಳ್ತಿದಾನೆ."

"ಹೀಗೋ ಸಮಾಚಾರ? ಟೀಕಿಟು ಕೊಂಡ ಮಾತ್ರಕ್ಕೇ ಬಹುಮಾನ ಬಂದಂತಾಯ್ತೆ? ಕೊಂಡುಕೊಂಡಿರುವ ಲಕ್ಷಾಂತರ ಜನಗಳ ಪೈಕಿ ನಾವೂ ಒಬ್ಬರು."

"ಹಾಗಲ್ಲ ... ..ವಸುಮತೀಗೆ ಕನಸಿನಲ್ಲಿ ಮುತ್ತೈದೆ ಹೂವು ಕೊಟ್ಟ ಳಂತೆ, ಕೆಂಪು ಹೂವು .ತಾವರೆಯೇ ಇರಬೇಕು."

"ತಾವರೆಯೋ ಗುಲಾಬಿಯೋ?"

"ಯಾವುದಾದರೇನು? ಮುತ್ತೈದೆ ಹೂವಿನ ಪ್ರಸಾದ ಕೊಟ್ಟದ್ದು ಮುಖ್ಯ. ಅದೃಷ್ಟ ಯಾರು ಕಂಡಿದ್ದಾರೆ? ನಮಗೇ ಬರಬಹುದು."

ಅಚ್ಚಮ್ಮ ಭರವಸೆಯಿಂದ ನುಡಿದರು.

"ಹುಡುಗರ ಮಾತು ಕೇಳಿ ನಿನಗೂ ಬುದ್ಧಿ ಕೆಟ್ಟಿತೋ ಅಂತೀನಿ. ನಮಗೆ ಬಹುಮಾನ ಬರೋದುಂಟೆ? ನಮ್ಮ ಅದೃಷ್ಟ ಗೊತ್ತೇ ಇದೆ. ಬೆವರು ಹರಿಸಿ ದುಡಿದ ದುಡ್ಡೇ ಎಷ್ಟೋ ವೇಳೆ ಕೈ ಹತ್ತಲ್ಲ, ಅಂಥದರಲ್ಲಿ ಈ ಕನ್ನಡಿ ಯೊಳಗಿನ ಕಲ್ಲುಸಕ್ಕರೆ ನೋಡಿ ಬಾಯಿ ಚಪ್ಪರಿಸಿದರೆ ಆಯ್ತು. ಭ್ರಮೆ.... ಬರೀ ಭ್ರಮೆ!"

"ಇಷ್ಟು ಹೇಳೋರು ಟಿಕೀಟು ಕೊಳ್ಳದೆ ಇರಬಹುದಿತ್ತು. ಎಂಟೋ ಹತ್ತೋ ತಂದಿದೀರಿ?"

"ಇದು ಯಾವ ಜುಜುಬಿ? ಸಾವಿರಗಟ್ಟಲೆ ಕೊಂಡು ಅದೃಷ್ಟ ಪರೀಕ್ಷಿಸ್ತಾರೆ. ಇರಲಿ ಅಂತ ಕೊಂಡೆ. ಬಂದರೆ ಸಂತೋಷ; ಬಾರದಿದ್ದರೆ ಮುಳುಗಿ ಹೋಗಲ್ಲ."

"ಅದೃಷ್ಟ ಬರುವಾಗ ಕೇಳಿ ಬರಲ್ಲ. ಅದೃಷ್ಟ ಲಕ್ಷ್ಮಿ ಹಿಂದಿನಿಂದ ಬಂದು ಭುಜ ಅಲುಗಿಸುತ್ತಾಳೆ. ನಾವು ಅಟ್ಟಿಸಿಕೊಂಡು ಹೋದರೆ ಸಿಗಲ್ಲ."

"ಪರವಾಗಿಲ್ಲ, ಬಹಳ ದೂರ ನಡೆದಿದೆ ಚರ್ಚೆ. ಸಧ್ಯ ಯಾರೂ ತಲೆ ಕೆಡಿಸಿಕೋ ಬೇಡಿ"

"ಅಪ್ಪ ...ಟಿಕೀಟು ತಂದಿರೋದು ಯಾರಿಗೆ ?"

"ಎಲ್ಲರಿಗೂ....!"

"ಹಾಗಾದರೆ ..ಈಗಲೆ ಎಲ್ಲರಿಗೂ ಒಂದೊಂದು ಕೊಟ್ಟುಬಿಡಿ. ಹಣ ಬಂದ ಮೇಲೆ ..."

"ಸಾಕು ಮುಚ್ಚು ಬಾಯಿ ಅತಿಯಾಯಿತು ಹರಟೆ ಇವನಿಗೆ ಟಿಕೇಟು ಕೊಡಬೇಕಂತೆ ಬಹುಮಾನ ಬಂದರೆ ನಿಮಗೇ ಆಗುತ್ತೆ. ನಾನು ತಲೇಮೇಲೆ ಹಾಕಿಕೊಳ್ಳಲ್ಲ"

ಗೊಣಗೊಣ ಎಂತ ಲೊಟಗುತ್ತಲೇ ಯಜಮಾನರು ಬಂದಂತೆ ಹೊರಟುಹೋದರು.

ಅಬ್ಬ ..ಹಣವೇ! ಅದರ ಶಕ್ತಿಗೆ ಮಿತಿಯುಂಟೆ? ವಯಸ್ಸಾದ ಮುದುಕಿ, ವಯಸ್ಸಾಗದ ಎಳೆಯರು ಒಟ್ಟಿಗೆ ಕುಣೀತಿದಾರೆ ಎಂದು ಕೊಂಡರು. ಆದರೇನು? ಸಮುಚಿತ್ತ ಉಳ್ಳವನೆಂದುಕೊಂಡಿದ್ದ ಆತ ಸಹ ಆ ಹುಚ್ಚಿನಿಂದ ಹೊರಗೆ ಇರಲು ಆಗಲಿಲ್ಲ. ಲಕ್ಷ್ಮಿಯ ಕಾಲಿನ ಗೆಜ್ಜೆಯ ನಾದಕ್ಕೆ ಹೃದಯವೂ ತಾಳವಿಕ್ಕುತ್ತಿತ್ತು.

ಮಗಳ ಮದುವೆ, ಮಗನ ಓದು, ಹೆಂಡತಿ ಆಗಾಗ ಕೇಳಿತ್ತಿದ್ದ ನೂರು ಸಣ್ಣ ಪುಟ್ಟ ಆಸೆಗಳ ಪೂರೈಕೆ, ಬಾಡಿಗೆ ಮನೆ ಬೇಸರ ಬಂದು ತಮ್ಮದೇ ಆದ ಸ್ವಂತ ಮನೆಯನ್ನು ಮಾಡಿಕೊಳ್ಳುವ ಹಂಬಲ-ಎಲ್ಲಾ ಆದೀತು.

ಏನೆಲ್ಲ ಆಸೆಗಳು! ಎಷ್ಟೆಲ್ಲ ಬಯಕೆಗಳು!

ಎಲ್ಲ ಪೂರೈಸುವ ಕಾಲ ಬಂದರೆ? ಸಾಲ ಸೋಲಗಳ ಚಿಂತೆಯಿಲ್ಲದ ತುಂಬಿದ ಬದುಕು!

ತಂದೆ ಟಿಕೀಟನ್ನು ತಮ್ಮ ವಶಕ್ಕೆ ಕೊಡುವುದಿಲ್ಲವೆಂದು ಖಂಡಿತವಾದ ಮೇಲೆ ಉಳಿದವರ ಬಯಕೆ ಭುಗಿಲ್ಲೆಂದು ಮೇಲೆದ್ದಿತ್ತು.

ತಾವುಗಳೇ ಏಕೆ ಬೇರೆ ಟಿಕೀಟು ಕೊಳ್ಳಬಾರದು? ಹುಡುಗರು

ತಾಯಿಯ ಬಳಿ ಇದ್ದ ಪುಡಿಗಾಸುಗಳ ಬೊಕ್ಕಸಕ್ಕೆ ಕೈ ನೀಡಿದರು.

ಮುದುಕಿ ಸಹ ಹತ್ತಿಯ ಬಟ್ಟೆ ಬಿಡ ಮೇಲು ಮಾಡಿ ಕಾಸು ಕೊಂದಿಸಿದರು.

ಇಷ್ಟು ಉತ್ಸಾಹಕ್ಕೂ ಕಾರಣ ?

ಮುತ್ತೈದೆ ಕನಸಿನಲ್ಲಿ ಕೊಟ್ಟ ಕೆಂಪು ಹೂವಿನ ವರ ಪಾಂಜಾವಿನ ಕನಸಿನಲ್ಲಿ ಇದ್ದ ನಂಬಿಕೆ !

ಹಾಗಿಲ್ಲದಿದ್ದರೆ ಈವರೆಗಿನ ಎಷ್ಟೋ ಸಲದ ಕೊಳ್ಳುವಿಕೆಯಂತೆ ಇದೂ ಯಾರ ಗಮನಕ್ಕೂ ಬರದೆ ಕಳೆದುಹೋಗುತ್ತಿತ್ತೇನೋ ?

* * *

ಕರೀಮರದ ಮಂಟಪದೊಳಗೆ ಲಕ್ಷ್ಮಿಯ ಪಠ. ಸಾಲಾಗಿ ಹಾಕಿರುವ ಹೂವಿನ ಹಾರಗಳು. ಮುಂಭಾಗದಲ್ಲಿ ಕಂಬದ ಹತ್ತು ಕುಡಿಗಳಲ್ಲೂ ದೀಪ ಬೆಳಗುತ್ತಿದೆ ಗಂಧದ ಕಡ್ಡಿ ಉರಿದು ಹೊಗೆಯಾಗಿ ಸುವಾಸನೆ ಪಸರಿಸಿ ಕೃತಾರ್ಥವಾಗಿದೆ. ತಟ್ಟೆಯ ತುಂಬ ಹಣ್ಣುಗಳು ನೈವೇದ್ಯಕ್ಕೆ !

ಲಕ್ಷ್ಮೀಪೂಜೆ ಆದಮೇಲೆ ಸುವಾಸಿನೀ ಪೂಜೆ. ಸಾಲಾಗಿ ಸುಮಂಗಲಿಯರು ಮಂಡಿಸಿದ್ದಾರೆ ಅವರಿಗೆಲ್ಲ ಕೈತುಂಬ ಅರಿಶಿನ, ಕುಂಕುಮ, ಹೂವು, ಹಣ್ಣು ಕೊಡಬೇಕು ಒಬ್ಬೊಬ್ಬರಿಗೂ ಒಂದೊಂದು ತಟ್ಟೆ ಕೋಸುಂಬರಿ, ರಸಾಯನ ತೆಂಗಿನಕಾಯಿ ! ಏನೆಲ್ಲ ಕೊಡಬಹುದು ?

ಹೌದು, ಕೊಡಲೇಬೇಕು. ಕೊಟ್ಟಿದ್ದು ಎಲ್ಲಿ ಹೋಗುತ್ತೆ ?

"ಕೊಟ್ಟಿದ್ದು ತನಗೆ, ಮುಚ್ಚಿಟ್ಟಿದು ಪರರಿಗೆ"

—ಅಂತ ಯಾವನೋ ಪುಣ್ಯಾತ್ಮ ಹೇಳಿಯೇ ಇದಾನಲ್ಲ !

"ವರಲಕ್ಷ್ಮೀ, ಬಾಮ್ಮ, ತಾಯಿ."

ಅತ್ತೆ ಬಾಯಿತುಂಬ ಸೊಸೆಯನ್ನು ಕರೆದಾಗ ಹಗಲುಗನಸು ಕಾಣುತ್ತಿದ್ದ ಅಚ್ಚಮ್ಮ ಎಚ್ಚರಗೊಂಡರು.

ನಿಜವಾಗಿ ಎಂತಹ ಕಲ್ಪನೆ ಅದು ?

'ಅಚ್ಚೀ' ಎನ್ನುತ್ತಿದ ಅತ್ತೆ ಈಗ ಬಾಯಿ ತುಂಬ 'ವರಲಕ್ಷ್ಮಿ ಬಾಮ್ಮ' ಎಂದು ದಿನವಲ್ಲಿ ಹತ್ತಾರು ಸಲ ಕೂಗುತ್ತಾರೆ.

ಏನೋ ಯಾರಿಗೆ ಗೊತ್ತು ?

ಕರ್ಮ ಧರ್ಮ ಕೂಡಿಬಂದು ವಾಸ್ತು ದೇವತೆಗಳು "ಅಸ್ತು" ಎಂದು ಬಿಟ್ಟರೆ ?

ನೀಡಿದ ಕರದಿಂದ ಹಣ ಸುರಿಯುತ್ತ ಲಕ್ಷ್ಮಿ ಬಲಗಾಲಿಟ್ಟು ಮನೆಗೆ ಬಂದರೆ ...? ಆಮೇಲೆ ಯಾತರ ಕೊರತೆ ?

ಮುದುಕಿಯ ಚಪಲ ನಗು ತರಿಸುವಂತಿದ್ದರೂ ಸೊಸೆಗೂ ಆ ಯೋಚನೆ ಹಿತವಾಗಿಯೇ ಇತ್ತು.

ಕಾಲೇಜು ಬಿಡುವುದಲ್ಲದೆ, ಸೊಗಸಾದ ಸ್ಕೂಟರು ಕೊಂಡು ರೀವಿ ಯಿಂದ ಬೀದಿಯಲ್ಲಿ ಓಡಾಡುವ ಕನಸು ಕಾಣುತ್ತಿದ್ದ ಕುಮಾರ ಕಂಠೀರವ !

ತನ್ನ ಯೋಚನೆಯನ್ನು ತಂಗಿಗೆ ಹೇಳಿದಾಗ ಅವಳು-

"ಅಯ್ಯೋ ಬೆಪ್ಪೆ, ಇಷ್ಟೇ ನಿನಗೆ ತಿಳಿಯೋದು? ಮೊದಲ ಬಹುಮಾನದ ಹಿಂದುಮುಂದಿನದಕ್ಕೆ ಮೋಟರ್ ಸೈಕಲ್ ಬಹುಮಾನ ಇದೆ. ಅದೂ ನಮಗೇ ಬರಬಹುದು."

ಎಂದು ತನ್ನ ಜಾಣತನ ಪ್ರದರ್ಶಿಸಿದಳು.

"ಅದೂ ನಿಜ. ಎರಡೂ ಬಂದರೆ ಏನು ಮಾಡೋದು ?"

"ಅದೇನು ಮಹಾ? ಒಂದನ್ನು ಮಾರೋದು."

"ಛೆ .... ಛೆ ... ಮಾರೋದು ಬೇಡ, ನಿನ್ನ ಗಂಡನಿಗೆ ಒಂದನ್ನು ಕೊಡೋಣ."

ಓ ..ಎಂತಹ ಸುಂದರ ಕಲ್ಪನೆ. ಅದು ತರುತ್ತಿದ್ದ ಸುಖ, ಅದಕ್ಕೆ ಹೋಲಿಕೆಯುಂಟೆ ?

* * *

"ಭಾಗ್ಯಾದ ಲಕ್ಷ್ಮೀ ಬಾರಮ್ಮ ||
ನಮ್ಮಮ್ಮ ನೀ ..ಸೌಭಾಗ್ಯದ ಲಕ್ಷ್ಮೀ ಬಾರಮ್ಮ
ಹೆಜ್ಜೆಯ ಮೇಲೆ ಹೆಜ್ಜೆಯನಿಕ್ಕುತ
ಗೆಜ್ಜೆಯ ಕಾಲನು...."

ದಾಸವರ್ಯರ ಹಾಡನ್ನು ಅಚ್ಚಮ್ಮ ಕೆಳದನಿಯಲ್ಲಿ ಹಾಡುತ್ತಿದ್ದರು

ಆಕೆಗೆ ಆ ಹಾಡು ಎಂದೂ ಪ್ರಿಯವೇ ಯಾವಾಗಲಾದರೂ, ಹಬ್ಬಹರಿ ದಿನಗಳಲ್ಲಿ, ಶುಕ್ರವಾರ, ಮಂಗಳವಾರಗಳಲ್ಲಿ ಪೂಜೆ ಆದ ಮೇಲೆ ಅದನ್ನು ಹೇಳುವುದಿತ್ತು.

ಆದರೆ ಆ ಹಾಡು ಈಗ ಸದಾ ನಾಲಗೆಯ ಮೇಲೆ ನಲೀತಿದೆ. ಅದಕ್ಕೆ ಹೊತ್ತು ವೇಳೆಗಳ ಅಗತ್ಯವಿಲ್ಲ ಕೆಳದನಿಯಲ್ಲಿ ಹಾಡುತ್ತ ಆನಂದದಿಂದ

ಮೈಮರೆಯುತ್ತಾರೆ ಅಜ್ಜಮ್ಮ!

ಆಕೆ ಹೆಣೆಯುವ ಸುಂದರ ಕಲ್ಪನೆಗಳಿಗೆ ಕೊನೆಯೇ ಇಲ್ಲ. ಮನಸ್ಸಿನಲ್ಲಿ ಮಂಡಿಗೆ ಮಾಡುವ ಹುಚ್ಚು ಸಾಹಸ ಆಕೆಯದು.

ಸಂತೋಷದ ಸಂಭ್ರಮದ ದಿನಗಳು ಅವು ಪ್ರತಿಯೊಬ್ಬರೂ ತಮ್ಮದೇ ಆದ ನೊಗಸಿನ ಸುಂದರ ಪ್ರಪಂಚದಲ್ಲಿ ವಿಹರಿಸುತ್ತಿದ್ದಾರೆ. ಅಲ್ಲಿ ಅಡಿ ಮಾಡೋರು ಯಾರು?

ವಿದ್ಯುತ್ತು ಸುಳಿದಾಡುತ್ತಿದ್ದ ಆವರಣದಂತಿತ್ತು ಮನೆ ಮುಟ್ಟಿದರೆ ಛಳಕು ಹೊಡೆಯುವುದೇನೋ ಎನ್ನುವಷ್ಟು ಉದ್ವಿಗ್ನ ಪರಿಸ್ಥಿತಿ. ಗಂಟೆ ಗಳನ್ನು, ದಿನಗಳನ್ನು ಎಣಿಸುತ್ತ ನಿದ್ರೆಯಲ್ಲಿ ನಡೆಯುವಂತಿದ್ದರು ಅವರು

ಹೇಗೋ ದಿನಗಳು ಉರುಳಿ ಅದೃಷ್ಟ ಪರೀಕ್ಷೆಯ ದಿನ ಬಂದೇಬಿಟ್ಟಿತು. ಟಿಕೀಟು ಕೊಂಡವರ ಎದೆಯ ಮಿಡಿತ ಅನುಭವಿಸಿದವರಿಗೇ ಗೊತ್ತು.

ಕೊನಗೆ ಫಲಿತಾಂಶ ಹೊರಬಿತ್ತು.

ಆತುರದಿಂದ ಕಾದಿದ್ದ ಲಕ್ಷ ಲಕ್ಷ ಕಣ್ಣುಗಳಿಗೆ ಕಾಣಿಸುವಂತೆ ಪತ್ರಿಕೆ ಗಳು ವಿಜಯದ ಮುದ್ರೆ ಹೊತ್ತ ನಂಬರುಗಳನ್ನು ಪ್ರಕಟಿಸಿ ತಮ್ಮ ಪಾಲಿನ ಕರ್ತವ್ಯವನ್ನು ನಿರ್ವಹಿಸಿದುವು.

ಗೆಲುವಿನ ಸಾರ್ಥಕತೆಯಿಂದ ಕುಣಿದಾಡಿದವರು ಕೆಲವರಾದರೆ ಸಪ್ಪೆ ಮೋರೆ ಹಾಕಿದವರು ಲೆಕ್ಕವಿಲ್ಲದಷ್ಟು

ಆ ಜನರ ಪಾಲಿಗೆ ದೀಪಾವಳಿಯ ದೊಡ್ಡ ಬಹುಮಾನ, ಹೂ ಬಾಣ ದಂತೆ ಅರೆಕ್ಷಣ ಬೆಳಕಿನ ಆಸೆ ತೋರಿಸಿ ಉದುರಿ ಇಲ್ಲವಾಗಿತ್ತು. ಆ ಲೆಕ್ಕ ವಿಲ್ಲದ ಸಂಖ್ಯೆಯಲ್ಲಿ ವಸುಮತಿಯ ಮನೆಯವರೂ ಸೇರಿಹೋದರು.

ವಸುಮತಿಯ ಪ್ರಸಾದ ಸ್ವೀಕಾರದ ಕನಸು ನನಸಾಗಿಯೇ ಉಳಿಯಿತು.

"ಇನಕ್ಕೆಲ್ಲ ಅರ್ಥವಿಲ್ಲ. ಮನಸ್ಸಿನ ಹಂಬಲವನ್ನೇ ಕನಸು ಪ್ರತಿಬಿಂಬಿ

ಸುತ್ತೆ"

ಎಂದು ಕೊಂಡದ್ದೂ ಆಯ್ತು.

ನಿರೀಕ್ಷೆಯ ಉಸಿರು ತುಂಬಿಕೊಂಡು ಬಣ್ಣ ಬಣ್ಣ ಚಿಮ್ಮಿಸಿ ಹಾರಾಡುತ್ತಿದ್ದ ಹೃದಯಗಳೆಲ್ಲ ಒಮ್ಮೆಗೆ ಉಸಿರು ಕಳೆದುಕೊಂಡು ಚಪ್ಪಟೆಯಾದಂತೆ ತೋರಿತು.

ಒಂದೆರಡು ದಿನ ಯಾರ ಮುಖದಲ್ಲೂ ಗೆಲುವಿಲ್ಲ. ಬರೀ ಸಪ್ಪೆ ಮೋರೆ. ಎರಡು ದಿನ ಮಾತ್ರ. ಮತ್ತೆ ಕೊಳ್ಳುವ ಉತ್ಸಾಹ ಮತ್ತೊಮ್ಮೆ ಅದೃಷ್ಟದೊಡನೆ ಸೆಣಸುವ ತಯಾರಿ !

ಅಚ್ಚಮ್ಮ ಮತ್ತೆ ಉತ್ಸಾಹಿತರಾಗಲಿಲ್ಲ

ಮುಂಜಾವಿನಲ್ಲಿ ಹೂ ಬಿಡಿಸುತ್ತಿರುವಾಗ ಆಕೆ ಕೆಳದನಿಯಲ್ಲಿ—

"ತಿರುಕನೋರ್ವನೂರ ಮುಂದೆ, ಮುರುಕು ಧರ್ಮಶಾಲೆಯಲ್ಲಿ . ."

ಪದ್ಯವನ್ನು ಹೇಳುತ್ತಿದುದು ಹುಡುಗರ ಕಿವಿಗೆ ಬಿತ್ತು. ಆಕೆ ಚಿಕ್ಕಂದಿನಲ್ಲಿ ಶಾಲೆಯಲ್ಲಿ ಕಲಿತದು ಇಂದು ಅಕಸ್ಮಾತ್ ನೆನಪಿನಲ್ಲಿ ನುಗ್ಗಿ ಬಂದಿತ್ತು.

# ನಿರೀಕ್ಷೆ

ಆಷಾಢಮಾಸದ ಮಳೆ ಚಿಟಿ ಚಿಟಿ ಎಂದು ಸೋಗುತ್ತಲೇ ಇತ್ತು. ರಾತ್ರಿ ಎಲ್ಲ ಮಳೆ ಸುರಿದು ಗಿಡಮರಗಳೆಲ್ಲ ನೆನೆದು ನಿಂತಿದ್ದುವು ಮನೆಯ ಸುತ್ತ ನೆಲವೆಲ್ಲ ಕೆಸರು. ಕಾಲಿಟ್ಟರೆ ನೆಲದಲ್ಲಿ ಹೂತು ಹೋಗುವಂತೆ ಕೊಚ ಕೊಚ ವೆನ್ನುತ್ತಿತ್ತು ನೆಲ

ಮೋಡಗಳ ಮರೆಯಿಂದ ಒಮ್ಮೆ ಇಣುಕಿದ ಸೂರ್ಯ ಮತ್ತೆ ಮರೆಯಾದ. ಅಳುತ್ತಿದ್ದ ಮಗು ಮತ್ತೆ ಮತ್ತೆ ಜ್ಞಾಪಿಸಿಕೊಂಡು ಸಣ್ಣರಾಗ ಎಳೆಯುವಂತೆ ಮಳೆ ಬಿಟ್ಟು ಬಿಟ್ಟು ಬರುತ್ತಲೇ ಇತ್ತು ಈ ಮಳೆಯಲ್ಲಿ ಹೊರಗೆ ಹೋಗುವುದಾದರೂ ಹೇಗೆ ಎಂದು ಯೋಚಿಸುತ್ತಿರುವಾಗಲೇ ಸಿಟಿ ಬಸ್ಸು ಗಡಗಡನೆ ಸದ್ದು ಮಾಡುತ್ತ ಮನೆಯ ಮುಂದೆ ಹಾದು ಹೋಯ್ತು.

ಮಳೆಯೆಂದು ಯಾವ ಕೆಲಸ ನಿಂತೀತು? ಕೊಡೆಗಳನ್ನು ಹಿಡಿದು ಪಂಚೆ ಎತ್ತಿ ಮೇಲೆ ಕಟ್ಟಿ ಜನ ಓಡಾಡುತ್ತಿದ್ದರು. ಭಾನುವಾರವಾದ್ದರಿಂದ ಯಂತ್ರಗಳ ಜೊತೆ ದುಡಿಯುವ ಜನ ಫ್ಯಾಕ್ಟರಿಯ ಬಸ್ಸುಗಳಲ್ಲಿ ಹಿಂಡು ಹಿಂಡಾಗಿ ಹೋಗುವ ದೃಶ್ಯ ಮಾತ್ರ ಇರಲಿಲ್ಲ.

ರಘು ಬಸ್ಸಿನಲ್ಲಿ ಹೋಗುತ್ತಿರಲಿಲ್ಲ. ಅವನು ಕೆಲಸಕ್ಕೆ ಹೋಗುತ್ತಿದ್ದ ಫ್ಯಾಕ್ಟರಿಯಲ್ಲಿ ಬಸ್ಸಿನ ಏರ್ಪಾಡಿರಲಿಲ್ಲವಾಗಿ ಅವನು ಬೆಳಗಿನ ಆರೂವರೆಗೆ ಮನೆಬಿಟ್ಟು ಸೈಕಲ್ಲಿನ ಮೇಲೆ ಕುಳಿತು ದಾರಿ ಸವೆಸುತ್ತಿದ್ದ.

ಈದಿನ ಎಂತಹ ಆರಾಮ! ಎಚ್ಚರವಾದರೂ ಏಳುವ ಮನಸ್ಸಿಲ್ಲ. ಕತ್ತಿನವರೆಗೆ ರಗ್ಗು ಹೊದ್ದು ಮಗ್ಗುಲು ಬದಲಿಸುತ್ತ, ಕಿಟಕಿಯಿಂದ ಮಳೆ ಸುರಿಯುವುದನ್ನು ನೋಡುತ್ತ ಮಲಗಿರುವುದರಲ್ಲಿ ಎಂತಹ ಸುಖವಿದೆ ಎಂದು ಇನತ್ತಿನವರೆಗೂ ಅವನಿಗೆ ತೋರಿರಲಿಲ್ಲ. ಬೆಚ್ಚಗೆ ಹೊದ್ದು ಮಲಗಿ ಹೊರಗಿನ ಬದುಕನ್ನು ದೂರದಿಂದ ದಿಟ್ಟಿಸುವುದು, ಉರುಳುವ ಕಾರ್ಯ ಚಕ್ರದ ಕಿರುಗಾಲಿಯಾಗಿ ಉರುಳುವುದಕ್ಕಿಂತ ತೀರಾ ಬಿನ್ನವಾದುದು.

ಕಣ್ಣು ಬಿಟ್ಟುಕೊಂಡು ಕನಸುಕಾಣುವವನಂತೆ ಮಲಗಿದ್ದ ಮಗನನ್ನು ತಾಯಿ ನಾಲ್ಕನೆಯ ಸಲ ಹೊರಗೆ ಬಂದು ಬಗ್ಗಿನೋಡಿದರು. ದಿನವೂ ಐದು ಗಂಟೆಗೆ ಎದ್ದು ಸ್ನಾನಕ್ಕೆ ನೀರು ಕಾಸಿ, ಕಾಫಿ ಮಾಡಿ ಮಗನಿಗೆ ಕೊಡುತ್ತಿದ್ದ ಅಭ್ಯಾಸ. ಭಾನುವಾರವೂ ಬೇಗನೇ ಎಚ್ಚರವಾಗಿತ್ತು. ಹೊರಗಿನ ಛಳಿ ಬೇರೆ. ಮಗನ ಜೊತೆ ಕಾಫಿ ಕುಡಿಯಬೇಕನ್ನುವ ಚಪಲ ಕಾಡಿದರೂ ಛಳಿಯದೇ ಮೇಲುಗೈ ಆಗಿ ಕಾಫಿ ಕುಡಿದರು ಆಕೆ

ಪಾಪ ಮಲಗಿರಲಿ ಹುಡುಗ, ವಾರಕ್ಕೆ ಒಂದು ದಿನ ತಾನೇ! ಮಳೆಯಾಗಲಿ, ಬಿಸಿಲಾಗಲಿ, ದಿನಾ ಓಡುವುದು ಇದ್ದದ್ದೇ

ಎಂದುಕೊಂಡು ಮನೆಗೆಲಸಕ್ಕೆ ಮನಸ್ಸುಕೊಟ್ಟರು

ಮನೆತಾನೇ ಎಂಥದು? ಅಂಗೈ ಅಗಲದ ಅಡಿಗೆ ಮನೆ. ಉದ್ದನೆಯವರು ಕಾಲುನೀಡಿ ಮಲಗಲು ಕಷ್ಟವೆನಿಸಬಹುದಾದ ರೂಮು. ಅದಕ್ಕೆ ಹೊಂದಿಕೊಂಡಂತೆ, ಎರಡು ಮಡಿಸುವ ಕುರ್ಚಿಗಳಿಂದ ಅಲಂಕೃತವಾದ ಒಂದು ಪುಟ್ಟ ವರಾಂಡ, ಇಷ್ಟೆ. ಇದಕ್ಕೇ ತಿಂಗಳಾದರೆ ಅರವತ್ತು ರೂಪಾಯಿ ಎಣಿಸಬೇಕು! ಈ ಇಡೀ ಮನೆ ಹಾಕಿದರೂ ಹಳ್ಳಿಯಲ್ಲಿದ್ದ ಅವರ ಮನೆಯ ಒಂದು ತೊಟ್ಟಿಗೆ ಸಮನಾಗಲಾರದು.

ಅಂತಹ ಎರಡು ತೊಟ್ಟಿಗಳಿದ್ದ ಮನೆಯನ್ನು ಹತ್ತು ರೂಪಾಯಿ ಬಾಡಿಗೆಗೆ ಕೊಟ್ಟು ಬಂದಿದ್ದರು ಅವರು–ಬಾಡಿಗೆಗಿಂತ ಮನೆಯಲ್ಲಿ ದೀಪ ಹಚ್ಚಿಕೊಂಡು ಜನ ಓಡಾಡಿಕೊಂಡಿರಲಿ ಎಂಬ ಆಸೆಯಿಂದ

ಅಷ್ಟು ದೊಡ್ಡಮನೆ ಇಲ್ಲಿರುತ್ತಿದ್ದರೆ? ಈ ಬೆಂಗಳೂರು ಶಹರಿನಲ್ಲಿ ಸಾವಿರವಾದರೂ ಬಾಡಿಗೆ ಬರುತ್ತಿತ್ತೇನೊ? ಅಷ್ಟು ಆದಾಯವಿದ್ದರೆ ನೂರಿನ್ನೂರು ಬರುವ ಕೆಲಸಕ್ಕಾಗಿ ಈ ಹುಡುಗ ಪರದಾಡಬೇಕಾಗಿತ್ತೆ?

ಜಾನಕಮ್ಮ ಕನಸು ಕಾಣುತ್ತಿದ್ದವರು– "ಅಮ್ಮಾ ಕಾಫಿ ಕೊಡ್ತೀಯ"

–ಎಂದು ರಘು ಕೂಗಿದಾಗ ಎಚ್ಚತ್ತು ಲಗುಬಗೆಯಿಂದ ಕಾಫಿ ಬಿಸಿ ಮಾಡಿ ತಂದರು.

ರಘು ಸ್ನಾನ ಮುಗಿಸಿ, ಬಟ್ಟೆಧರಿಸಿ ಹೊರಗೆ ಹೊರಡಲು ಅನುವಾದ. ಅವನ ಅವಸರವನ್ನು ಗಮನಿಸಿದ ತಾಯಿ,

"ವಾರದಲ್ಲಿ ಒಂದು ದಿನವಾದರೂ ಹಾಯಾಗಿ ಮನೇಲಿರಬಾರದೆ ? ದಿನ ಹೊರಗೆ ಹೋಗೋದು ಇದ್ದೇ ಇದೆ"–ಎಂದರು.

"ನನ್ನ ಸ್ನೇಹಿತ ಕಾಯ್ತಾ ಇರ್ತಾನೆ. ಅವನಿಗೆ ಬರೋದಾಗಿ ಹೇಳಿದ್ದೆ. ಮನೇಲಿದ್ದು ಮಾಡೋದು ತಾನೇ ಏನು ?"

"ಇದ್ದರೆ ಏನಾದರೂ ಮಾಡಬಹುದು ನಲ್ಲಿ ಮೂರು ದಿನದಿಂದ ಒಂದೇಸಮ ಸುರೀತಿದೆ. ವಾಷರೋ ಎಂಥದ್ದೋ ಹಾಕ್ತೀನಿ ಎಂದೆ. ಸುಮ್ಮನೆ ಸದ್ದಾಗತ್ತಲ್ಲ ಎಂತ ಅದರ ಮೇಲೆ ಬಟ್ಟೆ ಹಾಕಿಬಿಟ್ಟಿದೇನೆ. ಬಟ್ಟೆ ಹರವಿ ಹಾಕೋ ಗಳು ಕಿತ್ತುಹೋಗಿದೆ. ಏಣಿಯ ಮೇಲೆ ನಿಂತು ಕಟ್ಟಕ್ಕೆ ನನ್ನ ಕೈಲಿ ಆಗಲ್ಲ "

"ಅಷ್ಟೇತಾನೇ ? ಅದು ಎಷ್ಟು ಹೊತ್ತು ? ಮನೆಗೆ ಬಂದಮೇಲೆ ಐದು ನಿಮಿಷದಲ್ಲಿ ಮಾಡ್ತೀನಿ "

ರಘು ಚಪ್ಪಲಿ ಮೆಟ್ಟಿ ಹೊರಟ ಪರ್ಸ್ ಇದೆಯೆ ಎಂದು ಜೇಬು ಮುಟ್ಟಿ ನೋಡಿಕೊಂಡ.

"ಊಟಕ್ಕೆ ಹೊತ್ತು ಮಾಡ್ಕೋಬೇಡ, ಬೇಗ ಬಂದ್ಬಿಡು"

ಮೆಟ್ಟಲು ಇಳಿಯುತ್ತಿದ್ದ ಮಗನ ಹಿಂದಿನಿಂದ ಹೋಗಿ ಕೂಗಿ ಹೇಳಿದರು ತಾಯಿ.

"ಹೂಂ ಹೂಂ .. ಬರ್ತೀನಿ!"

ಅವನು ಹೋಗುವುದನ್ನೇ ನೋಡುತ್ತಾ ನಿಂತಿದ್ದ ಜಾನಕಮ್ಮ ಅವನು ಆ ಬೀದಿಯನ್ನು ದಾಟಿದ ಮೇಲೆ ನಿದಾನವಾಗಿ ಒಳಗೆ ಬಂದರು. ಈಳಿಗೇ ಮಣೆಯನ್ನು ತಂದಿಟ್ಟುಕೊಂಡು, ತರಕಾರಿ ಹೆಚ್ಚಲು ಆರಂಭಿಸಿದರು.

ಮಂಗಳಾ ಏನು ಕೆಲಸ ಮಾಡ್ತಿದಾಳೋ ? ಬೆಳಗಿನಿಂದ ಈಕಡೆ ಬಂದೇ ಇಲ್ಲ"

–ಎಂದುಕೊಳ್ಳುವ ಹೊತ್ತಿಗೆ ಸರಿಯಾಗಿ ತೆರೆದ ಬಾಗಿಲಲ್ಲಿ ಮಂಗಳಾ ಕಾಣಿಸಿಕೊಂಡಳು.

ಮಂಗಳಾ ನೆರೆಮನೆಯವಳು. ಈ ಮನೆಗೆ ಅಂಟಿಸಿದಂತೇ ಇತ್ತು ಆ ಮನೆ, ಬಾಡಿಗೆಗೆ ಕೊಡುವುದಕ್ಕಾಗಿ ಒಂದೇ ಮನೆಯನ್ನು ನಡುವೆ ಗೋಡೆ ಹಾಕಿ, ಒಂದು ಅಡಿಗೆಮನೆ, ನೀರು ಕಾಯಿಸಲು ಒಂದು ಬಚ್ಚಲುಮನೆ

ಹೊಂದಿಸಿ ಎರಡು ಭಾಗ ಮಾಡಿದ್ದರು.

"ಜಾನಕಮ್ಮ ಆಗಲೇ ಅಡಿಗೆಯ ತಯಾರಿ ನಡೆಸಿದ್ದಾರೆ"

–ಮಂಗಳಾ ಒಳಗೆ ಬರುತ್ತ ನುಡಿದಳು.

"ಬಾಮ್ಮ ಕೂತ್ಕೊ ಆಗಬೇಕಲ್ಲ ಕೆಲಸ, ಒಂದೊಂದಾಗಿ ಮೊದಲಿನಂತೆ ಬೇಗ ಬೇಗ ಮಾಡಲು ಆಗಲ್ಲ."

ಜಾನಕಮ್ಮ ತಮ್ಮ ಕೈಲಾಗದುದನ್ನು ಹೇಳಿಕೊಂಡರು. ಮಂಗಳಾ ಹುರುಳೀಕಾಯಿಯ ನಾರನ್ನು ಬಿಡಿಸಲು ಕೈ ಹಾಕಿದಳು

"ಇರಲಿ ಬಿಡು. ನಿನ್ನ ಮನೆ ಕೆಲಸವೇ ಸಾಕಾಗಿರುತ್ತೆ "

"ಚೆನ್ನಾಗಿ ಹೇಳ್ತೀರಿ ನನ್ನ ಕೈ ಸವೆಯುವುದಿಲ್ಲ "

"ನಾನು ಎಷ್ಟೋ ಸಲ ಅದೇ ಯೋಚ್ನೆ ಮಾಡ್ತೀನಿ."

"ಏನು ಯೋಚನೆ ?"

"ಮಗಳಿಗಿಂತ ಹೆಚ್ಚಾಗಿ ಈ ಮಂಗಳಾ ಇಲ್ಲದಿದ್ದರೆ ನನ್ನ ಗತಿ ಏನಾಗುತ್ತಿತ್ತು ? ಹೊಸ ಊರು. ಪರಿಚಯದವರೆಲ್ಲಾ ಎಲ್ಲೆಲ್ಲೋ ಇದಾರೆ. ಹತ್ತಿರ ಇರೋರಂತೂ ದೇವರೇ ಗತಿ. ಕೆಲವರಿಗೆ ಭಾಷೆಬರಲ್ಲ. ಬಂದವರಿಗೆ ನೆರೆಯವರನ್ನು ಮಾತಾಡಿಸಿ ಕಷ್ಟ ಸುಖ ಕೇಳುವ ಆಸಕ್ತಿ ಇಲ್ಲ."

"ಪಟ್ಟಣವಾಸದ ರೀತಿಯೇ ಹಾಗೆ. ಅವರವರದೇ ಅವರಿಗೆ ಸಾಕು ಬೇರೆಯವರತ್ತ ಮನಸ್ಸು ಕೊಡಲು ಆಸಕ್ತಿಯೂ ಇಲ್ಲ ಅವಕಾಶವೂ ಇಲ್ಲ "

ಮಂಗಳಾ ನಕ್ಕಳು. ಮಕ್ಕಳಂತಹ ಮುಗ್ಧ ಮನಸ್ಸಿನ ಮಂಗಳಾ ನಕ್ಕಾಗ ಪುಟ್ಟ ಹುಡುಗಿಯಂತೆ ಕಾಣಿಸುತ್ತಿದ್ದಳು. ಅವಳಿಗೂ ಗೊತ್ತು–ತಾನು ದಿನಕ್ಕೆ ಹತ್ತುಸಲ ಹೋಗಿ ನೋಡದಿದ್ದರೆ ಜಾನಕಮ್ಮನಿಗೆ ನಡೆಯುವುದಿಲ್ಲವೆಂದು ಫ್ಯಾಕ್ಟರಿಯಲ್ಲಿ ಕೆಲಸದಲ್ಲಿದ್ದ ರಘು ಬೆಳಗ್ಗೆ ಕೆಲಸಕ್ಕೆ ಹೋದರೆ ಬರುವುದು ಸಂಜೆ, ಈ ನಡುವೆ ಏನಾದರೂ ಬೇಕಾದರೆ ಆಕೆ ಏನು ಮಾಡಬೇಕು ? ವಯಸ್ಸಿನೊಡನೆ ಅಂಟಿಬಂದ ವಾಯುರೋಗದ ಕಾಟಬೇರೆ !

ಒಂದೊಂದುಸಲ ಅವರ ಕಷ್ಟ ನೋಡಲಾರದೆ ಮಂಗಳಾ ಕೇಳುವುದಿತ್ತು—

"ಜಾನಕಮ್ಮ, ಭದ್ರಾವತೀಲಿ ಹಾಯಾಗಿ ದೊಡ್ಡ ಮಗನ ಮನೇಲಿ ಇರಬಾರದೆ ? ಅಥವಾ ಶಿವಮೊಗ್ಗೇಲಿ ಎರಡನೇ ಮಗನ ಮನೆ... "

"ನೋಡಮ್ಮ-ಅವರಿಗೆಲ್ಲ ಮದುವೆ ಆಗಿ ಹೆಂಡಿರು ಬಂದಿದಾರೆ, ಅವರ ಯೋಗಕ್ಷೇಮ ನೋಡಿಕೋತಾರೆ. ನಾನಿಲ್ಲದಿದ್ದರೂ ತೊಂದರೆಯಿಲ್ಲ. ಈ ರಘು ಮೊದಲಿಂದ ಸೂಕ್ಷ್ಮ ಪ್ರಕೃತಿಯವ. ಹೋಟೆಲಿನ ಊಟ ತಿಂಡಿ ಒಂದೇ ಸಮ ತಿಂದರೆ ಖಾಯಿಲೆ ಮಲಗಿಬಿಡುತ್ತಾನೆ. ಅದಕ್ಕಾಗಿ ಇಲ್ಲಿ ಬಂದು ಈ ಮಹಡಿ ಮೇಲಿನ ರೂಮಿನಲ್ಲಿ ಒದ್ದಾಡ್ತಿದೀನಿ. ಹತ್ತಲಾರೆ, ಇಳೀಲಾರೆ, ಆದರೂ ವಿಧಿಯಿಲ್ಲ. ಇವನಿಗೊಂದು ಹುಡುಗಿ ಗಂಟುಹಾಕಿ ಬಿಟ್ಟರೆ ನನ್ನ ಹೊಣೆ ತೀರಿತು. ಆಮೇಲೆ ನಾನು ಎಲ್ಲಿದ್ದರೂ ಸರಿ."

"ಮಾತಾಡ್ತಾ ಎಲ್ಲಾ ಹುರುಳೀಕಾಯಿ ಮುರಿದು ಬಿಟ್ರಿ. ಹೆಚ್ಚಾಗುತ್ತೋ ಏನೋ? ಪಾತ್ರೇಲಿ ಹಾಕಿ ಮುಚ್ಚಿಟ್ಟರೆ ನಾಳೆಗೆ ಆಗುತ್ತೆ."

"ಏನಿಲ್ಲ ಬಿಡು. ಎಲ್ಲಾ ತರಕಾರೀನೂ ಹಾಕಿ ಕೂಟು ಮಾಡ್ತೀನಿ. ರಘೂಗೆ ಕೂಟೆಂದರೆ ಇಷ್ಟ. ವಾರಕ್ಕೆ ಒಂದು ದಿನ ಮನೇಲಿ ಊಟ. ಅವರ ಫ್ಯಾಕ್ಟರೀಲೂ ಊಟ ಚೆನ್ನಾಗಿರುತ್ತಂತೆ. ಆದರೂ .."

"ಆದರೂ ನೀವು ಮಾಡಿದ ಹಾಗೆ ಹೇಗಿರುತ್ತೆ ಹೇಳಿ ?"

ಮಂಗಳಾ ನಗುತ್ತಲೇ ಮನೆಗೆ ನಡೆದಳು. ಪ್ರಾಯದ ಹುಡುಗಿ ತಟಪಟನೆ ಓಡಾಡಿ ಅಡಿಗೆ ಮುಗಿಸಿ, ಗಂಡನಿಗೆ ಬಡಿಸಿ, ತಾನೂ ಊಟ ಮಾಡಿಕೊಂಡು, ಹೊರಗೆ ಹೊರಡಲು ಸಿದ್ಧವಾಗಿ ಮತ್ತೆ ಜಾನಕಮ್ಮನ ಮನೆಯ ಬಾಗಿಲಲ್ಲಿ ಇಣುಕಿ,

"ಜಾನಕಮ್ಮ, ಹೊರಗೆ ಹೊರಟಿದೇನೆ. ನಿಮಗೆ ಏನಾದರೂ ಅಂಗಡಿಯಿಂದ ತರುವುದಿತ್ತೆ."–ಎಂದಳು.

ಒಳಗಿನಿಂದ ಉತ್ತರ ಬರಲಿಲ್ಲ.

'ಊಟ ಮಾಡಿ ತಾಯಿ ಮಗ ಮಲಗಿಬಿಟ್ಟಿರಬಹುದು'

–ಎಂದುಕೊಂಡು ಚಪ್ಪಲಿಯನ್ನು ಕಳಚಿ ಒಳಗೆ ಬಂದವಳು ತಟ್ಟನೆ ನಿಂತುಬಿಟ್ಟಳು.

ರಘು ಮನೆಗೆ ಬಂದಂತಿರಲಿಲ್ಲ. ಮಾಡಿದ ಅಡಿಗೆಯನ್ನೆಲ್ಲ ಒಲೆಯ ಮೇಲೆ ಮುಚ್ಚಿಟ್ಟು ಜಾನಕಮ್ಮ ತೋಳನ್ನೇ ದಿಂಬಿನಂತೆ ಇಟ್ಟುಕೊಂಡು ನೆಲದ ಮೇಲೆ ಮಲಗಿದ್ದರು.

ಹೆಜ್ಜೆಯ ಸದ್ದು ಕೇಳಿ ಆಕೆ,

–"ಯಾರು ? ರಘು ? ಯಾಕಿಷ್ಟು ಹೊತ್ತು ?"

ಎಂದರು ಕಣ್ಣುಜ್ಜಿಕೊಳ್ಳುತ್ತ.

"ನಾನು, ಜಾನಕಮ್ಮ, ರಘು ಇನ್ನೂ ಬಂದಿಲ್ಲವೆ ?"

"ಮಂಗಳಾನೇ ? ಬಾ, ತಾಯಿ."

"ಊಟ ಆಯ್ತೆ ?"

–ಮಂಗಳಾ ಅನುಮಾನಿಸುತ್ತಲೇ ಕೇಳಿದಳು ಎರಡು ಚಾಪೆ ಹಾಸಿ, ಇಬ್ಬರಿಗೆ ಊಟಕ್ಕೆ ಅಣಿಮಾಡಿದ್ದುದು ಕಾಣಿಸಿತು

"ಇನ್ನೂ ಇಲ್ಲ ರಘು ಬರ್ತಾನೇನೊ ಎಂತ ಕಾಯ್ತಾ ಇದ್ದೆ. ಹಾಗೇ ನಿದ್ದೆ ಬಂದುಬಿಟ್ಟಿದೆ"

ಮಂಗಳಾ ತನ್ನ ಕೈಲಿದ್ದ ಗಡಿಯಾರವನ್ನು ನೋಡಿದಳು ಗಂಟೆ ಒಂದೂವರೆಯಾಗಿತ್ತು. ದಿನವೂ ಹತ್ತೂವರೆಯ ಹೊತ್ತಿಗೆ ಜಾನಕಮ್ಮ ಊಟ ಮಾಡುತ್ತಿದ್ದುದು ಅವಳಿಗೆ ಗೊತ್ತು ಹಸಿದು ಸುಸ್ತಾಗಿ ಮಲಗಿಬಿಟ್ಟಿದಾರೆ ಪ್ರಾಣಿ! ಹುಡುಗ ಎಲ್ಲಿ ಅಲೆಯಕ್ಕೆ ಹೋಗಿದಾನೋ ?

ಅವಳಿಗೆ 'ಅಯ್ಯೋ' ಎನಿಸಿತು.

"ಸಾರ್ಥಕವಾಯ್ತು ಗಂಟೆ ಎಷ್ಟು ಗೊತ್ತೆ ? ಒಂದೂವರೆ ಆಗಿದೆ. ಹೊರಗೆ ಹೋಗಿರೋರು ಏನಾದರೂ ತಿಂದುಕೊಂಡು ಒಂದು ಗಳಿಗೆ ಹೆಚ್ಚು ಕಡಿಮೆ ಬರ್ತಾರೆ. ಭಾನುವಾರ ರಜಾ ಇರೋದರಿಂದ ಸ್ನೇಹಿತರೆಲ್ಲ ಸೇರ್ತಾರೆ ಹಾಗೇಂತ ನೀವು ಊಟಾನೂ ಮಾಡ್ದೆ ಹಸಿದುಕೊಂಡು ಕೂತಿರೋದು ಯಾವ ನ್ಯಾಯ ? ಏಳಿ, ಊಟಮಾಡಿ. ನಾನು ಮಾತಾಡ್ತಾ ಕೂತಿರ್ತೀನಿ"

"ಊಟದ ಹೊತ್ತು ಮೀರಿ ಹಸಿವೆ ಮುಚ್ಚಿ ಹೋಗಿದೆ."

"ಪರವಾಗಿಲ್ಲ. ಎಲೆಯ ಮುಂದೆ ಕೂತರೆ ಸೇರಿದಷ್ಟು ತಿನ್ನೋದು."

ಹೊರಗೆ ಮಳೆ ಮತ್ತೆ ಆರಂಭವಾಯ್ತು. ಅದರ ಸದ್ದು ಆಲಿಸುವಂತೆ ಜಾನಕಮ್ಮ ಸುಮ್ಮನಿದ್ದವರು ತಟ್ಟನೆ–

"ರಘು ಬರಲಿ ಎಂದು ಇಷ್ಟು ಹೊತ್ತು ಕಾದೆ. ಇನ್ನೇನು ಬಂದಾನು. ಈಗ ಊಟ ಮಾಡಿದರೆ ಇಷ್ಟು ಕಾದದ್ದೂ ವ್ಯರ್ಥ. ಆಗಲೇ ಉಂಡಿದ್ದರೆ "

"ಅದೇ ನಾನು ಹೇಳ್ತಿರೋದು. ವಯಸ್ಸಾದ ಮೇಲೆ ಹೊತ್ತು

ಹೊತ್ತಿಗೆ ಸರಿಯಾಗಿ ಆಹಾರ ತಗೋಬೇಕು. ನೀವು ಊಟಮಾಡಿ ಅವನು ಬಂದಮೇಲೆ ಬಡಿಸಬಹುದಿತ್ತು."

"ನೋಡಮ್ಮ—ವಾರದಲ್ಲಿ ಒಂದು ದಿನ ಅವನು ಮನೇಲಿರೋದು. ಬೆಳಿಗ್ಗೆ ಅವನು ಫ್ಯಾಕ್ಟರೀಲೇ ಊಟ ಮಾಡ್ತಾನೆ. ರಾತ್ರಿ ಮನೆಯ ಊಟ ನಾನು ರಾತ್ರಿ ಊಟ ಮಾಡಲ್ಲ. ಹಗಲು ಒಬ್ಬಳೇ ಕೂತು ಹೊಟ್ಟೆ ತುಂಬಿಸಿ ಕೊಳ್ಳೋದು ಇದ್ದೇ ಇದೆ. ಒಂದು ದಿನ ಅವನ ಜೊತೆ ಮಾತಾಡ್ತಾ ನಿದಾನ ವಾಗಿ ಊಟಮಾಡೋಣವೆಂದು ಆಸೆ. ಅವನಿಗೆ ಇಷ್ಟವಾದ ಅಡಿಗೆಗಳನ್ನೆಲ್ಲಾ ಮಾಡಿ ಅವನನ್ನು ಬಿಟ್ಟು ನಾನೇ ಮೊದಲು ತಿನ್ನಲು ಮನಸ್ಸು ಬರಲ್ಲ ಕಣೇ!"

"ಏನೋಮ್ಮ, ನಿಮ್ಮ ಮಾತು ನನಗೆ ಅರ್ಥವಾಗಲ್ಲ. ಮೊದಲು ಊಟ ಮಾಡಿದರೆ ತಪ್ಪೇನು ? ಆಮೇಲೆ ಅವನೂ ತಿನ್ನಲ್ಲವೇ ?"

"ನಿಜ, ಮಂಗಳಾ. ಈಗ ನಿನಗೆ ಅರ್ಥವಾಗಲ್ಲ. ನಾಳೆ ನಿನಗೊಬ್ಬ ಮಗ ಆದಾಗ ಅರ್ಥವಾಗುತ್ತದೆ ಎಲ್ಲೋ ಹೊರಟಿರೋ ಹಾಗಿದೆ ನೀನು ?"

ಆ ಮಾತು ಮುಂದುವರಿಸುವ ಇಷ್ಟವಿಲ್ಲದೆ ಜಾನಕಮ್ಮ ಮಾತು ಬದ ಲಿಸಿದರು.

"ಹೂಂ .ಮಲ್ಲೇಶ್ವರಕ್ಕೆ ಹೋಗಬೇಕು. ನಮ್ಮಕ್ಕ ಹೇಳಿಕಳಿಸಿದ್ದಳು. ಇವತ್ತು ಇವರ ಸ್ನೇಹಿತರೆಲ್ಲ ಇಸ್ಪೇಟಿನಾಟಕ್ಕೆ ನಮ್ಮ ಮನೇಲಿ ಸೇರ್ತಾ ರಂತೆ. ಅವರ ಆಟ ಮುಗಿಯುವವರೆಗೆ ನಾನು ಹೊರಗೆ ಬರಕ್ಕೂ ಆಗಲ್ಲ ಅದಕ್ಕೇ ಎರಡು ಫ್ಲಾಸ್ಕಿನ ತುಂಬ ಕಾಫಿ ಮಾಡಿಟ್ಟು ಹೊರಟಿದೇನೆ. ಬರು ವಾಗ ಮಾರ್ಕೆಟ್ಟಿಗೆ ಹೋಗ್ತೀನಿ. ಹಾಗೇ ನಿಮಗೆ ಏನಾದರೂ ಬೇಕೇ ಕೇಳೋಣವೆಂದು ಬಂದೆ "

"ಸಾಮಾನೆಲ್ಲ ಇದೆ ಏನೂ ತರಬೇಕಾಗಿಲ್ಲ."

"ಹಾಗಾದ್ರೆ .. ನೀವು ಊಟಮಾಡಲ್ಲ ಅನ್ನಿ. ಬರಲೇ ನಾನು ?"

ಮಂಗಳಾ ಹೊರಟವಳು ಒಮ್ಮೆ ಹಿಂತಿರುಗಿ ನೋಡಿದಳು. ಜಾನಕಮ್ಮ ಮತ್ತೆ ಅಡ್ಡಾಗುತ್ತಿದ್ದುದು ಕಾಣಿಸಿತು.

'ಪಾಪ....ಪಾಪ' ಎಂದುಕೊಂಡೇ ಮುಂದೆ ನಡೆದಳು.

ಹುಡುಗರಿಗೆ ದೊಡ್ಡವರ ಭಾವನೆ ಅರ್ಥವಾಗಲ್ಲ, ದೊಡ್ಡವರಾದರೂ ಹುಡುಗರ ಸಭಾವ ಅರಿಯಬಾರದೆ ?

ಮಂಗಳಾ ಬಸ್ಸಿಗಾಗಿ ಕಾದಳು. ಬಸ್ಸುಗಳೇನೋ ಒಂದರ ಹಿಂದೆ ಒಂದು ಬಂದರೂ ಅವಳಿಗೆ ಬೇಕಾದ್ದು ಸಿಕ್ಕಲಿಲ್ಲ. ಕೊನೆಗೊಮ್ಮೆ ಬಂದದ್ದು ಭರ್ತಿಯಾಗಿತ್ತಾಗಿ ಅವನು ನಿಲ್ಲಿಸಲೇ ಇಲ್ಲ. ಆ ವೇಳೆಗೆ ಮಾರ್ಕೆಟ್ಟಿಗೆ ಹೋಗುವ ಬಸ್ಸು ಬಂತು. ಮಂಗಳಾ ಅದಕ್ಕೇ ಹತ್ತಿದಳು. ಅಲ್ಲಿಯ ಕೆಲಸ ಮುಗಿಸಿಕೊಂಡೇ ಮಲ್ಲೇಶ್ವರಕ್ಕೆ ಹೋದರೆ, ಬರುವಾಗ ಸೀದಾ ಬಂದು ಬಿಡಬಹುದು ; ಅದೂ ಒಳ್ಳೆಯದೆ

ಮಾರ್ಕೆಟ್ಟಿನಲ್ಲಿ ಸಾಮಾನು ಕೊಂಡು ಹೊರಗೆ ಬಂದಾಗ ಎದುರಿಗೆ ರಘು ಕಾಣಿಸಿದ ಇಬ್ಬರು ಸ್ನೇಹಿತರ ಜೊತೆ ಮಾತಾಡುತ್ತಿದ್ದವನು ಅವಳನ್ನು ನೋಡಿ ಪರಿಚಯದ ನಗೆ ಬೀರಿದ. ಏನೋ ಹೇಳುವಂತೆ ಎರಡು ಹೆಜ್ಜೆ ಮುಂದೆ ಬಂದ.

"ಮಾರ್ಕೆಟ್ಟಿಗೆ ಬಂದಿದ್ದಿರ ?"-ಎಂದ.

"ಹೂಂ ..."

-ಎಂದವಳು ಕಾಣ್ತಾನೆ ಇದೆಯಲ್ಲ ಎಂದುಕೊಂಡಳು, ಮನಸ್ಸಿನಲ್ಲಿ. ಸ್ನೇಹಿತರಿಬ್ಬರೂ ದೂರ ಇದ್ದುದನ್ನು ನೋಡಿ ರಘು-

"ಮನೆಗೆ ಹೊರಟೀದೀರ ?"

-ಎಂದು ಕೇಳಿದ ಸಣ್ಣ ದನಿಯಲ್ಲಿ

"ಯಾಕೆ ?"

"ನಾನು ಪಿಕ್ಚರಿಗೆ ಹೊರಟಿದೇನೆ. ಅಮ್ಮನಿಗೆ ತಿಳಿಸಿಬಿಡಿ. ಯಾಕೋ ಬರಲಿಲ್ಲ ಎಂತ ಸುಮ್ಮನೆ ಆತಂಕ ಪಡ್ತಿರ್ತಾಳೆ."

"ನಾನು ಮಲ್ಲೇಶ್ವರಕ್ಕೆ ಹೊರಟಿದೇನೆ. ಈಗ ತಾನೆ ಮನೆಯಿಂದ ಬಂದೆ"

ಮಂಗಳಾ ಸೂಕ್ಷ್ಮವಾಗಿ ಅವನ ಮುಖವನ್ನು ನೋಡುತ್ತ ಹೇಳಿದಳು ಒಂದು ಕ್ಷಣ ಅವನು ಪೆಚ್ಚಾದಂತೆ ಕಾಣಿಸಿತು. ಮೋಡದ ಸಂದಿನಿಂದ ತೂರಿ ಬಂದ ಬೆಳಕಿನ ಕಿರಣದಂತೆ ಮತ್ತೆ ಉತ್ಸಾಹ ಇಣುಕಿತು.

"ಪರವಾಗಿಲ್ಲ. ನೀವೇನೂ ಚಿಂತಿಸಬೇಡಿ. ಅಮ್ಮನಿಗೆ ನನ್ನ ಸ್ವಭಾವ ಹೊಸದೆ ? ನಿದಾನವಾಗಿ ನೀವು ಮನೆಗೆ ಹೋದಮೇಲೆ ತಿಳಿಸಿದರೂ ಸಾಕು. ಅವರಿಗೆ ನಾನು ಮನೆಗೆ ಬರದಿದ್ದರೆ !"

ರಘು ಹೊರಡುವವನಂತೆ ಆ ಕಡೆ ತಿರುಗಿದ.

ಮಂಗಳೆಗೆ ಸಿಟ್ಟು ಉಕ್ಕಿ ಬಂತು.

ಎಂತಹ ಮನಷ್ಯ! ಅವನೇನೂ ತೀರಾ ಚಿಕ್ಕ ಹುಡಗನೆ? ಅವರಮ್ಮ ಮದುವೆ ಮಾಡಲು ಯೋಚಿಸುತ್ತಿದ್ದಾರೆ. ಒಂದು ವೇಳೆ ಅವನಿಗೆ ಮದುವೆ ಯಾಗಿದ್ದು ಅವನ ಮಡದಿ ಮನೆಯಲ್ಲಿ ಹಸಿದು ಇವನಿಗಾಗಿ ಕಾಯುವಳೆಂದು ಗೊತ್ತಿದ್ದರೆ, ಇವನು ಮನೆಯ ನೆನಪೇ ಇಲ್ಲದೆ ಹೀಗೆ ತಿರುಗುವುದು ಸಾಧ್ಯ ವಿತ್ತೆ?

ತಾಯಿಯ ಪಟ್ಟಕ್ಕೆ ಏರದಿದ್ದರೂ ಮಂಗಳೆಯ ಹೆಂಗರುಳು ಮಿಡು ಕಿತು. ಮಗನ ಬರುವಿಗಾಗಿ ಕಾಯುತ್ತ ನೆಲದಮೇಲೆ ಮುದುರಿ ಮಲಗಿದ್ದ ಜಾನಕಮ್ಮನ ಚಿತ್ರ ಮನದೆದುರು ನಿಂತಿತು.

"ರಘು....ಇಲ್ಲಿ ಸ್ವಲ್ಪ ಬನ್ನಿ"–

ತನ್ನ ಅಸಮಾಧಾನವನ್ನು ತೋರಿಸದೆ ಮಂಗಳಾ ನಯವಾಗಿ ಕರೆದಳು.

"ಏನು ...?"

ರಘು ತಿರುಗಿ ಬಂದ.

"ನಿಮ್ಮದು ..ಊಟ ಆಗಿದೆಯೆ ?" ಎಂದಳು.

"ಊಟ ಮಾಡಿಲ್ಲ; ಆದರೆ ಪಟ್ಟಾಗಿ ತಿಂಡಿ ಆಗಿದೆ ಊಟ ಮಾಡಲು ಸಾಧ್ಯವಿಲ್ಲದಷ್ಟು ಹೊಟ್ಟೆ ಭಾರವಾಗಿದೆ."

"ನೀವು ಊಟಕ್ಕೆ ಬರಲ್ಲವೆಂದು ನಿಮ್ಮ ತಾಯಿಗೆ ಗೊತ್ತೆ ?"

"ನಾನು ಹೇಳಿರಲಿಲ್ಲ. ಊಟಕ್ಕೆ ಬರ್‍ತೀನಿ ಎಂದೇ ಹೇಳಿದ್ದೆ, ಹೊತ್ತು ಮೀರಿತೆಂದು ಅಮ್ಮ ತಿಳಿದುಕೋತಾಳೆ."

"ಹಾಗಂತೀರ? ಅವರು ನಿಮಗಾಗಿ ಕಾದಿದ್ದರೆ? ಅವರಿಗೆ ನಿರಾಶೆ ಯಾಗದೆ?"

"ನಿಮಗೇ ಗೊತ್ತು. ಇವತ್ತು ರಜ. ಸ್ನೇಹಿತರಿಗೆ ಮ್ಯಾಟನಿಗೆ ಬರೋದಾಗಿ ಮಾತು ಕೊಟ್ಟಿದೇನೆ."

"ಅವರಿಗೂ ಊಟಕ್ಕೆ ಬರೋದಾಗಿ ಮಾತು ಕೊಟ್ಟಿದ್ದಿರಿ."

ಮಂಗಳಾ ನಯವಾಗಿ ಹೇಳಿದರೂ ಆ ಮಾತಿನ ಚುರುಕು ರಘುವಿನ

ಎದೆಗೆ ಬಿಸಿ ಮುಟ್ಟಿಸಿತು.

"ನೋಡಿ–ದಾರೀಲಿ ನಿಂತು ಈ ಮಾತು ಹೇಳೋದು ನನಗೆ ಸೇರಿದ್ದಲ್ಲ. ಆದರೂ ಹೇಳದಿರಲು ಮನಸ್ಸು ಒಪ್ಪಲ್ಲ ಜಾನಕಮ್ಮ ಊಟಮಾಡಿಲ್ಲ ನಿಮಗೆ ಇಷ್ಟವಾದ ಅಡಿಗೆ ಮಾಡಿಟ್ಟುಕೊಂಡು, ನಿಮ್ಮ ದಾರಿಕಾಯುತ್ತ ಹಸಿದು ನೆಲದ ಮೇಲೆ ಮಲಗಿದ್ದರು ನಾನು ಬರುವಾಗ ನಾನೂ ಎಷ್ಟೋ ಹೇಳಿದೆ ಅವರು ಉಣಲು ಒಪ್ಪಲಿಲ್ಲ. ಅಲ್ನೋಡಿ–ಮಲ್ಲೇಶ್ವರದ ಬಸ್ಸು ಬಂತು. ನಾನು ಹೋಗ್ತೀನಿ ನಿಮ್ಮ ಜೊತೆ ಒಪ್ಪೊತ್ತು ಮಾತಾಡ್ತಾ ಊಟಮಾಡಬೇಕೆಂದು ಆಕೆ ವಾರವೆಲ್ಲಾ ಚಾತಕ ಪಕ್ಷಿಯಂತೆ ನಿರೀಕ್ಷಿಸುತ್ತಾ ಇರ‍್ತಾರೆ. ಆದರೆ ಅದನ್ನು ಬಾಯಲ್ಲಿ ಹೇಳಲ್ಲ ನೀವೇ ಅರ್ಥಮಾಡಿಕೊಂಡರ ಸಾಕು. ಆ ಜೀವಕ್ಕೆ ಎಷ್ಟು ತೃಪ್ತಿ. ನಾನು ಹೀಗೆ ಹೇಳ್ತೀನಿ ಎಂತ ತಪ್ಪು ತಿಳೀಬೇಡಿ. ಸಿನಿಮಾ ಸಂಜೆಗೆ ಹೋದರೂ ಆದೀತು. ದಿನಕ್ಕೆ ಮೂರು ಆಟ ಇದೆಯಲ್ಲ! ನನ್ನ ಮನಸ್ಸಿನ ಸಮಾಧಾನಕ್ಕಾಗಿ .."

ಮಾತು ಮುಗಿಯುವ ಮೊದಲೇ ಮಂಗಳಾ ಬಸ್ಸು ಹತ್ತಿದಳು. ಬಸ್ಸು ಮುಂದೆ ಹೊರಟಿತು. ಅಕ್ಕನ ಮನೆಯ ಹತ್ತಿರ ಬಂದರೂ ಮಂಗಳೆಗೆ ಏನೋ ಚಿಂತೆ.

ರಘು ಮನೆಗೆ ಹೋದನೋ ಅಥವಾ... ?

# ಉಪಕಾರ ಸ್ಮರಣೆ

"ಗ್ರಹಚಾರ ಅನ್ನೋದು ಇವಕ್ಕೇ, ರಜಾದಲ್ಲಿ ನಾಲ್ಕು ದಿವಸ ಅಕ್ಕನ ಮನೇಲಿ ಹಾಯಾಗಿ ಓಡಾಡಿಕೊಂಡು ಇರೋಣವೆಂದು ಆ ಹುಡುಗ ಬಂದರೆ ಹೀಗಾಗಬೇಕೆ ?"

ಗುಂಡೂರಾಯರು ಮನೆಗೆ ಬಂದ ಕೂಡ್ಲೆ ಅವರ ಧರ್ಮಪತ್ನಿ ಶಾರದಮ್ಮ ವರದಿ ಮಾಡಿದರು

"ಏನಾಯ್ತೇ ?" ರಾಯರು ಬೇಸರದಿಂದಲೇ ಕೇಳಿದರು. ಅವರದು ಊರೂರು ತಿರುಗುವ ಕೆಲಸ, ತಿಂಗಳಲ್ಲಿ ಹದಿನೈದು ದಿವಸಗಳು ಸುತ್ತಬೇಕು. ಕೆಲಸದ ಮೇಲೆ ನಾಲ್ಕು ದಿನಗಳಿಂದ ಹೊರಗೆ ಇದ್ದವರು, ಆಗ ತಾನೇ ವಾಪಸಾಗಿದ್ದರು

ಸಾಮಾನು ಹೊತ್ತ ಆಳು ಹಿಂದಿನಿಂದ ಬರುತ್ತಿದ್ದ. ಒಳಗೆ ಕಾಲಿಟ್ಟ ಒಡನೆಯೆ ಗ್ರಹಚಾರದ ಸುದ್ದಿ ಎದುರಾದರೆ ಯಾರಿಗೆ ತಾನೇ ಬೇಸರವಿಲ್ಲ!

ಗಂಡನ ಬೇಸತ್ತ ಮುಖ ನೋಡಿದ ಮೇಲೆ ಶಾರದಮ್ಮನಿಗೆ ತಾವು ಆ ಸುದ್ದಿ ಆಗಲೇ ತಿಳಿಸಬಾರದಾಗಿತ್ತು ಎನಿಸಿ ತುಟಿ ಕಚ್ಚಿದರು.

ಆದರೇನು ? ಮಾತು ಹೊರಬಂದು ತನ್ನ ಕೆಲಸ ಮಾಡಿತ್ತು. ತಮ್ಮ ತಪ್ಪನ್ನು ತಿದ್ದಿಕೊಳ್ಳುತ್ತ—

"ಇರಲಿ ಬಿಡಿ, ಅಂತಹುದೇನಿಲ್ಲ. ಮೊದಲು ಸ್ವಲ್ಪ ಕಾಫಿ ತಗೋಳಿ...."

"ಆಯ್ತಲ್ಲ, ಅದೇನು ಹೇಳಿಬಿಡು. ಏನಾಯ್ತು ರಮೇಶನಿಗೆ!"

ರಾಯರು ಕೋಟು ಕಳಚಿ ಗೂಟಕ್ಕೆ ಹಾಕುತ್ತ ಪ್ರಶ್ನಿಸಿದರು

"ನೀರು ಮನೇಲಿ ಜಾರಿಬಿದ್ದು ಕಾಲಿಗೆ ಪೆಟ್ಟಾಗಿದೆ."

ಶಾರದಮ್ಮ ಸಂಕ್ಷೇಪವಾಗಿ ಹೇಳಿದರು.

ಇನ್ಯಾರಿಗಾದರೂ ಆಗಿದ್ದರೆ "ಅಷ್ಟೇ ತಾನೇ ?" ಎಂದು ಹೇಳು

ತ್ತಿದ್ದರೇನೋ? ಆದರೆ ಹೆಂಡತಿಯ ತಮ್ಮ, ರಜಾದಿನಗಳನ್ನು ತಮ್ಮೊಡನೆ ಕಳೆಯಲೆಂದು ಅಪರೂಪಕ್ಕೆ ಬಂದಿರುವ ಅತಿಥಿ! ಅವನ ವಿಚಾರ ಹಾಗೆ ಲಘುವಾಗಿ ಮಾತಾಡಿದರೆ ಅಮ್ಮನವರು ಏನೆಂದುಕೊಂಡಾರು?

ಆದರಿಂದಲೇ ಆತಂಕವನ್ನು ತೋರಿಸುತ್ತ-"ಏನು? ಕಾಲಿಗೆ ತುಂಬಾ ಪೆಟ್ಟಾಗಿದೆಯೆ? ಡಾಕ್ಟರಿಗೆ ಹೇಳಿ ಕಳಿಸಬೇಕಾಗಿತ್ತು?"—ಎಂದರು

"ಡಾಕ್ಟರು ಬಂದು ನೋಡಿದರು. ಘಾಯವೇನೂ ಆಗಿಲ್ಲ. ಮೂಳೆಗೆ ಪೆಟ್ಟಾಗಿ, ಕಾಲು ಬಾತಿದೆ. ಓಡಾಡಲು ಆಗಲ್ಲ ಒಂದುವಾರ ವಿಶ್ರಾಂತಿ ತೆಗೆದುಕೊಳ್ಳಲಿ ಎಂದು ಹೇಳಿದ್ದಾರೆ."

ಆಳು ಸಾಮಾನುಗಳನ್ನು ತಂದು ಒಳಗಿಟ್ಟ

"ಹಾಸಿಗೆ ಬಿಚ್ಚಿ ಬಿಸಿಲಿಗೆ ಹಾಕು"

—ಶಾರದಮ್ಮ ಹೇಳಿದರು.

"ಹಾಸಿಗೆ ಬಿಚ್ಚೋದು ಬೇಡ. ಪುನಃ ಮಧ್ಯಾಹ್ನ ಹೊರಡಬೇಕು"-ರಾಯರು ಪ್ರಯಾಣದ ವಿಷಯ ತಿಳಿಸಿದರು.

"ಇನ್ನೂ ಈಗ ಬಂದಿದೀರಿ? ಪುನಃ ಹೊರಡಬೇಕೆ?"

"ಹೂಂ-ಕೆಲಸ ಇನ್ನೂ ಮುಗಿದಿಲ್ಲ. ಇನ್ನೂ ಒಂದುವಾರ ಆಗ ಬಹುದು. ಇವತ್ತು ಸ್ವಲ್ಪ ವಿರಾಮವಿತ್ತು. ಒಂದು ಸಲ ನೋಡಿ ಹೋಗೋಣವೆಂದು ಬಂದೆ. ಇಲ್ಲಿ ರಮೇಶನಿಗೆ ಹೀಗಾಗಿದೆ ಅದರಿಂದಲೇ ಏನೋ? ನಿನ್ನೆಯಿಂದ ಮನೆಯ ಕಡೆಯೇ ಮನಸ್ಸು. ಬಂದದ್ದು ಸರಿ ಹೋಯ್ತು. ಎಲ್ಲಿ ರಮೇಶ?"

"ರೂಮಿನಲ್ಲಿ ಮಲಗಿದಾನೆ"

"ಏನಯ್ಯಾ ದೊರೆ ಹೇಗಿದ್ದಿ? ಕಾಲು ಹೇಗಿದೆ?"

-ರಾಯರು ರೂಮಿಗೆ ಹೋಗಿ ಆತ್ಮೀಯವಾಗಿ ರಮೇಶನನ್ನು ವಿಚಾರಿಸಿದರು.

ರಮೇಶ ಕಾಲೇಜಿನಲ್ಲಿ ಓದುತ್ತಿದ್ದ ವಿದ್ಯಾರ್ಥಿ. ಭಾವನೆಂದರೆ ಅವನಿಗೆ ಬಹಳ ಕೇವಲ.

"ಏನಿಲ್ಲ. ಪೆಟ್ಟೇನೂ ಹೆಚ್ಚಾಗಿಲ್ಲ. ಕಾಲು ಜಾರಿದಾಗ ಕಟ್ಟೆಗೆ ಮಂಡಿ ತಗಲಿದೆ ಅಷ್ಟೆ. ಒಂದೆರಡು ದಿನದಲ್ಲಿ ಸರಿ ಹೋಗಬಹುದು. ನಿಮ್ಮ

ಊರು ನೋಡೋಣವೆಂದು ಬಂದರೆ, ಹೀಗೆ ಮನೇಲಿ ಮಲಗಿರುವಂತಾಯ್ತಲ್ಲ! ಅದಕ್ಕೇ ಬೇಜಾರು."

"ಆಗೋದೆಲ್ಲಾ ಒಳ್ಳೆಯದಕ್ಕೇ ಎಂತ ಇಟ್ಕೊ. ಮೈಸೂರಿನಲ್ಲಿ ಎಂದಾದರೂ ಹೀಗೆ ವಿರಾಮವಾಗಿ ಇರ್‍ತೀಯ? ಸದಾ ಕಾಲೇಜು—ಕ್ರಿಕೆಟ್ಟು, ಅದು, ಇದು ಎಂತ ಮನೇನೇ ಸೇರೋಲ್ಲ. ಈಗ ನಿದಾನವಾಗಿ ಅಕ್ಕನ ಜೊತೆ ಹರಟೆ ಹೊಡಿ"

ಮಧ್ಯಾಹ್ನದವರೆಗೆ ಮನೇಲಿದ್ದು ರಾಯರು ಸಂಜೆಯ ರೈಲಿಗೆ ಹೊರಟರು. ಹೊರಡುವಾಗ ಶಾರದಮ್ಮನಿಗೆ—

"ರಮೇಶನ್ನ ಒಬ್ಬನನ್ನೇ ಬಿಟ್ಟು ಹರಿಕಥೆಗೆ ಹೊರಟು ಬಿಡಬೇಡ. ದಾಸರು ಇಲ್ಲಿಗೆ ಬರ್‍ತಾನೇ ಇರ್‍ತಾರೆ. ಇನ್ನೊಂದು ಸಲ ಕೇಳಿದರಾಯ್ತು."

ಎಂದು ಎಚ್ಚರಿಸಿದರು.

ಒಂದು ವಾರದಿಂದ ಊರಿನಲ್ಲಿ ಹರಿಕಥೆ, ಬೆಂಗಳೂರಿನಿಂದ ಬಂದಿದ್ದ ದಾಸರು ರಾಮಾಯಣವನ್ನು ಹರಿಕಥೆಯ ರೂಪದಲ್ಲಿ ಜನರಿಗೆ ಶ್ರವಣ ಮಾಡಿಸುತ್ತಿದ್ದರು. ಅವರಿಗೆ ಒಳ್ಳೆಯ ಕಂಠವಿತ್ತು. ಜೊತೆಗೆ ಹೇಳುವುದನ್ನು, ಜನರಿಗೆ ಹಿಡಿಸುವಂತೆ ಚೆನ್ನಾಗಿ ಹೇಳುವ ಕಲೆಯೂ ಸಾಧಿಸಿತ್ತು. ಜನರ ಬಾಯಲ್ಲಿ ಅದೇ ಮಾತು. ಸಂಜೆಯಾಯಿತೆಂದರೆ ಎಲ್ಲರೂ ಅಲ್ಲಿಗೆ ನಡೆಯುತ್ತಿದ್ದರು. ಗಂಡಸರು, ಹೆಂಗಸರು, ಮಕ್ಕಳು ಎಲ್ಲರಿಗೂ ಅದೇ ಗೀಳು.

ಶಾರದಮ್ಮ ದಿನವೂ ಹೋಗುತ್ತಿದ್ದವರು ಇಂದು ಮನೆಯಲ್ಲೇ ಉಳಿದಾಗ ರಮೇಶನೇ ಕೇಳಿದ:

"ಅಕ್ಕಾ–ನೀನು ಹೋಗೋದಿಲ್ಲವೆ? ಹೊತ್ತಾಯ್ತಲ್ಲ."

"ಇಲ್ಲಪ್ಪ. ನಿನ್ನ ಒಬ್ಬನನ್ನೇ ಬಿಟ್ಟು ಹೇಗೆ ಹೋಗೋದು ಬೇಜಾರಾಗಲ್ಲವೆ ನಿನಗೆ? ನಿಮ್ಮ ಭಾವನಾದರೂ ಇದ್ದಿದ್ದರೆ ಹೋಗಬಹುದಿತ್ತು."

"ಇದು ಒಳ್ಳೆ ಚೆನ್ನಾಯ್ತು. ನನಗಾಗಿ ನೀನು ಹೋಗದೆ ಇರೋದೇ? ಓದೋದಕ್ಕೆ ಪುಸ್ತಕ ಇದ್ದರೆ ನನಗೆ ಸ್ವಲ್ಪವೂ ಬೇಜಾರಿಲ್ಲ. ನೀನು ನಿಶ್ಚಿಂತೆಯಾಗಿ ಹೋಗು. ನಾನು ಅರ್ಧ ಓದಿರೋ ಕತೆ ನೀನು ಬರೋ ಹೊತ್ತಿಗೆ ಮುಗಿಸಿರ್‍ತೇನೆ."

"ನಿಜವಾಗಿ ನಿನಗೆ ಬೇಜಾರಿಲ್ಲವೆ? ಅಥವಾ ಅಕ್ಕ ಹೋಗೋದನ್ನ ಯಾಕೆ ತಪ್ಪಿಸಲಿ? ಎಂತ ಹೇಳ್ತಿದೀಯೋ?"

"ನಿನ್ನ ಹತ್ತಿರ ನನಗೆ ಸಂಕೋಚವೆ? ಹಾಗೇನಾದರೂ ಇದ್ದರೆ ನಾನೇ ಹೇಳ್ತಿದ್ದೆ."

ಶಾರದಮ್ಮನಿಗೆ ನಿಜವಾಗಿ ಹೋಗುವ ಮನಸ್ಸಿತ್ತು. ಹಿಂದಿನ ದಿನ ಒಳ್ಳೇ ಸ್ವಾರಸ್ಯವಾದ ಭಾಗದಲ್ಲಿ ಕತೆ ನಿಂತಿತ್ತು. ಆದರೆ ತಮ್ಮನನ್ನು ಒಂಟಿಯಾಗಿ ಬಿಟ್ಟು ಹೋಗಲಾರದೇ ಅನುಮಾನಿಸುತ್ತಿದ್ದರು. ಅವರ ಜೊತೆಯವರೆಲ್ಲ ಆಗಲೇ ಹೊರಟಿದ್ದರು. ಹೇಗೂ-ಹೋಗು ಎಂದು ಅವನೇ ಹೇಳ್ತಿರುವಾಗ ಹೋಗಿಬಿಡಲಿ? ಎಂದು ಮನಸ್ಸು ಎಣಿಸುತ್ತಿತ್ತು.

ಅದನ್ನು ಗ್ರಹಿಸಿದ ರಮೇಶ ಪುನಃ—

"ನೀನು ಸುಮ್ಮನೆ ಹೊರಡಕ್ಕ. ಅನ್ಯಾಯವಾಗಿ ತಡಮಾಡಿಕೊಳ್ಳುವುದು ಬೇಡ. ಇಷ್ಟಕ್ಕೂ ನಾನೇನು ಚಿಕ್ಕ ಹುಡುಗನೇ? ಹೇಗೂ ಬಾಗಿಲಲ್ಲಿ ಆಳು ಕೂತಿರ್ತಾನೆ. ಜೊತೆಗೆ ಪುಸ್ತಕ ಇದೆ. ನನಗೆ ಸ್ವಲ್ಪವೂ ಬೇಸರವಿಲ್ಲ. ನೀನು ಧೈರ್ಯವಾಗಿ ಹೊರಡು."

—ಎಂದು ಒತ್ತಾಯವಾಗಿ ಹೇಳಿದ.

"ನಿನಗೆ ಏನಾದರೂ ಬೇಕಾದರೆ? ಓಡಾಡುವುದಕ್ಕೇ ಆಗಲ್ಲ."

"ನನಗೆ ಸಧ್ಯಕ್ಕೆ ಏನೂ ಬೇಡ, ಒಂದು ವೇಳೆ ಬೇಕಾದರೆ ಬಾಗಿಲಿನಲ್ಲಿ ಆಳು ಇದಾನಲ್ಲ. ಕೂಗ್ತೇನೆ."

"ಹಾಗಾದರೆ ಹೋಗಿಬರಲೆ?"

"ಓಹೋ....ಧಾರಾಳವಾಗಿ ಹೋಗಿ ಬಾ."

ಶಾರದಮ್ಮ ಒಂದು ಕಡೆಯಿಂದ ಮನೆಗೆ ಬೀಗ ಹಾಕಿದರು. ಬೀಗದಕ್ಕೈ ರಮೇಶನ ಹತ್ತಿರ ಇಟ್ಟು, ಒಂದು ತಟ್ಟೆಯಲ್ಲಿ ಹುರಿಗಾಳು, ಚೊಂಬಿನಲ್ಲಿ ನೀರು ತಂದು, ಮಂಚದ ಪಕ್ಕದಲ್ಲಿ ಇಟ್ಟರು.

"ಓದುವಾಗ ಹಾಗೇ ಬಾಯಿಗೆ ಹಾಕಿಕೋ" ಎಂದು ತಮ್ಮನಿಗೆ ಹೇಳಿ, ಆಳಿಗೆ—

"ಇಲ್ಲೇ ಇರು, ಎಲ್ಲೂ ಹೋಗಬೇಡ. ರಮೇಶಪ್ಪ ಕೂಗಿದರೆ ಕೇಳಿಸೋ ಹಾಗೆ ಹತ್ತಿರ ಇರು ನಿದ್ದೆಮಾಡಬೇಡ. ನಾನು ಬೇಗ ಬಂದು ಬಿಡ್ತೀನಿ."

–ಎಂದು ಹೇಳಿ, ಹೊರಟರು ಶಾರದಮ್ಮ.

"ಹೊಂನ್ರವ್ವ" ಎಂದ ಆಳು. ಬೇಗ ಎಂದರೂ ಇನ್ನು ಎರಡು ಗಂಟೆಯಾಗುವುದೆಂದು ಅವನಿಗೆ ಗೊತ್ತು.

ರಮೇಶ ಹಾಸಿಗೆಯ ಮೇಲೆ ಕಾಲು ನೀಡಿಕೊಂಡು, ಬೆನ್ನಿಗೆ ದಪ್ಪವಾದ ಸುರುಳಿದಿಂಬು ಇಟ್ಟುಕೊಂಡು ಓದುವ ಭಂಗಿಯಲ್ಲಿ ಕುಳಿತಿದ್ದ ಮಂಚದ ಮಗ್ಗುಲಿಗೆ ಕಿಟಕಿ. ಜನ ಮಾತಾಡಿಕೊಂಡು ಹೋಗುತ್ತಿರುವುದು ಕಾಣಿಸುತ್ತಿತ್ತು.

ಬರಬರುತ್ತ ಓಡಾಟ ಕಡಿಮೆಯಾಯ್ತು. ಮಾತಿನ ಸದ್ದೂ ಕೇಳಸಲಿಲ್ಲ. ಯಾರೋ ಒಬ್ಬಿಬ್ಬರು ಮೌನವಾಗಿ ತಮ್ಮ ಮನೆಗಳಿಗೆ ಹೊರಟಿದ್ದರು.

ರಮೇಶ ಪುಸ್ತಕವನ್ನು ತೆಗೆದುಕೊಂಡು ಗುರುತು ಮಾಡಿಟ್ಟಿದ್ದ ಜಾಗದಿಂದ ಓದಲು ಆರಂಭಿಸಿದ.

ಹಾಗೆ ಎಷ್ಟು ಹೊತ್ತು ಕಳೆಯಿತೊ ..

ಇದ್ದಕ್ಕಿದ್ದಂತೆ ಜೋರಾಗಿ ಗಾಳಿ ಬೀಸಿದಂತಾಗಿ ರಮೇಶನಿಗೆ ಛಳಿಯಾಯ್ತು. ಕಾಲ ಬಳಿ ಇದ್ದ ರಗ್ಗನ್ನು ತೆಗೆದುಕೊಂಡು ಎದೆಯವರೆಗೆ ಎಳೆದುಕೊಂಡ. ಕಿಟಕಿಯನ್ನು ಮುಚ್ಚೋಣವೆಂದುಕೊಂಡು ಆ ಕಡೆ ತಿರುಗಿದ.

ಹಾಲು ಚೆಲ್ಲಿದಂತೆ ಬೆಳದಿಂಗಳು ಹೊರಗೆಲ್ಲ ಹರಿದಿತ್ತು. ಆ ನಿರ್ಜನವಾದ ಬೀದಿ ಮೌನವಾಗಿ ಹಾಲಿನಲ್ಲಿ ಸ್ನಾನಮಾಡುತ್ತಿರುವಂತೆ ಭಾಸವಾಯ್ತು.

ನೀಲಿಯ ಆಕಾಶದಲ್ಲಿ ಚಂದ್ರ ನಗುತ್ತಲಿದ್ದ.

ರಮೇಶ ಓದುವುದನ್ನು ಮರೆತು ಮುಗ್ಧನಂತೆ ಅದನ್ನು ನೋಡುತ್ತಿದ್ದ.

ಕಿರುಮೋಡಗಳು ಒಂದನ್ನೊಂದು ಅಪ್ಪಿಕೊಂಡು ಕಣ್ಣುಮುಚ್ಚಾಲೆ ಆಡುತ್ತಿದ್ದವು.

ನಕ್ಷತ್ರಗಳು ಕಣ್ಣು ಮಿಟಕಿಸಿ ಚಂದ್ರನನ್ನು ಆಟಕ್ಕೆ ಕರೆಯುತ್ತಿದ್ದವು.

ಎಂತಹ ಸುಂದರ ದೃಶ್ಯ! ಎಷ್ಟು ನೋಡಿದರೂ ದಣಿಯದ ನೋಟ, ರಮೇಶ ಮೈಮರೆತು ನೋಡುತ್ತಿದ್ದ.

೧೨

ಇದ್ದಕ್ಕಿದ್ದಂತೆ ಇರುಳಿನ ಮೌನವನ್ನು ಸೀಳಿಕೊಂಡು ಟಿಕ್ ...ಕುಟ್.. ಎಂದು ಸಣ್ಣ ಸದ್ದೊಂದು ಕೇಳಿಸಿತು.

ಯಾರೋ ಕೋಲು ಊರಿಕೊಂಡು ನಿದಾನವಾಗಿ ನಡೆಯುವ ಸದ್ದು. ಹೆಜ್ಜೆಯ ಸದ್ದು ಕೇಳಿಸದಿದ್ದರೂ ಕೋಲನ್ನು ಎತ್ತಿ ಮುಂದಿಡುವಾಗ ಆಗುವ ಸದ್ದು.

ಬರಬರುತ್ತ ಸದ್ದು ಹೆಚ್ಚು ಸ್ಪಷ್ಟವಾಗಿ ಕೇಳಿಸಿತು. ಯಾರೋ ಈ ಕಡೆಗೇ ಬರುವಂತಿದೆ.

ಹಟಾತ್ತನೆ ಸದ್ದು ನಿಂತಿತು.

ರಮೇಶ ಕಿಟಕಿಯ ಕಡೆಗೆ ನೋಡುತ್ತಿದ್ದವನು ಯಾಂತ್ರಿಕವಾಗಿ ಕತ್ತು ಹೊರಳಿಸಿ ಈ ಕಡೆ ತಿರುಗಿದ.

ಬೆಳದಿಂಗಳಿನಷ್ಟೇ ಶುಭ್ರವಾದ ಬಟ್ಟೆ ಧರಿಸಿದ್ದವರೊಬ್ಬರು ಬಾಗಿಲನ್ನು ಹಿಡಿದುಕೊಂಡು ನಿಂತಿದ್ದರು. ರಮೇಶ ಈ ಕಡೆ ತಿರುಗಿದುದನ್ನು ನೋಡಿ-

"ಶಾರದಮ್ಮ ಇಲ್ಲವೇ ?" ಎಂದು ವಿಚಾರಿಸಿದರು.

"ಇಲ್ಲ, ಹರಿಕಥೆಗೆ ಹೋಗಿದ್ದಾರೆ . ."

ರಮೇಶ ಸ್ವಲ್ಪ ಉದಾಸೀನದಿಂದಲೇ ಉತ್ತರ ಕೊಟ್ಟ. ಹೊರಗಿನಿಂದ ಬಂದವರು ಸೀದಾ ಇಲ್ಲಿಯವರೆಗೆ ಬಂದದ್ದು ಅವನಿಗೆ ಹಿಡಿಸಲಿಲ್ಲ

"ಬರೋದು ಹೊತ್ತಾಗಬಹುದೇ ?"

"ಆದೀತು. ಕತೆ ಮುಗಿಯಬೇಕಲ್ಲ. ಏನಾಗಬೇಕಿತ್ತು ?"

"ಅವರನ್ನ ನೋಡಬೇಕಾಗಿತ್ತು."

"ನಾಳೆ ನೋಡಿದರೆ ಆಗದೆ ? ಪಾಪ ಎಷ್ಟು ಹೊತ್ತೆಂದು ಕಾಯುವಿರಿ ?"

"ಇಲ್ಲ ; ಇಂದೇ ನೋಡಬೇಕು. ನಾಳೆ ಬರುವಂತಿಲ್ಲ. ಬಹಳ ದೂರ ದಿಂದ ಬಂದಿದ್ದೇನೆ."

"ನೀವು ಇರೋದು ಎಲ್ಲಿ ?"

ರಮೇಶ ಸ್ವಲ್ಪ ಕುತೂಹಲದಿಂದ ಕೇಳಿದ.

"ನದಿಯಾಚೆ ಅರಳಿ ಮರದ ಹತ್ತಿರ. ನೋಡಲು ಹತ್ತಿರವೆನಿಸಿದರೂ ಬರುವಾಗ ಕಷ್ಟವಾಗುತ್ತೆ."

"ಅವರು ಬರೋವರೆಗೂ ಕಾಯುವುದಾದರೆ ಅಲ್ಲೇ ಕುರ್ಚಿಯ ಮೇಲೆ

ಕೂಡಿ, ನಿಂತೆ ಇರುವಿರಲ್ಲ."

"ಇಲ್ಲ ನನಗೆ ಇದೇ ಸುಖ. ಕುರ್ಚಿಯಲ್ಲಿ ಕೂತದ್ದು ಮರೆತೇ ಹೋಗಿದೆ !"

ಕೈಲಿದ್ದ ಕೋಲನ್ನು ಬಾಗಿಲಿನ ಮೂಲೆಗೆ ಒರಗಿಸಿ ಗೋಡೆಗೆ ಒರಗಿಕೊಂಡು ನಿಂತರು ಆತ.

ನಿಂತಿದ್ದರೆ ನಿಂತಿರಲಿ, ಎಂದುಕೊಂಡು ರಮೇಶ ಓದಲು ಪುಸ್ತಕ ಎತ್ತಿಕೊಂಡವನು ಹಾಗೇ ಕೇಳಿದ-

"ನಿಮ್ಮ ಹೆಸರು ?"

"ಸದಾನಂದ "

ರಮೇಶ ಓದಲು ಪ್ರಯತ್ನಪಟ್ಟರೂ ಆಗಲಿಲ್ಲ. ಆತ ಅಲ್ಲಿ ನಿಂತಿರುವುದು ಮನಸ್ಸಿಗೆ ಮುಜಗರವಾಗಿ ತೋರಿತು. ಮೊದಲಿನಂತೆ ನಿಶ್ಚಿಂತೆಯಿಂದ ಓದುವುದು ಸಾಧ್ಯವಾಗದೆ, ಪುಸ್ತಕ ಮಡಚಿ ಪಕ್ಕದ ಮೇಜಿನ ಮೇಲಿಟ್ಟ. ಹಾಗೇ ತಟ್ಟೆಯಲ್ಲಿದ್ದ ಹುರಿಗಾಳಿನಿಂದ ಒಂದು ಕಡಲೇಕಾಯಿ ಬೀಜ ಆರಿಸಿ ಬಾಯಿಗೆ ಹಾಕಿಕೊಂಡ

ಸದಾನಂದ ಅವನ ಕಡೆ ನೋಡಿ ನಸು ನಕ್ಕು ಕೇಳಿದ-

"ನಾನು ಇಲ್ಲಿರೋದರಿಂದ ನಿಮಗೆ ತೊಂದರೆಯೆ ?"

"ಛೆ ..ಛೆ... ಹಾಗೇನಿಲ್ಲ. ಓದಿ ಬೇಸರವಾಯ್ತು. ಅದರಿಂದ ಪುಸ್ತಕ ತೆಗೆದಿಟ್ಟೆ, ಅಷ್ಟೆ."

"ಶಾರದಮ್ಮ ಒಳ್ಳೆ ಮಹಾತಾಯಿ. ಆಕೆ ಮಾಡಿದ ಉಪಕಾರ ಮರೆಯೋ ಹಾಗಿಲ್ಲ. ಅದಕ್ಕೇ ಅವರನ್ನು ನೋಡಬೇಕೆನಿಸಿತು....ಬಂದೆ."

"ಏನು ಉಪಕಾರವಾಯ್ತು ಅವರಿಂದ ?"

"ಹೇಳಲೆ ? ಬೇಜಾರುಪಡೋದಿಲ್ಲವೆ ?"

"ಬೇಜಾರೇಕೆ ? ನಾನೂ ಒಬ್ಬನೇ ಇದೇನೆ. ಹೇಳಿ, ಅದನ್ನಾದರೂ ಕೇಳೋಣ."

"ನನಗೆ ಹೊಟ್ಟೆನೋವು ಬರ್ತಿತ್ತು. ಹೊಟ್ಟೆ ನೋವೆಂದರೆ ಅಂತಿಂತಹದಲ್ಲ. ತಡೆಯಕ್ಕೇ ಆಗ್ತಿರಲಿಲ್ಲ."

"ಔಷಧಿ ತಗೊಳ್ಳಲಿಲ್ಲವೆ ?"

"ಬೇಕಾದಷ್ಟು ತಗೊಂಡೆ. ಕೈಲಿದ್ದ ಕಾಸೆಲ್ಲಾ ಆಸ್ಪತ್ರೆಗೆ-ಡಾಕ್ಟ
ಔಷಧಿಗೆ ಖರ್ಚಾಯ್ತು. ಆದರೂ ಗುಣವಾಗಲಿಲ್ಲ."

"ಆಮೇಲೆ....?"

"ಮೈಸೂರಿಗೆ ಹೋಗಿ ದೊಡ್ಡ ಡಾಕ್ಟರಿಗೆ ತೋರಿಸಿದೆ. ಅವ
ಆಪರೇಶನ್ ಮಾಡಬೇಕು. ಇಲ್ಲೇ ಬಂದಿರು ಎಂದು ಹೇಳಿದರು"

"ಅಪರೇಶನ್ ಮಾಡಿಸಿಕೊಂಡಿರ ?"

"ಇಲ್ಲ. ನಾನೊಬ್ಬ ಪರದೇಶಿ. ನನ್ನವರೆನ್ನುವರೇ ಇಲ್ಲ ಅ
ಹೋಗಿ ಏನಾದರೂ ಆದರೆ ಯಾರು ಕೇಳೋರು ...?"

"ಹಾಗೆಂದು ರೋಗಕ್ಕೆ ಚಿಕಿತ್ಸೆ ಮಾಡಿಸದೆ ಇರೋದೆ ?"

"ಹಾಗೇ ಬಿಡಲಿಲ್ಲ. ಇಲ್ಲಿನ ಡಾಕ್ಟರ ಹತ್ತಿರವೇ ಔಷಧಿ ತಗೋತಿದ್ದೆ
ನನಗೊಬ್ಬ ದೂರದ ನೆಂಟ ಮಂಗಳೂರಿನಲ್ಲಿದಾನೆ. ಅವನಿಗೆ ಕಾಗದ ಬರೆ
ಅವನು ಬಂದಮೇಲೆ ಮೈಸೂರಿಗೆ ಹೋಗೋಣವೆಂದುಕೊಂಡು ಕಾದೆ."

"ಅದೂ ಸರಿಯೆ"

"ಆ ಕಷ್ಟಕಾಲದಲ್ಲಿ ಮಹಾತಾಯಿ ನಮ್ಮಮ್ಮ ಹಸಿದು ಬಂದಾಗ ಅ
ಇಟ್ಟರು." ಕೈಲಿ ಕಾಸಿಲ್ಲದಾಗ ಔಷಧಿಗೆ ದುಡ್ಡು ಕೊಟ್ಟರು. ನಮ್ಮ ಅ
ಅವರಿಗೆ ಸ್ನೇಹಿತರು, ಎಂದಾದರೂ ಅಕ್ಕನೊಂದಿಗೆ ಬರ್ತಿದ್ದೆ ಅದೇ ಗುರು
ಮೇಲೆ ಅಷ್ಟು ಉಪಕಾರ ಯಾರು ಮಾಡ್ತಾರೆ ? ಆ ವಿಶ್ವಾಸದ ಋಣ ನಾ
ತೀರಿಸುವ ಹಾಗೇ ಇಲ್ಲ."

ಆತ ಸ್ವಲ್ಪ ಸುಮ್ಮನಿದ್ದು ಪುನಃ ಹೇಳಿದರು.

"ಒಂದು ದಿನ ರಾತ್ರೆ ಹೊಟ್ಟೆಶೂಲೆ ವಿಪರೀತವಾಯ್ತು. ಮನೆ ತುಂ
ಹೊರಳಾಡಿದೆ. ನೀನು ಎನ್ನುವರಿಲ್ಲ. ನನ್ನಂತಹ ಪಾಪಿ ಬದುಕಿದ
ತಾನೇ ಏನು ಪ್ರಯೋಜನ ? ಎನಿಸಿ ದುಃಖವಾಯ್ತು. ಎದ್ದು ಹೊರಗೆ ಬಂ
ಅಂದೂ ಇವತ್ತಿನಂತೆಯೇ ಬೆಳದಿಂಗಳು ಹರಡಿತ್ತು. ನದಿಯ ಕಡೆಯಿಂ
ತಂಗಾಳಿ ಬೀಸುತಿತ್ತು...."

"ಬೋರಾ—ಮಲಗಿಬಿಟ್ಟೆಯೇನೋ ? ನಾನು ಮೊದಲೇ ಹೇಳಿದ್ದೆ
ಮಲಗಬೇಡಕಣೋ ...ಎಂತ"

ಶಾರದಮ್ಮ ಮೆಟ್ಟಲು ಹತ್ತಿ ಬರುತ್ತ ಕೂಗಿದರು.

"ಓ–ಅಕ್ಕ ಬಂದಳು. ಇವತ್ತು ಬೇಗನೇ ಬಂದ್ಬಿಟ್ಟಿದಾಳೆ. ನೀವು ಹೆಚ್ಚು ಕಾಯಬೇಕಾಗಿಲ್ಲ"

ರಮೇಶ ಸಂತೋಷದಿಂದ ಕೂಗಿದ.

"ಹೌದು ...ಬಂದಿರುವಂತಿದೆ"

–ಎನ್ನುತ್ತ ಆತ ಬೀದಿಯ ಬಾಗಿಲ ಕಡೆಗೆ ನಿದಾನವಾಗಿ ನಡೆದರು.

ಕೈಲಿ ಪ್ರಸಾದದ ಕುಂಕುಮವನ್ನೂ ಹೂವನ್ನೂ ಹಿಡಿದು ಶಾರದಮ್ಮ ಲಿಲ್ಲ ತಾನೇ ..ಒಳಗೆ ಬಂದರು.

"ರಮೇಶ ಆ ಬೋರನ್ನ ನೋಡು, ಮಲಗಿಬಿಟ್ಟಿದ್ದಾನೆ ಬೇಜಾರಾಗ ಒಬ್ಬನೇ ಇರೋದೆಂದರೆ ?"

"ಇಲ್ಲ ಅಕ್ಕ ಒಬ್ಬನೇ ಇರಲಿಲ್ಲ. ಅದು ಯಾರೋ ನಿನ್ನ ನೋಡೋಕೆ ಬಂದಿದ್ದರು. ಇಷ್ಟು ಹೊತ್ತೂ ಮಾತಾಡ್ತಿದ್ದರು. ಈಗ ತಾನೇ ಹೊರಗೆ ಹೊರಟುಹೋದರು. ನಿನಗೆ ಸಿಕ್ಕಲಿಲ್ಲವೆ ?"

"ಇಲ್ಲ ...ಯಾರಂತೆ ? ಹೆಸರು ಹೇಳಿದರೆ ?"

"ಕೇಳಿದೆ. ಸದಾನಂದ ಅಂತೆ. ನಿನ್ನ ಬಾಯಿತುಂಬ ಹೊಗಳಿದರು. ಅವರ ಕೈಲಿ ಮಾತಾಡ್ತಾ ಹೊತ್ತು ಹೋದದ್ದೇ ಗೊತ್ತಾಗಲಿಲ್ಲ."

"ಯಾರು .. ? ಸದಾನಂದ ಬಂದಿದ್ದನೆ ? ನಿನ್ನ ಹತ್ತಿರ ಮಾತಾಡ್ತಿದ್ದನೆ ?"

"ಹೂಂ ...ಇದುವರೆಗೂ ಇದ್ದರು. ನೀನು ಬಂದಾಗ ನಿನ್ನ ನೋಡೋಕೇ ಆ ಕಡೆ ಬಂದರು ..."

"ಏನು ಮಾತಾಡ್ತಿದ್ದ ಅವನು ?"

"ಹೊಟ್ಟೆನೋವಿತ್ತಂತೆ. ನೀನು ಅವನಿಗೆ ಹಸಿದಾಗ ಅನ್ನ ಕೊಟ್ಟು...."

"ಇರಲಿ ಬಿಡು. ಗೊತ್ತಾಯ್ತು. ಪ್ರಸಾದ ತಗೋ."

ಕತ್ತಲಿನಲ್ಲಿ ಶಾರದಮ್ಮನ ಮುಖ ಬಿಳಚಿಕೊಂಡುದು ರಮೇಶನಿಗೆ ಕಾಣಿಸಲಿಲ್ಲ. ತಲೆಯಿಂದ ಕಾಲಿನವರೆಗೆ ಬೆವತಿದ್ದರು ಅವರು.

ನಡುಗುವ ಕೈಗಳಿಂದ ತಾವು ತಂದಿದ್ದ ಪ್ರಸಾದದ ಕುಂಕುಮವನ್ನು ಹಣೆಗೆ ಹಚ್ಚಿ ಕೊಬ್ಬರಿ ಸಕ್ಕರೆಯನ್ನು ಅವನ ಕೈಗೆ ಹಾಕಿದರು.

ನಡುಗುವ ಕೈಗಳಿಂದ ಹಾಕಿದ ಪ್ರಸಾದದ ಕೊಬ್ಬರಿ ಸಕ್ಕರೆ ಅರ್ಧಕ್ಕಿಂತ ಹೆಚ್ಚಾಗಿ ನೆಲಕ್ಕೆ ಬಿತ್ತು.

"ಛಳಿಯೇ ಅಕ್ಕ. ನಡುಗುತ್ತಿದೀಯಲ್ಲ! ನೀನು ಕೊಟ್ಟ ಸಕ್ಕರೆ ನೆಲಕ್ಕೆ ಬಿತ್ತು." ರಮೇಶ ನಗುತ್ತ ಹೇಳಿದ

"ಹೂಂ ..ಯಾಕೋ ಛಳಿ ಆಗ್ತಿದೆ. ನೀನು....ಹುಷಾರಾಗಿದೀ ತಾನೇ ರಮೇಶ...."

–ಆಕೆ ಕಳವಳದಿಂದ ಕೇಳಿದರು. ಬಾಯಿಯಲ್ಲಿ ಮೆಲ್ಲಗೆ ಮಂತ್ರ ಪಠನ ನಡೆದಿತ್ತು.

"ಇಲ್ಲದೆ ಏನು? ಛೇಷಾಗಿದೀನಿ. ಆತ ಎಲ್ಲಿ ಹೋದರು? ನಿನ್ನ ನೋಡಲೆಂದೇ ಬಂದಿದ್ದರು .."

"ನೀನು ...ನಿದ್ರೆ ಮಾಡ್ತಿದ್ದೆಯ ರಮೇಶ? ಕನಸೇನಾದರೂ ಬಿತ್ತೆ ."

"ಇಲ್ಲಮ್ಮ...ನಿದ್ರೆಯೂ ಇಲ್ಲ ಎಂಥದೂ ಇಲ್ಲ. ಆಗಿನಿಂದ ಎಚ್ಚರವಾಗೇ ಇದೀನಿ. ಆತ ..ನಿನಗೆ ಎದುರಿಗೇ ಸಿಕ್ಕಿರಬೇಕಲ್ಲ? ಇಷ್ಟು ಬೇಗ ಎಲ್ಲಿ ಹೋಗಿರಬಹುದು?"

"ಎಲ್ಲೋ ಇಲ್ಲೇ ಹೋಗಿದ್ದಾರು ಬರ್ತಾರೆ ಬಿಡು."

"ಬರ್ತಾರೆಂದೇ ಕಾಣುತ್ತೆ. ಅವರ ಕೋಲು ಇಲ್ಲೇ ಇದೆ."

"ಎಲ್ಲೋ?"–ಹಾವು ಮೆಟ್ಟಿದವರಂತೆ ಹಾರಿ ಶಾರದಮ್ಮ ದೂರ ಸರಿದು ನಿಂತರು.

ಸದಾನಂದ ನೀರಿಗೆ ಹಾರಿ ಸತ್ತು ಮೂರು ವರ್ಷಗಳಾಗಿತ್ತು.

# ಬೀಸಿ ಬಂದ ಗಾಳಿ

ಬೆಳಗಿನಿಂದ ತಾಯಮ್ಮನ ಮನಸ್ಸಿಗೆ ಸಮಾಧಾನವಿರಲಿಲ್ಲ. ಆಫೀಸಿಗೆ ಹೊರಟಿದ್ದ ಗಿರೀಶ ಒಂದು ಕಾಲು ಹೊರಗಿಟ್ಟಿದ್ದವನು ತಟ್ಟನೆ ನಿಂತು-

"ಅಮ್ಮ, ನನಗೆ ಮರೆತೇ ಹೋಗಿತ್ತು. ಇವತ್ತು ಸಂಜೆ ಸುಂದರು ಬರ್‍ತಾನಂತೆ"

ಎಂದು ಹೇಳಿದವನೇ ಮತ್ತೊಂದು ಕಾಲನ್ನೂ ಹೊರಗಿಟ್ಟ.

ದೇವರ ಸ್ತೋತ್ರ ಹೇಳಿಕೊಳ್ಳುತ್ತ ಹೂವಿನ ಮಾಲೆ ಹೆಣೆಯುತ್ತಿದ್ದ ತಾಯಮ್ಮನ ಕಿವಿ ಚುರುಕಾಯ್ತು. ವಾಯುವಿನಿಂದಾಗಿ ಮಂಡಿ ಹಿಡಿದಂತಿರುವುದನ್ನು ಮರೆತು ತಟ್ಟನೆ ಎದ್ದು ನಿಂತರು. ಬೇಗ ಬೇಗ ಮುಂದೆ ಹೋಗಿ,

"ಗಿರಿ ...ಏನೆಂದೆ. ?" ಎಂದು ಕೇಳಿದರು.

ಗಿರೀಶ ನಿಂತ. ಗರಿಗೆದರಿ ನಿಂತ ತಾಯಿಯ ಕುತೂಹಲವನ್ನು ತಣಿಸದೆ ಅವನು ಮುಂದೆ ಅಡಿಯಿಡುವಂತಿಲ್ಲ. ಗಡಿಯಾರ ನೋಡಿಕೊಳ್ಳುತ್ತ, 'ಈ ಹೊರಡುವ ಅವಸರದಲ್ಲಿ ಸುದ್ದಿ-ಏಕಾದರೂ ಹೇಳಿದೆನೋ ?'-ಎಂದುಕೊಂಡು,

"ಸುಂದರು ಬರ್‍ತಾನಂತೆ" ಎಂದ ಮತ್ತೊಮ್ಮೆ.

"ನಿಜವಾಗಿ ಸುಂದರು ಬರ್‍ತಾನೆಯೆ ?" ತಾಯಮ್ಮನ ಮುಖ ಹಿಗ್ಗಿನಿಂದ ಅರಳಿತು. ಉಕ್ಕಿಬಂದ ಉತ್ಸಾಹದಲ್ಲಿ ಪ್ರಶ್ನೆಗಳು ನಾನು ತಾನೆಂದು ಮುಂನ್ನುಗ್ಗಿ ಬಂದರೂ ಕೇಳಲು ಅವಕಾಶವೆಲ್ಲಿ ?

"ಕಾಗದ ಬಂತೇ ?"-ಎಂದರು.

"ಕಾಗದ ಬರ್‍ಲಿಲ್ಲ. ಊರಿನಿಂದ ಯಾರೋ ಬಂದಿದ್ದರು. ಅವರು ದಾರೀಲಿ ಸಿಕ್ಕಿ ಹೇಳಿದರು. ಹೊತ್ತಾಯ್ತಮ್ಮ ಬಸ್ಸಿಗೆ....ಸಂಜೆ ಬಂದ ಮೇಲೆ ಮಾತಾಡೋಣ."

ಗಿರಿ ಸರಸರನೆ ಹೊರಟುಹೋದ. ಹೃದಯ ತುಂಬಿ ಹೊರಬಂದ ಭಾವನೆಗಳನ್ನು ಯಾರ ಮುಂದಾದರೂ ಆಡಿ ತೋರಿಸದಿದ್ದರೆ ಮನಸ್ಸಿಗೆಲ್ಲಿ

ಸಮಾಧಾನ ?

ತಾಯಮ್ಮನಿಗೆ ಮರೆತಿದ್ದ ಮಂಡಿ ನೋವು ತಟ್ಟನೆ ಕಾಣಿಸಿಕೊಂಡು, ನಿಲ್ಲುವುದು ಕಷ್ಟವಾಯಿತು. ಗೋಡೆ ಹಿಡಿದುಕೊಂಡು "ಹಾ..." ಎಂದು ಜೋರಾಗಿ ನರಳಿದರು.

ಒಳಗೆ ಕೆಲಸ ಮಾಡುತ್ತಿದ್ದ ಅಹಲ್ಯಾ ಗಾಬರಿಯಿಂದ ಓಡಿ ಬಂದು,

"ಏನಾಯ್ತು ಅತ್ತೇ ?" ಎನ್ನುತ್ತ ಹತ್ತಿರ ಬಂದಳು.

"ಗಿರಿ ಆಫೀಸಿಗೆ ಹೋದ, ಬಾಗಿಲು ಹಾಕೋಣವೆಂದು ಬಂದೆ. ಯಾಕೋ ಮಂಡಿ ರಳಕ್ ಎಂದ ಹಾಗಾಯ್ತು."

"ನೀವೇಕೆ ಬಂದಿರಿ ? ನನ್ನ ಕೂಗಿದ್ದರೆ ಬರ್ತಿದ್ದೆ "

ಅತ್ತೆಯನ್ನು ಕೈ ಹಿಡಿದು ಒಳಗೆ ಕರೆತರುತ್ತ ಅಹಲ್ಯಾ ಆಕ್ಷೇಪಿಸುವಂತೆ ಹೇಳಿದಳು.

"ಮಂಡಿಗೆ ತೈಲ ಉಜ್ಜಲೆ ?"

"ಹೂಂ ..."

ಅತ್ತೆಯನ್ನು ಮಂಚದ ಮೇಲೆ ಕೂರಿಸಿ ಎಡಗೈಲಿ ತೈಲದ ಶೀಶೆಹಿಡಿದಂತೆ ಬಲಗೈಬೆರಳುಗಳು ಮಂಡಿಯನ್ನು ನೀವುತ್ತಿದ್ದಾಗ ತಾಯಮ್ಮನಿಗೆ ಹಿತವೆನಿಸಿತು. ಅಭಿಮಾನ ತುಂಬಿದ ಕಣ್ಣುಗಳಿಂದ ಸೊಸೆಯನ್ನು ದಿಟ್ಟಿಸಿದರು.

ಎಂತಹ ಚೆಲುವೆ ಅಹಲ್ಯಾ !

ಸ್ನಾನ ಮಾಡಿ ಒದ್ದೆಯಾಗಿದ್ದ ಕೂದಲನ್ನು ಆರಲೆಂದು ತುದಿಗೆ ಗಂಟು ಹಾಕಿಬಿಟ್ಟಿದ್ದಳು. ಅವಳು ಬಗ್ಗಿ ಎಣ್ಣೆಯನ್ನು ಉಜ್ಜುತ್ತಿದ್ದಾಗ ಕರಿಯ ತೆರೆ ಹಾಕಿದಂತೆ ಕಾಣುತ್ತಿದ್ದ ಹಿನ್ನೆಲೆಯಲ್ಲಿ ಬಿಳಿಯ ಮುಖ ಮತ್ತಷ್ಟು ಸುಂದರವಾಗಿ ಕಾಣುತ್ತಿತ್ತು. ತುಂಬಿದ ಕೆನ್ನೆ, ಪುಟ್ಟದಾಗಿ, ಮಾಟವಾಗಿದ್ದ ಬಾಯಿ, ಕಾಡಿಗೆಯಲ್ಲಿ ಸಣ್ಣಗೆ ಕೊರೆದಂತಿದ್ದ ಹುಬ್ಬುಗಳು ನಡುವೆ ಕಾಣಿಸುತ್ತಿದ್ದ ಕುಂಕುಮದ ಬೊಟ್ಟು.

ಗಿರಿ ಈ ಹುಡುಗಿಗೆ ಮರುಳಾದದ್ದು ಆಶ್ಚರ್ಯವೇನಲ್ಲ. ಸಿರಿವಂತರ ಮನೆಯ ಹೆಣ್ಣುಗಳನ್ನೆಲ್ಲ ಒಂದೇ ಮಾತಿನಿಂದ ತಿರಸ್ಕರಿಸಿದ್ದ ಗಿರಿ ಇವಳಿಗೆ ಒಲಿದು ಮದುವೆಯಾಗಿದ್ದ.

ಬಹುಶಃ ಅವಳೂ ಅವನಂತೆ ಸಿರಿವಂತಳಾಗಿದ್ದು ಗಂಡನನ್ನು ಆರಿಸಿ

ಕೊಳ್ಳುವ ಅವಕಾಶ ಇದ್ದಿದ್ದರೆ ಅವಳು ಗಿರಿಯನ್ನು ಒಪ್ಪುತ್ತಿದ್ದಳೇ ? ಅವಳ ಮುಂದೆ ಗಿರಿ ಯಾವ ಲೆಖ್ಖಕ್ಕೂ ಇಲ್ಲ ತಾಯಮ್ಮನನ್ನು ಹಿಂದೆ ಎಷ್ಟೋ ಸಲ ಕಾಡಿದ್ದ ಈ ಪ್ರಶ್ನೆ ಇಂದೂ ಮತ್ತೆ ಕಾಣಿಸಿಕೊಂಡಿತು.

ಅಹಲ್ಯಳ ತಂದೆ ತಾಯಮ್ಮನಿಗೆ ದೂರದ ಸಂಬಂಧ. ತಾಯಿಯಿಲ್ಲದ ಹೆಣ್ಣು ಹುಡುಗಿಯ ಜವಾಬ್ದಾರಿ ಎಷ್ಟು ದಿವಸ ಹೊತ್ತಾರು ? ಕೈ ತುಂಬಾ ಸಂಪಾದಿಸುವ ಗಂಡಿಗೆ ರೂಪಿನ ಅಗತ್ಯವೇನು ? ಇದ್ದರೆ ಚಿನ್ನ-ಸುವರ್ಣ ಪುಷ್ಪಕ್ಕೆ ಸುವಾಸನೆ ಬಂದಂತೆ. ಇಲ್ಲದಿದ್ದರೆ ಅದೊಂದು ಕುಂದಲ್ಲ ಎಂದು ನಿರ್ಧರಿಸಿ ಹಿಗ್ಗಿನಿಂದಲೇ ಮಗಳನ್ನು ಧಾರೆ ಎರೆದಿದ್ದರು. ಕಲಿತ ಹುಡುಗಿ ಅಹಲ್ಯಾ, ವಿದ್ಯೆಯ ಜೊತೆಗೆ ವಿನಯಶೀಲೆ.

"ಸುಂದರು ಬರ್ತಾನಂತೆ" ಕುಣಿದು ಕುಪ್ಪಳಿಸುತ್ತ ಬಂದ ಉತ್ಸಾಹ ಮಾತಾಗಿ ಹೊರಬಂತು.

"ಸುಂದರು ? ಯಾರತ್ತೆ ಅವರು?"

"ನನ್ನ ತವರಿನ ಬೆಳಕು ಅವನು. ವಂಶಕ್ಕೆ ಒಬ್ಬನೇ ಮಗ. ದೊಡ್ಡ ಮನೆ, ದೊಡ್ಡ ಆಸ್ತಿ, ಮನೆ ಬಿಟ್ಟು ಬಂದದ್ದೇ ಇಲ್ಲ ಈಗ ಅವನು ಯಾವಾಗ ಬರ್ತಾನೋ ಯಾಕೆ ಬರ್ತಾನೋ ? ಒಂದೂ ಸರಿಯಾಗಿ ಹೇಳದೆ ಹಾರಿ ಬಿಟ್ಟ ಗಿರಿ."

"ಬಂದ ಮೇಲೆ ಗೊತ್ತಾಗುತ್ತೆ ಬಿಡಿ."

"ಎಂತಹ ಹುಡುಗ ಅಂತಿ ? ಅವನ ಹೆಸರಿಗೆ ತಕ್ಕಂತೇ ಇದಾನೆ. ಗುಣವೋ....? ಚಿನ್ನ ಓಹ್ ಒಂದೇ ಎರಡೇ ಯಾವುದು ಹೇಳಲಿ ?"

"ಹಾಗೇನು ?...." ಅಹಲ್ಯಾ ಕೊರಳು ಕೊಂಕಿಸಿ ಹುಬ್ಬು ಮೇಲೇರಿಸಿ ಕೇಳಿದಳು. ನಗು ಅವಳ ತುಟಿಗಳಿಂದ ಹರಿದು ಬರಲು ತವಕಿಸುತ್ತಿತ್ತು.

ಹಾಸ್ಯಮಾಡುತ್ತಿರುವಳೇನೋ ಎನಿಸಿತು ಆ ನಗು ನೋಡಿ. ಆದರೆ ಅದನ್ನೆಲ್ಲ ಲಕ್ಷಿಸದೆ ಮಾತಾಡುತ್ತಿದ್ದರು.

"ಇನ್ನು ಸ್ನಾನ ಮಾಡಿಬಿಡಿ. ಅಡಿಗೆ ಆರಿಹೋಗುತ್ತೆ. ನೀರೂ ಆರಿ ಹೋಗುತ್ತೇನೋ, ಆಗಲೇ ಹಂಡೆಯಿಂದ ತೋಡುತ್ತಿದ್ದಾಗ ನೀವು ನರಳಿದ್ದು ಕೇಳಿ ಓಡಿಬಂದೆ."

ಬಿಸಿನೀರಿನ ಸ್ನಾನ. ಮತ್ತೆ ಸ್ತೋತ್ರ ಪಾಠ. ಅದು ಯಾವಾಗಲೂ

ಇದ್ದದ್ದೆ, ಕೂತಾಗ ನಿಂತಾಗ ಕುರುಕುವ ಅಭ್ಯಾಸ, ಕಟ್ಟಿದ ಹೂಮಾಲೆ ರಾಮಕೃಷ್ಣ ಪರಮಹಂಸರ ಪಠವನ್ನು ಅಲಂಕರಿಸಿತು.

ಮಾಡಿದ ಅಡಿಗೆಯನ್ನು ಮಧ್ಯೆ ಇಟ್ಟುಕೊಂಡು ಅತ್ತೆ ಸೊಸೆ ಊಟಕ್ಕೆ ಕುಳಿತರು. ತುತ್ತಿಗೊಮ್ಮೆ ಸುಂದರುವಿನ ಮಾತು

"ರಾತ್ರಿಗೆ ಏನಾದರೊಂದು ರುಚಿ ಕಟ್ಟಾದ ಅಡಿಗೆ ಮಾಡು. ಸುಂದರು ಗಿರಿಯಂತಲ್ಲ. ರುಚಿಯಾಗಿದ್ದು ಮನಸ್ಸಿಗೆ ಸೊಗಸಿದರೆ ಬಾಯಿ ತುಂಬ ಹೊಗಳಿಕೊಂಡು ಹೊಟ್ಟೆ ತುಂಬ ತಿನ್ನುವ. ನಿನ್ನ ಗಂಡ ತಿನ್ನಲೂಲಾರ, ಹೊಗಳೋದಂತೂ ಕಂಡೇ ಇಲ್ಲ!"

"ನಿಮ್ಮ ಮಗನಲ್ಲವೇ ಅತ್ತೆ ? ಅವರು ತಿಂದರೆ ಸಾಕು ಎಂತ ನೀವು ಉಪಚಾರ ಮಾಡಿ ತಿನ್ನಿಸಿ, ಅದೇ ಭಾಗ್ಯ ಎನ್ನುತ್ತಿದ್ದಿರಂತೆ. ಅವರಿಗೆ ಹೋಗಳಕ್ಕೆ ಅವಕಾಶವಾದರೂ ಇದ್ದಿದ್ದರೆ....?"

ಅಹಲ್ಯಾ ಕುಲುಕುಲು ನಕ್ಕಳು.

"ಅಲ್ವೇ ಹುಡುಗಿ. ನಾನೇನೋ ತಪ್ಪುಮಾಡಿದೆ. ತಂದೆ ಇಲ್ಲದ ಹುಡುಗ, ಇರೋದು ಒಂದು ಮಗು ಅದನ್ನು ಬೆಳೆಸೋದು ಬಿಟ್ಟು ನನಗೆ ತಾನೇ ಬೇರೆ ಕೆಲಸ ಏನಿತ್ತು. ಕೂತ ಕಡೆಗೆ ಕೂಳಿಟ್ಟು ಉಪಚಾರ ಮಾಡಿದೆ ಅಂದರೆ ಕಲಿತವಳಾದ ನೀನೂ ಅದನ್ನೇ ಮತ್ತಷ್ಟು ಹುರುಪಿನಿಂದ ಮುಂದು ವರೆಸಿಕೊಂಡು ಬಂದೆ. ಮೇಜಿನ ಮೇಲಿರೋ ಚೊಂಬಿನಿಂದ ಲೋಟಕ್ಕೆ ನೀರು ಸುರಿದುಕೊಳ್ಳಲಾರ 'ಅಹಲ್ಯಾ ನೀರು' ಎಂತ ಕೂಗ್ತಾನೆ."

ಮಗನ ಸೋಮಾರಿತನವನ್ನು ಹೆಮ್ಮೆ ಎನ್ನುವಂತೆ ಹೇಳಿದರು, ತಾಯಮ್ಮ. ಊಟ ಮುಗಿದ ಮೇಲೆ ಚುಟುಕು ನಿದ್ರೆ. ಬಾಗಿಲುಗಳನ್ನು ಭದ್ರಪಡಿಸಿ ಅಹಲ್ಯಾ ಪತ್ರಿಕೆ ಓದುತ್ತ ಕೂತಳು. ಅತ್ತೆ ಆಗಲೇ ಮುಸುಕು ಬೀರಿ ಗೊರಕೆ ಎಳೆಯುತ್ತಿದ್ದರು.

'ಸುಂದರು ಬರುವ ಕನಸು ಕಾಣುತ್ತಿರುವರೇನೋ' ಎನಿಸಿತು ಅಹಲ್ಯ ಳಿಗೆ.

ಅತ್ತೆಯ ಹೃದಯವನ್ನು ಸೆಳೆದಿರುವ ಈ ಸುಂದರು ಹೇಗಿರಬಹುದು ? ನೋಡಲು ಚೆನ್ನಾಗಿರುವರೆಂದು ಮಾತ್ರ ಈ ಬಗೆಯ ಅಭಿಮಾನ ತಾಳುವುದು ಸಾಧ್ಯವಿಲ್ಲ. ತಮ್ಮ ಪ್ರಾಣಕ್ಕಿಂತ ಹೆಚ್ಚೆಂದು ತಿಳಿದಿರುವ ಮಗನಿಗೆ ಹೋಲಿಸಿ

ಅವರ ಹೆಚ್ಚಳವನ್ನು ಅಳೆಯಬೇಕಾದರೆ ?....'

ಅಹಲ್ಯಾ ಪತ್ರಿಕೆ ಓದುವುದನ್ನು ನಿಲ್ಲಿಸಿ ಸುಮ್ಮನೆ ಅಕ್ಷರಗಳನ್ನು ದಿಟ್ಟಿಸುತ್ತಿದ್ದಂತೆ ಹಾಗೇ ಕಣ್ಣು ಮುಚ್ಚಿದಳು. ಮತ್ತೆ ಎಚ್ಚರವಾದಾಗ ಬಿಸಿಲು ಇಳಿಮುಖವಾಗುತ್ತಿತ್ತು. ಎದ್ದು ಮುಖ ತೊಳೆದು ತಿಂಡಿ ಕಾಫಿ ತಯಾರಿಸಿ ಅತ್ತೆಗೆ ಕೊಟ್ಟು ತಾನು ತಲೆ ಬಾಚಿಕೊಂಡು ಗಂಡ ಬರುವುದನ್ನು ಕಾದಳು.

"ಗಿರಿ ಬರುವುದು ಹೊತ್ತಾಗುತ್ತೆ ಯಾಕೋ ಬೇಜಾರು. ಏನಾದರೂ ಓದುವೆಯೇನು ?" ಅತ್ತೆ ಕೇಳಿದರು.

"ಹೂಂ ಯಾವ ಪುಸ್ತಕ ತರಲಿ ?"

"ನಿನ್ನೆ ಓದುತ್ತಿದ್ದೆಯಲ್ಲ ರಾಮಕೃಷ್ಣ ಪರಮಹಂಸರ ಚರಿತ್ರೆ ಅದನ್ನೇ ಓದು".

ಆ ಪುಸ್ತಕ ಅಲ್ಲೇ ಇತ್ತು. ಅತ್ತೆ ಅದನ್ನೇ ಕೇಳುವರೆಂದು ಅಹಲ್ಯೆಗೆ ತಿಳಿದದ್ದೆ. ಪರಮಹಂಸರ ಮತ್ತು ಶಾರದಾದೇವಿಯ ಜೀವನ ಚರಿತ್ರೆಯನ್ನು ಎಷ್ಟು ಕೇಳಿದರೂ ತೃಪ್ತಿಯಿಲ್ಲ ಆಕೆಗೆ. ಅವರೇ ಏಕೆ ? ಅಹಲ್ಯಳಿಗೂ ಅಷ್ಟೆ. ದಿನ ಕಳೆದಂತೆ ದಕ್ಷಿಣೇಶ್ವರಕ್ಕೆ ಹೋಗಿ, ಅಲ್ಲಿನ ದೇವಾಲಯ ಭಗವಾನರು ಇರುತ್ತಿದ್ದ ಜಾಗ–ಎಲ್ಲವನ್ನೂ ನೋಡುವ ಅಪೇಕ್ಷೆ ಬೆಳೆದಿತ್ತು.

ಆದರೆ ತಾಯಮ್ಮನದೇ ಸಮಸ್ಯೆ. ಮಂಡಿಯ ಬಾಧೆಯಿಂದ ಹತ್ತುವುದು ಇಳಿಯುವುದು ಅವರಿಂದಾಗದು. ಅವರನ್ನು ಕರೆದುಕೊಂಡು ಹೋಗುವಂತಿಲ್ಲ. ಬಿಟ್ಟು ಹೋಗುವಂತೆಯೂ ಇಲ್ಲ ಆಸೆಆಸೆಯಾಗಿಯೇ ಉಳಿದಿತ್ತು.

ಓದಿದ್ದು ಮುಗಿದ ಮೇಲೆ ಇಬ್ಬರ ಮುಖದ ಮೇಲೂ ಧನ್ಯತೆ ಕಾಣುತಿತ್ತು. ಓದುತ್ತಿದ್ದ ಜಾಗಕ್ಕೆ ಗುರುತಿಟ್ಟು ಅಹಲ್ಯಾ ಎದ್ದಳು.

ಗಿರೀಶ ಬರುವ ಹೊತ್ತಿಗೆ ಎಲ್ಲ ಸಿದ್ಧವಾಗಿರಬೇಕು. ಕೈಗೆ ಎಟುಕುವಂತಿರಬೇಕು. ಕಣ್ಣೆದುರಿಗೇ ಇದ್ದರೂ ಬಗ್ಗಿ ತೆಗೆದುಕೊಳ್ಳಲಾರ !

ಗಿರೀಶ ಬಂದ. ಮುಖ ತೊಳೆದು ತಾಯಿಯ ಹತ್ತಿರ ಕುಳಿತ. ತಿಂಡಿ ಅಲ್ಲಿಗೇ ಬಂತು.

"ಅಮ್ಮಾ ನಿನಗೆ ?"

"ನನಗೆ ಆಗಲೇ ಆಯ್ತು. ಅಹಲ್ಯಾ ಬಿಡಬೇಕಲ್ಲ ?"

ಹೊಟ್ಟೆ ತುಂಬಿದ ಕೂಡಲೆ ತಾಯಿ ಮಗ ಬರಲಿರುವ ಸುಂದರು ವಿಚಾರ ಮಾತಿಗೆ ಆರಂಭಿಸಿದರು.

ಅಹಲ್ಯಾ ಕೈಚೀಲಗಳೊಂದಿಗೆ ಪರ್ಸ್ ಹಿಡಿದು ಬಂದಳು.

"ಅತ್ತೇ ..ಮಾರ್ಕೆಟ್ಟಿಗೆ ಹೋಗಿ ತರಕಾರಿ ತರ್ತೀನಿ. ಹಾಗೇ ಮನೆಗೆ ಸ್ವಲ್ಪ ಸಾಮಾನು ತರುವುದಿದೆ. ನೀವು ಮಾತಾಡ್ತಿರಿ ನಾನು ಬೇಗ ಬಂದು ಬಿಡ್ತೀನಿ"

ಕಾಲಿಗೆ ಚಪ್ಪಲಿ ಮೆಟ್ಟಿ ಚಟಚಟನೆ ನಡೆದಳು ಅಹಲ್ಯಾ. ಬೇಗ ಬರುವುದಾಗಿ ಹೇಳಿದ್ದರೂ, ಅವಳು ಮನೆಗೆ ಬರುವ ವೇಳೆಗೆ ದೀಪಗಳು ಹತ್ತಿದ್ದುವು ಮನೆಗೆ ಅತಿಥಿ ಬರುವವನಿದ್ದುದರಿಂದ ಸಾಮಾನುಗಳೂ ದಿನಕ್ಕಿಂತ ಹೆಚ್ಚಾಗಿಯೇ ಇದ್ದುವು ಬಸ್ಸು ಹಿಡಿದು ಬರುವಾಗ ಹೊತ್ತು ಜಾರಿತ್ತು.

ಹೊಟ್ಟೆ ತುಂಬಿ ದಪ್ಪವಾಗಿದ್ದ ಮೂರು ಕೈ ಚೀಲಗಳನ್ನು ಹೊತ್ತು ಅಹಲ್ಯಾ ಒಳಗೆ ಕಾಲಿರಿಸಿದಾಗ ಮಾತು-ನಗು ಅವಳನ್ನು ಎದುರುಗೊಂಡವು ಎದುರಿಗೆ ಹೊಸ ನೋಟವೊಂದು ಅವಳಿಗಾಗಿ ಕಾದಿತ್ತು

ಬಾಗಿಲಿಗೆ ಇದಿರಾಗಿ ಹಾಕಿದ್ದ ಸೋಫಾದ ಮೇಲೆ ತಾಯಿ ಮಗ ಇಬ್ಬರ ನಡುವೆ ಸುಂದರು ಪ್ರತಿಷ್ಠಿತನಾಗಿದ್ದ. ಎಡಕ್ಕೊಮ್ಮೆ ಬಲಕ್ಕೊಮ್ಮೆ ತಿರುಗಿ ನೋಡುತ್ತ ಇಬ್ಬರೊಡನೆಯೂ ಏಕಕಾಲದಲ್ಲಿ ಸಂಭಾಷಣೆ ನಡೆಸಿದ್ದ. ಆಗಾಗ ಕೈ ತಿರುಗಿಸುತ್ತ ಹಾವಭಾವಗಳೊಡನೆ ಉತ್ಸಾಹದಿಂದ ಮಾತಾಡುತ್ತಿದ್ದ. ಅವನ ಕಂಚಿನ ಕಂಠ ಬೀದಿಗೆ ಕೇಳಿಸಿತ್ತು.

ತಾಯಿ ಮಗ ಇಬ್ಬರೂ ಮಂತ್ರ ಮುಗ್ಧರಂತೆ ಅವನ ಮಾತು ಕೇಳುತ್ತ ಮೌನ ಪ್ರೇಕ್ಷಕರಾಗಿ ಕುಳಿತಿದ್ದರು.

ಕೈಲಿದ್ದ ಭಾರವನ್ನು ಮರೆತು ಅರೆ ಕ್ಷಣ ನಿಂತಲ್ಲಿ ನಿಂತಳು ಅಹಲ್ಯಾ ಬಾಗಿಲ ಚೌಕಟ್ಟಿಗೆ ಕೀಲಿಸಿದ ಸುಂದರ ಚಿತ್ರದಂತೆ.

ಅವಳನ್ನು ಮೊದಲು ಗಮನಿಸಿದವನು ಸುಂದರು. ಮಾತಾಡುತ್ತಿದ್ದವನು ತಟ್ಟನೆ ಮಾತು ನಿಲ್ಲಿಸಿದಾಗ ಇವರೂ ಆ ಕಡೆ ತಿರುಗಿ ನೋಡಿದರು.

"ನನ್ನ ಸೊಸೆ ಕಣೋ .. ಸುಂದರು. ನೀನು ಅವಳನ್ನು ನೋಡಿಯೇ ಇಲ್ಲ. ಸೊಸೆ ಎನ್ನೋದಕ್ಕಿಂತ ಮಗಳು ಎಂದರೇ ಹೆಚ್ಚು ಒಪ್ಪುತ್ತೆ. ಯಾವ ಮಗಳೂ ಹೆತ್ತ ತಾಯಿಗೆ ಇದಕ್ಕಿಂತ ಹೆಚ್ಚು ಚೆನ್ನಾಗಿ ನೋಡಿಕೊಳ್ಳಲಾರಳು.

ನಿಜ ಹೇಳಬೇಕಾದರೆ ಅವಳು ಮಗಳೂ ಅಲ್ಲ, ಸೊಸೆಯೂ ಅಲ್ಲ. ನನ್ನ ತಾಯಿ ಅವಳು. ಕೈ ಕೂಸಿನಂತೆ ನನ್ನ ಜೋಪಾನ ಮಾಡ್ತಿದಾಳೆ."

ತುಂಬಿಬಂದ ಧ್ವನಿಯಿಂದ ತಾಯಮ್ಮ ಹೇಳಿದರು. ಅವರ ಮಾತು ಮುಗಿಯುವುದರೊಳಗೆ ಸುಂದರು ಒಂದು ಹಾರಿನಲ್ಲಿ ಬಾಗಿಲ ಬಳಿ ಬಂದು ಕೈ ನೀಡಿ, ಅಹಲ್ಯೆಯ ಕೈಲಿದ್ದ ಭಾರದ ಚೀಲವನ್ನು ಕಸಿದುಕೊಂಡು –"ಅತ್ತಿಗೆ, ನಿಮಗೆ ಹೊರೆಯಾಗಲು ಇನ್ನೊಂದು ದೊಡ್ಡ ಕೂಸು ನಿಮ್ಮ ಮನೆಗೆ ಬಂದಿದೆ"

–ಎಂದು ಹೇಳಿ ನಕ್ಕ.

"ಏನು ಭಾರ ಈ ಚೀಲ! ಇದನ್ನು ಅಲ್ಲಿಂದ ಹೇಗೆ ತಂದಿರಿ? ಮಾರ್ಕೆಟ್ಟಿಗೆ ನೀನೂ ಜೊತೆಗೆ ಹೋಗಬಾರದಿತ್ತೇನೋ ಗಿರಿ?..."

"ನನಗೆ ಅಭ್ಯಾಸವೇ ಇಲ್ಲ. ಅವಳದೇ ಎಲ್ಲ ಕೆಲಸ"

ಗಿರೀಶ ಹಗುರವಾಗಿ ಉತ್ತರಿಸಿದ.

"ನಿಜ–ಅಮ್ಮನ ಮುದ್ದಿನ ಮಗ. ಕಷ್ಟಪಟ್ಟು ಅಭ್ಯಾಸವಿಲ್ಲ ಅಲ್ಲಿಗೆ ಹೋಗದಿದ್ದರೇನು? ಈ ಮೂರು ಚೀಲ ಎತ್ತಿ ಒಳಗಿಡು ನೋಡ್ತೀನಿ!"

ಸುಂದರುವಿನ ಸವಾಲನ್ನು ಎದುರಿಸುವಂತೆ ಗಿರೀಶ ಮನಸ್ಸಿಲ್ಲದೆ ಎದ್ದು ಬಂದು 'ಇಲ್ಲಿ ಕೊಡು ನೋಡುವಾ' ಎನ್ನುತ್ತ ಹೆಂಡತಿಯ ಕೈಲಿ ಉಳಿದಿದ್ದ ಎರಡು ಚೀಲಕ್ಕೂ ಕೈ ಹಾಕಿದ.

"ಇರಲಿ ಬಿಡಿ. ಅಲ್ಲಿಂದಲೇ ತಂದಿದೇನೆ ಒಳಗೆ ಇಡಲಾರನೇ?"

ಅಹಲ್ಯಾ ಹಿಡಿತ ಬಿಗಿ ಮಾಡಿದಳು. ಈ ಪರೀಕ್ಷೆ ಅವಳಿಗೆ ಇಷ್ಟವಾಗಲಿಲ್ಲ.

ಆದರೆ ಕೆಣಕಿಸಿಕೊಂಡು ಮೇಲೆದ್ದ ಅಭಿಮಾನ ಸುಮ್ಮನಿರಗೊಡಲಿಲ್ಲ. ಗಿರೀಶ ತನ್ನ ಬಲವನ್ನೆಲ್ಲ ಬಿಟ್ಟು ಜೋರಾಗಿ ಎಳೆದಾಗ ಅಹಲ್ಯಾ ಕೈ ಬಿಡಲೇಬೇಕಾಯ್ತು. ಅವಳ ಹಿಡಿತ ಸಡಿಲವಾದ ಕೂಡಲೇ ಚೀಲದೊಂದಿಗೆ ಗಿರೀಶ ಅಷ್ಟು ದೂರ ಹೋಗಿ ಬಿದ್ದವನು ಕೈ ಮೇಲೆ ಭಾರ ಊರಿ ತಲೆಗೆ ಪೆಟ್ಟಾಗುವುದನ್ನು ತಪ್ಪಿಸಿಕೊಂಡ. ಚೀಲದ ಒಡಲಿನಲ್ಲಿ ತುಂಬಿಕೊಂಡಿದ್ದ ಸಾಮಾನುಗಳೆಲ್ಲ ದಿಕ್ಕುಗೆಟ್ಟಂತೆ ಮನೆ ತುಂಬ ಬಿದ್ದು ಉರುಳಾಡಿದುವು.

ಸುಂದರು ಜೋರಾಗಿ ನಕ್ಕ, ತಾಯಮ್ಮನಿಗೂ ನಗು ಬಂದರೂ ಆಕೆ ಆತಂಕವನ್ನೇ ಮುಂದೆ ಮಾಡಿ,

ಅಯ್ಯೋ-ಏನಾಯ್ತಪ್ಪ....? ನೀನೇಕೆ ಈ ಹಾಳು ಕೆಲಸಕ್ಕೆಲ್ಲಕೈ ಹಾಕಲು ಹೋದೆ" ಎಂದರು.

ಸುಂದರನ ನಗು ಗಂಟಲಲ್ಲೇ ನಿಂತು ಒತ್ತಿತು ಅಹಲ್ಯಾ ಒಂದು ನೋಟದಿಂದ ಎಲ್ಲರನ್ನೂ ಅಳೆಯುವಂತೆ ನೋಡಿ, ಮೇಲಕ್ಕೇಳಲು ಪ್ರಯತ್ನಿಸುತ್ತಿದ್ದ ಗಿರೀಶನ ಬಳಿಗೆ ಹೋಗಿ ತೋಳು ಹಿಡಿದು ಎಬ್ಬಿಸಿದಳು. ಅವನ ಕಣ್ಣಲ್ಲಿ ಕಣ್ಣಿಟ್ಟು ನೋಡಿ, 'ಪೆಟ್ಟಾಯ್ತೆ ?' ಎಂದಳು.

ಗಿರೀಶ ಉತ್ತರ ಕೊಡದೆ ಮಗುವಿನಂತೆ ಅಸಹಾಯಕತೆಯಿಂದ ತನ್ನ ಮೊಳಕೈ ತೋರಿಸಿದ. ಅಹಲ್ಯಾ ಒಳಗೆ ಓಡಿದವಳು ಮರುಕ್ಷಣದಲ್ಲಿ ಹತ್ತಿ, ಡೆಟಾಲ್ ಹಿಡಿದು ಬಂದು ಅದನ್ನು ಒರಸಿ "ಏನೂ ಆಗಿಲ್ಲ. ಏಳಿ. ಊಟ ಮಾಡಿ ಮಲಗಿಬಿಟ್ಟರೆ ಸರಿಹೋಗುತ್ತೆ" ಎಂದು ಹೇಳಿ ಮತ್ತೆ ಒಳ ಹೋಗಿ ಸೋಪಿನಲ್ಲಿ ಕೈ ತೊಳೆದು ಬಂದು ಕೆಳಗೆ ಬಿದ್ದಿದ್ದ ಸಾಮಾನುಗಳನ್ನು ಎತ್ತಲು ಆರಂಭಿಸಿದಳು. ಈರುಳ್ಳಿ, ಆಲೂಗಡ್ಡೆ ಮೊದಲಾದ ಉರುಳುವಂತಹವು ಕುರ್ಚಿ ಮೇಜುಗಳ ಅಡಿಯಲ್ಲೆಲ್ಲ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು

ಅವಳು ಬಗ್ಗಿ ಒಂದೊಂದಾಗಿ ಎತ್ತಿ ಚೀಲಕ್ಕೆ ಹಾಕುತ್ತಿದಾಗ ಮೌನ ಸಾಮ್ರಾಜ್ಯ ಸ್ಥಾಪಿತವಾದಂತಿತ್ತು. ಅದನ್ನು ಸಹಿಸಲಾರದೆಯೋ ಏನೋ ಸುಂದರು ತಾನೂ ತಟ್ಟನೆ ಎದ್ದು ಮಂಡಿಯೂರಿ ಆರಿಸಲು ಬಗ್ಗಿದ.

"ಇರಲಿ ಬಿಡಿ. ನಾನು ತೆಗೆದಿಡ್ತೀನಿ, ನೀವು ಹೊರಗಿನಿಂದ ಬಂದವರು ಕೈ ಕಾಲು ಸಹ ತೊಳೆದಿಲ್ಲ." ಅಹಲ್ಯಾ ಕೈ ಅಡ್ಡಗಟ್ಟಿ ಖಚಿತವಾಗಿ ಹೇಳಿದಳು.

ಬಟ್ಟೆ ಬದಲಿಸಿ ಎಲ್ಲರೂ ಊಟಕ್ಕೆ ಕುಳಿತಾಗ ವಾತಾವರಣ ಗಂಭೀರವಾಗಿತ್ತು. ಮಾತು ಬರದೇನೋ ಎನ್ನುವಂತೆ ಮೌನದಲ್ಲೇ ಎಲ್ಲರೂ ಊಟ ಸಾಗಿಸುತ್ತಿದ್ದರು.

ಸಂದರ್ಭವನ್ನು ಹಗುರ ಮಾಡಲು ಅಹಲ್ಯೆಯೇ ನೆರವಿಗೆ ಬರಬೇಕಾಯ್ತು. ಅವಳು ಏನು ನಡೆಯದಿದ್ದಂತೆ ನಗು ನಗುತ್ತಲೇ ಉಪಚರಿಸಿ ಬಡಿಸಿದಳು.

"ಅಡಿಗೆ ಏನಾಗಿದೆ! ಯಾರೂ ಸರಿಯಾಗಿ ಊಟ ಮಾಡ್ತಿಲ್ಲ?" ಎಂದಾಗ ಸುಂದರು ಚೇತರಿಸಿಕೊಂಡು-

"ಅಡಿಗೆಗೇನು ಸೊಗಸಾಗಿದೆ ಎಲ್ಲವೂ ಚೆನ್ನಾಗಿರುವುದರಿಂದ ಯಾವುದನ್ನು ಹೆಚ್ಚಾಗಿ ತಿನ್ನಬೇಕೋ ತಿಳೀದಾಗಿದೆ"-ಎಂದ.

ಊಟ ಮುಗಿದ ಕೂಡಲೇ ತಾಯಮ್ಮ ಮಲಗಿಬಿಟ್ಟರು. ಸುಂದರ ನೊಡನೆ ಮತ್ತಷ್ಟು ಹರಟೆ ಗಿರೀಶ ಮಲಗಲೆಂದು ಹೊರಟವನು ಹೆಂಡತಿಯನ್ನು ಕೂಗಿದ ದಿನದ ಕೊನೆಯ ಹಂತದ ಕೆಲಸಗಳನ್ನು ಮುಗಿಸುವುದರಲ್ಲಿದ್ದ ಅಹಲ್ಯ ತಟ್ಟನೆ ಹೊರಗೆ ಬಂದಳು. ಅವಳು ನಡೆದಾಗ ಸ್ವಲ್ಪವೂ ಸಪ್ಪಳವಾಗಲಿಲ್ಲ ನೀರಿನ ಮೇಲೆ ತೇಲಿ ಬಂದಂತೆ ತುದಿಗಾಲಿನಲ್ಲಿ ನಡೆದು ಬಂದಿದ್ದಳು.

"ಸುಂದರೂಗೆ ಹಾಸಿಗೆ ಸಿದ್ಧವಾಗಿದೆಯೇನು? ಎಂದ.

"ಹೊಂ... ನಿಮ್ಮ ಪಕ್ಕದ ರೂಮಿನಲ್ಲಿ ಎಲ್ಲಾ ಸಿದ್ಧವಾಗಿದೆ"

"ಇರಲಿ ಬಿಡಯ್ಯ. ನನಗೆ ಹಾಸಿಗೆ ಏಕೆ ಸಿದ್ಧ ಮಾಡಬೇಕು. ನಾನೇ ಉರುಳಿಸಿಕೋತೇನೆ" ಸುಂದರು ಗಡಬಡಿಸಿ ಎದ್ದ.

"ಇಲ್ಲಿ ನೀರಿನ ಚೊಂಬು ಇದೆ. ಬಚ್ಚಲಿನ ದೀಪದ ಸ್ವಿಚ್ ಇಲ್ಲಿದೆ ಇನ್ನೇನಾದರೂ ಬೇಕಾದರೆ ಕೂಗಿ."

ಅಹಲ್ಯ ಸರಳವಾಗಿ ವಿವರಿಸಿದಳು.

ನೀರಿನ ಪಾತ್ರೆ ತೆಗೆದುಕೊಂಡು ಸುಂದರು ತನಗಾಗಿ ಸಿದ್ಧಪಡಿಸಿದ್ದ ಕೋಣೆಗೆ ಹೋದ. ಅಲ್ಲಿನ ಅಚ್ಚುಕಟ್ಟು ನೋಡಿ ಭ್ರಮಿಷ್ಟನಂತೆ ನಿಂತುಬಿಟ್ಟ. ನಾಲ್ಕಾರು ಆಳುಗಳು ಇರುವ ಮನೆಯಲ್ಲಿ ಸಹ ಈ ಶಿಸ್ತು, ಓರಣ ಇರಲಾರದೇನೋ? ಅಹಲ್ಯಾ ಒಬ್ಬಳೇ ಈ ಎಲ್ಲ ಹೊಣೆಯನ್ನು ನಿರ್ವಹಿಸುತ್ತಿದಾಳೆ ಎಂದರೆ ನಂಬುವುದೇ ಕಷ್ಟ

ಆದರೆ ಕಣ್ಣೆದುರಿಗೆ ಕಾಣಿಸುತ್ತಿರುವ ಸತ್ಯವನ್ನು ನಂಬದೆ ಇರಲು ಹೇಗೆ ಸಾಧ್ಯ? ಗಾಳಿಗೆ ಬಳುಕುವಂತಿರುವ ಆ ದೇಹದಲ್ಲಿ ಎಂತಹ ನಿರ್ವಹಣ ಶಕ್ತಿ ಅಡಗಿದೆ. ಸದಾ ನಗು ತುಂಬಿರುವ ಆ ಮುಗ್ಧ ಮುಖದ ಮರೆಯಲ್ಲಿ ಎಂತಹ ದೃಢ ಮನಸ್ಸು ಇರಬಹುದು. ಒಮ್ಮೆ ಅವಳು ಕೈ ನೀಡಿ 'ನೀವು ಈ ಕೆಲಸಕ್ಕೆ ಬರಬೇಡಿ' ಎಂದು ಹೇಳಿದಾಗ ಏಟು ತಿಂದ ಮಗುವಿಂತೆ ಪೆಚ್ಚಾಗಿ ತನ್ನ ಕೊಳೆಯಾದ ಕೈ ಕಾಲುಗಳನ್ನು ನೋಡಿಕೊಂಡಿರಲಿಲ್ಲವೆ?

ಈ ಎಲ್ಲ ಗೊಂದಲದಲ್ಲಿ ನಿದ್ರೆ ಕಳ್ಳನಂತೆ ಅವನ ಬಳಿ ಸುಳಿಯುದಿದ್ದಾಗ

ಸುಂದರು ಮಗ್ಗಲು ಬದಲಿಸಿ ಹಾಸಿಗೆಯಲ್ಲಿ ಹೊರಳಾಡುತ್ತಿದ್ದ.

ಇದ್ದಕ್ಕಿದ್ದಂತೆ ಯಾರೋ ಸಣ್ಣ ಧ್ವನಿಯಲ್ಲಿ ಚೀರಿದ ಸದ್ದು ರಾತ್ರಿಯ ಮೌನದಲ್ಲಿ ಇಮ್ಮಡಿಯಾಗಿ ಕೇಳಿಸಿ, ಸುಂದರು ಗಾಬರಿಯಿಂದಹೊರಗೆ ಬಂದ.

ಗಿರೀಶನ ರೂಮಿನಲ್ಲಿ ದೀಪ ಉರಿಯುತ್ತಿತ್ತು. ತಲೆ ಕೆದರಿ ಅಸ್ತವ್ಯಸ್ತ ವಾಗಿದ್ದ ಗಿರೀಶ ತರಗೆಲೆಯಂತೆ ನಡುಗುತ್ತ ರೂಮಿನಿಂದ ಹೊರಗೆ ಬಂದು ಹಾಲಿನಲ್ಲಿದ್ದ ಕುರ್ಚಿಯಲ್ಲಿ ಕುಸಿದ.

ಸುಂದರು ಅವನನ್ನು ಹಿಡಿದು ಅಲುಗಿಸಿ, "ಗಿರಿ ...ಗಿರಿ ..ಏನಾಯ್ತು" ಎಂದು ಕೇಳಿದ.

ಗಿರೀಶನಿಗೆ ಮಾತಾಡುವ ಶಕ್ತಿ ಉಡುಗಿ ಹೋದಂತಿತ್ತು.

"ಮ ..ಮ ..ಮ—" ಎಂದ ಬಹಳ ಕಷ್ಟದಿಂದ, ಮಾತು ಕಲೀ ತಿರುವ ಮಗುವಿನ ಹಾಗೆ.

ಇಷ್ಟೆಲ್ಲ ಗದ್ದಲ ಗಲಾಟೆ ಆಗುತ್ತಿರುವಾಗ ತಾಯಮ್ಮ ಮಲಗಿರಲು ಸಾಧ್ಯವೆ ? ಆಕೆ ಕಣ್ಣು ಹೊಸಕಿಕೊಳ್ಳುತ್ತ ಎದ್ದು ಬಂದು ದೀಪ ಹಚ್ಚಿಸಿ.

"ಏನು....ಏನಾಯ್ತು ?" ಎಂದು ಗಲಾಟೆ ಮಾಡಿದರು.

ಸುಂದರುವಿಗೆ ಹಿಂದುಮುಂದು ಒಂದೂ ಗೊತ್ತಾಗಲಿಲ್ಲ. ದಪ್ಪ ಮುಖದ ಪ್ಲಾಸ್ಟಿಕ್ ಬೊಂಬೆಯಂತೆ ಕಣ್ಣು ಹೊರಳಿಸಿ ನೋಡುತ್ತ ನಿಂತ.

ಅಷ್ಟರಲ್ಲಿ ಅಹಲ್ಯಾ ಒಂದು ಕೈಲಿ ಸೌದೇ ತುಂಡು ಹಿಡಿದುಕೊಂಡು ತುದಿಗಾಲಿನಲ್ಲಿ ಸರಸರನೆ ನಡೆದು ಬಂದಳು. ರೂಮಿನ ಬಾಗಿಲಿಗೆ ಅಡ್ಡವಾಗಿ ನಿಂತಿದ್ದ ಸುಂದರುವನ್ನು ಉದ್ದೇಶಿಸಿ.

"ದಾರಿ ಬಿಡಿ ದಯವಿಟ್ಟು" ಎಂದಳು.

"ಏನಾಗಿದೆ ಅತ್ತಿಗೆ ಹೇಳಬಾರ್ದೆ ? ಯಾಕಿಷ್ಟು ಗದ್ದಲ ?"

ಸುಂದರು ಕಾತರದಿಂದ ಕೇಳಿದ.

"ಏನಿಲ್ಲ ...ಅಲ್ಲೊಂದು ಮಂಡರಗಪ್ಪೆ ಬಂದಿದೆ."

"ಒಂದು ಕಪ್ಪೆ ಬಂದರೆ ಇಷ್ಟು ಗದ್ದಲವೇ ? ಪುಸ್ ..."

"ಮಂಡರಗಪ್ಪೆ ಎಂದರೆ ಬಹಳ ದೊಡ್ಡ ಚೇಳು. ಅದು ಕಡಿದರೆ ಬದುಕೋದೆ ಇಲ್ಲ."

ತಾಯಮ್ಮ ವಿವರಣೆ ಕೊಟ್ಟರು. ಹೆದರಿಕೆಯಿಂದ ಹಲ್ಲುಗಳು ಕಟ

ಕಟಿನೆ ಒಂದಕ್ಕೊಂದು ತಗಲಿ ಸದ್ದು ಮಾಡುತ್ತಿದ್ದುದರಿಂದ ಅವರಾಡಿದ ಮಾತು ಸರಿಯಾಗಿ ಅರ್ಥವಾಗದಿದ್ದರೂ, ಅಹಲ್ಯಾ ಸೌದೆತುಂಡಿನಿಂದ ಮಂಚದ ಕೆಳಗೆ ಆಶ್ರಯ ಪಡೆಯಲು ಯತ್ನಿಸುತ್ತಿದ್ದ ಪ್ರಾಣಿಗೆ ಬಡಿಯುತ್ತಿದ್ದ ಸದ್ದು ಕೇಳಿ ತಾನೂ ಮೂಲೆಯಲ್ಲಿದ್ದ ಬೂಟ್ಸನ್ನು ಎತ್ತಿಕೊಂಡು ಒಳಗೆ ನುಗ್ಗಿದ.

"ನೀವು ಈ ಕಡೆ ಬನ್ನಿ."

"ಯಾಕೆ ? ಈ ಪ್ರಾಣೀನ ಹೊಡೆಯೋಕೆ ಇಬ್ಬರು ಬೇಕೆ ?"

ಅಹಲ್ಯಾ ಮತ್ತೆ ಬಡಿದರೂ ಮಂಚದ ಕೆಳಗೆ ಕತ್ತಲಾಗಿದ್ದುದರಿಂದ ಏಟು ತಗಲದೆ ಅದು ಕೊಂಡಿ ಎತ್ತಿಕೊಂಡು ಸರಸರನೆ ಕೋಣೆಯ ಇನ್ನೊಂದು ಮೂಲೆಗೆ ಓಡಿತು ಸುಂದರು ಬೂಟನ್ನು ಎತ್ತಿ ಜೋರಾಗಿ ಒಂದು ಸಲ ಹೊಡೆದ ಕೂಡಲೇ ಅದು ಸತ್ತಿತು.

ಅಲ್ಲಿ ಬಿದ್ದಿದ್ದ ಒಂದು ಕಾಗದವನ್ನು ಎಳೆದುಕೊಂಡು, ಸೌದೆ ತುದಿಯಿಂದ ಅದನ್ನು ಕಾಗದದ ಮೇಲಕ್ಕೆ ತಳ್ಳಿ, ಕಾಗದವನ್ನು ಹಿಡಿದುಕೊಂಡು ಹೊರಗೆ ಹೊರಟಳು ಅಹಲ್ಯಾ.

ನಡಗುತ್ತಿದ್ದ ಗಿರೀಶ ಒಮ್ಮೆಗೇ ಸೆಟೆದು ಎದೆ ಉಬ್ಬಿಸಿ ನಿಂತು,

ಅಹಲ್ಯಾ ...ಅದನ್ನು ದೂರ ಎಸಿ, ಆ ಸೌದೆಯನ್ನೂ ಹೊರಕ್ಕೆ ಹಾಕಿಬಿಡು. ಪುನಃ ಒಳಗೆ ತರಬೇಡ" ಎಂದು ಅಪ್ಪಣೆ ಮಾಡಿದ.

"ನೀವು ಹೋಗಿ ಮಲಗಿ" ಎಂದಷ್ಟೇ ಹೇಳಿದಳು ಅಹಲ್ಯ.

ಮತ್ತೆ ಐದು ನಿಮಿಷಗಳಲ್ಲಿ ದೀಪ ಆರಿಸಿ ಎಲ್ಲರೂ ನಿದ್ರಿಸಲು ಪ್ರಯತ್ನಪಟ್ಟರು.

ಮಾರನೆಯ ದಿನದಿಂದ ಸುಂದರುವಿಗೆ ಊರು ತೋರಿಸುವ ಸಂಭ್ರಮ. ಗಿರೀಶ ಆಫೀಸಿಗೆ ಎರಡು ದಿವಸ ರಜ ಹಾಕಿ ಮನೆಯಲ್ಲೇ ಉಳಿದ.

"ನೀವೂ ಬನ್ನಿ ಅತ್ತಿಗೆ" ಸುಂದರು ಕರೆದ.

"ಮನೇಲಿ ಅತ್ತೆ ಒಬ್ಬರೇ ಇರ್ತಾರೆ. ನೀವು ಹೋಗಿ ಬನ್ನಿ. ನಾನು ಇಲ್ಲೇ ಇರೋಳು. ಎಂದಾದರೂ ನೋಡಿದರಾಯ್ತು" ಸಿದ್ಧಪಡಿಸಿದ ಉತ್ತರ ಸರಾಗವಾಗಿ ಬಂತು.

"ನನ್ನ ಕಾಟ ಇದ್ದದ್ದೆ. ನೀನು ನೋಡೋದು ಯಾವಾಗ ? ಹೋಗಿ

ಬಾ ಅಹಲ್ಯಾ. ಕೆಲಸದ ಹುಡುಗಿಗೆ ನೀನು ಬರೋವರೆಗೆ ನನ್ನ ಸಂಗಡ ಇರುವಂತೆ ಹೇಳ್ತೀನಿ. ಕೂಗಿದರೆ 'ಆಂ' ಅನ್ನೋಕ್ಕೆ ಇದ್ದರೆ ಸಾಕು." ತಾಯಮ್ಮ ಸೊಸೆಗೆ ಬಲವಂತ ಹಾಕಿದರು.

"ಹಾಗೇ ಮಾಡು. ಅಮ್ಮ ಹೇಳ್ತಿದಾಳಲ್ಲ. ಗಿರೀಶ ಉದಾರವಾಗಿ ಸಮ್ಮತಿಸಿದ.

"ಇರಲಿ ಬಿಡಿ ಎಂದಾದರೂ ಹೋಗೋಣ ಬೆಟ್ಟ, ಬೃಂದಾವನ ಎಲ್ಲಿ ಓಡಿ ಹೋದೀತು ?"

"ಕರೆದರೆ ಬರಬೇಕಪ್ಪ. ಮಕ್ಕಳಂತೆ ಮೊಂಡುತನ ಮಾಡತೀ ಒಮ್ಮೊಮ್ಮೆ ನೀನ" ಗಿರೀಶ ಟೀಕೆ ಮಾಡಿದ

"ನಿಮ್ಮಲ್ಲಿ ಅದೇ ತೊಂದರೆಯೆಂದು ನನಗೆ ತೋರ್ತಿದೆ. ಮನೇಲಿ ಒಂದು ಮಗು ಇದ್ದಿದ್ದರೆ . ?" ಸುಂದರು ಸಲಹೆ ಮಾಡಿದ

"ಯಾಕೋ ...? ಈ ಎರಡು ಮಕ್ಕಳನ್ನು ನೋಡಿಕೊಳ್ಳೋದೇ ಸಾಕಾಗಿದೆ ನನಗೆ" ಅಹಲ್ಯಾ ನಗುತ್ತಲೇ ಹೇಳಿದಳು.

"ಅದೂ ನಿಜವೆನ್ನಿ. ಗಿರೀಶ ಯಾವ ಮಗೂವಿಗೂ ಕಡಿಮೆ ಇಲ್ಲ ನೀನು ಬೆಳಗಿನಿಂದ ಅತ್ತಿಗೇನ ಎಷ್ಟು ಸಲ ಕೆಲಸಕ್ಕಾಗಿ ಕೂಗಿರುವೆಯೆಂದು ನೆನಪಿದೆಯೆ ನಿನಗೆ?" ಸುಂದರು ಛೇಡಿಸಿದ.

"ನೆನಪಿಲ್ಲ. ಅದೆಲ್ಲ ಯಾರು ಲೆಖ್ಖ ಇಡ್ತಾರೆ? ಅಂತೂ ಅವಳಿಲ್ಲದೆ ಒಂದು ಘಳಿಗೆ ನಡೆಯಲ್ಲ. ಹೊರಡುವ ಹೊತ್ತಿನಲ್ಲಿ ಪೆನ್ನು, ಕರ್ಚೀಫು, ಪರ್ಸು ಒಂದೂ ಸಿಗಲ್ಲ!"

"ಎಲ್ಲಾ ಎದುರಿಗೇ ಕಾಣುವಂತೆ ಇಟ್ಟಿರ್ತೀನಿ"

"ಅದರಿಂದಲೇ ಸಿಗಲ್ಲ ಎದುರಿಗಿರೋದನ್ನು ಕೈಗೆತ್ತಿಕೊಟ್ಟರೇ ಅವನಿಗೆ ಸಮಾಧಾನ. ಅಲ್ವೇನೋ ಗಿರಿ?"

ಎಲ್ಲರೂ ನಕ್ಕರು

"ನನ್ನ ಮಗೂನ ಯಾಕೆ ಗೋಳು ಹೊಯ್ದುಕೋತೀರಿ?"

ಎನ್ನುತ್ತ ತಾಯಮ್ಮನೂ ನಗುವಿನಲ್ಲಿ ಭಾಗಿಯಾದರು.

ನಗು ನಗುತ್ತ ತುಂಬಿದ ಉತ್ಸಾಹದಿಂದ ಮೂವರೂ ಮನೆಯಿಂದ ಹೊರಟರು. ತಾಯಮ್ಮ ಕಾಲೆಳೆದುಕೊಂಡು ಮುಂಬಾಗಿಲವರೆಗೆ ಬ

ಕೈಬೀಸಿ ಬೀಳ್ಕೊಟ್ಟರು. ಹುಡುಗರು ಕಣ್ಮರೆಯಾಗುವವರೆಗೂ ನಿಂತಿದ್ದು ನಿದಾನವಾಗಿ ಒಳಗೆ ಬಂದರು.

ಚಾಮುಂಡಿ ಬೆಟ್ಟದಲ್ಲಿ ಸಂಜೆ ಹೇಗಿರುತ್ತದೆ? ಎಂದರೆ, ಅದನ್ನು ನೋಡಿಯೇ ಆನಂದಿಸಬೇಕಲ್ಲದೆ ಮಾತುಗಳಿಂದ ಹೇಳಿದರೆ ತೃಪ್ತಿಯಾಗ ಲಾರದು ಬೇಸರವನ್ನು ಕಳೆಯುವ, ಸಂತಸವನ್ನು ಇಮ್ಮಡಿಸುವ ಸಮ್ಮೋಹಕ ಶಕ್ತಿ ಆ ತಾಣಕ್ಕಿದೆ.

ದೇವಿಯ ಸಾನ್ನಿಧ್ಯದಲ್ಲಿ ಭಾವುಕರು ಮೈ ಮರೆತಾರು. ವಿದ್ಯುದ್ದೀಪ ಗಳಿಂದ ಬೆಳಗಿದ್ದ ಗುಡಿಯಲ್ಲಿ ಘಂಟಾನಾದ ಮೊಳಗಿದಾಗ ಮೈನವಿರೇಳುತ್ತದೆ ಸುಂದರು ಒಂದು ಸಲ ದೇವಿಯನ್ನು ಕಣ್ತುಂಬುವಂತೆ ನೋಡಿ ಕಣ್ಣು ಮುಚ್ಚಿ ನಿಂತ. ಅರ್ಚಕರು ಮಂಗಳಾರತಿ ಬೆಳಗಿದಾಗಲೂ ಕಣ್ಣು ಬಿಡಲಿಲ್ಲ ಘಂಟೆ ಜಾಗಟೆಗಳು ಬಡಿದಾಗಲೂ ಕಣ್ಣೆವೆ ಅಲುಗಿಸಲಿಲ್ಲ

ಅಹಲ್ಯಾ ಆತಂಕ ಆಶ್ಚರ್ಯಗಳಿಂದ ಅವನನ್ನು ದಿಟ್ಟಿಸಿದಳು ಹೊತ್ತಾಯ್ತೆಂದು ಗಿರೀಶ ಅವನನ್ನು ಹೊರಡಿಸಿಕೊಂಡು ಬರಬೇಕಾಯ್ತು. ಬಾಡಿಗೆಯ ಕಾರು ದೀಪದ ಬೆಳಕನ್ನು ರಸ್ತೆಯ ಮೇಲೆ ತೂರುತ್ತ ವೇಗವಾಗಿ ಬೆಟ್ಟವನ್ನು ಇಳಿಯುತ್ತಿರುವಾಗ ಎಲ್ಲೋ ತೇಲಿಹೋಗುತ್ತಿರುವ ಅನುಭವ ವಾಯ್ತು.

"ಇಲ್ಲಿ ಎಲ್ಲಾದರೂ ಸ್ವಲ್ಪ ಹೊತ್ತು ನಿಂತರೆ ಹೇಗೆ?"

–ಸುಂದರು ಗಿರೀಶನನ್ನು ಕೇಳಿದ.

"ಓ ಅದಕ್ಕೇನು? ಧಾರಾಳವಾಗಿ ನಿಲ್ಲೋಣ. ಆ ತಿರುವಿನಲ್ಲಿ ನಿಂತರೆ ಇಡೀ ಮೈಸೂರು ದೀಪಮಾಲೆ ಧರಿಸಿರುವುದನ್ನು ಕಾಣಬಹುದು"

ಕಾರು ನಿಂತಿತು. ಮೂವರೂ ಅಲ್ಲಿದ್ದ ಕಲ್ಲು ಬೆಂಚಿನ ಮೇಲೆ ಹತ್ತಿ ನಿಂತರು. ಅಪರೂಪದ ದೃಶ್ಯವನ್ನು ಮೊದಲ ಬಾರಿಗೆ ನೋಡಿದ ಅಹಲ್ಯಾ ಮುಗ್ಧ ಮಗುವಿನಂತೆ ಕಣ್ಣರಳಿಸಿ ನೋಡುತ್ತಿದ್ದಳು.

"ಓಹ್ .ಎಷ್ಟು ಸುಂದರ!" ಸುಂದರು ಉದ್ಗರಿಸಿದ.

"ನಿನ್ನಷ್ಟು ಸುಂದರ ಎನ್ನುವಿಯ?" ಗಿರೀಶನ ಧ್ವನಿ ಶಾಂತವಾಗಿತ್ತು. ಕತ್ತಲಲ್ಲಿ ಅವನ ಮುಖ ಕಾಣಿಸುತ್ತಿರಲಿಲ್ಲ.

"ನಾನು ಸುಂದರನೆ? ಯಾರು ಹೇಳಿದೋರು?"

ಸುಂದರು ನಗುತ್ತ ಹಗುರವಾಗಿ ಕೇಳಿದ.

"ಯಾರೂ ಹೇಳಲಿಲ್ಲ. ದೇವಸ್ಥಾನದಲ್ಲಿದ್ದ ಹೆಂಗಸರು ದೇವಿಯನ್ನು ಮರೆತು ನಿನ್ನೇ ನೋಡ್ತಿದ್ದರು."

"ಹಾಸ್ಯ ಮಾಡಬೇಡ ಮಾರಾಯ. ಅತ್ತಿಗೆ ಏನೆಂದುಕೊಂಡಾರು ?"

"ಬೇಕಾದರೆ ನಿನ್ನ ಅತ್ತಿಗೆಯನ್ನೇ ಕೇಳು"

ಅತ್ತಿಗೆ ಅಲ್ಲಿರಲಿಲ್ಲ. ಸರಸರನೆ ಕಾರಿನೆಡೆಗೆ ಧಾವಿಸುತ್ತಿದ್ದಳು.

"ನಾಲ್ಕು ಭುಜಗಳುಳ್ಳ, ದೈತ್ಯ ಸಂಹಾರಿಣಿ ದೇವಿಯನ್ನು ನೋಡದೆ ಕಣ್ಣು ಮುಚ್ಚಿ ನಿಂತಿದೆಯಲ್ಲ ಈ ಹಳ್ಳಿ ಗಮಾರ, ಎಂದುಕೊಂಡು ನೋಡಿದ ಲುಕ್ಕು ಸಾಕು" ಕಾರು ಹತ್ತುತ್ತ ಸುಂದರು ಹೇಳಿದ.

"ಓಡಿ ಬಂದುಬಿಟ್ಟೆ ನೀನು ? ನೋಡಿದಷ್ಟೂ ಮತ್ತೊಮ್ಮೆ ನೋಡುವ ಬಯಕೆಯನ್ನು ಚಿಮ್ಮಿಸುವ ನೋಟ ಅದು. ನಾವೇನು ದಿನಾ ಬರಲ್ಲ!"

ಗಿರೀಶ ಹೆಂಡತಿಯನ್ನು ಆಕ್ಷೇಪಿಸಿದ.

"ವಿಪರೀತ ಗಾಳಿ. ಛಳಿ ತಡೆಯಕ್ಕೇ ಆಗಲಿಲ್ಲ. ಅದಕ್ಕೆ ಬಂದೆ. ನೀವಿಬ್ಬರೂ ಅಲ್ಲೇ ಇರಬಹುದಿತ್ತು."

"ಶಾಲು ತಂದಿದ್ದರೆ ..ಅಥವಾ ಸ್ವೆಟರ್"

"ಅದು ಬೇಕಾಗಬಹುದೆಂದು ತೋರಲಿಲ್ಲ"

"ನೀನು ಎಂದಾದರೂ ಅವರನ್ನು ಹೊರಗೆ ಕರೆತಂದಿದ್ದರೆ, ಹೊರಗೆ ಬರುವಾಗ ಏನು ತರಬೇಕೆಂದು ಅವರಿಗೆ ತಿಳೀತಿತ್ತು."

ಸುಂದರು ಹೇಳಿ ನಡೆಯಲಿದ್ದ ವಾಗ್ವಾದಕ್ಕೆ ತಡೆ ಹಾಕಿದ.

ಊಟಕ್ಕೆ ಕುಳಿತಾಗ ಅವಳ ನಡಿಗೆಯಲ್ಲಿ ಇದ್ದ ಆಲಸ್ಯವನ್ನು ಗಮನಿಸಿದ ತಾಯಮ್ಮ "ಆಯಾಸವಾಯ್ತೆ ? ತುಂಬ ಸುತ್ತಿದಿರ ?"

–ಎಂದು ಸೊಸೆಯನ್ನು ಕೇಳಿದರು

"ಇಲ್ಲ ಅತ್ತೆ"

"ಯಾಕೋ ಮುಖವೆಲ್ಲ ಸಪ್ಪೆಯಾಗಿದೆ. ತಿರುಗಿ ಅಭ್ಯಾಸವಿಲ್ಲ ನನ್ನದೇ ತಪ್ಪು, ಬಲವಂತವಾಗಿ ಅಟ್ಟಿದೆ."

"ಸರಿ ಹೋಗುತ್ತೆ ಬಿಡಮ್ಮ. ನೀನು ಹೀಗೆ ಹೆಚ್ಚುಗಾರಿಕೆ ಮಾಡಿಯೇ ಅವಳಿಗೆ ಏನೂ ತಡೆಯಲ್ಲ" ಗಿರೀಶ ನುಡಿದ.

"ನೀನು ಮಾಡಲ್ಲವೇನೋ? ನನಗೆ ಮಾತ್ರ ಆಕ್ಷೇಪಣೆ."

"ಅದಕ್ಕೇಕೆ ಜಗಳ? ಯಾರೂ ಹೆಚ್ಚುಗಾರಿಕೆ ಮಾಡಬೇಕಾಗಿಲ್ಲ. ಸುಂದರವಾದ ಹೂವು ಇರುವುದು ತಲೆಯ ಮೇಲೆ ಮುಡಿಯಕ್ಕೆ ತಾನೇ?"

ಸುಂದರು ತೀರ್ಪು ಕೊಟ್ಟಂತೆ ಮಾತಾಡಿದ.

ಒಳಗೆ ಏನೋ ಪಾತ್ರೆ ಧೊಪ್ಪನೆ ಬಿದ್ದ ಸದ್ದಾದಾಗ ಎಲ್ಲರ ನಗುವೂ ತಟ್ಟನೆ ನಿಂತಿತು.

"ಅಹಲ್ಯಾ ..ಏನಾಯ್ತು?" ಗಿರೀಶ ಕಿರುಚಿದ.

"ಏನೂ ಇಲ್ಲ. ಪಾತ್ರೆ ಕೈ ಜಾರಿತು. ಅದಕ್ಕೇಕೆ ಇಷ್ಟು ಗಾಬರಿ! ಸಧ್ಯ ಊಟದ ಮಧ್ಯೆ ಎದ್ದು ಬರಬೇಡಿ. ನನಗೇನೂ ಆಗಿಲ್ಲ."

ಕೂತ ಜಾಗದಿಂದ ಏಳಲಾರದೆ ತಾಯಮ್ಮ ಚಡಪಡಿಸುತ್ತಿದ್ದರು. ಸುಂದರು ಏನೂ ಆಗದವನಂತೆ ನಿಧಾನವಾಗಿ ತುತ್ತು ಇಳಿಸುತ್ತಿದ್ದ.

* * *

ಮಾರನೆಯ ಮಧ್ಯಾಹ್ನ ಎಲ್ಲರೂ ಒಟ್ಟಿಗೆ ಮಾತಾಡುತ್ತ ಕುಳಿತಿದ್ದಾಗ ಅಹಲ್ಯಾ,

"ಅತ್ತೇ. .ನಾನೊಂದು ಮಾತು ಕೇಳ್ತೀನಿ. ನೀವು ಬೇಸರಿಸಬಾರದು. ಆಂ" ಎಂದು ಅತ್ತೆಯ ಕಡೆ ನೋಡಿದಳು.

"ಏನು ಬೇಕಾದ್ರೂ ಕೇಳು. ಸಂಕೋಚ ಏಕೆ?"

"ನಾನು ಎರಡು ದಿವಸ ಕೋಲಾರಕ್ಕ ಹೋಗಲೆ?"

ಸಿಡಿಮದ್ದು ಆಸ್ಫೋಟವಾದಂತೆ ತೋರಿತು. ತಾಯಿ ಮಗ ಇಬ್ಬರಿಗೂ ಕವಿದು ಬಂದ ಮೌನವನ್ನು ಅತ್ತ ಸರಿಸಿ,

"ಕೋಲಾರಕ್ಕೆ....? ಏಕೆ ...?" ಎಂದರು ಅತ್ತೆ.

"ಅಲ್ಲಿ ನನ್ನ ಸೋದರತ್ತೆ ಇದಾರೆ. ಸುಮಾರು ವರ್ಷಗಳಿಂದ ಕರೀತಿದಾರೆ. ಮದುವೆಯಾಗಿ ಇಲ್ಲಿಗೆ ಬಂದು ಸೇರಿದ ಮೇಲೆ ಎಲ್ಲಿಗೂ ಹೊರಗೆ ಹೋಗಿಲ್ಲ."

ಆ ಮೂರು ಮಾತುಗಳಲ್ಲಿ ತನ್ನ ಆವರೆಗಿನ ಬದುಕಿನ ಆಶಯವನ್ನೆಲ್ಲ ತುಂಬಿ ನುಡಿದಳು ಅಹಲ್ಯಾ.

ಆ ಮಾತು ಗಿರೀಶನ ಎದೆಯ ಬಾಗಿಲನ್ನು ತಟ್ಟಿತು.

"ನೀನು ಹೋಗೋದಕ್ಕೆ ಅಡ್ಡಿಯಿಲ್ಲ. ಆದರೆ ಯಾವುದಕ್ಕೂ ಹೊತ್ತು ವೇಳೆ ಇಲ್ಲವೇ ? ಮನೆಗೆ ಬಂದಿರೋ ಅತಿಥೀನ ಬಿಟ್ಟು ಹೋಗೋದೇ ?"

ಗಿರೀಶ ಕೇಳಿದ.

"ಅದು ನನಗೂ ಗೊತ್ತು. ಆದರೆ ಅತಿಥಿ ಇರೋದರಿಂದಲೇ ಧೈರ್ಯವಾಗಿ ಹೋಗಬಹುದು. ಅವರು ಬರೇ ಅತಿಥಿ ಅಲ್ಲ, ನಮ್ಮ ಮನುಷ್ಯೋರು ಒಂದೆರಡು ದಿನ ಅತ್ತೇನ ಚೆನ್ನಾಗಿ ನೋಡ್ಕೋತಾರೆ. ಬೇರೆಯವರ ಮೇಲೆ ಆ ಹೊಣೆ ಹೊರಿಸೋದಕ್ಕೆ ಧೈರ್ಯವಿಲ್ಲ."

ಅಹಲ್ಯಾ ದೈನ್ಯದಿಂದ ಅತ್ತೆಯ ಕಡೆ ನೋಡಿದಳು ಹತ್ತು ಸಮಸ್ಯೆ ಅವರ ಎದುರಿಗೆ ಕುಣಿದಂತೆ ಭಾಸವಾಯ್ತು

"ನನಗೆ ರಜೆ ಇಲ್ಲ ಎರಡೇ ದಿನ ತೆಗೆದಿದ್ದು "

"ನಾನು ಒಬ್ಬಳೇ ಹೋಗ್ತೀನಿ. ಹೆಂಗಸರ ಗಾಡಿ ಇದೆಯಲ್ಲ."

"ಅದೇನೋ ಇದೆ, ನಿನಗೆ ಹೊರಗೆ ತಿರುಗಿ ಅಭ್ಯಾಸವಿಲ್ಲ ಅಲ್ಲದೆ ನಮಗೆ ಊಟ ತಿಂಡಿಗಳಿಗೆ ಏನು ಮಾಡೋದು?" ಗಿರೀಶ ಕೇಳಿದ.

"ನಾನು ನಿಮ್ಮ ಮಾತಿಗೆ ಬರಬಾರದು. ಆದರೂ ಹೇಳ್ತೀನಿ ನಮ್ಮ ಸ್ವಂತ ಅನುಕೂಲಕ್ಕಾಗಿ, ಯಾರನ್ನೂ ಕಟ್ಟಿಹಾಕಬಾರದು. ಊಟ ತಿಂಡಿ ಅಷ್ಟು ದೊಡ್ಡದೆ? ಯಾರಾದರೂ ಅಡಿಗೆಯವರನ್ನು ಕರೆಸಿದರೆ ಆಯ್ತು. ನಾನು ಅತ್ತೇನ ನೋಡಿಕೋತೇನೆ. ನನಗೆ ಖಂಡಿತ ತೊಂದರೆ ಇಲ್ಲ " ಸುಂದರು ಗದ್ಗದಿತನಾಗಿ ಹೇಳಿದ.

ಗಿರೀಶ ಸಹಾಯಕ್ಕಾಗಿ ತಾಯಿಯ ಕಡೆ ನೋಡಿದ

"ಅಹಲ್ಯಾ ಎಂದೂ ಬೇಸರಪಟ್ಟವಳಲ್ಲ. ಇದನ್ನು ಬಂಧನ ಎಂದು ತಿಳಿದಿರಲೂ ಇಲ್ಲ. ಸಂತೋಷವಾಗಿಯೇ ಇದ್ದಳು. ಅವಳಿಗೆ ಏನಾಗಿದೆಯೋ ? ಹೋಗಿಬರಲಿ ಬಿಡು "

ತಾಯಮ್ಮ ಮಗನಿಗೆ ಹೇಳಿದರು.

"ಒಬ್ಬಳೇ ಹೋಗಲಿ ಹಾಗಾದರೆ "

"ಉಂಟೆ? ನೀನೂ ಹೊರಡು. ಮಧ್ಯಾಹ್ನದ ರೈಲಿಗೆ ಇನ್ನೂ ಒಂದು ಗಂಟೆ ಇದೆ. ಅವಳನ್ನು ಅಲ್ಲಿ ಬಿಟ್ಟು ನೀನು ನಾಳೆಯೇ ಹಿಂದಕ್ಕೆ ಬರಬಹುದು."

ನೀರು ತೆರೆ ಹಾಕಿದಕಣ್ಣುಗಳಿಂದ ಅತ್ತೆಯ ಹತ್ತಿರ ಬಂದು ಅವರ ಭುಜದ

ಮೇಲೆ ಒರಗಿ-

"ಅತ್ತೇ ನಿಮಗೆ ತೊಂದರೆಯಾಗುವಂತಿದ್ದರೆ" ಎಂದು ತೊದಲಿದಳು ಅವಳ ಧ್ವನಿ ಭಾರವಾಗಿತ್ತು. ತನ್ನ ನೋವು ಅವರಿಗೆ ಅರ್ಥವಾಗಿರಬಹುದೆ?

ಆಕೆ ಮೌನವಾಗಿ ಅವಳ ತಲೆ ನೇವರಿಸಿದರು.

ಅರ್ಧ ಗಂಟೆಯಲ್ಲಿ ಸಿದ್ಧತೆ ಮುಗಿದು ಮನೆಯ ಮುಂದೆ ಗಾಡಿನಿಂತಿತು ಗಿರೀಶ ಬಿಗಿದ ಮುಖದಿಂದಲೇ ಗಾಡಿ ಹತ್ತಿದ. ಸುಂದರು ಹಿಂದಿನಿಂದ ಒಂದು ಪೆಟ್ಟಿಗೆ ಹಿಡಿದು ಬಂದ

"ನಿಮಗೆ ತೊಂದರೆ ಕೊಟ್ಟಿದ್ದರ ಜೊತೆಗೆ ಅತಿಥಿ ಸತ್ಕಾರದ ಹೊಣೆ ಯಿಂದ ಜಾರಿಕೊಳ್ಳುತಿದೇನ ಮನ್ನಿಸಿ"

ಅವನ ಕೈಲಿದ್ದ ಪೆಟ್ಟಿಗೆಯ ಮೇಲೆ ದೃಷ್ಟಿ ಇಟ್ಟು ತಲೆ ತಗ್ಗಿಸಿ ಹೇಳಿದಳು ಅಹಲ್ಯಾ

ಸುಂದರು ಕೈ ಬೀಸಿದ. ಗಾಡಿ ಹೊರಟಿತು.

* * *

ಅಪರೂಪಕ್ಕೆ ಪ್ರವಾಸ ಹೊರಟಿದ್ದ ಅಹಲ್ಯಾಳಿಗೆ ಒಂದು ರೀತಿ ಸಂತೋಷವೆನಿಸಿದರೂ, ಹೃದಯ ಬಿಗಿದು ಬಾಯಿ ಕಟ್ಟಿದಂತಾಗಿತ್ತು. ನಕ್ಕು ನಗಿಸಿ ಮಾತಾಡುವುದು ಆಗಲಿಲ್ಲ. ಅವಳ ತೋಳಿಗೆ ತಗುಲಿದಂತೆ ಗಿರೀಶ ಕುಳಿತಿದ್ದರೂ ಅವನ ಇರುವಿಕೆ ಅವಳ ಗಮನಕ್ಕೆ ಬಂದಂತಿರಲಿಲ್ಲ ಶೂನ್ಯ ದೃಷ್ಟಿಯಿಂದ ಕಿಟಕಿಯ ಹೊರಗೆ ನೋಡುತ್ತಿದ್ದಳು.

ಗಿರೀಶ ಅವಳನ್ನು ಮರೆತಂತೆ ಕೈಲಿ ಹಿಡಿದಿದ್ದ ಪತ್ರಿಕೆಯಿಂದ ಮುಖ ಮುಚ್ಚಿಕೊಂಡಿದ್ದರೂ, ಪತ್ರಿಕೆಯ ಮರೆಯಿಂದ ಅವಳ ಮುಖವನ್ನು ಆಗಾಗ ಗಮನಿಸುತ್ತಿದ್ದ.

ಹೇಗೋ ದಾರಿ ಸವೆದು ಬೆಂಗಳೂರು ಸಿಕ್ಕಿತು. ಅಲ್ಲಿ ವಿಪರೀತ ಗದ್ದಲ. ಇಳಿಯುವವರು, ಬಂದವರನ್ನ ಇದಿರ್ಗೊಳ್ಳಲೆಂದು ಬಂದಿದ್ದವರು ಎಲ್ಲರ ಓಡಾಟವೂ ನಡೆದಿತ್ತು. ಸಾಮಾನು ಇಳಿಸುವ ಕೂಲಿಗಳ ಗದ್ದಲ ಬೇರೆ.

ಇದ್ದಕ್ಕಿದ್ದಂತ ಅಹಲ್ಯಾ ಗಿರೀಶನ ತೋಳನ್ನು ಹಿಡಿದು ಜಗ್ಗಿ ಕಾತರ ದಿಂದ "ಅಲ್ಲಿ ನೋಡಿ" ಎಂದು ಪಿಸುಗುಟ್ಟಿದಳು.

ಕೂಲಿಯವನನ್ನು ಅನುಸರಿಸಿ ಮುಂದಾಗಿ ಹೋಗುತ್ತಿದ್ದ ಗಿರೀಶ ತಟ್ಟನೆ ಹಿಂತಿರುಗಿ ನೋಡಿದ. ನಕ್ಷತ್ರವನ್ನು ನಾಚಿಸುವಂತೆ ಫಳಫಳನೆ ಮಿನುಗುತ್ತಿದ್ದ ಅಹಲ್ಯೆಯ ಕಣ್ಣುಗಳನ್ನು ನೋಡುತ್ತ,

"ಏನು? ಎಂದು ಕೇಳಿದ.

"ಅಲ್ನೋಡಿ .ನಿಮ್ಮ ಸುಂದರು . .ಇಲ್ಲೀಕೆ ಬಂದ್ರು?"

ಗಿರೀಶ ಬೆಚ್ಚಿದ್ದು ಅಹಲ್ಯೆಗೂ ಕಾಣಿಸಿತು.

"ಸುಂದರನೇ? ಇಲ್ಲೀಕೆ ಬರ್‍ತಾನೆ? ನೀನು ಯಾರನ್ನು ನೋಡಿದೆಯೋ?" ಗಿರೀಶ ಹೆಜ್ಜೆ ಮುಂದಿಟ್ಟ.

"ಇಲ್ಲ-ಅವರೇ. ಅದೇ ನೀಲಿ ಬುಷ್ ಕೋಟು. ಕೆನ್ನೆಯನು ನೋಡುವಂತೆ ಬಗ್ಗಿರುವ ಕೂದಲಿನ ಗೊಂಚಲು ಕತ್ತಿನ ಸುತ್ತ .."

"ಅಹಲ್ಯಾ . ಎಲ್ಲಿ?"ಅವನ ಧ್ವನಿ ನಯದ ಎಲ್ಲೆಯನ್ನು ಮೀರಿ ಕರ್ಕಶತೆಯನ್ನು ಸಮೀಪಿಸುತ್ತಿತ್ತು.

"ಅಲ್ಲಿ ..ಅಲ್ಲಿ ..ಆ ಪುಸ್ತಕದ ಅಂಗಡಿಯ ಎದುರಿಗೆ....ಮುಖ ಕಾಣಿಸಲ್ಲ. ಆದರೂ ಅವರೇ...."

ಅಹಲ್ಯಾ ಉತ್ಸಾಹದಿಂದ ಬೇಗ ಬೇಗ ಮಾತಾಡಿದಳು ಗಂಡನ ಧ್ವನಿ ಒರಟಾದುದನ್ನು ಅವಳು ಗಮನಿಸಲೇ ಇಲ್ಲ.

ಇವರ ನೋಟದಿಂದ ಆಕರ್ಷಿತನಾದಂತೆ ಅಲ್ಲಿ ನಿಂತಿದ್ದವನು ತಟ್ಟನೆ ತಿರುಗಿ ನೋಡಿದ.

ದಪ್ಪ ಹುಬ್ಬಿನ ದೊಂದಿ ಮೀಸೆಯ ಗಂಟು ಮುಖವನ್ನು ನೋಡಿ ಅಹಲ್ಯಳಿಗೆ ಕಿರಿಚುವಂತಾಯ್ತು. ಫುಂಗ್ಟೆ ಬೆರಳುಗಳನ್ನು ಬಾಯಿಗೆ ಹಿಡಿದು ನಿಂತುಬಿಟ್ಟಳು.

ಗಿರೀಶ ಅವಳನ್ನು ತೀಕ್ಷ್ಣವಾಗಿ ನೋಡಿದ. ಬಗ್ಗಿ ಅವಳ ಕೈ ಹಿಡಿದುಕೊಂಡು-"ಯಾವುದನ್ನಾದರೂ ಅತಿಯಾಗಿ ಯೋಚಿಸಿದರೆ ಹಾಗೇ ಆಗೋದು. ಹೊಗೋಣ ನಡಿ ಕೂಲಿಯವನು ಆಗಲೇ ಮುಂದೆ ಹೋದ, ಕಣ್ಮರೆಯಾದರೆ ಹುಡುಕೋದು ಕಷ್ಟ."

—ಎಂದ ಅವನ ಧ್ವನಿ ಕಾಠಿಣ್ಯವನ್ನೆಲ್ಲ ಕಳೆದುಕೊಂಡು, ಕನಿಕರದಿಂದ ತುಂಬಿ ಭಾರವಾದಂತಿತ್ತು.

# ವಾರದ ಹುಡುಗ

ಸರಸ್ವತೀ ಪಠಕ್ಕೆ ಹೂವು ತರಲು ಹೊರಗೆ ಹೋದೆ. ಯಾರೋ ನಿಂತಿದ್ದರು. ವಿದ್ಯಾರ್ಥಿಯಿರಬಹುದೆಂದುಕೊಂಡು, ಹೂ ಕುಯ್ಯುತ್ತಿದ್ದೆ ನಮ್ಮನೆಯಲ್ಲಿ ವಿದ್ಯಾರ್ಥಿಗಳಿಗೇನೂ ಅಪರೂಪವಿಲ್ಲ ಪ್ರತಿದಿನವೂ ದುಡ್ಡಿಗಾಗಿಯೂ, ಸಹಾಯ ಪತ್ರಗಳಿಗಾಗಿಯೂ, ಅನೇಕರು ನಮ್ಮ ತಂದೆಯ ಬಳಿಗೆ ಬರುತ್ತಿದ್ದರು.

ನಮ್ಮ ತಂದೆ ಒಳಗಿನಿಂದ ಬಂದವರು,

"ಯಾರಪ್ಪ, ಅದು" ಎಂದು ಕೇಳಿದರು.

"ನಾನು ಸಾರ್, ಇಲ್ಲೀ ಸೀನಿಯರ್ ಇಂಟರ್ ಮೀಡಿಯಟ್ ಕ್ಲಾಸಿನಲ್ಲಿ ಓದುತ್ತಿದ್ದೇನೆ"

"ಏನಾಗಬೇಕಪ್ಪ "

"ಇಲ್ಲೀ ವಾರ ಮಾಡಿಕೊಂಡಿದ್ದೇನೆ ಸಾರ್ ವಾರ ಕೊಟ್ಟಿದ್ದವರು ಬೆಂಗಳೂರಿಗೆ ಹೊರಟುಹೋದರು. ತಮ್ಮ ಮನೆಯಲ್ಲಿ ಒಂದುವಾರ ಅನುಕೂಲವಾದರೆ...."

ಹುಡುಗ ತಡೆದು ನಿಧಾನವಾಗಿ ಹೇಳುತ್ತಿದ್ದ. ಅಣ್ಣ ಎಲ್ಲೋ ಹೊರಟಿದ್ದರೆಂದು ತೋರುತ್ತೆ, ಅವಸರವಸರವಾಗಿ,

"ಈಗ ಸಧ್ಯಕ್ಕೆ ಯಾವ ವಾರವೂ ಖಾಲೀ ಇಲ್ಲ. ಇನ್ಯಾವಾಗಲಾದರೂ ಬಾ ನೋಡೋಣ," ಅಂದುಬಿಟ್ಟರು.

"ತುಂಬ ತೊಂದರೆಯಾಗಿದೆ ಸಾರ್, ಪರೀಕ್ಷೆ ಹತ್ತಿರವಾಯಿತು ತಾವು ಒಂದು ವಾರ ಕೊಟ್ಟರೆ ಬಹಳ ಉಪಕಾರವಾಗುತ್ತೆ."

ಈ ಸಲ ಬಹು ದೈನ್ಯದಿಂದ ಕೇಳಿದ. ಆ ಧ್ವನಿಯನ್ನು ಕೇಳಿ ಮನಸ್ಸಿಗೆ ಹೇಗೋ ಆಯಿತು. ಕತ್ತೆತ್ತಿ ನೋಡಿದೆ. ಹುಡುಗ ಒಳ್ಳೆ ಲಕ್ಷಣವಾಗಿದ್ದ. ಎತ್ತರವಾದ ಹಣೆ. ದೊಡ್ಡದಾದ ಕಣ್ಣುಗಳು. ಮುಖದ ದೈನ್ಯವನ್ನು ನೋಡಿ,

ಅಯ್ಯೋ!, ಪಾಪ, ಎನ್ನಿಸಿತು. ಒಂದು ಹಿಡಿ ಅನ್ನಕ್ಕಾಗಿ ಆಳುದ್ದ ದೇಹ ಗೇಣುದ್ದ ಮಾಡಿಕೊಂಡು ಕೇಳಬೇಕಾದರೆ, ಎಷ್ಟು ಕಷ್ಟವಿರಬಹುದು. ಎಂದು ಕೊಂಡೆ ಬಹುಶಃ ಅಣ್ಣನಿಗೂ ಹಾಗೆಯೇ ಅನ್ನಿಸಿರಬಹುದು ಅವರು, ನನ್ನ ನೋಡಿ,

"ರುಕ್ಕು, ಯಾವದಾದರೂ ವಾರ ಖಾಲಿ ಇದೆಯೇ, ಒಳಗೆ ವಿಚಾರಿಸು" ಎಂದರು.

ನನಗೆ ವಾರ ಇದ್ದದ್ದು ಗೊತ್ತಿದ್ದಿತು. ಕೂಡಲೆ,

"ಅಣ್ಣ ಬುಧುವಾರ ಖಾಲಿ ಇದೆ" ಎಂದು ಹೇಳಿದೆ. ನನಗೆ ಹೊಟ್ಟೆ ಹಿಡಿಸಲಾರದಷ್ಟು ಸಂತೋಷ ಆ ಹುಡುಗನಿಗೆ ಸ್ವಲ್ಪ ಸಹಾಯ ಮಾಡುವ ಹಾಗಾಯಿತಲ್ಲ ಎಂದು!

ಅಣ್ಣ ಅವನಿಗೆ ಬುಧುವಾರ ಬರುವಂತೆ ಹೇಳಿದರು. ಅವನು ಹೊರಟು ಹೋದ. ಹೋಗುವಾಗ ಒಂದುಸಲ ಹಿಂತಿರುಗಿ ನನ್ನ ಕಡೆ ನೋಡಿದ ಆ ನೋಟದಲ್ಲಿ ಕೃತಜ್ಞತೆಯು ಹೊರಸೂಸುತ್ತಿತ್ತು.

* * *

ಸ್ಕೂಲಿಗೆ ಹೊತ್ತಾಗಿ ಹೋಗಿತ್ತು. ಇನ್ನೂ ನನ್ನ ಲೆಖ್ಖವೇ ಮುಗಿದಿರ ಲಿಲ್ಲ. ಒಂದು ಲೆಖ್ಖವಂತೂ ಎಷ್ಟು ಸಲ ಮಾಡಿದರೂ ಉತ್ತರವೇ ತಪ್ಪಾಗು ತ್ತಿತ್ತು ಅಮ್ಮ ಊಟಕ್ಕೆ ಕೂಗಿ ಕೂಗಿ ಸಾಕಾದರು ನಾನು ಬೇರೆ ಏಳ ಲಿಲ್ಲ ಲೆಖ್ಖ ಮಾಡಿದ ಹೊರತು ಏಳಬಾರದೆಂದು ನನ್ನ ಹಟ. ಅಷ್ಟು ಹೊತ್ತಿಗೆ ಅನಂತ ಊಟಕ್ಕೆ ಬಂದ ಅವತ್ತು ಅನನ ವಾರ. ನನ್ನ ಒದ್ದಾಟ ವನ್ನು ನೋಡಿದನೆಂದು ಕಾಣುತ್ತೆ.

"ತೆಗೆದುಕೊಂಡು ಬಾಮ್ಮ, ಹೇಳಿಕೊಡುತೀನಿ" ಎಂದ.

ಅವನ ಕೈಲಿ ಹೇಳಿಸಿಕೊಳ್ಳುವುದಕ್ಕೆ, ನನಗೆ ಸ್ವಲ್ಪ ಸಂಕೋಚ ವಾಯಿತು. ಆದರೆ ಇವತ್ತು ಯತ್ನವಿಲ್ಲ. ಸ್ಕೂಲಿಗೆ ಹೊತ್ತಾಗಿ ಹೋಗಿತ್ತು. ಆದರಿಂದ ಅವನ ಕೈಲಿ ಹೇಳಿಸಿಕೊಂಡೆ. ಅನಂತ ಸುಲಭರೀತಿಯಲ್ಲಿ, ಮನಸ್ಸಿಗೆ ಹಿಡಿಯುವಂತೆ, ಒಂದು ನಿಮಿಷದಲ್ಲಿ ಲೆಖ್ಖ ಮಾಡಿಬಿಟ್ಟ.

ನಾನು ಅವತ್ತಿನಿಂದ ಅನಂತ ಬಂದ ದಿನವೆಲ್ಲಾ ಅವನ ಕೈಲಿ ಲೆಖ್ಖ ಹೇಳಿಸಿ

ಕೊಳ್ಳುತ್ತಿದ್ದೆ. ಅದಲ್ಲದೆ ಈಗ ಹೇಳಿಸಿ ಕೊಳ್ಳುವುದಕ್ಕೂ ಮೊದಲಿನಂತೆ ಸಂಕೋಚವಾಗುತ್ತಿರಲಿಲ್ಲ. ಸ್ವಲ್ಪ ಅಭ್ಯಾಸವಾಗಿತ್ತು.

ಇವತ್ತು ಅನಂತ ಒಂದು ತರವಾಗಿದ್ದ. ಏನೋ ಯೋಚನೆ ಮಾಡುತ್ತಿದ್ದಂತೆ ತೋರಿತು. ನಾನು,

"ಯಾಕ ಅನಂತ ಹೀಗಿದ್ದೀ" ಎಂದೆ.

"ಹೇಗಿದ್ದೀನಿ."

"ಸಪ್ಪಗಿರುವ ಹಾಗಿದೆಯಲ್ಲ."

ಅನಂತ ನಕ್ಕು,

"ಸಪ್ಪಗಿದ್ದರೇನಾಯಿತು, ಈಗ ಊಟಮಾಡುವಾಗ ಸ್ವಲ್ಪ ಉಪ್ಪು ಹೆಚ್ಚಾಗಿ ಹಾಕಿಕೊಂಡರಾಯಿತು" ಎಂದ.

"ನೋಡಿದೆಯಾ, ತಮಾಷಿ ಮಾಡುತೀಯಲ್ಲ, ನಿಜವಾಗಿ ಹೇಳು,"

"ಇಲ್ಲ ರುಕ್ಕು ನಿಜವಾಗಿಯೂ ಏನೂ ಇಲ್ಲ."

"ಇಲ್ಲ ಏನೋ ಇದೆ. ನನಗೆ ಹೇಳುವುದಕ್ಕೆ ಇಷ್ಟವಿಲ್ಲವೆಂದು ಹೇಳಬಾರದೇ ?"

"ನೋಡಿದೆಯಾ, ನೀನು ಹಾಗೆ ತಿಳಿದುಕೊಳ್ಳುತ್ತೀಯಲ್ಲ ನನ್ನ ಇಷ್ಟರಮಟ್ಟಿಗೆ ಕೇಳೋರು ಯಾರು ? ನಿನಗೆ ಹೇಳಬಾರದಂಥಾದ್ದೇನೂ ಅಲ್ಲ, ನನಗೆ ರೂಮು ಕೊಟ್ಟಿದ್ದ ಮನೆಯವರು ನಾಳೆಯಿಂದ ಅದನ್ನು ಬಿಟ್ಟು ಬಿಡಬೇಕೆಂದು ಹೇಳಿದರು. ಅದಕ್ಕೆ ಇನ್ನೆಲ್ಲಿ ಹೋಗಲಿ ಎಂದು ಯೋಚನೆ ಮಾಡುತ್ತಿದ್ದೆ."

"ಅದಕ್ಕೇಕೆ ಇಷ್ಟು ಯೋಚನೆ. ಸುಮ್ಮನಿರು ನಾನು ಅಣ್ಣನಿಗೆ ಹೇಳಿ ಬೀದಿಬಾಗಿಲ ರೂಮು ಕೊಡಿಸುತ್ತೇನೆ."

"ಬೇಡಮ್ಮ ನಂಗೋಸ್ಕರ ನೀನು ಹೇಳಬೇಡ."

ಅಣ್ಣ ಒಳಗೆ ಊಟಕ್ಕೆ ಕೂತಿದ್ದವರು,

"ಅದೇನೆ ರುಕ್ಕು. ಜಗಳ ?" ಎಂದು ಕೇಳಿದರು.

"ಜಗಳವಲ್ಲ ಅಣ್ಣ, ಅನಂತ, ಹೇಳಿಬಿಡಲೋ ..."

"ಬೇಡ, ಬೇಡ...."

"ಅದೇನು ಅಷ್ಟೇ ನಿಲ್ಲಿಸಿಬಿಟ್ಟೆ, ಏನು ಅನಂತ ?...."

"ಏನೂ ಇಲ್ಲ ಅಣ್ಣಾ, ಅನಂತನಿಗೆ ರೂಮು ಕೊಟ್ಟಿದ್ದವರು ಬಿಡಿಸಿಬಿಟ್ಟರಂತೆ. ಅದಕ್ಕೆ ನಾನು ಇನ್ನೆಲ್ಲಾದರೂ ಸಿಕ್ಕುವವರೆಗೆ, ನಮ್ಮನೆ ಬೀದಿ ರೂಮನ್ನು ಅಣ್ಣನಿಗೆ ಹೇಳಿ ಕೊಡಿಸುತ್ತೇನೆ ಎಂದೆ. ಅವನು ಬೇಡ ನೀನು ಕೇಳಬೇಡ ಅನ್ನುತ್ತಿದ್ದ ಅಷ್ಟೇ."

"ಅನಂತ, ಇದಕ್ಕೆ ಯಾಕಪ್ಪ ಇಷ್ಟು ಸಂಕೋಚ. ನಿನಗೆ ಸರಿಯಾಗಿ ಜಾಗ ಸಿಕ್ಕುವವರಿಗೂ, ಇಲ್ಲೇ ಇರು ರೂಮು ತೆರವು ಮಾಡಿಸಿಕೊಡುತ್ತೇನೆ ಸಾಯಂಕಾಲಕ್ಕೇ ನಿನ್ನ ಸಾಮಾನನ್ನೆಲ್ಲಾ ತೆಗೆದುಕೊಂಡು ಬಂದುಬಿಡು" ಎಂದು ಅಣ್ಣ ಹೇಳಿದರು

ಅನಂತ ನನ್ನ ಕಡೆ ನೋಡಿದ ನನ್ನ ಮುಖದಲ್ಲಿ ಮುಗುಳು ನಗೆ ಮಾಡಿತು ನನ್ನ ಮಾತು ಗೆದ್ದಿತಲ್ಲ ಎಂದು ನನಗೆ ಆನಾಗಲೇ ಹೆಮ್ಮೆ.

* * *

ಅನಂತ ನಮ್ಮ ಮನೆಗೆ ವಾಸಕ್ಕೆ ಬಂದು ಒಂದು ವಾರವಾಯಿತು ಆದರೆ ನಮ್ಮ ಮನೆಯಲ್ಲಿ ಊಟಮಾಡುತ್ತಿದ್ದುದು ಒಂದೇ ದಿವಸ ಬಾಕಿ ಆರುದಿನವೂ ಇನ್ನೆಲ್ಲಿಗೋ ಹೋಗುತ್ತಿದ್ದನು.

ಅವನು ಬಂದಮೇಲೆ ನನಗೆ ಪಾಠ ಹೇಳಿಸಿಕೊಳ್ಳುವುದಕ್ಕೆ ಬಹಳ ಅನುಕೂಲವಾಯಿತು. ಸಾಯಂಕಾಲ ಸ್ಕೂಲಿನಿಂದ ಬಂದಮೇಲೆ ಸ್ನೇಹಿತರ ಮನೆಗೂ ಕೂಡ ಹೋಗುತ್ತಿರಲಿಲ್ಲ ಅವನ ಕೈಲಿ ಮಾತಾಡುತ್ತಿದ್ದರೆ, ಹೊತ್ತು ಹೋದದ್ದೇ ಗೊತ್ತಾಗುತ್ತಿರಲಿಲ್ಲ.

ನನಗೊಬ್ಬಳಿಗೇ ಅಲ್ಲ. ಈಗ ಮನೆಯಲ್ಲಿ ಅನಂತ ಎಲ್ಲರಿಗೂ ಹಾಗೆ ಆಗಿದ್ದ. ಸಮಯ ಬಿದ್ದಾಗ ಅಮ್ಮ ಅವನನ್ನು ಅಂಗಡಿಗೆ ಕಳಿಸುತ್ತಿದ್ದರು. ತರುವ ಸಾಮಾನು ಚೆನ್ನಾಗಿಯೂ, ಅಗ್ಗವಾಗಿಯೂ, ಇರುತ್ತೆಂದು ಅವರಿಗೆ ಮೆಚ್ಚುಗೆ, ಆಫೀಸಿನಲ್ಲಿ ಹೆಚ್ಚು ಕೆಲಸ ಬಿದ್ದಾಗ ಅಣ್ಣ ಏನಾದರೂ ಬರಿಸುತ್ತಿದ್ದರು. ಅಕ್ಷರ ಚೆನ್ನಾಗಿದೆ, ನೀಟಾಗಿ ಬರೆಯುತ್ತಾನೆ, ಎಂದು ಅಣ್ಣನಿಗೆ ಸಮಾಧಾನ. ಮುದುಕಿ ಎಂದು ಉಪೇಕ್ಷೆಮಾಡದೆ, ತನ್ನ ಕೈಲಿ ಎಷ್ಟೋ ವಿಶ್ವಾಸವಾಗಿ ಮಾತಾಡುತ್ತಾನೆ, ವಿನಯಶಾಲಿ, ಎಂದು ಅಜ್ಜಿಗೆ ಸಂತೋಷ. ಅಂತೂ ಅನಂತ ಎಲ್ಲರಿಗೂ ಬೇಕು.

ಹೀಗಾಗಿ ಅನಂತ ಸಧ್ಯಕ್ಕೆಂದು ಬಂದವನು ಖಾಯಂ ಆದ. ಬೇರೆ ಜಾಗ ನೋಡೆಂದು ಅವನಿಗೆ ಯಾರೂ ಹೇಳಲಿಲ್ಲ. ಅವನೂ ಆ ಯೋಚನೆ ಮಾಡಲಿಲ್ಲ.

ಗೋಕುಲಷ್ಟಮಿ ತಿಂಡಿ ತಟ್ಟೆತುಂಬ ತುಂಬಿಕೊಂಡು ತಿನ್ನುತ್ತಿದ್ದೆ. 'ನಿಧಾನವಾಗಿ ತಿನ್ನು ಇನ್ನೂ ಸ್ಕೂಲಿಗೆ ಹೊತ್ತಿದೆ' ಎಂದು ಅಜ್ಜಿ ಅಮ್ಮ ಇಬ್ಬರೂ ಉಪಚಾರ ಹೇಳುತ್ತಿದ್ದರು ನನಗೆ ಯಾಕೋ ತಟಕ್ಕನೆ ಅನಂತನ ಜ್ಞಾಪಕ ಬಂತು ಅಯ್ಯೋ ಪಾಪ! ಅವನಿಗೆ ತಿಂಡಿ ಕೊಟ್ಟು, ಹೀಗೆ ಉಪ ಚಾರ ಮಾಡೋರು ಯಾರು? ಚಿಕ್ಕತನವಲ್ಲಿಯೇ ತಬ್ಬಲಿಯಾದವನಿಗೆ ಇವೆಲ್ಲ ಎಲ್ಲಿ ಬರಬೇಕು? ಮಧ್ಯಾಹ್ನ ಇಷ್ಟು ಉಂಡು ಹೋದರೆ, ರಾತ್ರಿವರಿಗೂ ಏನೂ ತಂಟೆ ಇಲ್ಲ ಎಷ್ಟು ಹಸಿವಾಗುತ್ತೋ! ಅವನೂ ನಮ್ಮಂತೆ ಅಲ್ಲವೇ ಅಂದುಕೊಂಡೆ. ಇನ್ನು ತಿನ್ನುವುದಕ್ಕೆ ಮನಸ್ಸು ಬರಲಿಲ್ಲ ಹಾಗೆಯೇ ತಟ್ಟೆ ಹಿಡಿದುಕೊಂಡು ಎದ್ದೆ

"ಇದೇನೆ, ತಿನ್ನೋ ಎಂದರೂ, ಹಾಗೇ ಹೊರಟು ಹೋಗುತ್ತಿ."

ಎಂದು ಅಜ್ಜಿ ಕೇಳಿದರು.

"ಇಲ್ಲ ಹೊತ್ತಾಗಿ ಹೋಯಿತು. ನನ್ನ ಹತ್ತಿರ ಇಟ್ಟುಕೊಂಡಿರುತ್ತೀನಿ, ಸಾಯಂಕಾಲ ತಿನ್ನುತ್ತೀನಿ" ಅಂದುಬಿಟ್ಟೆ.

ಸಾಮಾನ್ಯವಾಗಿ ಅವತ್ತಿನಿಂದ ನಾನು ಅನಂತನಿಗೆ ಕೊಡದೆ ಏನನ್ನೂ ತಿನ್ನುತ್ತಿರಲಿಲ್ಲ. ನನಗೆ ಕೊಟ್ಟಿದ್ದರಲ್ಲಿ ಅರ್ಧ ಮುಚ್ಚಿಟ್ಟದ್ದು, ಅವನಿಗೆ ಕೊಡುತ್ತಿದ್ದೆ

ಮೊದಲು ಮೊದಲು ಅವನು ತಿನ್ನುತ್ತಿರಲಿಲ್ಲ. ನಾನು ಬಲವಂತ ಮಾಡಿದೆ, ಆಣೆ ಇಟ್ಟೆ ಕೊನೆಗೆ,

"ನಾನು ಎಷ್ಟೋ ಆಸೆಯಿಂದ ಕೊಡುತ್ತೀನಿ. ನೀನು ಹೀಗೆ ಮಾಡಿದರೆ ಅಳುಬರುತ್ತಪ್ಪ." ಎಂದೆ, ಆಗ ಯತ್ನವಿಲ್ಲದೆ ತಿನ್ನುತ್ತಿದ್ದ.

ಅನಂತನಿಗೆ ಯಾಕೊ ಮೂರು ನಾಲ್ಕು ದಿನದಿಂದ ಮೈಯಲ್ಲಿ ಚೆನ್ನಾಗಿರಲಿಲ್ಲ. ಅವನು ಮೊದಲು ಯಾರಿಗೂ ಹೇಳಲೇ ಇಲ್ಲ. ಹಾಗೇ ಓಡಾಡಿಕೊಂಡಿದ್ದ. ಕೊನೆಗೆ ಜ್ವರ ಜಾಸ್ತಿಯಾಯಿತು. ಹಾಸಿಗೆ ಹಿಡಿದು ಮಲಗಿಬಿಟ್ಟ. ನಾನು ನೋಡಿದವಳೇ ಓಡಿಹೋಗಿ ಅಣ್ಣನಿಗೆ ಹೇಳಿದೆ.

ಅವರೂ ಬಂದು ನೋಡಿ,

"ಯಾಕಪ್ಪ ಹೀಗೆ ಮಾಡಿದೆ? ರೋಗ ಮುಚ್ಚುತ್ತಾರೆಯೆ? ಈಗಲೂ ಸಿದ್ದಣ್ಣ ಆಸ್ಪತ್ರೆಗೆ ಕಳಿಸಿ ಔಷಧಿ ತರಿಸು ಚೆನ್ನಾಗಿ ಹುಷಾರಾಗುವವರೆಗೂ ಎಲ್ಲಿಗೂ ವಾರಕ್ಕೆ ಹೋಗಬೇಡ. ಗಂಜಿಯೋ, ಹಾಲೋ ಏನು ಬೇಕೋ ಅದನ್ನು ಇಲ್ಲೇ ತೆಗೆದುಕೊ. ರುಕ್ಕೂ ಅಮ್ಮನಿಗೆ ಹೇಳಿ ಗಂಜೀ ಮಾಡಿಸಿ ತಂದುಕೊಡೆ" ಎಂದು ನನಗೆ ಹೇಳಿದರು.

ಎಂಟು ದಿವಸ ಜ್ವರ ಒಂದೇ ಸಮನಾಗಿತ್ತು. ಬಿಡುವ ದಿನವಂತೂ, ವಿಪರೀತ ಸಂಕಟ. ಆ ಒದ್ದಾಟವನ್ನು ನೋಡಿ ನನಗೆ ಅಳು ಬರುತ್ತಿತ್ತು. ಪಾಪ ನಿರಾಧಾರಿ ಯಾರ ಕೈಲಿ ಹೇಳಿಕೊಳ್ಳಬೇಕು ?

ಮೂರನೇ ದಿನದಿಂದ ಇಳಿಮುಖಕ್ಕೆ ಬಂತು. ಐದಾರು ದಿನದಲ್ಲಿ ಎದ್ದು ಕೂತುಕೊಳ್ಳುವಂತೆ ಆದ. ಇನ್ನೂ ಓಡಾಡುವುದಕ್ಕೆ ಆಗುತ್ತಿರಲಿಲ್ಲ.

ಅಜ್ಜಿ ತಿಳೀ ಸಾರು ಅನ್ನ ತಟ್ಟೆಗೆ ಹಾಕಿ ಕಲಸಿಕೊಟ್ಟರು. ತೆಗೆದು ಕೊಂಡು ಅನಂತ ಮಲಗಿದ್ದ ಕಡೆಗೆ ಹೋದೆ. ಅವತ್ತೆ ಇನ್ನೂ ಅನ್ನ ಕೊಟ್ಟಿದ್ದು. ಊಟಮಾಡಿದ. ನಾನು ಹೊರಡುವುಕ್ಕೆ ಎದ್ದೆ 'ರುಕ್ಕೂ' ಎಂದು ಕೂಗಿದ.

"ಏನು ?"

"ರುಕ್ಕೂ, ನೀನು ಯಾವ ಜನ್ಮದ ತಾಯಿಯೋ, ನನಗಾಗಿ ಎಷ್ಟು ಒದ್ದಾಡುತ್ತೀ. ಈ ಉಪಕಾರವನ್ನು ನಾನು ಹೇಗೆ ತೀರಿಸಲಿ ? ಪ್ರಪಂಚದಲ್ಲಿ ಸ್ನೇಹ, ಮಮತೆ, ಎಂದರೆ ಏನು ಎಂಬುದನ್ನೇ ತಿಳಿಯದಿದ್ದ ನನಗೆ ಅದರ ಪರಿಚಯ ಮಾಡಿಕೊಟ್ಟೆ. ಆದರೆ ಅನಾಥರನ್ನು ಕಂಡರೆ ಇಷ್ಟು ಮಮತೆ ಯುಳ್ಳವರು ಇದ್ದಾರೆಂದು ಕನಸಿನಲ್ಲಿಯೂ, ನಾನು ತಿಳಿದಿರಲಿಲ್ಲ "

ಈ ಮಾತು ಹೇಳುತ್ತಿದ್ದಾಗ ನನ್ನ ಕೈಮೇಲೆ ಎರಡು ತೊಟ್ಟು ನೀರು ಬಿತ್ತು. ಕತ್ತೆತ್ತಿ ನೋಡಿದೆ ಅನಂತ ಅಳುತ್ತಿದ್ದ. ಎರಡು ಕಣ್ಣಿನಲ್ಲೂ ನೀರು ಧಾರಾಕಾರವಾಗಿ ಹರಿಯುತ್ತಿತ್ತು.

ಯಾವುದು ಅವನನ್ನು ಅಳುವಂತೆ ಮಾಡಿತೋ ನನಗೆ ಗೊತ್ತಾಗಲಿಲ್ಲ. ಏನು ಹೇಳುವುದಕ್ಕೂ ತೋರಲಿಲ್ಲ. ಸುಮ್ಮನೆ ಬಂದುಬಿಟ್ಟೆ.

* * *

ಅನಂತನಿಗೆ ಪರೀಕ್ಷೆಯಲ್ಲಿ ಫಸ್ಟ್ ಕ್ಲಾಸಿನಲ್ಲಿ ಪ್ಯಾಸಾಗಿತ್ತು. ಮುಂದಕ್ಕೆ ಮೆಡಿಕಲ್ ಕಾಲೇಜು ಸೇರಿದ. ಅಣ್ಣ ಯಾರ್ಯಾರಿಗೋ ಹೇಳಿ ಫ್ರೀಷಿಪ್ ಮಾಡಿಸಿಕೊಟ್ಟರು. ಅದಲ್ಲದೆ ಅವನು ಖಾಯಿಲೆ ಬಿದ್ದಾಗಿನಿಂದ ಅವನಿಗೆ ಬಾಕಿ ಕಡೆ ಊಟಕ್ಕೆ ಹೋಗುವುದನ್ನು ತಪ್ಪಿಸಿಬಿಟ್ಟು,

"ನೀನು ಇಲ್ಲಿಯೇ ಇದ್ದುಬಿಡು ನಿನ್ನಿಂದ ನಮಗೇನೂ ಹೊರೆಯಿಲ್ಲ ಹೇಗೋ ನೀನೊಂದುದಡ ಸೇರಿದರೆಸಾಕು,"

ಎಂದು ಅಣ್ಣ ಅವನನ್ನು ಮನೇಲೇ ಇರಿಸಿಕೊಂಡರು. ಆಗಿನಿಂದಂತೂ ಅವನು ನೆರಮನೆಯವನೆಂಬ ಭಾವನೆಯೇ ಒಬ್ಬರಿಗೂ ಉಳಿಯಲಿಲ್ಲ

ಈ ಮಧ್ಯೆ ನನ್ನ ಮದುವೆ ಗಲಾಟೆ ಬೇರೆ ಎದ್ದಿತು ಅಣ್ಣ ಹೆಣ್ಣುಮಗಳೆಂದು ನನಗೆ ಕೇವಲ ಚಿಕ್ಕ ವಯಸ್ಸಿನಲ್ಲಿ, ಮದುವೆ ಮಾಡುವಷ್ಟು, ಹಳೇ ಪದ್ಧತಿಯವರಾಗಿರಲಿಲ್ಲ ಈಗಲೂ ಅವರಿಗೆ ಇಷ್ಟವಿಲ್ಲ, ಇನ್ನೂ ಎರಡು ವರ್ಷವಾಗಲಿ, ಅಷ್ಟು ಹೊತ್ತಿಗೆ ಹದಿನಾರು ವರ್ಷವಾಗುತ್ತೆ,ಅವಳು ಓದಿದ್ದೂ ಮುಗಿಯುತ್ತೆ, ಎಂದು ಅಜ್ಜಿಗೆ ಎಷ್ಟೋ ಹೇಳಿದರು. ಇದರೆ ಅಜ್ಜಿ ಒಪ್ಪಲಿಲ್ಲ. ಅವರು,

"ನಾನೂ ೩-೪ ವರ್ಷದಿಂದಲೂ ಮಾಡು ಎಂದು ಹೇಳುತ್ತಿದ್ದೇನೆ ಇನ್ನೂ ಎಷ್ಟುದಿನ ತಳ್ಳುತ್ತೀ, ಇಷ್ಟಕ್ಕೂ ಅವಳೇನು ಆಡೂ ಹುಡುಗಿಯೆ? ಆಗಲೇ ಹದಿನಾಲ್ಕು ವರ್ಷ. ನಮ್ಮ ಕಾಲದಲ್ಲಿ ಇಷ್ಟುದಿನಕ್ಕೆ ಎರಡು ಮಕ್ಕಳಿರುತ್ತಿದ್ದವು ಏನೋ ನೀನೊಂದು ಕನ್ಯಾದಾನ ಮಾಡಿದ್ದನ್ನು ನೋಡಿ ಪ್ರಾಣ ಬಿಡಬೇಕೂ, ಅಂತೀನಿ. ಈ ಮುದಿಗೂಬೆ ಮಾತು ಕೇಳೋರ್ಯಾರು ?" ಎಂದು ಸ್ವಲ್ಪ ಸಿಟ್ಟಿನಿಂದಲೇ ಹೇಳಿದರು. ಅಂತೂ ಅಜ್ಜಿ ಹಟವೇ ಗೆದ್ದಿತು. ಅಣ್ಣ ಯತ್ನವಿಲ್ಲದೆ ಇವತ್ತೋ ನಾಳೆಯೋ ಸಾಯುವ ಮುದುಕಿ, ಅವರನ್ನು ಯಾಕ ನೋಯಿಸಬೇಕು ? ಎಂದು ಒಪ್ಪಿಬಿಟ್ಟರು.

ಒಂದು ದಿನ ಅನಂತ ನನ್ನೊಡನೆ, "ರುಕ್ಕೂ ಶುಭ ವರ್ತಮಾನವನ್ನು ಕೇಳಿದೆ," ಎಂದ.

"ಏನು ?"

"ನಿನಗೆ ಮದುವೆ ನಿಶ್ಚಯವಾಯಿತಂತೆ."

"ಅದಕ್ಕೇಕೆ ಇಷ್ಟು ಸಂತೋಷ ?"

"ಸಂತೋಷವಲ್ಲವೇ, ಮತ್ತೆ ? ನಿನ್ನ ವರನಿಗೆ 'ಸಿವಿಲ್ ಸರ್ವಿಸ್' ಆಗಿದೆಯಂತೆ, ಬೆಳಗಾದರೆ ನೀನು ಆಫೀಸರ ಹೆಂಡತಿಯಾಗುವಿ. ನನಗೆ ಅದ ಕಿಂತಲೂ ಹೆಚ್ಚಾಗಿ ಏನುಬೇಕು ? ನೀನು ಸುಖವಾಗಿ ಸಂಸಾರ ಮಾಡಿಕೊಂ ಡಿರುವುದನ್ನು ನೋಡುವುದಕ್ಕಿಂತ ಹೆಚ್ಚಾದ ಸಂತೋಷ ನನಗೆ ಮತ್ತೊಂದಿಲ್ಲ." ಎಂದ. ಅವನೇನೋ ಸಂತೋಷವಾಗಿಯೇ ಇದ್ದ. ಹೃದಯದ ಆನಂದವು ಮುಖದಲ್ಲಿ ಒಡೆದು ಕಾಣುತ್ತಿತ್ತು. ಅಂತೂ ನನ್ನ ಮನಸ್ಸು ಮಾತ್ರ ಏನೋ ಒಂದು ಬಗೆಯಾಗಿತ್ತು.

ಮದುವೆಯಾದಮೇಲೆ ನಾನು ಅತ್ತೆಮನೆಗೆ ಹೊರಟು ಹೋದೆ. ಹೊರ ಡುವ ದಿನ ಸ್ಟೇಷನ್ನಿಗೆ ಅಣ್ಣನ ಜೊತೆಯಲ್ಲಿ ಅನಂತನೂ ಬಂದಿದ್ದ ರೈಲು ಹೊರಡುವ ಸಮಯವಾಯಿತು. ಅಣ್ಣನ ಬಾಯಲ್ಲಿ ಮಾತೇ ಇಲ್ಲ ಅವರು ಮಾತಾಡುವ ಸ್ಥಿತಿಯಲ್ಲಿರಲಿಲ್ಲ. ಎರಡು ಕಣ್ಣಿನಲ್ಲಿಯೂ ನೀರು ತುಂಬಿತ್ತು. ನನಗೂ ಮನಸ್ಸಿನಲ್ಲಿ ಒಂದು ತರಹ ಕಳವಳ. ಆದರೂ ನಾನೇ ಸಮಾಧಾನ ಮಾಡಿಕೊಂಡು,

"ಅಣ್ಣ ಹೋಗಿಬರುತ್ತೇನೆ, ಅನಂತ ಜಾಪಕವಿರಲಿ" ಎಂದೆ

"ರುಕ್ಕೂ ನಿನ್ನನ್ನು ಮರೆಯುವುದು ಸಾಧ್ಯವೇ! ನಿನಗೂ ಜ್ಞಾಪಕವಿರಲಿ.... ..."

ಅನಂತನ ಮಾತು ಬಾಯಲ್ಲೇ ಇತ್ತು. ರೈಲು ಹೊರಟುಬಿಟ್ಟಿತು.

* * *

ಈಚೆಗೆ ಅನಂತನನ್ನು ನೋಡಿಯೇ ಇರಲಿಲ್ಲ. ಬಹಳ ದಿವಸವಾಗಿತ್ತು. ಇವರಿಗೆ ಕೆಲಸವಾಗಿ ನಮ್ಮ ಚಿಕ್ಕ ಸಂಸಾರವನ್ನು ಹೂಡಿದಮೇಲೆ, ವಿಶೇಷವಾಗಿ ತೌರುಮನೆ ಕಡೆ ಹೋಗುವುದಕ್ಕೇ ಆಗಲಿಲ್ಲ ಅಗಲೇ ಸಂಸಾರ ತಾಪತ್ರಯ.

ಅಣ್ಣ ಮಾತ್ರ ಕಾಗದದಲ್ಲಿ, ಅನಂತನ ಓದು ಮುಗಿಯಿತೆಂದೂ, ಈಗ ಡಾಕ್ಟರಾಗಿದಾನೆಂದೂ" ಬರೆದಿದ್ದರು

ಇವರಿಗೆ ತುಮಕೂರಿಗೆ ವರ್ಗವಾಯಿತು. ಅಲ್ಲಿಗೆ ಹೋದಮೇಲೆ, ಅನಂತ ಅಲ್ಲಿ ಡಾಕ್ಟರಾಗಿದ್ದಾನೆಂದು ತಿಳಿಯಿತು. ನಾವು ಈ ಊರಿಗೆ

ಬಂದಿರುವುದು ತಿಳಿದರೆ, ಅನಂತ ನನ್ನನ್ನು ನೋಡುವುದಕ್ಕೆ ಬಂದೇ ಬರುತ್ತಾನೆ ಅವನದು ವಿಶ್ವಾಸಿಕ ಹೃದಯ ನನ್ನನ್ನು ಮರೆಯುವ ಹಾಗಿಲ್ಲ ಅಂದು ಕೊಂಡೆ.

ನನ್ನ ಊಹೆಯೇ ನಿಜವಾಯಿತು. ಸಾಯಂಕಾಲ ಅನಂತ ತನ್ನ ಹೆಂಡತಿಯನ್ನೂ ಕರೆದುಕೊಂಡು ಗಾಡಿಯಲ್ಲಿ ನಮ್ಮ ಮನೆಗೆ ಬಂದ. ಕಂಕು ಳಲ್ಲಿ ಒಂದು ಮಗು ಬಲು ಮುದ್ದಾಗಿತ್ತು

ಯಾವ ಅನಂತ ನಾನು ಹಿಂದಿನ ಸಲ ನೋಡಿದಾಗ, ಇನ್ನೂ ಹುಡುಗ ನಂತೆ ಹೇಳಿದ ಕೆಲಸಗಳನ್ನು ಮಾಡಿಕೊಂಡು ನಮ್ಮನೆಯಲ್ಲಿ ಇರುತ್ತಿದ್ದನೋ ಈಗ ಅವನೆಲ್ಲಿ ? ಅವನೂ ಒಬ್ಬ ಗಣ್ಯನಾದ ಸಂಸಾರಿ ಅವನ ಈ ಅನುಕೂಲ ಸ್ಥಿತಿಯನ್ನು ಕಂಡು, ನನಗೆ ತುಂಬ ಸಂತೋಷವಾಯಿತು.

ಅವನ ಸ್ಥಿತಿಯೂ ಹಾಗೇ ಆಗಿತ್ತು. ನನ್ನನ್ನು ನೋಡಿ ಸಂತೋಷದಿಂದ ಅವನಿಗೆ ಮಾತೇ ಆಡುವುದಕ್ಕೆ ತೋರದು.

ನಾನೇ ಮೊದಲು, "ಅನಂತ, ಮಗುವಿಗೆ ಏನು ಹೆಸರಿಟ್ಟಿದ್ದಿ" ಎಂದು ಕೇಳಿದೆ.

"ರುಕ್ಮಿಣೀ, ಅಂತ"

"ಅದೇಕೆ, ಇನ್ನ್ಯಾವುದೂ ಚೆನ್ನಾಗಿರುವ ಹೆಸರು ತೋರಲಿಲ್ಲವೇ ?"

"ರುಕ್ಕೂ, ಸಾಮಾನ್ಯವಾಗಿ ಹೆಸರು, ಮುದ್ದಾಗಿ ಕೇಳುವುದಕ್ಕೆ ಚೆನ್ನಾ ಗಿರಬೇಕು. ಇಲ್ಲ, ಯಾರಾದರೂ ನೆನಪಿನದಾಗಿರಬೇಕು. ನನಗೇನೋ ಮುದ್ದಾದ ಹೆಸರಿಗಿಂತ ಮಮತೆಯ ಕುರುಹಾದ ಈ ಹೆಸರೇ ಚೆನ್ನಾಗಿದೆ."

ಅನಂತನಿಗೆ ನಾನು ಅವನು ಭಾವಿಸಿರುವಷ್ಟು ಉಪಕಾರವನ್ನೇನೂ ಮಾಡಿರಲಿಲ್ಲ. ಅವನು ಹೃದಯದ ಸರಳತೆಯಿಂದ ಸ್ವಲ್ಪವೇ ಬೆಟ್ಟದಷ್ಟಾಗಿತ್ತು. ಅವನ ಕೃತಜ್ಞತಾಪೂರ್ವಕವಾದ ಮಾತಿಗೆ ಏನು ಬದಲು ಹೇಳಲಿ ? ಏನೂ ತೋರಲಿಲ್ಲ.

ಸುಮ್ಮನೆ ಮಗುವಿನ ಕಡೆ ಕೈನೀಡಿ, "ಬಾಮ್ಮ" ಎಂದೆ.

ಮಗುವು ನಗುತ್ತಾ ಇಳಿ ಬಿತ್ತು.

# ಸಂಜೀವಿನಿ

ಊರೇನೋ ಸುಮಾರಾಗಿ ದೊಡ್ಡದಾಗಿತ್ತು. ತಾಲೋಕಿನ ಮುಖ್ಯ ಸ್ಥಳ. ರೈಲು ಬಸ್ಸು ಎಲ್ಲ ಸೌಕರ್ಯವೂ ಇತ್ತು. ಆದರೂ ಆ ಊರಿಗೆ ವರ್ಗವಾಗಿ ಬರುವುದೆಂದರೆ ಸರ್ಕಾರದ ಕೆಲಸದಲ್ಲಿರುವವರು ಹಿಂದೇಟು ಹಾಕುತ್ತಿದ್ದರು. ತಮಗೆ ಬೇಕಾದವರ ಕೈಕಾಲು ಕಟ್ಟಿ, ಮೇಲಿನವರಿಗೆ ಶಿಫಾರಸು ಮಾಡಿಸಿ, ಬೇರೆ ಕಡೆಗೆ ಹೋಗಲು ಪ್ರಯತ್ನಪಡುತ್ತಿದ್ದುದೇ ಹೆಚ್ಚು

ಕಾರಣ?

ಮತ್ತೇನೂ ಇಲ್ಲ ಅದೊಂದು 'ಮಲೇರಿಯ'ಕ್ಕೆ ಹೆಸರಾದ ಕೊಂಪೆ. ಯಾರೇ ಬರಲಿ ಅದನ್ನು ಎದುರಿಸಲೇ ಬೇಕು. ಛಳಿ, ಜ್ವರದಿಂದಾಗಿ ತಿಂಗಳಿಗೆ ಐದಾರು ದಿವಸಗಳು ರಜ ಬೀಳಲೇಬೇಕು.

ಹಾಗೆಂದು ಸರ್ಕಾರದ ಯಂತ್ರ ಉರುಳುವುದು ನಿಲ್ಲುವಂತಿಲ್ಲವಲ್ಲ! ಅದು ತಿರುಗಲೇ ಬೇಕು. ಒಬ್ಬ ನೌಕರ ಉಪಾಯವಾಗಿ ಅದರ ಹಿಡಿತಕ್ಕೆ ಸಿಗದೆ ತಪ್ಪಿಸಿಕೊಂಡರೆ, ಮತ್ತೊಬ್ಬ ನಿರ್ವಾಹವಿಲ್ಲದೆ ಅದಕ್ಕೆ ಕೈ ಕೊಡಲೇಬೇಕು.

ನಾರಾಯಣಮೂರ್ತಿಗೆ ಅಲ್ಲಿಗೆ ವರ್ಗವಾದಾಗ ಅವನು ವಿರೋಧಿಸಲೇ ಇಲ್ಲ.

"ಇದಕ್ಕೆಲ್ಲ ಯಾರ ಮುಂದೆ ಹಲ್ಲು ಕಿರಿಯೊದು? ಊರು ಎಂದ ಮೇಲೆ ಜನ ಇರುವುದಿಲ್ಲವೆ? ಹತ್ತು ಜನಕ್ಕೆ ಆವದ್ದು ನಮಗೂ ಆಗುತ್ತೆ."—ಎಂದು ಕೊಂಡು ಉದಾಸೀನವಾಗಿಯೆ ಇದ್ದ, ಅವನು ಸುಮ್ಮನಿದ್ದರೆ ಅವನ ಹೆಂಡತಿ?

"ಏನಾದರೂ ಮಾಡಬಾರ್ದೆ? ಆ 'ಮಲೇರಿಯ'ದ ಕೊಂಪೆಗೆ ಯಾಕೆ ಹೋಗಬೇಕೋ? ತಿಳಿದು ತಿಳಿದೂ...."

—ಎಂದು ರಾಗ ಎಳೆದಳು ಯಶೋದ.

"ಯಾಕೆ ಎಂದರೆ? ಸರ್ಕಾರದ ಸಂಬಳಕ್ಕೆ ಕೈ ಒಡ್ಡಿಲ್ಲವೆ?"

ನಾರಾಯಣ ಮೂರ್ತಿ ಶಾಂತವಾಗಿ ಉತ್ತರಿಸಿದ.

ಸರ್ಕಾರದ ಕೆಲಸ ನಡೀತಿರೋದು ಅದು ಒಂದೇ ಕಡೆಯೇ ? ಅವರು ಕೊಡೋ ದುಡ್ಡಿಗೆ ಎಲ್ಲೋ ಒಂದು ಕಡೆ ದುಡಿದರೆ ಸರಿ "

"ನಿನ್ನ ವಾದ ಒಪ್ಪಿದೆ ಆದರೂ...."

"ಬೆಂಗಳೂರಿನಲ್ಲಿ ನಿಮ್ಮ ಚಿಕ್ಕಪ್ಪ ಇದಾರಲ್ಲ. ಅವರಿಗೊಂದು ಕಾಗದ ಹಾಕಿ. ಅವರು ಮನಸ್ಸು ಮಾಡಿದರೆ ಸುಲಭದಲ್ಲಿ ಬೇರೆ ಊರಿಗೆ ಮಾಡಿಸಿ ಕೊಡ್ತಾರೆ."

"ಮನಸ್ಸು ಮಾಡಬೇಕಲ್ಲ "

"ಅವರಿಗೆ ಕೇಳಿದರೆ ತಾನೇ ಮಾಡೋದು. ನೀವೇ ಇಷ್ಟು ಹಿಂದು ಮುಂದು ನೋಡ್ತೀರಿ, ಮಂತ್ರಿಗಳ ಹತ್ತಿರವೆಲ್ಲ ಅವರ ಮಾತಿಗೆ ಪುರಸ್ಕಾರ ವಿದೆಯೆಂದು ನೀವೇ ಹೇಳ್ತಿದ್ರಿ !"

"ಇಲ್ಲವೆಂದೋರು ಯಾರು? ಇಷ್ಟು ಸಣ್ಣ ಕೆಲಸಕ್ಕೆ ಆ ದಾಕ್ಷಿಣ್ಯ ಖರ್ಚು ಮಾಡಿಕೋಬಾರದು. ಮುಂದೆ ಅಂತಹ ಕಾಲ ಬಂದಾಗ ನೋಡೋಣ."

"ಹಾಗಾದ್ರೆ . ..ಈಗ ಅಲ್ಲಿಗೆ ಹೊಗೋದೂ ಎಂತ ತೀರ್ಮಾನ ಮಾಡಿಬಿಟ್ಟೇದ್ದೀರಿ "

"ಹೂಂ . ಮಾಡಿದ ಹಾಗೇ ಅನ್ನು."

"ಇನ್ನು ನಿಮ್ಮ ಮುಂದೆ ಏನು ಹೇಳಿದರೂ ಉಪಯೋಗವಿಲ್ಲ "

"ಕೋಪಿಸಿಕೋ ಬೇಡ್ವೆ, ಇಲ್ಲಿ ಸ್ವಲ್ಪ ಕೇಳು. ಇನ್ನೊಂದು ವಿಚಾರ ನೀನು ಯೋಚಿಸಿಯೇ ಇಲ್ಲ."

"ಯೋಚಿಸೋದಕ್ಕೆ ಇನ್ನೇನಿದೆ?"

"ಈಗಅಲ್ಲಿಗೆ ಹೋಗೋದನ್ನ ತಪ್ಪಿಸಿಕೊಳ್ಳೋದು ಅಷ್ಟೇನೂ ಕಷ್ಟವಲ್ಲ. ಆದರೆ ಮುಂದೆ ಎಂದಾದರೂ ಒಂದು ಸಲ ನಮ್ಮ ಸರದಿ ಬಂದೇ ಬರುತ್ತೆ. ಮುಂದೆ ತಳ್ಳೋದಕ್ಕಿಂತ ಮೈಲಿ ರಕ್ತಬಲ ಚೆನ್ನಾಗಿರುವಾಗಲೇ ಇದನ್ನೆಲ್ಲ ಮುಗಿಸಿಬಿಡೋದು ವಾಸಿ"

—ನಾರಾಯಣಮೂರ್ತಿ ಸಮಜಾಯಿಷಿ ಮಾಡಿದ.

ಯಶೋದ ಮೊದಲು ವಿರೋಧಿಸಿದ್ದರೂ ಊರನ್ನು ನೋಡಿದಮೇಲೆ ಅವಳಿಗೆ ಸಂತೋಷವೇ ಆಯ್ತು. ಮನೆ ಬಾಡಿಗೆ ಕಡಿಮೆ. ಹಾಲು ಮೊಸರು ತರಕಾರಿ ಎಲ್ಲ ಸಮೃದ್ಧಿಯಾಗಿ ಸಿಕ್ಕುತಿತ್ತು.

ಮನೆಯೂ ಇದ್ದುದರಲ್ಲಿ ಅಣಿಯಾಗಿದ್ದು ಮನೆಯ ಸುತ್ತ ಹೂವಿನ ಗಿಡಬಳ್ಳಿಗಳು ಇದ್ದುವು.

ಊರಿನಿಂದ ತಂದ ಸಾಮಾನುಗಳನ್ನೆಲ್ಲ ಬಿಚ್ಚಿ, ಜೋಡಿಸಿಟ್ಟು, ಎಲ್ಲ ಒಂದು ಹದಕ್ಕೆ ಬರಬೇಕಾದರೆ ಒಂದುವಾರವಾಗಿತ್ತು. ಈ ನಡುವೆ ನೆರೆಮನೆ ಯಾಕೆ ತಾನಾಗಿ ಮಾತಾಡಿಸಿ, ಗುರುತುಮಾಡಿಕೊಂಡು ಒಂದೆರಡು ಸಲ ಬಂದಿದ್ದಳು.

"ಯಶೋದಾಬಾಯಿ, ಆಯಿತೇನ್ರಿ ಕೆಲಸ?"

—ಎನ್ನುತ್ತ ಆಕೆ ಒಳಗೆ ಬಂದಾಗ ಯಶೋದ ಕೆಲಸವನ್ನೆಲ್ಲ ಮುಗಿಸಿ ಕಾಲು ನೀಡಿ ಕುಳಿತಿದ್ದಳು.

"ಬನ್ನಿ ಬನ್ನಿ, ಇಷ್ಟು ಹೊತ್ತಿನಲ್ಲಿ ಏನು ಕೆಲಸ? ಏನಿದ್ದರೂ ಬೆಳಗ್ಗೆ. ಉಸಿರಾಡೋದಕ್ಕೂ ಹೊತ್ತು ಇರೋದಿಲ್ಲ. ಅವರು ಊಟಮಾಡಿ ಆಫೀಸಿಗೆ ಹೋದರೆಂದರೆ, ಇನ್ನೂ ಸಂಜೆ ನಾಲ್ಕುವರೆಯುವರೆಗೂ ಭಯವಿಲ್ಲ. ಮತ್ತೆ ಸಂಜೆ ಅದೇ ಹಾಡು. ಅದಕ್ಕೇ ನಾನು ಬಿಸಿಲಾದರೂ ಈ ಹೊತ್ತಿನಲ್ಲೇ ನಿಮ್ಮನ್ನ ಬನ್ನಿ ಅನ್ನೋದು"

ಮೊದಲ ದಿನವೇ ಎಚ್ಚರಿಕೆ ಕೊಟ್ಟಿರಲ್ಲ!"

"ಹೌದು-ಆದರೆ ಇದೇನು ಹೊಸದಾಗಿ ಕರೀತೀರಿ ನನ್ನ. ಬಾಯಿ, ಕೈ ಏನೂ ಬೇಡ ಸುಮ್ಮನೆ 'ಯಶೋಧಾ' ಎಂದರೆ ಸಾಕು. ಇವನೇನು ನಿಮ್ಮ ಮಗನೋ?"

ಕುಂಬಳಕಾಯಿ ಗಾತ್ರ ಹೊಟ್ಟೆ ಮಾಡಿಕೊಂಡು, ಮೈ ಮೂಳೆಯೆಲ್ಲ ಎಣಿಸುವಂತಿದ್ದ ಹುಡುಗ ತಾಯಿಯ ಬೆನ್ನ ಹಿಂದೆ ಬಂದಿದ್ದ.

"ಹೂನಮ್ಮ—ಇವನೇ ವಂಶೋದ್ಧಾರಕ ಇನ್ನೂ ಈಗ ಬಂದಿದೇನೆ. ಹಿಂದೇಯೇ ಓಡಿ ಬಂದಿದಾನೆ ನೋಡಿ."

"ಈದೇಕೆ ಇಷ್ಟು ಕಂಗೆಟ್ಟಿದ್ದಾನೆ?"

"ಗೊತ್ತಿಲ್ಲವಾ ನಮ್ಮೂರ ಕಥೆ? ದಿನ ಬಿಟ್ಟು ದಿನ ಛಳಿಬರುತ್ತೆ. ಛಳಿ ಬಂದಾಗ ಮನೇಲಿರೋ ಬಟ್ಟೇನೆಲ್ಲಾ ಹೊದಿಸಿದರೂ ನಡುಕ ನಿಲ್ಲೋದಿಲ್ಲ. ಆ ಮೇಲೆ ನಿದಾನವಾಗಿ, ಜ್ವರ ಏರಿ ನಡುಕ ನಿಲ್ಲುತ್ತೆ. ಒಂದು ಊಟ-ಒಂದು ಉಪವಾಸ. ಇನ್ನು ಹೇಗಿದ್ದಾನು ಹೇಳಿ".

"ಔಷಧಿ ಏನು ಕೊಡ್ತೀರಿ ?"

"ಅವಕ್ಕೇನು ಕಡಿಮೆ ? ಹಾಲು ತುಪ್ಪಕ್ಕಿಂತ ಹೆಚ್ಚಾಗಿ ಆಸ್ಪತ್ರೆ ಕೆಂಪುನೀರಿನಲ್ಲೇ ಬೆಳೆದಿದಾನೆ ಮಾತ್ರೆಯಂತೂ ಬಿಡಿ ನುಂಗಿರೋದಕ್ಕೆ ಲೆಖ್ಖವೇ ಇಲ್ಲ "

ಹುಡುಗನ ಮುಖದಲ್ಲಿ ಗೆಲುವೇ ಇರಲಿಲ್ಲ ಕಡ್ಡಿಯಂತಿದ್ದ ಕಾಲುಗಳು ಚಡ್ಡಿಯಿಂದ ಕೆಳಗೆ ಕಾಣುತ್ತಿತ್ತು

'ಅಯ್ಯೋ ಪಾಪ'-ಎನಿಸಿತು ಯಶೋದನಿಗೆ-ಹುಡುಗನನ್ನು ನೋಡುತ್ತಿದ್ದಂತೆ ಆವಳಿಗೆ ಯಾವುದೋ ಒಂದು ಹಳೆಯ ನೆನಪು ಮರುಕಳಿಸಿತು.

ಹಿಂದಿನ ದಿನ ಗಂಡ ಹೆಂಡತಿ ಇಬ್ಬರೂ ಮನೆಯ ಸುತ್ತಲಿನ ಜಾಗವನ್ನು ಪರಿಷ್ಕಾರ ಮಾಡುತ್ತಿದ್ದರು. ಆಫೀಸಿನಿಂದ ಬಂದು ತಿಂಡಿ ಕಾಫಿ ಮುಗಿಸಿದ ಕೂಡಲೇ, ನಾರಾಯಣ ಮೂರ್ತಿ ಗುದ್ದಲಿ ಹಿಡಿದು ಕೆಲಸಕ್ಕೆ ಕೈ ಹಚ್ಚಿದ

ಹೂವಿನ ಗಿಡಗಳ ಜೊತೆಗೆ ಹುಲ್ಲೂ ಮೊಳಕಾಲಿನ ಎತ್ತರಕ್ಕೆ ಬೆಳೆದು ನಿಂತಿತ್ತು.

"ಎಂತಹ ಕೊಳಕು ಜನ ? ಮನೆಯ ಸುತ್ತ ಕಾಡಿನಂತೆ ಮಾಡಿದಾರೆ"

"ಯಾರು ಕೊಳಕರು ?"

ಒಳಗಿನಿಂದ ಬರುತ್ತಿದ್ದ ಯಶೋದ ಕೇಳಿದಳು.

"ನೀನಲ್ಲ-ಮಹರಾಯ್ತಿ ಈ ಮನೇಲಿ ಮೊದಲು ಇದ್ದವರು."

"ಏನು ಮಾಡಿದರು ಅವರು ?"

"ನೋಡು—ಎಷ್ಟು ಗಲೀಜು ಮಾಡಿದ್ದಾರೆ. ಬಾಡಿಗೆ ಮನೆ ಆದರೂ ವಾಸಮಾಡೋರು ನಾವೇ ತಾನೇ ? ಇಷ್ಟು ಪೊದೆ ಬೆಳಸಿದರೆ ಹಾವು ಸೇರೋದಿಲ್ಲವೆ ?"

"ಎಲ್ಲರೂ ನಿಮ್ಮ ಹಾಗೇ ಇರ್ತಾರೆಯೇ ?"

ಸೀರೆಯ ನೆರಿಯನ್ನು ಮೇಲಕ್ಕೆ ಎತ್ತಿ ಕಟ್ಟಿ, ಕಿತ್ತಿ ಹುಲ್ಲನೆಲ್ಲ ಒಂದು ಕಡೆ ಗುಡ್ಡೆ ಮಾಡುತ್ತಿದ್ದ ಯಶೋದ ಕೇಳಿದಳು.

"ಆ ಮಾತು ನಿನಗೂ ಕೇಳಬೇಕು ನಾನು. ಗುದ್ದಲಿ ಹಿಡಿದ ಕೂಡಲೇ ಕಚ್ಚೆ ಕಟ್ಟಿ ಕೆಲಸಕ್ಕೆ ಜೊತೆಗೆ ಬಂದೆ."

"ಇನ್ನೇನು ಮಾಡಲಿ? ನೀವು ಕೆಲಸ ಮಾಡುತ್ತಿರುವಾಗ ನಾನು ಒಳಗೆ ಕುರ್ಚಿಯ ಮೇಲೆ ಕೂತಿರಲೆ?"

"ಕೂತಿದ್ದರೂ ನಡೀತಿತ್ತು, ಆದರೆ ನಿನಗೇ ಅದು ಬೇಕಿಲ್ಲ."

ಗುದ್ದಲಿಯನ್ನು ಎಸೆದು ನಾರಾಯಣ ಮೂರ್ತಿ ಮೆಲ್ಲಗೆ ಅವಳ ಕೆನ್ನೆಯನ್ನು ಹಿಂಡಿದ-

"ಥೂ, ಬಿಡಿ. ನನ್ನ ಕೆನ್ನೆಯೆಲ್ಲ ಮಣ್ಣಾಯ್ತು. ಅದಕ್ಕೇ ನಿಮ್ಮ ಜೊತೆ ಕೆಲಸ ಮಾಡುವುದೆಂದರೆ ನನಗೆ ಬೇಸರ"

"ಅಲ್ವೇ ಪಾಪ—ಅದಕ್ಕೇ ಹಿಂದಿನಿಂದ ಓಡಿ ಬಂದಿದ್ದಿ, ಹಾಯಾಗಿ ಒಳಗೆ ಹೋಗು ನೋಡೋಣ"

"ಒಂದು ದಿನಕ್ಕೆ ಇಷ್ಟು ಕೆಲಸ ಸಾಲದೆ? ಸಾಕು—ಒಳಗೆ ಹೋಗೋಣ"

ಕೆನ್ನೆಗೆ ಅಂಟಿಕೊಂಡಿದ್ದ ಮಣ್ಣನ್ನು ಕೈಯಿಂದ ಒರಸಿಕೊಳ್ಳುತ್ತ ಯಶೋದ ಗಂಡನ ಕೈ ಹಿಡಿದು ಎಳೆದಳು.

"ಇನ್ನು ಕೆಲಸ ಮಾಡಿದ ಹಾಗೇ! ಸ್ವಲ್ಪ ಕೈ ಬಿಡು. ಈ ಗಿಡ ಇಷ್ಟು ಕಿತ್ತುಬಿಟ್ಟರೆ .."

"ಎಂತಹ ಗಿಡ ಅದು?"

"ಎಂತದೋ ಯಾರಿಗೆ ಗೊತ್ತು? ಬೇಕಾದಷ್ಟಿದೆ ಅದನ್ನೆಲ್ಲ ಕಿತ್ತು ಲಕ್ಷಣವಾಗಿ ತುಳಸಿ ಗಿಡ ಹಾಕಿದರೆ ಸೊಳ್ಳೆ ಬರೋದಿಲ್ಲ"

"ತಾಳಿ—ಅದನ್ನು ಕೀಳುವುದು ಬೇಡ. ತುಳಸಿ ಬೇಕಾದರೆ ಇನ್ನೊಂದು ಕಡೆ ಹಾಕೋಣ. ಅದು ಎಲ್ಲೋ ನೋಡಿದ್ದೆ. ಎಂತದೋ ಔಷಧಿ ಗಿಡ"

"ಇದರಲ್ಲಿ ಎಂತ ಔಷಧಿ?"

"ನಿಜವಾಗಿ ನಮ್ಮ ಅಜ್ಜಿ ಇದರಲ್ಲಿ ಏನೋ ಮಾಡ್ತಿದ್ದರು. ಏನೆಂದು ತಟ್ಟನೆ ನೆನಪಾಗಲೊಲ್ಲದು"

ಗಿಡ ಉಳಿಯಿತು. ಅಂದಿನ ಕೆಲಸ ಅಲ್ಲಿಗೆ ಮುಗಿಯಿತು. ರಾತ್ರೆ ನಿದ್ರೆ ಬರುವವರೆಗೂ ಅದರ ವಿಚಾರ ಯೋಚನೆ ಮಾಡಿದಳು ಯಶೋದ.

ಆದರೆ ನೆನಪಿಗೆ ಬರಲಿಲ್ಲ. ಏನೆಂದು ಬಗೆಹರಿಯಲಿಲ್ಲ.

ಈ ದಿನ ಆ ಹುಡುಗನ ರೋಗದ ಮೋರೆಯನ್ನು ನೋಡುತ್ತಿದ್ದಂತೆ

ಹಿಂದಿನ ದಿನವೆಲ್ಲ ನೆನಪಿಗೆ ಎಟುಕದೆ ತಪ್ಪಿಸಿಕೊಂಡಿದ್ದುದು ತಟ್ಕನೆ ನೆನಪಿನಲ್ಲಿ ಮರುಕಳಿಸಿತು.

ಅಜ್ಜಿ-ವಾಯಿದೆಯ ಛಳಿ ಜ್ವರಕ್ಕೆ ಮಾಡುತ್ತಿದ್ದ ಮದ್ದು ಇದೇ! ಅಜ್ಜಿ ಯಾರಿಗೂ ಕಾಣದಂತೆ ಅದನ್ನು ಬಟ್ಟೆಯಲ್ಲಿ ಸುತ್ತಿಕೊಂಡು ತರುತ್ತಿದ್ದಾಗ ಹುಡುಗಿಯಾಗಿದ್ದ ಅವಳು, ಎಷ್ಟು ಸಲ ಗಿಡದ ಮರೆಯಲ್ಲಿ ನಿಂತು ನೋಡಿರಲಿಲ್ಲ.

"ಏನು ಯೋಚ್ನೆ ಮಾಡ್ತಿದೀರಿ ಯಶೋದ?"

ಕನಸು ಕಾಣುವವಳಂತೆ ಕುಳಿತಿದ್ದ ಅವಳನ್ನು ನೆರಮನೆಯಾಕೆ ಎಚ್ಚರಿಸಿದಳು.

"ನಾನು ಒಂದು ಔಷಧಿ ಮಾಡಲೇ? ನಿಮ್ಮ ಮಗನಿಗೆ?"

ಯಾವುದೋ ನಿರ್ಧಾರಕ್ಕೆ ಬಂದವಳಂತೆ ಯಶೋದ ತಟ್ಟನೆ ಆತ್ಮ ವಿಶ್ವಾಸದಿಂದ ಕೇಳಿದಳು.

"ನೀವೇ ? ಔಷಧಿ ಕೊಡುವಿರ?"

—ಆಕೆಗೆ ಆಶ್ಚರ್ಯ.

"ಹೂಂ ಏಕಾಗಬಾರದು? ಇದುವರೆಗೆ ಎಷ್ಟೋ ಮಾಡಿದೀರಿ. ಇದನ್ನೂ ನೋಡಿ"

"ಇದುವರೆಗೆ ಡಾಕ್ಟರ ಔಷಧಿ ಕುಡಿಸಿದೆವು. ನಮ್ಮಲ್ಲೂ ಒಳ್ಳೆಯ ಔಷಧಿ ಇದೆ. ಇಲ್ಲ ಎನ್ನುವಂತಿಲ್ಲ. ಆದರೆ ಅನುಭವ ಬೇಕು. ಇರುವ ವಿಷಯ ಹೇಳಿದೆ. ತಪ್ಪು ತಿಳಿದುಕೋ ಬೇಡಿ. ನೀವು ಅಭಿಮಾನದಿಂದ ಕೊಡ್ತೀನಿ ಎಂದಿರಲ್ಲ ಅಷ್ಟೇ ಸಾಕು"

"ನಾನು ಕೊಡುವ ಔಷಧಿಯಿಂದ ಒಳ್ಳೆಯದಾಗದಿದ್ದರೂ ಕೆಟ್ಟದಂತೂ ಖಂಡಿತ ಆಗುವುದಿಲ್ಲ. ಅದರಿಂದಲೇ ಧೈರ್ಯವಾಗಿ ಹೇಳಿದೆ ಅದು ಹೊಟ್ಟೆಗೆ ತೆಗೆದುಕೊಳ್ಳುವುದಲ್ಲ"

"ಅಂದರೆ ...?"

"ಮೇಲೆ ಉಪಯೋಗಿಸೋದು. ನಿಮಗೆ ಇಷ್ಟವಿದ್ದರೆ ನಾಳೆ ಬೆಳಗ್ಗೆ ಎದ್ದಕೂಡಲೇ ಕರೆದುಕೊಂಡು ಬನ್ನಿ"

ಮೇಲೆ ಉಪಯೋಗಿಸುವುದಾದರೆ ಏಕೆ ಪ್ರಯತ್ನಿಸಬಾರದು? ಎಂದು

ಕೊಂಡರು ಆಕೆ. ಹಾಗೇ ಕಾಸು ಖರ್ಚು ಮಾಡಬೇಕಾಗುವುದೇನೋ ಎಂದು ಅನುಮಾನವೂ ಬಂತು. ಪ್ರತಿಫಲದ ಆಸೆಯಿಲ್ಲದೆ ಯಾರಾದರೂ ತಾವಾಗಿ ಔಷಧಿ ಕೊಡಲು ಮುಂದೆ ಬರುವರೆ?

ಆಕೆ ಅನುಮಾನಿಸುವುದನ್ನು ನೋಡಿ ಯಶೋದ ಕೇಳಿದಳು—"ನಿಮಗೆ ಇಷ್ಟವಾದರೆ ಬನ್ನಿ. ಬಲವಂತವಿಲ್ಲ. ಮಗು ನೋಡಿ ಮರುಕವಾಯ್ತು ಅದಕ್ಕೆ ಹೇಳಿದೆ"

"ಇಷ್ಟವೇನೋ ಇದೆ ಅವನು ಛಳೀಲಿ ನಡ-ಗೋದನ್ನ ನೋಡ ಲಾರೆ. ಆದರೆ ಖರ್ಚು ಎಷ್ಟಾಗತ್ತೋ ?"

ಆಕೆ ಬಾಯಿಬಿಟ್ಟರು.

"ಖರ್ಚು ವೆಚ್ಚ ಏನೂ ಇಲ್ಲ. ಅದಕ್ಕೆ ಅನುಮಾನಿಸಿದಿರ ?"

ಯಶೋದ ನಗುತ್ತ ಕೇಳಿದಳು

"ಹಾಗೇನಿಲ್ಲ. ಬೆಳಗಿನ ಹೊತ್ತು ನಿಮಗೆ ತೊಂದರೆಯಾಗುವುದಿಲ್ಲವೆ ? ನೀವೇ ಹೇಳಿದ್ದಿರಿ. ಯಾರೂ ಬಂದರು ಮಧ್ಯಾಹ್ನ ಬರಬೇಕು ಎಂತ"

"ಕೇಳಿದ್ದೆ—ನಿಜ. ಅದು ಹರಟೆಗೆ ಬರುವವರಿಗೆ ಮಾತ್ರ. ಇದು ಐದು ನಿಮಿಷದ ಕೆಲಸ. ಅಲ್ಲದೆ ಔಷಧಿ ಆ ಹೊತ್ತಿನಲ್ಲೇ ಕೊಡಬೇಕು"

"ಸರಿ-ಬರ್‍ತೀನಿ"—ಎಂದು ಆಕೆ ಹೊರಟು ಹೋದರು

ಬೆಳಗ್ಗೆ ಆಕೆ ಮಗನೊಡನೆ ಬಂದಾಗ ಯಶೋದ ಅಡಿಗೆ ತಯಾರಿಸು ತ್ತಿದ್ದವಳು, ನಗೆಮೊಗದಿಂದ ಹೊರಗೆ ಬಂದು ಅವರನ್ನು ಸ್ವಾಗತಿಸಿದಳು. ಅವರಿಬ್ಬರನ್ನೂ ಚಾಪೆಯ ಮೇಲೆ ಕೂರಿಸಿ, ಒಂದು ಊದುಕಡ್ಡಿ ಹಿಡಿದು ಕೊಂಡು ಹೊರಗೆ ಹೋದಳು.

ಹಿಂದಿನದಿನ ನೋಡಿದ್ದ ಗಿಡವನ್ನು ಪೂಜಿಸಿ ಧೂಪ ಹಾಕಿ ಅದರ ಎಲೆಯನ್ನು ಕಿತ್ತು ತಾನು ತಂದಿದ್ದ ಅರಶಿನ ಹಚ್ಚಿದ ಬಟ್ಟೆಯಲ್ಲಿ ಕಟ್ಟಿ ಗಂಟುಹಾಕಿ ಅದನ್ನೂ ಧೂಪಕ್ಕೆ ಹಿಡಿದು ಒಳಗೆ ಬಂದಳು.

"ಇಲ್ಲಿ ಬಾರೋ ಮಗು. ಪೂರ್ವಕ್ಕೆ ಎದುರಾಗಿ ಕುಳಿತುಕೋ ಷರಟಿನ ತೋಳು ಮುರಿದುಕೊ"

ಹುಡುಗ ಅವಳು ಹೇಳಿದಂತೆ ಕುಳಿತುಕೊಂಡ.

ಯಶೋದ ಹುಡುಗನ ಬಲಗೈಗೆ ಅರಿಸಿನದ ಬಟ್ಟೆಯನ್ನು ಕಟ್ಟಿ-
ಇನ್ನು ಹೋಗಪ್ಪ. ದೇವರು ಒಳ್ಳೇದು ಮಾಡಲಿ
-ಎಂದಳು.

ಹುಡುಗ ದೇವರ ಪರಕ್ಕೂ, ಅವಳಿಗೂ ಕೈಮುಗಿದ.

"ಬರ್‍ತೀವಿ ಯಶೋದ. ನಿಮ್ಮ ಕೈಗುಣದಿಂದ ಹುಡುಗ ಆರೋಗ್ಯವಂತನಾದರೆ ಸಾಕು"

-ಎಂದು ಆಕೆ ಬೀಳ್ಕೊಂಡರು.

ಸ್ವಲ್ಪ ಕುತೂಹಲದಿಂದ ಹುಡುಗಾಟದಿಂದಲೇ ಆ ಕೆಲಸ ಮಾಡಿದ್ದಳು ಯಶೋದ. ಅದರ ವಿಚಾರ ಮರೆತೂ ಬಿಟ್ಟಳು.

ಒಂದು ದಿನ ಇದ್ದಕಿದ್ದಂತೆ ನೆರೆಮನೆಯಾಕೆ, ಇನ್ನಿಬ್ಬರು ಹೆಂಗಸರೊಂದಿಗೆ ಕೆಲಸದ ಹೊತ್ತಿನಲ್ಲಿ ನುಗ್ಗಿ ಬಂದಾಗ ಅವಳಿಗೆ ಆಶ್ಚರ್ಯವಾಯ್ತು.

"ಇದೇನು ಈಗ ಬಂದಿರಿ ?"-ಎಂದು ಆತಂಕದಿಂದಲೇ ಕೇಳಿದಳು.

"ನೋಡಿ ಇವರು ಇಲ್ಲೇ ಕೆಳಗಡೆ ಬೀದೀಲಿದಾರೆ. ಮೂರು ದಿನದ ಗಡುವಿನ ಛಳಿ ಮೂರು ವರ್ಷದಿಂದ ಕಾಡಿಸ್ತಾ ಇದೆ. ಇವರಿಗೆ ಔಷಧಿ ಕೋಡ್ತೀರ. ?"

"ಔಷಧಿ ...? ಇವರಿಗೆ ?"

"ಹೊಂ....ಕಣ್ರೀ. ನಮ್ಮ ಹುಡುಗನಿಗೆ ಕೊಟ್ಟಿರಲ್ಲ ?"

"ನಿಮ್ಮ ಹುಡುಗನಿಗೆ ?"

ತಟ್ಟನೆ ಜ್ಞಾಪಿಸಿಕೊಂಡು ಯಶೋದ ಪುನಃ ಕೇಳಿದಳು-

"ಅನುಕೂಲವಾಯಿತೇನು ?"

"ನೀವು ಕೊಟ್ಟ ದಿವಸದಿಂದ ಪುನಃ ಛಳಿ ಬಂದೇಇಲ್ಲ."

"ಮತ್ತೇ....ನೀವು ನನಗೆ ಹೇಳಲೇ ಇಲ್ಲ"

"ನಾನು ಊರಿನಲ್ಲಿರಲಿಲ್ಲ ಕಣ್ರಿ. ನಿನ್ನೆ ತಾನೇ ಬಂದೆ. ಮಧ್ಯಾಹ್ನ ಅವನನ್ನೂ ಕರೆದುಕೊಂಡು ಬರೋಣವೆಂದಿದ್ದೆ. ಅಷ್ಟರಲ್ಲಿ ಇವರು ಏನೋ ಕೆಲಸಕ್ಕೆ ನಮ್ಮ ಮನೆಗೆ ಬಂದಿದ್ರು ಕರೆತಂದೆ"

"ಅದೇನೋ ಸರಿ. ನನಗೆ ಈಗ ಪೂರಾ ಕೆಲಸ. ಮೊದಲೇ ಗೊತ್ತಿದ್ದರೆ ಬೆಳಗಿನ ಝಾವಕ್ಕೇ ಎದ್ದು ಕೆಲಸ ಮುಗಿಸಿ ಬಿಡ್ತಿದ್ದೆ. ನಾಳೆ ಬನ್ನಿ ಆಗದೆ?"

"ಆಗದೆ ಏನು ತಾಯಿ ? ಇಷ್ಟು ವರ್ಷ ಆಯ್ತಂತೆ. ಇನ್ನು ಒಂದು ದಿನದಲ್ಲಿ ಏನಂತೆ ?"–ಬಂದವರು ಹೇಳಿದರು.

"ನಿಮಗೆ ಛಳಿ ಬರುವ ವಾಯಿದೆ ಎಂದು ?"

ಯಶೋದ ಒಳಗೆ ಹೊರಟಿದ್ದವಳು ತಟ್ಟನೆ ತಿರುಗಿ ನಿಂತು ಕೇಳಿದಳು.

"ನಾಳೆ"

ಬಂದಿದ್ದವರಿಬ್ಬರೂ ಒಟ್ಟಿಗೆ ಹೇಳಿದರು

"ಹಾಗಾದ್ರೆ ಒಂದು ಕೆಲಸ ಮಾಡಿ. ನಾಳೆ ಬರುವ ವಾಯಿದೆ ಇರುವವರು ಇಂದೇ ತಗೋಬೇಕು. ಅವರಿಗೆ ಈಗ ಕೊಡ್ತೇನೆ ನೀವು ನಾಳೆ ಬನ್ನಿ"

ಅರಿಶಿನದ ಬಟ್ಟೆಯನ್ನೂ ಊದುಕಡ್ಡಿಯನ್ನೂ ಹುಡುಕಿಕೊಂಡು ಯಶೋದ ದಡದಡನೆ ಓಡಾಡಿದಳು. ಅವಸರವಸರವಾಗಿ ಔಷಧಿ ಪಟ್ಟಿ ಕಟ್ಟಿ, ಮಾತಿಗೆ ನಿಲ್ಲದೆ, ಕೆಲಸಕ್ಕೆ ಓಡಿದಳು.

ಆ ಸಂಜೆ ನೆರೆಮನೆ ಹುಡುಗ ಒಂದು ಚಿಪ್ಪು ಬಾಳೆಹಣ್ಣು ತೆಗೆದುಕೊಂಡು ಬಂದು ಅವಳ ಕಾಲಿಗೆರಗಿದಾಗ ಅವಳು ತನ್ನ ಕಣ್ಣನ್ನೇ ಂಬಲಿಲ್ಲ.

ಹುಡುಗ ಅಷ್ಟು ಬದಲಾಗಿದ್ದ !

"ಹುಷಾರಾಗಿದೀಯ ಮಗು ?"

ಎಂದು ತಲೆ ಸವರಿದಳು ಆದರೆ ಬಾಳೆಹಣ್ಣು ಮುಟ್ಟಲಿಲ್ಲ. ಬಲವಂತದಿಂದ ಹಿಂದಕ್ಕೆ ಕಳಿಸಿಬಿಟ್ಟಳು.

ದಿನದಿನಕ್ಕೆ ಔಷಧಿ ಕಟ್ಟಿಸಿಕೊಳ್ಳುವವರ ಸಂಖ್ಯೆ ಬೆಳೆಯಿತು. ಬೆಳೆದಂತೆ ನಾರಾಯಣಮೂರ್ತಿಯ ಗಮನವನ್ನೂ ಸೆಳೆಯಿತು. ಮೊದಲು ಮೊದಲು ಗಮನಿಸದಿದ್ದವನು ಕೊನೆಗೆ ಒಂದು ದಿವಸ ಕೇಳಿದ–

"ನಿನ್ನ ಗೆಳತಿಯರಿಗೆ ಹೊತ್ತು ಹೋಗಲ್ಲವೋ ? ಹಗಲಿನಲ್ಲೇ ಹರಟೆಗೆ ಬರ್ತಾರೆ. ಈ ನಡುವೆ ನನಗೆ ಊಟಕೂಡ ಹೊತ್ತಿಗೆ ಸರಿಯಾಗಿ ಆಗ್ತಿಲ್ಲ. ಬಿಸಿ....ಹೆಸಿ ಹಸಿ ."

ಅಯ್ಯೋ ...ಅವರು ಹರಟೆಗೆ ಬರಲ್ಲಾಂದ್ರೇ"

"ಮತ್ಯಾಕೆ ಬರ್ತಾರೇಂದ್ರೆ ?"

"ಹೋಗಿ–ನಿಮಗೆ ಹಾಸ್ಯ, ನಾನು ಹೇಳಲ್ಲ"

"ಪರವಾಗಿಲ್ಲ. ಹೇಳು, ಕೇಳೋಣ"

"ಔಷಧಿಗೆ ಬರ್ತಾರೆ"

"ಔಷಧಿ ..? ಎಂತ ಔಷಧೀನೇ ?"

"ವಾಯಿದೆ ಛಳಿ–ಮೂರುದಿನಕ್ಕೆ, ನಾಲ್ಕು ದಿನಕ್ಕೆ ಒಂದು ಸಲ ಬರುತ್ತಲ್ಲ ಆದಕ್ಕೆ"

"ಅದೇನೋ ಗೊತ್ತು. ಈ ಊರಿನಲ್ಲಿ ಛಳಿ ಜ್ವರಕ್ಕೇನೂ ಬರವಿಲ್ಲ. ಆದರೆ ಇಲ್ಲೇಕೆ ಬರ್ತಾರೆ? ಅದು ಗೊತ್ತಾಗಲಿಲ್ಲ. ನನಗೆ ತಿಳಿದ ಮಟ್ಟಿಗೆ ಈ ಊರಿನಲ್ಲಿ ಆಸ್ಪತ್ರೆ ಇದೆ. ಡಾಕ್ಟರು ಇದ್ದಾರೆ. ಇಲ್ಲೇನು ಕೆಲಸ ಅಂತೀನಿ ?"

"ನಾನು ಔಷಧಿ ಕಟ್ತೇನಿ"

"ನೀನೆ . ?"

"ಹೂಂ ..ನಾನು"

"ನಿಜವೇನು ? ನನಗೆ ಯಾಕೊ ಹೆದರಿಕೆಯಾಗ್ತಿದೆ. ನಾನು ಮದುವೆಯಾದದ್ದು ಸಾದಾ ಹಳ್ಳೀ ಹುಡುಗಿ. ಡಾಕ್ಟರಿಣಿ ಎಂದು ಗೊತ್ತಿದ್ದರೆ .."

"ಹೋಗಿ ನಾನು ಏನೂ ಹೇಳೋದಿಲ್ಲ."

"ಡಾಕ್ಟರು ಕೋಪ ಮಾಡಬಾರ್ದು. ಸಹನೆ ಇರಬೇಕು. ಇದುವರೆಗೆ ಎಷ್ಟು ಫೀಸು ಸಂಪಾದನೆಯಾಗಿದೆ ಹೇಳು. ಅದನ್ನಾದರೂ ಕೇಳುವಾ"

"ಫೀಸೂ ಇಲ್ಲ. ಎಂತದೂ ಇಲ್ಲ. ಒಂದು ಹೂವು ತಂದು ಕೊಟ್ಟರೂ ತಗೋಳೋದಿಲ್ಲ. ಹಾಗೆ ತೆಗೆದುಕೊಂಡರೆ ಔಷಧಿ ಗುಣ ಹೋಗಿಬಿಡುತ್ತೆ"

"ಆಯ್ತು. ನಿನ್ನ ಔಷಧಿಯಿಂದ ಯಾರಿಗಾದರೂ ಗುಣವಾಗಿದೆಯೇನು ?"

"ಅದೇನೋ ನನಗೆ ಗೊತ್ತಿಲ್ಲ. ಬಂದು ಕೇಳ್ತಾರೆ. ಕೊಡ್ತೀನಿ. ನಮ್ಮ ಅಜ್ಜಿ ಮಾಡ್ತಿದ್ದರು ನೋಡಿದ್ದೆ. ದೇವರ ಮೇಲೆ ಭಾರ ಹಾಕಿ ಕೊಡೋದು."

"ಗುಣವಾಗಿರಬೇಕು, ಇಲ್ಲದಿದ್ದರೆ ಇಷ್ಟು ಜನ ಬರ್ತಾರೆಯೆ ?"

ಗಂಡ ಹೆಂಡತಿ ಇಬ್ಬರೂ ಈ ಹೊಸ ಸಂದರ್ಭಕ್ಕೆ ಹೊಂದಿಕೊಂಡರು.

ಬೇಸಗೆ ಬಂತು. ಔಷಧಿಯ ಹಸುರು ಗಿಡ ಒಣಗಿತು. ಯಶೋದ ನೀರೆರೆದಳು. ಆದರೂ ಗಿಡ ಚಿಗುರಲಿಲ್ಲ.

ಯಶೋದನಿಗೆ ಯೋಚನೆಗೆ ದಾರಿಯಾಯ್ತು.

ಮುಂದೇನು ಮಾಡುವುದು ?

ಔಷಧಿ ಇಲ್ಲವೆಂದರೂ ಜನ ಬಿಡುತ್ತಿರಲಿಲ್ಲ. ಬಂದು ಬೇಡುತ್ತಿದ್ದರು.

ಔಷಧಿಗಿಡ ಒಣಗಿ ಹೋಗಿದ್ದರೂ ನಾರಾಯಣಮೂರ್ತಿ ಬೆಳಸಿದ ತುಳಸಿ ಬೇಸಿಗೆಗೆ ಜಗ್ಗದೆ ವನವಾಗಿ ಬೆಳೆದಿತ್ತು. ನೋಡುವವರ ಕಣ್ಣು ತುಂಬುವಂತಿತ್ತು

ಅದನ್ನು ನೋಡಿ ಹೊಸ ಸ್ಫೂರ್ತಿ ತಾಳಿದಳು ಯಶೋದ. ಅರಿಶಿನ ಬಟ್ಟೆಯಲ್ಲಿ ತುಳಸಿಯನ್ನು ಕಟ್ಟಿ ಧೂಪ ಹಾಕಿ–'ದೇವರೇ ಕಾಪಾಡು' ಎಂದು ಪ್ರಾರ್ಥಿಸಿ ಬಂದವರಿಗೆಲ್ಲ ಕಟ್ಟಿ ಕಳಿಸಿದಳು.

ಗುಣ ಕಡಿಮೆಯಾದರೆ ಬರುವವರೂ ಕಡಿಮೆಯಾಗಬಹುದೆಂದು ಆಶಿಸಿದಳು.

ಆದರೆ ಜನ ಮೊದಲಿನಂತೆಯೇ ಬಂದರು.

ಧೈರ್ಯದಿಂದ ಕೊಡುತ್ತಲೇ ಬಂದಳು ಯಶೋದ.

ಕೊನೆಗೆ ಒಂದು ದಿನ ಅವಳ ಧೈರ್ಯವೂ ನಡುಗುವಂಥ ಪರಿಸ್ಥಿತಿ ಒದಗಿತು.

ಈ ವೇಳೆಗೆ ಯಶೋದನಿಗೆ ಊರಿನಲ್ಲಿ ಅನೇಕರ ಪರಿಚಯವಾಗಿತ್ತು. ಕೆಲವರಲ್ಲಿ ಹೆಚ್ಚು ಆತ್ಮೀಯತೆಯೂ ಬೆಳೆದಿತ್ತು. ಅಂಥವರಲ್ಲಿ ಒಬ್ಬಳು ಸುಗುಣ.

ಒಂದು ದಿನ ಸಪ್ಪೆ ಮುಖ ಮಾಡಿಕೊಂಡು ಬಂದಳು.

"ಯಶೋದಕ್ಕ ನನ್ನಂಥ ಪಾಪಿಗಳು ಬದುಕಿರಬಾರದು"

–ಎಂದು ಕಣ್ಣೀರು ಹಾಕಿದಳು.

"ಯಾಕೆ ಸುಗುಣ—ಏನಾಯ್ತು ?"

ಯಶೋದ ಗಾಬರಿಯಾಗಿ ಕೇಳಿದಳು.

"ನಮ್ಮತ್ತೆ....ಇವರಿಗೆ ಬೇರೆ ಮದುವೆ ಮಾಡ್ತಾರಂತೆ"

ಸುಗುಣ ಬಿಕ್ಕಿದಳು.

"ಇದೇನು ಕೇಡು ? ಇವರ ಸಿರಿಗೆ ಒಬ್ಬಳು ಹೆಂಡತಿ ಸಾಲದೆ ?"

"ಅವರಿಗೆ ಮೊಮ್ಮಕ್ಕಳು ಬೇಕಂತೆ, ನಾನೇನು ಮಾಡ್ಲಿ ? ನನಗೂ ಆಸೆ

ಯಿದೆ. ಆದರೆ ಅದೆಲ್ಲ ನಮ್ಮ ಕೈಲಿದೆಯೆ ? ಇನ್ನೂ ಎರಡು ತಿಂಗಳು ನೋಡ್ತಾರಂತೆ. ಅಷ್ಟರಲ್ಲಿ ಏನೂ ಆಗದಿದ್ದರೆ ಮದುವೆ ಮಾಡುವುದು ಖಂಡಿತ. ರಾತ್ರಿಯೇ 'ಎಲ್ಲೆಲ್ಲಿ ಬೆಳೆದ ಹುಡಿಗಿಯರು ಇದ್ದಾರೆ ?' ಎಂದು ಲೆಖ್ಖ ಹಾಕುತ್ತಿದ್ದರು.

"ಹುಶ್-ಸುಗುಣ ಮೆಲ್ಲಗೆ ಮಾತಾಡು. ನಾನೂ ನಿನ್ನಂತೆ ಮಕ್ಕಳಿಲ್ಲದವಳು. ನಮ್ಮ ಯಜಮಾನರಿಗೂ ಈ ಹೊಸ ಯೋಚನೆ ಬಂದರೆ?"

"ಯಶೋದಕ್ಕ ಊರೆಲ್ಲಾ ನಿಮ್ಮನ್ನು ಕೊಂಡಾಡುತ್ತಿದೆ. ನನಗೂ ಔಷಧಿ ಕೊಡಿ, ನನ್ನ ಸಂಸಾರ ಉಳಿಸಿಕೊಡಿ."

ಯಶೋದ ಬೆಚ್ಚಿದಳು. ಕಣ್ಣೀರು ತುಂಬಿದ ಸುಗುಣಳ ಮುಗ್ಧ ಮುಖದ ಕಡೆ ನೋಡಿ

"ಸ್ವಾಮಿ-ಇದೆಂತಹ ಪರೀಕ್ಷೆ ತಂದಿಟ್ಟೆಯಪ್ಪ ?"

-ಎಂದುಕೊಂಡು ಮೌನವಾಗಿದ್ದಳು

"ಇಲ್ಲ-ಎನ್ನಬೇಡಿ. ನೀವು ಏನು ಕೊಟ್ಟರೂ ಸರಿ"

ಸುಗುಣ ಗೋಗರೆದಳು.

"ನಾಳೆ ಸ್ನಾನಮಾಡಿ ಮಡಿಯಲ್ಲಿ ಬಾ. ದೇವರಿದ್ದಾನೆ"

ಎಂದು ಭರವಸೆಕೊಟ್ಟಳು, ಯಶೋದ.

ಸುಗುಣ ಬಂದಾಗ ಯಶೋದ ಮಿಂದು ಪೂಜೆಯಲ್ಲಿದ್ದಳು. ಸುಗುಣಳನ್ನೂ ಕರೆದು ಹತ್ತಿರ ಕೂರಿಸಿ ಕೊಂಡಳು.

ಎದುರಿಗೆ ಅಂಬೆಗಾಲಿಡುತ್ತಲಿದ್ದ, ಬೆಣ್ಣೆ ಕೈಲಿ ಹಿಡಿದಿದ್ದ ಬಾಲಕೃಷ್ಣನ ಪಟ. ಪೂಜೆಯನ್ನು ಸ್ವೀಕರಿಸಿ ಬಾಲಗೋಪಾಲ ಪಟದಲ್ಲಿ ನಗುತ್ತಿದ್ದ.

ದೇವರ ಮುಂದೆ ಇಟ್ಟಿದ್ದ ಪ್ರಸಾದದ ಬೆಣ್ಣೆಯನ್ನು ತೆಗೆದು ಸುಗುಣಳಿಗೆ ಕೊಟ್ಟು-

"ತಿನ್ನು" ಎಂದಳು ಯಶೋದ.

ಸುಗುಣ ಭಕ್ತಿಯಿಂದ ಅದನ್ನು ಕಣ್ಣಿಗೆ ಒತ್ತಿಕೊಂಡು ಬಾಯಿಗೆ ಹಾಕಿಕೊಂಡು—

"ಇದರಲ್ಲಿ ಔಷಧಿ ಇದೆಯೆ ?"

ಎಂದು ಪ್ರಶ್ನಿಸಿದಳು.

"ಹೌದು" ಎನ್ನುವಂತೆ ತಲೆ ಅಲ್ಲಾಡಿಸಿದಳು ಯಶೋದ.

ಸ್ತೋತ್ರದ ಪುಸ್ತಕವನ್ನು ಸುಗುಣಳಿಗೆ ಕೊಟ್ಟು ಯಶೋದ ಹೇಳಿದಳು–

"ಇದರಲ್ಲಿ ಬಾಲ ಮುಕುಂದನ ಸ್ತೋತ್ರವಿದೆ. ಪ್ರತಿದಿನ ಅದನ್ನು ಓದಿಕೊ. ಬಾಲ ಗೋಪಾಲ ಒಳ್ಳೆಯದು ಮಾಡ್ತಾನೆ ಹೆದರಬೇಡ ಎಂದಳು.

ಸುಗುಣ ನಾಲಿಗೆಯಲ್ಲಿ ಬೆಣ್ಣೆಯನ್ನು ಚಪ್ಪರಿಸುತ್ತ–

"ಔಷಧಿ ಒಂದೇ ದಿನ ಸಾಕೆ !"–ಎಂದು ಕೇಳಿದಳು.

"ಸಾಕು."

ಆ ರಾತ್ರಿ ಯಶೋದ ಗಂಡನೆದುರಿಗೆ ಕೈಜೋಡಿಸಿ ಹೇಳಿದಳು

"ನಾನೊಂದು ಮಾತು ಹೇಳ್ತೀನಿ. ದಯವಿಟ್ಟು ನಡೆಸಿಕೊಡಿ"

"ಏನು ಹೇಳು. ನಾಟಕ ಯಾಕೆ ?"

"ದಯವಿಟ್ಟು ಇಲ್ಲಿಂದ ವರ್ಗಮಾಡಿಸಿಕೊಳ್ಳಿ. ನನ್ನಿಂದ ಇಲ್ಲಿರಲು ಸಾಧ್ಯವಿಲ್ಲ. ನಾನು ಮೊದಲೇ ಇಲ್ಲಿಗೆ ಬರೋದು ಬೇಡವೆಂದು ಹೇಳಿದೆ. ನೀವು ಕೇಳಲಿಲ್ಲ."

"ಯಾಕೆ ? ಏನು ತೊಂದರೆ ? ದೇವರ ದಯದಿಂದ ಮಲೇರಿಯ ನಮ್ಮ ಹತ್ತಿರವೂ ಬಂದಿಲ್ಲ. ಇನ್ನೂ ನೀನೇ ಅದನ್ನು ಓಡಿಸುತ್ತಾ ಇದ್ದಿ"

"ಅದೇ ನನಗೆ ಕಷ್ಟಕ್ಕೆ ಬಂದಿದೆ ಹೀಗಾಗಬಹುದೆಂದು ಮೊದಲೇ ಗೊತ್ತಿದ್ದರೆ ಈ ಕೆಲಸಕ್ಕೆ ಕೈ ಹಾಕುತ್ತಲೇ ಇರಲಿಲ್ಲ"

ಹೆಂಡತಿ ಹುಡುಗಾಟ ಮಾಡುತ್ತಿಲ್ಲ. ನಿಜವನ್ನೇ ಹೇಳುತ್ತಿದ್ದಾಳೆ ಎಂದು ಅರ್ಥವಾದಾಗ ನಾರಾಯಣಮೂರ್ತಿ ಗಂಭೀರವಾಗಿ ಹೇಳಿದ.

"ಯಶೋದ–ಏನಾಯ್ತು ಹೇಳು ನೀನು ಸರಿಯಾಗಿ ಹೇಳದಿದ್ದರೆ ನನಗೆ ತಿಳಿಯೋದು ಹೇಗೆ ?"

"ಇವತ್ತು ಒಬ್ಬಾಕೆ ಮಕ್ಕಳಾಗಿಲ್ಲವೆಂದು ಔಷಧಿ ಕೇಳಲಿಕ್ಕೆ ಬಂದಿದ್ದಳು."

"ಹೊಂ ...ಅದಕ್ಕೆ ?"

"ಇವತ್ತು ಇದಕ್ಕೆ ಕೇಳ್ತಾರೆ ನಾಳೆ ಮತ್ತೊಂದಕ್ಕೆ ಕೇಳ್ತಾರೆ. ಇವತ್ತೂ ಹೇಗೋ ಅವಳನ್ನು ಸಮಾಧಾನ ಮಾಡಿ ಕಳಿಸಿದ್ದಾಯ್ತು. ಇನ್ನು

ನಾವು ಇಲ್ಲಿ ಒಂದು ದಿನ ಇರೋದೂ ಸರಿಯಿಲ್ಲ ನೀವು ವರ್ಗ ಮಾಡಿಸಿ ಕೊಳ್ಳದಿದ್ದರೆ ಇಲ್ಲೇ ಇರಿ ನಾನು ತೌರಮನೆಗೆ ..."

"ಒಪ್ಪಿಕೊಂಡೆ ಮಹರಾಯ್ತಿ. ನಿನ್ನ ಬ್ರಹ್ಮಾಸ್ತ್ರ ಹೊರಗೆ ತೆಗೀಬೇಡ. ನಾಳೆಯೇ ವರ್ಗಕ್ಕೆ ಬರೆದುಕೋತೇನೆ"

ನಾರಾಯಣಮೂರ್ತಿ ಮೂರನೇ ದಿನವೇ ಬರೆದುಕೊಂಡ ಆದರೂ ವರ್ಗದ ಆರ್ಡರು ಬರುವ ವೇಳೆಗೆ ಐದು ತಿಂಗಳ ಹತ್ತಿರ ಬಂತು.

ಯಶೋದ ದಿನ ಎಣಿಸುತ್ತಿದ್ದವಳು ಕೊನೆಗೊಮ್ಮೆ ಈ ಊರಿನಿಂದ ಪಾರಾದೆವೆಂದು ಹಿಗ್ಗಿದಳು.

ಪ್ರಯಾಣಕ್ಕೆ ಎಲ್ಲ ಸಿದ್ಧವಾಯ್ತು. ಗಂಡ ಹೆಂಡತಿ ಗಾಡಿ ಹತ್ತುವುದ ರಲ್ಲಿದ್ದಾಗ ಸುಗುಣಳ ಅತ್ತೆ ಬೇಗ ಬೇಗ ಬರುತ್ತಿರುವುದು ಕಾಣಿಸಿತು.

ಓಡುತ್ತಲೇ ಬಂದರು ಆಕೆ. ತಾವು ತಂದಿದ್ದ ಸಕ್ಕರೆಯನ್ನು ಯಶೋದೆಗೆ ಕೊಡುತ್ತ—

"ಸುಗಣಾಗೆ ನಾಲ್ಕು ತಿಂಗಳಾಗಿದೆ. ನಿಮ್ಮ ಕೈಗುಣ. ತಾನೇ ಬರಲು ನಾಚಿದಳು ನೀವು ಹೊರಡುವುದು ತಿಳಿಯಿತು. ಓಡಿಬಂದೆ"

ಎಂದು ಏದುತ್ತ ಹೇಳಿದರು.

ಯಶೋದ ಮೂಕಿಯಂತೆ ನಿಂತುಬಿಟ್ಟಳು.

"ರೈಲಿಗೆ ಹೊತ್ತಾಯ್ತು ಹತ್ತು"

–ಎಂದು ನಾರಾಯಣಮೂರ್ತಿ ಎಚ್ಚರಿಸಿದ.

"ಸಂತೋಷ. ಸುಗುಣಾಗೆ ಹೇಳಿ"

–ಎಂದವಳೇ ಯಶೋದ ಗಾಡಿ ಹತ್ತಿದಳು.

"ಹೋಗಿ ಬರ್ತೀರಾ? ನಮ್ಮೂರಿಗೆ ಲಕ್ಷ್ಮಿಯಂತೆ ಬಂದಿರಿ. ನೀವು ಕೊಟ್ಟ ಔಷಧಿ ಸಂಜೀವಿನಿಯಂತೆ ಎಲ್ಲಾರನ್ನೂ ಕಾಪಾಡಿತು. ನೆನಪಿರಲಿ. ಊರಿಗೆ ಹೋದಮೇಲೆ ಕಾಗದ ಹಾಕಿ"

ಗಾಡಿಯ ಹಿಂದೆ ನಡೆಯುತ್ತ ಆಕೆ ಹೇಳಿದರು.

"ಖಂಡಿತ ಕಾಗದ ಹಾಕ್ತೀನಿ. ನಿಮಗೆ ಮೊಮ್ಮಗು ಆದಾಗ ನನಗೆ ತಿಳಿಸಿ, ಮರೀಬೇಡಿ"

–ಎಂದು ನಗುತ್ತ ಹೇಳಿದಳು ಯಶೋದ.

"ಉಂಟೇ ತಾಯಿ ? ನಿಮಗೆ ತಿಳಿಸದೆ ಇರಲು ಸಾಧ್ಯವೆ? ಆದರೆ ...ಆ ಹೊತ್ತಿಗೆ..."

"ಹೇಳಿ ಯಾಕೆ ಅನುಮಾನ?"

"ನೀವೂ ನಮಗೆ ಸಕ್ಕರೆ ಕಳಿಸುವಂತಾಗಬೇಕು"

ಯಶೋದ ನಕ್ಕಳಷ್ಟೆ. ಉತ್ತರ ಕೊಡಲಿಲ್ಲ.

ಗಾಡಿ ಮುಂದಕ್ಕೆ ಹೊರಟು ತಿರುವಿನಲ್ಲಿ ಮರೆಯಾಯ್ತು. ಆವಳ ಕೆಂಪೇರಿದ ಕೆನ್ನೆಯ ಕಡೆ ನೋಡುತ್ತ ನಾರಾಯಣಮೂರ್ತಿ ಗಾಡಿಯವನಿಗೆ ಕೇಳಿಸದಂತೆ-

"ಅವರು ಹೇಳಿದ್ದು ಅರ್ಥವಾಯ್ತೇನೇ ?"

-ಎಂದು ಮೆಲ್ಲಗೆ ಕೇಳಿದ.

# ಅಪೂರ್ಣ

ಛಳಿಗೆ ಮೈ ಮುದುರಿಕೊಂಡು, ನೀಲಿ ಮುಸುಕು ಹೊದ್ದು ಕುಳಿತಂತೆ ಕಾಣುತಿತ್ತು ಬೆಟ್ಟ. ಎಳೆ ಬಿಸಿಲಿಗೆ ಮೈ ಒಡ್ಡಿ, ಬಿಸಿಲು ಏರುವುದನ್ನೇ ಕಾಯುತ್ತಿದ್ದ ಸೋಮಾರಿಯಂತಿತ್ತು. ತಣ್ಣನೆಯ ಗಾಳಿ ಅದರ ಮುಸುಕನ್ನು ಕಿತ್ತು ಎಸೆಯುವಂತೆ ಬೀಸುತಿತ್ತು. ಮೈನವಿರೇಳಿಸುವ ಛಳಿ;

ಬಿಸಿಲು ಏರಿದಂತೆ ತನ್ನ ಪ್ರತಾಪವನ್ನು ಕಳೆದುಕೊಂಡ ಛಳಿ, ಕಳ್ಳನಂತೆ ಮರೆಗೆ ಸರಿಯುತಿತ್ತು. ಬೆಟ್ಟವನ್ನು ಕವಿದಿದ್ದ ದಟ್ಟ ನೀಲಿ, ತೆಳುವಾಗಲು ಆರಂಭಿಸಿತ್ತು

ವಿಹಾರಕ್ಕೆಂದು, ಹವಾ ಬದಲಾವಣೆಗೆಂದು, ವಿಶ್ರಾಂತಿಯನ್ನು ಬಯಸಿ ಬಂದಿದ್ದ ಜನ, ತಾವು ಉಳಿದಿದ್ದ ಜಾಗಗಳಿಂದ ಹೊರಗೆ ಬರುವ ಸಮಯ ಅದು.

ದಪ್ಪ ಉಣ್ಣೆಯ ಕೋಟು ರಂಗುರಂಗಿನ ಸ್ವೆಟರ್‌ಗಳು, ಅಲ್ಲಲ್ಲಿ ಕಾಣುವುದಿತ್ತು. ಒಡಲಿಗೆ ಸುರಿದುಕೊಂಡ ಬಿಸಿಬಿಸಿ ಕಾಫಿ ಛಳಿಯನ್ನು ಓಡಿಸುವುದರಲ್ಲಿ ಹೆಚ್ಚು ಯಶಸ್ವಿಯಾಗಿರಲಿಲ್ಲ.

ಹೊತ್ತು ಏರಿದಂತೆ ಓಡಾಡುವವರ ಸಂಖ್ಯೆ ಹೆಚ್ಚಿತು.

“ಆಶಾ ...ಉಷಾ ದೂರ ಹೋಗಬೇಡಿ, ಇಲ್ಲೇ ಆಡಿ”

ಯೂಕಲಿಪ್ಟಸ್ ಗಿಡಗಳ ನಡುವೆ ತೂರಿ ಓಡುತ್ತಿದ್ದ ಹುಡುಗಿಯರನ್ನು ಕುಸುಮ ಕೂಗಿದಳು

ಓಡುತ್ತಿದ್ದ ಮಕ್ಕಳು ಏದುಸಿರು ಬಿಡುತ್ತ ನಿಂತರು. ಕುಸುಮ ಹತ್ತಿರ ಬಂದು ಎರಡು ಕೈಲೂ ಅವರನ್ನು ಹಿಡಿದುಕೊಂಡು,

“ಇಳಿಜಾರಿನಲ್ಲಿ ಓಡಬಾರದು ಬಿದ್ದು ಕಾಲು ಮುರಿದುಕೊಂಡರೆ? ಮೇಲುಸಿರು ಬರುವಂತೆ ಯಾಕೆ ಓಡಬೇಕು? ಇಲ್ಲಿ ಎಲ್ಲಾದರೂ ಕೂಡೋಣ ಬನ್ನಿ.”

ಕುಸುಮ ಮಕ್ಕಳ ಕೈ ಹಿಡಿದುಕೊಂಡು ನಡೆದಳು. ಸ್ವಲ್ಪ ದೂರ ನಡೆದು ಸಮವಾಗಿದ್ದ ನೆಲದಮೇಲೆ ಕುಳಿತರು.

ಕೆಳಗೆ ತರಗೆಲೆಗಳ ರಾಶಿ.

ಮರಗಳ ಸಂದಿನಿಂದ ಬಿಸಿಲು ಇಣುಕಿ ನೋಡಲು ಯತ್ನಿಸುತ್ತಿತ್ತು. ಗಾಳಿ ಗಿಡಗಳ ಸಂದಿನಲ್ಲಿ ನುಸುಳಿ ತರಗೆಲೆಗಳನ್ನು ತೂರಿ, ಮಕ್ಕಳ ಮುಂಗುರುಳುಗಳನ್ನು ಕುಣಿಸಿ, ಕೆನ್ನೆಗೆ ಮುದ್ದಿಕ್ಕಿ ಮುಂದೆ ಓಡುತಿತ್ತು.

ಕಣ್ಣು ತಣಿಸುವ ನೋಟ.

ತಿರುಗಿದತ್ತ ಹೂ ಗಿಡಗಳು, ಎಲೆ ಬಳ್ಳಿಗಳು. ಬಂಡೆಗಳ ಬಿರುಕಿನಲ್ಲಿ ಸಹ ಹೂ ಬಳ್ಳಿಗಳು ಬಣ್ಣಬಣ್ಣದ ಕಿರುಹೂವುಗಳನ್ನು ಹೊತ್ತು ನಿಂತಿದ್ದುವು.

ಒಂದೆಡೆ ಸುಮ್ಮನೆ ಕುಳಿತಿರಲಾರದ ಮಕ್ಕಳು ಒಂದು ಕಡ್ಡಿಯಿಂದ ತರಗೆಲೆಗಳನ್ನು ಗುಡ್ಡೆಮಾಡುತ್ತ ಯಾರು ಹೆಚ್ಚಾಗಿ ಮಾಡುವರೆಂದು ಸ್ಪರ್ಧೆಯಿಂದ ಅಲ್ಲೇ ಒಂದು ಆಟದ ರಂಗವನ್ನು ನಿರ್ಮಿಸಿಕೊಂಡದ್ದುವು.

ಹಿಂದೆ ತರಗೆಲೆಗಳನ್ನು ತುಳಿದ ಸದ್ದು. ಅದನ್ನು ಹಿಂಬಾಲಿಸಿ ಬಂತು 'ನಮಸ್ಕಾರ' ಎಂಬ ಧ್ವನಿ.

ಕುಸುಮಾ ಕತ್ತು ಹೊರಳಿಸಿ ನೋಡಿದಳು

ಅದೇ ಮನುಷ್ಯ, ಹಿಂದಿನ ದಿನ ಊಟದ ಮನೆಗೆ ಹೋಗುತ್ತಿರುವಾಗ ಹೋಟೆಲಿನ ಕಿರುದಾರಿಯಲ್ಲಿ ತಟ್ಟನೆ ಎದುರಾಗಿದ್ದ.

ಇನ್ನು ಒಂದು ಹೆಜ್ಜೆ ಮುಂದೆ ಇಟ್ಟದ್ದರೆ ತಲೆ ತಗುಲುತಿತ್ತೋ ಏನೋ ? ಅಷ್ಟರಲ್ಲಿ ಆತ ತಟ್ಟನೆ ಬದಿಗೆ ಸರಿದು ನಿಂತು,

"ಕ್ಷಮಿಸಿ" ಎಂದು ಕೈಜೋಡಿಸಿದ್ದ.

"ಪರವಾಗಿಲ್ಲ" ಎಂದು ಅವಳು ನುಡಿಯುವುದರೊಳಗೆ ಮರೆಯಾಗಿದ್ದ.

ಆತ ಯಾರೋ ? ಏನೋ ?

ಇಂತಹ ಜಾಗಗಳಲ್ಲಿ ಪರಿಚಯಕ್ಕೆ ಅಷ್ಟು ಸಾಕು. ಕುಸುಮಾ ಪ್ರತಿವಂದನೆ ಮಾಡಿ, 'ನಮಸ್ಕಾರ' ಎಂದಳು.

ಕೋಲು ತಿರುಗಿಸುತ್ತ ಒಂದೆರಡು ಹೆಜ್ಜೆ ಮುಂದಿಟ್ಟವನು ತಟ್ಟನೆ ತಿರುಗಿ ನಿಂತು–

"ಇವತ್ತು ಹವಾ ಬಹಳ ಚೆನ್ನಾಗಿದೆ ಅಲ್ಲವೇ ?" ಎಂದು ಕೇಳಿದ.

"ಹೌದು"

ನಸುನಗೆಯಿಂದ ಉತ್ತರಿಸಿದಳು ಕುಸುಮಾ. ಆಡುತ್ತಿದ್ದ ಹುಡುಗರ ಹತ್ತಿರ ನಿಂತು,

"ನಿನ್ನ ಹೆಸರೇನು ಮಗು ?" ಎಂದ.

"ಆಶಾ ಉಷಾ"

ಅಕ್ಕ ತಂಗಿ ಜೊತೆಯಾಗಿ ಕೂಗಿದುವು.

"ಆಶಾ . ? ಉಷಾ ? ಬಹಳ ಮುದ್ದಾದ ಹೆಸರು "

ಗಾಳಿಯ ಹೊಡೆತಕ್ಕೆ ರಂಗೇರಿದ್ದ ಕೆನ್ನೆಗಳನ್ನು ಒಂದು ಸಲ ನಯವಾಗಿ ಸವರಿ ಅವನು ಮುಂದಕ್ಕೆ ಹೋದ.

ಅದೇ ದಿನ ಸಂಜೆ ಹೋಟೆಲಿನ ಮುಂಭಾಗದಲ್ಲಿದ್ದ ಲೌಂಜಿನಲ್ಲಿ ಹಾಕಿದ್ದ ಮೆತ್ತೆಯ ಸೋಫಾದಮೇಲೆ ಕುಸುಮ ಕುಳಿತಿದ್ದಳು. ಕೊಳವೆ ದೀಪದ ಬೆಳಕು ಅವಳ ಮುಖದ ಮೇಲೆ ಬಿದ್ದು, ಆಗತಾನೇ ತಿರುಗಾಡಿ ಬಂದಿದ್ದರಿಂದ ರಂಗೇರಿದ್ದ ಕೆನ್ನೆಗಳಿಗೆ ಕಾಂತಿಯನ್ನು ಚೆಲ್ಲಿತ್ತು. ಆಶಾ—ಉಷಾ ಎಡಬಲದಲ್ಲಿ ಕುಳಿತಿದ್ದರು.

ರೇಡಿಯೋ ಸಂಗೀತ ಹಿತವಾಗಿ ಕೇಳಿ ಬರುತ್ತಿತ್ತು.

ಅಲ್ಲಿ ಹೆಚ್ಚು ಜನ ಇರಲಿಲ್ಲ. ತಿರುಗಾಡಲು ಹೋಗಿದ್ದವರೆಲ್ಲ ಬರಬೇಕಾದರೆ ಇನ್ನೂ ಬಹಳ ಹೊತ್ತು. ಮಕ್ಕಳು ನಡೆಯಲಾರರೆಂದು ಸ್ವಲ್ಪವೇ ದೂರ ಹೋಗಿದ್ದ ಕುಸುಮಾ ಬೇಗ ಹಿಂತಿರುಗಿದ್ದಳು ಅವಳಂತೆಯೇ ಬೇಗ ಬಂದಿದ್ದ ಒಬ್ಬಿಬ್ಬರು ಅಲ್ಲಿದ್ದ ಸುಖಾಸನಗಳಲ್ಲಿ ಮಂಡಿಸಿ ಪತ್ರಿಕೆ ನೋಡುತ್ತ, ರೇಡಿಯೋ ಸಂಗೀತ ಆಲಿಸುತ್ತಿದ್ದರು.

"ಆಂಟಿ....ಅಮ್ಮ ಇನ್ನೂ ಬರಲಿಲ್ಲ ?"

"ಆಂಟಿ....ರೂಮಿಗೇ ಹೋಗೋಣ. ಇಲ್ಲಿ ಬೇಜಾರು"

ಆಶಾ, ಉಷಾ ಇಬ್ಬರೂ ಒಟ್ಟಿಗೆ ಕೇಳಿದರು. ಅವರು ಒಂದೇ ಸಲ ಒಟ್ಟಾಗಿ ಮಾತಾಡುವುದೇ ಹೆಚ್ಚು.

ಮುಖಕ್ಕೆ ಪತ್ರಿಕೆ ಮುಚ್ಚಿ ಓದುತ್ತ ಕುಳಿತಿದ್ದವ ತಟ್ಟನೆ ಪತ್ರಿಕೆ ಸರಿಸಿ ಇವರತ್ತ ನೋಡಿದ. ಕುಸುಮಾಳನ್ನು ನೋಡಿ ಪರಿಚಯದ ನಗು ಸೂಸಿ,

"ನಮಸ್ಕಾರ" ಎಂದ.

ಒಬ್ಬಳೇ ಕುಳಿತಿದ್ದ ಕುಸುಮಾ ಪರಿಚಿತರು ಕಾಣಿಸಿದಾಗ ಸ್ವಲ್ಪ ಉತ್ಸಾಹದಿಂದಲೇ "ನಮಸ್ಕಾರ" ಎಂದಳು

ಆತನಿಗೆ ಅವಳ ವಿಷಯ ತಿಳಿಯುವ ಕುತೂಹಲ, ಮಾತಾಡುವ ಆತುರ. ಲಕ್ಷಣವಾಗಿರುವ ಪ್ರಾಯದ ಹುಡುಗಿಯರನ್ನು ಕಂಡರೆ ಕುತೂಹಲ ಯಾರಿಗಿಲ್ಲ? ಅವನು ಬೆಳಗ್ಗೆ ಭೇಟಿಯಾದಾಗಲೇ ದಾರಿಯಲ್ಲಿ ಯೋಚಿಸಿದ್ದ

"ಇವಳು ಈ ಎರಡು ಮಕ್ಕಳ ತಾಯಿಯಂತೆ ಕಾಣುವುದಿಲ್ಲ ಆದರೂ ಹೇಗೋ?"

"ನೀವು ಯಾವಕಡೆ ಹೋಗಿದ್ದಿರಿ?" ಆತ ಪ್ರಶ್ನಿಸಿದ

"ಇಲ್ಲೇ ಹೋಟೆಲಿನ ಸುತ್ತ ಒಂದು ಸುತ್ತು ಹಾಕಿ ಯೂಕಲಿಪ್ಟಸ್ ಗಿಡದ ಕೆಳಗೆ ಕುಳಿತು ಬಿಸಿಲು ಕಾಯಿಸಿಕೊಂಡು, ಛಳಿ ಹೆಚ್ಚಾದ ಕೂಡ್ಲೆ ಬಂದು ಗೂಡು ಸೇರಿದೆವು. ಮಕ್ಕಳು ದೂರ ನಡೆಯಲಾರರು. ನೀವು ..?"

"ನಾನೇ ..? ನಿಜ ಹೇಳಬೇಕಾದರೆ ನಾನು ಎಲ್ಲಿಯೂ ದೂರ ಹೋಗಿಯೇ ಇಲ್ಲ. ಎಲ್ಲೋ ಒಂದು ಕಡೆ ಕುಳಿತು ಹೊತ್ತು ಕಳೀತಿದೀನಿ"

"ಹೊತ್ತು ಕಳೆಯಲಿಕ್ಕೆ ತಾನೇ ಇಲ್ಲಿಗೆ ಬರೋದು?"

ಕುಸುಮಾ ನಕ್ಕಳು ಆತ ಅವಳ ನಗುಮುಖವನ್ನು ನೋಡುತ್ತ 'ಎಂತಹ ಚೆಲುವೆ?' ಎಂದುಕೊಂಡ.

ಅವಳು ಕುಳಿತಿದ್ದ ಭಂಗಿ ಹಾಗಿತ್ತು. ನಗುವಾಗ ಸ್ವಲ್ಪ ಓರೆಯಾದ ಕತ್ತು, ಹಿಂಭಾಗದಲ್ಲಿ ಬೆನ್ನಿನ ಮೇಲೆ ಮಲಗಿದ್ದ ಎರಡು ಜಡೆಗಳು. ಬಲ ಗಿವಿಯ ಹಿಂದಕ್ಕೆ ಬರುವಂತೆ ಸಿಕ್ಕಿಸಿದ್ದ ದೊಡ್ಡ ಬಿಳಿಯ ಗುಲಾಬಿ. ಮೈಯನ್ನು ಮುಚ್ಚಿದರೂ ದೇಹದ ಸೊಬಗನ್ನು ಮುಚ್ಚದ, ರೇಖೆ ರೇಖೆಗಳನ್ನೂ ಉಬ್ಬು ತಗ್ಗುಗಳನ್ನೂ ಪ್ರದರ್ಶಿಸುವ ತೆಳು ಹಳದಿಯ ನೈಲಾನ್ ಸೀರೆ. ಆಶಾ ಅವಳನ್ನು ಎಳೆದಾಗ ಜಾರಿದ ಸೆರಗು.

ಒಂದು ರೀತಿಯಲ್ಲಿ ಆ ನೋಟ ಆಕರ್ಷಕವಾಗಿತ್ತು.

ಈಗ ಇಲ್ಲಿ ಚಿತ್ರ ಬರೆಯುವ ಸಾಧನ ಇದ್ದಿದ್ದರೆ? ಎಂದುಕೊಂಡ ಆತ. ಆದರೇನು? ರೂಮಿಗೆ ಹೋಗಿ ಚಿತ್ರಿಸಬಹುದು. ಮನಸ್ಸಿನಲ್ಲಿ ಒಮ್ಮೆ ಆ

ಚಿತ್ರ ಸ್ಪಷ್ಟವಾದರೆ ಸಾಕು.

"ಆಂಟಿ . ರೂಮಿಗೆ ಹೋಗೋಣ"

ಆಶಾ ಮತ್ತೆ ಕೈ ಹಿಡಿದು ಎಳೆದಳು.

ಆತ ಎದ್ದು ಹೋದ ಮತ್ತೆ ಎರಡು ನಿಮಿಷದಲ್ಲಿ ಎರಡು ಚಾಕೊಲೇಟ್ ಪ್ಯಾಕೆಟ್ ಹಿಡಿದು ಬಂದು ಇಬ್ಬರಿಗೂ ಕೊಟ್ಟ.

"ಥ್ಯಾಂಕ್ಸ್"

ಎರಡೂ ಒಟ್ಟಿಗೆ ಕೂಗಿದುವು.

"ಆಂಟಿ, ಇವರು ಯಾರು ?"

ಪೊಟ್ಟಣವನ್ನು ಬಿಚ್ಚುತ್ತ ಉಷಾ ಪ್ರಶ್ನಿಸಿದಳು.

"ಇವರೂ .." ಕುಸುಮಾ ತಡವರಿಸಿದಳು.

"ನನ್ನ ಹೆಸರು ವಸಂತ"

ಆತ ವಾಕ್ಯ ಮುಗಿಸಿದ

"ಅವರಿಗೆ ಒಂದು ಚೂರು ಕೊಡು. ನನಗೆ ಒಂದು ಚೂರು"

ಕುಸುಮಾ ಹೇಳಿದಳು.

"ನಾನು ವಸಂತ. ನೀನು ಉಷಾ, ಇವಳು ಆಶಾ, ಇವರು ?"

ವಸಂತ ಕುಸುಮಳ ಕಡೆ ಬೊಟ್ಟು ಮಾಡಿ ಕೇಳಿದ.

"ಇವರು ...ಕುಸುಮಾ ಆಂಟಿ"

ಆಶಾ ತಟ್ಟನೆ ಉತ್ತರಿಸಿದಳು.

"ಕುಸುಮಾ ..ಸೊಗಸಾದ ಹೆಸರು. ಇನ್ನು ನೀವು ಆಡ್ತಿರಬೇಕು. ಆಂಟೀಗೆ ಹಿಂಸೆ ಮಾಡಬಾರ್ದು"

ಚಾಕೊಲೇಟು ಕೊಟ್ಟವನ ಮಾತು ಮೀರುವಂತಿಲ್ಲ. ಮಕ್ಕಳು ಸುಮ್ಮನಾದರು.

"ನೀವು, ಮುಂಬಯಿಯಿಂದ ಬಂದಿರ ?"

ವಸಂತ ಕುತೂಹಲದಿಂದ ಕೇಳಿದ.

"ನಮ್ಮ ಊರು ಕೋಲಾರದ ಹತ್ತಿರ ಒಂದು ಹಳ್ಳಿ. ಸಧ್ಯಕ್ಕೆ ಇರೋದು ಮುಂಬಯಿಯಲ್ಲಿ. ನಿಮಗೆ ಹೇಗೆ ಗೊತ್ತಾಯ್ತು ?"

"ನಿಮ್ಮ ಜೊತೆ ಆ ದಿನ ಒಬ್ಬರು ಊಟಕ್ಕೆ ಕೂತಿದ್ದರಲ್ಲ. ಅವರನ್ನು

ನೋಡಿ ಹಾಗೆನಿಸಿತು. ಎಲ್ಲಿ ಅವರು ?"

"ಅವರು ನನಗೆ ಭಾವ ಆಗಬೇಕು ಅಕ್ಕ-ಭಾವ ತಿರುಗಾಡಲು ಹೋಗಿದಾರೆ. ನಾವು ಬಂದಿರೋದು ಆವರಿಗಾಗಿಯೆ. ಡಾಕ್ಟರು ವಿಶ್ರಾಂತಿ ತೆಗೆದುಕೊಳ್ಳಲು ಸಲಹೆ ಮಾಡಿದಾರೆ."

"ಆರೋಗ್ಯ ಚೆನ್ನಾಗಿಲ್ಲವೆ ?"

"ಅಂಥದೇನಿಲ್ಲ. ಮುಂಬಯಿಯಲ್ಲಿ ಬಿಸಿನೆಸ್ ಮಾಡ್ತಿದಾರೆ. ತುಂಬಾ ಕೆಲಸ ಅಲ್ಲಿದ್ದರೆ ವಿಶ್ರಾಂತಿ ಸಾಧ್ಯವಿಲ್ಲ "

"ಕುಸುಮ್ ...ತುಂಬಾ ಹೊತ್ತಾಯ್ತು ನೀನು ಬಂದು ? ರೂಮಿನ ಕೀಲಿ ಕೈ ನನ್ನಲ್ಲೇ ಉಳಿದು ಹೋಗಿತ್ತು"

ರಾಗವಾಗಿ ಮಾತಾಡುತ್ತ ವ್ಹೈಯ್ಯಾರದಿಂದ ಬಳುಕುತ್ತ ಕುಸುಮಳ ಅಕ್ಕ ಪ್ರತ್ಯಕ್ಷವಾದಳು. ಅವಳನ್ನು ಹಿಂಬಾಲಿಸಿ ಅವಳ ಗಂಡನೂ ಒಳಗೆ ಬಂದರು.

ವಸಂತ ಕತ್ತೆತ್ತಿ ಒಂದು ಕ್ಷಣ ಇಬ್ಬರನ್ನೂ ದಿಟ್ಟಿಸಿದ.

ಬೆಲೆ ಬಾಳುವ ಉಣ್ಣೆಯ ನಿಲುವಂಗಿಗಳನ್ನು ಇಬ್ಬರೂ ಧರಿಸಿದ್ದರು. ಅಕ್ಕನ ಸುತ್ತ ಸಿರಿಯ ಛಾಯೆ ಪರಿವೇಷದಂತೆ ಆವರಿಸಿತ್ತು ಅವಳ ಮಾತು, ನಡೆ, ನಗು, ಎಲ್ಲದರಲ್ಲೂ ಸಂಪತ್ತಿನ, ತೃಪ್ತಿಯ ಝಳುಕು ಒಡಮೂಡುತಿತ್ತು.

ಆತ ಸಿರಿವಂತ ವ್ಯಾಪಾರಿ.

ಬಡತನದಿಂದಲೇ ಅದೃಷ್ಟ ಪರೀಕ್ಷೆಗಾಗಿ ಹೊರಗೆ ಹೋದವ. ಮುಂಬಯಿಯಲ್ಲಿ ಭಾಗ್ಯಲಕ್ಷ್ಮಿ ಒಲಿದಿದ್ದಳು ಅವಳು ಹಿಂದಿನಿಂದ ಬಂದು ಭುಜದ ಮೇಲೆ ಕೈ ಇಟ್ಟಂತೆ, ಆರೋಗ್ಯ ಲಕ್ಷ್ಮಿ ಸುಳಿವು ಕೊಡದಂತೆ ನಿಧಾನವಾಗಿ ಅವನ ಕೈ ಬಿಡಿಸಿಕೊಂಡು ಜಾರುತ್ತಿದ್ದಳು.

ಅಕ್ಕ ತಂಗಿಯರ ನಡುವೆ ಎಷ್ಟು ಅಂತರ !

ಹೋಲಿಕೆ ಸಹ ಇಲ್ಲ. ವೇಷ ಭೂಷಣಗಳೂ ಅಷ್ಟೆ ! ಮಕ್ಕಳನ್ನು ಲಾಲಿಸುತ್ತ ಸಾಧಾರಣ ಉಡುಪಿನಲ್ಲಿರುತ್ತಿದ್ದ ಕುಸುಮಾಳನ್ನು ಮಕ್ಕಳ 'ಶಿಕ್ಷಕಿ' ಎಂದು ಯಾರಾದರೂ ಹೇಳಬಹುದಿತ್ತು.

"ಮಮ್ಮಿ .. ಅಂಕಲ್ ಚಾಕೊಲೇಟ್ ಕೊಟ್ಟಿದಾರೆ"

ಆಶಾ ಚಾಕೊಲೇಟ್ ಚೂರನ್ನು ಚೀಪುತ್ತ ಕೂಗಿದಳು

ಅಕ್ಕ-ತಂಗಿಯತ್ತ ನೋಡಿ ಪ್ರಶ್ನಾರ್ಥಕವಾಗಿ ಹುಬ್ಬೇರಿಸಿದಳು.

"ಇವರು ವಸಂತರಾವ್. ಇದೇ ಹೋಟೆಲಿನಲ್ಲಿದಾರೆ. ಇವರು ನನ್ನ ಅಕ್ಕ-ಭಾವ"

ಕುಸುಮಾ ಪರಿಚಯ ಮಾಡಿಸಿದಳು.

ವಸಂತ ಎದ್ದು ಹತ್ತಿರ ಬಂದು ಕುಸುಮಳ ಅಕ್ಕನಿಗೆ ಕೈ ಜೋಡಿಸಿ ವಂದಿಸಿ, ಭಾವನವರ ಕೈ ಕುಲುಕಿದ.

"ನಿಮ್ಮ ಪರಿಚಯವಾದದ್ದು ಸಂತೋಷ"

- ಎಂದು ಉಪಚಾರದ ನುಡಿ ನುಡಿದ.

"ನಿಮ್ಮ ಪರಿಚಯವೇನೋ ಆಯ್ತು. ನಮ್ಮ ಕುಸುಮ್ ಇದ್ದಕಡೆ ಸ್ನೇಹಿತರಿಗೆ ಬರವಿಲ್ಲ, ತಾವು ಇರೋದು ಎಲ್ಲಿ ?"

ಅಕ್ಕನಿಂದ ಸಂಗೀತದಂತೆ ರಾಗವಾಗಿ ಮಾತು ಹೊರಬಂತು.

ವಸಂತನಿಗೆ ಏಕೋ ಬೇಸರವೆನಿಸಿತು. ತಂಗಿಯನ್ನು ಕುರಿತು ಆಕೆ ಆಡಿದ ವ್ಯಂಗ್ಯ ನುಡಿ ಅವನಿಗೆ ಹಿಡಿಸಲಿಲ್ಲ. ತಂಗಿಯನ್ನು ತಮ್ಮೊಡನೆ ಬರುವಂತೆ ಕರೆಯಲಾರರು. ಮಕ್ಕಳನ್ನು ಅವಳ ಕೊರಳಿಗೆ ಕಟ್ಟಿ ತಾವು ಅಲೆಯೋದಲ್ಲವೆ, ಅವಳು ಯಾರೊಡನೆ ಮಾತಾಡಿದರೂ ಸೈರಣೆ ಇಲ್ಲ.

"ನಾನು ಇರೋದು ಹೈದರಾಬಾದಿನಲ್ಲಿ. ನಿಮ್ಮ ತಂಗಿಯ ಸ್ನೇಹಿತನಲ್ಲ ನಾನು ಇಲ್ಲಿ ಎದುರಿಗೆ ಸಿಕ್ಕಾಗ ಮುಖ ಪರಿಚಯ ಅಷ್ಟೆ! ಇಂತಹ ಕಡೆ ಅದು ಅನಿವಾರ್ಯ"

ಆತ ವ್ಯಂಗ್ಯವಾಗಿ ಹೇಳಿದ.

"ರೂಮಿಗೆ ಹೋಗೋಣ. ಬಟ್ಟೆ ಬದಲಿಸಿ ಊಟ ಮಾಡಲು ಸರಿ ಹೋಗುತ್ತೆ"

ಗಂಡ ಅಸಹನೆಯಿಂದ ನುಡಿದು ಮುಂದಕ್ಕೆ ಹೆಜ್ಜೆ ಇಟ್ಟ.

ಮೈ ಕುಲುಕಿ ಕೈ ಜೋಡಿಸಿ, ನಗುತ್ತ ಆಕೆ ಗಂಡನನ್ನು ಹಿಂಬಾಲಿಸಿದಳು. ಅವಳು ಮೈಗೆ ಲೇಪಿಸಿಕೊಂಡಿದ್ದ ಪರಿಮಳ ಅವಳನ್ನು ಅನುಸರಿಸಿತು.

"ನಾವೂ ರೂಮಿಗೆ ಹೋಗೋಣ"

ಹುಡುಗರು ಮತ್ತೆ ಕೇಳಿದರು.

"ಅಮ್ಮ ಇಲ್ಲೇ ಬರ್ತಾಳಲ್ಲ! ಇಲ್ಲಿಂದಲೇ ಎಲ್ಲ ಒಟ್ಟಿಗೆ ಊಟಕ್ಕೆ ಹೋಗೋಣ"

ಕುಸುಮಾ ಅವರನ್ನು ಸಮಾಧಾನ ಮಾಡಿದಳು

"ಹೋಗಲಿ ಬಿಡಿ ಪಾಪ, ತಾಯಿಯ ಬಳಿ ಇರಲು ಮಕ್ಕಳು ಇಷ್ಟ ಪಡುವುದು ಸಹಜ"

ವಸಂತ ಮಕ್ಕಳ ಪರವಾಗಿ ಮಾತಾಡಿದ.

"ಅದೇನೋ ಸರಿ. ಆದರೆ.. ಭಾವ ಇಷ್ಟಪಡಲ್ಲ. ಅವರಿಗೆ ನರಗಳ ದೌರ್ಬಲ್ಯ. ಇವರ ಗಲಾಟೆ ತಡೆಯೋದು ಕಷ್ಟ. ಅದಕ್ಕೆಂವೇ ಆಫೀಸಿಗೆ ರಜಾ ಹಾಕಿಸಿ ನನ್ನನ್ನು ಜೊತೆಗೆ ಕರತಂದಿರೋದು"

"ಹಾಗಾದರೆ... ನೀವು ಕೆಲಸದಲ್ಲಿದೀರ ?"

"ಹೊಂ... ಮುಂಬಯಿಯ ಆಫೀಸೊಂದರಲ್ಲಿ ಕೆಲಸ ಮಾಡ್ತಿದೀನಿ. ಅಲ್ಲಿನ ಅಸಂಖ್ಯ ದುಡಿಯುವ ಹೆಂಗಸರಲ್ಲಿ ನಾನೂ ಒಬ್ಬಳು."

ವಸಂತನ ಕಣ್ಣುಗಳಲ್ಲಿ ಕುತೂಹಲ ಮಿಂಚಿತು. ತನ್ನಲ್ಲಿ ಆಸಕ್ತಿಯನ್ನು ಕೆರಳಿಸಿದ ಕುಸುಮಾಳ ಬಗೆಗೆ ಹೆಚ್ಚು ತಿಳಿಯುವ ಕುತೂಹಲ ಅವನಿಗೆ. ಅವನು ಮತ್ತೇನೋ ಕೇಳಬೇಕೆಂದು ಬಾಯಿ ತೆರೆಯುವುದರಲ್ಲಿ ಕುಸುಮಳ ಅಕ್ಕ, ಭಾವ, ಬಟ್ಟೆ ಬದಲಿಸಿ ಊಟಕ್ಕೆ ಹೋಗಲು ಬಂದರು.

ಭಾವ ಮುಂಬಯಿಯ ಸೇಠಜಿಗಳಂತೆ ತೆಳ್ಳನೆಯ ಮಲ್ಲು ಪಂಚೆ, ಜುಬ್ಬ ಧರಿಸಿದ್ದರು. ತಲೆಯಮೇಲೊಂದು ಕರಿಯ ಟೋಪಿ, ಬೋಳಾಗುತ್ತಿದ್ದ ಭಾಗವನ್ನು ಮರೆಮಾಡಲು ಯತ್ನಿಸುವಂತಿತ್ತು. ಕನ್ನಡಕ ಧರಿಸಿದ್ದ ಮುಖದಲ್ಲಿ ಮುಪ್ಪಿನ ಗೆರೆಗಳು ಇಣುಕುತ್ತಿದ್ದುವು.

ಅಕ್ಕ ಮತ್ತೊಮ್ಮೆ ಹೊಸದಾಗಿ ಅಲಂಕಾರ ಮಾಡಿಕೊಂಡಂತಿತ್ತು. ಹೊರಗೆ ತಿರುಗಾಡಲು ಹೋದಾಗ ಉಟ್ಟಿದ್ದ ಧರ್ಮಾವರದ ಕಲಾಬತ್ತು ಸೀರೆಗಿಂತ ಸಾಧಾರಣ ಬಿಳಿಯ ಸೀರೆಯಲ್ಲಿ, ಅವಳ ಅಲಂಕಾರ ಎದ್ದು ಕಾಣುವಂತಿತ್ತು.

"ಹೋಗೋಣವೇ ಕುಸುಮ್ ?"

ಅಕ್ಕ ತನ್ನ ಸುತ್ತ ನೋಟ ಹರಿಸಿ, ಮೆಚ್ಚುಗೆಯ ನೋಟಗಳು ತನ್ನತ್ತ ಹರಿಯುತ್ತಿವೆ ಎಂದು ಖಚಿತಮಾಡಿಕೊಂಡು ನಯವಾಗಿ ಉಲಿದಳು.

"ಓ....ಸಿದ್ಧವಾಗಿಯೇ ಇದೀನಿ"

ಪ್ಯೆಟ ಕೊಡವಿಕೊಂಡು ನಿಂತಿದ್ದಂತೆ ಹೊರಟಳು ಕುಸುಮಾ....ಎರಡು

ಕೈಗಳಲ್ಲೂ ಇಬ್ಬರು ಹುಡುಗಿಯರ ಕೈ ಹಿಡಿದುಕೊಂಡು.

ಅಕ್ಕ ತಂಗಿಯರಲ್ಲಿ ಎಷ್ಟು ಅಂತರ !

ವಸಂತನ ಮುಖದಲ್ಲಿ ಕಾಣಿಸುತ್ತಿದ್ದ ಹತ್ತಾರು ಪ್ರಶ್ನೆಗಳಿಗೆ ಕುಸುಮಳ ನಸುನಗು ಒಂದೇ ದೊರೆತ ಉತ್ತರ.

* * *

ಎರಚುತ್ತಿದ್ದ ತಂಗಾಳಿಗೆ ಎದುರಾಗಿ ಅಕ್ಕನ ಶಾಲು, ಸ್ವೆಟರ್‌ಗಳಿಂದ ರಕ್ಷಣೆ ಪಡೆದ ಕುಸುಮಾ ಮರದ ನೆರಳಿನಲ್ಲಿ ಕಾಲುನೀಡಿ ಕುಳಿತಿದ್ದಳು. ಹುಡುಗರು ಸ್ವಲ್ಪ ದೂರದಲ್ಲಿ ಆಡುತ್ತಿದ್ದರು. ಕಿವಿ ಮುಚ್ಚುವಂತೆ ತಲೆ ಸುತ್ತ ಸುತ್ತಿದ್ದ ರೇಷ್ಮೆಯ ವಸ್ತ್ರದ ಸಂದಿನಿಂದ ಹೊರಬಂದಿದ್ದ ಕೂದಲಿನ ಸುರಳಿಗಳು ಗಾಳಿಗೆ ನರ್ತಿಸುತ್ತಿದ್ದುವು

ಕೈಲಿ ಹಿಡಿದಿದ್ದ ಪುಸ್ತಕದ ಮೇಲೆ ನೋಟ ಹರಿಯುತ್ತಿದ್ದರೂ, ಮನಸ್ಸು ಬೇರೆಲ್ಲೋ ಅಲೆಯುತ್ತಿತ್ತು.

ಮೂರು ದಿನಗಳಿಂದ ವಸಂತನ ಭೇಟಿಯಾಗಿರಲಿಲ್ಲ. ಅಂದು ಕೈಲಿ ಒಂದು ಲೋಟದಲ್ಲಿ ಹಾಲೋ ಏನೋ ಹಿಡಿದುಕೊಂಡು ಎದುರಾಗಿದ್ದ. ಕುಸುಮ 'ನಮಸ್ಕಾರ' ಎಂದು ವಂದಿಸಿದಾಗ ಲೋಟ ಹಿಡಿದಿದ್ದಂತೆ, ತಲೆ ಬಾಗಿಸಿ ಪ್ರತಿವಂದನೆ ಮಾಡಿದ್ದ.

ಸ್ವಲ್ಪ ಕೆದರಿದಂತಿದ್ದ ಕೂದಲು ಅವನ ಮುಖಕ್ಕೆ ಎಳೆತನದ ಲೇಪ ಹಾಕಿತ್ತು. ಆ ನಗು ! ಅದರಲ್ಲಿ ನೂರು ಅರ್ಥ ಕಾಣಬಹುದಿತ್ತು.

ಪ್ರತಿದಿನ ಅನಿವಾರ್ಯವಾಗಿ ಅವನ ಭೇಟಿ ಆಗುತ್ತಿತ್ತು. ಹೋಟೆಲಿನ ಲೌಂಜಿನಲ್ಲಿ ಅಥವಾ ಊಟದ ಮನೆಯಲ್ಲಿ ಮಾತಾಡಲು ಅವಕಾಶ ಸಿಗದಿದ್ದರೂ, ವಂದನೆ ಪ್ರತಿವಂದನೆ ಮುಗುಳ್ನಗೆಯ ವಿನಿಮಯಕ್ಕಾದರೂ ಅವಕಾಶ ವಿರುತ್ತಿತ್ತು.

ಅವನ ನೋಟದಲ್ಲಿ ಮೆಚ್ಚುಗೆ ಮುಚ್ಚುಮರೆ ಇಲ್ಲದೆ ಕಾಣಿಸುತ್ತಿತ್ತು. ಆಫೀಸಿನಲ್ಲಿ ಕೆಲಸ ಮಾಡುತ್ತಿದ್ದ ಕುಸುಳಿಗೆ ಗಂಡಸರ ಮೆಚ್ಚುಗೆಯ ನೋಟ ಹೊಸದಲ್ಲ. ಸಹೋದ್ಯೋಗಿಗಳೊಡನೆ ನಗು ನಗುತ್ತ ಮಾತಾಡುವುದು, ಎಂದಾದರೊಮ್ಮೆ ಒಟ್ಟಾಗಿ ಚಹ ಕುಡಿಯುವುದು ಇವೆಲ್ಲ ಇದ್ದದ್ದೆ.

ಆದರೂ....ಎಂದೂ ಆ ನೋಟಗಳು ಅವಳನ್ನು ಆಕರ್ಷಿಸಿರಲಿಲ್ಲ. ಮೈ ಬಿಸಿಯಾಗುವಂತೆ, ನವಿರೇಳುವಂತೆ ಮಾಡಿರಲಿಲ್ಲ.

ಕಾಲು ಉಗುರಿನಿಂದ ತಲೆಗೂದಲಿನ ಸುರುಳಿಯವರೆಗೆ ಅಲಂಕಾರ ಮಾಡಿಕೊಂಡು ಮೆರೆಯುತ್ತಿದ್ದ ಅಕ್ಕನಿಗಿಂತ, ಸರಳ ಸಾದಾ ಉಡುಪಿನಲ್ಲಿ ನೀನು ಸುಂದರವಾಗಿ ಕಾಣಿಸುವೆ-ಎಂದು ಅವನ ನೋಟ ಹೇಳುವಂತಿರಲಿಲ್ಲವೆ?

ಹಿಂದಿನಿಂದ ತರಗೆಲೆ ತುಳಿದು ಸದ್ದುಮಾಡಿ ಕೋಲು ಬೀಸುತ್ತ ಈ ದಿನ ಆತ ಬರಬಹುದಲ್ಲವೆ ...?

ಏಕೆ ಬರಬಾರದು ? ಬರುವ ಸಂಭವ ಇದ್ದೇ ಇವೆ.

"ಆಂಟಿ ಹೋಗೋಣ, ಆಟ ಬೇಜಾರಾಯ್ತು"

ಹುಡುಗಿಯರು ಹತ್ತಿರ ಬಂದು ಎಳೆಯತೊಡಗಿದರು. ಪುಸ್ತಕ ಮುಚ್ಚಿ ಕುಸುಮಾ ಎದ್ದು ನಿಂತಳು.

"ಸಾಯಂಕಾಲ ಬೇರೆ ಕಡೆ ಹೋಗೋಣ. ದಿನಾ ಇಲ್ಲೇ ಬರಬೇಕೆ ?" ಆಶಾ ಕೇಳಿದಳು.

"ಅಮ್ಮ ಚೆನ್ನಾಗಿದೆ ಎಂದಳಲ್ಲ, ಅಲ್ಲಿ ಹೋಗೋಣ" ಎಂದು ಉಷಾ ಹೇಳಿದಾಗ ಕುಸುಮಾ ಒಪ್ಪಿಕೊಂಡಳು.

ಸಂಜೆ ಎಂದಿಗಿಂತ ಮುಂಚೆಯೇ ಮೂವರೂ ಹೊರಟರು. ಆ ಜಾಗವೂ ಹೋಟೆಲಿಗೆ ಹತ್ತಿರವಾಗಿಯೇ ಇತ್ತು. ಗುಡ್ಡದ ಸುತ್ತ ಹೂವಿನ ಬಳ್ಳಿಗಳು ಹಬ್ಬಿ ವರ್ಣಮಯವಾಗಿತ್ತು. ಸಂಜೆಯ ಹೊಂಬಿಸಿಲು ಗುಡ್ಡಕ್ಕೆ ಹೊನ್ನಿನ ಹೊದಿಕೆ ತೊಡಿಸಿದಂತಿತ್ತು.

ಎಂದಿನಂತೆ ಒಂದು ಗಿಡದ ಬುಡಕ್ಕೆ ಒರಗಿ ಕುಸುಮಾ ಕುಳಿತಳು. ಮಕ್ಕಳು ಹೂವು ಆರಿಸಲು ಓಡಾಡುತ್ತಿದ್ದರು.

ಆ ಜಾಗ ನಿಜವಾಗಿಯೂ ರಮ್ಯವಾಗಿತ್ತು. ಮೊದಲೇ ಗೊತ್ತಿದ್ದಿದ್ದರೆ ದಿನವೂ ಇಲ್ಲಿಗೇ ಬರಬಹುದಿತ್ತು. ಅಕ್ಕ ಸುಮ್ಮನೆ ಹೊಗಳುವಳೇ ? ಕೈ ನೀಡಿದತ್ತ ಹೂವುಗಳು. ಕುಸುಮಾ ಕುಳಿತಂತೆ ಬಗ್ಗಿ ಸಣ್ಣ ಗುಲಾಬಿಯಂತೆ ಕಾಣುತ್ತಿದ್ದ ಒಂದು ಬಿಳಿಯ ಹೂವನ್ನು ಕಿತ್ತು ಕೆನ್ನೆಗೆ ಒತ್ತಿದಂತೆ ಹಿಡಿದುಕೊಂಡಳು. ವಾಸನೆಯಿಲ್ಲದ ಹೂವು ಅದು. ಮೂಗಿನ ಬಳಿ ತಂದರೂ ವಾಸನೆಯಿಲ್ಲ. ಆದರೂ ನೋಡಲು ಮುದ್ದಾಗಿದೆ ! ಅಲ್ಲಿದ್ದ

ಅನೇಕ ಹೂವುಗಳು ಅದೇ ಜಾತಿಯವು.

ಹೂವಿಗೆಲ್ಲ ವಾಸನೆ ಇರಲೇಬೇಕೆಂಬ ನಿಯಮವೇನು ? ಇದ್ದರೆ ಚೆನ್ನ. ಆದರೂ ಈ ಹೂವುಗಳು ಇಲ್ಲಿನ ಚೆಲುವನ್ನು ಹೆಚ್ಚಿಸಿಲ್ಲವೇ ? ಒಂದು ಸಲ ಬಂದವರಿಗೆ ಮತ್ತೊಮ್ಮೆ ಬರಬೇಕೆಂಬ ಬಯಕೆ ಬರುವಂತೆ ಮಾಡಿಲ್ಲವೆ ?

ಸುತ್ತಲಿನ ಚೆಲುವನ್ನು ಉಂಡು, ಮೈ ಮರೆತಂತೆ ಕುಳಿತಿದ್ದ ಕುಸುಮಾಳಿಗೆ ತನ್ನ ಹತ್ತಿರ ಯಾರೋ ಬಂದು ನಿಂತದ್ದು ತಕ್ಷಣ ಗೊತ್ತಾಗಲಿಲ್ಲ.

ಆಕೆ ತೀರಾ ಹತ್ತಿರ ಬಂದು "ನಮಸ್ಕಾರ" ಎಂದಾಗ ತಟ್ಟನೆ ತಲೆ ಎತ್ತಿ ನೋಡಿದಳು.

"ಈ ಜಾಗಕ್ಕೆ ಯಾರೂ ಬರುವುದಿಲ್ಲವೇನೋ ಎಂದುಕೊಂಡಿದ್ದೆ" ಆಕೆ ಯಾವ ಸಂಕೋಚವೂ ಇಲ್ಲದೆ ಮಾತಿಗೆ ಆರಂಭಿಸಿದಳು.

ಕುಸುಮಾ ಸ್ವಲ್ಪ ಪಕ್ಕಕ್ಕೆ ಸರಿದು ಬಂದವಳಿಗೆ ಜಾಗ ಮಾಡಿ ಕೊಟ್ಟಳು. ಮಾತಾಡಲು ಜೊತೆ ಸಿಕ್ಕಿದ್ದು ಅವಳಿಗೂ ಸಂತೋಷವೆ! ಒಬ್ಬಳೇ ಕುಳಿತು ಅವಳಿಗೂ ಬೇಸರ ಬಂದಿತ್ತು. ಸಮವಯಸ್ಕರಾದ ಇಬ್ಬರೂ ಹಳೆಯ ಗೆಳತಿಯರಂತೆ ಮಾತಿನಲ್ಲಿ ಮುಳುಗಿದರು. ಹೊಸದಾಗಿ ಬಂದವಳು ಮಾತುಗಾರ್ತಿ. ಕಲ್ಲನ್ನಾದರೂ ಹಿಡಿದು ಮಾತಾಡಿಸುವ ಸ್ವಭಾವ. ಅಂತಹುದರಲ್ಲಿ ಒಳ್ಳೆಯ ಜೊತೆ ಸಿಕ್ಕರೆ ?

"ನನ್ನ ಹೆಸರು ಶಾರದ. ನಿಮ್ಮದು....?"

"ಕುಸುಮಾ"

ಬಾಯಿಗೆ ಬಂದ ವಿಚಾರವನ್ನೆಲ್ಲ ಹರಟಿದ ಮೇಲೆ ಪರಸ್ಪರ ಪರಿಚಯ ತಿಳಿಯುವ ಕುತೂಹಲದಿಂದ ಮಾತು ವೈಯಕ್ತಿಕವಾಯ್ತು. ಮುಂದೆ ಬರಬಹುದಾದ ಪ್ರಶ್ನೆಗಳು ಏನೆಂದು ಕುಸುಮಾಳಿಗೆ ಗೊತ್ತು, ಬಂದಾಕೆ ಒಂದೊಂದಾಗಿ ಕೇಳುವ ಮೊದಲೇ ತಾನೇ ಸಂಕ್ಷೇಪವಾಗಿ ತನ್ನ ಪರಿಚಯ ಹೇಳಿದಳು.

"ನಿಮ್ಮದೇ ಮಕ್ಕಳು ? ಬಹಳ ಚೂಟಿಯಾಗಿದಾರೆ"

"ಅಲ್ಲ, ನಮ್ಮ ಅಕ್ಕನ ಮಕ್ಕಳು. ನಾನು ಅವರ ಜೊತೆಯಲ್ಲಿ ಇಲ್ಲಿಗೆ ಬಂದಿದೇನೆ. ಅಕ್ಕ ಅವಳ ಗಂಡನೊಡನೆ ತಿರುಗಾಡಲು ಹೋಗ್ತಾಳೆ. ಇವತ್ತು ಅವರು ಬೋಟಿನಲ್ಲಿ ಹೋಗೋದಾಗಿ ಹೇಳಿದ್ದರು"

"ಮಕ್ಕಳಿಗೆ ನಿಮ್ಮ ಜೊತೆ ? ಪರವಾಗಿಲ್ಲ ಜಾಣರು"

"ದುಡ್ಡು ಖರ್ಚುಮಾಡಿ ನನ್ನ ಕರೆದುಕೊಂಡು ಬಂದಿರೋದೆ ಅದಕ್ಕೆ. ಜಾಣತನದ ಪ್ರಶ್ನೆ ಇಲ್ಲ"

"ಅದೇನೋ ಸರಿ, ಇಷ್ಟುದೂರ ಬಂದು ಎಲ್ಲವನ್ನೂ ನೋಡುವ ಆಸೆ ನಿಮಗಿಲ್ಲವೇ? ಎಲ್ಲರೂ ಒಟ್ಟಿಗೇ ಹೋಗಬಹುದು." ಸಾರ್ವಜನಿಕ ಸ್ಥಳ. ಹತ್ತು ಜನ ಇರುವ ಕಡೆ ಮಕ್ಕಳು ಇರಬಾರದೆ?"

"ಯಾವಾಗಲೂ ಹತ್ತು ಜನ ಇರುವ ಕಡೆಗೇ ಹೋಗುವುದಿಲ್ಲವಲ್ಲ? ಅಲ್ಲದೆ ಈ ಹುಡುಗೀರು ವಿಪರೀತ ಗಲಾಟೆ ಮಾಡ್ತಾರೆ. ನಮ್ಮ ಭಾವನಿಗೆ ಅದು ಆಗಲ್ಲ ವಿಶ್ರಾಂತಿಗೆಂದು ಮುಂಬಯಿಯ ಗಲಾಟೆ ತಪ್ಪಿಸಿಕೊಂಡು ಇಲ್ಲಿಗೆ ಬಂದಿದಾರೆ"

"ನೀವು ಇರೋದು ಎಲ್ಲಿ ?"

ಕುಸುಮಾ ಒಂದು ಕ್ಷಣ ಯೋಚಿಸುವಂತೆ ಸುಮ್ಮನಿದ್ದಳು.

"ನಾನೂ ಮುಂಬಯಿಯಲ್ಲೇ ಅಕ್ಕನ ಜೊತೆ ಇದೀನಿ. ತಾಯಿತಂದೆ ಊರಿನಲ್ಲಿದಾರೆ, ಅನುಕೂಲ ಕಡಿಮೆ. ಭಾವ ಮುಂಬಯಿಯ ಆಫೀಸಿನಲ್ಲಿ ನನಗೊಂದು ಕೆಲಸ ಕೊಡಿಸಿದಾರೆ. ಊಟ, ತಿಂಡಿ, ವಾಸ, ಅಕ್ಕನ ಜೊತೆ ಬಿಟ್ಟಿಯಾಗಿ ಕಳೀತಿದೆ. ನನ್ನ ಸಂಪಾದನೆಯಿಂದ ಮನೆಯವರಿಗೆ ಸ್ವಲ್ಪ ಸಹಾಯವಾಗ್ತಿದೆ. ಅದೇ ನನಗೆ ಸಮಾಧಾನ. ಇನ್ನು ನಿಮ್ಮ ವಿಚಾರ ಹೇಳಿ"

ಕುಸುಮಾ ಕೇಳಿದಳು.

ಕುಸುಮಾಳ ಮಾತಿನ ಧಾಟಿಗೆ ಶಾರದ ಮನಃಪೂರ್ವಕವಾಗಿ ದೊಡ್ಡದಾಗಿ ನಕ್ಕಳು.

"ಪರವಾಗಿಲ್ಲ, ನೀವು ಚೆನ್ನಾಗಿ ಮಾತಾಡ್ತೀರಿ"

"ಅಷ್ಟೇ, ನನಗಿರೋದು ಅದೊಂದೆ. ಅದರಲ್ಲೇ ಸಂತೋಷ ಕಾಣಬೇಕು ನಾವು. ಹೇಳಿ ನಿಮ್ಮ ವಿಷಯ"

"ನನ್ನ ಆರೋಗ್ಯ ಕೆಟ್ಟಿತ್ತು. ಇಲ್ಲಿ ಸರಿಹೋಗಬಹುದೆಂದು ಹೇಳಿದರು, ಬಂದೆವು"

"ಓ....ಬಂದದ್ದರಿಂದ ಅನುಕೂಲವಾಯ್ತೇನು ?"

"ನನಗೇನೂ ಅಂತಹ ಅನುಕೂಲ ಕಾಣಲಿಲ್ಲ. ಆದರೆ ನನ್ನ ಖಾಯಿಲೆ

ಯಿಂದಾಗಿ ಬತ್ತಿ ಹೋಗಿದ್ದ ಅವರ ಸ್ಫೂರ್ತಿ ಮತ್ತೆ ಚಿಗುರಿದೆ"

ಆಕೆ ನಕ್ಕಂತೆ ತೋರಿತು, ಆ ನಗುವಿನಲ್ಲಿ ಸಂತಸಕ್ಕಿಂತ ನೋವಿನ ಅಂಶವೇ ಹೆಚ್ಚಾಗಿದ್ದಂತೆ ಕುಸುಮಾಳಿಗೆ ತೋರಿತು.

ಏನೋ ನೆನಪಾದಂತಾಗಿ ತಟ್ಟನೆ ಕೇಳಿದಳು–

"ನಿಮ್ಮ ಜೊತೆ ಬಂದಿರುವವರು ಚಿತ್ರಗಾರರೇನು ?"

"ಹೊಂಹೆ .. ಗೆ ಹೇಳಿದಿರಿ ?"

"ಸ್ಫೂರ್ತಿ ಎಂದಿರಲ್ಲ, ಏನೋ ಹಾಗೆ ತೋರಿತು. ಇಲ್ಲಿ ಬಂದಮೇಲೆ ಚಿತ್ರ ಬರೆದಿರುವರೇನು ?"

"ಹೊಂ ...ಬರೆದಿದಾರೆ, ಬಣ್ಣ ಹಿಡಿದೇ ಎಷ್ಟೋ ದಿನವಾಗಿತ್ತು. ನಿಮಗೆ ನೋಡುವ ಕುತೂಹಲವಿದ್ದರೆ ಬನ್ನಿ, ತೋರಿಸುವೆ. ಅಲ್ಲಿ ಎದುರಿಗೆ ದಿಬ್ಬದಮೇಲೆ ಕಾಣಿಸುವುದೇ ನಾವಿರುವ ಜಾಗ"

"ನಡೆಯಿರಿ ..ಹೋಗೋಣ"

ಇಬ್ಬರೂ ನಿಧಾನವಾಗಿ ದಿಬ್ಬ ಹತ್ತಿದರು. ಹುಡುಗರು ಹಿಂಬಾಲಿಸಿದರು.

"ನಾನು ಇವತ್ತೇ ಹೊರಗ ಬಂದದ್ದು. ಈ ಛಳಿ, ಈ ಗಾಳಿ, ತಡೆಯುವ ಶಕ್ತಿ ನನಗಿಲ್ಲ. ನಡೆಯುವ ತ್ರಾಣವೂ ಇಲ್ಲ. ನಾನು ಜೊತೆಗೆ ಹೋದರೆ ಬೇರೆಯವರಿಗೂ ತೊಂದರೆ. ಅವರಾದರೂ ಇಲ್ಲಿನ ನೋಟ ಕಣ್ತುಂಬ ನೋಡಲಿ."

"ಒಬ್ಬರೇ ಕುಳಿತು ಬೇಸರವಾಗಲ್ಲವೇ ?"

"ಬೇಸರವೆ ? ಒಂದೊಂದುಸಲ ಹುಚ್ಚು ಹಿಡಿದಂತೆ ಆಗುತ್ತೆ. ಆದರೆ ಮಾಡೋದೇನು ? ಕಿಟಕಿಯ ಬಳಿ ಕುಳಿತು ಗಿಡಮರಗಳನ್ನು ನೋಡುತ್ತ ಹೊತ್ತು ಕಳೀತೇನೆ. ಇವತ್ತು ಅಕಸ್ಮಾತ್ ನಿಮ್ಮನ್ನು ನೋಡಿದಾಗ ಎಷ್ಟು ಸಂತೋಷವಾಯ್ತು ಗೊತ್ತೆ ? ನನ್ನ ನಿಶ್ಯಕ್ತಿಯನ್ನೂ ಮರೆತು ಓಡಿಬಂದೆ"

ಪ್ರಯಾಸದಿಂದ ಹೆಜ್ಜೆ ಹಾಕುತ್ತಿದ್ದ, ಅವಳ ಕೈ ಹಿಡಿದುಕೊಂಡಳು ಕುಸುಮಾ. ಕೀಲಿ ತೆಗೆದುಕೊಂಡು ತಾನೇ ಮುಂದಾಗಿ ಹೋಗಿ ಬೀಗ ತೆಗೆದಳು.

ಚಿಕ್ಕದಾಗಿದ್ದರೂ ಚೊಕ್ಕವಾಗಿತ್ತು ಮನೆ. ಮನೆ ಅಂದರೆ ಒಂದು ರೂಮು, ಅದಕ್ಕೆ ತಗುಲಿದಂತೆ ಒಂದು ಸ್ನಾನದ ಮನೆ, ಅಷ್ಟೆ. ಊಟ ತಿಂಡಿಗೆ ಹೋಟಲಿಗೇ ಹೋಗಬೇಕು. ಆತ ಊಟಕ್ಕೆ ಅಲ್ಲಿಗೇ ಹೋಗುತ್ತಿದ್ದ.

ಅವಳ ಊಟ ತಿಂಡಿ ಕ್ಯಾರಿಯರಿನಲ್ಲಿ ಇಲ್ಲಿಗೇ ಬರುತಿತ್ತು.

ಶಾರದ ಒಳಗೆ ಬಂದವಳು ದೊಪ್ಪನೆ ಹಾಸಿಗೆಯ ಮೇಲೆ ಉರುಳಿದಳು. ಅಷ್ಟು ದೂರ ಬಂದುದಕ್ಕೇ ಅವಳಿಗೆ ಸುಸ್ತಾಗಿತ್ತು.

"ಎಲ್ಲಿವೆ ಚಿತ್ರಗಳು ?" ಕುಸುಮಾ ಕೇಳಿದಳು ಅವಳಿಗೆ ಅವಸರ ಹುಡುಗಿಯರು ಆಗಲೇ ಹೊರಡಲು ಅವಸರಿಸುತ್ತಿದ್ದರು.

"ನೋಡಿ . ಆ ಮೇಜಿನ ಮೇಲಿರೋದು ಇಲ್ಲಿ ಬಂದಮೇಲೆ ಬರೆದುವು. ಅಪೂರ್ಣವಾಗಿರೋದನ್ನ ಬೇರೆ ಇಟ್ಟಿರ್‍ತಾರೆ. ಆ ಹಣ್ಣು....ಮಕ್ಕಳಿಗೆ ಕೊಡಿ. ನೀವು ಚಿತ್ರ ನೋಡುವಾಗ ಅವರು ತಿನ್ನಲಿ, ಬಂದವರಿಗೆ ಎದ್ದು ಸತ್ಕಾರ ಮಾಡಲಾರೆ. ಎಂತಹ ಬಾಳು ನನ್ನದು ? ಅವರಿಗೆ ಬೇಸರ ಬಂದಿರುವುದು ಆಶ್ಚರ್ಯವಲ್ಲ"

"ಹೊರಗೆ ಹೋಗಿ ತಿನ್ನಿ, ಇಲ್ಲಿ ಕಸ ಹಾಕಬಾರ್‍ದು"

ಕುಸುಮ ಮಕ್ಕಳಿಗೆ ಹೇಳಿದಳು. ಹುಡುಗಿಯರು ಹಣ್ಣು ತಿನ್ನುತ್ತ ಬಾಗಿಲ ಹೊರಗೆ ನಿಂತರು.

ಚಿತ್ರಗಳನ್ನು ಒಂದೊಂದನ್ನೇ ತೆಗೆದು ನೋಡುತ್ತಿದ್ದಳು ಕುಸುಮಾ. ಯೂಕಲಿಪ್ಟಸ್ ಮರದ ಕೆಳಗೆ ಕುಳಿತು ಅವಳು ದಿನಾ ನೋಡುತ್ತಿದ್ದ ಪ್ರಕೃತಿಯ ಸುಂದರ ಚಿತ್ರ ಅಲ್ಲಿ ರೂಪುಗೊಂಡಿತ್ತು.

ನೀಲಿ ಬೆಟ್ಟದ ಹಿನ್ನೆಲೆ, ಅದೇ ಗಿಡ ಮರಗಳು, ಹೂವುಗಳು, ಮೇಲೆ ಬರುತ್ತಿರುವ ಸೂರ್ಯ. ಅವನಿಗೂ ಮೊದಲೇ ಬಂದ, ಹರಿಕಾರರಂತೆ ಅವನ ಬರವನ್ನು ಸಾರುತ್ತಿರುವ ಕಿರಣಗಳು

ಅರಳಿದ ಕಣ್ಣುಗಳಿಂದ ಕುಸುಮಾ ಚಿತ್ರವನ್ನು ನೋಡಿದಳು. ತಾನು ದಿನವೂ ನೋಡಿ ಮೈ ಮರೆಯುತ್ತಿದ್ದ ಚಿತ್ರ ಅದು. ದೂರ ದೂರ ಸುತ್ತಾಡ ದಿದ್ದರೇನು ? ಇಲ್ಲಿಗೆ ಬಂದಿದ್ದ ನೆನಪಿಗೆ ಅದೊಂದೇ ನೋಟ ಸಾಕು....ಎನಿ ಸಿದ್ದು ಉಂಟು. ಆದರೆ ಆ ನೋಟದ ಸೊಬಗನ್ನು ಹೀಗೆ ಬಣ್ಣಗಳಲ್ಲಿ ಸೆರೆ ಹಿಡಿಯುವುದೆಂದರೆ ?

ಕುಸುಮಾ ತಟ್ಟನೆ ಬೆಚ್ಚಿದಳು. ಅವಳ ಕೈ ನಡುಗಿತು. ಚಿತ್ರದ ಕೊನೆಯಲ್ಲಿ ಸಣ್ಣಗೆ ಬರೆದಿದ್ದ 'ವಸಂತ' ಎಂಬ ಅಕ್ಷರಗಳನ್ನು ಮತ್ತೊಮ್ಮೆ ದಿಟ್ಟಿಸಿದಳು.

ಕೋಲು ಹಿಡಿದು ಒಬ್ಬನೇ ತಿರುಗುತ್ತಿದ್ದ ವಸಂತ, ತಾನು ಕೂರುತ್ತಿದ್ದ ತಾಣದಲ್ಲೇ ಎಲ್ಲೋ ಹಿಂದೆ ಕುಳಿತು ಚಿತ್ರಿಸಿರಬಹುದು ಈಕೆಗಾಗಿ ಲೋಟದಲ್ಲಿ ಹಾಲು ಕಾಫಿಗಳನ್ನು ಹಿಡಿದು ಬರುತ್ತಿರಲಿಲ್ಲವೆ? ದಾರಿಯಲ್ಲಿ ಎದುರಾದಾಗ ನಗುವಿನೊಡನೆ ಅವನಿಂದ ಬರುತ್ತಿದ್ದ 'ನಮಸ್ಕಾರ' ?

ಹೋಟಲಿನ ಲೌಂಜಿನ ಕೊಳವೆ ದೀಪಗಳನ್ನು ನಾಚಿಸುವ ಹೊಳಪು ಕಣ್ಣುಗಳು, ನಗೆಮೊಗದ, ಅಲೆಗೂದಲಿನ, ಮಗುವಿನಂತಹ ಮುಗ್ಧ ಮುಖದ ವಸಂತ !

"ಇವರು....ಈ ಚಿತ್ರ ಬರೆದ ಕಲಾವಿದರು ನಿಮಗೆ ಏನಾಗಬೇಕು ?"

ಧ್ವನಿಯಲ್ಲಿನ ಕಂಪನ ಕಂಡು ಬರದಂತೆ ಕುಸುಮ ಮೆಲ್ಲಗೆ ಕೇಳಿದಳು.

"ನನ್ನ ಪತಿ ಅವರು, ನನ್ನ ಕೈ ಹಿಡಿದು ಬಾಳಿನುದ್ದಕ್ಕೂ ನಡೆಸಿಕೊಂಡು ಬಂದಿದಾರೆ"

ಕುಸುಮಳ ಎದೆಯ ಬಡಿತ ನಿಂತಂತೆ ತೋರಿತು. ಉಸಿರು ಸಿಕ್ಕಿಹಾಕಿಕೊಂಡಿತೇನೋ ಎನಿಸಿತು. ಆಗ ಮನಸ್ಸಿನಲ್ಲಿ ಎದ್ದ ಭಾವನೆಗಳು ಏನೆಂದು ತಿಳಿಯುವಂತಿರಲಿಲ್ಲ. ನಿರಾಶೆ ಹೆಪ್ಪುಗಟ್ಟಿ ಶೂನ್ಯದ ವಲಯವನ್ನು ನಿರ್ಮಿಸಿದಂತಾಯ್ತು.

ಚೇತರಿಸಿಕೊಳ್ಳಲು ಕೆಲವು ನಿಮಿಷಗಳು ಬೇಕಾಯ್ತು, ಕಸುಮಳಿಗೆ. ಮೌನ ಸರಿಯಲ್ಲ, ಏನಾದರೂ ಹೇಳಬೇಕೆಂದು ತೋರಿ,

"ನಿಮ್ಮನ್ನು ಒಂಟಿಯಾಗಿ ಬಿಟ್ಟುಹೋಗುವರಲ್ಲ, ಅವರಿಗೆ ಚಿತ್ರಕಲೆಯೇ ಹೆಚ್ಚೇನು ?" ಎಂದು ಕೇಳಿದಳು.

"ಛೆ ..ಛೆ .ಹಾಗೆನ್ನಬೇಡಿ. ಅವರು ನನ್ನ ಕಡೆಗಣಿಸಲಿಲ್ಲ. ಚಿತ್ರ ಬರೆಯುವುದು ಅವರ ಜೀವನದ ಉಸಿರು. ಅದರಿಂದ ಸಿಗುವ ಸಂತೋಷವನ್ನು ಕಸಿಯಲಾರೆ. ಅವರ ವಿಶ್ವಾಸದ ನೆರಳಿನಲ್ಲಿ ಸುಖವಾಗಿದೇನೆ ನಾನು"

ಶಾರದೆಯ ಕಣ್ಣಲ್ಲಿ ನೀರು ತುಂಬಿತು. ಈ ಅಪರಿಚಿತೆಯ ಎದುರಿನಲ್ಲಿ ನನ್ನ ಭಾವನೆಗಳನ್ನೇಕೆ ಹರಿಯಗೊಟ್ಟೆ ? ಎನಿಸಿ ಸಂಕೋಚವಾಯ್ತು. ಮೆಲ್ಲನೆ ಎದ್ದು ಕುಳಿತಳು.

"ಅಮ್ಮಾ....ಪೇರ್ ಹಣ್ಣು ತಂದಿದೇನೆ. ಪೀಚಸ್ ಸ್ಟ್ರಾಬರೀಸ್ ಎಲ್ಲಾ ಇವೆ." ಹಣ್ಣು ಮಾರುವ ಹುಡುಗ ಹೊರಗಿನಿಂದ ಕೂಗಿದ.

"ಬಂದೆ ಇರಪ್ಪ" ಎನ್ನುತ್ತ ಶಾರದ ಹೊರಗೆ ಹೋದಳು.

ಸದ್ಯ ಅವನು ಬಂದದ್ದು ದೇವರ ದಯ. ಹೊರಗೆ ಹೋಗಿ ಒಂದು ಕ್ಷಣ ಕಳೆಯಬಹುದು. ಮನಸ್ಸನ್ನು ಸ್ಥಿಮಿತಕ್ಕೆ ತರಬಹುದು.

ಆ ಕ್ಷಣ ಕುಸುಮಳಿಗೂ ಬೇಕಾಗಿತ್ತು. ಆ ಹೊಸ ಅರಿವಿನ ಪೆಟ್ಟಿನಿಂದ ಚೇತರಿಸಿಕೊಂಡು ಎದ್ದು ನಿಂತಳು. ಚಿತ್ರಗಳಿಗೆ ಹೊದಿಕೆ ಹೊದಿಸಿ ಪಕ್ಕಕ್ಕೆ ತಿರುಗಿದಾಗ, ಅಪೂರ್ಣವಾಗಿದ್ದ ಮತ್ತೊಂದು ಚಿತ್ರ, ಬರೆಯುವ ಮೇಜಿನ ಮೇಲೆ ಇದ್ದುದು ಕಾಣಿಸಿತು.

ಅದು ಏನೆಂದು ಕಾಣಿಸದಿದ್ದರೂ, ಯಾವುದೋ ಶಕ್ತಿ ಅವಳನ್ನು ಆ ಕಡೆಗೆ ಎಳೆಯಿತು.

ಹತ್ತಿರಕ್ಕೆ ಹೋಗಿ ಅದಕ್ಕೆ ಮುಚ್ಚಿದ್ದ ತೆಳ್ಳನೆಯ ಕಾಗದವನ್ನು ಸರಿಸಿದಳು

ಕುಸುಮಳ ಹೃದಯ ಮತ್ತೊಮ್ಮೆ ಬಡಿತವನ್ನು ತಪ್ಪಿಸಿಕೊಂಡಿತು. ಅವಳದೇ ಚಿತ್ರ ! ಎದುರಿಗೇ ಕುಳಿತು ಬರೆದಂತೆ ಚಿತ್ರಿತವಾಗಿತ್ತು. ಈ ಚಿತ್ರಕ್ಕಾಗಿಯೇ ಅವರು ನನ್ನನ್ನು ಆ ರೀತಿ ನೋಡುತ್ತಿದ್ದಿರಬೇಕು! ಮುಖದ ಒಂದೊಂದು ಗೆರೆಯೂ ಚೈತನ್ಯಪೂರ್ಣವಾಗಿತ್ತು. ನಗು ಅಲ್ಲಿ ಸೆರೆ ಯಾಗಿತ್ತು.

"ತಪ್ಪು ತಿಳಿದೆ ನಾನು" ಮಿಡಿಗುಟ್ಟಿತು ಅವಳ ಹೃದಯ.

ಸಮೀಪದಲ್ಲಿ ಬಣ್ಣದ ಕುಡಿಕೆ ಇತ್ತು. ತಾನು ಏನು ಮಾಡುತ್ತಿರುವೆ ನೆಂಬ ಅರಿವೇ ಇಲ್ಲದೆ ಕುಸುಮ ಕಡ್ಡಿಯಿಂದ ಕೆಂಪು ಬಣ್ಣ ಅದ್ದಿ, ಆ ನಗು ಮುಖದ ಮೇಲೆ ಎರಡು ಅಡ್ಡಗೆರೆ ಎಳೆದಳು.

ಮುಖದ ನಗು ಅಳಿಸಿತು. ವಿಕಾರವಾದ ಚಿತ್ರ ನೋಡಿ ಅವಳಿಗೇ ಅಳು ಬರುವಂತಾಯ್ತು. ಚಿತ್ರದ ಮೇಲೆ ಮೊದಲಿನಂತೆ ತೆಳುವಾದ ಕಾಗದ ಮುಚ್ಚಿ ಬೇಗ ಹೊರಗೆ ಬಂದಳು.

ಹಣ್ಣಿನ ವ್ಯಾಪಾರ ಮುಗಿದಿತ್ತು. ಶಾರದ ಹಣ್ಣಿನ ಬುಟ್ಟಿಯನ್ನು ಕುಸುಮಳ ಮುಂದಿಟ್ಟು,

"ಮುಂಬಯಿಯಂಥ ಗದ್ದಲದ ದೊಡ್ಡ ಪ್ರಪಂಚದಲ್ಲಿ ಇರೋರಿಗೆ ಇಲ್ಲಿ ಬೇಸರ ಅಲ್ಲವೆ ?" ಎಂದು ಕೇಳಿದಳು.

"ಬೇಸರವೆಂದೇನಿಲ್ಲ, ಆದರೆ....ಅದೇ ಒಂದು ರೀತಿ ಸುಖವಾಗಿದೆ. ಬೆಳಗಿನಿಂದ ಸಂಜೆಯವರೆಗೆ ಅವಸರ! ಯೋಚಿಸೋದಕ್ಕೆ ವೇಳೆಯಿಲ್ಲ. ರಾತ್ರೆ ಮನೆ ಸೇರುವ ಹೊತ್ತಿಗೆ ವಿಶ್ರಾಂತಿಯೊಂದೇ ಬೇಕಾಗುವುದು. ಇನ್ನು ಯಾವುದಕ್ಕೂ ಎಡೆಯಿಲ್ಲ."

ಕುಸುಮಾ ಹೊರಟಳು.

"ನಮಸ್ಕಾರ . ನೆನಪಿರಲಿ" ಶಾರದ ಹೇಳಿದ್ದು ಕೇಳಿತೋ ಇಲ್ಲವೊ?

"ಮೆಲ್ಲಗೆ ಇಳಿಯಬೇಕು. ಇಳಿಜಾರು ನೆಲ. ಜಾರಿದರೆ ಪೆಟ್ಟಾಗುವುದು ಖಂಡಿತ" ಎನ್ನುತ್ತ ಎರಡು ಕೈಲೂ ಎರಡು ಮಕ್ಕಳನ್ನು ಹಿಡಿದುಕೊಂಡು ಮುಂದೆ ನಡೆದಳು ಕುಸುಮಾ.

# ಕೆಳಗೆ ಬಿದ್ದ ಕಾಗದ

ಪುಷ್ಯ ಮಾಸದ ಮಧ್ಯಾಹ್ನದ ಬಿಸಿಲು ಚುರುಕಾಗಿದ್ದರೂ, ಗಾಳಿ ತಣ್ಣಗೆ ಬೀಸುತ್ತಿದ್ದುದರಿಂದ, ಹಿತವಾಗಿಯೇ ಇತ್ತು. ಮಾಗಿಯ ಬಿಸಿಲು ಚಳಿಯನ್ನು ಹೊತ್ತ ತಂಗಾಳಿ ಇವೆರಡರ ಸಂಗಮದಲ್ಲಿ ಏನೋ ಆಕರ್ಷಣೆ.

ನಂಜಮ್ಮ ಬಿಸಿಲು ಬೀಳುತ್ತಿದ್ದ ಜಾಗಕ್ಕೆ ಬೆನ್ನುತಿರುಗಿಸಿ ಬೀದಿಯ ಕಡೆಯ ಜಗುಲಿಯ ಮೇಲೆ ಬಂದು ಕುಳಿತರು. ಮೈ ಬಿಸಿಯಾದರೂ ಏಳುವ ಮನಸಿಲ್ಲ ಗಾಳಿ ತಣ್ಣಗಿತ್ತಲ್ಲ !

ನಾಲ್ಕು ಸಂಸಾರವಾಸವಾಗಿದ್ದ ವಠಾರದ ಹಿಂದುಗಡೆ ಮೂಲೆಯಲ್ಲಿದ್ದ ಒಂದು ಕಿರು ಕೋಣೆಯಲ್ಲಿ ಆಕೆಯ ವಾಸ. ಬೀದಿಯ ಮುಖವನ್ನು ನೋಡ ಬೇಕೆನಿಸಿದರೆ ನಾಲ್ಕು ಮನೆಗಳಿಂದ ಹರಿಯುವ ಕೊಚ್ಚೆನೀರು, ಕೊಳಕು ಎಲ್ಲವನ್ನೂ, ದಾಟಿಕೊಂಡೇ ಹೊರಗೆ ಬರಬೇಕು. ಈ ನಡುವೆ ಮಡಿಯ ಅವಾಂತರ ಬೇರೆ.

ಎಲ್ಲಿ ಏನಾದರೂ ತುಳಿದು ಮೈಲಿಗೆಯಾಗುವುದೋ ಎಂಬ ಭಯ ಬೇರೆ !

ಸೊಪ್ಪಿನ ಕಡಲೇಕಾಯಿಯನ್ನು ತಿನ್ನುತ್ತ ಬಂದ ಹುಡುಗನನ್ನ ನಂಜಮ್ಮ ಕೇಳುವುದಿತ್ತು.

"ಎಲ್ಲಿ ತಗೊಂಡೆಯೋ ?"

"ಬೀದೀಲಿ ಬಂದಿತ್ತಲ್ಲ"

ಬಂದಿತ್ತೆ ? ನನಗೆ ಕೂಗಿದ್ದು ಕೇಳಿಸಲೇ ಇಲ್ಲ."

"ಹಿಂದುಗಡೆ ಇರ್ತೀರಿ ಕೇಳಲ್ಲ. ನನ್ನ ಕೈಲಿ ಕಾಸುಕೊಟ್ರೆ. ಬೇಕಾದರೆ ನಾಳೆ ಬಂದಾಗ ತೆಗೆದು ಕೊಡ್ತೀನಿ"

ಅಂತಹ ಸಲಹೆ ನಂಜಮ್ಮನಿಗೆ ಎಂದೂ ಹಿಡಿಸದು. ಈ ಪೋರನ ಕೈಗೆ ಕಾಸು ಹಾಕಿದರೆ ಅವನು ನಿಜವಾಗಿ ತಂದು ಕೊಡುವನೇ ? ತಾನೇ

ತಿಂದು ಬಿಡ್ತಾನೆ. ಅದಲ್ಲದೆ ಕಾಸುಕೊಟ್ಟು ಏನಾದರೂ ಕೊಳ್ಳುವುದೆಂದರೆ ಅದರ ಸೊಬಗೇ ಹೋಗಿಬಿಡುತ್ತೆ! ಅದರ ಬದಲು ಯಾರಾದರೂ, 'ತಗೋಳಿ ನಂಜಮ್ಮ' ಎಂದು ಕೈಗೆ ಎರಡು ಕಂತೆ ಕೊಟ್ಟರೆ, ಸಂತೋಷದಿಂದ ಬಿಸಿಲು ಕಾಯುತ್ತಾ ಮೆಲ್ಲಬಹುದು.

ಯಾವ ಪದಾರ್ಥವೂ ಅಷ್ಟೆ. ಅಗತ್ಯವಾಗಿ ಬೇಕು ಎನಿಸಿದ್ದನ್ನ ಕೂಡ ಕೊಳ್ಳುವುದುಕಷ್ಟ. ಇವರು ಹಿಂದಿನಿಂದ ಕಾಲು ಎಳೆದುಕೊಂಡು ಬರುವವರೆಗೆ ಮಾರುವವರು ಬೀದಿಯ ಕೊನೆಗೆ ಹೋಗಿರುತ್ತಿದ್ದರು. ಈಕೆ ಕೀರಲುದನಿಯಲ್ಲಿ ಕೂಗಿದರೂ ಅವರಿಗೆ ಕೇಳುವ ಸಂಭವ ಕಡಿಮೆ.

ಹೀಗಾಗಿ ಇದ್ದುದರಲ್ಲೆ ದಿನನೂಕುವ ಅಭ್ಯಾಸವಾಗಿತ್ತು. ನಂಜಮ್ಮ ನದು ಒಂಟಿ ಬಾಳು. ಏನು ಮಾಡೋದು ?

ಒಂದುಕಾಲದಲ್ಲಿ ಅವರೂ ಎಲ್ಲರಂತೆ ಸಂಸಾರಿಯಾಗಿದ್ದರು. ಗಂಡನೂ ಅಲ್ಪ ಸ್ವಲ್ಪ ಸಂಪಾದಿಸಿ ತರುತಿದ್ದ. ಆ ಮನುಷ್ಯ ಸಂಸಾರದ ಹೊಣೆಯನ್ನು ಕಳಚಿಕೊಂಡು ಕಣ್ಣುಮುಚ್ಚಿ ಎಷ್ಟೋ ವರುಷಗಳು ಕಳೆದಿವೆ. ಎಷ್ಟು ವರುಷ ಗಳೆಂದು ಆಕೆಗೆ ಸರಿಯಾಗಿ ನೆನಪಿಲ್ಲ.

ಮಕ್ಕಳೂ ಅಷ್ಟೆ. ಭಿಕ್ಷಾನ್ನದಲ್ಲೇ ಬೆಳೆದವರು. ತಾಯಿ ದುಡಿದುದ ರಲ್ಲೇ ಪೈ ಮುಚ್ಚಿಕೊಂಡು ಶಾಲೆಯ ಮೆಟ್ಟಲು ಹತ್ತಿ ಇಳಿದರು. ದೊಡ್ಡವ ರಾದಂತೆ ತಮ್ಮ ದಾರಿ ಹುಡುಕಿಕೊಂಡರು. ಒಬ್ಬೊಬ್ಬರ ಬದುಕು ಒಂದೊಂದು ದಾರಿಯಲ್ಲಿ ಹರಿಯಿತು.

ಗೌರಿ, ಸೀತೆ ಇಬ್ಬರೂ ಮದುವೆಯಾಗಿ ಗಂಡಂದಿರ ಮನೆಯಲ್ಲಿದ್ದಾರೆ ಆ ಮದುವೆಗೂ ನಂಜಮ್ಮ ಪರದಾಡಲಿಲ್ಲ ಯಾರೋ ಹೆಂಡತಿಯನ್ನು ಕಳೆದು ಕೊಂಡವರು ಮನೆತುಂಬ ಇದ್ದ ಮಕ್ಕಳನ್ನು ಸಾಕಿ, ತಮಗೂ ಅನ್ನ ಕಾಣಿಸ ಲೆಂದು ನಂಜಮ್ಮನ ಮನೆ ಹುಡುಕಿಕೊಂಡು ಬಂದು ಆ ಮುಗ್ಧ ಹುಡುಗಿ ಯರನ್ನು ಮದುವೆಯಾಗಿದ್ದರು.

ನಂಜಮ್ಮ ಒಂದು ಪೈ ಸಹ ಖರ್ಚುಮಾಡಲಿಲ್ಲ. ಬದಲು ಒಂದು ಸೀರೆ ಉಡುಗೊರೆಯಾಗಿ ಸಿಕ್ಕಿತ್ತು.

ಈಗ ಗೌರಿ ಏನು ಮಾಡುತ್ತಿರಬಹುದು. ಪಾಪ ತುಂಬಿದ ಮನೆ, ಹಬ್ಬ ಬೇರೆ. ನಿಜ, ಸಂಕ್ರಾಂತಿಯಲ್ಲವೇ ಇಂದು? ಹಬ್ಬದ ಅಡಿಗೆ ಮಕ್ಕಳಿಗೆ ಆರತಿ

ಎಳ್ಳು ಕೊಡುವುದು....

ನಂಜಮ್ಮನ ನೆನಪು ಮಕ್ಕಳು ಮೊಮ್ಮಕ್ಕಳನ್ನು ಅರಸಿ ಅಲೆಯಿತು. ಹೆಣ್ಣು ಮಕ್ಕಳದು ಹೇಗೋ ಒಂದು ದಾರಿಯಾಯ್ತು. ಗಂಡು ಹುಡುಗರು ಒಂದು ನೆಲೆಯಿಲ್ಲದೆ ಹೇಗೋ ಹೊಟ್ಟೆ ಹೊರೆದುಕೊಂಡಿದಾರೆ. ಅವರಿಗೂ ಸುಖವಿಲ್ಲ. ತಾಯಿಗೂ ಆಸರೆಯಿಲ್ಲ. ಎರಡು ಮೂರು ವರ್ಷಗಳಿಗೊಮ್ಮೆ ಈ ಕಡೆ ಬಂದು ತಾಯಿಯನ್ನು ನೋಡಿಕೊಂಡು ಹೋದರೆ ಮತ್ತೆ ಬರುವುದು ಎಂದೋ ?

"ಏನು ನಂಜಮ್ಮ ಆರಾಮವಾಗಿ ಕೂತು ಬಿಟ್ಟರಿ, ಆಯ್ತೆ ಕೆಲಸ ?"

ನಂಜಮ್ಮ ಹಗಲು ಕನಸಿನಿಂದ ಎಚ್ಚೆತ್ತರು. ಹೊಸ ಸೀರೆ ಉಟ್ಟು ಎಳ್ಳುಹಂಚಲು ಹೊರಟಿದ್ದ ಹೆಂಗಸು ನಗುತ್ತ ಅವರನ್ನು ಮಾತನಾಡಿಸಿದಳು.

ತಲೆ ತುಂಬ ಹೂವು, ಮುಖದ ತುಂಬ ನಗು, ಕಂಕುಳಲ್ಲಿ ಮುದ್ದು ಮಗು, ಕೈಲಿ ಬೀರುವ ಪರಿಕರಗಳಿದ್ದ ಪ್ಲಾಸ್ಟಿಕ್ ಬುಟ್ಟಿ, ಕಬ್ಬಿನ ತುಂಡುಗಳನ್ನು ಒಂದು ಕೈಚೀಲದಲ್ಲಿ ಹಾಕಿ ಹಿಡಿದಿದ್ದ ಒಬ್ಬ ಹುಡುಗ ಜೊತೆಗಿದ್ದ.

"ಹೂಂ ಕಣೇ ಪುಟ್ಟಾ, ಎಳ್ಳು ಬೀರಕ್ಕೆ ಹೊರಟೆಯ ? ಇನ್ನೂ ಬಿಸಿಲಿದೆಯಲ್ಲೇ ತಾಯಿ ?"

"ಹೌದರೀ ...ಏನು ಮಾಡೋದು ? ಎಲ್ಲಾ ಕಡೆಗೂ ಹೋಗಬೇಕು. ಬಿಸಿಲು ಎಂದು ಕಾದರೆ ಬರೊ ಹೊತ್ತಿಗೆ ಕತ್ತಲಾಗಿಬಿಡುತ್ತೆ. ಮಗು ನಿದ್ದೆ ಮಾಡಿ ಬಿಡುತ್ತೆ."

"ಅದೂ ಸರಿ ಅನ್ನು, ಹೋಗಿಬಾಮ್ಮ."

ಮಾತಾಡಿಸಿದವರು ಮುಂದೆ ಹೋದರು. ನಂಜಮ್ಮ ಚುರು ಚುರು ಅನ್ನುತ್ತಿದ್ದ ಕೈ ಕಾಲುಗಳನ್ನು ನೀವಿಕೊಂಡರು. ಛಳಿಗೆ ಬಿರಿದಿದ್ದ ತೋಳುಗಳು ವಿಕಾರವಾಗಿ ಕಾಣಿಸಿದುವು.

"ಸೌಖ್ಯವೇ ನಂಜಕ್ಕ ? ಎಲ್ಲೋ ಕಾಣಿಸಲೇ ಇಲ್ಲ."

ಕೈಗೆ ವಿರಾಮ ಕೊಟ್ಟು ನಂಜಮ್ಮ ತಲೆ ಎತ್ತಿ ನೋಡಿದರು. ಎದುರು ಮನೆಯ ಮುಂದೆ ಗಾಡಿ ನಿಂತಿತ್ತು. ಅದರಲ್ಲಿ ಎಳ್ಳುಬೀರುವ ಸಾಮಾನುಗಳನ್ನು ತುಂಬಿಕೊಂಡು, ಮನೆಯೊಡತಿ ಮಕ್ಕಳೊಡನೆ ಹೊರಟಿದ್ದವಳು ಅವರನ್ನು ಮಾತಾಡಿಸಿದ್ದಳು.

"ಚೆನ್ನಾಗಿಲ್ಲದೆ ನನಗೇನು ರೋಗ ಹೇಳು ? ನಾನೆಲ್ಲಿ ಹೋಗ್ತೀನಿ ಇಲ್ಲೇ ಇದೀನಲ್ಲ!"

ಅವರ ಮಾತು ಮುಗಿಯುವ ಮೊದಲೇ ಗಾಡಿ ಮುಂದೆ ಸಾಗಿತು.

ಸಂಜೆಯಾದಂತೆ ಬೀದಿಯಲ್ಲಿ ಓಡಾಡುವರ ಸಂಖ್ಯೆ ಹೆಚ್ಚಿತ್ತು. ದೊಡ್ಡವರಿಗಿಂತ ಹುಡುಗಿಯರೇ ಹೆಚ್ಚು. ಹೊಸ ಲಂಗಗಳನ್ನು ಹಾಕಿಕೊಂಡು ಸರಬರನೆ ಹೋಗುತ್ತಿದ್ದರು.

ಕೈಗಳಲ್ಲಿ ಕಸೂತಿ ಚೌಕ ಮುಚ್ಚಿದ ತಟ್ಟೆಗಳು, ಎಳೆ ಬಿಸಿಲಿನಲ್ಲಿ ತಳ ಥಳಿಸುವ ನೈಲಾನ್ ಜರಿ ಕಣ್ಣು ಕುಕ್ಕುವಂತಿತ್ತು.

ಜಗುಲಿಯ ಪಕ್ಕದಲ್ಲೇ ನಡೆದು ಒಬ್ಬಾಕೆ ವಠಾರದ ಒಳಗೆ ನಡೆದರು. ನಂಜಮ್ಮ ಕಿರಿದು ಕಣ್ಣನ್ನು ಹಿಗ್ಗಲಿಸಿ ನೋಡಿದರು.

ಊಹೂಂ....ಯಾರೊ; ಹೊಸಬರು, ಎಂದೂ ನೋಡಿದ ನೆನಪಿಲ್ಲ. ಯಾರಮನೆಗೆ ಬಂದಿದ್ದಾರೋ ಆಕೆ. ಎತ್ತಿಕೊಂಡಿದ್ದ ಮಗು ಎಷ್ಟು ಮುದ್ದಾಗಿದೆ.

"ಬಾರೋ ರಾಜ ಎತ್ತಿಕೊತೇನೆ"

ನಂಜಮ್ಮ ಸುಕ್ಕುಗಟ್ಟಿದ ಕೈಗಳನ್ನು ಮುಂದೆ ಚಾಚಿದರು. ಹಲ್ಲಿಲ್ಲದ ಬಾಯನ್ನು ಅಗಲಿಸಿ ನಕ್ಕು ಮಗು ತಾಯಿಯನ್ನು ಬಲವಾಗಿ ಅಪ್ಪಿ ಕೊಂಡಿತು.

"ತಾಯಿ ...ಮನೆಗೆ ಹೋದ ಮೇಲೆ ಮಗುವಿಗೆ ಉಪ್ಪು ಮೆಣಸಿನ ಕಾಯಿ ನೀವಳಿಸಿ ಹಾಕು, ಬಾಲ ಗೋಪಾಲನ ಹಾಗಿದೆ ಮಗು"

ಪರಿಚಯವಿಲ್ಲದಿದ್ದರೇನು ? ಕುಸುಮದ ಕೊಪ್ಪರಿಗೆಯಂತಿದ್ದ ಮಗುವಿನ ಚೆಲುವು ಆಕೆ ಮಾತಾಡುವಂತೆ ಮಾಡಿತು. ತಾಯಿ ಹೆಮ್ಮೆಯಿಂದ ಮಗುವನ್ನು ಒಮ್ಮೆ ನೋಡಿ ನಂಜಮ್ಮನತ್ತ ಮುಗುಳ್ನಗೆ ಬೀರಿ ಮುಂದೆ ಹೋದಳು.

ನಂಜಮ್ಮನಿಗೆ ತಟ್ಟನೆ ತಮ್ಮ ತಾಯಿಯ ನೆನಪಾಯ್ತು, ಆ ತಾಯಿ ಹೇಳುತ್ತಿದ್ದ ಮಾತುಗಳೂ ಮನದಾಳದಿಂದ ಪುಟಿದೆದ್ದು ನೆನಪಿನ ತೆರೆಯ ಮೇಲೆ ತೇಲಿ ಬಂದವು.

"ನಾನೂ ಇಷ್ಟು ಮಕ್ಕಳನ್ನ ನೋಡ್ತೀನಿ, ನೀನು ಮಗುವಿನಲ್ಲಿ

ಇದ್ದಂತೆ ಒಂದೂ ಇಲ್ಲ ನಂಜು. ಎಷ್ಟು ಚೆನ್ನಾಗಿದ್ದೆ ನೀನು, ಬೀದೀಲಿ ಹೊರಟರೆ ಕಂಡೋರೆಲ್ಲ ಎತ್ತಿ ಮುದ್ದಾಡೋರು. ಒಂದು ಮುಖ ಇಷ್ಟಗಲ ದುಂಡು ಕೆನ್ನೆ ..."

ನಂಜಮ್ಮ, ತನ್ನಲ್ಲೇ ನಕ್ಕರು, ಅವರ ಕೈ ಯಾಂತ್ರಿಕವಾಗಿ ಸುಕ್ಕು ತುಂಬಿದ್ದ ಕೆನ್ನೆಗಳನ್ನು ಸವರಿತು, ಕಣ್ಣಿನ ಕೆಳಭಾಗದಲ್ಲಿ ಉಬ್ಬಿದ ಮೂಳೆ, ಒಳಭಾಗಕ್ಕೆ ಸರಿದಿದ್ದ ನೆರಿಯುಂತಿದ್ದ ಚರ್ಮ!

ಈ ಮುಖ ಒಂದು ಕಾಲದಲ್ಲಿ ದುಂಡು ದುಂಡಾಗಿ ಮುದ್ದಾಗಿತ್ತೆಂದು ಹೇಳಿದರೆ ಯಾರಾದರೂ ನಂಬುವರೆ? ಸ್ವತಃ ಆಕೆಯೇ ನಂಬುವುದು ಸಾಧ್ಯವಿಲ್ಲ. ತಾಯಿಯ ಪ್ರೀತಿ ಆ ಮಾತನ್ನು ಆಡಿಸಿರಬಹುದು

ಅಜ್ಜಿಯಾಗಿದ್ದ ನಂಜಮ್ಮ ತಮ್ಮ ತಾಯಿಯ ಮಮತೆಯ ನೆನಪಿನಿಂದ ಪುಳುಕಿತರಾದರು. ಮುದಿ ಮನಸ್ಸು ಮತ್ತೊಮ್ಮೆ ನೆನಪಿನ ರೆಕ್ಕೆಗಳನ್ನು ಬಡಿಯುತ್ತ ಹಿಂದಕ್ಕೆ ಹಾರಿತು.

ಕಿವಿಗಡುಚುವಂತೆ ಜೋರಾಗಿ ನಕ್ಕ ಸದ್ದು ಅಲೆ ಅಲೆಯಾಗಿ ಬೀದಿಯುದ್ದಕ್ಕೂ ಹರಡಿತ್ತು. ನಂಜಮ್ಮ ಬೆಚ್ಚಿ ಕನಸಿನಿಂದ ಎಚ್ಚೆತ್ತರು

ಹುಡುಗಿಯರ ಒಂದು ಗುಂಪು ಬಿದ್ದು ಬಿದ್ದು ನಗುತ್ತ ಮುಂದೆ ಸಾಗುತ್ತಿತ್ತು, ಯಾವ ಮಾತೋ? ಯಾವ ನೋಟವೋ? ಆ ಎಳೆಯ ಹೃದಯಗಳಿಂದ ನಗೆಯ ಬುಗ್ಗೆಯನ್ನು ಚಿಮ್ಮಿಸಿತ್ತು.

"ನೋವಿನ ಸೋಂಕಿಲ್ಲದ ಶುದ್ಧವಾದ ನಗು!

ನಂಜಮ್ಮನಿಗೆ ಒಂದು ಕ್ಷಣ ಮತ್ಸರವಾಯಿತು. ಬಾಳಿನ ಎಲ್ಲ ಕೋಟಲೆಗಳನ್ನು ಮರೆತು ಮತ್ತೊಮ್ಮೆ ಹಾಗೆ ನಗಲು ಸಾಧ್ಯವಾದರೆ ಎಷ್ಟು ಸೊಗಸು!

ಆ ಹುಡುಗಿಯರು ಮೈಮರೆತಂತೆ ಕುಳಿತಿದ್ದ ತನ್ನನ್ನೇ ನೋಡಿ ನಕ್ಕಿರಬಾರದೇಕೆ?

ಹುಡುಗಿಯರು ಮುಂದೆ ಹೋದರೂ ನಗುವಿನ ಅಲೆ ಕಿವಿಯಲ್ಲಿ ಹೊಳಲು ಗೊಡುವಂತಿತ್ತು. ಬಣ್ಣ ಬಣ್ಣದ ಬಟ್ಟೆಗಳಿಂದ ಅಲಂಕೃತರಾಗಿದ್ದ ಜನರ ಎಳ್ಳುಬೀರುವ ಸಡಗರ ನಡೆದೇ ಇತ್ತು.

ನೆನಪಿನ ಆಳದಲ್ಲಿ ಮುಳುಗಿದ್ದ ನಂಜಮ್ಮ ಅದೆಲ್ಲವನ್ನೂ ದೂರ ತಳ್ಳಿ ಹೋಗಿ ಬರುವ ಜನರನ್ನು ದಿಟ್ಟಿಸಿದರು.

ಏನೋ ಸಡಗರ ಏನೋ ಉತ್ಸಾಹ ಅವರ ನಡಿಗೆಯಲ್ಲಿ.

ಒಂದೆರಡು ಪರಿಚಿತ ಮುಖ ಹತ್ತಿರ ಬಂದು ಮಾತಾಡಿಸಿದಾಗ ಆಕೆಯ ಹೃದಯ ಆಸೆ ನಿರೀಕ್ಷೆಗಳಿಂದ ಅರಳಿ ಮತ್ತೆ ಮುದುಡಿತು.

ಕತ್ತಲಾಗುತ್ತ ಬಂದಂತೆ ಬೀದಿಯಲ್ಲಿ ಜನರ ಓಡಾಟ ನಿಂತಿತು. "ಇಲ್ಲೇ ಎಷ್ಟು ಹೊತ್ತು ಕೂತು ಬಿಟ್ಟೆ" ಎಂದು ತಮ್ಮಲ್ಲೇ ಗೊಣಗಿ ಕೊಳ್ಳುತ್ತ ಏಳಲು ಪ್ರಯತ್ನಪಟ್ಟರು ಬಹಳ ಹೊತ್ತು ಒಂದೇ ಕಡೆ ಕೂತಿದ್ದ ರಿಂದ ಮಂಡಿಯ ಕೀಲುಗಳು ಹಿಡಿದಂತಾಗಿ ಪ್ರಯಾಸದಿಂದ ಎರಡು ಕೈಗಳನ್ನೂ ಊರಿಕೊಂಡು ಮೇಲಕ್ಕೆ ಎದ್ದರು. ಹಾಗೆ ಎದ್ದಾಗ ಒಂದು ಕಾಗದದ ಚೂರು ಕೆಳಗೆ ಬಿತ್ತು. ನಿಂತಿದ್ದ ಆಕೆ ಮತ್ತೆ ಬಗ್ಗಿ ಅದನ್ನು ಕೈಗೆತ್ತಿ ಕೊಂಡು ತಿರುಗಿಸಿ ನೋಡಿದರು.

ಒಂದು ಕಾಗದದ ಚೀಲ ಅದು, ಎಂದೋ ಸಾಮಾನು ತಂದಿದ್ದುದನ್ನು ಹಿಡಿದುಕೊಂಡು ಬಂದು ಹತ್ತಿರ ಇಟ್ಟುಕೊಂಡಿದ್ದರು ಅಷ್ಟುಹೊತ್ತು ಕೂತಿದ್ದರಿಂದ ಸೀರೆಗೆ ಅಂಟಿಕೊಂಡಿದ್ದು ಎದ್ದುನಿಂತಾಗ ಕೆಳಗೆ ಬಿದ್ದಿತ್ತು.

ಅದನ್ನು ನೋಡುತ್ತ ಮುದುಕಿಯ ಮನ ಮಿಡುಕಿತು. ಅರವತ್ತು ಚಳಿ ಗಾಲಗಳನ್ನು ದಾಟಿದ್ದ ಜೀವ ಅದೆಷ್ಟು ಎಳ್ಳು ಹಬ್ಬಗಳನ್ನು ಕಂಡಿತ್ತೋ? ಆದರೂ ಆಸೆ ಕಮರಿಲ್ಲ!

"ಎಳ್ಳು ಹೊತ್ತು ನಡೆದ ಆ ಜನರ ಸಾಲಿನಲ್ಲಿ ಯಾರಾದರೂ ತನಗೂ ಕೊಟ್ಟರೆ ಹಾಕಿಸಿಕೊಳ್ಳುವ ಆಸೆಯಿಂದಲ್ಲವೆ ಆ ಚೀಲವನ್ನು ಹೊತ್ತು ತಂದು ತೊಡೆಯ ಕೆಳಗೆ ಇಟ್ಟುಕೊಂಡಿದ್ದು?

ಆದರೆ ...ಆದರೇ....ಮುದುಕಿಯನ್ನು ಮಾತಾಡಿಸಿ ಮುನ್ನಡೆದಿದ್ದವರಲ್ಲಿ ಯಾರೂ ಆಕೆಗೆ ಒಂದು ಹಿಡಿ ಎಳ್ಳನ್ನು ಕೊಡುವ ಮನಸ್ಸು ಮಾಡಿರಲಿಲ್ಲ.

ನೆಲಗಡಲೆ ಬೆಲ್ಲ ಕೊಬ್ಬರಿ ಎಲ್ಲ ಬೆರೆತ ಕುಸುರೆಳ್ಳು. ಸಕ್ಕರೆಯಿಂದ ತಯಾರಿಸಿದ ಚಿತ್ರ ವಿಚಿತ್ರ ಸಾಮಾನುಗಳೆಲ್ಲ ಆಕೆಯ ಕಣ್ಣು ಮುಂದೆ ಕುಣಿ ದಂತಾಯ್ತು. ಗೀಜುಗಟ್ಟಿದ್ದ ಕಣ್ಣುಗಳಲ್ಲಿ ಆಸೆಯ ಬೆಳಕು ಮಿಂಚಿತು.

"ಇವತ್ತು ಎಲ್ಲರಿಗೂ ಅವಸರ. ಇಂದು ಕೊಡದಿದ್ದರೇನು? ನಾಳೆ ಜ್ಞಾಪಿಸಿಕೊಂಡು ಯಾರಾದರೂ ಕೊಟ್ಟೇ ಕೊಡ್ತಾರೆ" ಎಂದು ತನ್ನಲ್ಲೇ ಹೇಳಿಕೊಳ್ಳುತ್ತ ಆಕೆ ನಿಧಾನವಾಗಿ ಹೆಜ್ಜೆಗಳನ್ನು ತಮ್ಮ ಕಿರುಕೋಣೆಯತ್ತ ತಿರುಗಿಸಿದರು.

# ನೂರು ಮೆಟ್ಟಲು

ಶ್ರಾವಣಮಾಸದ ಮಳೆ ಹನಿಹನಿಯಾಗಿ ಜಿನುಗಿ ಸೂರಿನ ತುದಿಯಿಂದ ಧಾರಾಕಾರವಾಗಿ ಸುರಿಯುತ್ತಿತ್ತು. ಅನಂತಯ್ಯ ಮಲಗಿದ್ದ ಜಾಗಕ್ಕೆ ಹಿಂಬಾಗದ ಮನೆಯ ಕೆಲವು ಭಾಗ ಮಾತ್ರ ಕಾಣಿಸುತ್ತಿತ್ತು.

ಅನಾರೋಗ್ಯದಿಂದ ಹಾಸಿಗೆ ಹಿಡಿದು ಮಲಗಿರುವವರಿಗೆ ಹೊತ್ತು ಹೋಗುವುದಾದರೂ ಹೇಗೆ? ಅಪರೂಪದ ನೋಟವನ್ನು ನೋಡುವಂತೆ ಸೂರನ್ನೇ ದಿಟ್ಟಿಸಿದರು. ಹೊರಗೆ ಜಿನುಗುತ್ತಿರುವ ಮಳೆಯಂತೆ ನೆನಪಿನ ಸೋನೆ ಮನಸ್ಸಿನ ಆಳದಿಂದ ಜಿನುಗಲಾರಂಭಿಸಿತು.

ಆ ದೊಡ್ಡ ಜಾಗವನ್ನು ಕೊಂಡು ಮನೆ ಕಟ್ಟಿದ್ದು ಅನಂತಯ್ಯನವರ ತಂದೆ. ಮೊದಲು ಹಿಂಭಾಗದಲ್ಲಿ ಒಂದು ಸಣ್ಣ ಮನೆ ಕಟ್ಟಿದರು. ಕೇವಲ ಅಗತ್ಯಕ್ಕೆ ಎಷ್ಟು ಬೇಕೋ ಅಷ್ಟೆ. ಮುಂದೆ ಹೆಚ್ಚಾಗಿ ಜಾಗ ಉಳಿಸಿದ್ದರು. ಅನುಕೂಲವಾದಾಗ ಅಲ್ಲಿ ಮಹಡಿ ಮನೆ ಕಟ್ಟಬಹುದು. ಆಗ ಹಿಂದಿನ ಸಣ್ಣ ಮನೆಯನ್ನು ಬೇರೆ ಯಾರಿಗಾದರೂ ಬಾಡಿಗೆಗೆ ಕೊಡಲು ಬಂದೀತು. ನೆರೆ ಇದ್ದಂತೆಯೂ ಆಗುತ್ತೆ ಎಂದು ಅವರ ಲೆಖ್ಖ.

ಬೇಸ್‌ಮೆಂಟ್ ಎತ್ತರವಾಗಿದ್ದುದರಿಂದ ಆ ಮನೆಗೆ ಮೂರು ಮೆಟ್ಟಲು. ಅದನ್ನ ಹತ್ತಿಯೇ ಒಳಗೆ ಅಡಿ ಇಡಬೇಕು. ಹಿಂಬದಿಯ ಮನೆಯಲ್ಲಿ ವಾಸಿಸುತ್ತಿದ್ದಾಗ ಅನಂತಯ್ಯ ಅಂಬೆಗಾಲಿಡುತ್ತಿದ್ದ ಮಗುವಂತೆ. ಅವರ ತಾಯಿ ಹೇಳುವುದಿತು—

ಆ ಮೆಟ್ಟಲು ಹತ್ತೋದರಲ್ಲಿ ನೀನು ಎಷ್ಟು ಸಲ ಮಂಡಿ ಒಡೆದು ಘಾಯ ಮಾಡಿಕೊಂಡೆಯೋ ಲೆಖ್ಖವೇ ಇಲ್ಲ. ಮುಂಭಾಗದ ಮನೆ ಕಟ್ಟಿದರೆ ಮೆಟ್ಟಲು ಬಾರದಂತೆ ಕಟ್ಟಬೇಕು."

"ಬುದ್ಧಿ, ಇರಚಲು ಹಾಕ್ತಿದೆ. ಕಿಟಕಿ ಮುಚ್ಚಲಾ?"

ಕಸ ಗುಡಿಸಲೆಂದು ಬಂದ ಕೆಲಸದವಳು ಕೇಳಿದಳು.

ಹೊದ್ದಿದ್ದ ಕಂಬಳಿಯ ಮೇಲೆ ಕೈ ಆಡಿಸಿ ನೋಡಿದರು ಅನಂತಯ್ಯ. ಹನಿ ಸಿಡಿದಿದ್ದುದು ಗೊತ್ತಾಗಿ ಮುಚ್ಚು ಎಂದರು.

"ಬಾಗಿಲು ಮುಚ್ಚಲಾ ? ಛಳಿ" ಅವಳು ಮತ್ತೆ ಕೇಳಿದಳು.

"ಬೇಡ. ಬಾಗಿಲು ತೆರೆದಿರಲಿ".

ಬಾಗಿಲು ಮುಚ್ಚಿದರೆ ಅವರು ದಿಟ್ಟಿಸುತ್ತಿದ್ದ ಹಿಂಬದಿಯ ಮನೆಯ ನೋಟ ಮರೆಯಾಗುವುದಲ್ಲ! ಅದನ್ನು ನೋಡುವುದರಲ್ಲಿ ಅವರಿಗೆ ಏನೋ ಒಂದು ಬಗೆಯ ತೃಪ್ತಿ, ಸಮಾಧಾನ.

ತೆರೆ ಹಾಕಿದಂತೆ ಮೆಟ್ಟಲಿನಿಂದ ನೀರು ತೆರೆ ತೆರೆಯಾಗಿ ಜಾರಿ ಮುಂದೆ ಸಾಗಿದಾಗ ಹಳೆಯ ನೆನವು ಪದರಪದರವಾಗಿ ಬಿಚ್ಚುವುದಿತ್ತು.

ಅನಂತನಯ್ಯನ ತಂದೆ ಮುಂದಿನ ಮನೆ ಕಟ್ಟಲೇ ಇಲ್ಲ. ಹಿಂಭಾಗದ ಮನೆಯಲ್ಲೇ ಬಾಳ್ವೆ ನಡೆಸಿ ಅಲ್ಲೇ ಕಣ್ಣು ಮುಚ್ಚಿದ್ದರು. ಅದನ್ನು ಕಟ್ಟುವ ಹಂಬಲವಂತೂ ಇದ್ದೇ ಇತ್ತು.

"ಆ ಕೆಲಸ ನನ್ನ ಶಕ್ತಿಗೆ ಮೀರಿದ್ದು. ನೀನು ಅದನ್ನು ಕಟ್ಟುವೆ ಎನಿಸುತ್ತಿದೆ ನನಗೆ. ನಿನ್ನ ಕಾಲದಲ್ಲಾದರೂ ನಿಮ್ಮ ಅಮ್ಮನ ಆಸೆ ನೆರವೇರಲಿ" ಎಂದಿದ್ದರು.

ಹಿರಿಯರ ಆಸೆ ನೆರವೇರಿತು. ಅನಂತಯ್ಯ ಮುಂದಿನ ಮನೆ ಕಟ್ಟೇ ಕಟ್ಟಿದರು. ಜಾಗವೇ ಎತ್ತರದಲ್ಲಿದ್ದುದರಿಂದ ಮೆಟ್ಟಲು ಹಾಕಲಿಲ್ಲ ಮಜಬೂತಾಗಿ ಕಟ್ಟಿ, ಮಹಡಿ ಕಟ್ಟಲು ಅನುಕೂಲಿಸುವಂತೆ ಮೆಟ್ಟಲುಗಳನ್ನು ಇಟ್ಟು ಅಲ್ಲಿಗೆ ನಿಲ್ಲಿಸಿದರು. ತಮ್ಮ ಮಗ ಅದನ್ನು ಮುಗಿಸಲಿ ಎಂದಿತ್ತೇನೋ? ಅದನ್ನು ಆಡಿ ತೋರಿಸಿರಲಿಲ್ಲ

ಚೆನ್ನಾಗಿ ನಡೆಯಲು ಬಂದ ಮೇಲೂ ಹುಡುಗ ಅನಂತಯ್ಯ ಮೆಟ್ಟಲು ಜಾರಿ ಪೆಟ್ಟು ಮಾಡಿಕೊಳ್ಳುವುದಿತ್ತು ಮಂಡಿಯ ಘಾಯಕ್ಕೆ ಬಿಗಿದ ಬಟ್ಟೆ ಬಿಚ್ಚುವಂತೆಯೇ ಇರಲಿಲ್ಲ!

ಚುರುಕು ಬುದ್ಧಿಯ ಹುಡುಗ. ವಿದ್ಯಾಭ್ಯಾಸ ಎಲ್ಲೂ ಅಡೆತಡೆಯಿಲ್ಲದೆ ಸಾಗಿತ್ತು. ಹಿಡಿದದ್ದು ವಕೀಲ ವೃತ್ತಿ. ಧಾರಾಳವಾಗಿ ಸಂಪಾದನೆ. ಕೈಹಿಡಿದು ಬಂದ ಹುಡುಗಿ ತವರಿನ ಸಂಪತ್ತಿನಿಂದ ಮನೆಯನ್ನೂ ತುಂಬಿದ್ದಳು. ಆಗ ಮನೆ ಕಟ್ಟುವುದು ಅನಂತಯ್ಯನಿಗೆ ಸುಲಭವಾಯ್ತು.

ತಾಯಿಯ ಬಯಕೆಯಂತೆ ಹೊಸ ಮನೆಯ ವಾಸ.

ಅದೊಂದು ಸುಂದರ ಕನಸು.

ತುಂಬು ಯೌವನ. ಮನ ಒಪ್ಪಿದ ಮಡದಿ. ಕೈತುಂಬ ಸಂಪಾದನೆ. ಮುದ್ದು ಮಕ್ಕಳು. ಎಲ್ಲರ ಹಿತವನ್ನೂ ಗಮನಿಸಿ ನಡೆಯುವ ತಾಯಿಯ ಯಜಮಾನಿಕೆ.

ದಿನಗಳು ಉರುಳಿದುದೇ ಗೊತ್ತಾಗಲಿಲ್ಲ. ಶಾಂತವಾದ ನದಿಯ ಮೇಲೆ ತೇಲುವ ದೋಣಿಯಂತೆ, ಸಂಸಾರ ಸಾಗಿತ್ತು.

ತಾಯಿ ಆಗಲೂ ಹೇಳುವುದಿತ್ತು—

"ಮಗು ...ಒಳ್ಳೆಯ ಮನೆ ಕಟ್ಟಿದೆಯಪ್ಪ. ಮಕ್ಕಳು ಏಳದೆ ಬೀಳದೆ ಹಾಯಾಗಿ ಓಡಾಡ್ತಾರೆ. ನೀನು ಆ ಮೆಟ್ಟಿಲಲ್ಲಿ ಪೆಟ್ಟು ಮಾಡಿಕೊಳ್ಳು ತ್ತಿದ್ದುದು ಇನ್ನೂ ನಿನ್ನೆ ಮೊನ್ನೆಯಂತೆ ನೆನಪಿದೆ. ಸದಾ ಘಾಯ. ಮಂಡಿಗೆ ಬಿಗಿದ ಬಟ್ಟೆ ಬಿಚ್ಚುವಂತೆಯೇ ಇಲ್ಲ."

ಅನಂತಯ್ಯನವರ ನೋಟ ಮತ್ತೊಮ್ಮೆ ಮೆಟ್ಟಿಲನ್ನು ತಾಗಿತು. ಮಳೆ ನಿಂತಿರಲಿಲ್ಲ. ನೀರು ಹರಿಯುತ್ತಲೇ ಇತ್ತು.

* * *

ಅಡುಗೆ ಮನೆಯಿಂದ ಘಮಘಮ ವಾಸನೆ ಬಂದಿತು. ಈರುಳ್ಳಿ ಹಾಕಿದ ಯಾವುದೋ ಪದಾರ್ಥ ಕರಿದರೆ ಬರುವುದುಂಟು. ಪಕೋಡವೇ ಇರಬೇಕು. ಅದನ್ನು ಯಾರೂ ಕಾಣದಂತೆ ಗುಟ್ಟಾಗಿ ಮಾಡುವುದೂ, ತಿನ್ನುವುದೂ ಸಾಧ್ಯವಿಲ್ಲ.

ಅನಂತಯ್ಯನ ಮೂಗು ನಿಮಿರಿತು. ನಾಲಿಗೆಯಲ್ಲಿ ನೀರೂರಿತು. ಓ.... ಪಕೋಡವೇ ಇರಬೇಕು. ಸಂಶಯವಿಲ್ಲ.

ಕಾತ್ಯಾಯಿನಿ ಇದ್ದಾಗ ...? ಊಟ ತಿಂಡಿ ತಯಾರಿಸುವುದರಲ್ಲಿ ಸಿದ್ಧ ಹಸ್ತ ಅವಳದು. ದೊಡ್ಡವರ ಮನೆಯಲ್ಲಿ ಹುಟ್ಟಿ ಬೆಳೆದವಳಾದರೂ ಕೆಲಸಕ್ಕೆ ಹಿಂದೆಗೆಯುತ್ತಿರಲಿಲ್ಲ. ರುಚಿ ರುಚಿಯಾಗಿ ತಿಂಡಿ ತಯಾರಿಸಿ ಬಾಯಿ ತುಂಬ ಉಪಚಾರ ಮಾಡಿ, ತಟ್ಟೆತುಂಬ ತಂದು ನೀಡಬೇಕು ಅವಳು. 'ನಿನಗೆಲ್ಲಿ ?' ಎನ್ನಬೇಕು ಅವರು.

"ನನ್ನ ಯೋಚನೆ ಬೇಡ. ಒಳಗಿದೆ" ಎನ್ನುವಳು ಅವಳು.

ಒಳಗೆ ಇರುವುದಿತ್ತೋ ಇಲ್ಲವೋ? ತಾವು ಕಂಠಪೂರ್ತಿ ತಿಂದಾಗ ತೃಪ್ತಿಯ ನಗೆ ಅವಳ ಮುಖದಲ್ಲಿ.

ಯಾಂತ್ರಿಕವಾಗಿ ಅನಂತಯ್ಯನ ನೋಟ ಎದುರಿನ ಗೋಡೆಯನ್ನು ಅಲಂಕರಿಸಿದ್ದ ಹೆಂಡತಿಯ ಚಿತ್ರದ ಮೇಲೆ ಹರಿದಾಡಿತು. ದೊಡ್ಡ ಕುಂಕುಮ ದಿಂದ ಶೋಭಿಸುತ್ತಿದ್ದ ಮುಖದಲ್ಲಿ ನಗು ನೆರೆಯಾಗಿರುವಂತೆ ತೋರಿತು

"ಆಗೇನೋ ನನ್ನ ತೃಪ್ತಿಪಡಿಸಿ ನಗುತ್ತಿದ್ದೆ. ಈಗ ನನ್ನ ಸ್ಥಿತಿ ನೋಡಿ ದರೆ ನಗು ಬರುವುದೇ ಕಾತ್ಯಾಯಿನಿ? ನಿನ್ನ ಗಂಡ ಒಂದು ಲೋಟ ಬಿಸಿ ಕಾಫಿಗಾಗಿ, ಹಿಡಿ ಕೂಳಿಗಾಗಿ ಹೆರರ ಮರ್ಜಿ ಕಾಯಬೇಕಾಗಿದೆ." ಎಂದು ಕೊಂಡರು.

ನಿಜ ..ಕಾತ್ಯಾಯಿನಿ ಪುಣ್ಯವಂತೆ. ತನ್ನ ಕೈ ಮೇಲಾಗಿ ಬದುಕಿದ್ದು ತನ್ನ ಭಾಗ್ಯ ತೆಗದುಕೊಂಡು ನಗುತ್ತಲೇ ಹೊರಟು ಹೋದಳು. ತಾನು ಹೆರವರ ಕೈಗೆ ಬಿದ್ದೆ.

ಇದೆಂತಹ ಮಾತು? ಹೆರವರು ಎಂಬ ಯೋಚನೆ ಬರ್‍ತಿದೆಯಾದರೂ ಏಕೆ? ಇವರೆಲ್ಲ ಯಾರು? ನನ್ನ ಮಗ, ನನ್ನ ಸೊಸೆ. ಕಾತ್ಯಾಯಿನಿ ಮೆಚ್ಚಿ ಮನೆಗೆ ಬರಮಾಡಿಕೊಂಡ ಸೊಸೆ

ಮಲೆನಾಡಿನ ಮುಗ್ಧ ಹುಡುಗಿ ದುರ್ಗಾ ಏನೂ ತಿಳಿಯದು. ಯಾರು ಹೇಗೆ ಹೇಳಿದರೆ ಹಾಗೆ

ಗಡಿಯಾರ ನಾಲ್ಕು ಬಾರಿಸಿತು. ತಂದೆಯ ಕಾಲದ ಹಳೆಯ ಗಡಿ ಯಾರ, ಆಗಾಗ ರಿಪೇರಿಗೆ ಹೋದರೂ ಬೇಸರವಿಲ್ಲದೆ ದುಡಿಯುತ್ತಿದೆ. ಗಂಟೆ ನಾಲ್ಕಾದರೂ ಕಾಫಿ ಏಕೆ ಬರಲಿಲ್ಲ?

ಅನಂತಯ್ಯನಿಗೆ ತುಟಿ ಒಣಗಿದಂತೆ ತೋರಿ ನಾಲಗೆಯನ್ನು ತುಟಿಯ ಮೇಲೆ ಆಡಿಸಿದರು. ಕರಿಯುವವಾಸನೆ ಬೇರೆ ಕಾಡುತ್ತಿದೆ. ಬಿಸಿಯಾಗಿ ತಿನ್ನುವ ಚಪಲ! ಮಗ ಇನ್ನು ಮನೆಗೆ ಬಂದಿಲ್ಲ. ಬಂದಮೇಲೆ ಒಟ್ಟಾಗಿ ಕೊಡುವ ಎಂದಿರಬಹುದು. ಹಾಗೆಲ್ಲ ಮರೆಯುವ ಹುಡುಗಿಯಲ್ಲ ದುರ್ಗಾ. ಈ ಮಳೆ ಯಲ್ಲಿ ಅವ ಬರುವುದಾದರೂ ಹೇಗೆ? ಕೊಡೆ ಒಯ್ದಿರುವನೋ ಇಲ್ಲವೋ?

ಅನಂತಯ್ಯ ಕಿವಿಗೊಟ್ಟು ಆಲಿಸಿದರು. ಮಳೆಯ ಚಿಟ ಚಿಟ ಸದ್ದು

ಕೇಳಿಸಲಿಲ್ಲ. ನೋಟ ಮತ್ತೊಮ್ಮೆ ಮೆಟ್ಟಲಿನತ್ತ ಹರಿಯಿತು. ಅಲ್ಲಿ ನೀರಿನ ತೆರೆ ಇರಲಿಲ್ಲ. ತೇವ ಮಾತ್ರ ಇದ್ದು, ಮತ್ತೆ ತೂರಿಬಂದ ಬಿಸಿಲಿನಲ್ಲಿ ಫಳ ಫಳ ಹೊಳೆಯಿತು. ಆ ಎರಡನೆ ಮೆಟ್ಟಿಲು ಬಲುಸೊಗಸು. ಒದ್ದೆ ಇರಲಿ, ಒಣಗಿರಲಿ ಅದರ ಸೊಗಸಿಗೆ ಕುಂದಿಲ್ಲ. ಮೊದಲನೆಯದು ನೆಲಕ್ಕೆ ಹತ್ತಿರ ಮಣ್ಣಿನ ಕಣ ಇದ್ದದ್ದೆ.

ಬದುಕಿನಲ್ಲೂ, ಹಾಗೆಯೇ ಅಲ್ಲವೆ ?

ಮೊದಲನೆಯದು ನೆನಪಿಲ್ಲ. ಅಮ್ಮ ಇದ್ದಾಗ ಮಾತು ಮಾತಿಗೆ ನೆನಪು ಮಾಡಿ ಕೊಡುತಿದ್ದಳು ಮರೆಯಬೇಕೆಂದರೂ ಬಿಡುತ್ತಿರಲಿಲ್ಲ. ಎರಡನೆಯ ಮೆಟ್ಟಿಲು ಹತ್ತಿದ್ದು, ಅದರ ಸೊಗಸು ಏನೆಂದು ಅರಿಯುವ ಮೊದಲೇ ಮರೆಯಾಗಿ ಅಬ್ಬ ಈಗ ?

ಹೊರಗಡೆ ಬೂಟು ಕಾಲಿನಲ್ಲಿ ನಡೆದುಬರುವ ಸದ್ದು. ಅನಂತಯ್ಯನ ಮುಖ ಅರಳಿತು ಮಗ ಬರುತ್ತಿರಬೇಕು. ಈ ಹಜಾರದಲ್ಲಿ ಮಲಗಿದರೆ ಒಳಗೆ ಹೊರಗೆ ನಡೆಯುವ ಎಲ್ಲಾ ಕೆಲಸಗಳ ಮಾಹಿತಿ ಇರುತ್ತೆ. ಬಂದವರು ಹೋಗುವವರು ಎಲ್ಲಾ ಕಾಣಿಸುತ್ತಾರೆ. ಎದುರಿಗೆ ಕಂಡರೆ "ಏನು ತಾತ ... ಚೆನ್ನಾಗಿರುವಿರಾ ?" ಎಂದು ಮಾತಾಡಿಸುತ್ತಾರೆ. ಬಿಡುವಿದ್ದರೆ ತಮ್ಮ ಕಷ್ಟ ಸುಖ ಹೇಳಿಕೊಳ್ಳುತ್ತಾ ಒಂದೈದು ನಿಮಿಷ ನಿಲ್ಲುತ್ತಾರೆ

ಅದಕ್ಕಲ್ಲವೇ ಮೂಲೆಯ ಕಿರುಕೋಣೆಯಿಂದ ತಮ್ಮ ಹಾಸಿಗೆಯನ್ನು ಹಜಾರಕ್ಕೆ ಬದಲಿಸಿದ್ದು ? ಮೊದಲೆರಡು ದಿನ ಹುಡುಗರು ಹಾರಾಡಿದರು— "ಹೋಗಿ ಬರುವ ಜಾಗದಲ್ಲಿ ಹಾಸಿಗೆ ಬಿಡಿಸಿ ಮಲಗಿದರೆ ಏನು ಚಂದ" ಎಂತ.

"ಅವರು ಬೇಕಾದಲ್ಲಿ ಮಲಗಲಿ. ಅವರು ಕಟ್ಟಿದ ಮನೆ. ಬೇಕಾದರೆ ಬೀದಿಯ ಕಡೆ ರೂಮಿಗೆ ಕುರ್ಚಿ ಸೋಫಾ ಸಾಗಿಸಿ ಅವರಿಗೆ ಅಡ್ಡಿ ಮಾಡ ಬೇಡಿ" ಎಂದಿದ್ದ ಶಿವರಾಮು. ಎದ್ದಿದ್ದ ಗಲಾಟೆ ಅಲ್ಲೇ ಅಡಗಿತು.

ನಿಜ ... ತಾವು ಕಟ್ಟಿದ ಮನೆ. ಅದಕ್ಕಾಗಿ ಪಟ್ಟ ಶ್ರಮ? ಆ ಉತ್ಸಾಹ? ಒಂದೊಂದು ಇಟ್ಟಿಗೆಯ ಪರಿಚಯವೂ ಉಂಟು. ಮಗ ... ಎಂತಹ ಹುಡುಗ ಅವನು ? ವಿರೋಧವನ್ನು ಮೊಳಕೆಯಲ್ಲಿ ಚಿವುಟ ಎಸೆದಿದ್ದ. ಪುನಃ ಯಾರೂ ಚಕಾರ ಎತ್ತಿರಲಿಲ್ಲ.

ಅನಂತಯ್ಯನಿಗೆ ಹೃದಯ ಒತ್ತಿ ಬಂದಂತಾಯ್ತು. ಗಂಟಲು ಸರಿ

ಮಾಡಿಕೊಳ್ಳುತ್ತ ..

"ಶಿವರಾಮು ... ಬಂದೆಯಾಪ್ಪ. ಮಳೆಯಲ್ಲಿ ನೆನೆದೆ ಏನೋ ... ? ಕೊಡೆ .." ಎಂದರು.

ಮಗ ಒಳಗೆ ಬಂದ. ಕೈಲಿದ್ದ ಕೊಡೆಯನ್ನು ಮೂಲೆಯಲ್ಲಿಟ್ಟು "ಹೂಂ . ನಾನೇ ಬಂದದ್ದು" ಎನ್ನುತ್ತ ಸೀದಾ ತನ್ನ ಕೋಣೆಗೆ ನಡೆದ.

ಅನಂತಯ್ಯನಿಗೆ ತಲೆಯ ಮೇಲೆ ಕುಕ್ಕಿದಂತಾಯ್ತು. ಹಳೆಯ ಕನಸು ಕಾಣುತ್ತಿದ್ದವರು ಚಟ್ಟನೆ ಎಚ್ಚರಗೊಂಡಂತೆ ಹಾಸಿಗೆಯ ಮೇಲೆ ಎದ್ದು ಕುಳಿತು ಎಡಬಲ ನೋಡಿದರು

ಮಗ ಏಕೆ ಹೀಗೆ ಮಾಡಿದ ? ಅವನನ್ನು ನೋಡಬೇಕೆಂದು ಅವ ನೊಡನೆ ಆರಾಮವಾಗಿ ನಾಲ್ಕು ಮಾತಾಡಬೇಕೆಂದು ಬೆಳಗಿನಿಂದ ಚಾತಕ ಪಕ್ಷಿಯಂತೆ ಕಾದಿರುವೆನೆಂದು ಗೊತ್ತಿಲ್ಲವೆ ಅವನಿಗೆ? ಮುಖ ಕೊಟ್ಟು ಮಾತಾ ಡಲಿಲ್ಲ ಕೊನೆಗೆ "ಹೇಗಿದ್ದಿ ?" ಎಂದೂ ಕೇಳಲಿಲ್ಲ. ದುಡುದುಡನೆ ಕೋಣೆ ಸೇರಿ ಬಿಟ್ಟನಲ್ಲ.

ಅವನ ಮನಸ್ಸಿಗೆ ಏನು ಬೇಸರವಿತ್ತೋ ಹೊರಗೆ ನೂರಾರು ತಾಪ ತ್ರಯ. ನಾನು ಆತುರದಿಂದ ಕೂಗಬಾರದಿತ್ತು. ಇದರಿಂದ ನನಗೂ ವ್ಯಥೆ. ಹಿಂದಿನಿಂದ ಅವನೂ ನೊಂದುಕೊಂಡಾನು ಇನ್ನು ಮೇಲೆ ಅವನಾಗಿ ಮಾತಾ ಡಿಸುವವರೆಗೆ ನಾನು ಕೂಗಬಾರದು. ನನ್ನ ಕಣ್ಣೆದುರಿಗೆ ಚೆನ್ನಾಗಿದ್ದರೆ ಸಾಕು.

ಇದ್ದದ್ದರಲ್ಲಿ ಸಮಾಧಾನ ತಿಂಡಿಯತಟ್ಟೆ ಹಿಡಿದುಕೊಂಡು ಈಗ ಬರ್‍ತಾನೆ. ಹತ್ತಿರ ಕುಳಿತು ಅಂದಿನ ಸುದ್ದಿ ಹೇಳುವ ಎಂದೆಲ್ಲ ಚಪಲ ಅನಂತಯ್ಯನಿಗೆ.

ಒಳಗೆ ತಟ್ಟೆಬಟ್ಟಲುಗಳ ಸದ್ದು ಯುಗವೆಂದು ತೋರಿದ ನಿಮಿಷಗಳ ನಿರೀಕ್ಷೆ ತಾಟು ಬಟ್ಟಲುಗಳ ಸದ್ದು ಮೀರಿಸಿ ಕಿಲಕಿಲ ನಗು ಅಲೆ ಅಲೆಯಾಗಿ ಕೇಳಿಬಂತು.

ಓ ...ಇನ್ನು ಶಿವರಾಮು ಇಲ್ಲಿ ಬರಲ್ಲ. ಎಲ್ಲಾ ಒಳಗಡೆಯೇ ತಿಂಡಿಗೆ ಸೇರಿದಾರೆ. ನೋವಿನಿಂದ ಹೃದಯ ಹಿಂಡಿದಂತಾಯ್ತು ಯಾರೋ ಒಳಗೆ ಕುಳಿತು ಅವರ ಎದೆಗೆ ಗುದ್ದುವಂತೆ ತೋರಿತು.

ವಯಸ್ಸಾದಂತೆ ನಮ್ಮ ಜೊತೆ ಯಾರಿಗೂ ಬೇಕಾಗದು. ಎನಿಸಿದಾಗ

ಅನಂತಯ್ಯನ ಸಹನೆ ಮೀರಿತು—

"ನಾಗು ..." ಎಂದು ಕರ್ಕಶವಾಗಿ ಕೂಗಿದರು. ತಲೆಯಮೇಲಿನ ಮುಸುಗನ್ನು ಎಳೆದು ಸರಿಮಾಡಿಕೊಳ್ಳುತ್ತಾ ನಾಗಮ್ಮ ದಡದಡನೆ ಬಂದಳು.

"ಕರೆದಿರಾ ಅಣ್ಣ ?" ವಿನಯದ ಸೋಗಿನಿಂದ ಕೇಳಿದಳು.

"ಹೂಂ .ಕರೆದೆ. ಗಂಟೆ ಎಷ್ಟಾಗಿದೆ ನೋಡು. ಕಾಫಿ ಇಲ್ಲವೇನು ?" ಎಂದು ಗುಡುಗಿದರು.

"ಇಲ್ಲದೆ ಏನು ? ಆಗಲೇ ಮಾಡಿದೆ. ಎರಡು ಮೂರು ಸಲ ಬಂದು ನೋಡಿದೆ. ನೀವು ನಿದ್ರೆ ಮಾಡುತ್ತಿದ್ದಿರಿ ಎಬ್ಬಿಸಬಾರದು ಎಂದುಕೊಂಡು ಹಾಗೇ ಹೋದೆ".

"ಸುಳ್ಳು... ಪೂರಾ ಸುಳ್ಳು. ನಾನು ಕಣ್ಣು ಬಿಟ್ಟುಕೊಂಡೇ ಮಲಗಿ ದೇನೆ. ಈಕಡೆ ಯಾರೂ ಹಣಿಕಿಲ್ಲ"

ಅಷ್ಟು ಕೂಗಾಡಿದಕ್ಕೇ ಅನಂತಯ್ಯನಿಗೆ ಸುಸ್ತಾಯಿತು. ಬರಿಯ ತುಟಿಯಷ್ಟೇ ಅಲ್ಲ ಇಡೀ ದೇಹದ ದ್ರವ ಆರಿದಂತೆ ತೋರಿತು.

"ಈಗೇನಾಯ್ತು ಬಿಡಿ. ಮೊದಲೆ ಕೂಗಿದ್ದರೂ ಆಗಿತ್ತು. ಕಾಫಿ ತಂದಿದೀನಿ, ತಗೋಳಿ"

ನಾಗಮ್ಮ ದೂರ ನಿಂತು ಮುಂದಿದ್ದ ಸ್ಟೂಲಿನ ಮೇಲೆ ಕಾಫಿಯ ಲೋಟವನ್ನು ಕುಕ್ಕಿದಳು. ಅವಳೂ ಮನುಷ್ಯಳೇ ತಾನೇ ? ಅವಳಿಗೂ ಸಿಟ್ಟು ಬಂದಿತ್ತು.

"ಇಷ್ಟು ಹೊತ್ತು ಕಾದು ಬರಿಯ ಕಾಫಿಯೆ ? ತಿಂಡಿ ಮಾಡಿಲ್ಲ ವೇನು ?"

"ತಿಂಡಿ....ತಿಂಡಿ ..." ತೊದಲಿತು ನಾಗಮ್ಮನ ನಾಲಿಗೆ. ಇಲ್ಲವೆಂದು ಹೇಳುವಂತೆಯೂ ಇಲ್ಲ. ವಾಸನೆ ಮನೆತುಂಬ ತುಂಬಿದೆ.

"ಕರಿದ ವಾಸನೆ ಬಂತು. ಪಕೋಡ ಮಾಡಿದೀಯಾ ?"

"ಹೂಂ ಮಾಡಿದ್ದೆ"

"ಮತ್ತೆ ? ಬರೀ ಕಾಫಿ ತಂದಿದಿ ?"

"ಇನ್ನೇನು ಮಾಡಲಿ ? ನೀವು ಖಾಯಿಲೆಯವರು. ಕೊಟ್ಟರೆ ಹೇಗೋ ?

ಏನಾದರೂ ಹೆಚ್ಚು ಕಡಿಮೆ ಆದರೆ ?"

"ಖಾಯಿಲೆ ...? ನನಗೆ ? ಯಾರು ಹೇಳಿದರು ನಿನಗೆ ?"

"ಯಾರೂ ಹೇಳಬೇಕಾಗಿಲ್ಲ. ಸದಾ ಮಲಗಿರ್ತೀರಿ"

"ಈ ನಾಟಕ ಸಾಕು. ನನಗೇನೂ ರೋಗವಿಲ್ಲವೆಂದು ನಿನಗೇ ಗೊತ್ತಿದೆ. ಮೊನ್ನೆ ದೇವರ ಪೂಜೆಗೆಂದು ಹೂವು ಬಿಡಿಸಲು ಹೋದಾಗ ಕಲ್ಲು ಎಡವಿ ಬಿದ್ದೆ. ನಸುಗತ್ತಲು ಕಾಣಿಸಲಿಲ್ಲ. ಕಾಲು ನೋವೆಂದು ಮಲಗಿದೇನೆ. ತಿಂದರೆ ಅರಗದಂಥ ಖಾಯಿಲೆಯಲ್ಲ ಅದು".

"ಆದರೂ ವಯಸ್ಸಾದೋರು ಊಟ ತಿಂಡಿಯಲ್ಲಿ ಹುಷಾರಾಗಿರೋದು ಒಳ್ಳೆಯದು. ಹಾಳು ಮೂಳು ತಿಂದು ರಾತ್ರೆ ಒಂದು ಹೊತ್ತಿನಲ್ಲಿ ಏಳಬೇಕಾಗಿ ಬಂದರೆ ನಿಮ್ಮ ಜೊತೆಗೆ ಯಾರಿರ್ತಾರೆ ? ಕೈಲಿ ಆಗದ ಮೇಲೆ ಅಂಥ ಕೆಲಸಕ್ಕೆ ಹೋಗಲೇ ಬಾರದು. ಈ ಹೂವು ಕೀಳಕ್ಕೆ ಯಾಕೆ ಹೊಗ್ತಾರೆ ? ದೇವರೇನೂ ಅಳಲ್ಲ ಎಂತ ನಿಮ್ಮ ಮಗ ಸೊಸೆ ಪೇಚಾಡಿಕೊಂಡರು ಪಾಪ .."

ಅನಂತಯ್ಯನಿಗೆ ತಲೆ ತಿರುಗಿದಂತೆ ತೋರಿತು. ಭದ್ರವಾಗಿ ಎರಡು ಕೈಲೂ ತಮ್ಮ ತಲೆ ಹಿಡಿದುಕೊಂಡು ಕೇಳಿದರು.

"ನಾಗು .. ನೀನು ಯಾರು ? ಇಲ್ಲಿಗೆ ಬಂದಾಗ ಹೇಗಿದ್ದೆ ? ಎನ್ನುವು ದು ನೆನಪಿದೆಯೇ ನಿನಗೆ ?"

"ಇಲ್ಲದೆ ಏನಣ್ಣ ? ಕಷ್ಟಕಾಲದಲ್ಲಿ ಆಶ್ರಯ ಕೊಟ್ಟು ನಿಮ್ಮ ಒಡ ಹುಟ್ಟಿದವಳಂತೆ ನೋಡಿಕೊಂಡಿರಿ."

"ಗಂಡನನ್ನು ಕಳೆದುಕೊಂಡು ಬೀದಿಯಲ್ಲಿ ನಿಂತಿದ್ದವಳನ್ನು ಕಾತ್ಯಾ ಯನಿ ಮನೆಗೆ ಸೇರಿಸಿಕೊಂಡಳು. ಅವಳು ಹೋದಮೇಲೆ ನೀನೇ ಯಜಮಾ ನಿಯಾದಂತಿದೆ. ಮೈ ಬಗ್ಗಿಸಿ ಕೆಲಸ ಮಾಡಲಾರದ ದುರ್ಗಾ ನಿನಗೆ ಹೆದರಿ ನಿನ್ನ ಕೈ ಗೊಂಬೆಯಾಗಿದಾಳೆ. ಅದರೆ ಇದು ಅತಿಯಾಯ್ತು. ನನಗೆ ಬುದ್ಧಿ ಹೇಳುವಂತಾದೆಯೇ ನೀನು ?"

ನಾಗಮ್ಮ ಉತ್ತರ ಕೊಡದೆ ಒಳಗೆ ನಡೆದಳು. ಬಾಯಿ ಒರೆಸಿಕೊ ಳ್ಳುತ್ತ ಹೊರಗೆ ಬಂದ ಶಿವರಾಮು ಹೇಳಿದ...

"ಹೋಗಲಿ ಬಿಡಿ ಅಪ್ಪ. ಕೆಲಸದವರ ಕೈಲಿ ಜಗಳವಾಡಿ ಓಡಿಸಿಬಿಟ್ಟರೆ ಮಾಡೋರು ಯಾರು ? ಅವರಿಗೆ ಬುದ್ಧಿ ಹೇಳುವ ಬದಲು ನೀವೇ ನಿಮ್ಮ...

ಅನಂತಯ್ಯ ಕಲ್ಲಾದಂತೆ ಕುಳಿತು ಪಿಳಿ ಪಿಳಿ ಕಣ್ಣು ಬಿಟ್ಟರು. ಅವರು ಕುಳಿತಿದ್ದ ಮಂಚ ನೆಲಕ್ಕೆ ಕುಸಿಯುತ್ತಿರುವಂತೆ ತೋರಿತು.

ಏನನ್ನುತ್ತಿದಾನೆ ಮಗ ?

"ಮಬ್ಬು ಹೊತ್ತಿನಲ್ಲಿ ಹೂವು ತಡಕುತ್ತ ಹೋಗಬೇಡಿ. ದೇವರಿಗೆ ಬೇಕಾದ್ದು ಹೂವಲ್ಲ ...ಹೃದಯ"

"ಅಯ್ಯೋ ...ಮೂಢ.... ದೇವರಿಗೆ ನಮ್ಮ ಹೂವು ಹೃದಯ ಯಾವುದೂ ಬೇಕಾಗಿಲ್ಲ. ನಾವಾಗಿ ಕೊಟ್ಟರೆ ಪುನೀತರಾದೆವು. ನಾನು ಹೂವಿಗಾಗಿ ಅಲೆಯುವುದು ದೇವರಿಗಾಗಲ್ಲ. ನನಗಾಗಿ, ಯಾರಿಗೂ ಬೇಡದವನಾಗಿ ಒಂಟಿಯಾಗಿರಲಾರದೆ ಮನಸ್ಸನ್ನು ದೇವರ ಕಡೆಗೆ ಹೊರಳಿಸಿ ಹೊತ್ತು ಕಳೆಯುವ ಸಾಧನೆ ಅದು. ನನ್ನ ಮಾತು ಯಾರಿಗೆ ಬೇಕು ಕೇಳುವ ಸಹನೆ ಯಾರಿಗಿದೆ ?" ಎಂದು ಸೂರು ಹಾರುವಂತೆ ಚೀರಬೇಕು ಎನಿಸಿತು.

ಆದರೆ ಆ ಮಾತು ಆಡಲಿಲ್ಲ ಅವರು

"ಹೌದಪ್ಪ ನಿನ್ನ ಮಾತು ನಿಜ" ಎಂದರು, ಪ್ರಯಾಸದಿಂದ.

ಶಿವರಾಮು ತೃಪ್ತಿಯಿಂದ ನಗುತ್ತ ಹೊರಗೆ ಹೋದ. ಸ್ಟೌವಿನ ಮೇಲಿದ್ದ ಕಾಫಿಯಲ್ಲಿ ಒಂದು ನೊಣಬಿದ್ದು ಚಡಪಡಿಸುತ್ತಿತ್ತು.

ಸ್ವಲ್ಪ ಹೊತ್ತು ನಿಂತಿದ್ದ ಮಳೆ ಮತ್ತೆ ಶುರುವಾಯಿತು. ಚಟಚಟನೆ ಸದ್ದು ಮಾಡುತ್ತಾ ಸೂರಿನಿಂದ ಧಾರೆ ಧಾರೆಯಾಗಿ ಸುರಿಯಿತು. ಸದ್ದುಕೇಳಿ ಬಗ್ಗಿಸಿದ ತಲೆ ಎತ್ತಿ ಸೂರನ್ನು ದಿಟ್ಟಿಸಿದರು ಅನಂತಯ್ಯ. ಮತ್ತೆ ಅದೇ ದೃಶ್ಯ ಮೆಟ್ಟಲಿನ ಮೇಲೆ ಪದರ ಪದರವಾಗಿ ನೀರಿನ ತೆರೆಹಾಕಿತ್ತು. ಮೂರನೆಯ ಮೆಟ್ಟಲು ಉಳಿದ ಎರಡು ಮೆಟ್ಟಲಿಗಿಂತ ಕಡಿದಾಗಿದೆ ಎನಿಸಿತು. ಅದಕ್ಕೆ ಸ್ವಲ್ಪ ಮಟ್ಟಿಗೆ ಛಾವಣಿಯ ಹಂಚಿನ ನೆರಳಿದ್ದರೂ ನೆನೆಯುವುದು ತಪ್ಪಿರಲಿಲ್ಲ. ತೊಲೆಗೆ ಆತುಕೊಂಡಂತೆ ಕಟ್ಟಿಕೊಂಡಿದ್ದ ಗೂಡಿನಲ್ಲಿ ಗುಬ್ಬಿಯೊಂದು ಮೈ ಮುದುಡಿ ಸದ್ದಿಲ್ಲದೆ ಪಿಳಿಪಿಳಿ ಕಣ್ಣು ಮಿಟುಕಿಸುತ್ತಾ ಕುಳಿತಿತ್ತು

ಅನಂತಯ್ಯ ಬೇಸರದಿಂದ ನೋಟವನ್ನು ಅಲ್ಲಿಂದ ಕದಲಿಸಿ ತಮ್ಮ ಸುತ್ತ ನೋಡಿದರು. ಮಾತು ಮುಗಿಸಿ ಶಿವರಾಮು ಹೊರಟು ಹೋಗಿದ್ದ. ಅವನು ಮೂಲೆಗೆ ಒರಗಿಸಿದ್ದ ಕೊಡೆ ಗುಬ್ಬಿಯಂತೆಯೇ ರೆಕ್ಕೆ ಮುದುರಿಕೊಂಡಿತ್ತು. ಕೊಡೆಯ ತುದಿಯಿಂದ ನೀರು ನಿಧಾನವಾಗಿ ಗೀರು ಹಾಕಿದಂತೆ ಹರಿದು ಬರುತ್ತಿತ್ತು.

# ರಾಧೆಯ ಕೊಡುಗೆ

"ರುಕ್ಕೂ....ನಿನಗೊಂದು ಕಾಗದ ಬಂದಿದೆ"

—ಎಂದು ಕೂಗುತ್ತಾ ಪದ್ಮನಾಭಯ್ಯ ಕಾಗದ ಹಿಡಿದುಕೊಂಡು ಒಳಗೆ ಬಂದ.

ಕಲ್ಲುಗಡಿಗೆಯಲ್ಲಿ ಮೊಸರು ಕಡೆಯುತ್ತಿದ್ದ ರುಕ್ಮಿಣಿ ಗಂಡ ಒಳಗೆ ಬಂದದ್ದನ್ನು ನೋಡಿ ತಲೆಯೆತ್ತಿದಳು. ಕಡೆಗೋಲು ಮೊಸರಿನೊಡನೆ ಚೆಲ್ಲಾಟವಾಡುತ್ತಿದ್ದ ಸದ್ದಿನಿಂದಾಗಿ ಅವಳಿಗೆ ಪದ್ಮನಾಭಯ್ಯನ ಕೂಗು ಕೇಳಿಸಿರಲಿಲ್ಲ.

ಬೆಣ್ಣೆಯನ್ನು ತಿನ್ನುವ ಆಸೆಯಿಂದ ಕಣ್ಣರಳಿಸಿ ಮೊಸರು ಕಡೆಯುವುದನ್ನೇ ನೋಡುತ್ತಾ ಕುಳಿತಿದ್ದ ರಾಜಿ, ತನ್ನ ಪುಟ್ಟಕೈ ನೀಡಿ—

"ನಂಗೆ ಕಾಗದ"—ಎಂದಳು.

ಪದ್ಮನಾಭಯ್ಯ ಕಾಗದವನ್ನು ರಾಜಿಯ ಕೈಗೆ ಕೊಟ್ಟು,

"ಅಮ್ಮನಿಗೆ ಕೊಡು ಅವಳ ಹೆಸರಿಗೆ ಬಂದಿದೆ" ಎಂದ.

"ಅಮ್ಮ—ಕಾಗದ" ಎಂಬ ಪದಗಳು ಕಿವಿಗೆ ಬಿದ್ದ ಮೇಲೆ ದಿನಚರಿಯ ಕೆಲಸದಲ್ಲಿ ಮುಳುಗಿದ್ದ ರುಕ್ಮಿಣಿ ಮಾಡುತ್ತಿದ್ದ ಕೆಲಸವನ್ನು ನಿಲ್ಲಿಸಿ-

"ಯಾರದ್ದೀ ಕಾಗದ ?"- ಎಂದು ಕೇಳಿದಳು.

"ನಿಂದು ಕಣೇ, ನಿನ್ನ ಹೆಸರಿಗೇ ಬಂದಿದೆ. ಈ ಕಾಗದಕ್ಕೆ ರುಜು ಮಾಡು ರಿಜಿಸ್ಟರ್ ಮಾಡಿದಾರೆ."

"ನನಗೆ ಬಂದಿದೆಯೆ ?" ರುಕ್ಮಿಣಿಗೆ ಆಶ್ಚರ್ಯ.

"ನನಗೆ ಬಂದಿದ್ದರೆ ನಿನ್ನೇಕೆ ಕರೀತಿದ್ದೆ."

"ಅದು ಸರಿ. ಆದರೆ ನನಗೆ ಬರೆಯೋರು ಯಾರು ?"

ರುಕ್ಮಿಣಿ ಮೊಸರು ಹಾರಿ ಜಿಡ್ಡಾಗಿದ್ದ ಕೈಯನ್ನು ತನ್ನ ಮಾಸಿದ ಸೀರೆಗೆ ಒರೆಸಿಕೊಂಡು ಕಾಗದಕ್ಕೆ ಸಹಿ ಮಾಡಿದಳು.

ಅವಳ ಜೀವಮಾನದಲ್ಲಿ ಮೊದಲ ಬಾರಿಗೆ ರಿಜಿಸ್ಟರ್ ಮಾಡಿದ ಪತ್ರ ಬಂದಾಗ ಆಶ್ಚರ್ಯದ ಜೊತೆ ನಗುವೂ ಬಂದಿತು. ಕಾಗದವನ್ನು ತೆಗೆದು ಕೊಂಡು, ಕವರನ್ನು ಸೊಟ್ಟನೊಟ್ಟಾಗಿ ಉಗುರಿನಿಂದ ಹರಿದು ಒಳಗಿನ ಕಾಗದವನ್ನು ನಿಧಾನವಾಗಿ ಓದುತ್ತಿದ್ದಂತೆ, ಅವಳ ನಗು ಮಾಯವಾಗಿ ನಿಟ್ಟುಸಿರು ಹೊರಬಂತು.

"ಯಾರದ್ದು ಕಾಗದ? ಏನು ಬರೆದಿದಾರೆ?"

ಹೆಂಡತಿಯ ಕಂದಿದ ಮುಖ ನೋಡಿ ಪದ್ಮನಾಭಯ್ಯ ಗಾಬರಿಯಿಂದ ಕೇಳಿದ.

"ರಾಧಾ ಬರೆದಿದಾಳೆ."

"ಎಲ್ಲಾ ಸೌಖ್ಯವಾಗಿದಾರೆ ತಾನೇ?

"ಹೂಂ .." ಎನ್ನುತ್ತ ಕಾಗದವನ್ನು ಗಂಡನ ಮುಂದೆ ಹಾಕಿ, ಮೊಸರಿನ ಕಲ್ಲುಗಡಿಗೆ ಎತ್ತಿಕೊಂಡು ರುಕ್ಮಿಣಿ ಮಾತಾಡದೆ ಒಳಗೆ ನಡೆದಳು.

ರಾಜಲಕ್ಷ್ಮಿ ತಾಯಿಯನ್ನು ಹಿಂಬಾಲಿಸಿದಳು

ಪದ್ಮನಾಭಯ್ಯ ಕೆಳಗೆ ಬಿದ್ದಿದ್ದ ಕಾಗವನ್ನು ಎತ್ತಿಕೊಂಡು ಕಿಟಕಿಯ ಬಳಿ ಹಿಡಿದು ಓದಿದ.

ಅಕ್ಕ ..

ಈ ಕಾಗದ ಏಕೆ ಬರೆದಿದೇನೆ ಗೊತ್ತೆ, ಇನ್ನು ಎಂಟು ದಿನ ಕಳೆದರೆ ನಿನ್ನನ್ನು ನೋಡಿ ಹನ್ನೆರಡು ವರ್ಷವಾಗುತ್ತೆ, 'ಮುಖ ತೊರೆದು ಹೋಗುತ್ತೆ' ಎಂದು ಹೇಳುತ್ತಾರೆ ಚಿಕ್ಕವರಾಗಿದ್ದಾಗಲೇ ತಬ್ಬಲಿಗಳಾಗಿ ಬೇರೆಯವರ ಆಶ್ರಯದಲ್ಲಿ ಬೆಳೆದೆವು. ಮುಂದೆ ನಮ್ಮ ದಾರಿ ಬೇರೆಯಾದರೂ, ನಾವು ಅಕ್ಕ ತಂಗಿಯರಲ್ಲವೆ? ನಿನ್ನ ಬಿಟ್ಟರೆ ನನಗೆ ಬೇರೆ ಯಾರಿದಾರೆ? ನಿನಗೂ ಅಷ್ಟೇ ಮದುವೆಯಾದ ಕೂಡಲೇ ದೂರ ಉತ್ತರದ ಕಡೆ ಹೋಗಿದ್ದ ನಾನು ಇಷ್ಟು ವರ್ಷಗಳ ಮೇಲೆ ಬೆಂಗಳೂರಿಗೆ ಬಂದಿದೇನೆ. ಇವರಿಗೆ ಇಲ್ಲೇ ಕೆಲಸವಾಗಿದೆ. ಒಂದು ಸಲ ಗಟ್ಟಿ ಮನಸ್ಸುಮಾಡಿ, ನಿನ್ನ ಹಳ್ಳಿಯ ಮನೆಯನ್ನೂ, ದನಕರು ಗಳನ್ನೂ ಬಿಟ್ಟು, ಮಕ್ಕಳೊಡನೆ ನಿನ್ನ ತಂಗಿಯ ಮನೆಗೆ ಬಾ ಭಾನುವಾರ ಬೆಳಗಿನ ರೈಲಿಗೆ ನಾನು ಸ್ಟೇಷನ್ನಿಗೆ ಬಂದಿರ್ತೀನೆ. ಅವತ್ತು ಬರಲಾಗದಿದ್ದರೆ

ನೀನು ಬರುವ ದಿವಸ ಬರಿ. ನನ್ನ ವಿಳಾಸ ಬರೆದಿರುವೆನಲ್ಲ ? ಖಂಡಿತ ನಿರಾಶೆ ಗೊಳಿಸಬೇಡ ...

ನಿನ್ನ ತಂಗಿ,
ರಾಧ

"ಭಾವಾಜಿಯನ್ನ ಅವರ ಹಳ್ಳಿ ಬಿಟ್ಟುಕೊಡುವಂತಿದ್ದರೆ ಅವರೂ ಬಂದರ ಸಂತೋಷ"

ಮರೆತ ಮಾತನ್ನು ಕೊನೆಯಲ್ಲಿ ಸೇರಿಸಿದ್ದಳು ರಾಧ.

"ಹೋಗಲಿ ..ಕೊನೆಗಾದರೂ ತನಗೊಬ್ಬ ಭಾವನಿರುವನೆಂದು ರಾಧೆಗೆ ನೆನಪು ಬಂತಲ್ಲ !"–ಎಂದುಕೊಂಡ ಪದ್ಮನಾಭಯ್ಯ.

"ಇನ್ನೇನು ? ಅಮ್ಮಾವ್ರು ಗಂಟು ಮೂಟೆ ಕಟ್ಟಬಹುದಲ್ಲ ! ತಂಗಿ ಆಗ್ರಹದಿಂದ ಆಹ್ವಾನ ಕೊಟ್ಟಿದಾಳೆ."

ರುಕ್ಮಿಣಿ ತಟ್ಟನೆ ಉತ್ತರ ಕೊಡಲಿಲ್ಲ. ಹಳೆಯ ನೆನಪು ಕದಡಿ ರಾಡಿ ಯಾಗಿ ಕಣ್ಣೀರು ಹರಿದದ್ದು ಆ ಕತ್ತಲ ಕೋಣೆಯಲ್ಲೂ ಕಾಣುವಂತಿತ್ತು.

"ಹೂಂ .. ...ಕೊಟ್ಟಿದಾಳೆ. ಮುಖ ತೊರೆದು ಹೋಗುತ್ತೆ ಎಂತ ಹೆದರಿಸಿದಾಳೆ. ಅಂತಹವಳು ತಾನೇ ಬರಬಹುದಿತ್ತು."

ಕಣ್ಣು ಮೂಗು ಒರೆಸಿಕೊಳ್ಳುತ್ತ ರುಕ್ಮಿಣಿ ಉತ್ತರಿಸಿದಳು.

"ನಿನ್ನದೊಂದು ವಿಳಾಸ ಎಲ್ಲಿ ನೇರಿಕೊಂಡಿತ್ತೋ ಅವಳ ಬಳಿ ? ನಾವಿ ರುವ ಈ ಹಳ್ಳಿ ಯಾವ ದಿಕ್ಕಿನಲ್ಲಿದ ? ಎಂದು ಸಹ ಅವಳಿಗೆ ತಿಳಿದಿರಲಾರದು. ಹೇಗೆ ಬರ್ತ್ತಾಳೆ ಹೇಳು ?"

"ಅದೂ ನಿಜವೆ ? ನೀವೂ ಬರ್ತೀರೇನು ?"

"ನಾನೇ.... ? ಯಾರು ಕರೆದಿದಾರೆ ನನ್ನ ?"

"ರಾಧಾ ಬರೆದಿದಾಳಲ್ಲ ?"

"ಹೂಂ... ಬರೆದಿದಾಳೆ. ಆದರೆ ಆಹ್ವಾನ ಇರೋದು ನಿನಗೆ. ಅದು ಉಪಚಾರದ ಮಾತು. ಅಲ್ಲದೆ ರುಕ್ಕೂ .. ನನ್ನ ಕಂಡರೆ ಅವಳಿಗೆ ತಿರಸ್ಕಾರ. ವಿದ್ಯೆಯ ಗಂಧವಿಲ್ಲದೋನು, ಹಳ್ಳಿಯ ಗುಗ್ಗು ಎಂದೆಲ್ಲ ಅಭಿಪ್ರಾಯ ಅವಳು ತನ್ನ ಅಭಿಪ್ರಾಯ ಎಂದೂ ಮರೆಮಾಚಿಲ್ಲ ತೋರಿದ್ದನ್ನು ಎದುರಿಗೇ ಆಡುವ ದಿಟ್ಟೆ ಅವಳು."

ರುಕ್ಮಿಣಿ ತಲೆ ಎತ್ತಿ ಮೌನವಾಗಿ ಗಂಡನನ್ನು ದಿಟ್ಟಿಸಿದಳು. ಇರಸರಿಕೆಯಲ್ಲಿ ಹಳ್ಳಿಯ ರೈತರಂತೆಯೇ ಇದ್ದ ಪದ್ಮನಾಭಯ್ಯ. ಅವನು ತನ್ನ ಇರುವಿಕೆಯ ಬಗೆಗೆ ಎಂದೂ ಕಾಳಜಿ ವಹಿಸಿದವನಲ್ಲ. ರುಕ್ಮಿಣಿಗೂ ಏನೂ ಅನಿಸಿರಲಿಲ್ಲ.

ಆದರೂ ಇಂದು ಏಕೋ ಅವಳ ನೋಟ ಸಂಕೋಚದಿಂದ ನೆಲದತ್ತ ನೆಟ್ಟಿತು.

"ನಾನೂ ಹೋಗಲ್ಲ ಇಷ್ಟು ವರ್ಷ ಕಳೆಯಲಿಲ್ಲವೆ? ಈಗ ನೋಡಿ ಏನಾಗಬೇಕಾಗಿದೆ?"—ಎಂದಳು.

ಅದು ನಾಲಿಗೆತುದಿಯ ಮಾತು. ಪದ್ಮನಾಭಯ್ಯನಿಗೆ ತಿಳಿಯದೆ ಅದು ? ಆಗ ಮಾತಾಡಲಿಲ್ಲ ಅವನು. ರಾತ್ರಿ ರುಕ್ಮಿಣಿ ಮನೆಗೆಲಸವನ್ನು ಮುಗಿಸಿ ಮಲಗಲು ಬಂದಾಗ ಅವಳಿಗೆ ಆಶ್ಚರ್ಯ ಕಾದಿತ್ತು.

ಒಂದು ಚಿಕ್ಕ ತಗಡಿನ ಟ್ರಂಕು, ಕಟ್ಟಿಟ್ಟ ಹಾಸಿಗೆ, ಒಂದು ದೊಡ್ಡ ಬುಟ್ಟಿ, ಎರಡು ಕೈಚೀಲಗಳು, ಎಲ್ಲವೂ ಒಂದು ಕಡೆ ಒಟ್ಟಾಗಿ ಕುಳಿತು, ಅವಳನ್ನು ದಿಟ್ಟಿಸಿ, 'ನಿನ್ನ ಪ್ರಯಾಣಕ್ಕೆ ಎಲ್ಲ ಸಿದ್ಧವಾಗಿದೆ'-ಎಂದು ಸೂಚಿಸಿದುವು. ರಾಜಿ, ಅನಂತ ಇಬ್ಬರ ಸಹಾಯದಿಂದ ಪದ್ಮನಾಭಯ್ಯನೇ ಎಲ್ಲವನ್ನೂ ಸಿದ್ಧಪಡಿಸಿದ್ದ.

"ಇದೇನು ? ಯಾರು ಬಂದಿದಾರೆ ?"

-ರುಕ್ಮಿಣಿ ಆಶ್ಚರ್ಯ ವ್ಯಕ್ತಪಡಿಸಿದಳು.

"ಯಾರೂ ಬಂದಿಲ್ಲ. ನೀನು ಹೊರಡುವೆ ಎಂದು ಎಲ್ಲ ಸಿದ್ಧವಾಗಿವೆ."

'ನಾನು ಹೋಗಲ್ಲ ಎಂದು ಆಗಲೇ ಹೇಳಿದೆ."

"ನನ್ಮಾತು ಕೇಳು. ಇಬ್ಬರು ಹುಡುಗರನ್ನೂ ಕರೆದುಕೊಂಡು ಹೋಗಿ ಬಾ. ಮಕ್ಕಳು ಹೊರಗಿನ ಪ್ರಪಂಚ ನೋಡಲಿ. ನೀನು ತಾನೇ ಏನು ? ಸೇರಿನಲ್ಲಿದ್ದ ಅಕ್ಕಿ ಬೆಲ್ಲ ಒದ್ದು ಬಂದವಳು ಹೊಸಲು ದಾಟಿ ಹೊರಗೆ ಹೋಗಿಲ್ಲ."

"ಓ.... ಸರಿ ಸರಿ. ನಿಮಗೂ ನನ್ನ ಕಾಟ ಸಾಕಾಗಿದೆ, ನಾಲ್ಕು ದಿನ ನನ್ನ ದೂರ ಕಳಿಸಿ ಹಾಯಾಗಿರಬಹುದು."

"ಏನಾದರೂ ಅಂದುಕೊ. ನೀನು ಹೊರಟರೆ ಸರಿ."

"ಈ ಬುಟ್ಟಿ, ಚೀಲಗಳು ಇವೆಲ್ಲ ಏನು? ಈ ಗಂಟು ನೋಡ್ತಿದ್ರೆ ಹಾಗೇ ರಾಧ ಹಳ್ಳಿಯ ಗುಗ್ಗುಗಳು ಎಂದುಕೋತಾಳೆ."

"ಅಂದ್ಕೊಳ್ಲಿ ಬಿಡು. ಹಳ್ಳಿಯವರನ್ನು ಹಳ್ಳಿಯವರೆಂದರೆ ತಪ್ಪೇನು? ಬುಟ್ಟೀಲಿ ಒಂದು ಪಾತ್ರೇಲಿ ಬೆಣ್ಣೆ ಇದೆ. ಚೀಲದಲ್ಲಿ ನಮ್ಮ ಹೊಲದಲ್ಲಿ ಬೆಳೆದ ಒಂದಿಷ್ಟು ದವಸ ಧಾನ್ಯ .."

"ಬೆಂಗಳೂರಿನಲ್ಲಿ ಸಿಕ್ಕದ್ದು ನಮ್ಮ ಕುಗ್ರಾಮದಲ್ಲಿ...."

"ನೀನು ಬೆಂಗಳೂರು ನೋಡಿಲ್ಲ. ಒಂದು ಸಲ ನೋಡಿ ಬಾ. ಆಮೇಲೆ ಅದರ ವಿಚಾರ ಮಾತಾಡೋಣ."

* * *

ಪದ್ಮನಾಭಯ್ಯ ಬಸ್ಸಿನಲ್ಲಿ ಮೈಸೂರಿನವರೆಗೆ ಬಂದು ಅಲ್ಲಿ ಬೆಳಗಿನ ರೈಲಿಗೆ ಹೆಂಡತಿ ಮಕ್ಕಳನ್ನು ಕಳುಹಿಸಿದ. ನಿಲ್ದಾಣದಲ್ಲಿನ ಜನ ಸಮೂಹ, ಹಣ್ಣುಗಳು, ತಿಂಡಿ, ಬಿಸ್ಕತ್ತು ಇವುಗಳನ್ನು ಮಾರುವವರು, ಇವುಗಳನ್ನು ನೋಡಿ ಹುಡುಗರು ಮುಗ್ಧರಾಗಿದ್ದರು. ಆಶ್ಚರ್ಯದಿಂದ ಅರಳಿದ ಕಣ್ಣುಗಳಿಂದ ತಮ್ಮ ಸುತ್ತ ನೋಡುತ್ತಿದ್ದರು. ಚಿಕ್ಕವಳಾದ ರಾಜಲಕ್ಷ್ಮಿಯಂತೂ ಸಂತೋಷದಿಂದ ಕುಣಿದು ಕುಪ್ಪಳಿಸುತ್ತಿದ್ದಳು.

ರುಕ್ಮಿಣಿ ಮಾತ್ರ ಮೌನಗೌರಿಯಂತೆ ಒಂದು ಕಂಬಕ್ಕೆ ಒರಗಿ ನಿಂತಿದ್ದಳು. ಮನೆ ಬಿಟ್ಟು ಹೊರಟಾಗಿನಿಂದ ಅವಳು ಒಂದು ಮಾತೂ ಆಡಿರಲಿಲ್ಲ. ಸಂತೋಷಪಡುವುದು ಒತ್ತಟ್ಟಿಗಿರಲಿ. ಉಕ್ಕಿಬರುತ್ತಿದ್ದ ದುಃಖವನ್ನು ಗಂಡ ಮಕ್ಕಳಿಂದ ಮುಚ್ಚಿಡಲು ಸಾಹಸ ಪಡುತ್ತಿದ್ದಳು.

ಅದಕ್ಕೇ ಮೌನದ ಮೊರೆ ಹೊಕ್ಕಿದ್ದಳು.

ಹೆಂಗಸರ ಗಾಡಿಯಲ್ಲಿ ಒಂದು ಕೊನೆಯ ಜಾಗದಲ್ಲಿ ಅವರನ್ನೆಲ್ಲ ಕೂರಿಸಿ ಸಾಮಾನು ಹೊತ್ತು ತಂದು ಒಳಗಿಟ್ಟು,

"ಸಾಮಾನು ಎಣಿಸಿಕೊ ರುಕ್ಕು. ಇಳಿಯುವಾಗ ಗಲಾಟೇಲಿ ಮರೆತು ಬಿಡಬೇಡ"

ಪದ್ಮನಾಭಯ್ಯ ಎಚ್ಚರಿಸಿದ.

ರುಕ್ಮಿಣಿ ಬಾಯಿಗ ಸೆರಗು ಮುಚ್ಚಿದಂತೆ ತಲೆಅಲ್ಲಾಡಿಸಿದಳು.

"ಖರ್ಚಿಗೆ ದುಡ್ಡು ಸಾಕೇನೆ? ಇನ್ನೊಂದು ಐದು ರೂಪಾಯಿ ಕೊಟ್ಟಿರಲೋ?"

"ಸಾಕು ..."

ಕಷ್ಟದಿಂದ ಮಾತು ಹೊರಬಂತು.

"ಟಿಕೀಟು ಜೋಪಾನ"

"ಹೂಂ .."

"ರಾಧಾ ಸ್ಟೇಷನ್ನಿಗೆ ಬರದಿದ್ದರೆ ಏನು ಮಾಡ್ತಿ?"

"ಮಾಡೋದೇನು? ಅಲ್ಲೆ ಸ್ಟೇಷನ್ನಿನಲ್ಲಿ ಕೂತಿದ್ದು ಇನ್ನೊಂದು ಗಾಡಿ ಹತ್ತಿ ವಾಪ್ಸು ಬರ್ತೀವಿ"

-ರುಕ್ಕು ಹೆದರಿಕೆಯಿಂದ ನುಡಿದಳು.

"ಯಾಕಮ್ಮ ಹೆದರ್ಕೊತೀ? ಅಡ್ರೆಸ್ ಇದೆಯಲ್ಲ. ನಾನು ಕರ್ಕೊಂಡು ಹೋಗ್ತೀನಿ"

-ಅನಂತ ಧೈರ್ಯ ಹೇಳಿದ. ಬೆಂಗಳೂರನ್ನು ಎಂದೂ ನೋಡಿರದ ಹುಡುಗನಿಗೆ ಅದೊಂದು ಸಮಸ್ಯೆಯಾಗಿ ತೋರಲಿಲ್ಲ.

ಇವರ ಪಕ್ಕದಲ್ಲಿ ಕೂತಿದ್ದ ಒಬ್ಬ ಹೆಂಗಸು ಇವರ ಮಾತುಗಳನ್ನು ಕೇಳಿಸಿಕೊಂಡವಳು-

"ಬೆಂಗಳೂರಿನಲ್ಲಿ ಎಲ್ಲಿಗೆ ಹೋಗಬೇಕು?"

-ಎಂದು ವಿಚಾರಿಸಿದಳು.

"ಚಾಮರಾಜಪೇಟೆಗೆ. ನೀವೂ ಅಲ್ಲಿಗೆ ಹೋಗ್ತೀರ?"

ಪದ್ಮನಾಭಯ್ಯ ಆತುರದಿಂದ ಕೇಳಿದ.

"ಹೂಂ ನಾವೂ ಬೆಂಗಳೂರಿಗೇ ಹೊರಟಿದೀವಿ, ಶಂಕರಪುರದಲ್ಲಿ ನಮ್ಮ ಮನೆ. ಸ್ಟೇಷನ್ನಿಗೆ ಯಾರೂ ಬರದಿದ್ದರೆ ನಾನು ಮೊದಲು ಚಾಮರಾಜಪೇಟೆಗೆ ಹೋಗಿ ಅವರ ವಿಳಾಸದ ಮನೆ ತೋರಿಸ್ತೀನಿ. ನೀವು ಧೈರ್ಯವಾಗಿರಿ" ಚೀಲದಿಂದ ಅಡಿಕೆಯ ಚೂರನ್ನು ತೆಗೆಯುತ್ತ ಆಕೆ ಭರವಸೆ ಕೊಟ್ಟಳು.

ರೈಲು ಸಿಳ್ಳು ಹಾಕಿ ನಿಧಾನವಾಗಿ ಚಲಿಸಲಾರಂಬಿಸಿತು. ಮಕ್ಕಳು ಕೈ ಬೀಸಿದುವು. ನೀರು ತೆರೆ ಹಾಕಿದ್ದ ಕಣ್ಣುಗಳಿಂದ ರುಕ್ಕು, ಮಸುಕುಮಸಕಾಗಿ ಕಾಣಿಸಿ ದೂರವಾಗುತ್ತಿದ್ದ ಗಂಡನನ್ನು ದಿಟ್ಟಿಸಿದಳು.

ಏನಾಗಿದೆ ಇವಳಿಗೆ? ಯಾವ ದುಃಖ, ಯಾವ ನೆನಪು ನೋವಿನ ಬುಗ್ಗೆಯನ್ನು ಚಿಮ್ಮಿಸಿದೆ?

ಪದ್ಮನಾಭಯ್ಯ ಯೋಚಿಸಲು ಪ್ರಯತ್ನಿಸಿ, ಏನೂ ಸುಳಿವು ಸಿಗದೆ ನಿಧಾನವಾಗಿ ಊರಿನತ್ತ ಸಾಗುವ ಬಸ್ಸು ಹಿಡಿದ.

ಏನಾಗಿದೆ ನನಗೆ? ರುಕ್ಮಿಣಿಯೂ ಯೋಚಿಸಿದಳು.

ಕಣ್ಣಿನ ಆಳದಿಂದ ನೀರು ಯಾವ ಅಂಕೆಯೂ ಇಲ್ಲದೆ ಹರಿಯಿತು. ಕಿಟಕಿಯಿಂದ ಹೊರಗೆ ತಲೆ ಹಾಕಿದ್ದಳು ಅವಳು.

ಬದುಕಿನ ಬಾನು ಬರಿಯ ಕಾರ್ಮೋಡಗಳಿಂದಲೇ ತುಂಬಿದ್ದಂತೆ ಆಕೆಗೆ ಆ ಕ್ಷಣದಲ್ಲಿ ತೋರಿತು. ಚಿಕ್ಕ ವಯಸ್ಸಿನಲ್ಲಿ ಅನಾಥರಾಗಿ ಹೆರವರ ಆಶ್ರಯದಲ್ಲಿ ದಿನ ನೂಕಿದ್ದು, ಮದುವೆಯ ಮಂಗಳ ವಾದ್ಯದೊಡನೆ ಆರಂಭವಾದ ಏಕತಾನದ ಜೀವನ ಇದ್ದೊಬ್ಬ ತಂಗಿಯನ್ನೂ ದೂರ ಮಾಡಿತ್ತು. ತನ್ನನ್ನು ಹಂಗಿನ ಬಾಳಿನಿಂದ ಬಿಡಿಸಿದ್ದಕ್ಕಾಗಿ ಗಂಡನನ್ನು ಕಂಡರೆ ಮೊದ ಮೊದಲು ಅಭಿಮಾನವೆನಿಸಿದ್ದರೂ, ದಿನ ಕಳೆದಂತೆ ಉದಾಸೀನ ಇಣಿಕಿ ನೋಡಿತ್ತು. ದುಡಿಮೆಗೆ ಸಾಕಷ್ಟು ಪ್ರತಿಫಲವಿಲ್ಲದ ಬರಡು ಜೀವನ. ರಂಗುರಂಗಿನ ನಾಗರಿಕ ಜೀವನದ ಕನಸು ಕಂಡಿದ್ದವಳಿಗೆ ನಿರಾಸೆಯೆನಿಸಿತ್ತು.

ರುಕ್ಮಿಣಿ ಸೆರಗಿನಿಂದ ಕಣ್ಣು ಒರೆಸಿಕೊಳ್ಳುತ್ತ ತನ್ನ ಹಳೆಯ ನೂಲು ಸೀರೆಯನ್ನು ತಿರಸ್ಕಾರದಿಂದ ನೋಡಿದಳು. ಬದುಕಿನ ಬಹು ಭಾಗ ಅಂತಹ ಸೀರೆಗಳನ್ನು ಉಡುತ್ತಲೇ ಕಳೆದಿತ್ತು. ಎಂದೂ ಸೋಪಿನ ನೊರೆಯ ಆವಶ್ಯಕತೆಯಿಲ್ಲದ ಬಣ್ಣದ ಸೀರೆಗಳು.

ಬೆಳಗ್ಗೆ ಸ್ನಾನ ಮಾಡಿ ಒಮ್ಮೆ ಬಟ್ಟೆ ಬದಲಿಸಿಬಿಟ್ಟರೆ ಪುನಃ ನಾಳಿನ ಬೆಳಗಿನವರೆಗೆ ಭಯವಿಲ್ಲ! ಅಲ್ಲದೆ ಬಟ್ಟೆ ಬದಲಿಸಿ ಹೋಗುವುದಾದರೂ ಎಲ್ಲಿ? ಅಲ್ಲಿ ಸುತ್ತಮುತ್ತಲಿನ ಯಾರ ಮನೆಗೆ ಹೋದರೂ ಇದ್ದ ಸ್ಥಿತಿಯಲ್ಲೇ ಹೋಗಬಹುದು.

ಶೃಂಗಾರವಾಗಿ ಹೋಗಬೇಕೆಂದು ಅವಳಿಗೂ ತೋರಿರಲಿಲ್ಲ. ಇವಳು ಉಟ್ಟ ಬಟ್ಟೆಯಲ್ಲೇ ಬಂದಿರುವಳೋ? ಅಥವಾ ಸಿಂಗರಿಸಿಕೊಂಡು ಬಂದಿರುವಳೋ ಎಂಬುದನ್ನು ಅವರೂ ಗಮನಿಸುತ್ತಿರಲಿಲ್ಲ.

* * *

ಬೆಂಗಳೂರು ನಿಲ್ದಾಣದಲ್ಲಿ ರಾಧೆಯನ್ನು ಗುರುತಿಸುವುದು ರುಕ್ಮಿಣಿಗೆ ಸ್ವಲ್ಪವೂ ಕಷ್ಟವಾಗಲಿಲ್ಲ.

ತಿಳಿ ಹಳದಿಯ ನೈಲಾನ್ ಸೀರೆ, ಅದಕ್ಕೆ ಒಪ್ಪುವ ತುಂಡು ತೋಳಿನ ರವಿಕೆ, ಗೋಪುರದ ಹೆರಳು ಹಾಕಿಕೊಂಡಿದ್ದ ಅವಳು ಹಸುರು ಬಣ್ಣದ ಕನ್ನಡಕ ಹಾಕಿಕೊಂಡಿದ್ದಳು. ಕೆಂಪು ಚೆಲ್ಲುವ ಉಗುರು, ರಕ್ತ ಚಿಮ್ಮು ವಂತಿದ್ದ ತುಟಿಗಳು, ಅದೇ ಬಣ್ಣದ ತಿಲಕ ಬಿಳಿಯ ಮುಖಕ್ಕೆ ಮೆರುಗು ಕೊಟ್ಟಿತ್ತು, ತಿದ್ದಿದ ಹುಬ್ಬು, ಕಾಡಿಗೆ ಬಳಿದ ದೊಡ್ಡ ಕಣ್ಣುಗಳು, ಮೋಹಕ ನಿಲುವು. ಸಾಮಾನು ಹೊತ್ತು ಹೋಗುತ್ತಿದ್ದ ಜನರು ಅವಸರದಲ್ಲೂ ಒಮ್ಮೆ ಅತ್ತ ತಿರುಗಿ ನೋಡಿ ಮುಂದೆ ಸಾಗುತ್ತಿದ್ದರು.

ಅಷ್ಟು ಜನರನ್ನು ಆಕರ್ಷಿಸಿದ ಸಿಂಗಾರಿ ರಾಧಾ ಎಂದು ತಿಳಿದಾಗ ರುಕ್ಮಿಣಿಗೆ ಹೆಮ್ಮೆಯ ಜೊತೆ ಬೇರೆ ಅವ್ಯಕ್ತ ಭಾವವೊಂದು ಮನದಲ್ಲಿ ಹೊಕ್ಕು ಮನಸ್ಸು ರಾಡಿಯಾಯಿತು

ಕಣ್ಣು, ಬಣ್ಣ ಎರಡನ್ನು ಬಿಟ್ಟರೆ ಅಕ್ಕ ತಂಗಿಯರಲ್ಲಿ ಹೆಚ್ಚು ವ್ಯತ್ಯಾಸ ವಿಲ್ಲ. ಸಾಮವರ್ಣ, ಮಾಲುಗಣ್ಣು ರುಕ್ಮಿಣಿಯದಾದರೆ ಹಾಲುಕೆನೆಯ ಬಣ್ಣ, ದೊಡ್ಡದಾದ ಹೊಳಪು ಕಣ್ಣುಗಳನ್ನು ಪಡೆಯುವ ಭಾಗ್ಯ ರಾಧೆಯದಾಗಿತ್ತು

ಅನಾದರಕ್ಕೆ ಸಿಕ್ಕಿ ರುಕ್ಮಿಣಿಯ ಚೆಲುವು ಮಾಸಿದ್ದರೆ. ನೂತನವಾದ ಉಡುಗೆಯಲ್ಲಿ ಆಧುನಿಕ ಶೃಂಗಾರಸಾಧನಗಳ ನೆರವಿನಿಂದ ರಾಧೆಯ ಚೆಲುವು ಇಮ್ಮಡಿಯಾಗಿತ್ತು.

"ರಾಧಾ...." ರುಕ್ಮಿಣಿ ಹತ್ತಿರ ಬಂದು ಕೂಗಿದಳು.

ಗಾಡಿಗಳಿಂದ ಇಳಿದು ಬರುತ್ತಿದ್ದವರನ್ನೆಲ್ಲ ಕಾತುರದಿಂದ ಗಮನಿ ಸುತ್ತಿದ್ದ ರಾಧ ತಟ್ಟನೆ ಮುಂದೆ ಬಂದು ಅಕ್ಕನ ಕೈ ಹಿಡಿದುಕೊಂಡಿದ್ದಳು. ಬಹಳ ವರ್ಷಗಳಿಂದ ನೋಡದಿದ್ದ ಅಕ್ಕ ತಂಗಿಯರ ಮಿಲನ ಅಪೂರ್ವ ನೋಟವಾಗಿದ್ದು, ಭಾವನೆಗಳ ಮಹಾಪೂರ ಹರಿದು, ಹೃದಯವನ್ನು ತುಂಬಿ, ಮಾತು ಹೊರಡದಾಯ್ತು.

"ಅಮ್ಮ, ಮನೆಗೆ ಹೋಗೋಣ" ಅರ್ಧ ತೊಡೆ ಮುಚ್ಚುವಂತಿದ್ದ ಫ್ರಾಕ್ ಹಾಕಿಕೊಂಡು, ಪೋನಿಟೈಲ್ ಕಟ್ಟಿಕೊಂಡಿದ್ದ, ರಾಧೆಯ ಮಗಳು

ಸುನೀತಿ ತಾಯಿಯನ್ನು ಎಚ್ಚರಿಸಿದಳು.

"ಹೂಂ.... ಹೋಗೋಣ. ಇವನು ಅನಂತ. ಇವಳು ರಾಜಲಕ್ಷ್ಮಿ, ಅಲ್ವಾ?" ರಾಧಾ ಹಿಂದೆ ಎಂದೋ ಬರೆದಿದ್ದ ಅಕ್ಕನ ಕಾಗದದ ನೆನಪಿನಿಂದ ಮಕ್ಕಳನ್ನು ಗುರುತಿಸಲು ಪ್ರಯತ್ನಿಸಿದಳು.

ರುಕ್ಮಿಣಿ ಯಾವ ನೆನಪನ್ನೂ ಹಸುರಾಗಿಸಲು ಯತ್ನಿಸಿದವಳಲ್ಲ. "ನಿನಗೆಷ್ಟು ಮಕ್ಕಳು? ಇವಳೇ ಚಿಕ್ಕವಳೆ?"–ಎಂದಳು.

ನಿನ್ನ ಮಗಳೇ ಎಂದು ಕೇಳುವ ಅವಶ್ಯಕತೆ ಇರಲಿಲ್ಲ. ರಾಜಲಕ್ಷ್ಮಿ, ಸುನೀತಿ ಇಬ್ಬರನ್ನೂ ಅಕ್ಕ ತಂಗಿಯರೆಂದು ಹೇಳಬಹುದಾದಷ್ಟು ಹೋಲಿಕೆ ಇಬ್ಬರಲ್ಲಿ. ವ್ಯತ್ಯಾಸ ಇದ್ದದ್ದು ಉಡಿಗೆತೊಡಿಗೆಗಳಲ್ಲಿ ಮಾತ್ರ ಹಳ್ಳಿಯ ಹೊರ ಓಡಾಟ, ಪುಷ್ಟಿಯಾದ ಹಾಲು ಮೊಸರು ಊಟದಲ್ಲಿ, ರಾಜಿ ದುಂಡ ಗಿದ್ದರೆ, ಸುನೀತಿ ಬಿಳಿಚಿಕೊಂಡು ಸಣ್ಣಗೆ ಕಾಣುತ್ತಿದ್ದಳು.

ಕೂಲಿಯವನ ಕೈಲಿ ಸಾಮಾನು ಹೊರಿಸಿಕೊಂಡು ಹೊರಗೆ ಬಂದು ಗಾಡಿ ಮಾಡಿಕೊಂಡು ಮನೆ ತಲುಪಿದರು ಮಾತು ಕುಂಟಾಗಿತ್ತು. ಒಬ್ಬರ ನ್ನೊಬ್ಬರು ನೋಡುತ್ತ ಅವರ ಬದುಕನ್ನು ಅರ್ಥಮಾಡಿಕೊಳ್ಳುತ್ತಿರುವಾಗಲೇ ಗಾಡಿ ಮನೆಯ ಮುಂದೆ ನಿಂತಿತು.

ರಾಧ ಮೊದಲು ಇಳಿದು ಬಾಗಿಲಿಗೆ ಹಾಕಿದ್ದ ಬೀಗವನ್ನು ತೆಗೆದು ರುಕ್ಮಿಣಿಯನ್ನು ಒಳಗೆ ಬರಮಾಡಿಕೊಂಡಳು

ಮಕ್ಕಳು ಹಸಿದಿದ್ದವು. ಮೊದಲು ಊಟ. ಚಪಾತಿ ಬಡಿಸಿದಾಗ ರುಕ್ಮಿಣಿ—"ಊಟಕ್ಕೂ ರೊಟ್ಟಿ ಮಾಡಬೇಕೆ?"—ಎಂದಳು

"ಹೂಂ....ಮಾಡದಿದ್ದರೆ ವಿಧಿಯಿಲ್ಲ. ಅವರು ಕೊಡೋ ಅಕ್ಕಿ ಒಂದು ವಾರಕ್ಕೂ ಸಾಕಾಗಲ್ಲ. ಬ್ಲಾಕ್‌ನಲ್ಲಿ ಎಷ್ಟು ತರೋದು."

"ಬ್ಲಾಕ್ ಅಂದರೆ? ಅಕ್ಕಿ ಮಾರುವ ಅಂಗಡಿಯೇ?"

ಹುಡುಗರು ಗಹಗಹಿಸಿ ನಕ್ಕರು. ಹಳ್ಳಿಯಲ್ಲಿದ್ದರೂ ಅನಂತನಿಗೆ ಆ ಪದದ ಅರ್ಥ ಗೊತ್ತಿತ್ತು. ಅಕ್ಕನ ಮುಗ್ಧತೆಗೆ ನಗುತ್ತ ರಾಧೆ ಬ್ಲಾಕ್‌ನಲ್ಲಿ ಸಾಮಾನು ತರುವ ವಿವರಣೆ ಕೊಟ್ಟಳು.

"ಒಂದು ಕೆ.ಜಿ. ಅಕ್ಕಿಗೆ ಎರಡು ರೂಪಾಯಿ. ಒಂದು ಕೆ.ಜಿ. ಸಕ್ಕರೆಗೆ ಮೂರುವರೆ" ಎಂದೆಲ್ಲ ವಿವರಣೆಕೊಟ್ಟಾಗ ನಗುವುದು ರುಕ್ಮಿಣಿಯ ಸರದಿ.

"ರಾಮ ರಾಮ ಹೀಗೂ ಉಂಟೇ ?"—ಎಂದಳು.

ಬೆಳಗಾಗೆದ್ದು ಹಸುವಿಗೆ ಅರ್ಧ ಸೇರು ಅಕ್ಕಿ, ಒಂದಚ್ಚು ಬೆಲ್ಲ ತಿನ್ನಿಸು ತ್ತಿದ್ದ ಅವಳಿಗೆ ಈ ಅಭಾವ ಅರ್ಧವಾಗಲೇ ಇಲ್ಲ. ಹಳ್ಳಿಯ ದೊಡ್ಡ ಮನೆ ಯಲ್ಲಿ ಕಣ್ಣು ಹಾಯಿಸಿದ ಕಡೆ ಚೀಲಗಳು. ಮನೆ ತುಂಬ ದವಸ ಧಾನ್ಯ. ಕೊಟ್ಟಿಗೆಯ ತುಂಬಾ ಹಸು, ಕರು, ಎಮ್ಮೆ...

"ಸ್ವಲ್ಪ ಮನೆ ಕಡೆ ನೋಡಿಕೋತಿರು. ರೇಷನ್ ತಂದು ಬಿಡ್ತೀನಿ"— ಎಂದು ಬೆಳಿಗ್ಗೆ ಎಂಟು ಗಂಟೆಗೆ ಹೋದ ರಾಧ ಹನ್ನೊಂದು ಘಂಟೆಗೆ ಎರಡು ಕೈ ಚೀಲ ಹಿಡಿದು ಬಂದಾಗ ರುಕ್ಮಿಣಿಗೆ ಸೋಜಿಗ, ಈ ಸಾಮಾನು ತರಲು ಇಷ್ಟು ಹೊತ್ತೆ? ಎನಿಸಿತು

"ಯಾಕೇ ಇಷ್ಟು ಹೊತ್ತು? ಒಂದು ಬಂಡಿ ಸಾಮಾನು ತರಬಹು ದಿತ್ತಲ್ಲ"—ಎಂದಳು.

"ಇವತ್ತು 'ಕ್ಯೂ' ದೊಡ್ಡದಿತ್ತು. ಕಾಯಬೇಕಾಯ್ತು."

"ಅಯ್ಯೋ ನನ್ತಾಯಿ. ಈ ಒಂದು ಹಿಡಿ ಸಕ್ಕರೆಗೂ, ಗೋಧಿಗೂ ಇಷ್ಟು ಹೊತ್ತು ಬಿಸಿಲಿನಲ್ಲಿ ನಿಂತಿದ್ದೆಯ ? ಅಂದ್ಹಾಗೆ ನಿನ್ನ ಭಾವ ಏನೋ ಒಂದಿಷ್ಟು ಸಾಮಾನು ಕೊಟ್ಟಿದ್ದಾರೆ ನೋಡು. ನನಗೆ ಅದನ್ನೆಲ್ಲ ತರೋಕೆ ನಾಚಿಕೆಯಾಯ್ತು. ಆದರೆ ಇವರು ಬಿಡಲಿಲ್ಲ."

ಬೆಣ್ಣೆಯ ಪಾತ್ರೆ ಬುಟ್ಟಿಯಿಂದ ಹೊರಬಂದಾಗ ರಾಧಾ ಸಂತೋಷದಿಂದ ಉಬ್ಬಿದಳು.

"ಇದೆಂಥದಮ್ಮ ?"—ಮಕ್ಕಳಿಗೆ ಅಚ್ಚರಿ ಡಬ್ಬದಲ್ಲಿ ಬರುತ್ತಿದ್ದ ಡಾಲ್ಡಾ ತುಪ್ಪವನ್ನಷ್ಟೆ ಕಂಡಿದ್ದರು ಅವರು.

ರಾಧ ಬೆಟ್ಟಿನ ತುದಿಯಲ್ಲಿ ಒಂದಿಷ್ಟು ಬೆಣ್ಣೆ ತೆಗೆದು ಮಕ್ಕಳ ಕೈಗಿಟ್ಟು "ತಿಂದು ನೋಡಿ"—ಎಂದಳು.

ತಾಯಿ ಬೆಣ್ಣೆ ಕಡೆಯುವಾಗಲೆಲ್ಲ ಕೈ ಒಡ್ಡಿ ನಿಂಬೆಹಣ್ಣಿನ ಗಾತ್ರ ಬೆಣ್ಣೆ ಗಿಟ್ಟಿಸುತ್ತಿದ್ದ ರಾಜಿಗೆ ಈ ಒಪ್ಪ ಅರ್ಥವಾಗಲಿಲ್ಲ.

ಚೀಲದಿಂದ ಒಂದೊಂದೇ ಸಾಮಾನು ಹೊರಬಂತು.

ಚಿಕ್ಕದಾಗಿದ್ದರೂ ಚೊಕ್ಕವಾಗಿದ್ದ ಅಡಿಗೆ ಮನೆಯ ಬಡುವಿನ ಮೇಲೆ ಬಣ್ಣಬಣ್ಣದ ಸಾಲು ಡಬ್ಬಗಳು. ಆದರೆ ಅವುಗಳಲ್ಲಿ ಅನೇಕ ಡಬ್ಬಗಳು

ಖಾಲಿ. ರಾಧ ಒಂದೊಂದೇ ಸಾಮಾನನ್ನು ಡಬ್ಬಗಳಲ್ಲಿ ತುಂಬಿಟ್ಟು ಅಂದವಾಗಿ ಜೋಡಿಸಿದಳು. ಅವನ್ನೆಲ್ಲ ನೋಡಿ ರಾಧೆಗೆ ತಿಂಡಿ ಮಾಡುವ ಉತ್ಸಾಹ. ಮಕ್ಕಳಂತೂ ರೆಕ್ಕೆ ಬಂದಂತೆ ಹಾರಾಡಿದರು.

ಇಷ್ಟಾದರೂ ರಾಧಳ ಗಂಡನ ಸುಳಿವೇ ಇಲ್ಲ.

"ನಿನ್ನ ಗಂಡ ಬರಲೇ ಇಲ್ವಲ್ಲೇ ? ಯಾವಾಗ ಬರ್ತಾರೆ?"

ರುಕ್ಮಿಣಿ ತಡೆಯಲಾರದೆ ಕೇಳಿದಳು.

"ಅವರ ಕೆಲಸವೇ ಅಂಥದು. ತಿಂಗಳಿಗೆ ಇಪ್ಪತ್ತು ದಿನ ಹೊರಗೇ ಇರ್ತಾರೆ. ಈ ಹುಡುಗರಿಗೆ ಸ್ಕೂಲು. ಅವರು ಕೈಗೇ ಸಿಕ್ಕಲ್ಲ. ಈ ಸುನೀತಿ ಕೂಡ ನರ್ಸರಿ ಸ್ಕೂಲಿಗೆ ಹೋಗ್ತಾಳೆ. ನಾನೊಬ್ಬಳೇ ಎಲ್ಲಕ್ಕೂ ಒದ್ದಾಡ ಬೇಕು ನಾಳೆ ನಾಡಿದ್ದರಲ್ಲಿ ಬಂದಾರು."

ಎರಡು ಮೂರು ದಿನ ಕಳೆಯಿತು. ನಗರದ ಗಡಿಬಿಡಿಯ ಯಾಂತ್ರಿಕ ಜೀವನ ರಾಧಳಿಗಂತೂ ಒಂದು ನಿಮಿಷ ಬಿಡುವಿಲ್ಲ. ಹಾಸಿಗೆಯಿಂದ ಏಳುವಾಗಲೇ ಅವಸರ.

ಹಾಲಿನವನು ಇನ್ನೂ ಬಂದಿಲ್ಲ. ಅದಿಲ್ಲ ಇದಿಲ್ಲ. ಕಾಫಿ, ತಿಂಡಿ, ಸ್ನಾನ, ಮಕ್ಕಳ ಉಪಚಾರ. ಅವರ ಬಟ್ಟೆಗಳಿಗೆ ಇಸ್ತ್ರಿ. ಪುಸ್ತಕ ಚೀಲಕ್ಕೆ ತುಂಬಿ ತಿಂಡಿಯ ಡಬ್ಬ ಸಿದ್ಧಮಾಡಿ ಅವರನ್ನು ಸ್ಕೂಲಿಗೆ ಕಳಿಸಿದ ಮೇಲೆ, ಮನೆ ಕೆಲಸ ಏನಾದರೂ ಇದ್ದದ್ದೆ. ಸಾಮಾನು ತರುವುದು, ಮಕ್ಕಳ ಬಟ್ಟೆ ಜೋಪಾನ ಮಾಡುವುದು. ಇಂತಹದು ಎಷ್ಟೋ ? ಒಂದೇ ಎರಡೇ ? ಮತ್ತೆ ಮಕ್ಕಳು ಮನೆಗೆ ಬರುವ ಹೊತ್ತು. ತಿಂಡಿಊಟಗಳ ತಯಾರಿ. ಆದರೂ ಇದ್ದುದರಲ್ಲಿ ಹೊತ್ತು ಉಳಿಸಿ ರಾಧಾ ತನ್ನ ಶಿಸ್ತು, ಶೃಂಗಾರಕ್ಕೆ ಗಮನ ಕೊಡುತ್ತಿದ್ದಳು. ಎಂಟು ರೂಪಾಯಿನ ವಾಯಿಲ್ ಸೀರೇನಾದರೂ ಗಂಜಿ ಹಾಕಿ, ಇಸ್ತ್ರಿ ಮಾಡಿ, ಗರಿಮುರಿಯಾಗಿ ಉಡುವಳೇ ಹೊರತು, ಎಂದೂ ಹಳಸಲಾಗಿ ಇದ್ದುದಿಲ್ಲ.

ಮಕ್ಕಳೆಲ್ಲ ಮಲಗಿದ ಮೇಲೆ, ಅಕ್ಕತಂಗಿಯರು ಪಕ್ಕದಲ್ಲಿ ಮಲಗಿ ಕೊಂಡು ಮನಬಂದಷ್ಟು ಹರಟುತ್ತಿದ್ದರು. ವೇಳೆಯ ಪರಿವೆಯಿಲ್ಲದೆ, ಮಾತು ಮುಂದುವರೆಯುತ್ತಿತ್ತು. ಬಾಲ್ಯದ ಸಿಹಿ, ಕಹಿ ನೆನಪುಗಳು, ಮದುವೆಯಾಗಿ ಇಬ್ಬರ ಬದುಕೂ ಕವಲೊಡೆದಾಗ ಆದ ಹೊಸ ಅನುಭವ. ಅವರ ಜೀವನದ

ರೀತಿ ನೀತಿಗಳು ಮಾತಿನಲ್ಲಿ ತೇಲಿಬರುವುದಿತ್ತು.

ಹತ್ತೂರು ತಿರುಗಿದವಳು ರಾಧ. ಅಂತೆಯೇ ಅವಳ ಅನುಭವವೂ ದೊಡ್ಡದು. ಏಕತಾನದ ಜೀವನ ರುಕ್ಮಿಣಿಯದು. ಆದರೂ ಅದನ್ನೆಲ್ಲ ಕೇಳುತ್ತ ರುಕ್ಮಿಣಿಯ ಮನಸ್ಸು ಒಂದು ರೀತಿಯ ತೃಪ್ತಿಯನ್ನು ಕಂಡಿತು. ಹಳ್ಳಿಯಿಂದ ಹೊರಟಾಗ ಇದ್ದ ದುಃಖ, ಅಶಾಂತಿ, ತಾನು ಏನೋ ಕಳೆದುಕೊಂಡಿರುವೆನೆಂಬ ನೈಚ್ಯ ಮನೋಭಾವ ಸ್ವಲ್ಪಸ್ವಲ್ಪವಾಗಿ ಮರೆಯಾಗತೊಡಗಿತು.

ಮೂರನೆಯ ದಿನ ಸಂಜೆಯ ಹೊತ್ತಿಗೆ ರಾಧೆಯ ಗಂಡ ಬಂದ. ಮಕ್ಕಳಿಗೆ ಬೆಳಗಿನಿಂದ ಸಡಗರ. ಅಪ್ಪ ಬರ್ತ್ತಾನೆಂದು ಬೆಳಗಿನಿಂದ ಕುಣೀತಿದ್ದ ಸುನೀತಿ ಸುಸ್ತಾಗಿ ನಿದ್ದೆ ಮಾಡಿದಳು. ರಾಧಳ ಮುಡಿಯನ್ನು ಅಲಂಕರಿಸಿದ್ದ ಗುಲಾಬಿ ಸಪ್ಪೆಯಾಗಿ ಒಣಗಿತ್ತು. ಹತ್ತನೆಯ ಸಲ ಮುಖಕ್ಕೆ ಪೌಡರನ್ನು ಲೇಪಿಸಿಕೊಂಡು ರಾಧ ಓಡುತ್ತ ಹೋಗಿ ಬಾಗಿಲು ತೆಗೆದಳು.

"ಅಕ್ಕ ಬಂದಿದಾರೆ ಬನ್ನಿ. ಮೂರು ದಿನದಿಂದ ನೀವು ಬರಲಿಲ್ಲವೆಂದು ಚಡಪಡಿಸಿದ್ದು ಎಷ್ಟು ಸಲವೊ?"

"ಹೋಗಲಿಬಿಡು. ನಿನಗಂತೂ ನನ್ನ ಯೋಚನೆಯಿಲ್ಲ. ಅವರಾದರೂ ನೆನಸಿ ಕೊಂಡರಲ್ಲ"—ಅವನ ಹಿಡಿತದಲ್ಲಿ ರಾಧಾಳ ಕೆನ್ನೆ ಕೆಂಪೇರಿತು. ಗಂಡನ ಕೈ ಹಿಡಿದುಕೊಂಡೇ ಅಕ್ಕನ ಹತ್ತಿರಕ್ಕೆ ಎಳೆದು ತಂದಳು. ಒಂದು ಕೈಲಿ ಮಗಳು ಇನ್ನೊಂದು ಕೈಲಿ ಹೆಂಡತಿ ಇಬ್ಬರನ್ನೂ ಹಿಡಿದು ಬರುತ್ತಿದ್ದುದು ಒಂದು ಸುಂದರ ಚಿತ್ರದಂತೆ ರುಕ್ಮಿಣಿಗೆ ತೋರಿತು. ಹೊರಗಡೆ ಅವನದೊಂದು ರೀತಿಯ ದುಡಿತ ರಾಧಾಳದೂ ಅಷ್ಟೆ. ಆದರೂ ಒಟ್ಟಿಗಿರುವ ಆ ಹೊತ್ತನ್ನು ಅವರು ಸಂತಸದ ಬುಗ್ಗೆಯಂತೆ ಮಾಡಿಕೊಂಡಿದ್ದರು. ಬೇಸರದ ನೆರಳೂ ಅಲ್ಲಿ ಸುಳಿಯುವಂತಿರಲಿಲ್ಲ.

ಏನು ತಿನ್ನುತ್ತಿರುವೆವೆಂಬುದರ ಪರಿವೆಯೂ ಇಲ್ಲದೆ, ನಗೆಯಲ್ಲಿ, ಮಾತಿನಲ್ಲಿ ಊಟ ಸಾಗಿತು

"ತುಪ್ಪ ಹೇಗಿದೆ?"—ರಾಧಾ ಕೇಳಿದಳು.

"ಯಾಕೆ? ಎಂದಿನಂತೆ ಚೆನ್ನಾಗೇ ಇದೆಯಲ್ಲ."

"ಇಷ್ಟೇ ನಿಮಗೆ ತಿಳಿಯೋದು? ಅಕ್ಕ ಊರಿನಿಂದ ಸೊಗಸಾದ ಬೆಣ್ಣೆ ತಂದಿದ್ದಳು"—ರಾಧಾ ನಕ್ಕಳು.

"ಹೌದಾ" ಆತ ಕಣ್ಣು ಮಿಟುಕಿಸಿ ನಕ್ಕರು. ನಿನ್ನ ಸನಿಯದಲ್ಲಿ ಯಾವ ರುಚಿ ತಾನೇ ತಲೆ ಎತ್ತೀತು? ಎನ್ನುವಂತಿತ್ತು ಆ ನಗು.

ಅಕ್ಕನಿಗೆ ಹಾಸಿಗೆ ಹಾಸಿ ಕೊಟ್ಟು ರಾಧಾ ರೂಮು ಸೇರಿದಳು. ಮುಚ್ಚಿದ ಬಾಗಿಲನ್ನು ದಬ್ಬಿಕೊಂಡು ನಗುವಿನಅಲೆ ಆಗಾಗ ತೇಲಿಬರುತ್ತಿತ್ತು.

ರುಕ್ಮಿಣಿಯು ಪಕ್ಕದಲ್ಲಿ ಮಲಗಿದ್ದ ಮಕ್ಕಳು ನಿದ್ರೆ ಮಾಡಿದರು. ಅವಳಿಗೆ ಮಾತ್ರ ನಿದ್ದೆ ಬಾರದು ರಾಧಾ ಎಂತಹ ಜಾಣೆ! ಇದ್ದುದರಲ್ಲಿ ಸುಖವನ್ನು ಕಾಣುವ ಕಲೆ ಅವಳಿಗೆ ಸಾಧಿಸಿದೆ. ಯಾವ ತಾಪತ್ರಯವೂ, ಕಷ್ಟವೂ ಅವಳ ನಗುವನ್ನು ಕಸಿದಿಲ್ಲ

ಜೀವನವನ್ನು ಸವಿ ಮಾಡಿಕೊಂಡು ಅದನ್ನು ಎಲ್ಲರಿಗೂ ಹಂಚಬಲ್ಲಳು. ಇರುವುದರಲ್ಲಿ ಸುಖವನ್ನು ಕಾಣಬೇಕೇ ಹೊರತು ಇಲ್ಲದುದಕ್ಕೆ ಹಂಬಲಿಸುತ್ತ ಜೀವನವನ್ನು ಬೇಸರದ ಮಡುವಿನಲ್ಲಿ ತಳ್ಳುವುದರಲ್ಲಿ ಯಾವ ಸುಖ?

ಅವಳಿಗೆ ತಾನೇ ಯಾತರ ಕೊರತೆ ? ಉಡುಪಿನಲ್ಲಿ, ರೀತಿಯಲ್ಲಿ ಥಳಕು ಇಲ್ಲದಿದ್ದರೂ ಪದ್ಮನಾಭಯ್ಯ, ಅವಳನ್ನು ಚೆನ್ನಾಗಿಯೇ ನಡೆಸಿಕೊಂಡಿದ್ದ. ಬಾಯಲ್ಲಿ ಬಂದುದನ್ನು ತಲೆಯಲ್ಲಿ ಹೊತ್ತು ಮಾಡಿದ್ದೂ ಉಂಟು.

ಆದರೆ ಅವನ ಜೀವನದ ರೀತಿ ಬೇರೆ ಅಲ್ಲಿನ ಕೆಲಸಕ್ಕೆ ಅಲ್ಲಿನ ಜನಗಳ ಜೊತೆಗೆ ತಕ್ಕಂತೆ ಇತ್ತು ಅವನ ನಡೆ ನುಡಿ.

ಅದರಲ್ಲಿ ಅವಮಾನ ಪಡಲು ಏನಿದೆ ? ಮನಸ್ಸಿಗೆ ಬೇಸರ ತಂದುಕೊಂಡು ತಾನೂ ಜೀವನದಲ್ಲಿ ಆಸಕ್ತಿಯನ್ನು ಕಳೆದುಕೊಳ್ಳುವ ಬದಲು, ತನ್ನನ್ನು ಸುಧಾರಿಸಿಕೊಂಡು ಅವನನ್ನೂ ಸುಧಾರಿಸಬಹುದಲ್ಲ ಮೇಲಿನ ಬಟ್ಟೆಬರೆಗಳಿಗೇ ಮರ್ಯಾದೆ ಕೊಡುವಂತಿದ್ದರೆ ಅದನ್ನು ತಿದ್ದಿಕೊಳ್ಳುವುದು ಎಷ್ಟು ಹೊತ್ತು?

ಆದರೆ ಅವನ ಹೃದಯದ ನಾಗರಿಕತೆ, ಸಿರಿವಂತಿಕೆ ಯಾರಿಗ ಇದ್ದೀತು, ಎಲ್ಲಿ ಹೋದರೂ ಅದನ್ನು ಅರ್ಥ ಮಾಡಿಕೊಳ್ಳುವ ಮನಸ್ಸು ಬೇಕು.

ಯೋಚನೆ ಮಾಡುತ್ತಿದ್ದಂತೆ ನಿದ್ರೆ ಹತ್ತಿತು.

* * *

ರಾಧಾ ಗಂಡನೊಡನೆ ಮಕ್ಕಳನ್ನೂ ಕೂಡಿಕೊಂಡು ಬಂದು ಸ್ಟೇಷನ್ನಿನಲ್ಲಿ ಅಕ್ಕನನ್ನು ಬೀಳ್ಕೊಟ್ಟಳು.

ಅಳು ನಗುಗಳ ಸಮ್ಮಿಶ್ರಣ! ಸಿಳ್ಳು ಹಾಕಿ ರೈಲು ಚಲಿಸಿದಾಗ ನಾಲ್ಕಾರು ಕೈಗಳು ಆಲ್ಲಾಡಿದವು.

ತಂಗಿ ಉಡುಗೊರೆಗಾಗಿ ತಂದಿದ್ದ ಕಾಶ್ಮೀರ ರೇಷ್ಮೆಯ ಸೀರೆಯನ್ನು ಉಟ್ಟು, ಹೆರಳು ಹಾಕಿಕೊಂಡು ಕನಕಾಂಬರದ ಹೂವನ್ನು ಅದರ ಸುತ್ತ ಸುತ್ತಿದ್ದಳು ರುಕ್ಮಿಣಿ.

"ಇವೆಲ್ಲಾ ನನಗೆ ಒಪ್ಪೊಲ್ಲ ಕಣೇ ಎಂದು ರುಕ್ಮಿಣಿ ಪ್ರತಿಭಟಿಸಿದ್ದರೂ ತಂಗಿಯ ಪ್ರೀತಿಯ ಬಲುಮೆಗೆ ಮಣಿದು ಅದನ್ನು ಉಡಲೇಬೇಕಾಯ್ತು. ಮೇಲಿನ ನೋಟಕ್ಕಿಂತ ಅವಳ ಮನಸ್ಸು ಉಲ್ಲಾಸವಾಗಿ ಅರಳಿ, ಮುಡಿದಿದ್ದ ಹೂವನ್ನು ನಾಚಿಸುವಂತೆ ಮುಖ ಅರಳಿತ್ತು.

ಮೈಸೂರು ಸಮೀಪಿಸುತ್ತಿದ್ದಂತೆ ಅವಳ ಹೃದಯ ಯಾವುದೋ ಹೊಸ ಬದುಕಿನ ಕನಸನ್ನು ಕಾಣುತಿತ್ತು.

ಪದ್ಮನಾಭಯ್ಯ ಅವಳಿಗಾಗಿ ಸ್ಟೇಷನ್ನಿನಲ್ಲಿ ಕಾಯುತ್ತಿರುವನೆಂದು ಅವಳಿಗೆ ಗೊತ್ತು.

ತಾವು ಬರುವ ವಿಷಯ ತಿಳಿಸಿ ಅನಂತ ಕಾಗದ ಬರೆದಿದ್ದನಲ್ಲ!

ರುಕ್ಮಿಣಿಯ ನಿರೀಕ್ಷೆ ಸುಳ್ಳಾಗಲಿಲ್ಲ. ರೈಲು ನಿಂತಾಗ ಪದ್ಮನಾಭಯ್ಯ ಕಂಬವನ್ನೊರಗಿ ಹಸನ್ಮುಖದಿಂದ ನಿಂತಿದ್ದ.

ಅದೇ ಮಾಸಲು ಪಂಚೆ. ಸಾಧಾರಣ ಷರಟು, ಹೆಗಲಿನ ಮೇಲೆ ಒಂದು ವಸ್ತ್ರ.

ಆದರೇನು?

ಅವನು ಒರಗಿದ್ದ ಕಂಭದಷ್ಟೇ ಸಾಮರ್ಥ್ಯ ಅವನಲ್ಲೂ ಇದೆ. ಅಷ್ಟೇ ವಿಶ್ವಾಸದಿಂದ ಅವನನ್ನು ಒರಗಿಕೊಂಡು ನಿರಾತಂಕವಾಗಿರಬಹುದು.

ಕಣ್ಣೀರು ಮುಚ್ಚಿಕೊಳ್ಳಲೆಂದು ಬಾಯಿಗೆ ಸೆರಗನ್ನು ಮುಚ್ಚಿಕೊಂಡು ಪ್ರಯಾಣ ಮಾಡಿದ್ದ ರುಕ್ಮಿಣಿ, ನಗುವಿನ ಮುದ್ದೆಯಾಗಿ ರೈಲಿನಿಂದ ಇಳಿದಾಗ ಪದ್ಮನಾಭಯ್ಯ ತನ್ನ ಕಣ್ಣನ್ನೇ ನಂಬಲಿಲ್ಲ.

ಬದಲಾವಣೆ ಮೇಲುನೋಟಕ್ಕೆ ಮಾತ್ರವಲ್ಲ, ತಮ್ಮ ಜೀವನದ ಜಾಡೇ ಬದಲಾಗಿದೆ ಎಂದು ಅವನಿಗ್ಗೆ ಆಗ ತೋರಿರದಿದ್ದರೂ ಅಷ್ಟೇ ಗೆಲುವಿನಿಂದ ತುಂಬಿಬಂದ ನಗುವಿನಿಂದ ಬಂದವರನ್ನು ಸ್ವಾಗತಿಸಿದ.

# ಆಯ್ಕೆ

ಲಲಿತ ಇನ್ನೂ ಹಾಸಿಗೆಯಿಂದ ಎದ್ದಿರಲಿಲ್ಲ. ಆಗಲೇ ಮನೆಯಲ್ಲಿ ಏನೋ ಗಡಿ ಬಿಡಿಗೆ ಮೊದಲಾಗಿತ್ತು. ಕಿಟಕಿಯ ಸಂದಿನಿಂದ ಬೆಳಗಿನ ಎಳೆಯ ಸೂರ್ಯನ ಕಿರಣಗಳು ತೂರಿ ಬರಲು ಯತ್ನಿಸುತ್ತಿದ್ದುವು. ಕಿಟಕಿಯ ಹೊರಗೆ ಹಬ್ಬಿದ್ದ ಗುಲಾಬಿ ಅರ್ಧ ಮಾತ್ರ ಅರಳಿ ಗಾಳಿಯಲ್ಲಿ ತೂಗಾಡುತ್ತಿತ್ತು. ಲಲಿತ ಮೆಲ್ಲನೆ ಕಣ್ಣರಳಿಸಿ ಒಂದು ಕ್ಷಣ ಆ ಕಡೆ ನೋಡಿ ಪಕ್ಕಕ್ಕೆ ಹೊರಳಿದಳು. ಆದರೆ ಪಕ್ಕದ ಹಾಸಿಗೆ ಆಗಲೇ ಬರಿದಾಗಿತ್ತು. ಲೀಲು ಯಾವಾಗಲೋ ಎದ್ದು ಹೋಗಿದ್ದಳು

ಲಲಿತ ಆಗಲೂ ಏಳಲಿಲ್ಲ. ಮನೆಯ ಈ ಅಸಾಮಾನ್ಯ ಗಲಾಟೆಗೆ ಕಾರಣವೇನಿರಬಹುದೆಂದು ಯೋಚಿಸುತ್ತಾ ಮಲಗೇ ಇದ್ದಳು. ಸಾಮಾನ್ಯವಾಗಿ ಈ ಹೊತ್ತಿನಲ್ಲಿ ಮನೆ, ರಮ್ಯವಾದ ಪ್ರಭಾತದಂತೆ ಶಾಂತವಾಗಿರುತ್ತಿತ್ತು. ದೇವರ ಮನೆಯಿಂದ ಅಸ್ಪಷ್ಟವಾಗಿ ಕೇಳಬರುತ್ತಿದ್ದ ಸಂಧ್ಯಾವಂದನೆಯ ಮಂತ್ರ, ಅಡಿಗೆ ಮನೆಯ ಕಡೆಯಿಂದ ಕಾಫಿ ಲೋಟಗಳ ಸದ್ದು, ಆಗ ತಾನೇ ಎಚ್ಚರಗೊಂಡ ಲೀಲು ಅಕ್ಕ ಏಳುವುದನ್ನೇ ಕಾಯುತ್ತ ಅವಳ ಮೈಮೇಲೆ ಕೈ ಆಡಿಸುತ್ತಿದ್ದಳು. ಈ ದಿನ ಎಲ್ಲಾ ವಿಪರೀತವಾಗಿರುವಂತಿದೆ! ಲೀಲೂ ಕೂಡ ಅಷ್ಟು ಹೊತ್ತಿಗೇ ಹಾಸಿಗೆಯಿಂದ ಪರಾರಿ! ಒಳಗಡೆ ಏನೋ ಓಡಾಟ ನಡೆದಿತ್ತು. ಚಿಕ್ಕಮ್ಮ ದೊಡ್ಡ ದನಿಯಲ್ಲಿ ಆಳಿಗೆ ಏನೋ ಹೇಳುತ್ತಿದ್ದಳು.

ಲೀಲು ಒಂದು ಕೈಲಿ ರೊಟ್ಟಿಯನ್ನು ಹಿಡಿದುಕೊಂಡು ಕಡಿಯುತ್ತ ಬಾಗಿಲಿಗೆ ಬಂದಳು. ಸುದ್ದಿಯನ್ನು ಹೇಳುವ ಆತುರದಿಂದ ಅವಳು ಹಾರಿ ಬಂದಿದ್ದಳು. ಅಕ್ಕ ಎದ್ದಿರ.ವುದನ್ನು ನೋಡಿ ಅವಳಿಗೆ ಸಂತೋಷವಾಯಿತು. ರೊಟ್ಟಿಯನ್ನು ಅಗಿಯುತ್ತಲೇ ಹೇಳಿದಳು—

"ಅಕ್ಕ.... ಈಗ ... ಮಾವ ... ಬರ್ತಾನಂತೆ !"

ಗಲಾಟೆಗೆ ಕಾರಣ ತಿಳಿದ ಹಾಗಾಯಿತು; ಆದರೆ ಅವನೇನು ಮಹಾರಾಜನೆ

ಇಷ್ಟು ಸಡಗರ ಪಡುವುದಕ್ಕೆ? ಮನೆಗೆ ಎಷ್ಟೋ ಜನ ನೆಂಟರು ಬರ್ತಾರೆ... ಆದರೆ... ಚಿಕ್ಕಮ್ಮನ ರಾಜ್ಯದಲ್ಲಿ ಅದನ್ನೆಲ್ಲಾ ಕೇಳುವ ಧೈರ್ಯ ಯಾರಿಗಿದೆ?

ಲಲಿತ ಲೀಲುವನ್ನು ಎಳೆದು ಹತ್ತಿರ ಕೂರಿಸಿಕೊಂಡು ಕೆದರಿದ ಕೂದಲುಗಳನ್ನು ಸರಿಮಾಡುತ್ತ ಕೇಳಿದಳು—

"ಯಾರು ಹೇಳಿದರು?"

ಹುಡುಗಿಯ ಹೊಟ್ಟೆ ಮುಗಿಯುತ್ತ ಬಂದಿತ್ತು. ಬಾಯಿಗೆ ತಡೆಯೇನೂ ಇರಲಿಲ್ಲ. ತಂದೆ ತಾಯಿ ಯರ ಮಾತಿನ ನಡುವೆ ತನಗೆ ಅರ್ಥವಾದುದನ್ನೆಲ್ಲಾ ಒಂದೇ ಉಸಿರಿಗೆ ಒದರಿದಳು.

"ಅಮ್ಮ ಹೇಳಿದಳು, ಮಾವ ಇನ್ಮೇಲೆ ಇಲ್ಲೇ ಇರ್ತಾನಂತೆ. ಅದಕ್ಕೇ ಮಹಡಿ ಮೇಲಿನ ರೂಮನ್ನೆಲ್ಲಾ ಖಾಲಿ ಮಾಡ್ಸಿರೋದು. ಅವನು ನಂಗೆ ತುಂಬ ತಿಂಡಿ—ಆಟದ ಸಾಮಾನು ಎಲ್ಲಾ ತರ್ತಾನಂತೆ!"

ಲೀಲು ಇನ್ನೂ ಬಡಬಡಿಸುತ್ತಲೇ ಇದ್ದಳು. ಆದರೆ ಅದು ಲಲಿತನಿಗೆ ಕೇಳಿಸಿತೊ ಇಲ್ಲವೋ ಅನುಮಾನ. ಅವಳು ಈಗ ಬರುವ ಮಾವ ಹೇಗಿರ ಬಹುದೆಂದು ಯೋಚಿಸುತ್ತಿದ್ದಳು. ಅವಳು ಎಂದೂ ಮಾವನನ್ನು ಕಂಡಿರ ಲಿಲ್ಲ. ಅವಳಂತೆಯೇ ಅವಳ ತಾಯಿಗೂ ಒಡಹುಟ್ಟಿದವರು ಯಾರೂ ಇರ ಲಿಲ್ಲ. ತಾಯಿ ಇದ್ದಾಗ ಅವಳ ಕಡೆಯವರಾಗಿ ಅವಳ ತಂದೆ ಒಬ್ಬರು ಆಗಾಗ ಬರುತ್ತಿದ್ದರು. ಅವರೆಂದರೆ ಲಲಿತನಿಗೆ ಪ್ರಾಣ. ಅವರಿಗೂ ಈ ಪುಟ್ಟ ಮೊಮ್ಮಗಳು ಹುಚ್ಚು ಹಿಡಿಸಿ ಬಿಟ್ಟಿದ್ದಳು. ಆಗಿನ ಉತ್ಸಾಹ ಹೇಳಬೇಕೆ? ಅವರು ಬರುವರೆಂದು ಕಾಗದ ಬಂದರೆ ಲಲಿತ ಬಾಗಿಲು ಬಿಟ್ಟು ಹೊರಗೆ ಬರು ತ್ತಿರಲಿಲ್ಲ. ಹಿಂದಿನ ದಿನ ನಿದ್ರೆ ಸಹ ಚೆನ್ನಾಗಿ ಬರುತ್ತಿರಲಿಲ್ಲ. ಕನಸಿನಲ್ಲೂ ಅದೇ! ಅವರು ಬಂದರೆ ಹೋಗುವವರೆಗೂ ಅವರ ತೊಡೆಯನ್ನು ಬಿಟ್ಟು ಇಳಿಯುತ್ತಿರಲಿಲ್ಲ. ಅವರಿಬ್ಬರ ನಡುವೆ ಬೇರೊಂದು ಪ್ರಪಂಚವೇ ನಿರ್ಮಾಣ ವಾಗುತ್ತಿತ್ತು. ಈಗ ಅವರೆಲ್ಲಿ? ಈ ದಿನದ ಸಡಗರ ಅವಳಿಗೆ ಹಳೆಯ ನೆನಪನ್ನು ತಂದಿತು. ಆ ತಾಯಿಯೆಲ್ಲಿ?

ಲಲಿತನ ಹೃದಯದಲ್ಲಿ ಯಾವುದೋ ತಂತಿ ಮಿಡಿದಂತಾಯಿತು. ಕಣ್ಣು ತೇವವಾಯಿತು. ಈಗ ಬರುವ ಮಾವನೂ ಅವರಂತೆ ಇರಬಹುದೇ? ತಾನೂ ಅವರನ್ನು ಲೀಲುವಿನಂತೆ ಮಾವ—ಮಾವ, ಎಂದು ಕೂಗಬಹುದೇ?

ತನ್ನ ಬಾಳಿನಲ್ಲಿ ಪುನಃ ಸ್ನೇಹವು ಕೊನರಬಹುದೇ ? ಎಂಬ ಯೋಚನೆಗಳೆಲ್ಲಾ ಒಂದರ ಹಿಂದೆ ಒಂದು ಬಂದುವು. ಆದರೆ ಅವರೂ ಚಿಕ್ಕಮ್ಮನಂತೇ ಇದ್ದರೆ . .. ? ಮಿಂಚಿನಂತೆ ಬಂದ ಈ ಯೋಚನೆ ಒಂದೇ ಸಲಕ್ಕೆ ಮೊದಲಿನದ ನ್ನೆಲ್ಲಾ ಚದುರಿಸಿಬಿಟ್ಟಿತು. ಆಗ ಮನೆಯಲ್ಲಿ ತನ್ನ ಸ್ಥಿತಿ ಇನ್ನೂ ಹೀನವಾಗ ಬಹುದು ! ಛೆ .... ಇರಲಾರದು—ಎಲ್ಲರೂ ಒಂದೇ ತರಹ ಇರುವರೇ ? ಇರಲಾರದು—ಖಂಡಿತ ಇಲ್ಲ !

ಲಲಿತ ಈಗಂತೂ ಪ್ರಯತ್ನ ಪೂರ್ವಕವಾಗಿ ಆ ಯೋಚನೆಯನ್ನು ದೂರಮಾಡಿದಳು.

"ಇನ್ನೂ ಲಲಿತ ಎದ್ದಿಲ್ಲವೇನೇ?" ಒಳಗಿನಿಂದ ಚಿಕ್ಕಮ್ಮ ಗುಡುಗಿದಳು.

ಇನ್ನು ಮುಂದಿನ ಮಾತುಗಳು ಉದುರುವುದಕ್ಕೆ ಅವಕಾಶ ಕೊಡದೆ ಲಲಿತ ಬೇಗ ಎದ್ದು ಒಳಗೆ ಹೋದಳು. ಹಿಂದಿನ ದಿನ ಒಂದು ಸಣ್ಣ ಮಾತಿಗಾಗಿ ಮನೆಯಲ್ಲಿ ರಾದ್ಧಾಂತವಾಗಿತ್ತು. ಅದನ್ನು ಬೆಳೆಸುವುದು ಅವಳಿಗೆ ಬೇಕಾಗಿರಲಿಲ್ಲ.

ಆ ದಿನ ಏನೋ ಹಬ್ಬ. ಊಟ ತಿಂಡಿ ಎಲ್ಲಾ ಆದ ಮೇಲೆ ಲಲಿತ ತಂಗಿಯನ್ನು ಕೂರಿಸಿಕೊಂಡು ಜಡೆ ಹಾಕುತ್ತಿದ್ದಳು. ನಿತ್ಯವೂ ಅದು ಅವಳ ಕೆಲಸ. ಲೀಲುವನ್ನು ಅವಳು ಮನಃಪೂರ್ವಕವಾಗಿ ಪ್ರೀತಿಸುತ್ತಿದ್ದಳು. ಮಲತಂಗಿ ಎಂಬ ಭಾವನೆ ಎಂದೂ ಅವಳ ಮನಸ್ಸಿಗೆ ಬಂದಿರಲಿಲ್ಲ. ಲೀಲು ಕೂಡ ಅವಳನ್ನು ಅತಿಯಾಗಿ ಹಚ್ಚಿಕೊಂಡು ಇರುತ್ತಿದ್ದಳು. ಮಲಗುವುದು ಕೂಡುವುದು, ತಲೆ ಬಾಚಿಸಿ ಅಲಂಕಾರ ಮಾಡಿಕೊಳ್ಳುವುದು ಎಲ್ಲಾ ಅವಳ ಜೊತೆ. ಅದರಿಂದಲೇ ಅವಳ ತಾಯಿಗೆ ಸಿಟ್ಟು ಇರಬಹುದು.

ಲಲಿತ ಅವಳಿಗೆ ಹೊಸ ಲಂಗ ಹಾಕಿ ಪೆಟ್ಟಿಗೆಯಿಂದ ಕೆಲವು ಒಡವೆ ಗಳನ್ನು ತೆಗೆದು ಅಲಂಕಾರ ಮಾಡಿದಳು. ಒಡವೆಯೆಲ್ಲಾ ಅವಳದ್ದು; ಅವಳಿಗೆ ಅವಳ ತಾಯಿಯ ಕಡೆಯಿಂದ ಬಂದದ್ದು. ಲಲಿತನ ತಾಯಿ ಅವರ ತಂದೆಗೆ ಒಬ್ಬಳೇ ಮಗಳಾಗಿದ್ದಳಾಗಿ ಅವರ ಸಂಪತ್ತಿಗೆಲ್ಲಾ ಅವಳೇ ಅಧಿಕಾರಿಯಾಗಿ ದ್ದಳು. ಅವರು ಮಗಳಿಗೆ ಬೇಕಾದ ಹಾಗೆ ಒಡವೆ ವಸ್ತ್ರಗಳನ್ನು ಕೊಟ್ಟಿದ್ದರು. ತಾಯಿ ಹೋದಾಗಿನಿಂದ ಅವೆಲ್ಲಾ ಲಲಿತನ ಬಳಿಯೇ ಇದ್ದುವು.

ಹುಡುಗಿ ಲಕ್ಷಣವಾಗಿ ಅಲಂಕಾರ ಮಾಡಿಕೊಂಡು ಅದರ ಭಾರದಿಂದ

ಬಳಕುತ್ತ ತಾಯಿಗೆ ತೋರಿಸಲು ಹೋದಳು. ಲಲಿತ ಸಂತೋಷದಿಂದ ಅದನ್ನೇ ನೋಡುತ್ತ ಹಿಗ್ಗಿನಲ್ಲಿ ಮೈಮರೆತು ನಿಂತಿದ್ದಳು. ಆ ದಿನ ಚಿಕ್ಕಮ್ಮನಿಗೆ ಏನು ಕೋಪವಿತ್ತೋ, ದರದರನೆ ಹುಡುಗಿಯ ಕೈ ಹಿಡಿದು ಎಳೆದುಕೊಂಡು ಬಂದು ಒಡವೆಯನ್ನೆಲ್ಲಾ ಲಲಿತನ ಮುಂದೆ ಎಸೆದು—"ತಗೋ ಮಹಾರಾಣಿ. ನಿನ್ನ ಧರ್ಮ ನನಗೇನೂ ಬೇಡ. ತಿರುಕಿಯ ಮಗಳು ತಿರುಕಿಯಂತೆ ಇರಲಿ ನಿನ್ನ ಜಂಬ ತೋರಿಸಬೇಕಾದರೆ ನೀನೇ ಅವನ್ನೆಲ್ಲಾ ಇಟ್ಟುಕೊಂಡು ಮೆರಿ .." ಎಂದು ಹೇಳಿ ಗುಳುಗುಳುನೆ ಅಳುತ್ತಾ ಒಳಗೆ ಹೋದಳು.

ಲಲಿತ ಬೆಪ್ಪಾಗಿ ಹೋದಳು. ಒಂದು ಕ್ಷಣ ಅವಳಿಗೆ ಏನೂ ತೋರಲಿಲ್ಲ. ತನ್ನ ಸಂಪತ್ತಿನ ಮೇಲೆ ಚಿಕ್ಕಮ್ಮ ಉರಿದು ಬೀಳುತ್ತಿದ್ದುದು ಅವಳಿಗೇನೂ ಹೊಸದಲ್ಲ. ಆದಕ್ಕೇ ಅವಳು ಎಂದೂ ವಿಶೇಷ ಆಡಂಬರವನ್ನು ತೋರಿಸುತ್ತಿದ್ದಿಲ್ಲ. ತೀರಾ ಸಾಧಾರಣವಾದ ಬಟ್ಟೆಗಳನ್ನು ಉಡುತ್ತಿದ್ದಳು. ಕೈಲಿ ಎರಡೆರಡು ಚಿನ್ನದ ಬಳೆಗಳು—ಕೊರಳಲ್ಲಿ ಒಂದೆಳೆ ಚೈನು—ಇಷ್ಟೇ ಅವಳು ಉಪಯೋಗಿಸುತ್ತಿದ್ದುದು! ಈ ದಿನ ಯಾರ ಗ್ರಹಚಾರವೊ ...ಮಗುವಿಗೆ ಹಾಕಬೇಕೆಂದು ತೋರಿ ಹಾಕಿದಳು. ಅದೂ ತಪ್ಪಾಗಬಹುದೆಂಬ ಎಣಿಕೆ ಅವಳ ಮನಸ್ಸಿಗೆ ಬಂದಿರಲಿಲ್ಲ.

ಲೀಲು ಒಂದೇ ಸಮ ಅಳುತ್ತಿದ್ದಳು. ತಾಯಿಯ ಏಟು—ಒಡವೆಯನ್ನೆಲ್ಲಾ ಬಲವಂತದಿಂದ ಕಿತ್ತದ್ದು ಎರಡೂ ಸೇರಿ ಅದರ ಹೂವಿನ ಹೃದಯ ಹಿಚುಕಿದಂತಾಗಿತ್ತು. ಇದನ್ನೆಲ್ಲಾ ನೋಡುತ್ತ ಒಳಗೆ ಕುಳಿತಿದ್ದ ರಾಯರು ಸರಸರನೆ ಹೊರಗೆ ಬಂದು ಆಳುತ್ತಿದ್ದ ಮಗುವಿಗೆ ತಾವೂ ಒಂದೇಟು ಹಾಕಿದರು. ಲಲಿತನಿಗೆ ಆ ಏಟು ತನ್ನ ಕೆನ್ನೆಗೆ ಬಿದ್ದಂತೆ ತೋರಿತು. ರಾಯರು ಒಡವೆಯನ್ನೆಲ್ಲಾ ತೆಗೆದು ಮಗಳ ಕೈಗೆ ಕೊಟ್ಟು—

"ಏನೇ ಲಲಿತಾ ನಿನ್ನ ಅಧಿಕ ಪ್ರಸಂಗಿತನ? ಯಾರು ನಿನಗೆ ಒಡವೆ ಹಾಕಲು ಹೇಳಿದವರು? ಮನೆಯಲ್ಲಿ ಇರುವ ರಗಳೆ ಸಾಲದೆಂದು ನೀನು ಬೇರೆ ಕೊಳ್ಳಿ ಇಡತಿಯೇನು ?" ಎಂದು ಕೂಗಾಡಿದರು.

ಲಲಿತ ಏನೂ ಹೇಳಲಿಲ್ಲ. ಮಾತಾಡದೆ ಒಡವೆಯನ್ನು ಎತ್ತಿಕೊಂಡು ಒಂದು ಸಲ ದೈನ್ಯದಿಂದ ಅವರ ಕಡೆ ನೋಡಿ ಒಳಗೆ ಹೊದಳು. ಆ ನೋಟ

ಈಟಿಯಂತೆ ಅವರ ಎದೆಯನ್ನು ಇರಿಯಿತು. ತಮ್ಮ ಹೇಡಿತನಕ್ಕಾಗಿ ನಾಚಿದರು. ಮಗಳದ್ದು ತಪ್ಪಿಲ್ಲವೆಂದು ಅವರಿಗೆ ಗೊತ್ತಾಗಿತ್ತು. ಬೆಳಗಿನಿಂದಲೂ ಲಲಿತನ ಕೋಣೆಯನ್ನು ತಮ್ಮನಿಗೆ ಬಿಡಿಸಿಕೊಡುವ ಸಲುವಾಗಿ ಯಜಮಾನಿಯೊಡನೆ ಯುದ್ಧ ಮಾಡಿ ಹಣ್ಣಾಗಿ ಹೋಗಿದ್ದರೂ ರಾಯರು ಈ ಸಲ ಕೊನೆಗೊಮ್ಮೆ ವಿಜಯಿಗಳಾಗಿದ್ದರು. ಆದರೆ ಆ ವಿಜಯದಿಂದ ಅವರಿಗೆ ಹೆಂಡತಿಯ ಉರಿ ಮುಖವನ್ನು ನೋಡುವುದೊಂದೇ ಆಗಿತ್ತು. ಬೇಸರಗೊಂಡು ಕುದಿಯುತ್ತಿದ್ದ ರೋಷ ಯಾವುದೋ ರೂಪದಲ್ಲಿ ಹೊರ ಬಂದಿತ್ತು. ಇನ್ನು ಮನೆಯಲ್ಲಿದ್ದರೆ ಹೆಚ್ಚು ಮಾತಿಗೆ ಕಾರಣವಾಗುವುದೆಂದು ರಾಯರು ಕೋಟು ತಗುಲಿಸಿ ಹೊರಗೆ ಹೋದರು ಲೀಲು ಅಳುತ್ತ ಲಲಿತನ ತೊಡೆಯ ಮೇಲೆ ನಿದ್ದೆ ಹೋದಳು.

ಲಲಿತ ಅದನ್ನೇ ನೆನೆಯುತ್ತ ಹೆಚ್ಚು ಮಾತು ಬೆಳೆಸದೆ ತನ್ನ ಕೆಲಸದಲ್ಲಿ ಮುಳುಗಿದ್ದಳು. ಲೀಲು ಅದನ್ನು ಪೂರ್ಣವಾಗಿ ಮರೆತು ಮಾವ ಬರುವನೆಂದು ಕುಣಿಯುತ್ತಿದ್ದಳು.

'ಮಾವ' ಬಂದ. ಲೀಲು ಹಕ್ಕಿಯಂತೆ ಹಾರಿ ಕುಣಿದಳು. ಲಲಿತ ಕಿಟಕಿಯಿಂದ ಬಗ್ಗಿ ನೋಡಿದಳು. ಆದರೆ ಅಲ್ಲಿ ಬಂದವನು ಲಲಿತ ಕಲ್ಪಿಸಿಕೊಂಡಿದ್ದ ಚಿತ್ರಕ್ಕೆ ತೀರ ವಿರುದ್ಧವಾಗಿದ್ದ! ಕಚ್ಚೆಯ ಪಂಚೆ,ಕನ್ನಡಕ.... ಕಲಾಪತ್ತಿನ ಪೇಟಾ, ಚಕ್ಕಿನ ಕೋಟಿನ ಮೇಲೆ ನೇತಾಡುತ್ತಿದ್ದ ಬೆಳ್ಳಿಯ ಗಡಿಯಾರದ ಚೈನು .. ಅದರ ಮೇಲೆ ಜೇಬಿನ ತುದಿಯಿಂದ ಇಣಕುವ ಕೊಳೆಯಾದ ಕೈ ವಸ್ತ್ರ .. ಇವೆಲ್ಲಾ ಅವಳ ಮನಸ್ಸಿನ ಮುಂದೆ ಸುಳಿದಿದ್ದುವು. ಅವಳು ಎಂದೋ ಎಲ್ಲೋ ನೋಡಿದ್ದ ಯಾವನಾದರೊಬ್ಬ ಒಳ್ಳೆಯ ಮಧ್ಯ ವಯಸ್ಸಿನ ಮನುಷ್ಯನ ನೆನಪಾಗಿರಬಹುದು ಅದು! ಲಲಿತ ಹೇಗೋ ಅದಕ್ಕೂ ಮಾವನಿಗೂ ಗಂಟು ಹಾಕಿ ಬಿಟ್ಟಿದ್ದಳು!

ಲೀಲು ರಟ್ಟೆ ಹಿಡಿದು ಎಳೆಯುತ್ತ ಒಳಗೆ ಕರೆ ತಂದ ಮಾವ ಲಲಿತನಿಗಿಂತ ಐದಾರು ವರ್ಷ ದೊಡ್ಡವನಿರಬಹುದು—ಅಷ್ಟೆ! ದೊಗಳೆ ಚಲ್ಲಣ, ಬಿಳಿಯ ಷರಟು ಧರಿಸಿ ತಿದ್ದಿ ಕ್ರಾಪು ತೀಡಿದ್ದ. ಲಲಿತನ ಊಹೆಯಲ್ಲಿ ಒಂದು ಮಾತ್ರ ನಿಜವಾಯಿತು. ಗುರುಮೂರ್ತಿ ಮತ್ತು ಚಿಕ್ಕಮ್ಮ ಒಬ್ಬ ತಾಯಿಯ ಮಕ್ಕಳಾದರೂ ಅವರಿಬ್ಬರ ಸ್ವಭಾವವೂ ತೀರ ಭಿನ್ನವಾಗಿತ್ತು. ಅವನು

ತುಮಕೂರಿನಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿ ಬಿ.ಎ.ಗೆ ಸೇರಲು ಮೈಸೂರಿಗೆ ಬಂದಿದ್ದ.

* * *

"ಏನಕ್ಕ—ಇದು? ಬೆಳಿಗ್ಗೆ ಏಳುವ ಹೊತ್ತಿಗೇ ರಾಮಾಯಣ? ಅಷ್ಟು ಹೊತ್ತಿನಿಂದ ಒಂದೇ ಸಮ ಹಾರಾಡ್ತಿದಿಯಲ್ಲ.......?

"ಏನೂಂತ ಹೇಳಲಿ ಗುರು....ನನ್ನ ಪ್ರಾರಬ್ಧ ಕರ್ಮ! ಅಪ್ಪ ನನ್ನ ಕಲ್ಲು ಕಟ್ಟಿ ಕೆರೆಗೋ ಭಾವಿಗೋ ಹಾಕಬಾರದಾಗಿತ್ತೆ.... ? ಈ ಮನೆಗೆ ಕೊಡೋ ಬದಲು ..."

"ಅಲ್ಲ ಸ್ವಲ್ಪ ತಾಳು ; ಆಳಕ್ಕೇ ಮೊದಲುಮಾಡಿಬಿಟ್ಟೆಯಲ್ಲ.... ಈಗ ಅಂಥಾದ್ದು ಏನಾಯ್ತು ಹೇಳಬಾರ್ದೆ.... ?

"ಅಲ್ಲ ಕಣೋ ಕಾಫಿಯೆಲ್ಲಾ ಆರಿಹೋಯ್ತು. ಆಗಿನಿಂದ ಕರೀತಿದೇನೆ ಆ ಮಹಾರಾಣೀನ; ಬರಬಾರದೇ ? ಲೀಲುಗೆ ಮಡಿ ಉಡಸ್ತಾ ಕೂತಿದಾಳೆ. ಇಷ್ಟು ಹೊತ್ತಿಗೇ ಮಡೀಗೆ ಎನು ಅವಸರ ..?"

"ಅಷ್ಟೇ ತಾನೇ ...ಅದಕ್ಯಾಕೆ ಇಷ್ಟು ಅಬ್ಬರ ?"

"ನಿನಗೇನು ತಿಳಿಯುತ್ತೆ ಹೇಳು....ನನ್ನ ಕಷ್ಟ ? ಕಾಫಿ ಆರಿ ಹೋದರೆ ದೂರು ಅಪ್ಪನವರೆಗೂ ಹೋಗುತ್ತೆ...."

"ಅಪ್ಪನ ಕೈಲಿ ನಿನ್ಮೇಲೆ ದೂರು ಹೇಳೊದು ಈ ಗೋಡೆಗೆ ಹೇಳೋದು ಎರಡು ಒಂದೇ! ಆಮಾತಿರಲಿ... ಕಾಫಿ ಆರಿಹೋಗೋದಿರಲಿ, ನೀನು ಮೂರು ದಿವಸ ಕಾಫಿ ಕೊಡದೇ ಇದ್ದರೂ ಅವಳು ಯಾರ ಹತ್ತಿರವೂ ದೂರಲ್ಲ! ನಿನ್ನ ಕೂಗಾಟದಿಂದ ನೆರೆಹೊರೆಯವರಿಗೆ ತಿಳಿಯಬಹುದು....!"

"ಹೌದಪ್ಪ ...ನಾನೇ ಕೆಟ್ಟ ಬಾಯಿನವಳು. ಸಂಬಳ ತಿನ್ನುವ ಆಳು ಗಳು ಕೂಡ ಅವಳು ಒಳ್ಳೇಳು—ನಾನು ಕೆಟ್ಟೋಳು ಅಂತ ಹಿಂದೆ ಮುಂದೆ ಪಿಸುಗುಟ್ಟುತ್ತಿದ್ದರು. ನನ್ನ ಸ್ವಂತ ತಮ್ಮ ನೀನೊಬ್ಬ ಬಾಕಿ ಇದ್ದೆ...."

"ನೋಡಿದೆಯಾ....ಸಿಟ್ಟು ಮಾಡ್ಕೋ ಬೇಡ. ನಿನ್ನ ಒಳ್ಳೇದಕ್ಕೇ ನಾನು ಹೇಳೋದು. ಹಗಲೂ ರಾತ್ರಿ ನೀನು ಅಳೋದು ನೋಡಿ ನನಗೆ ಸಂಕಟವಾಗತ್ತೆ. ನಿನಗೆ ಬಂದಿರೊ ಕಷ್ಟವೇನು ? ದೇವರು ಉಣ್ಣಕ್ಕೆ ಉಡಲಿಕ್ಕೆ ಕೊಟ್ಟಿದಾನೆ. ಭಾವ....ನೀನು ಇಟ್ಟಗೆರೆ ದಾಟಲ್ಲ. ಇತರರ ಮನೇಲಿ ಮಲ

ಮಕ್ಕಳು ಆಡುವುದನ್ನು ನೋಡಿದರೆ....ನೀನು ಪುಣ್ಯ ಮಾಡಿದ್ದೆ ಎಂತ ಇಟ್ಕೊಕೋ ಬೇಕು...."

"ಆಹಾ....ಪುಣ್ಯವಲ್ಲವೇ....ಮೂರು ಹೊತ್ತು ಆ ಮುದ್ದು ಮುಖ ಎದುರಿಗೆ ಕೂರಿಸಿಕೊಂಡು ಇರೋದೇನು ಸ್ವಲ್ಪ ಪುಣ್ಯವೇ ... !"

"ಅಲ್ಲ ...ಕಣೇ ..ನಾನೂ ಅದೇ ಹೇಳ್ತಿರೋದು. ಓದು ಹುಡುಗೀನ ಶಾಲೆ ಬಿಡಿಸಿ ಮುಂದೇಕೆ ಕೂರಿಸಿ ಕೊಂಡಿದ್ದೀ ? ಅವಳು ಮನೇಲಿದ್ದು ನಿನ ಗೇನು ಮಾಡ್ಬೇಕು. ಭಾವನ ಮನಸ್ಸಿನಲ್ಲಿ ಓದಿಸಬೇಕಂತ ಇದೆ. ಅತ್ತಲಾಗೆ ದಬ್ಬಬಾರದೇ ...ನಿನಗೂ ಕಷ್ಟ ಕಡಿಮೆಯಾಗುತ್ತೆ....!"

"ಹೋಗಲಿ.... ಮಹಾರಾಯ ನಾನೇಕೆ ಬೇಡಾ ಅನ್ನಲಿ ...? ಅವ ಳಿದ್ದು ನನಗೇನು ಉದ್ಧಾರ? ಲೀಲುವಾದರೂ ಅವಳ ಸಹವಾಸ ತಪ್ಪಿ ಒಳ್ಳೆಯದಾರಿಗೆ ಬರಲಿ....!"

* * *

"ಲಲಿತು ...ಯಾಕೆ ಪೆಚ್ಚಾಗಿದ್ದೀ....ಸ್ಕೂಲು ಬೇಜಾರಾಯಿತೆ....?"

"ಇಲ್ಲ ...ಬೇಜಾರಿಲ್ಲ....ಯಾಕೋ ನನಗೆ ಸರಿಯಾಗಿ ಅರ್ಥವಾಗಲಿಲ್ಲ. ಪಾಠವೆಲ್ಲಾ ಮರೆತಂತೆ ಆಗಿದೆ."

"ಒಂದು ವರ್ಷದಿಂದ ಬಿಟ್ಟು ಹೋಗಿತ್ತು. ಆದರಿಂದ ಹಾಗಾಗಿರ ಬಹುದು. ಅಲ್ಲದೆ ಹೈಸ್ಕೂಲು ಪಾಠ ಮೊದಮೊದಲು ಕಷ್ಟವಾಗೇ ಕಾಣಿ ಸುತ್ತೆ. ಅಷ್ಟಕ್ಕೇ ಹೆದರಬಾರದು. ಪುಸ್ತಕ ತೆಗೆದುಕೊಂಡು ಬಾ. ನಿನಗೆ ತಿಳೀದೇ ಇದ್ದದ್ದು ನಾನು ಹೇಳಿಕೊಡ್ತೇನೆ. ಲೀಲೂ ...ನೀನೂ ಬಾ.... ಸ್ಲೇಟು ತಗೊಂಡು ...ಅಕ್ಷರ ಬರಿಸ್ತೇನೆ .."

""ಲೋ ...ಗುರುಮೂರ್ತಿ....ಇನ್ನು ಇವರಿಗೆ ಹೇಳಿಕೊಡು ಅವಾಂತರ ದಲ್ಲಿ ನಿನ್ನ ಪಾಠಕ್ಕೆ ತೊಂದರೆ ಮಾಡಿಕೋ ಬೇಡಪ್ಪ....!"

"ಇಲ್ಲಮ್ಮ ...ಆ ಯೋಚ್ನೆ ನನಗಿರಲಿ !"

"ಇದೇನು ಬಂತಕ್ಕ ಪುನಃ ? ಮನೆಗೆ ಬರೋ ಹೊತ್ತಿಗೆ ಒಳ್ಳೆ ಧೂಮ ಕೇತುವಿನ ಹಾಗೆ ಆಗಿದ್ದೀಯಲ್ಲ ! ಏನು ಸಂದರ್ಭ ?"

"ಹೋಗಪ್ಪ ನಿನ್ನ ಪಾಡಿಗೆ. ನನ್ನ ಕಾಷ್ಟವ್ಯಸನ ಇದ್ದೇ ಇದೆ.

ಅದನ್ನು ತಗೊಂಡು ನೀನೇನು ಮಾಡ್ತೀ ..?"

"ನೋಡು....ಇದೆಲ್ಲಾ ಚೆನ್ನಾಗಿಲ್ಲ. ಭಾವಯ್ಯ ಎಲ್ಲೋ ಧರ್ಮದ ಗೊಡ್ಡು. ಅದರಿಂದ ನೀನಾಡಿದ ಆಟಾನೆಲ್ಲ ಸಹಿಸಿಕೊಂಡು ಸುಮ್ಮನಿದಾರೆ. ನಾನಾಗಿದ್ದರೆ... ಮಾತ್ರ ..ನೋಡು ಅದನ್ನೇ ಹೇಳಬೇಕೆಂದು ಬಂದೆ. ನನಗೆ ಇಲ್ಲಿರಲು ಸಾಧ್ಯವಿಲ್ಲ. ಒಂದು ರೂಮು ನೋಡಿದೇನೆ ...ನಾಳೆ ನಾಡಿದ್ದರಲ್ಲಿ ನನ್ನ ಸಾಮಾನು ತೆಗೆದುಕೊಂಡು ಅಲ್ಲಿಗೇ ಹೋಗುತ್ತೇನೆ. ವಾರ ಮಾಡಿ ಕೊಂಡು ಊಟ ಮಾಡಿದರೂ ಚಿಂತೆಯಿಲ್ಲ .?"

"ಯಾಕೋ ..ನಿನಗೆ ಇಲ್ಲೇನು ಕಡಿಮೆಯಾಗಿದೆ....?"

"ನೋಡು ...ನಿನ್ನ ಮನೆಯಲ್ಲಿ ಊಟ ತಿಂಡಿಗೆ ಕಡಿಮೆಯಿಲ್ಲ. ನಮ್ಮ ಮನೆಗಿಂತಲೂ ಆ ವಿಚಾರದಲ್ಲಿ ಹೆಚ್ಚು ಅನುಕೂಲವಾಗಿದೆ. ನೀನು ದಯ ಮಾಡಿ ಎರಡು ಬಟ್ಟೆಯನ್ನೂ ಹೊಲಿಸಿ ಕೊಟ್ಟಿದ್ದೀ ..ಅದನ್ನೆಲ್ಲಾ ನಾನು ಇಲ್ಲವೆನ್ನುವುದಿಲ್ಲ. ಆದರೆ ಯಾರೂ ಈ ಮನೆಯಲ್ಲಿ ತಮ್ಮ ವ್ಯಕ್ತಿತ್ವವನ್ನು ಉಳಿಸಿಕೊಂಡು ಇರಲು ಸಾಧ್ಯವಿಲ್ಲ. ನೀನು ಹಾಕಿದ್ದನ್ನು ತಿಂದು ನಿರ್ಜೀವ ಬೊಂಬೆಗಳಂತೆ ಬೇಕಾದರೆ ಇರಬಹುದು : ನಿನ್ನ ಗಂಡ ನಿನ್ನ ಮಕ್ಕಳು ಅವರಿ ಗಂತೂ ಯತ್ನವಿಲ್ಲ. . ನನಗೇನು ಹಣೇಬರಹವೇ ? ಇಲ್ಲಿಗೆ ಬಂದಾಗಿನಿಂದ ಈ ರಗಳೆ ಕೇಳಿ ತಲೆ ಚಿಟ್ಟು ಹಿಡಿದುಹೋಗಿದೆ...."

"ಗುರು....ಸುಮ್ಮನೆ ಕೋಪ ಮಾಡಬೇಡಪ್ಪ. ನನಗೇನು ಸಂತೋಷ ವಾಗಿರಲು ಆಸೆಯಿಲ್ಲವೆ ? ನಾನೂ ಹಾಗೇ ಇರಬೇಕೆಂತ ಎಷ್ಟೋ ಸಾಹಸ ಮಾಡ್ತೇನೆ. ಅಷ್ಟರಲ್ಲಿ ಏನಾದರೂ ರಗಳೆ ತೆಗೆದುಬಿಡ್ತಾಳೆ ..."

"ಚಿಕ್ಕಮ್ಮ ...ನಾನು ನಿನಗೆ ..."

"ಸಾಕು ಸುಮ್ಮನಿರೆ ."

"ಏನಾಯ್ತುಕ್ಕ... .ಲಲಿತು ಏನು ಮಾಡಿದಳು .?"

"ನೋಡು ...ಅವರಮ್ಮನ ಸೀರೆನೆಲ್ಲಾ ನನಗೆ ಕೊಡಕ್ಕೆ ಬರ್ತಾಳಲ್ಲ." ಎಷ್ಟು ಅಹಂಕಾರ....?"

"ಚಿಕ್ಕಮ್ಮ....ಅವೆಲ್ಲಾ ಹದಿನೆಂಟು ಮೊಳದ್ದು ನನಗೆ ಆಗಲ್ಲ. ಅದ ರಿಂದ ಹೇಳಿದೆ. ನೀನು ಅದನ್ನು ತಪ್ಪಾಗಿ ಎಣಿಸುವೆಯೆಂದು ತಿಳೀಲಿಲ್ಲ."

"ಇಷ್ಟೇನೆ....! ಅದರಲ್ಲಿ ನನಗೆ ತಪ್ಪೇನೂ ಕಾಣಿಸಲಿಲ್ಲ. ಎಲ್ಲಾ

ಹೊಸಸೀರೆ; ಒಳಗೇ ಇದ್ದರೆ ನುಶಿ ಹಿಡಿದು ಹೋಗುತ್ತೆ! ಸುಮ್ಮನೆ ಉಟ್ಟುಕೋ .ನೋಡುವುದಕ್ಕೂ ಚೆನ್ನಾಗಿರುತ್ತೆ."

"ಏನೋಪ್ಪ ನಿನಗೆ ಅವಳು ಮಾಡೋದೆಲ್ಲಾ ಸರಿ! ನೋಡು.... ಆಗಲೇ ಲೀಲೂನು ಕರಕೊಂಡು ತಿರುಗಕ್ಕೆ ಹೊರಟಿಳಲ್ಲ ..ಅದೂ ಸರಿಯೇ..? ಹಾಳು ಹುಡುಗಿ ಅದನ್ನೇ ಅಭ್ಯಾಸಮಾಡಿಕೊಂಡು ನಿತ್ಯವೂ ಸಂಜೆಯಾಗು ತ್ತಲೇ ಹೋಗೋಣಾಂತ ಹಟ ಮಾಡ್ತಾಳೆ . !"

"ಅಲ್ಲ ...ಅನುಕೂಲಸ್ಥರ ಮನೇಲಿ ಮಕ್ಕಳನ್ನು ಸಂಜೆ ತಿರುಗಿಸಕ್ಕೆ ಅದೇ ಕೆಲ್ಸವಾಗಿ ಆಳುಗಳನ್ನು ಇಡ್ತಾರೆ. ಅಂಥಾದರಲ್ಲಿ ಲಲಿತು ತಾನೇ ಮಗುವಿಗೆ ಬಟ್ಟೆಬರೆ ಹಾಕಿ ತಿರುಗಿಸಕ್ಕೆ ಕರೆದುಕೊಂಡು ಹೋದರೆ ನಿನಗೇ ಕೆಲ್ಸ ಕಡಿಮೆಯಾಯ್ತು. ಎಲ್ಲಿ ತಾನೇ ಹೋಗ್ತಾರೆ ..? ಇಲ್ಲೇ ಮನೆ ಹಿಂದುಗಡೆ ಪಾರ್ಕಿನಲ್ಲಿ ಒಂದು ಗಳಿಗೆ ಕೂತಿದ್ದು ಬರ್ತಾರೆ! ಸ್ಕೂಲಿನಿಂದ ಬಂದ ಹುಡುಗಿ ಬೇಜಾರುಪಡದೆ ಕರದುಕೊಂಡು ಹೋಗ್ತಾಳಲ್ಲ ... ನೀನು ನ್ಯಾಯವಾಗಿ ಸಂತೋಷ ಪಡ್ಬೇಕು....".

* * *

"ಗುರುಮೂರ್ತಿ ...ಗುರೂ....ಸ್ವಲ್ಪ...."

"ಏನಮ್ಮಾ . ಈಗ ತಾನೆ ಮೇಲೆ ಬಂದಿದೇನೆ. ಏನಾಗ್ಬೇಕು....?".

"ಯಾರೋ ನಿಮ್ಮ ಭಾವನವರ ಸ್ನೇಹಿತರು ಬಂದಿದಾರೆ ..ಈ ಕಾಫಿ ಸ್ವಲ್ಪ ಕೊಟ್ಟು ಬಾ ನಮ್ಮಪ್ಪ! ಪುನಃ ಕೂಗಲ್ಲ ..."

"ಲಕ್ಷಣವಾಯ್ತು ! ಅದಕ್ಕೂ ನಾನೇ ಮಹಡಿ ಇಳಿದು ಬರ ಬೇಕೆ ...? ಯಾಕೆ....ಕಳಗೆ ಲಲಿತ ಇದಾಳಲ್ಲ ...ಅವಳ ಕೈಲಿ ಕಳಿಸ ಬಾರದೆ ...?"

"ಎಲ್ಲಾದರೂ ಉಂಟೇನೋ....ಗಂಡಸರಿಗೆಲ್ಲಾ...."

"ಅವರ ತಂದೆ ಸ್ನೇಹಿತರಿಗೆ ಕಾಫಿ ಕೊಟ್ಟರೆ ತಪ್ಪೇ....? ನಾಳೆಯಿಂದ ಅವಳಿಗೆ ಘೋಷಾ ಹಾಕಿ ಮನೆಯಲ್ಲಿ ಕೂರಿಸು....".

* * *

ಕ್ಲಬ್ಬಿನ ವಾರ್ಷಿಕೋತ್ಸವ. ಮೂರು ದಿವಸಗಳಿಂದ ವಿವಿಧ ಸಂಸ್ಥೆ

ಗಳು ಅಲ್ಲಿ ನಡೆಯುತ್ತಿದ್ದ ಮೇಲಾಟಗಳಲ್ಲಿ ಭಾಗವಹಿಸುತ್ತಿದ್ದುವು. ಟೆನ್ನಿಸ್ ಆಟ ನಡೆಯುತ್ತಿತ್ತು. ಪಕ್ಕದಲ್ಲಿ ಹಾಕಿದ್ದ ಬೆಂಚಿನಮೇಲೆ ಲಲಿತ ಕುಳಿತಿದ್ದಳು. ಪಕ್ಕದಲ್ಲಿ ರಾಯರು. ಆ ದಿನದ ಆಟದಲ್ಲಿ ಕಾಲೇಜಿನ ಪರವಾಗಿ ಆಡಿ ಲಲಿತ ಮತ್ತು ಅವಳ ಗೆಳತಿ ಗೆದ್ದಿದ್ದರು. ಮುಂದಿನ ಆಟ ನಡೆಯುತ್ತಿತ್ತು. ಇವರೆಲ್ಲಾ ಒಳಗೆ ಹೋಗಿ ಕಾಫಿ ತೆಗೆದುಕೊಂಡರು. ಉತ್ಸಾಹ ತುಂಬಿತ್ತು. ಎಲ್ಲರೂ ಅವಳನ್ನು ಅಭಿನಂದಿಸುವವರೇ.... ? ರಾಯರು ಹೆಮ್ಮೆಯಿಂದ ತಲೆ ಎತ್ತಿ ಕುಳಿತಿದ್ದಗು ಆದರೆ ಲಲಿತ ಮಾತ್ರ ಮೌನವಾಗಿ ಕುಳಿತಿದ್ದಳು. ಆ ಸುಖದ ಸಮಯದಲ್ಲೂ ಅವಳ ಮನಸ್ಸು ಬೇರೆ ಏನನ್ನೋ ನೆನಸುತ್ತಿತ್ತು. ಅವಳ ಮೊದಲಿನ ಬಾಳಿಗೂ ಈಗಿನ ಸ್ಥಿತಿಗೂ ಎಷ್ಟು ಅಂತರ ? ಯಾವುದೋ ಕಾಣದ ಕೈ ಅವಳ ಮನೆಯಲ್ಲೂ, ಅವಳ ಬಾಳಿನಲ್ಲೂ ಅಸಾಧ್ಯ ವಾದ ಬದಲಾವಣೆಯನ್ನು ಮಾಡಿದೆ ! ಪಂಜರದಲ್ಲಿದ್ದ ಹಕ್ಕಿಯನ್ನು ಬಾಗಿಲು ತೆಗೆದು ಹೊರಗೆ ಬಿಟ್ಟಂತಾಗಿತ್ತು. ಆ ಹೊತ್ತಿನಲ್ಲಿ—ಕ್ರಮ ಕ್ರಮವಾಗಿ ಯಾರಿಗೂ ತಟಕ್ಕನೆ ತಿಳಿಯದಂತೆ ನಡೆದ ಬದಲಾವಣೆಯನ್ನೆಲ್ಲಾ ನೆನೆಯದೆ ಇರಲು ಸಾಧ್ಯವಾಗಲಿಲ್ಲ.

ತನ್ನ ತಂದೆ ಮನೆಯಲ್ಲಿ ಕಲ್ಪಿಸಿಕೊಡಲಾಗದೇ ಇದ್ದ ಸ್ಥಾನವನ್ನು ಗುರುಮೂರ್ತಿ ತಂದುಕೊಟ್ಟಿದ್ದಾನೆ, ಕೈಲಾಗದೆ ಕಣ್ಣೀರು ಸುರಿಸುತ್ತ ಮನೆ ಯಲ್ಲಿದ್ದವಳನ್ನು ಬೆಳಕಿಗೆ ತಂದು ಕಾಲೇಜಿಗೆ ಹತ್ತಿಸಿದ್ದಾನೆ! ಅದನ್ನು ಅವಳು ಮರೆಯುವುದೆಂತು ? ಅವನು ಓದುವುದಕ್ಕೆ ಬಂದು ಅವರ ಮನೆಯನ್ನು ಪ್ರವೇಶಿಸಿದ ದಿನ ಅವಳ ಬಾಳಿನಲ್ಲಿ ಹೊಸ ಯುಗ! ಅಂದಿನ ಒಂದೊಂದು ವಿಷಯವೂ ಪುನಃ ಅವಳ ಮನಸ್ಸಿನ ಎದುರಿಗೆ ಬಂತು. ಆ ಹೊತ್ತಿನಲ್ಲಿ ಅವಳ ದೇಹದ ಪ್ರತಿಯೊಂದು ಕಣವೂ ಅವನ ವಿಷಯವಾಗಿ ಕೃತಜ್ಞತೆ ಯಿಂದ ತುಂಬಿತ್ತು. ಗುರುಮೂರ್ತಿ ತನ್ನ ಆಟವನ್ನು ಮುಗಿಸಿಕೊಂಡು ಬಂದು "congratulations....ಲಲಿತ" ಎಂದ. ಅವನಿಗೆ ತಾನು ಗೆದ್ದುದಕ್ಕಿಂತ ಹೆಚ್ಚು ಸಂತೋಷವಾಗಿತ್ತು.

"ನನಗೆ ಮೊದಲೇ ಗೊತ್ತಿತ್ತು ... !" ಗುರುಮೂರ್ತಿ ಅವಳ ಆಟದ ವಿಚಾರದಲ್ಲಿ ತನಗಿದ್ದ ನಂಬಿಕೆಯನ್ನು ಸೂಚಿಸಿದ.

ಲಲಿತ ಏನೋ ಗೊಣಗಿದಳು. ಅದು ಅವನಿಗೆ ಕೇಳಿಸಿತೋ ಇಲ್ಲವೋ

... ? ಆದರೂ ಹತ್ತು ಮಾತುಗಳು ಹೇಳಲಾಗದ್ದನ್ನು ಅವಳ ಒಂದು ನೋಟ ನುಡಿದಿತ್ತು.

"ಇನ್ನೂ ..ಫೈನಲ್ಸ್ ಇದೆಯಲ್ಲ!" ರಾಯರು ಬಾಯಿಹಾಕಿದರು.

* * *

ಫೈನಲ್ಸ್ ಆಯಿತು, ಗುರುಮೂರ್ತಿ ನುಡಿದಿದ್ದಂತೆ ಆ ದಿನವೂ ವಿಜಯ ಮಾಲಿಕೆ ಲಲಿತನ ಕೊರಳಿಗೇ ಬಿತ್ತು ಅದರ ಜೊತೆಯಲ್ಲೇ ಅನಿರೀಕ್ಷಿತವಾಗಿ ಒಂದು ಹೊಸ ಗೆಳೆತನವು ಗಂಟು ಬಿತ್ತು ಶ್ರೀನಿವಾಸಮೂರ್ತಿ ಆಟಕ್ಕಾಗಿ ಬೆಂಗಳೂರಿನಿಂದ ಬಂದಿದ್ದ. ಅವಳ ಆಟದ ಬೆಡಗನ್ನು ನೋಡಿ ಬೆರಗಾದವರಲ್ಲಿ ಅವನೂ ಒಬ್ಬ. ಅವಳನ್ನು ಅಭಿನಂದಿಸುವುದಕ್ಕೆ ಬಂದವನು ಮಾತಾಡುತ್ತ ಅಲ್ಲೇ ಕುಳಿತ ರಾಯರಿಗೂ ಆ ದಿನ ಮಾತಾಡುವ ಹುರುಪಿತ್ತು. ಮಾತಿನ ಸಂದರ್ಭದಲ್ಲಿ ಶ್ರೀನಿವಾಸಮೂರ್ತಿಯ ತಂದೆ ತಮ್ಮ ಹಳೆಯ ಗೆಳೆಯರೆಂಬುದು ಗೊತ್ತಾದ ಮೇಲಂತೂ ಪರಿಚಯ ಗೆಳೆತನಕ್ಕೆ ತಿರುಗಿತು. ರಾಯರು ಪ್ರೀತಿಯಿಂದ ತಮ್ಮ ಮಿತ್ರನ ಮಗನಿಗೆ ಮನೆಗೆ ಬರಲು ಆಹ್ವಾನ ಕೊಟ್ಟರು

ಆಟ ಮುಗಿದರೂ ಶ್ರೀನಿವಾಸಮೂರ್ತಿ ಬೆಂಗಳೂರಿಗೆ ಹೋಗುವುದನ್ನು ಮರೆತಂತೆ ಕಾಣುತ್ತಿತ್ತು. ಸಾಮಾನ್ಯವಾಗಿ ನಿತ್ಯವೂ ರಾಯರ ಮನೆಯಲ್ಲಿ ಅವನ ಹಾಜರಿ ಬೀಳುತ್ತಿತ್ತು. ಅವನ ಭವ್ಯವಾದ ಆಕಾರ, ತಡೆಯಿಲ್ಲದ ಮಾತು—ಯಾವ ವಿಷಯವನ್ನೇ ಆಗಲಿ ಪೂರ್ಣ ತಿಳುವಳಿಕೆಯಿಂದ ಅವನು ಪ್ರತಿಪಾದಿಸುತ್ತಿದ್ದ ರೀತಿ ಇವೆಲ್ಲಾ ರಾಯರನ್ನು ಬೆರಗುಗೊಳಿಸಿತ್ತು. ಅವನು ಬರುವಾಗಲೇ ಉತ್ಸಾಹದ ತೆರೆ ಮನೆಯೊಳಗೆ ಬರುತ್ತಿತ್ತು ಮಾತಿಗೆ ಕೂತರೆ ಹೊತ್ತು ಹೋದದ್ದೇ ಗೊತ್ತಾಗುತ್ತಿರಲಿಲ್ಲ. ಕಾಫಿ ಕೊಡಲು ಬಂದರೆ ಲಲಿತ ಎಷ್ಟೋ ಹೊತ್ತು ಅದನ್ನೇ ಕೇಳುತ್ತ ಮುಗ್ಧಳಂತೆ ನಿಂತು ಬಿಡುತ್ತಿದ್ದಳು. ರಾಯರ ಮನೆಯ ವಿಚಾರವನ್ನೆಲ್ಲಾ ಸೂಕ್ಷ್ಮವಾಗಿ ಅರಿತು ಅವರ ವಿಚಾರದಲ್ಲಿ ಬಹಳ ಶ್ರದ್ಧಾಭಕ್ತಿಗಳನ್ನು ತೋರಿಸಿದ್ದ. ಅವರ ವಿಷಯವಾದ ಹೊಗಳಿಕೆಯಂತೂ ಯಾವಾಗಲೂ ನಾಲಗೆಯ ತುದಿಯಲ್ಲಿ ಸಿದ್ಧವಾಗೇ ಇರುತಿತ್ತು.

ದಿನಗಳು ಉರುಳುತ್ತಿದ್ದುವು. ಲಲಿತ ಪ್ರವಾಹಕ್ಕೆ ಸಿಕ್ಕಿದ ತರಗೆಲೆ

ಯಂತೆ ಯಾವುದೊ ಅವ್ಯಕ್ತ ಶಕ್ತಿಯ ಹಿಡಿತಕ್ಕೆ ಸಿಕ್ಕಿ ಅದರೊಡನೆ ಸಾಗಿದ್ದಳು. ಶಾಂತವಾಗಿ ನಡೆದಿದ್ದ ಅವಳ ಬಾಳಿನಲ್ಲಿ ಬಿರುಗಾಳಿಯೆದ್ದಿತ್ತು. ಕಣ್ಣು ಕೋರೈಸುವಂತೆ ಮೇಲೆದ್ದು ಕಾಣುತ್ತಿದ್ದ ಹೊಸ ಗೆಳೆಯನ ಎದುರು ಗುರು ಮೂರ್ತಿಯ ಶಾಂತ ಸೌಮ್ಯ ಮೂರ್ತಿ ಎಲ್ಲೋ ಅಡಗಿ ಕುಳಿತಿತ್ತು. ಅವನೂ ಇವರ ಗುಂಪಿಗೆ ಸೇರದೆ ಹೊರಗೇ ಇರುತ್ತಿದ್ದ ಕನಸಿನಲ್ಲಿರುವಂತೆ ಲಲಿತ ಹೇಗೋ ದಿನದ ಕೆಲಸಗಳನ್ನು ಮಾಡುತ್ತಿದ್ದಳು.

ಆದರೆ ಚಿಕ್ಕಮ್ಮನ ಉರಿಮುಖ ಕನಸನ್ನು ಮುರಿದು ಅವಳನ್ನು ಎಚ್ಚರಿಸಿತು. ಅವಳೂ ಗುರುಮೂರ್ತಿಯೂ ಒಟ್ಟಿಗೆ ಕುಳಿತು ಯಾವುದಾದರೂ ಪುಸ್ತಕವನ್ನು ಓದುತ್ತ ನಗುತ್ತಲೋ ಅಥವಾ ಚರ್ಚಿಸುತ್ತಲೋ ಇದ್ದರೆ— ಅದನ್ನು ನೋಡಿ ತಾನೂ ನಗುವ ಮಟ್ಟಿಗೆ ಸಹಾನುಭೂತಿಯನ್ನು ಅಭ್ಯಾಸ ಮಾಡಿದ್ದ ಚಿಕ್ಕಮ್ಮ ಪುನಃ ಮೊದಲಿನಂತೇ ಆಗಿಬಿಟ್ಟಳು. ಯಾವುದೋ ದೂರದ ಆಸೆಯಿಂದ ಮಲಮಗಳ ಮೇಲೆ ಸ್ನೇಹದ ಮುಖವಾಡವನ್ನು ಮುಚ್ಚಿದ್ದಳು. ಈಗ ಬರಲಿರುವ ಯಾವುದೋ ಅಪಾಯದ ವಾಸನೆಯನ್ನು ಗ್ರಹಿಸಿ ಅದು ತಾನಾಗಿ ಕಳಚಿ ಬಿದ್ದುಹೋಗಿತ್ತು.

ಲಲಿತ ಈಗ ನಿಜವಾಗಿಯೂ ಗಾಬರಿಯಾಗಿದ್ದಳು. ತಂದೆಯಿಂದ ಅವಳು ಯಾವ ಸಹಾಯವನ್ನೂ ನಿರೀಕ್ಷಿಸುವಂತಿರಲಿಲ್ಲ. ಅಭ್ಯಾಸದಿಂದ ಗುರುಮೂರ್ತಿಯ ಕಡೆ ನೋಟವನ್ನು ತಿರುಗಿಸಿದರೂ ಅಲ್ಲಿ ಈ ಸಮಯದಲ್ಲಿ ಯಾವ ಸಹಾಯವೂ ದೊರೆಯದೆಂದು ಅಂತರ್ವಾಣಿಯೊಂದು ಹೇಳುತ್ತಿತ್ತು!

* * *

ಶ್ರೀನಿವಾಸಮೂರ್ತಿ ನಿಜವಾಗಿ ಬಹಳ ಸುಖವಾಗಿದ್ದ. ಇದುವರೆಗೆ ಎಲ್ಲವೂ ಅವನ ಇಷ್ಟದಂತೆ ನಡೆಯುತ್ತ ಬಂದಿತ್ತು. ಅವನು ಸ್ವತಂತ್ರವಾಗಿ ಸ್ಥಾಪಿಸಬೇಕೆಂದಿದ್ದ ಬಣ್ಣದ ಕಾರ್ಖಾನೆ ಅವನ ಬಾಳಿನ ಗುರಿಯಾಗಿತ್ತು. ಅದರ ವಿಷಯವಾಗಿ ಎಲ್ಲಾ ಏರ್ಪಾಡೂ ಮುಗಿದಿತ್ತು. ಬಂಡವಾಳ ಸಾಲದೇ ಬಂದು ಅದು ಇನ್ನೂ ಕನಸಾಗೇ ಉಳಿದಿತ್ತು. ಅವನು ಊರಿನಿಂದ ಆಟಕ್ಕೆಂದು ಹೊರಟಾಗ ಆ ಸಮಸ್ಯೆ ಇಲ್ಲಿ ಬಗೆಹರಿಯಬಹುದೆಂಬ ಯೋಚನೆ ಕೂಡ ಇರಲಿಲ್ಲ. ಲಲಿತನ ಪರಿಚಯ, ಸ್ನೇಹಕ್ಕೆ ತಿರುಗಿದ್ದರೂ ಅವಳಿಂದ

ದುಡ್ಡು ಬರುವುದೆಂದು ತಿಳಿದ ಮೇಲೆ ಅವನ ಮನಸ್ಸು ಅರಳಿತು. ಅವನ ಆಸೆ ಮತ್ತೆ ಗರಿಗೆದರಿತು. ಅದಕ್ಕೆ ಎಲ್ಲಾ ರೀತಿಯ ತಯಾರಿಯನ್ನೂ ನಡೆಸಿದ್ದ. ಬುದ್ಧಿವಂತನಾದ ಅವನು ಈ ಅವಕಾಶವನ್ನು ಬಿಡುವನೆ? ಅವನು ರಾಯರ ಎದುರಿಗೆ ತನ್ನ ಭವ್ಯ ಭವಿಷ್ಯವನ್ನು ಮನಮುಟ್ಟುವಂತೆ ವರ್ಣಿಸಿದ. ಅವನೂ ರಾಯರೂ ಜೊತೆಯಲ್ಲಿ ಕುಳಿತು ಕಾರ್ಖಾನೆಯಲ್ಲಿ ಬರಬಹುದಾದ ಆದಾಯವನ್ನು ಗಂಟೆಗಟ್ಟಲೆ ಚರ್ಚಿಸುತ್ತಿದ್ದರು.

ರಾಯರೂ ಈಗ ಒಂದು ವಿಧದಲ್ಲಿ ಸುಖವಾಗಿಯೇ ಇದ್ದರು. ಮನೆಯಲ್ಲಿ ಶಾಂತಿ, ಸಮಾಧಾನ ನೆಲೆಸುತ್ತ ಬಂದಿತ್ತು. ದಿನವೂ ಮಗಳ ಕಣ್ಣೀರು ತುಂಬಿದ ಮುಖವನ್ನು ನೋಡುವುದು ತಪ್ಪಿತ್ತು. ಅವರ ಮನಸ್ಸಿನಲ್ಲಿ ಅದು ಗುರುಮೂರ್ತಿಯ ದೆಸೆಯಿಂದ ಎಂದು ಅರಿತಿದ್ದರೂ, ಅವನನ್ನೂ ಅನುಮಾನದಿಂದ ನೋಡದೆ ಇರಲಿಲ್ಲ. ಅವರಿಗೆ ಸದ್ಯದಲ್ಲಿ ಇದ್ದ ದೊಡ್ಡ ಯೋಚನೆಯೆಂದರೆ—ಮಗಳ ಮದುವೆ. ತಾಯಿ ಇಲ್ಲದ ಹುಡುಗಿಯನ್ನು ಸರಿಯಾದ ಪಾತ್ರನ ಕೈಲಿಟ್ಟು ಮುಂದಾದರೂ ಅವಳು ಸುಖವಾಗಿರುವಂತೆ ಮಾಡುವುದು!

ಶ್ರೀನಿವಾಸಮೂರ್ತಿ ಎಲ್ಲಾ ಭಾಗದಲ್ಲೂ ಸರಿಯಾದ ವರ. ಮಗಳೂ ಒಪ್ಪಿರುವಂತಿದೆ. ತಾವು ಒಂದು ಮಾತು ಹೇಳಿದರೆ ಸಾಕು—ಅವನು ಮದುವೆಗೆ ಸಿದ್ಧನೆಂದು ರಾಯರಿಗೆ ಗೊತ್ತಿತ್ತು. ಅವನು ಅದನ್ನು ಅನೇಕ ವೇಳೆ ತನ್ನ ಮಾತಿನಲ್ಲಿ ವ್ಯಕ್ತಪಡಿಸಿದ್ದ. ಆದರೂ ..ಆದರೂ ..ರಾಯರ ನಚ್ಚಿನ ಸ್ವಭಾವ ಅಲ್ಲೂ ಟೊಳ್ಳು ಸದ್ದನ್ನೇ ಆಲಿಸುತ್ತಿತ್ತು. ಬೆಳ್ಳಗಿರುವುದೆಲ್ಲ ಹಾಲಲ್ಲ!

* * *

ಶ್ರೀನಿವಾಸಮೂರ್ತಿ ಬಂದಾಗ ಬಾಂಬು ಆಸ್ಫೋಟನೆಯಾಗಿದ್ದಂತೆ ಮನೆಯೆಲ್ಲಾ ಅಲ್ಲೋಲಕಲ್ಲೋಲವಾಗಿತ್ತು. ಅವನಿಗೆ ಬಾಗಿಲಿನಲ್ಲೇ ಎದೆ ಹಾರಿತು. ಧೈರ್ಯಮಾಡಿ ಒಳಹೊಕ್ಕ. ರಾಯರು ಏನೋ ಮುಳುಗಿ ಹೋದಂತೆ ತಲೆಯ ಮೇಲೆ ಕೈ ಹೊತ್ತು ಕುಳಿತಿದ್ದರು. ಅವರು ಮಗಳ ಹೆಸರಿನಲ್ಲಿ ತಮ್ಮ ಹೆಂಡತಿಯ ಆಸ್ತಿಯನ್ನೆಲ್ಲಾ ಇಟ್ಟಿದ್ದ ಬ್ಯಾಂಕು ದಿವಾಳಿಯಾಗಿತ್ತು! ರಾಯರು ಮಕ್ಕಳಂತೆ ಕೈಕಾಲುಗೆಟ್ಟಿದ್ದರು. ಆ ತಬ್ಬಲಿ ಹುಡು

ಗಿಯ ವಿಚಾರದಲ್ಲಿ ಅವರಿಗೆ ಇದ್ದುದು ಅದೊಂದೇ ಆಸೆ. ಅವಳ ಮುಂದಿನ ಸುಖಕ್ಕೆ ಅದು ಅಡಿಗಲ್ಲಾಗಬಹುದೆಂದು ಭಾವಿಸಿದ್ದರು; ಅದೂ ಇಂದು ಹುಡಿಯಾಗಿತ್ತು. ಅವರ ಸ್ಥಿತಿ ಕನಿಕರ ಪಡುವಂತೆ ಇತ್ತು.

ಶ್ರೀನಿವಾಸಮೂರ್ತಿ ಅವರನ್ನು ವಿಧವಿಧವಾಗಿ ಸಂತೈಸಿದ. ಲಲಿತ ಹೊರಗೇ ಬರಲಿಲ್ಲ. ಅವಳು ಇದ್ದಾಗ ಆ ಹಣದ ವಿಷಯವಾಗಿ ಅಭಿಮಾನ ಪಡದಿದ್ದರೂ ಅದರ ಅಭಾವದಿಂದ ತಾನು ಕಟ್ಟಿದ್ದ ಸುಂದರ ಸೌಧ ಕುಸಿದು ಬೀಳಬಹುದೆಂದು ತಿಳಿದಿದ್ದಳು. ಈ ಅವಾಂತರದಲ್ಲಿ ಚಿಕ್ಕಮ್ಮನ ಸಿಟ್ಟು ಸಹ ಅವಳಿಗೆ ಕಾಣಿಸುತ್ತಿರಲಿಲ್ಲ.

ಮೂರು ನಾಲ್ಕು ದಿನ ಹೇಗೋ ಕಳೆಯಿತು. ಪರಿಸ್ಥಿತಿಗೆ ಮನಸ್ಸು ಒಗ್ಗಿದ ಮೇಲೆ ಮೊದಲು ಅವರ ಗಮನಕ್ಕೆ ಬಂದದ್ದು ಶ್ರೀನಿವಾಸಮೂರ್ತಿ ಆ ದಿನದಿಂದ ಪುನಃ ಈ ಕಡೆ ಬಂದಿಲ್ಲವೆಂಬುದು! ಎರಡನೆಯದು—ಒಂದೂವರೆ ದಿನದಿಂದ ಗುರುಮೂರ್ತಿ ಮನೆಗೆ ಬಂದಿಲ್ಲವೆಂಬುದು! ಶ್ರೀನಿವಾಸ ಮೂರ್ತಿಯೇನೋ ಬೆಂಗಳೂರಿಗೆ ಹೋಗಿರಬಹುದು; ಆದರೆ ಗುರುಮೂರ್ತಿ ಯಾರಿಗೂ ಹೇಳದೆ ಎಲ್ಲಿ ಹೋದ? ಅದೇ ಸಮಸ್ಯೆ!

ರಾಯರು ತಮ್ಮ ದುಃಖವನ್ನು ಕೊಡವಿ ಎದ್ದು ನಿಂತು ಅವನ ಶೋಧನೆಗೆ ಹೊರಟರು. ಲಲಿತ ಕಣ್ಣೊರಸಿಕೊಂಡು ಅವನ ರೂಮಿನಲ್ಲಿ ಏನಾದರೂ ಸುಳಿವು ಸಿಕ್ಕಬಹುದೆಂದು ಅಲ್ಲೆಲ್ಲಾ ಹುಡುಕಿದಳು ಅಲ್ಲೇನಿದೆ....? ಕೆದರಿದ ಪುಸ್ತಕದ ರಾಶಿ ಅವನ ಶೂನ್ಯವಾದ ಹೃದಯವನ್ನು ಪ್ರತಿಬಿಂಬಿಸುವಂತೆ ಬಿದ್ದಿತ್ತು. ಲಲಿತನ ಕಣ್ಣಿನಲ್ಲಿ ಪುನಃ ನೀರು ಸುರಿಯಿತು ತಾನು ಆ ರೂಮಿಗೆ ಬಂದು ಎಷ್ಟೋ ವರ್ಷಗಳಾದವಂತೆ ತೋರಿತು!

ಇಡೀ ಮೂರು ದಿನಸ ಗುರುಮೂರ್ತಿ ಆ ತೆರದ ಪುಸ್ತಕವನ್ನೇ ದಿಟ್ಟಿಸುತ್ತ ಶೂನ್ಯ ಹೃದಯದಿಂದ ಕೂತಿದ್ದ. ಬಹುಶಃ ಆ ದಿನಗಳಲ್ಲಿ ಅವನು ಮನೆಯಲ್ಲಿದ್ದುದೇ ಲಲಿತನಿಗೆ ನೆನಪಾಗಿರಲಾರದು. ಆದರೆ ತನ್ನ ಸ್ವಂತ ಸುಖದುಃಖಗಳಲ್ಲಿ ಮೈಮರೆತು ಕೂರುವ ಕಾಲವೇ ಅದು....? ಹೊರಗಡೆ ಸತ್ಯಾಗ್ರಹದ ದಳ್ಳುರಿ ಉರಿಯುತ್ತಿದೆ—ಜವಾಬ್ದಾರಿ ಸರ್ಕಾರಕ್ಕಾಗಿ ಸತ್ಯಾಗ್ರಹ ಹೂಡಿ ನಾಯಕರೆಲ್ಲಾ ಸೆರೆಯಾಗಿದ್ದಾರೆ. ಶಾಲಾ ಕಾಲೇಜುಗಳೆಲ್ಲಾ ಮುಚ್ಚಿವೆ. ಹಾಗೆಂದು ವಿದ್ಯಾರ್ಥಿಗಳು....ಮುಂದಿನ ರಾಷ್ಟ್ರದ ಉಸಿರಾದ

ಯುವಕರು ಸುಮ್ಮನಿರಲಾದೀತೆ ...? ಗುರುಮೂರ್ತಿ ಹಿಂದೆ ಮುಂದೆ ನೋಡದೆ ! ಪ್ರವಾಹದೊಡನೆ ನುಗ್ಗಿದ.

* * *

ಕತ್ತಲು ಕವಿಯುತ್ತ ಬಂದಿತ್ತು. ಸ್ನೇಹಿತನ ಹೆಗಲ ಮೇಲೆ ಒರಗಿಕೊಂಡು ಕುಂಟುತ್ತ ಗುರುಮೂರ್ತಿ ಮನೆಗೆ ಬಂದ. ಮೈದಾನದಲ್ಲಿ ಹುಡುಗರು ಸಭೆ ನಡೆಸಿದ್ದರು ಅವರಲ್ಲಿದ್ದ ಆಯುಧವೆಂದರೆ—ವಾಗ್ಬಾಣ ಒಂದೇ! ಅದನ್ನೇ ಧಾರಾಳವಾಗಿ ಉಪಯೋಗಿಸುತ್ತಿದ್ದರು. ಗುಂಪು ಚದರಿಸಲು ಬಂದ ಪೋಲಿಸರು ಕೈಗೆ ಸಿಕ್ಕಿದವರನ್ನು ಬಡಿದು ಮುಂದೆ ಸಿಕ್ಕಿದವರನ್ನು ಠಾಣೆಗೆ ಒಯ್ದರು ಅಲ್ಲಿ ಒಂದು ರಾತ್ರಿಯನ್ನು ಕಳೆದು ಲಾರಿಯ ಬಚಿನೋಡಿ ಅವರು ಬಿಟ್ಟಮೇಲೆ ಮನೆಯ ಹಾದಿಯನ್ನು ಹಿಡಿದಿದ್ದ.

ಚಿಕ್ಕಮ್ಮ ತಮ್ಮನನ್ನು ತಬ್ಬಿಕೊಂಡು ಅತ್ತು ತಮ್ಮ ಪ್ರೀತಿಯನ್ನು ತೋರಿಸಿ ಅವನಿಗೆ ಪೆಟ್ಟುಕೊಟ್ಟ ಪೋಲಿಸರನ್ನು ಬಾಯಿತುಂಬ ಹರಸಿದರು. ರಾಯರು—

"ಇವತ್ತು ಇಲ್ಲೇ ಕೆಳಗೆ ಮಲಗಿಕೋ....ಕಾಲುನೋವಿನಲ್ಲಿ ಮಹಡಿ ಹತ್ತಬೇಡ .. .. ಇನ್ನು ಮೇಲೆ ಈ ಹುಡುಗತನಕ್ಕೆಲ್ಲಾ ಹೋಗ್ಬೇಡ .... ನಿನಗೇನಾದರೂ ಆದರೆ ನಮಗೆ ತಾನೇ ಕೆಟ್ಟ ಹೆಸರು ? ಲೇ ... ಲಲಿತ ನೀನು ಲೀಲು ಹೊರಗೆ ಮಲಗಿಕೊಂಡು ಗುರುಮೂರ್ತಿಗೆ ನಿನ್ನ ರೂಮು ಬಿಟ್ಟುಕೊಡು .." ಎಂದರು.

ಗುರುಮೂರ್ತಿ ಹಾಸಿಗೆಯ ಮೇಲೆ ಕಣ್ಣು ಮುಚ್ಚಿ ಸುಮ್ಮನೆ ಮಲಗಿದ್ದ. ಚಿಕ್ಕಮ್ಮ ಲಲಿತನ್ನ ಅವನ ಬಳಿ ಕಾವಲು ಕೂರಿಸಿ ಕಾಲಗೆ ಶಾಖ ಕೊಡಲು ನೀರು ಕಾಯಿಸಲು ಹೋದರು.

"ಲಲಿತೂ ನಿನ್ನ ಹಣವೆಲ್ಲಾ ಹೋಯಿತೆಂದು ಕೇಳಿದೆ.....ಎಂತಹ ದುರದೃಷ್ಟ! ಭಾವಯ್ಯನವರಂತೂ ಭೂಮಿಗೆ ಇಳಿದುಹೋಗಿದಾರೆ...."

ಗುರುಮೂರ್ತಿಗೆ ಭಾವನ ವ್ಯಕ್ತಿತ್ವದ ವಿಷಯದಲ್ಲಿ ಎಳ್ಳಷ್ಟೂ ಗೌರವವಿರದಿದ್ದರೂ, ಅವರ ಆಶ್ರಯದಲ್ಲಿದ್ದ ಅವನು ಯಜಮಾನರಿಗೆ ತೋರುವ ಗೌರವ ಕೊಡುವುದನ್ನು ಮಾತ್ರ ಮರೆಯುತ್ತಿರಲಿಲ್ಲ. ಅದು ಲಲಿತನಿಗೂ ಗೊತ್ತಿತ್ತು. ಅವನ ಮಾತುಗಳಲ್ಲಿ ಸಹಾನುಭೂತಿಗಿಂತ ಉಪಚಾರದ ಭಾಗವೇ

ಹೆಚ್ಚಾಗಿರುವಂತೆ ತೋರಿತು. ಅದಕ್ಕೇ ಅದರ ಕಡೆಗೆ ವಿಶೇಷ ಗಮನ ಕೊಡದೆ,

"ಗುರು....ಪೆಟ್ಟು ಬಹಳವಾಗಿದೆಯೇ ?" ಎಂದು ಕೇಳಿದಳು.

"ಬಹಳವೇನಿಲ್ಲ....ಆದರೂ ಅದು ಒಳಿತೇ ಅನ್ನು. .ಇಲ್ಲದಿದ್ದರೆ ನೀನು ಹೀಗೆ ನನ್ನ ಬಳಿ ಕುಳಿತು ಉಪಚಾರ ಮಾಡುತ್ತಿದ್ದೆಯಾ....? ಅದೇನು ಸ್ವಲ್ಪ ಭಾಗ್ಯವೇ....?"

"ಬಿಡು....ನಿನಗೆ ಎಲ್ಲಾ ತಮಾಷೆಯೇ ?"

"ಹಾಸ್ಯವಲ್ಲ....ಲಲಿತು ನಿಜವಾಗಿ ಹೇಳ್ತೀನೆ....ಅಲ್ಲ ಹಣ ಹೋದುದಕ್ಕೆ ಬಹಳ ವ್ಯಸನವಾಗಿದೆಯೆ ನಿನಗೆ....?"

"ವ್ಯಸನವೇಕೆ....? ನಮ್ಮದಾಗಿರಲಿಲ್ಲ ಹೋಯಿತು ! ನಿನಗೇನು ಅಷ್ಟು ಕುತೂಹಲ ...ಅದರಿಂದ ನಿನಗೇನೂ ನಷ್ಟವಿಲ್ಲವಲ್ಲ ...?"

"ನಷ್ಟವೇ....? ಇಲ್ಲ. ನನಗೆ ನಿಜವಾಗಿ ಅದರಿಂದ ಲಾಭವಾಗಿದೆ. ನಮ್ಮಿಬ್ಬರ ನಡುವೆ ಬಂಡೆಯಂತೆ ಕುಳಿತಿದ್ದ ಅದು ಕರಗಿರುವುದರಿಂದ ನನಗೆ ಸಂತೋಷವಾಗಿದೆ ...!"

ಲಲಿತ ಮಾತಾಡಲಿಲ್ಲ. ಅಚ್ಚರಿಯಿಂದ ಅವನ ಮುಖವನ್ನೇ ನೋಡುತ್ತಿದ್ದಳು.

* * *

"ಲಲಿತು ...ನಿನ್ನ ಹಣ ಎಲ್ಲೂ ಹೋಗಿಲ್ಲ. ಅದರ ಜಾಗದಲ್ಲಿ ಭದ್ರವಾಗಿದೆ. ಅದರ ಸಹಾಯದಿಂದ ಜಳ್ಳನ್ನು ಗಟ್ಟಿಯಿಂದ ಬೇರ್ಪಡಿಸಲು ಸಾಧ್ಯವಾಯಿತು .... ಅಷ್ಟೆ ! ಅದನ್ನು ನಿನ್ನ ಮದುವೆಯಲ್ಲಿ ಬಳುವಳಿಯಾಗಿ ಕೊಡುತ್ತೇನೆ."

ಲಲಿತ ನಕ್ಕು ಹೇಳಿದಳು—

"ಅಪ್ಪ—ನಿಜವಾಗಿ ಹಣ ಹೋಗಿದ್ದರೂ ವ್ಯಸನವಿಲ್ಲ ...ಆದರೆ...."

"ಆದರೆ....?"

"ನೀವು ಯಾವಾಗಲಾದರೂ ನಾಟಕದಲ್ಲಿ ಪಾತ್ರವಹಿಸಿದ್ದಿರೇನು....?"

"ಯಾವಾಗಲೂ ಇಲ್ಲ....!"

"ಇದೇ ಮೊದಲ ಪ್ರಯತ್ನವಾದರೂ ನಿಮ್ಮ ಅಭಿನಯ ಅದ್ಭುತವಾಗಿತ್ತು ! ನನಗೂ ಅನುಮಾನ ಬರಲಿಲ್ಲ. ಪಾಪ....ಅವನಿಗೆ ಹೇಗೆ ಗೊತ್ತಾಗಬೇಕು ? ಅಷ್ಟಕ್ಕೇ ಹೆದರಿ ಓಡಿದ...!"

ಈ ಸಲ ತಂದೆ ಮಗಳು ಇಬ್ಬರೂ ನಕ್ಕರು.

# ವೈರಾಗ್ಯ

ಕರೆಗಂಟೆಯ ಸದ್ದಿಗೆ ಉತ್ತರವಾಗಿ, ಬಾಗಿಲನ್ನು ಅರ್ಧ ಮಾತ್ರ ತೆರೆದು ಬಕ್ಕ ತಲೆಯೊಂದು ಹೊರಗೆ ಇಣುಕಿ—

"ಯಾರು ಬೇಕಾಗಿತ್ತು ?" ಎಂದು ಪ್ರಶ್ನಿಸಿತು

ಮೊಂಡ ಮೂಗಿನ ಮೇಲೆ ಏರಿಸಿದ್ದ ಕನ್ನಡಕ, ಹುಬ್ಬು ಸಿಂಡಿರಿಸಿದಾಗ ಜಾರಿದಂತಾಗಿ ಮೂಗಿನ ತುದಿಗೆ ಬಂದಿತ್ತು. ಅದನ್ನು ಅನುಸರಿಸಿ ನೋಟವೂ ಕೆಳಮುಖವೇ ! ಒಟ್ಟಿನಲ್ಲಿ ಮುಖ ನೋಡಿದರೆ ಸಂತೋಷವಂತೂ ಆಗುವಂತಿರಲಿಲ್ಲ

ಬಂದಿದ್ದಾತ ಉತ್ತರ ಕೊಡುವುದನ್ನೂ ಮರೆತು ಅರೆಕ್ಷಣ ತಬ್ಬಿಬ್ಬಾಗಿ ಆ ಸಿಂಡರಿಸಿದ ಮುಖವನ್ನೇ ದಿಟ್ಟಿಸಿದ.

"ಯಾರ್ರೀ ನೀವು ? ಏನು ಬೇಕಾಗಿತ್ತು ?"

ಬಕ್ಕತಲೆ ಅಸಹನೆಯಿಂದ ಕಿರುಚಿತು. ಆಗತಾನೇ ಮಲಗಿದ್ದವನನ್ನು ಎಬ್ಬಿಸಿದುದಲ್ಲದೆ, ಪ್ರಪಂಚದ ಏಳನೇ ಆಶ್ಚರ್ಯವನ್ನು ನೋಡುವಂತೆ ತನ್ನನ್ನೇ ದಿಟ್ಟಿಸಿದರೆ ?

ನಾಗರಿಕ ಲಕ್ಷಣವೇ ಇದು ?

"ಮಹದೇವಪ್ಪನವರ ಮನೆ ಇದೇನೆ ?"

ಬಂದಿದ್ದವರು ಬೇಗ ಎಚ್ಚೆತ್ತು ಕೇಳಿದರು, ಇನ್ನು ಅರೆಕ್ಷಣ ತಡ ಮಾಡಿದರೆ ಆತ ತಮ್ಮ ಮುಖಕ್ಕೆ ರಾಚುವಂತೆ ಬಾಗಿಲು ಮುಚ್ಚಿಕೊಂಡಾರು ಎನಿಸಿತು.

"ಹೌದು, ನಾನೇ ಮಹದೇವಪ್ಪ. ತಾವು ಯಾರು ?"

ಬಾಗಿಲು ಪೂರ್ತಿ ತೆಗೆಯುವ ಸೂಚನೆ ಕಾಣಿಸಲಿಲ್ಲ. ತಲೆ ಮಾತ್ರ ಹೊರಗಿತ್ತು. ಹಾಗೇ ನುಡಿದರು, ಬಕ್ಕತಲೆಯಾತ—

"ಇಲ್ಲಿ ...ಒಂದು ಮನೆ ಖಾಲಿ ಇದೆಯಂತೆ."

ಇಲ್ಲಿ ಯಾವ ಮನೆಯೂ ಖಾಲಿ ಇಲ್ಲ. ಯಾರೋ ಏನೋ ಹೇಳಿದಾರೆ. ಸರಿಯಾಗಿ ವಿಚಾರಿಸಿ."

"ಈ ಬೀದಿಯವರೇ ಅವರು. ಮಹದೇವಪ್ಪನವರ ಮನೆಯ ಹಿಂಭಾಗದಲ್ಲಿ ಒಂದು ಮನೆ ಇದೆ, ನಿನ್ನೆ ತಾನೇ ಖಾಲಿ ಆಯ್ತು, ಇವತ್ತೇ ಹೋಗಿ ವಿಚಾರಿಸಿ ಎಂದರು."

"ಓ ಈಗ ಅರ್ಥವಾಯ್ತು ಕೆಳಗಡೆ ಬೀದೀಲಿ ಒಬ್ಬ ಮಹದೇವಪ್ಪ ಇದಾರೆ. ಅಲ್ಲಿ ಒಂದೆರಡು ಮನೆ ಬಾಡಿಗೆಗೆ ಕೊಟ್ಟಿದ್ದಾರೆ. ಅದು ಖಾಲಿ ಯಾದಾಗಲೆಲ್ಲಾ ನನಗೆ ತಲೆ ನೋವು. ದಿನಕ್ಕೆ ಹತ್ತಾರು ಜನ ಹುಡುಕಿಕೊಂಡು ಬರ್‍ತಾರೆ ನಾನು ಇರುವ ಈ ಮನೆಯೂ ಬಾಡಿಗೆಯದೇ! ನನಗೆಲ್ಲಿದೆ ಮನೆ? ಹೆಸರು ಒಂದೇ ಆಗಿರೋದರಿಂದ ಬಂದೋರಿಗೆಲ್ಲ ಉತ್ತರ ಹೇಳಬೇಕು. ನಮ್ಮ ಜನಕ್ಕೆ ಬುದ್ಧಿ ಇಲ್ಲ. ಯಾವ ಯಾವ ಹೊತ್ನಲ್ಲೋ ಬರ್‍ತಾರೆ. 'ಬಾಡಿಗೆಗೆ ಮನೆ ಇಲ್ಲ' ಎಂತ ಒಂದು ಬೋರ್ಡು ತಗುಲಿ ಹಾಕ್ತೀನಿ."

ಪಟಪಟನೆ ಮಾತನಾಡುತ್ತಾ ಧಡಕ್ಕನೆ ಬಾಗಿಲು ಮುಚ್ಚಿದ ಆತ. ಬಂದವರು ಮುಂದೆ ಕೇಳುವ ಪ್ರಶ್ನೆಗಳಿಗೆಲ್ಲ ಉತ್ತರ ಕೊಡದೇ ಇರಲು ಅದೊಂದೇ ದಾರಿ

"ಮುಖ ನೋಡಿದ ಕೂಡಲೇ ಮೇಲೆ ಬೀಳ್ತಾನಲ್ಲ ಈ ಮನುಷ್ಯ! ಒಂದು ಪ್ರಶ್ನೆಗೆ ಉತ್ತರ ಕೊಡೋಕೆ ಹೀಗಾಡಿದರೆ ಬದುಕೋದು ಹ್ಯಾಗೆ? ಎಲ್ಲೋ ಇವತ್ತು ಎದ್ದ ಘಳಿಗೆಯೇ ಚೆನ್ನಾಗಿರಲಾರದು" ಎಂದುಕೊಳ್ಳುತ್ತ ಹೆಜ್ಜೆ ಹಿಂತಿರುಗಿಸಿದ ಬಂದಿದ್ದವ.

ಹಾಗೇ ಮುಂದಿನ ಬೀದಿಗೆ ನಡೆದ. ಅಲ್ಲೂ ಎದುರಿಗೆ ಸಿಕ್ಕಿದೋರನ್ನ, ಮಹದೇವಪ್ಪನವರ ಮನೆ ಯಾವುದು? ಎಂದು ವಿಚಾರಿಸಿಕೊಂಡು ಅವರು ತೋರಿಸಿದ ಮನೆಯ ಮುಂದೆ ನಿಂತ.

ತಟ್ಟನೆ ಬಾಗಿಲು ತಟ್ಟಲಿಲ್ಲ. ಇದೇ ಸ್ವಲ್ಪ ಹೊತ್ತಿನ ಕೆಳಗೆ ಆದ ಅನುಭವ ಹೊಸದಾಗಿತ್ತು.

ದೊಡ್ಡಮನೆ, ದೊಡ್ಡ ಆವರಣ. ತುಂಬಾ ಹೂವಿನ ಗಿಡಗಳು. ಜಾಗ ಪ್ರಶಸ್ತವಾಗಿತ್ತು. ಇಂತಹ ಕಡೆ ಮನೆ ಸಿಕ್ಕಿದರೆ "ಪುಣ್ಯ" ಎನಿಸಿತು.

ಧೈರ್ಯಮಾಡಿಕೊಂಡು ಬಾಗಿಲನ್ನು ಮೆಲ್ಲಗೆ ತಟ್ಟಿ. "ಸಾರ್"-ಎಂದ.

ಮತ್ತೊಮ್ಮೆ ಅಂತಹುದೆ ಸ್ವಾಗತ ಸಿಗುವುದೇನೋ ಎಂದು ನಿರೀಕ್ಷಿಸಿ ಹಿಂದಕ್ಕೆ ನಿಂತ. ಅವರೂ ಅರ್ಧ ಬಾಗಿಲು ತೆರೆದು ತಲೆ ತೂರಿಸಿದರೆ ಢಿಕ್ಕನೆ ತಗಲಬಾರದಷ್ಟೆ !

ಅವನ ಊಹೆ ಸುಳ್ಳಾಗಿತ್ತು. ಬಾಗಿಲು ಪೂರ್ತಿ ತೆಗೆದು "ಒಳಗೆಬನ್ನಿ" ಎಂದು ಆಹ್ವಾನಿಸಿದರು.

ಸ್ವರ್ಗದ ಬಾಗಿಲು ತೆರೆದಂತೆ ಸಂತಸದ ಅನುಭವ ಅವನಿಗೆ. ಹಿಗ್ಗಿನಿಂದ ಒಳಗೆ ಕಾಲಿಟ್ಟ.

ಎದುರಿಗೆ ನಿಂತಿದ್ದ ಮನುಷ್ಯನಿಗೆ ಸುಮಾರು ವಯಸ್ಸು. ಮುದುಕನೆಂದು ಹೇಳಲಾಗದಿದ್ದರೂ ಚಿಕ್ಕವನಂತೂ ಅಲ್ಲ.

ಏನೋ ಚಿಂತೆ, ನಿರಾಶೆ ಮುಖದಲ್ಲಿ ಅಚ್ಚೊತ್ತಿತ್ತು.

"ನಮಸ್ಕಾರ"

ನಮಸ್ಕಾರ. ತಾವು ಯಾರೋ ಗೊತ್ತಾಗಲಿಲ್ಲ. ಈಚೆಗೆ ನನಗೆ ಮರೆವು ಜಾಸ್ತಿ. ಕೂಡಿ'

ಮನೆಯ ಯಜಮಾನ ಕುರ್ಚಿಯ ಕಡೆ ಕೈನೀಡಿ ತೋರಿಸಿ ತಾವೂ ಪಕ್ಕದಲ್ಲಿ ಕುಳಿತು ಕೇಳಿದರು.

"ತಮ್ಮ ಹೆಸರು ?"

"ಅನಂತ"

"ಓ....ಸರಿ ಸರಿ. ಅದೇನು ಇಲ್ಲಿಯವರೆಗೆ ಬಂದದ್ದು ?"

"ಇಲ್ಲಿ....ಮನೆ ಬಾಡಿಗೆಗೆ ಇದೆಯೆಂದು ತಿಳೀತು. ಅದಕ್ಕೆ ಕೇಳೋಣವೆಂದು ಬಂದೆ"

"ಹಾಗೋ....? ಈಗ ಇರೋದು ಎಲ್ಲಿ ?"

"ಚಾಮುಂಡಿಪುರದಲ್ಲಿದ್ದೇನೆ. ಮನೆ ಬಿಡಬೇಕಾಗಿದೆ. ಆ ಮನೆಗೆ ಮನೆಯವರ ಮಗಳೇ ಬರ್ತಾರಂತೆ. ಅಳಿಯನಿಗೆ ಇಲ್ಲಿಗೆ ವರ್ಗವಾಗಿದೆ. ಆತ ಬಂದು ಆಗಲೇ ಒಂದು ತಿಂಗಳಾಯ್ತು, ಮಾವನ ಮನೇಲಿ ಠಿಕಾಣಿ. ಹೆಂಡತಿ ಮಕ್ಕಳನ್ನು ಕರೆತರಬೇಡವೆ ? ಅವರೂ ಆಗಿನಿಂದ ವರಾತ ಮಾಡ್ತಿದಾರೆ. ನಮ್ಮಿಂದ ಅವರಿಗೆ ತೊಂದರೆ ಆಗಬಾರ್ದು. ಆಗಿನಿಂದ ಹುಡುಕ್ತಾನೇ ಇದೀನಿ.

ಇಲ್ಲಿ ಮನೆ ಇದೆಯೆಂದು ಇವತ್ತು ತಿಳೀತು"

"ಮನೆಯೇನೋ ಖಾಲಿ ಇದೆ. ನಿಮ್ಮನ್ನು ನೋಡಿದರೆ ಸಂಪನ್ನರಂತೆ ಕಾಣ್ತೀರಿ. ನಮಗೂ ಒಳ್ಳೆಯ ನೆರೆ ಬೇಕು"

"ಬಾಡಿಗೆ ಎಷ್ಟೋ?"

"ಮೊದಲು ಮನೆ ನೋಡಿ. ನಿಮಗೆ ಒಪ್ಪಿಗೆ ಆದರೆ ಆಮೇಲೆ ಬಾಡಿಗೆ ಹೇಳೋಣ"

ಆತನೇ ಜೊತೆಗೆ ಬಂದು ಮನೆ ತೋರಿಸಿದರು. ದೊಡ್ಡ ಮನೆಯ ಒಂದು ಪಕ್ಕಕ್ಕೆ ಇದ್ದು ಸ್ವತಂತ್ರವಾಗಿತ್ತು. ಅನಂತನಿಗೆ ಮನೆ ಒಪ್ಪಿಗೆ ಯಾಯ್ತೆಂದು ಅವನ ಮುಖವೇ ಕೂಗಿ ಹೇಳಿತು. ಆದರೂ ಮನೆಯಾತ ಕೇಳಿದರು—

"ನಿಮಗೆ ಹಿಡಿಸಿತೆ ಅನಂತರಾವ್ ?"

"ಹಿಡಿಸದೆ ಏನು ? ಚೆನ್ನಾಗಿದೆ, ಇದಕ್ಕಿಂತ ದೊಡ್ಡ ಮನೆ ಬಯಸುವ ಶಕ್ತಿ ನನಗಿಲ್ಲ. ತಾವು ದೊಡ್ಡವರು—ಅನಂತ ಎಂದರೆ ಸಾಕು."

"ಛೆ .ಛೆ ಹಾಗೆಂದರೇನು? ಈ ಪ್ರಪಂಚವೇ ನಶ್ವರ. ದೊಡ್ಡವರು ಚಿಕ್ಕವರು ಅನ್ನೋದೆಲ್ಲ ಬರೀ ಭ್ರಮೆ."

ಅನಂತ ಬೆಚ್ಚಿದ. ವ್ಯವಹಾರವನ್ನು ಮರೆತು ಆತ ವೇದಾಂತ ಹೇಳಲು ನಿಂತರೆ ? ಸಂಕೋಚದಿಂದ ಕೇಳಿದ—

"ಬಾಡಿಗೆ ಎಷ್ಟು ?"

"ಅಂದಹಾಗೆ ನೀವು ಈಗ ಇರುವ ಕಡೆ ಎಷ್ಟು ಕೊಡ್ತಿದೀರಿ ?"

"ಅರವತ್ತು "

"ಹತ್ತು ಹೆಚ್ಚು ಹತ್ತು ಕಡಿಮೆ ಹೇಗೋ ಆಗುತ್ತೆ. ದುಡ್ಡು ಮುಖ್ಯ ವಲ್ಲ, ಜನ ಮುಖ್ಯ. ಮನುಷ್ಯನ ಆಸೆಗೆ ಮೊದಲು ಕೊನೆ ಉಂಟೆ? ನಾವೇನೂ ಜೊತೆಗೆ ತಗೊಂಡು ಹೋಗಲ್ಲ, ನಶ್ವರ ...ಎಲ್ಲಾ ನಶ್ವರ, ನಾಲ್ಕು ದಿನದ ಬಾಳು."

"ಆದರೂ....ವ್ಯವಹಾರ ಅಂದಮೇಲೆ ಸರಿಯಾಗಿ ಮಾತಾಡಿ ನಿಶ್ಚಯಿಸ ಬೇಕು. ನೋಡಿ ಅದಕ್ಕಾಗಿ ನಾಳೆ ಒಂದು ಮಾತು ಬರಬಾರದು. ನೀವು ಸೀದಾ ಹೇಳಿಬಿಟ್ಟರೆ ವಾಸಿ. ನಮ್ಮ ಶಕ್ತಿಗೆ ಮೀರುವಂತಿದ್ದರೆ ಬೇರೆ ಕಡೆ...."

"ಛೆ....ಛೆ, ಶಕ್ತಿ ಶಕ್ತಿ, ಎಲ್ಲಿಯ ಶಕ್ತಿ ? ಎಲ್ಲ ಶಕ್ತಿಯೂ ಅರೆಕ್ಷಣದಲ್ಲಿ ಅಡಗಿ ಹೋಗುತ್ತೆ. ಎಲ್ಲಿ ಹೋಗುತ್ತೋ ? ಅದನ್ನು ತಿಳಿದೂ ಮಾನವ .."

"ಯಜಮಾನರೆ—ತಾವು ಪ್ರಪಂಚ ತಿಳಿದೋರು. ಅದರಿಂದ ಅಷ್ಟು ದೊಡ್ಡ ಮಾತು ಹೇಳ್ತೀರಿ. ಆದರೆ ನಮ್ಮಂಥ ವ್ಯವಹಾರಸ್ತರಿಗೆ...."

"ಇರಲಿ ಬಿಡಿ. ನಾಳೆ ಬನ್ನಿ. ನನ್ನ ತಮ್ಮ ಮನೇಲಿರ್ತಾನೆ. ಅವನ ಕೈಲಿ ಮಾತಾಡಿ. ನಾನೇನೊ ನಿಮಗೆ ಕೊಡುವಂತೆ ಹೇಳ್ತೀನಿ."

"ತುಂಬಾ ವಂದನೆ. ಪುಣ್ಯವಂತರು ನೀವು ಸ್ವಂತ ಮನೆ ಇರೋರು. ಒಂದು ತಿಂಗಳಿಂದ ತಿರುಗಿದ್ದನ್ನು ನೆನಸಿಕೊಂಡರೆ ಹಾಗೆ ಹೇಳಲೇ ಬೇಕು. ಈ ಭಂಗ ಯಾರಿಗೂ ಬೇಡ. ಒಬ್ಬರ ಕೈಲಿ "ಹೋಗು" ಎನ್ನಿಸಿಕೊಳ್ಳ ದಂತೆ ಸ್ವಂತದ್ದಾಗಿ ಒಂದು ಗುಡಿಸಲು ಇದ್ದರೂ ಸಾಕು."

"ಹ್ಹ ......ಹ್ಹ .." ಮನೆಯಾತ ಜೋರಾಗಿ ಬಾಯಿತೆರೆದು ನಕ್ಕರು. ಅನಂತ ಪೆಚ್ಚಾಗಿ ನೋಡಿದ.

"ಸ್ವಂತಮನೆ? ಯಾವುದು ಸ್ವಂತ? ಯಾವುದು ಅಲ್ಲ? ಮುಚ್ಚಟೆಯಿಂದ ಆರೈಕೆ ಮಾಡಿಕೊಂಡು ಪೋಷಿಸಿದ ಈ ದೇಹವನ್ನೇ ಸ್ವಂತ ಎನ್ನಲು ಬರುವು ದಿಲ್ಲ. ಅದನ್ನೇ ಬಿಡಬೇಕಾಗುತ್ತೆ. ನಕಾಶೆ ಹಾಕಿ ಆಸ್ಥೆಯಿಂದ ಕಟ್ಟಿಸಿ ಕೊಂಡು "ನನ್ನದು" ಎಂದು ಮೆರೆದ ಮನೇಲಿ ಒಂದು ಗಳಿಗೆ ಹೆಚ್ಚಾಗಿ ಇರೋಕೆ ಆಗಲ್ಲ. ದಡದಡನೆ ಎತ್ತಿಕೊಂಡು ಹೋಗಿಬಿಡ್ತಾರೆ ..."

ಅನಂತನಿಗೆ ಆತನ ಮಾತು ವಿಚಿತ್ರವೆನಿಸಿತು. ತಲೆ ಸರಿಯಾಗಿಲ್ಲವೆ ? ಎಂದು ಅನುಮಾನ ಬಂತು. ಆದರೂ ಆತನನ್ನು ಮತ್ತೆ ವಾಸ್ತವಿಕ ಪ್ರಪಂಚಕ್ಕೆ ಎಳೆಯಬೇಕೆನಿಸಿತು.

"ಯಜಮಾನರೆ.... ಹೇಗೂ ತಾವು ಮನೆ ಕೊಡೋದಾಗಿ ಭರವಸೆ ಕೊಟ್ಟದ್ದೀರಿ ನಾನು ನಿಶ್ಚಿಂತೆಯಿಂದ ಹೋಗ್ತೀನಿ. ಬರಲೆ ಇನ್ನು ? ಮನೆ ಸಿಕ್ಕಿರೋದು ತಿಳಿದರೆ ಮನೆಯಾಕೆಗೂ ಸಮಾಧಾನ ತಾವು ಕೊಡೋದು ಖಂಡಿತ ತಾನೆ ? ಅಡ್ವಾನ್ಸ್ ..."

"ಎಂಥದೂ ಬೇಡ ನೀವು ಧೈರ್ಯವಾಗಿ ಮನೆಗೆ ಹೋಗಿ, ಮನೆ ಸಿಕ್ಕಿತೆಂದು ಹೇಳಿ. ನಾಳೆ ಆಕೆಯನ್ನೂ ಕರೆತನ್ನಿ. ಬಾಡಿಗೆ ವಿಷಯ ತಲೆ ಕೆಡಿಸಿಕೊ ಬೇಡಿ. ಆಗಲೇ ಹೇಳಿದೆನಲ್ಲ—ಹತ್ತು ಹೆಚ್ಚು ಹತ್ತು ಕಮ್ಮಿ !

ನಿಮ್ಮನ್ನು ಹಿಡಿಸಿ ಹೆಚ್ಚಾಗಿ ತೆಗೆದುಕೊಂಡರೂ ನನ್ನ ಸಂಗಡ ಏನೂ ಬರಲ್ಲ .."

ಅನಂತ ಎದ್ದು ನಿಂತ. ಇನ್ನು ಇವರ ಕೈಲಿ ಮಾತಾಡೋದರಲ್ಲಿ ಅರ್ಥ ವಿಲ್ಲ.ಎನಿಸಿತು. ಕೈ ಜೋಡಿಸಿ ಹೇಳಿದ—

"ನಾಳೆ ಬರ್ತೀನಿ"

"ಹಾಗೇ ಮಾಡಿ. ನಾಳೆ ಬನ್ನಿ. ನನಗೂ ಈಗ ಮನಸ್ಸು ಸಮಾ ಧಾನವಿಲ್ಲ."

* * *

ಗಾಳಿಯಲ್ಲಿ ತೇಲಿಬಂದಂತೆ ಅನಂತ ಉಲ್ಲಾಸದಿಂದ ಮನೆಗೆ ಬಂದ.

"ಓಹೋ ...ಮನೆ ಸಿಕಿ ದೆ ! ಅಲ್ವಾ ?"

ಬಾಗಿಲಲ್ಲೇ ನಿಂತಿದ್ದ ಮಡದಿ ಕೇಳಿದಳು. ಪ್ರತಿ ದಿನವೂ ಮನೆ ಹುಡುಕಲೆಂದು ಹೋದ ಪತಿ ಸುತ್ತಿ ಕಂಗಾಲಾಗಿ ಬೇಸರದ ಮುಖ ಹೊತ್ತು ಬರುವುದು ರೂಢಿಯಾಗಿತ್ತು.

"ಹೌದು ... ಸಿಕ್ಕಿದೆ ಹೇಗೆ ಗೊತ್ತಾಯ್ತು ? ನಾನು ಬಾಯಿ ಬಿಡುವ ಮೊದಲೇ ಹೇಳ್ತಿದಿ ?"

"ನಿಮ್ಮ ಮುಖ ನೋಡಿದ್ಕೂಡಲೇ ತಿಳಿದುಕೊಂಡೆ. ಅಬ್ಬ.... ನಿಮ್ಮ ಸಪ್ಪೆ ಮುಖ ನೋಡಿ ನೋಡಿ ನನಗೆ ಅಳುವೇ ಬರುತ್ತಿತ್ತು. ಸಧ್ಯಃ ಕೊನೆ ಗಾದರೂ ಸಿಕ್ಕಿತಲ್ಲ ಎಲ್ಲಿ ಸಿಕ್ಕಿದೆ ?"

ಶೀಲಾ ಪ್ರಶ್ನೆಯ ಸಾಲೇ ಮುಂದಿಟ್ಟರೂ ಅನಂತನಿಗೆ ಬೇಸರವೆನಿಸ ಲಿಲ್ಲ. ತಾನೂ ಅಷ್ಟೇ ಉತ್ಸಾಹದಿಂದ ಎಲ್ಲಕ್ಕೂ ಉತ್ತರ ಹೇಳಿದ. ಅಲ್ಲದೆ ಮನೇನ ಬಾಯಿತುಂಬ ಹೊಗಳಿದ—

"ಎಂಥ ಸೊಗಸಾದ ಮನೆ ಅಂತಿ ? ಹೆಸರಿಗೆ "ಔಟ್ ಹೌಸ್" ಅಷ್ಟೆ. ಮನೆ ದೊಡ್ಡದಾಗೇ ಇದೆ. ಗಾಳಿ ಬೆಳಕು ಚೆನ್ನಾಗಿಬರುತ್ತೆ. ಕಿಟಕಿ ಬಾಗಿಲು ಎಲ್ಲ ದೊಡ್ಡದೇ. ಸುತ್ತ ಹೂವಿನ ಗಿಡಗಳು, ಗುಲಾಬಿ, ಮಲ್ಲಿಗೆ, ಸಂಪಿಗೆ...."

"ಹೌದಾ....? ಎಷ್ಟು ಚೆನ್ನ"

"ನೆಲವಂತೂ ಫಳಫಳನೆ ಹೊಳೆಯುತ್ತೆ. ನಾವು ಈವರೆಗೆ ಇದ್ದ ಯಾವ ಮನೆಯೂ ಅಷ್ಟು ಚೆನ್ನಾಗಿರಲಿಲ್ಲ."

"ಅದೇನೋ ಸರಿ, ಬಾಡಿಗೆ ಎಷ್ಟೋ? ನೀವು ಹೇಳೋ ವೈಖರಿ ನೋಡಿದರೆ...."

"ಅದೇ ನನಗೂ ಅನುಮಾನ. ಹತ್ತು ಸಲ ಕೇಳಿದರೂ ಆ ಮನುಷ್ಯ ಬಾಯೇ ಬಿಡಲಿಲ್ಲ. ಹತ್ತು ಹೆಚ್ಚು ಹತ್ತು ಕಮ್ಮಿ ಎಂತ ಹೇಳಿಬಿಟ್ಟು ಪುರಾಣ ಹೇಳಕ್ಕೇ ಆರಂಭಿಸಿಬಿಟ್ಟರು."

"ಇದೇಕೋ ಸರಿ ಇಲ್ಲ. ಹತ್ತು ಹೆಚ್ಚು ಅಂದರೆ ಎಷ್ಟಕ್ಕೆ? ಏನು ಕತೆ? ನನಗೆ ಅರ್ಥವೇ ಆಗಲ್ಲ. ನೂರೋ ನೂರಿಪ್ಪತ್ತೋ?"

"ಛೆ ... ಛೆ ... ಹಾಗೇನಿಲ್ಲ ನಾವು ಈಗ ಅರವತ್ತು ಕೊಡ್ತಿದೀವಿ ಎಂದೆ. ಆದಕ್ಕೇ ಅವರು ಹಾಗೆಂದದ್ದು. ಹತ್ತು ಹೆಚ್ಚು ಎಂದುಕೊಂಡರೂ ಎಪ್ಪತ್ತಾಗುತ್ತೆ"

"ಎಪ್ಪತ್ತು ರೂಪಾಯಿಗೆ ಅಂತಹ ಮನೆ ಸಿಕ್ಕುತ್ತೆ ಎಂದರೆ ನಂಬೋದೇ ಕಷ್ಟ. ಎಲ್ಲೋ ಗ್ರಹಗತಿ ಬದಲಾಗಿ ನಮಗೂ ಒಳ್ಳೆ ಕಾಲ ಬಂದಿರಬೇಕು ಅಲ್ವೇನ್ರೀ ..."

"ಈಗಲೇ ಅಷ್ಟು ಸಂತೋಷಪಡಬೇಡಾ ಶೀಲಾ, ನಾಳೆಯುವರೆಗೂ ತಾಳು"

"ನಾಳೆಯುವರೆಗೂ ಏಕೆ ಕಾಯಬೇಕು? ಈಗಲೇ ಹೋಗಿ ಸರಿಯಾಗಿ ನೋಡಿ, ಮಾತಾಡಿಬರೋಣ, ನಾನೂ ಬರ್ತಿನಿ"

"ನಿನ್ನ ಉತ್ಸಾಹಕ್ಕೆ ಸ್ವಲ್ಪ ಕಡಿವಾಣ ಹಾಕು. ನಾನು ಇದೇ ತಾನೇ ಅಲ್ಲಿಂದ ಬರ್ತಿದಿನಿ. ನಾಳೆ ನಿನ್ನೂ ಕರೆದುಕೊಂಡು ಬರೋದಾಗಿ ಹೇಳಿದೇನೆ· ಈಗಲೇ ಓಡಿಹೋದರೆ ಏನೆಂದುಕೊಳ್ಳಲ್ಲ? ಅಷ್ಟು ಆತುರ ತೋರಿಸಿಕೋ ಬಾರದು"

ಶೀಲಾ ತೆಪ್ಪಗಾದಳು.

ಆರಾಮವಾಗಿ ಮಲಗಿದಳು. ಕನಸಿನಲ್ಲಿ ಅವಳ ಕಲ್ಪನೆಯಲ್ಲೆಲ್ಲ ಓಡಾಡಿದಳು.

* * *

ಬೆಳಗಿನ ತಿಂಡಿ ಕಾಫಿ ಮುಗಿಯಿತು, ತಿಂಡಿ ಮಾಡುತ್ತಿರುವಾಗಲೇ ಜೊತೆಯಲ್ಲಿ ಅಡಿಗೆಯನ್ನೂ ಮಾಡಿ ಮುಚ್ಚಿಟ್ಟಳು. ಅನಂತ ಹೊರಡುವ ಹೊತ್ತಿಗೆ ತಾನೂ ಶೃಂಗಾರಮಾಡಿಕೊಂಡು ಸಿದ್ಧವಾದಳು. ಬೆಳಗಿನಿಂದ ಅವಳ ಸಡಗರವನ್ನು ಗಮನಿಸಿದ್ದ ಅನಂತ ಹೇಳಿದ—

"ಶೀಲಾ ಯಾವುದಕ್ಕೂ ಅತೀ ಆಸೆ ಪಟ್ಟು ಭರವಸೆ ಇಟ್ಟುಕೋ ಬಾರದು. ಒಂದು ಕೆಲಸಕ್ಕೆ ಕೈಹಾಕಿದಾಕ್ಷಣ ಅದು ಆಗುವುದೆಂದು ಯಾವ ನೆಚ್ಚಿಗೆ ? ನಿರಾಸೆಗೂ ಸಿದ್ಧರಾಗಿರಬೇಕು. ಆದರೆ ಸಂತೋಷ . ಆಗದಿದ್ದರೆ ವ್ಯಥೆ ಇಲ್ಲ ಅನ್ನುವಂತೆ ಮಧ್ಯವರ್ತಿ ಮನೋಭಾವ ಒಳ್ಳೆಯದು."

"ನೀವು ಹೊರಡುವಾಗಲೇ ಏನಾದರೊಂದು ಅಪಶಕುನದ ಮಾತಾಡ ಬೇಡಿ. ಮೊದಲಿನಲ್ಲೇ ನಿರಾಶೆ ಏಕೆ ? ಬಂದಾಗ ಎದುರಿಸೋದು ಇದ್ದೇ ಇದೆ. ನಾನೇನೂ ಅಳು ಮುಂಜಿಯಲ್ಲ. ಒಳ್ಳೆ ಮನೇಲಿ ಇರೋ ಯೋಗ ಇದ್ದರೆ ಸಿಕ್ಕುತ್ತೆ."

ದಂಪತಿಗಳು ಮಾತನಾಡುತ್ತ ದಾರಿ ತುಳಿದರು. ಅನಂತ ಹಿಂದಿನ ದಿನ ಮೊದಲು ಒಬ್ಬರ ಮನೆಗೆ ವಿಚಾರಿಸಲು ಹೋದಾಗ ಆದ ಅನುಭವ ಹೇಳಿದ.

ಅವರು ಆಗ ಅದೇ ಮನೆಯ ಮುಂದೆ ಬರುತ್ತಿದ್ದರು.

ಶೀಲಾ ನಕ್ಕಳು. ಹಾಗೂ ಕೇಳಿದಳು.

"ಈಗ ನಾನೂ ಒಂದು ಸಲ ಬಾಗಿಲು ತಟ್ಟಿ ನೋಡಲೆ ?"

"ಸದ್ಯಃ ಬೇಡ ಮಹರಾಯ್ತಿ."

"ಆ ಮನೆಗೆ ಇನ್ನೂ ಎಷ್ಟು ದೂರ ?"

"ಮುಂದಿನ ಬೀದಿ. ಮಹಡಿ ಕಾಣಿಸಲ್ಲವೆ ? ಆ ಮನೆ"

ಹಗಲಿನ ಹೂ ಬಿಸಿಲು ಆವರಣವನ್ನು ಬೆಳಗಿತ್ತು. ಗಿಡಬಳ್ಳಿಗಳಲ್ಲಿ ಹೂವು ಅರಳಿ ಕಣ್ಣು ತಣಿಸುವಂತಿತ್ತು.

ತಟ್ಟಿದ ಕೂಡಲೇ ಬಾಗಿಲು ತೆರೆಯಿತು. ಹಿಂದಿನ ದಿವಸ ಇದ್ದವರು ಕಾಣಲಿಲ್ಲ. ಬೇರೆ ಯಾರೋ ? ತಮ್ಮನೇ ಇರಬೇಕು ಆತ ಹಾಗೇ ಹೇಳಿದ್ದರಲ್ಲ.

ಇಬ್ಬರೂ ಬೆತ್ತದ ಕುರ್ಚಿಯಲ್ಲಿ ಆಸೀನರಾದರು.

"ಮನೆ ಬಾಡಿಗೆಗೆ ಇದೆಯಂತೆ"–ಅನಂತ ಆರಂಭಿಸಿದ.

"ಹೂಂ....ಇತ್ತು. ನಿನ್ನೆ ಯಾರೊ ಬಂದು ಮಾತಾಡಿಕೊಂಡು ಹೋಗಿ

ದಾರೆ. ಮೊದಲೇ ಬಂದಿದ್ದರೆ....?"

"ನಾನೇ ನಿನ್ನೆ ಬಂದಿದ್ದೋನು. ಯಜಮಾನರು ಇವತ್ತು ಬರುವಂತೆ ಹೇಳಿದ್ದರು. ಇಲ್ಲವೇ ಅವರು...."

"ಇದಾರೆ ಒಳಗೆ. ಈಗ ಬರ್ತಾರೆ"

"ನಾನು ಮನೆ ನೋಡಬೇಕಲ್ಲ"

ಶಿಲಾ ಆತುರದಿಂದ ಕೇಳಿದಳು.

"ನೋಡೀಮ್ಮ ಅದಕ್ಕೇನು ?"

ಇಬ್ಬರೂ ಜೊತೆಯಾಗಿ ಮತ್ತೊಮ್ಮೆ ಮನೆ ನೋಡಿದ್ದಾಯ್ತು, ಶೀಲಾ ಆಗಲೇ ಯಾವ ಯಾವ ಸಾಮಾನು ಎಲ್ಲೆಲ್ಲಿ ಇಡುವುದೆಂದು ಲೆಖ್ಖ ಹಾಕು ತ್ತಿದ್ದಳು. ಅವಳ ಸಂತೋಷ ಮುಚ್ಚಿಡುವಂತಿರಲಿಲ್ಲ. ಆದರೂ ಒಳಗೇ ಅನು ಮಾನ. ಈ ಮನೆ ಅಷ್ಟಕ್ಕೆ ಕೊಡುವುದುಂಟೆ? ಇವರು ತಪ್ಪು ತಿಳಿದಿರ ಬಹುದೆ ?

ಆ ವೇಳೆಗೆ ಅಣ್ಣನೂ ಬಾಯಿ ಒರಸಿಕೊಳ್ಳುತ್ತ ಅಲ್ಲಿಗೆ ಬಂದರು. ಹೊಟ್ಟೆ ತುಂಬ ತಿಂಡಿ ತಿಂದು ಕಾಫಿ ಕುಡಿದು ತೃಪ್ತಿಯಾಗಿಯೇ ಬಂದರು. ಅವರ ಮುಖ ಗೆಲುವಾಗಿತ್ತು. ಹಿಂದಿನ ದಿನ ಕಾಣಿಸಿದ ನಿರಾಶೆ, ಬೇಸರ ಇರಲಿಲ್ಲ.

"ಏನು ತಾಯಿ ? ಮನೆ ಒಪ್ಪಿಗೆಯಾಯ್ತೆ ?"

"ಓ ...ಆಯ್ತು, ಮನೆಗೇನು ದಿವಿನಾಗಿದೆ ಬಾಡಿಗೆ ಎಷ್ಟು ?"

"ನಿನ್ನೆಯೇ ಯಜಮಾನರ ಹತ್ತಿರ ಹೇಳಿದ್ದೆ"

"ನೂರೈವತ್ತು ಬಾಡಿಗೆ. ದೀಪ ನೀರು ಬೇರೆ"—ಅಣ್ಣ ಮಾತು ಮುಗಿಸುವುದಕ್ಕೆ ಅವಕಾಶ ಕೊಡದೆ ತಮ್ಮ ನುಡಿದ.

"ನೂರಐವತ್ತು ? " ಶೀಲಾ ಗಾಬರಿಯಿಂದಲೇ ಕೇಳಿದಳು.

"ಹೌದು....ನೀವೇ ನೋಡಿ ಅದು ಮುಂಭಾಗದ ಮನೆ ಆಗದಿದ್ದರೂ "ಔಟ್‌ಹೌಸ್" ಅಲ್ಲ. ಕಾಂಪೌಂಡು ದೊಡ್ಡದಾಗಿದ್ದುದರಿಂದ ಪಕ್ಕಕ್ಕೆ ಕಟ್ಟಿದೆ. ಒಂದೇ ಗೇಟಿನಲ್ಲಿ ಓಡಾಡಬೇಕು. ಹಾಗಿಲ್ಲದೆ ದೊಡ್ಡ ಬೀದಿಯ ಕಡೆಗೆ ಎದುರಾಗಿ ಕಟ್ಟಲು ಅವಕಾಶವಿದ್ದರೆ ಇದಕ್ಕೇ ಇನ್ನೂರು ರೂಪಾಯಿ ಬರೋದು !"

"ಅನಂತ ಈ ಪೆಟ್ಟಿನಿಂದ ಬೇಗ ಚೇತರಿಸಿಕೊಂಡು ಹೇಳಿದ.

"ನಾವು ಈಗ ಅರವತ್ತುರೂಪಾಯಿ ಕೊಡ್ತೀದೀವಿ ಎಂದೆ. ಯಜಮಾನರು "ಹತ್ತು ಕಡಿಮೆ ಹತ್ತು ಹೆಚ್ಚು, ಜನ ಮುಖ್ಯ, ಎಂದೆಲ್ಲ ಹೇಳಿದರು....ಅದರಿಂದ ನಮಗೆ ನಿಲುಕಬಹುದೇನೋ ? ಎಂದು ಆಸೆ ಮಾಡಿದೆವು. ಆಗಲೇ ಇಷ್ಟೊಂತ ಖಂಡಿತವಾಗಿ ಹೇಳಿಬಿಟ್ಟಿದ್ದರೆ ..."

ಅನಂತ ತಡವರಿಸಿದ. ಎಲ್ಲಿ ಆ ವೇದಾಂತ? ನಶ್ವರ . ನನ್ನದು ಎನ್ನುವುದು ಭ್ರಮೆ ನಮ್ಮ ಸಂಗಡ ಯಾವುದು ಬರುತ್ತೇ? ಎಂದೆಲ್ಲ ನಿನ್ನೆ ಹೇಳಿದವರು ಇವತ್ತು ಬಾಯೇ ಬಿಡಲಾರರು. ತಮ್ಮ ಹೇಳಿದ್ದಕ್ಕೆ ಮೌನ ಮುದ್ರೆಯ ಸಮ್ಮತಿ ಹಾಕಿದಾರೆ ಒಂದು ದಿನದಲ್ಲಿ ಮನುಷ್ಯ ಇಷ್ಟು ಬದಲಾಗಬಹುದೆ? ಆಶ್ಚರ್ಯ!

ವಿಚಾರ ಚಕ್ರ ತಲೆಯಲ್ಲಿ ತಿರುಗುತಿತ್ತು.

ಅನಂತ ತಟ್ಟನೆ ಎದ್ದು ನಿಂತು ಕೈಮುಗಿದು ಹೇಳಿದ—

"ತಮಗೆ ತೊಂದರೆ ಕೊಟ್ಟೆ, ಕ್ಷಮಿಸಿ ಬಾ ಶೀಲಾ"

ಹೇಗೂ ಮನೆ ಸಿಕ್ಕಲಿಲ್ಲ. ದೊಡ್ಡವರ ಹತ್ತಿರ ನಿಷ್ಠುರದ ಮಾತೇಕೆ? ಎಂದು ಸರಳವಾಗಿ ಮಾತಾಡಿದ್ದರೂ ಅವನಿಗೆ ಅಸಮಾಧಾನವಾಗಿರುವುದು ಗೊತ್ತಾಗುವಂತಿತ್ತು.

"ನಮಸ್ಕಾರ"—ಯಜಮಾನರು ಎರಡು ಕೈಗಳನ್ನೂ ತಲೆಯವರೆಗೂ ಎತ್ತಿ ಜೋಡಿಸಿದರು ಹಿಂದಿನ ದಿನ ಆಡಿದ ಮಾತು ಅವರ ನೆನಪಿನಲ್ಲಿ ಉಳಿದಿರಲಿಕ್ಕೂ ಸಾಕು. ಉಳಿದಿದ್ದರೆ ನಿರಾಶರಾದ ಆ ದಂಪತಿಗಳನ್ನು ನೋಡಿ ಅವರ ಆತ್ಮಸಾಕ್ಷಿ ಚುಚ್ಚುವುದಿತ್ತೇನೋ!

ಸಪ್ಪೆ ಮುಖದಿಂದ ಇಬ್ಬರೂ ಹೆಜ್ಜೆ ಹಾಕಿದರು. ಬಂದಾಗ ಕಾಣಿಸಿದ ಉತ್ಸಾಹ ಆಸೆ ಮರೆಯಾಗಿತ್ತು.

ಅವರ ಜೊತೆ ತಮ್ಮ ಬೀದಿಯವರೆಗೂ ಬಂದ. ಅನಂತನ ಕೈಕುಲುಕಿ ಹೇಳಿದ—

"ತಪ್ಪು ತಿಳಿಯಬೇಡಿ. ನಿನ್ನೆ ಎದುರು ಮನೆಯಾತ....ಅದೇ ಆ ದೊಡ್ಡ ಬಂಗಲೆ ಕಾಣಲ್ಲವೇ ಅದರ ಒಡೆಯರು ತೀರಿಕೊಂಡರು. ಬೆಳಗಿನಿಂದ ಗೋಳೋ ಗೋಳು. ಬ್ರಹ್ಮಾಂಡ ಜನ ಸೇರಿದ್ದರು, ಮಧ್ಯಾಹ್ನದ ವೇಳೆಗೆ

ಎಲ್ಲ ಮುಗಿದುಹೋಯ್ತು ಅನ್ನಿ. ಅದನ್ನೆಲ್ಲ ನೋಡಿದಾಗಿನಿಂದ ಅಣ್ಣನವರ ಮನಸ್ಸು ಸರಿ ಇರಲಿಲ್ಲ. ಆಗ ಏನೋ ಹೇಳಿಬಿಟ್ಟಿದ್ದಾರೆ. ನನಗೂ ಹೆದರಿಕೆ ಆಗಿತ್ತು. ಇವತ್ತು ಮೊದಲಿನಂತೇ ಆಗಿದ್ದಾರೆ."

"ಓ ...ಸ್ಮಶಾನ ವೈರಾಗ್ಯ!"—ಎಂದು ಚೀರಬೇಕು ಎನಿಸಿತು ಅನಂತನಿಗೆ. ಆದರೆ ಅವನ ಸಂಸ್ಕೃತಿ ಅದಕ್ಕೆ ಅವಕಾಶ ಕೊಡಲಿಲ್ಲ.

ತನ್ನ ಎಲ್ಲ ಭಾವನೆಗಳ ಮೇಲೆ ನಗುವಿನ ಮುಸುಕು ಹಾಕಿ ಹೇಳಿದ—

"ಶೀಲಾ ...ಬೇಗ ಹೆಜ್ಜೆ ಹಾಕು ಆಫೀಸಿಗೆ ಹೊತ್ತಾಗುತ್ತೆ."

# ಹಿರಿಮೆ

ಆ ಹುಡುಗ ನಮ್ಮಲ್ಲಿ ಬಂದಾಗ ಇನ್ನೂ ಚಿಕ್ಕವನು. ಮಂಡಿಯವರೆಗೆ ಒಂದು ಚಡ್ಡಿ, ಅದರ ಮೇಲೆ ಮಣಕುಗಟ್ಟಿದ್ದ ಅಡ್ಡಗೀರಿನ ಅರ್ಧತೋಳಿನ ಷರಟು. ಷರಟಿಗೆ ಗುಂಡಿ ಒಂದು ಕಾಲದಲ್ಲಿ ಇದ್ದಿತೆಂದು ಸೂಚಿಸುವಂತೆ ಕಾಜಾ ಕಾಣುತ್ತಿತ್ತೇ ಹೊರತು ಅಪವಾದಕ್ಕಾದರೂ ಒಂದು ಗುಂಡಿ ಇರಲಿಲ್ಲ.

ತೆರೆದ ಬಟ್ಟೆಯಿಂದ ಸದೃಢವಾದ ಎದೆಕಟ್ಟು ಕಾಣುತ್ತಿತ್ತು. ಶ್ರಮ ಜೀವನದಿಂದ ಒರಟಾಗಿದ್ದ ಕೈ ಕಾಲುಗಳು. ಕಪ್ಪಾದ ಮುಖದಲ್ಲಿ ಹೊಳೆಯುವ ಕಣ್ಣುಗಳು. ಎಳೆಯ ಮಗುವಿನ ನೋಟದಂತೆ ಮುಗ್ಧವಾದ ನೋಟ. ಎಲ್ಲವನ್ನೂ ನೋಡುವ, ಅರಿಯುವ ಕುತೂಹಲ ಮುಖದಲ್ಲಿ!

“ಇವನೇ ಬುದ್ಧಿ ನನ್ಮಗ. ಇನ್ಮ್ಯಾಕೆ ತಮ್ಮಗ. ತಾವೇ ನೋಡ್ಕೋಬೇಕು. ತಮ್ಮ ಉಡಿಗೆ ಹಾಕಿವ್ನಿ.”

ಜೊತೆಯಲ್ಲಿ ಬಂದಿದ್ದವ ತಂದೆಯವರಿಗೆ ಅಡ್ಡ ಬಿದ್ದು ಹೇಳಿದ. ಹಿರಿಯನನ್ನು ಅನುಸರಿಸಿ ಹುಡುಗನೂ ಸಾಷ್ಟಾಂಗ ಪ್ರಣಾಮ ಮಾಡಿದ.

“ಈ ಹುಡ ಗ ಬಹಳ ಚಿಕ್ಕವನಲ್ಲೋ? ನಮ್ಮ ಮನೆ ಕೆಲಸ ಇವನಿಂದ ಆದೀತೆ?”

ತಂದಯವರು ಅನುಮಾನ ವ್ಯಕ್ತಪಡಿಸಿದರು.

“ನೋಡೋಕೆ ಹಂಗಿದ್ದಾನೆ. ಎಲ್ಲಾ ಕೆಲಸ ಮಾಡ್ತಾನೆ. ನಾವು ರೈತರು ಮಕ್ಕಳ್ನ ಕೂರ್ಸಿ ಸಾಕಲ್ಲ ಬುದ್ಧಿ. ಇಟ್ಟುದ್ದ ಆದಾಗಿನಿಂದ ಕೆಲಸಕ್ಕೆ ಹಚ್ತೀವಿ. ಎರಡು ದಿವ್ಸ ನೋಡಿ. ಹೇಳ್ಕೊಟ್ಟರೆ ಕಲೀತಾನೆ.”

“ನಿನ್ನ ಹೆಸರೇನೋ ಮಗಾ?”

ಅಲ್ಲೇ ಒಳಬಾಗಿಲಲ್ಲಿ ನಿಂತಿದ್ದ ಅಜ್ಜಿ ಕೇಳಿದರು.

“ಕಾಳ ...ಕಾಳಾ ಅಂತಾರೆ ಅವ್ವ.”

ಹುಡುಗ ಸಂತೋಷದಿಂದ ಹೇಳಿದ. ಅವನ ಕರಿಯ ಮುಖದಲ್ಲಿ ಬಿಳಿಯ

ಹಲ್ಲುಗಳು ಎದ್ದು ಕಾಣಿಸಿದವು.

ಹುಡುಗ ಹಿಗ್ಗಿನಿಂದಲೇ ಇದ್ದ. ಮನೆಯನ್ನು ಬಿಟ್ಟು ಬಂದುದಕ್ಕೆ ಅವನಿಗೆ ವ್ಯಥೆಯಿದ್ದಂತೆ ತೋರಲಿಲ್ಲ ಬದಲು ಯಾವುದೋ ನಿರೀಕ್ಷೆ ಉತ್ಸಾಹ ತುಂಬಿದಂತಿತ್ತು.

"ಅಪ್ಪಣೆ ಕೊಟ್ಟರೆ ಓಯ್ತೀನಿ"—ಹಿರಿಯ ಹೇಳಿದ;

"ಈಗಲೇ ಏನು ಅವಸರ? ಎರಡು ದಿನ ಇದ್ದು ಹುಡುಗನಿಗೆ ಕೆಲಸ ತೋರಿಸಿಕೊಟ್ಟು ಹೋಗು. ನಾಳೆ ದಿವಸ ಮೊದಲು ಆ ಪೊದೆ ಕೂದಲು ತೆಗಿಸಿ, ಸ್ನಾನ ಮಾಡಿಸು. ಅಂಗಡೀಲಿ ಹೊಸದಾಗಿ ಎರಡು ಜೊತೆ ಬಟ್ಟೆ ಹೊಲಿಸು ಹಾಗೇ ನೀನೂ ಏನಾದರೂ ತಗೋ."

ತಂದೆಯವರು ಜೇಬಿನಿಂದ ಹತ್ತು ರೂಪಾಯಿನ ಎರಡು ನೋಟು ತೆಗೆದು ನೀಡಿದರು.

"ಜಗಲೀ ಮೇಲೆ ಕೂತಿರಿ. ಅಡುಗೆ ಆದ್ಮೇಲೆ ಕರೀತಾರೆ. ಊಟ ಮಾಡಿ ಹಾಯಾಗಿ ಮಲಗಿ ಬೆಳಗ್ಗೆ ಮಾತಾಡೋಣ"

ಹೀಗೆ ಮನೆಯನ್ನು ಪ್ರವೇಶಿಸಿದ ಕಾಳ ಕೆಲವು ದಿವಸಗಳಲ್ಲಿ ಮನೆಯವ ನಂತೆಯೇ ಆದ. ಮನೆಯಲ್ಲಿ ರಾಯರಿಂದ ಹಿಡಿದು ಅಡಿಗೆ ಮಾಡುವ ಅಯ್ಯನ ವರೆಗೆ ಎಲ್ಲರಿಗೂ ಅವನು ಬೇಕು.

ಹುಡುಗ ಸೋಮಾರಿಯಲ್ಲ. ಜೊತೆಗೆ ಎಲ್ಲರನ್ನೂ ಮೆಚ್ಚಿಸಬೇಕೆಂಬ ಹಂಬಲ ಹಾಕಿದ್ದನ್ನು ತಿಂದು ಹೇಳಿದ್ದನ್ನು ಬೇಸರವಿಲ್ಲದೆ ನಗುನಗುತ್ತಾ ಮಾಡಿ ಎಲ್ಲರಿಗೂ ಅಚ್ಚುಮೆಚ್ಚಾಗಿದ್ದ.

ಮಗನನ್ನು ಅಲ್ಲಿ ಬಿಟ್ಟು ಹೊರಟಾಗ ಅಪ್ಪ ಕಣ್ಣೀರು ಮಿಡಿದಿದ್ದ. ವಸ್ತ್ರದ ಕೊನೆಯಿಂದ ಕಣ್ಣು ಒತ್ತುತ್ತ ಹೇಳಿದ—

"ಅರೀದ ಮುಂಡೇದು. ಏನಾದ್ರೂ ತಪ್ಪು ಮಾಡಿದ್ರೆ ಹೊಟ್ಟೇಲಿ ಹಾಕ್ಕೊಳ್ಳಿ ದೇವ್ರು."

"ನಾನು ಎಲ್ಲಾ ನೋಡ್ಕೋತೀನಿ. ನೀನು ಧೈರ್ಯವಾಗಿ ಹೋಗು. ಯೋಚ್ನೆ ಮಾಡ್ಬೇಡ ಆಗಾಗ ಬಂದು ಮಗನ್ನ ನೋಡಿಕೊಂಡು ಹೋಗು"—ಎಂದಿದ್ದರು ತಂದೆ.

ಅಷ್ಟೇ ಅಲ್ಲ. ಅವರು ಆಡಿದಂತೆ ನಡೆದಿದ್ದರು.

ಕಾಳನ ತಂದೆ ಆರು ತಿಂಗಳು ಕಳೆದ ಮೇಲೆ ಮಗನನ್ನು ನೋಡಲೆಂದು ಹಳ್ಳಿಯಿಂದ ಬಂದ. ಮಗನ ದುಡಿಮೆಯ ಹಣ ಪ್ರತಿ ತಿಂಗಳೂ ಸೇರವಾಗಿ ಅವನಿಗೆ ಹೋಗುತ್ತಿತ್ತು. ಆದರೂ ಖಾಯಿಲೆಯಿಂದಾಗಿ ಅವನು ಬಡವಾಗಿದ್ದ. ಕೋಲೂರಿಕೊಂಡೇ ಒಳಗೆ ಬಂದ.

ಲಕ್ಷಣವಾಗಿ ಕ್ರಾಪು ಬಾಚಿಕೊಂಡು ಬೆಳ್ಳಗೆ ಒಗೆದಿದ್ದ ಬಟ್ಟೆ ಧರಿಸಿ ಅಲ್ಲಿ ಓಡಾಡುತ್ತಿದ್ದ ಎತ್ತರವಾದ ಹುಡುಗ ತನ್ನ ಮಗ ಎಂದು ಅವನಿಗೆ ತಟ್ಟನೆ ಗೊತ್ತಾಗಲಿಲ್ಲ.

"ತಮ್ಮಾ....ನಮ್ಮುಡ್ಗ ಏನ್ಮಾಡ್ತಿದೆ ?" ಎಂದ.

ಕಾಳ ತಟ್ಟನೆ ತಿರುಗಿ ನೋಡಿದವನು ಓಡಿ ಹೋಗಿ ತಂದೆಯನ್ನು ತಬ್ಬಿಕೊಂಡು ಕೇಳಿದ.

"ಅಪ್ಪಾ ..ನಾನು ಕಾಳ. ನಿಂಗೆ ಗುರ್ತು ಸಿಗಲಿಲ್ವ ?"

ಅಪ್ಪ ತನ್ನ ಕಣ್ಣನ್ನೇ ನಂಬಲಿಲ್ಲ. ಸಂತೋಷದಿಂದ ಅವನ ಕಣ್ಣುಗಳಲ್ಲಿ ನೀರು ಉಕ್ಕಿತು

"ಒಳ್ಳೇ ದೊರೆ ಮಗನಂಗೆ ಕಾಣ್ತೀಯಲ್ಲೋ ಮಗ ? ಒಳ್ಳೇ ದಣೀ ಮನೆ ಸೇರ್ಕಂಡೆ ಸುಕ್ವಾಗಿದಿಯ ?" ಎಂದ.

"ಓ....ಭೇಷಾಗಿದೀನಿ, ಅಜ್ಜವ್ವ ನನ್ನ ಮನೇ ಮಕ್ಕಳಂಗೇ ನೋಡ್ಕೋತಾರೆ ರಾಯರಂತೂ ಸದಾ ಊಟ ಆಯ್ತಾ ? ತಿಂಡಿ ಆಯ್ತಾ ? ಎಂತ ವಿಚಾರಿಸ್ತಾರೆ. ರಾಯರ ಮಗ ಚಿಕ್ಕ ಬುದ್ದಿಯೋರು ನಂಗೆ ಓದೋಕೆ ಬರೆಯೋಕೆ ಕಲಿಸ್ತಿದಾರೆ ನಿಂಗೆ ಇನ್ಮೇಲೆ ಊರ್ಗೆ ಕಾಗ್ದ ಬರೀತೀನಿ ಅಪ್ಪ." ಮಗ ಹಿಗ್ಗಿನಿಂದ ನುಡಿದ.

"ನೀನೇನೋ ಬರೀತಿ ನಂಗೆ ಓದಾಕೇ ಬರಲ್ಲ."

"ಯಾರ್ತಾವನಾದ್ರೂ ಓದಿಸ್ಕೋ."

"ದಣಿಗಳು ಮನೇಲಿ ಇದಾರಾ ?"

"ಇಲ್ಲ. ಇನ್ನೇನು ಬರೋ ಹೊತ್ತು."

ಕಾಳ ಒಳಗೆ ಹೋಗಿ ಅಜ್ಜಿಗೆ ತನ್ನ ಅಪ್ಪ ಬಂದಿರೋದನ್ನು ತಿಳಿಸಿದ. ಮುದುಕಿ ಹೊರಗೆ ಇಣುಕಿ ಅವನನ್ನು ಮಾತಾಡಿಸಿದರು.

"ಏನಪ್ಪ ಚೆನ್ನಾಗಿದೀಯ ? ಮಗನ್ನ ನೋಡಕ್ಕೆ ಇಷ್ಟು ದಿವಸ ಬರಲೇ

ಇಲ್ಲ."

"ಅವತ್ತೇ ತಮ್ಮಗ ಅಂತ ಉಡಿಗೆ ಹಾಕ್ದೆ. ನಾ ಬಂದು ಏನ್ಮಾಡ್ಬೇಕು? ನಂಗೂ ಖಾಯಿಲೆ ಹುಡ್ಗ ಸುಕ್ವಾಗಿ ದೊರೆ ಮಗ್ನಂಗೆ ಅವ್ನೆ, ನಂಗೆ ಗುರ್ತೇ ಹತ್ಲಿಲ್ಲ !"

ಅಜ್ಜಿ ಸಮಾಧಾನದ ನಗೆ ನಕ್ಕರು

ಕಾಳನ ಅಪ್ಪ ಎರಡು ದಿವಸ ಇದ್ದು, ಮಗ ಎಲ್ಲರಿಗೂ ಅಚ್ಚು ಮೆಚ್ಚಾಗಿರೋದನ್ನು ನೋಡಿಕೊಂಡು ನಿಶ್ಚಿಂತೆಯಿಂದ ಊರಿಗೆ ಹಿಂತಿರುಗಿದ.

ಕಾಳ....ಮಂಡಿಯ ಮೇಲಕ್ಕೆ ಕೂಳಕು ಚಡ್ಡಿ ಹಾಕಿಕೊಂಡು ಬಂದ ವನು ಪಾಯಿಜಾಮ ಬುಷ್‌ಕೋಟು ಹಾಕುವಂತಾದ ಮನೆಯ ಹುಡುಗರ ಬಟ್ಟೆಗಳು ತುಸು ಹಳೆಯದಾದ ಕೂಡಲೇ ಕಾಳನಿಗೆ ಮೀಸಲು.

ಶಾಲೆಗೆ ಹೋಗದಿದ್ದರೂ ಕನ್ನಡ ಚೆನ್ನಾಗಿ ಓದುವುದನ್ನು ಕಲಿತ ಕಾಳ. ಬರೆಯುವ ಅಭ್ಯಾಸವೂ ಇದ್ದು ಅಕ್ಷರ ಚೆನ್ನಾಗಿತ್ತು. ಇಂಗ್ಲಿಷ್‌ನಲ್ಲೂ ಎರಡು ಪುಸ್ತಕ ಮುಗಿಸಿದ್ದ.

ಅವನ ತಂದೆ ಇರುವವರೆಗೂ ಸಂಬಳದ ಹಣ ತಂದೆಗೆ ರವಾನೆಯಾಗು ತಿತ್ತು. ಅವನು ಹೋದ ಮೇಲೆ ಪ್ರತಿ ತಿಂಗಳೂ ಅವನ ದುಡ್ಡು ಪೋಸ್ಟ್ ಆಫೀಸಿನಲ್ಲಿ ಶೇಖರವಾಗುತ್ತಾ ಬಂತು.

ಕಾಳ ಮಾತ್ರ ಅದರ ಯೋಚನೆಯೇ ಇಲ್ಲದೆ ಸಂತೋಷವಾಗಿದ್ದ. ಅವನು ದೊಡ್ಡವನಾದಂತೆ ಚಿಲ್ಲರೆ ಕೆಲಸಗಳು ತಪ್ಪಿ ಜವಾಬ್ದಾರಿಯ ಕೆಲಸ ಗಳು ಅವನ ಹೆಗಲಿಗೆ ಜಾರಿದುವು.

"ಹುಡುಗ ನಂಬಿಕಸ್ಥ ಅವನ ಮೇಲೆ ಇಡೀ ಮನೆಯ ಜವಾಬ್ದಾರಿ ವಹಿಸಬಹುದು"

ತಂದೆಯವರು ಹೆಮ್ಮೆಯಿಂದ ಹೇಳುವುದಿತ್ತು.

"ಕಾಳನನ್ನ ಮನುಷ್ಯನನ್ನಾಗಿ ಮಾಡಬೇಕು ಊಟ ತಿಂಡಿ ಮಾಡ್ತಾನೆ ನೋಡೋಕೆ ಚೆನ್ನಾಗಿ ಬೆಳೆದಿದ್ದಾನೆ. ಮನೆಯವರೊಡನೆ ಒಡಾಡಿ ನಯವಾಗಿ ಮಾತಾಡ್ತಾನೆ, ಅಷ್ಟಾದರೆ ಸಾಲದು. ಅವನು ನಿಜವಾದ ಮನುಷ್ಯನಾಗಬೇಕು."

"ಏನು ಹಾಗಾದರೆ ? ಈಗ ಅವನು ಮನುಷ್ಯನಲ್ಲವೆ ?"

—ಅಜ್ಜಿ ನಗೆಯಿಂದ ಮಗನನ್ನು ಕೇಳಿದರು.

"ಮನುಷ್ಯದೇಹ ಇದ್ದರೆ ಸಾಲದು. ನಿಮಗೆ ಅರ್ಥವಾಗಲ್ಲ ಅದು. ಅವನೂ ಎಲ್ಲರಂತೆ ಸಂಸಾರಿಯಾಗಿ ಸಂಸಾರದ ಕಷ್ಟ ಸುಖಗಳನ್ನು ಎದುರಿಸಿ, ಬೇರೆಯವರಿಗೂ ಉಪಕಾರಿಯಾಗಿ ಅವರ ಕಷ್ಟಗಳನ್ನೂ ಅರಿಯಬೇಕು."

* * *

ಸಂಜೆ ಬಿಸಿಲು ನಿಧಾನವಾಗಿ ಮರೆಯಾಗುತಿತ್ತು. ಮರಗಳ ಎಲೆಗಳನ್ನು ಚಿನ್ನದ ಹೊದಿಕೆಯಲ್ಲಿ ಮುಚ್ಚಿದ ರವಿ, ಅದನ್ನು ಹಿಂದಕ್ಕೆಳೆದುಕೊಂಡು ಕರಿಯ ಹಚ್ಚಡ ಹೊದಿಸಲು ತಯಾರಾಗುತ್ತಿದ್ದ.

ತೋಟದಲ್ಲಿ ಗಿಡಗಳ ಆರೈಕೆಯಲ್ಲಿದ್ದ ಕಾಳ ಅಲ್ಲಿನ ಕೆಲಸ ಮುಗಿಸಿ ಒಳಗೆ ಬಂದ. ಮನೆಯ ದೀಪಗಳೆಲ್ಲಾ ಒಂದೊಂದಾಗಿ ಬೆಳಗಿದುವು.

ತಂದೆಯುವರು ಮನೆಗೆ ಬಂದರೆಂದು ತೆರೆದ ದೊಡ್ಡ ಬಾಗಿಲು ಎಚ್ಚರಿಸಿತು. ಕಟ್ಟಿದ್ದ ಜಾಗದಲ್ಲಿ ಸರಪಣಿ ಎಳೆದು ಕುಂಯ್ ಕುಂಯ್ ಸದ್ದನ್ನು ಹೊರಡಿಸುತ್ತ ನಾಯಿ ಎರಡು ಕಾಲಲ್ಲಿ ನಿಂತು ಎಗರಾಡಿತು.

ಅವರು ಕಳಚಿದ ಬಟ್ಟೆಗಳನ್ನು ಒಳಗೆ ತೆಗೆದಿಟ್ಟು ಕಾಳ ಹೊರಗೆ ಹೊಗುವುದರಲ್ಲಿದ್ದಾಗ ಅವನನ್ನು ತಡೆದು—

"ಕಾಳ ... ಬಾ, ಇಲ್ಲಿ" ಎಂದರು.

ಕಾಳ ಹತ್ತಿರ ಬಂದು ನಿಂತ.

"ದೊಡ್ಡಹಟ್ಟಿ ನಂಜೇಗೌಡನನ್ನು ನೋಡಿದೀಯೇನೊ ?"

"ಹೂಂ .. ನೋಡಿವ್ನಿ"

"ಅವನ ಮನೆ ಎಲ್ಲಿದೆ ಗೊತ್ತೆ ?"

"ಗೊತ್ತು. ನೀವೇ ಒಂದ್ಸಲ ಏನೋ ಕೆಲಸಕ್ಕೆ ಕಳ್ಸಿದ್ದಿರಿ"

"ಅವನ ಮಗಳು ಒಂದು ಹುಡುಗಿ ಇದ್ದಾಳೆ ನೋಡಿದೀಯಾ ?"

ಕಾಳ ಮೌನವಾಗಿದ್ದ. ತಂದೆಯವರು ಎಷ್ಟೇ ಸಲಿಗೆಯಿಂದ ಮಾತಾಡಿದ್ದರೂ ಅವರೊಡನೆ ಈ ವಿಷಯದಲ್ಲಿ ಮಾತಾಡಲು ಅವನಿಗೆ ಧೈರ್ಯವಿಲ್ಲ. ಮುಂದೆ ಏನು ಹೇಳುವರೆಂದು ಅವನಿಗೆ ಅರ್ಥವಾಗಿರಬಹುದು. ತಿಳಿಯ ಬಣ್ಣವಾಗಿದ್ದರೆ ಮುಖದಲ್ಲಿ ಬದಲಾದ ಬಣ್ಣ ಕಾಣುತ್ತಿತ್ತೇನೋ ? ಆದರೆ ಆ ಅಚ್ಚ

ಕಪ್ಪು ಮುಖದಲ್ಲಿ ಯಾವ ವ್ಯತ್ಯಾಸವೂ ಕಾಣಿಸಲಿಲ್ಲ.

"ನಂಜೇಗೌಡನ ಮಗಳನ್ನು ನೋಡಿದೀಯಾ ?"

ತಂದೆಯವರು ಪುನಃ ಕೇಳಿದಾಗ ಬಗ್ಗಿಸಿದ ತಲೆಯನ್ನು ಮೇಲೆತ್ತದೆ- "ಹೊಂ" ಎಂದ ಕಾಳ.

"ನಿನಗೆ ಮದುವೆ ಮಾಡಬೇಕೆಂದು ಯೋಚಿಸಿದೇನೆ. ನಿಮ್ಮಪ್ಪ ಇದ್ದಿದ್ದರೆ ಈ ಹೊತ್ತಿಗೇ ಮಾಡ್ತಿದ್ದನೋ ಏನೋ ? ಈಗ ಆ ಹೊಣೆ ನನ್ನದು. ನಿನಗೆ ಒಪ್ಪಿಗೆ ತಾನೇ ?"

ಕಾಳ ಮಾತಾಡಲಿಲ್ಲ. ಬಗ್ಗಿ ಅವರ ಕಾಲಿಗೆ ಅಡ್ಡಬಿದ್ದ. ಅವನ ಗಂಟಲು ಬಿಗಿದು ಕಣ್ಣಲ್ಲಿ ನೀರು ತುಂಬಿತ್ತು.

ಕೃತಜ್ಞತೆಯ ಕಣ್ಣೀರು.

ಕಾಳ ಮದುವೆಯಾಗಿ ಸಂಸಾರಿಯಾದ. ದೊಡ್ಡ ಮನೆಯ ಹಿಂಭಾಗದಲ್ಲಿದ್ದ ಎರಡು ಕೋಣೆಯಲ್ಲಿ ಅವನ ಗೃಹಸ್ಥ ಜೀವನ ಆರಂಭವಾಯ್ತು. ಅವನು ದುಡಿಯುತ್ತಿದ್ದರೂ ಅವನ ಹೆಂಡತಿಯನ್ನು ಮುಚ್ಚಟೆಯಾಗಿ ಇಟ್ಟಿದ್ದ. ಅವಳು ಅನವಶ್ಯಕವಾಗಿ ಹೊರಗೆ ಬಂದುದೇ ಇಲ್ಲ.

ಮುಂದೆ ಎರಡು ಮಕ್ಕಳಾದಾಗ ತಂದೆ ಹೇಳಿದರು:

"ನಿನ್ನ ಸಂಸಾರ ದೊಡ್ಡದಾಯ್ತು. ಸಂಬಳ ನೆಚ್ಚಿಕೊಂಡು ಎಷ್ಟುಕಾಲ ಇರೋದು. ನೀನು ಏನಾದ್ರೂ ಯೋಚಿಸಿದೀಯ ?"

"ನನಗೆ ಒಂದೂ ಗೊತ್ತಿಲ್ಲ. ಎಲ್ಲಾ ತಮ್ಮದೇ."

ಕಾಳ ನಿಜವನ್ನೇ ಹೇಳಿದ್ದ. ತನ್ನ ಪೂರ್ತಿ ಹೊಣೆಯನ್ನು ಯಜಮಾನರಿಗೆ ಒಪ್ಪಿಸಿ ಒಂದು ರೀತಿಯಲ್ಲಿ ನಿಶ್ಚಿಂತನಾಗಿಯೇ ಇದ್ದ. ವಿಶ್ವಾಸ, ನಂಬಿಕೆ ಉಳಿಸಿಕೊಂಡು ತನ್ನ ಕೆಲಸ ನಿರ್ವಹಿಸಿದರೆ ಸಾಕು, ಎಂದೇ ಅವನ ಭಾವನೆ.

ಮದುವೆಗೆ ಮೊದಲು ಅವನ ಹೆಸರಿಗೆ ಪೋಸ್ಟಾಫೀಸಿನಲ್ಲಿ ಹಾಕುತ್ತಿದ್ದ ಹಣ ತಕ್ಕಮಟ್ಟಿಗೆ ಶೇಖರವಾಗಿತ್ತು. ಅದರಲ್ಲಿ ಎರಡು ಹಸುಕೊಂಡು ಹಾಲಿನ ವ್ಯಾಪಾರ ಆರಂಭಿಸುವಂತೆ ತಂದೆಯವರು ಸಲಹೆಕೊಟ್ಟರು. ಜೊತೆಗೆ ಒಂದು ಸಣ್ಣ ಅಂಗಡಿ.

ಹಾಲು ಹೆಚ್ಚಾಗಿದ್ದಾಗ ಹೊರಗಿನ ವರ್ತನೆಯ ಜೊತೆಗೆ ನಮಗೂ

ಹಾಲುಕೊಡ್ತಿದ್ದ. ಆಗಲೂ ಅವನ ಹೆಂಡತಿ ಹಾಲು ಕೊಡಲು ಎಲ್ಲಿಗೂ ಹೋಗಲಿಲ್ಲ. ದೂರದ ಮನೆಗೆ ಕಾಳಹೋದರೆ ಅವನ ಮಗ ನಮ್ಮ ಮನೆಗೆ ತರುವುದಿತ್ತು.

ಹುಡುಗ ಚಿಕ್ಕವನೇ. ಸ್ವಲ್ಪ ಶ್ರಮದಿಂದಲೇ ಹಾಲಿನ ಡಬ್ಬದ ಭಾರಕ್ಕೆ ಬಾಗಿ ನಿಧಾನವಾಗಿ ತರ್‍ತಿದ್ದ, ಒಂದು ದಿನ ಎಷ್ಟು ಹೊತ್ತಾದರೂ ಹುಡುಗ ಬರಲೇ ಇಲ್ಲ. ಅಂಗಡಿ ಇಟ್ಟ ಮೇಲೆ ನಮ್ಮ ಹಿಂಭಾಗದ ಮನೆಯನ್ನು ಬಿಟ್ಟು, ಅಂಗಡಿಯ ಒತ್ತಿಗೆ ಇದ್ದ ಮನೆಯನ್ನು ಬಾಡಿಗೆಗೆ ಹಿಡಿದಿದ್ದರಿಂದ, ಏಕೆ ಬರಲಿಲ್ಲವೆಂದು ನಮಗೆ ಗೊತ್ತಾಗುವಂತೆಯೂ ಇರಲಿಲ್ಲ.

ರಾತ್ರೆ ಬಹಳ ಹೊತ್ತಾಗಿತ್ತು. ಎಲ್ಲರದೂ ಊಟವಾಗಿ ಮಲಗುವ ಸಿದ್ಧತೆಯಲ್ಲಿದ್ದಾಗ ಯಾರೋ ಬಾಗಿಲು ಬಡಿದಂತಾಯ್ತು. ನಾನೇ ಹೋಗಿ ಬಾಗಿಲು ತೆಗೆದೆ. ಕಾಳ ತಾನೇ ಹಾಲು ತಂದಿದ್ದ. ಅವನು ಬಹಳ ಮಂಕಾಗಿರು ವಂತೆ ತೋರಿತು.

"ಯಾಕಪ್ಪ ಇಷ್ಟು ಹೊತು ? ನೀನೇ ಬಂದ್ಯಲ್ಲ "

ಹಾಲನ್ನು ಪಾತ್ರೆಗೆ ಸುರಿಸಿಕೊಳ್ಳುತ್ತ ಅಜ್ಜಿ ಪ್ರಶ್ನಿಸಿದರು.

"ಹುಡುಗ ದಾರೀಲಿ ಹಾಲು ಎತ್ತಿಹಾಕಿಬಿಟ್ಟನಂತೆ ನಾನು ಮನೆಗೆ ಬಂದ್ಮೇಲೆ ತಿಳೀತು. ಬೇರೆ ಕಡೆ ಕರೆಸಿಕೊಂಡು ತಂದೆ"

ಕಾಳ ಹೆಚ್ಚು ಮಾತಾಡದೆ ಹೊರಟು ಹೋದ.

ಮಾರನೆಯ ದಿನವೂ ಕಾಳನೇ ಬಂದಾಗ ಅಜ್ಜಿ ಕೇಳಿದರು. "ಹುಡುಗ ಬರ್‍ಲಿಲ್ಲ ?"

"ಇಲ್ಲ, ಹುಷಾರಿಲ್ಲ. ಮಲಗಿ ಬಿಟ್ಟವ್ನೆ."

"ಏನಾಗಿದೆ ?"

"ನಿನ್ನೆ ಹಾಲು ಚೆಲ್ಲಿದನೆಂದು ಅವರಮ್ಮ ಮುಖ ಮೂತಿ ನೋಡದೆ ಚೆನ್ನಾಗಿ ಬಡಿದುಬಿಟ್ಟಿದ್ದಾಳೆ. ಮೈತುಂಬ ಬಾಸುಂಡೆ, ಅದರ ನೋವಿಗೋ ಏನೋ ಜ್ವರ ಬಂದ್ಬಿಟ್ಟಿದೆ."

ಕಾಳ ಅನುಮಾನಿಸುತ್ತ ಹೇಳಬಹುದೋ ಬಾರದೋ ಎನ್ನುವಂತೆ ನುಡಿದ

"ಎಲ್ಲಾದರೂ ಉಂಟೆ? ಹುಡುಗನ್ನ ಹಾಗೆ ಬಡಿಯೋದೆ ? ಒಂದು

ದಿನ ಹಾಲು ಚೆಲ್ಲಿದ್ದರೆ ಲೋಕವೇನೂ ಮುಳಗಲ್ಲ ಅವನು ತರುವಾಗಲೇ ಅವನ ಶಕ್ತಿಗೆ ಈ ಭಾರ ಹೆಚ್ಚು ಅನ್ನಿಸುತ್ತಿತ್ತು. ಏನೋ ಕೈಮೀರಿತು. ಬೇಕೆಂತ ಯಾರು ಚೆಲ್ತಾರೆ? ಹಾಗೆ ಹೊಡೆಯೋದು ತಪ್ಪು"

"ಮನೆಗೆ ಬಂದರೆ ಹೊಡೀತಾರೆ ಎಂತ ಹೆದರ್ಕೊಂಡು ರಸ್ತೇಲೆ ನಿಂತಿದ್ನಂತೆ ಪಕ್ಕದ ಮನೆ ಹುಡುಗ ಅವನ್ಜೊತೆ ಇದ್ದೋನು ಮನೇಲಿ ಹೇಳಿದ್ನಂತೆ. ಅಲ್ಲಿಂದ ಬಂದು ಬೀದೀಲಿ ದರದರನೆ ಎಳ್ಕೊಂಡ್ಹೋಗಿ ಸಾಯಾ ಬೀಳಾ ಬಡಿದಾಳೆ. ಹುಡುಗನ ಮುಖಾ ನೋಡೋಕ್ಕೇ ಆಗಲ್ಲ ಅವನು ಹುಷಾರಾಗೋವರ್ಗೂ ನಾನೇ ಒರ್ತೀನಿ."

ಕಾಳನ ಎದೆಯಲ್ಲಿ ನೋವು ಹೆಪ್ಪುಗಟ್ಟಿದಂತಿತ್ತು. ತುಂಬಿದ ದುಃಖದಿಂದಲೇ ಮಾತಾಡಿದ್ದ.

"ಏನೆಂದರೂ ಅವಳು ಹೊಡೆದದ್ದು ತಪ್ಪು, ಶಿಕ್ಷೆ ಮಾಡಬೇಕಾದರೂ ಹಗುರವಾಗಿ ಹೆದರಿಕೆ ಬರುವಷ್ಟು ಮಾಡ್ಬೇಕು. ಹೀಗೆ .." ಅಜ್ಜಿ ಹುಡುಗನ ಪರ ವಹಿಸಿ ಮಾತಾಡಿದರು

ಒಂದು ಕ್ಷಣ ಮೌನವಾಗಿ ನಿಂತಿದ್ದ ಕಾಳ ಮೆಲ್ಲಗೆ ಹೇಳಿದ :

"ಏನ್ಮಾಡಾದು ತಾಯಿ, ಹಾಳು ಬಡತನ ಹಾಗೆ ಮಾಡಿಸುತ್ತೆ. ತಿನ್ನಕ್ಕೆ ಉಣ್ಣಕ್ಕೆ ದೇವರು ಕೊಟ್ಟಿವ್ನೆ. ಆದ್ರೂ ಒಂದು ಕಾಸು ದಂಡವಾದರೂ ಅವಳು ಸಹಿಸಲ್ಲ. ಒಪ್ಪೊತ್ತಿನ ಹಾಲಿನ ದುಡ್ಡು ಪೂರ್ತಿ ಹೋದರೆ? ಅವಳಿಗೆ ಕೋಪದಲ್ಲಿ ತಾನು ಏನು ಮಾಡ್ತೀನಿ ಅನ್ನೋದೇ ಜ್ಞಾನ ಇರ್ನಿಲ್ಲ."

ಕಾಳ ಹೊರಟುಹೋದ

"ಪರವಾಗಿಲ್ಲ ಮನುಷ್ಯ ಅಗ್ರಿದಾನೆ" ಎಂದರು ತಂದೆ. ಅಲ್ಲಿ ನಡೆದ ಮಾತುಗಳೆಲ್ಲ ಅವರಿಗೆ ಕೇಳಿಸಿತ್ತು.

"ಯಾರಾದರೂ ತಪ್ಪು ಮಾಡಿದರೆ ಅದಕ್ಕೆ ಕಾರಣ ಏನೋ ಇರಬೇಕು ಎಂದು ಯೋಚಿಸುವಷ್ಟು ಸಹನೆ ಎಲ್ಲರಿಗೂ ಇರಲ್ಲ" ಎಂದರು.

* * *

ಈ ಮಾತು ನಡೆದು ಎರಡು ತಿಂಗಳಾಗಿರಬಹುದು. ಒಂದು ಸಂಜೆ ತಿರುಗಾಡಲು ಹೋಗಿದ್ದ ತಂದೆಯವರು ಕಾಳನ ಮನೆಯ ಮುಂದೆ ಒಂದು

ಸಣ್ಣ ಗುಂಪು ಸೇರಿಸುವುದನ್ನು ಗಮನಿಸಿದರು. ಅಲ್ಲಿ ಆಡುತ್ತಿದ್ದ ಮಾತುಗಳಿಂದ ಅವರಿಗೆ ಕೇಳಿಸಿದ್ದು ಇಷ್ಟು :

ಕಾಳನ ಮಗನಿಗೂ ಅವನ ಜೊತೆಯ ಹುಡುಗನಿಗೂ ಯಾವುದೋ ಕಾರಣಕ್ಕಾಗಿ ಜಗಳವಾಗಿ ಹುಡುಗರಿಬ್ಬರೂ ಕೈಹಿಡಿದು ಜುಟ್ಟು ಜಗ್ಗಿಸಿ ಹೋರಾಡುತ್ತಿದ್ದರು. ಸಣ್ಣ ಹುಡುಗರ ಸಣ್ಣ ಜಗಳ ಹೇಗೆ ಆರಂಭಿಸಿತೆಂದು ಹೇಳೋದು ಕಷ್ಟ. ಇದ್ದಕ್ಕಿದ್ದಂತೆ ಕಾಳನ ಮಗ ದೊಡ್ಡ ದನಿ ತೆಗೆದು ಅಳಲಾರಂಭಿಸಿದ. ಅದುವರೆಗೆ ಎಲ್ಲೋ ಮರೆಯಲ್ಲಿದ್ದ ಕಾಳನ ಹೆಂಡತಿ ರಂಗದ ಮೇಲೆ ಪ್ರತ್ಯಕ್ಷಳಾದಳು ತನ್ನ ಮಗನನ್ನು ವಹಿಸಿಕೊಂಡು ಇನ್ನೊಬ್ಬ ಹುಡುಗನನ್ನು ವಾಚಾಮಗೋಚರವಾಗಿ ಬೈದಳು. ಸುತ್ತ ಇದ್ದವರಿಗೆ ತಪ್ಪು ಕಾಳನ ಮಗನದೇ ಎಂದು ತೋರಿತ್ತು. ಆದರೇನು? ಅವನ ತಾಯಿಯ ಬಾಯಿಗೆ ಹೆದರಿಕೊಂಡೋ ಅಥವಾ ತಮಗೇಕೆ ಇಲ್ಲದ ಉಸಾಬರಿ ಎಂದುಕೊಂಡೋ ಎಲ್ಲರೂ ತಮಾಷೆ ನೋಡುತ್ತಿದ್ದರು

ಈ ಜಗಳ ಬೆಳೆಯೋದಕ್ಕ ಬಿಡಬಾರದು. ತಾವು ಹತ್ತಿರ ಹೋಗಬೇಕು ಎಂದುಕೊಂಡಾಗ ದೂರದಲ್ಲಿ ಕಾಳ ಬರ್ತಿರೋದು ಕಾಣಿಸಿತು. ಅವನು ಹತ್ತಿರ ಬಂದ ಕೂಡಲೇ ಮಗನ ಅಳು ಜೋರಾಯ್ತು. ನಡೆದಿದ್ದನ್ನು ಹತ್ತು ಬಾಯಿಗಳು ಒಟ್ಟಿಗೆ ಹೇಳಿದವು

ಇಬ್ಬರು ಹುಡುಗರನ್ನೂ ಹತ್ತಿರ ನಿಲ್ಲಿಸಿಕೊಂಡು ಕಾಳ ಏನು ನಡೆಯಿತೆಂದು ಕೇಳಿದ. ಇಬ್ಬರೂ ಒಟ್ಟಿಗೆ ಮಾತಾಡಿದಾಗ ಕೈ ಎತ್ತಿ—

"ಒಬ್ಬೊಬ್ಬರೇ ಹೇಳಬೇಕು. ನೀ ಪಸಿ ತಾಳು" ಎಂದು ಮಗನನ್ನು ಗದರಿದ

ಇಬ್ಬರ ಹೇಳಿಕೆಯೂ ಮುಗಿಯಿತು. ನ್ಯಾಯವನ್ನು ತೂಗಿನೋಡುವ ಅಧಿಕಾರಿಯಂತೆ ಒಂದು ಕ್ಷಣ ಮೌನವಾಗಿ ಇಬ್ಬರನ್ನೂ ನಿಟ್ಟಿಸಿದ. ನಾಲ್ಕು ಕಣ್ಣುಗಳು ಅವನ ಎದುರಿಗಿದ್ದವು. ಎರಡು ಕಣ್ಣುಗಳಲ್ಲ ಕಾತರತೆ ತುಂಬಿದ್ದರೆ ಒಂದು ಜೋಡಿ ಕಣ್ಣುಗಳು ಧೈರ್ಯದಿಂದ ಅವನನ್ನು ಇದಿರಿಸಿದವು.

ಜನ ನಿರೀಕ್ಷೆಯಿಂದ ಉಸಿರು ಬಿಗಿಹಿಡಿದಿದ್ದರು.

"ಕತ್ತೆ ...ನಿನ್ದೇ ತಪ್ಪು. ನೀ ಯಾಕೆ ಅವನ ರೊಟ್ಟಿ ಕಿತ್ಗೊಂಡೆ" ಹೆಂಡತಿಯ ಉರಿನೋಟವನ್ನು ಲೆಕ್ಕಿಸದೆ ಕಾಳ ಮಗನ ಕನ್ನಗ ಫಟೀರನ

ಒಂದೇಟು ಬಿಗಿದ. ಇನ್ನೊಬ್ಬ ಹುಡುಗನನ್ನು ತನ್ನ ಅಂಗಡಿಗೆ ಕರೆದೊಯ್ದು ಸೀಸೆಯಿಂದ ಒಂದು ಚೂರು ಬೆಲ್ಲದ ಮಿಠಾಯಿಯನ್ನು ತೆಗೆದು ಅವನಿಗೆ ಕೊಟ್ಟು—

"ಹೋಗಮ್ಮಗಾ....ಹಾಗೆಲ್ಲಾ ಬಡಿದಾಡಬಾರ್ದು" ಎಂದು ಹೇಳಿ ಅವನ ಬೆನ್ನು ತಟ್ಟಿ ಕಳಿಸಿದ.

ತಂದೆಯವರು ಮನೆಗೆ ಬಂದು ಇದನ್ನೆಲ್ಲ ನನ್ನ ಮುಂದೆ ಸ್ವಾರಸ್ಯವಾಗಿ ಬಣ್ಣಿಸಿ—

"ಕಾಳ...ನಿಜವಾಗಿ ಮನುಷ್ಯ ಆದ. ಒಳ್ಳೆಯ ಮನುಷ್ಯ. ಅವನು ಹೀಗೆ ಆಗಬೇಕೆಂದು ನಾನು ಬಯಸಿದ್ದೆ" ಎಂದರು.

ಅವರ ಮುಖದಲ್ಲಿ ತೃಪ್ತಿಯಿತ್ತು.

# ಸೇಡಿನ ಬಲೆ

ಕಾರು ಇಳಿಜಾರಿನಲ್ಲಿ ಸರಾಗವಾಗಿ ಓಡುತ್ತಿತ್ತು.

ಕಣ್ಣು ಹಾಯಿಸಿದತ್ತ ಹಸಿರು ಸಿರಿ ಗಗನವನ್ನು ಮುತ್ತಿಡುವಂತಿದ್ದ ಮರಗಳು. ರಸ್ತೆಯ ಇಕ್ಕೆಲಗಳಲ್ಲಿ ಪಾತಾಳದಂತಿದ್ದ ಭಾಗದಲ್ಲಿ ಅದರ ಬುಡ ಇತ್ತೇನೊ? ಕಾರಿನಲ್ಲಿ ಕುಳಿತಿದ್ದವರಿಗಂತೂ ಮರಗಳ ಬುಡ, ತುದಿ ಯಾವುದೂ ಕಾಣಿಸುತ್ತಿರಲಿಲ್ಲ.

ಗುಂಪುಗುಂಪಾಗಿ ಬೆಳೆದಿದ್ದ ಬಿದಿರು ಮೆಳೆಗಳು ಕಣ್ಣಿಗೆ ಹಬ್ಬ. ಉಸಿರು ಕಟ್ಟಿಸುವಂತಹ ಚೆಲುವು.

ಹಕ್ಕಿಯೊಂದು ಪಕ್ಕನೆ ಒಂದು ಬದಿಯಿಂದ ಹಾಯ್ದು ಹೋದಾಗ ಕಾರಿನಲ್ಲಿ ತಾಯಿಯ ಒತ್ತಿಗೆ ಒರಗಿ ಕುಳಿತಿದ್ದ ಮಾಲಿನಿ ಮೈ ಮರೆತು ಕೂಗಿದಳು.

"ಓ....ಎಷ್ಟು ಸುಂದರವಾಗಿದೆ!"

ಮುಂದುಗಡೆಗೆ ಡ್ರೈವರನ ಪಕ್ಕದಲ್ಲಿ ಮಂಡಿಸಿದ್ದ ರಾಯರು ಚಟ್ಟನೆ ತಿರುಗಿದರು. ಅವರ ಕೆಂಗಣ್ಣು ಕೋಪದಿಂದ ಮಗಳನ್ನು ದಿಟ್ಟಿಸಿದುವು.

'ಹುಶ್ ... ಸುಮ್ಮನಿರು' ಎನ್ನುವಂತೆ ಅವರ ಬಲಗೈನ ತೋರುಬೆಟ್ಟು ತುಟಿಯ ಮೇಲಿತ್ತು.

ಕಾರು ಅಲ್ಲಾಡಿತು. ಒಳಗಿದ್ದವರು ಕಂಪಿಸಿದರು. ಹೇರ್‌ಪಿನ್ ತಿರುವಿನಲ್ಲಿ ಹಾದು ಕಾರು ಮುಂದುವರೆಯಿತು.

ತಂದೆಯ ಉರಿನೋಟಕ್ಕೆ ಮಾಲಿನಿ ಹೆದರಿ ನಾಲಿಗೆ ಕಚ್ಚಿದಳು. ಹೊರಟಾಗಲೇ ರಾಯರು ಎಲ್ಲರಿಗೂ ಎಚ್ಚರಿಕೆಯ ಮಾತು ಹೇಳಿದರು.

"ಬೆಟ್ಟ ಇಳಿದು ಸಮರಸ್ತೆ ಬರುವವರೆಗೆ ಯಾರೂ ಮಾತಾಡಬಾರದು. ಡ್ರೈವರನ ಲಕ್ಷ್ಯವೆಲ್ಲ ರಸ್ತೆಯ ಮೇಲೇ ಇರಬೇಕು. ನೀವು ಮಾತಾಡಿದರೆ ಅವನ ಮನಸ್ಸೂ ಒಂದೇ ಕಡೆ ಇರಲ್ಲ."

ಈವರೆಗೆ ಮೌನದಲ್ಲೇ ಪ್ರಯಾಣ ಸಾಗಿತ್ತು.

ಕಾಡಿನ ಚೆಲುವು ಧೃತಿಗೆಡಿಸುವಂತಿತ್ತು. ತನಗೆ ಅರಿವಿಲ್ಲದೆಯೇ ಮಾಲಿನಿ ಉಕ್ಕಿಬಂದ ಸಂತಸದಲ್ಲಿ ಉದ್ಗರಿಸಿದಳು

ಎದೆ ನಡುಗಿಸುವಂತಹ ಸಂದರ್ಭ ರಪ್ಪೆ ಬಡಿಯುವುದರಲ್ಲಿ ದಾಟಿ ಹೋಗಿತ್ತು. ಎಲ್ಲರೂ ಮತ್ತೆ ಸಲೀಸಾಗಿ ಉಸಿರಾಡಿದರು

ರಾಯರು ಮತ್ತೆ ನೆಟ್ಟಗೆ ಕುಳಿತರು. ಅವರ ಧರ್ಮಪತ್ನಿ ಕಿರಿದಾದ ಮುಖದ ಮಗಳನ್ನು ಸಂತೈಸುವಂತೆ ಮೆಲ್ಲಗೆ ಅವಳ ತಲೆ ನೇವರಿಸಿದರು ತಂಗಿ ರಾಗಿಣಿ ಮುಗ್ಧ ನೋಟವನ್ನು ತಾಯಿಯ ಮೇಲೂ ಅಕ್ಕನ ಮೇಲೂ ಹಾಯಿಸುತ್ತಿದ್ದಳು

ಮತ್ತಷ್ಟು ಹೇರ್‌ಪಿನ್ ತಿರುವುಗಳು. ಒಂದಾದ ಮೇಲೆ ಮತ್ತೊಂದು.

ಕಾರಿನ ಗಾಲಿಗಳು ಉರುಳುತ್ತಲೇ ಇದ್ದುವು ಸೂರ್ಯನೂ ಇವರೊಂದಿಗೆ ಕೆಳಗೆ ಇಳಿಯುತ್ತಿದ್ದರೂ ಬಿಸಿಲಿನ ಕಿರಣಗಳಿಗೆ ಅಲ್ಲಿ ಸಾಕಷ್ಟು ಪ್ರವೇಶಕ್ಕೆ ಅವಕಾಶವಿಲ್ಲದೆ ಮಬ್ಬಾಗಿಯೇ ಇತ್ತು

ಕೊನೆಗೊಮ್ಮೆ ಬೆಟ್ಟದ ತಿರುವುಗಳು ಮುಗಿದು ಸಮವಾದ ನೆಲ ಕಾಣಿಸಿದಾಗ ಮರಗಳ ಗುಂಪೂ ಕಡಿಮೆಯಾಗಿ ಬೆಳಕು ಕಾಣಿಸಿತು.

ಎಲ್ಲರಿಗೂ "ಹಾ" ಎನಿಸಿ ಮತ್ತೆ ಮಾತಿನ ಕುದುರೆಗೆ ಕುಣಿದು ಹಾರಲು ತವಕವಾಗಿದ್ದಿರಬಹುದು ಅಷ್ಟರಲ್ಲಿ ಓಡುತ್ತಿದ್ದ ಕಾರು ಧಕ್ಕನೆ ನೆಗೆದು ತಟಸ್ಥವಾಗಿ ನಿಂತಿತು.

ಸಾರಥಿ ಬಾಗಿಲು ತೆರೆದು ಹೊರಗೆ ಹಾರಿದ. ಬಗ್ಗಿ ಕಾರಿನ ಚಕ್ರವನ್ನು ನೋಡಿದ. ಗಾಳಿ ತುಂಬಿಕೊಂಡು ಉರುಳುತ್ತಿದ್ದ ಚಕ್ರ, ಉಸಿರು ಕಳೆದು ಕೊಂಡು ಚಪ್ಪಟೆಯಾಗಿ ನೆಲಕ್ಕೆ ಅಂಟಿತ್ತು.

"ಅಪ್ಪಣ್ಣ ಏನಾಯ್ತು?" ರಾಯರು ಅಸಹನೆಯಿಂದ ಕುಳಿತಲ್ಲಿಂದಲೇ ಕೇಳಿದರು.

"ಪಂಕ್ಚರ್ ಆಗಿದೆ ಸಾರ್."

"ಸ್ಟೆಪ್ನಿ ?"

"ಸಿದ್ಧವಾಗಿದೆ. ಐದು ನಿಮಿಷದಲ್ಲಿ ಹಾಕಿಬಿಡ್ತೀನಿ."

ಎಲ್ಲರೂ ಕೆಳಗಿಳಿದು ರಸ್ತೆಯ ಬದಿಗೆ ನಿಂತರು. "ಜಾಕ್" ನಿಲ್ಲಿಸಿ

ಕಾರು ಮೇಲೆತ್ತಿದ. ಹಿಂಭಾಗದಿಂದ ಸ್ಟೆಪ್ನಿಯಲ್ಲಿದ್ದ ಚಕ್ರ ತಂದು ಮುಂದಕ್ಕೆ ಜೋಡಿಸಿದ. ಕೆಟ್ಟುಹೋಗಿದ್ದ ಟೈರನ್ನು ಹಿಂಭಾಗಕ್ಕೆ ಸೇರಿಸಿ ಎಡಗೈನಿಂದ ಹಣೆಯ ಬೆವರನ್ನು ಒರೆಸಿಕೊಂಡು ಸುತ್ತ ನೋಡಿದ.

ಸೂರ್ಯ ಹಗಲೆಲ್ಲ ದುಡಿದಿದ್ದು ವಿಶ್ರಾಂತಿ ಬಯಸಿ ಬೇಗ ಬೇಗ ಮರೆಯಾಗುತ್ತಿರುವಂತೆ ತೋರಿತು. ಬೆಟ್ಟದ ಚೆಲುವು ಮರೆಯಾಗಿ ಬಯಲು ಸುತ್ತ ಹರಡಿತ್ತು. ಸ್ಟೀರಿಂಗಿನ ಮೇಲೇ ಚಿತ್ತ. ರಸ್ತೆಯ ಮೇಲೆ ನೋಟ. ದಾರಿ ಸವೆದಿತ್ತು ಅವನ ಪಾಲಿಗೆ.

ರಸ್ತೆಯ ನೋಟ ಒಂದೇ ಕಾಡಾದರೇನು? ಬಯಲಾದರೇನು? ಟಾರು ಬಳಿದಿದ್ದ ನೆಲ, ಎಲ್ಲೆಡೆಯಲ್ಲೂ ಒಂದೇ.

ಅಪ್ಪಣ್ಣ ಆಯುಧಗಳನ್ನು ಅದರ ಜಾಗಕ್ಕೆ ಸೇರಿಸಿದ ಸೀಟನ್ನೂ ಸರಿಮಾಡಿ, 'ಹತ್ತಬಹುದು' ಎಂದ

ಬರಿದಾಗಿದ್ದ ಒಡಲನ್ನು ಮತ್ತೆ ತುಂಬಿಕೊಂಡು ಕಾರು ಮತ್ತೆ ಹೊರಟಿತು. ವೇಗವೂ ಹೆಚ್ಚಿತು. ಕತ್ತಲಾಗುವ ಮೊದಲು ಊರು ಸೇರುವ ತವಕ.

"ನಿಧಾನವಾಗಿ ಹೋಗಲಿ ಪರವಾಗಿಲ್ಲ" ಎಂದರು ರಾಯರು.

ಅಪ್ಪಣ್ಣ ಉತ್ತರ ಕೊಡಲಿಲ್ಲ ವೇಗವನ್ನೂ ಕಡಿಮೆ ಮಾಡಲಿಲ್ಲ. ಅವನ ಹಣೆ ಆತಂಕದಿಂದ ಸುಕ್ಕುಗಟ್ಟಿತು. ಸ್ಟೆಪ್ನಿಯಲ್ಲಿದ್ದ ಟ್ಯೂಬ್ ಸಾಕಷ್ಟು ಶಕ್ತವಾಗಿಲ್ಲ. ಯಾವ ನಿಮಿಷಕ್ಕೆ ಬೇಕಾದರೂ ಅದು ಚಕ್ಕರ್ ಕೊಡಬಹುದು ಎಂಬ ಸತ್ಯ ಅವನಿಗೆ ಮಾತ್ರ ತಿಳಿದಿತ್ತು.

ಹತ್ತು ನಿಮಿಷದ ದಾರಿ ಸವೆದಿರಬಹುದು. ದಢೀರ್ ಸದ್ದಿನೊಡನೆ ಕಾರು ಮತ್ತೆ ನಿಂತಿತು ಈ ಸಲ ಹೇಳಿಸಿಕೊಳ್ಳವೆಯೇ ಎಲ್ಲರೂ ದಡದಡನೆ ಕೆಳಗಿಳಿದರು.

"ಪುನಃ ಪಂಕ್ಚರೇನು?"

ಆತಂಕ ತುಂಬಿದ ದನಿಯಲ್ಲಿ ರಾಯರು ಕೇಳಿದರು

"ಹಾಗೇ ಕಾಣುತ್ತೆ."

ಅಪ್ಪಣ್ಣನ ದನಿಯೂ ಸಪ್ಪೆ. ಐದು ನಿಮಿಷದಲ್ಲಿ ಬದಲಿಸಬಹುದಾದ ಸ್ಟೆಪ್ನಿಯನ್ನೂ ಬಳಸಿ ಆಗಿತ್ತು. ಟ್ಯೂಬಿನ ರಿಪೇರಿ ನಡೆಯಿತು. ಅದಕ್ಕೆ

ಗಾಳಿ ತುಂಬುವ ಯತ್ನ. ಇದು ಸರಿಯಾಗುವುದಿಲ್ಲ. ಈ ರಾತ್ರಿ ಮನೆ ಸೇರುವಂತಿಲ್ಲ ಎಂದು ತೋರಿದರೂ ಅಪ್ಪಣ್ಣ ಎದೆಗೆಡದೆ ಪ್ರಯತ್ನ ನಡೆಸಿದ್ದ.

ಹೊತ್ತು ಉರುಳಿತು. ಹಳ್ಳಿಗಳ ಕಡೆಗೆ ಹೊರಟಿದ್ದ ಜನ ಬಾಯಿ ತೆರೆದು ನೋಡುತ್ತ ನಿಂತರು. ಬೇಸರವಾದಾಗ ಮುಂದೆ ನಡೆದರು.

ಅಪ್ಪಣ್ಣನ ಮಗ್ಗುಲಿಗೆ ರಾಯರು, ದಾರಿಯ ಬದಿಗಿದ್ದ ಮರದ ಬುಡ ದಲ್ಲಿ ಹೆಂಗಸರು. ರಾಯರ ಪತ್ನಿಯ ಎಡಬಲಕ್ಕೆ ಇಬ್ಬರು ಮಕ್ಕಳು.

ಕಿವಿಯಲ್ಲಿ ಹೊಳೆಯುವ ವಜ್ರದ ಓಲೆಗಳು ಕತ್ತಿನಲ್ಲಿ ಥಳೂತಿಯಾದ ನಾಲ್ಕೈಳೆ ಸರಗಳು. ಕೈತುಂಬ ಚಿನ್ನದ ಬಳೆಗಳು.

ಗಂಟೆ ನೋಡಲು ಜೇಬಿನಿಂದ ಗಡಿಯಾರವನ್ನು ಹೊರತೆಗೆದ ರಾಯರು ಚಿನ್ನದ ಚೈನು ಸಮೇತವಾಗಿ ಅದನ್ನು ಜೇಬಿಗೆ ಇಳಿಬಿಟ್ಟರು. ಹೆಬ್ಬೆಟ್ಟಿನ ದಪ್ಪದ ಚೈನು ದೂರಕ್ಕೇ ಕೋಟಿನ ಮೇಲೆ ಕಾಣಿಸುವಂತಿತ್ತು.

"ಯಾವೂರು ತಾಯಿ."

ಹುಲ್ಲು ಹೊರೆಗೆ ಕುಡುಗೋಲು ಸಿಕ್ಕಿಸಿಕೊಂಡಿದ್ದ ಮುದುಕಿ ಪ್ರಶ್ನಿಸಿದಳು.

"ಮೈಸೂರಿಗೆ ಹೋಗಬೇಕು."

"ಮೋಟಾರು ಕೆಟ್ಟೋಗೈತಾ ?"

"ಹೂಂ .."

"ಇನ್ನೂ ಏಟೋತ್ತು ಆಯ್ತದೆ ? ಮಳೆ ಬರೋ ಹಂಗೈತೆ."

ಅವಳ ಮಾತು ಮುಗಿಯುವುದರಲ್ಲಿ ಕಪ್ಪಗಿನ ದಪ್ಪ ಮೋಡಗಳ ಒಡ ಲನ್ನು ಸೀಳಿಕೊಂಡು ಮಿಂಚು ಕಾಣಿಸಿತು.

ಅಪ್ಪಣ್ಣ ತಲೆ ಎತ್ತಿ ನೋಡಿದ. ಬೃಹದಾಕಾರದ ಕಪ್ಪಗಿನ ಮೋಡ ಗಳು ಒಂದಕ್ಕೊಂದು ಅಪ್ಪಳಿಸಿಕೊಂಡು ಮುನ್ನುಗ್ಗುತ್ತಿದ್ದವು.

ರಾಯರ ಮುಖದಲ್ಲೂ ಚಿಂತೆಯ ಮೋಡ ಶೇಖರವಾಗುತ್ತಿತ್ತು. ಅಪ್ಪಣ್ಣ ಕೇವಲ ಡ್ರೈವರ್ ಮಾತ್ರವಲ್ಲ, ಅವನೂ ಅವರ ಮನೆಯವ ನಂತೆಯೇ ಇದ್ದ. ಊಟ ತಿಂಡಿ ಎಲ್ಲಾ ಅವರಲ್ಲೇ ಆಗುತ್ತಿತ್ತು. ವಾಸಕ್ಕೆ ಒಂದು ಕೋಣೆ. ಮನೆಯ ಆಗು ಹೋಗುಗಳೆಲ್ಲಾ ಗೊತ್ತು.

ತಂಗಾಳಿ ತಣ್ಣಗೆ ಮುಖಕ್ಕೆ ತೀಡಿತು. ಜೊತೆಗೇ ನುಗ್ಗಿ ಬಂದಿತು

ತುಂತುರು ಹನಿ.

ರಾಯರು ಆತಂಕದಿಂದ ನೋಡಿದರು.

ಸಿರಿಗೌರಿಯಂತಿದ್ದ ಹೆಂಡತಿ. ಎಡ ಬಲದಲ್ಲಿ ಹದಿನಾರು ಹದಿನೆಂಟರ ಹರೆಯದ ವೈ ಸಿರಿಯ ಇಬ್ಬರು ಹುಡುಗಿಯರು.

ಕ್ಷಣಕೊಮ್ಮೆ ಮಿಂಚು ಅವರ ಮುಖಗಳನ್ನು ಬೆಳಗಿಸಿ ಮರೆಯಾಗುತ್ತಿತ್ತು. ದೊಡ್ಡ ಮಳೆ ಬರಲು ತಡವಿಲ್ಲವೆಂದು ಗುಡುಗು ಸಾರುತ್ತಿತ್ತು.

ಕತ್ತಲಿನಲ್ಲಿ ಕೆಲಸ ಮುಂದೆ ಸಾಗುವಂತಿರಲಿಲ. ಮಳೆಬೇರೆ ಬರಲು ಸಿದ್ಧವಾಗಿ ತುದಿಗಾಲಲ್ಲಿ ನಿಂತಿದೆ.

"ಅಪ್ಪಣ್ಣ ..ಅವರು ಒಳಗೇ ಕೂರಲಿ. ಮಳೆ ಆರಂಭವಾಗಿದೆ."

ಅಪ್ಪಣ್ಣ ಕಾರಿನ ಬಾಗಿಲು ತೆಗೆದ. ಹೆಂಗಸರು ಒಳಗೆ ಕುಳಿತ ಮೇಲೆ ಮುಚ್ಚಿದ. ಕಿಟಕಿಯ ಗಾಜಿನ ಮೇಲೆ ಮಳೆ ಅಪ್ಪಳಿಸಿತು.

ನೋಡುತ್ತ ನಿಂತವರು ಓಡಿದರು. ಓಡೋಡಿ ಸುದ್ದಿ ಹರಡಿದರು. ಕತ್ತಲಿನ ಕಾಳಗರ್ಭದಲ್ಲಿ ಗುಡುಗು ಮಿಂಚುಗಳ ಆರ್ಭಟದ ನಡುವೆ ಕಿಟಕಿ ಬಾಗಿಲುಗಳು ಮುಚ್ಚಿದ ಕಾರಿನಲ್ಲಿ ಇವರುಗಳು ಸೆರೆಯಾಳುಗಳು.

"ಅಪ್ಪಣ್ಣ "

"ಸ್ವಾಮಿ ..."

"ಇವತ್ತು ಮನೆ ಸೇರುವಂತಿಲ್ಲ "

" . ..."

"ನಾವು ಇನ್ನೂ ಮೊದಲೇ ಹೊರಡಬೇಕಿತ್ತು. ಊಟವಾದ ಕೂಡಲೇ ಹೊರಟಿದ್ದರೆ ಬಿಸಿಲಿರುವಾಗಲೇ ಊರು ಕಾಣುತ್ತಿದ್ದೆವು. ಯಾವಾಗಲೂ ಸಂಜೆಯ ಪ್ರಯಾಣದಲ್ಲಿ ಒಂದೆರಡು ಗಂಟೆ ಕಳೆಯಬೇಕು. ಇಂತಹುದು ಏನಾದರೂ ಒದಗಿದರೂ ಸುಧಾರಿಸಿಕೊಂಡು ಮನೆ ಸೇರಬಹುದು."

ಮೌನ ಸಹನೀಯವಾಗಿ ಆಡಬೇಕೆಂದು ನುಡಿದ ಮಾತು.

"ಹೊರಟಾಗ ಕಾರು ಚೆನ್ನಾಗಿಯೇ ಇತ್ತು ಎಂದೂ ಹೀಗೆ ಆಗಿರಲಿಲ್ಲ. ಇದು ಅನಿರೀಕ್ಷಿತ "

ಸಾರಥಿ ವಾಹನವನ್ನು ವಹಿಸಿಕೊಂಡು ಮಾತನಾಡಿದ.

"ಬಿಸಿಲು ಜೋರಾಗಿತ್ತು. ಕೋರ್ಟಿಗೂ ರಜವಿತ್ತು ಎಂತ ಗಿರಿಧಾಮಕ್ಕೆ

ಬಂದರೆ ಹೀಗೆ ಆಗಬೇಕೆ ? ನಾವು ಮನೇಲಿದ್ದರೇ ಚೆನ್ನಾಗಿತ್ತು."

ರಾಯರ ಮಡದಿ ತಮ್ಮ ಮನಸ್ಸಿನ ಆತಂಕಕ್ಕೆ ರೂಪು ಕೊಟ್ಟಂತೆ ಹೇಳಿದರು.

"ಅಯ್ಯೋ . ಅಲ್ಲಿ ಎಷ್ಟು ಚೆನ್ನಾಗಿತ್ತು ಒಂದು ವಾರ ಒಂದು ದಿನದಂತೆ ಕಳೆದುಹೋಯ್ತು ಮನೇಲಿದ್ದರೆ ಅದನ್ನೆಲ್ಲ ನೋಡೋಕೆ ಆಗ್ತಿತ್ತೆ ? ಕಾರು ಕೆಟ್ಟರೆ ಏನಂತೆ ? ಮಳೆ ನಿಂತ ಮೇಲೆ ಸರಿಮಾಡಿಕೊಂಡು ಹೋದರಾಯ್ತು "

ತುಂಬಿದ ಉತ್ಸಾಹದ ಮಾಲಿನಿ ನುಡಿದಳು.

ಮಳೆ ನಿಂತಿತು. ಕಪ್ಪೆಗಳು ಜೀರುಂಡೆಗಳ ಸದ್ದು ಆಗಾಗ ಮೌನ ವನ್ನು ಕೆಣಕುತ್ತಿತ್ತು. ಹುಡುಗಿಯರು ಕೂತಲ್ಲೇ ತೂಕಡಿಸಿ ತಾಯಿಯ ಭುಜಕ್ಕೆ ಒರಗಿದರು. ದೂರದಲ್ಲೆಲ್ಲೋ ನಾಯಿಗಳು ವಿಕಾರವಾಗಿ ಅರಚಿದುವು.

ಕತ್ತಲೆಯನ್ನು ಸೀಳಿಕೊಂಡು ಮಿಣಮಿಣನೆ ಬೆಳಕು ಕಾಣಿಸಿತು. ಏನದು ? ಮಿಣುಕು ಹುಳು ಇರಬಹುದೆ ? ಇಲ್ಲ .ಬೆಳಕು ಹಾರಾಡುತ್ತಿಲ್ಲ. ನೆಲದ ಮೇಲೆ ಮೊಳದ ಎತ್ತರದಲ್ಲಿ ಚಲಿಸುತ್ತ ಹತ್ತಿರ ಬರುವಂತೆ ತೋರಿತು

ಬೆಳಕು ಹತ್ತಿರ ಬಂದಂತೆ ಕೈಲಿ ಲಾಂದ್ರಗಳನ್ನು ಹಿಡಿದು ಬರುತ್ತಿದ್ದ ಕೆಲವು ಜನರು ಕಾಣಿಸಿದರು. ಎಲ್ಲರ ತಲೆಯ ಮೇಲೂ ಮುಸುಕು ಬಟ್ಟೆ. ಕೈಗಳಲ್ಲಿ ದೊಣ್ಣೆ !

ಮೈ ನವಿರೇಳುವಂತಾಯ್ತು. ದಿನವೂ ಪತ್ರಿಕೆಗಳಲ್ಲಿ ಓದುವ ಹೆದ್ದಾರಿ ದರೋಡೆಗಳು, ಕಳ್ಳತನದ ತಲೆಬರಹಗಳು ಕಣ್ಣ ಮುಂದೆ ಕುಣಿದುವು. ರಾಯರ ಮಡದಿ ಪಂಚಾಕ್ಷರಿ ಜಪಿಸಿದರು.

ಕಾರು ಕೆಟ್ಟು ನಿಂತುದನ್ನೂ ಅವರ ಒಡವೆಗಳನ್ನೂ ಅನೇಕರು ನೋಡಿ ಕೊಂಡು ಹೋಗಿದ್ದಾರೆ. ಹತ್ತಾರು ಜನ ಸಜ್ಜಾಗಿ ಬಂದರೆ ಇವರು ಏನು ಮಾಡುವಂತಿದ್ದಾರೆ ?

ಅಪ್ಪಣ್ಣ ಕಾರಿನ ಆಯುಧಗಳಿದ್ದ ಚೀಲವನ್ನು ಹತ್ತಿರ ಇಟ್ಟುಕೊಂಡ. ಒಂದು ಟೈರ್ ಲಿವರ್ ತೆಗೆದು ರಾಯರ ಕೈಗಿತ್ತು, ತಾನೂ ಸ್ಟಾರ್ಟಿಂಗ್ ಹ್ಯಾಂಡಲನ್ನು ಮರೆಯಾಗಿ ಹಿಡಿದುಕೊಂಡ.

ಹುಡುಗಿಯರು ನಿದ್ರೆ ಮಾಡಿದ್ದು ಒಳಿತಾಯ್ತು. ಇಲ್ಲದಿದ್ದರೆ ಕಿರುಚಿ ಕೂಗಾಡುತ್ತಿದ್ದರೇನೊ ?

ಗುಂಪು ಹತ್ತಿರ ಬಂತು. ಎಲ್ಲರೂ ಸಾಲಾಗಿ ನಿಂತರು. ಮುಖಂಡನಂತೆ ಕಾಣುತ್ತಿದ್ದವನು ಹತ್ತಿರ ಬಂದ. ಅವರಿಬ್ಬರ ನಡುವೆ ಬೀಗ ಮುದ್ರೆ ಧರಿಸಿದ ಗಾಜು. ದೊಣ್ಣೆಯಲ್ಲಿ ಒಂದೇಟು ಬಿದ್ದರೆ ಗಾಜು ಪುಡಿಯಾಗಲಾರದೆ ? ಆ ಕಳ್ಳನನ್ನು ಎಲ್ಲೋ ನೋಡಿದ ನೆನಪು ರಾಯರಿಗೆ.

ರೆಪ್ಪೆ ಬಡಿಯುವಷ್ಟು ಹೊತ್ತು ಭರಿಸಲಾಗದ ಪ್ರತೀಕ್ಷೆ!

ಮರುಕ್ಷಣ ಕುಳ್ಳ, ತೀರಾ ಹತ್ತಿರ ಬಂದು ತಲೆ ಬಾಗಿಸಿ ರಾಯರಿಗೆ ವಂದಿಸಿ, ಏನೋ ಹೇಳಿದ ಮಾತು ಕೇಳಲಿಲ್ಲ ಅಪ್ಪಣ್ಣನ ಕಣ್ಸನ್ನೆಯನ್ನು ಲೆಕ್ಕಿಸದೆ ರಾಯರು ಕಿಟಕಿಯ ಗಾಜನ್ನು ಕೆಳಗಿಳಿಸಿದರು.

"ಈ ದಾರಿ ಸುರಕ್ಷಿತವಲ್ಲ ಹೆಂಗಸರೊಂದಿಗೆ ಇಡೀ ರಾತ್ರಿ ಇಲ್ಲಿ ಕಳೆಯುವುದು ಅಪಾಯ. ನಮ್ಮ ಮನೆಗೆ ಬಂದು ವಿಶ್ರಮಿಸಿಕೊಂಡು ಬೆಳಗ್ಗೆ ಪ್ರಯಾಣ ಮಾಡಬಹುದು ಎಂದು ನಮ್ಮ ದಣಿ ಹೇಳಿ ಕಳಿಸಿದ್ದಾರೆ"

ಬಂದವ ನುಡಿದ ಹಳ್ಳಿಯವರ ಮಾತಿನಂತಿರಲಿಲ್ಲ ಅವನ ನುಡಿ.

"ಎಲ್ಲಿ ನಿಮ್ಮ ಮನೆ ?"

"ದೂರವಿಲ್ಲ. ಆ ತೆಂಗಿನ ತೋಪನ್ನು ದಾಟಿದರೆ ಕಾಣಿಸುತ್ತೆ."

"ನಿಮ್ಮ ದಣಿಯ ಹೆಸರು ?"

"ಅಲ್ಲಿ ಹೋದ ಮೇಲೆ ತಿಳಿಯುತ್ತೆ."

ರಾಯರು ಅನುಮಾನಿಸಿದ್ದು ಅರೆ ಕ್ಷಣ ಮಾತ್ರ ಕೂಡಲೇ ಬಾಗಿಲು ತೆಗೆದು ದಿಟ್ಟತನದಿಂದ ಕೆಳಗೆ ಇಳಿದರು ಹೇಗೂ ಅವರ ಕೈಲಿ ಸಿಕ್ಕಾಗಿದೆ. ಕೆಡಕು ಮಾಡುವಂತಿದ್ದರೆ ಈಗಲೂ ಮಾಡಬಹುದು.

"ಈ ಕತ್ತಲಲ್ಲಿ ಎಲ್ಲಿಗೆ ಹೋಗೋದು ? ಇಲ್ಲೇ ಇದ್ದರಾಯ್ತು. ಬೇಡಪ್ಪ . ನಿಮಗ್ಯಾಕೆ ತೊಂದರೆ ?"

ರಾಯರ ಮಡದಿ ಹಿಮ್ಮೆಟ್ಟಿದರು

"ಈ ದಾರಿ ನಿಮಗೆ ಗೊತ್ತಿಲ್ಲ ಹಗಲು ಹೊತ್ತಿನಲ್ಲೇ ಇಲ್ಲಿ ಕೊಲೆ ಸುಲಿಗೆ ಆಗ್ತಿರುತ್ತೆ. ಇಲ್ಲಿ ಇರೋದು ಸರಿಯಲ್ಲ"

ಆತ ಗಂಭೀರವಾಗಿ ಹೇಳಿದ.

ನಡುಗುವ ಕಾಲುಗಳಿಂದ ಆಕೆ ಇಳಿದರು ನಿದ್ರೆಯ ಮಬ್ಬಿನಲ್ಲಿದ್ದ ಹುಡುಗಿಯರು ಕಣ್ಣುಜ್ಜಿಕೊಳ್ಳುತ್ತ ಹಿಂಬಾಲಿಸಿದರು.

"ಅಪ್ಪಣ್ಣ ...ಕಾರಿಗೆ ಲಾಕ್ ಮಾಡಿ ಹೊರಡು."

ರಾಯರು ಗಡಸು ದನಿಯಲ್ಲಿ ಆಜ್ಞಾಪಿಸಿದರು.

ಇವರನ್ನು ಮುಂದಿಟ್ಟುಕೊಂಡು ಗುಂಪು ಹೊರಟಿತು. ಲಾಂದ್ರದ ಬೆಳಕು ಮಸುಕು ಮಸಕಾಗಿ ಬೆಳಕು ತೂರಿತು. ಕಲ್ಲು ಮಣ್ಣುಗಳಿಂದ ಕೂಡಿದ ಕಾಡುದಾರಿ, ಕೆಸರು ತುಂಬಿದ ನೆಲ.

ತೋಪಿನ ನಡುವೆ ದೊಡ್ಡ ಮಹಡಿ ಮನೆ. ಹೊಸಬರನ್ನು ಕಂಡು ನಾಯಿಗಳು ಹಾರಾಡಿದುವು. ಎಲ್ಲರೂ ಹೊರಗೇ ನಿಂತರು.

ಮುಂದಾಳಾಗಿ ಬಂದಿದ್ದ ಕುಳ್ಳ ಮಾತ್ರ ಇವರೊಡನೆ ದಾರಿ ತೋರಿಸುತ್ತ ಮುನ್ನಡೆದ. ಇಕ್ಕಟ್ಟಾಗಿದ್ದ ಮೆಟ್ಟಿಲುಗಳನ್ನು ಹತ್ತಿ ಮಹಡಿ ಏರಿದರು. ಆ ಪರಿಸರಕ್ಕೆ ಹೊರತು ಎನಿಸಬಹುದಾಗಿದ್ದ ಸುಸಜ್ಜಿತವಾದ, ದಪ್ಪ ಕಂಬಗಳಿದ್ದ ಹಜಾರವನ್ನು ದಾಟಿ ಒಂದು ಕೋಣೆಗೆ ಕಾಲಿಟ್ಟರು.

ನೆಲದ ಮೇಲೆ ರತ್ನಗಂಬಳಿ ಹಾಸಿದ್ದು, ಅದರ ಮೇಲೆ ಒರಗು ದಿಂಬುಗಳಿದ್ದುವು.

ಒಳಗಿನಿಂದ ಕಂಚಿನ ತಟ್ಟೆಯಲ್ಲಿ ರಸಬಾಳೆ ಹಣ್ಣಿನ ಚಿಪ್ಪುಗಳು, ಚೊಂಬಿನಲ್ಲಿ ಹಾಲು ತಂದಿಟ್ಟ ಆತ. ಮನೆಯಲ್ಲಿ ಬೇರೆ ಜನರಿರುವ ಸುಳಿವೇ ಕಾಣಲಿಲ್ಲ.

ಕೋಣೆಗೆ ಹೊಂದಿದಂತೆ ಬಿಸಿಲು ಮಹಡಿ. ಅದರ ಕಡೆ ಕೈ ತೋರಿಸಿ,

"ಕೈಕಾಲು ತೊಳೆಯುವಂತಿದ್ದರೆ ಅಲ್ಲಿ ಬಚ್ಚಲಿದೆ. ಕೊಡದಲ್ಲಿ ನೀರಿದೆ" ಎಂದು ಹೊರಗೆ ನಡೆದ ಅವನು.

ಕಾಲು ನೀಡಿ ಕುಳಿತರೂ ಯಾರಿಗೂ ತಿನ್ನುವ ಮನಸ್ಸಿಲ್ಲ. ತಾವು ಇರುವ ಜಾಗ ಯಾವುದು ? ಧಣಿ ಎಲ್ಲಿದ್ದಾನೆ ? ತಮ್ಮನ್ನು ಇಲ್ಲಿಗೆ ಕರೆತಂದ ಉದ್ದೇಶವಾದರೂ ಏನೋ ?

ಕೋಣೆಗೆ ಒಂದು ಸಣ್ಣ ಕಿಟಕಿ. ಅಪ್ಪಣ್ಣ ಅಲ್ಲಿ ಇಣುಕಿದಾಗ ಅಲ್ಲಲ್ಲಿ ಕಿಡಿ ಕಾಣಿಸಿತು. ತಮ್ಮೊಡನೆ ಬಂದವರು ಅಲ್ಲಿ ಬೀಡಿ ಸೇದುತ್ತ ಕುಳಿತಿದ್ದಾರೆ ಎಂದು ಊಹಿಸಿದ.

ಸದ್ದಾಗದಂತೆ ಮೆಲ್ಲಗೆ ನಡೆದು ಬಂದ ಕುಳ್ಳ. ಅವನು ಹೊರಗೇ ನಿಂತಿದ್ದನೋ ಏನೋ ? ಯಾರೂ ತುಟಿ ಎರಡು ಮಾಡಿರಲಿಲ್ಲ. ಪ್ರತಿ

ಯೊಬ್ಬರೂ ತಮ್ಮದೇ ಯೋಚನೆಯಲ್ಲಿ ಮುಳುಗಿದಂತಿತ್ತು.

"ಏನೂ ತಿಂದಿಲ್ಲ ! ಬಡವರ ಮನೆ ಆತಿಥ್ಯ. ರಾಯರನ್ನು ಅವರ ಮನೆಯಲ್ಲಿ ನಡೆಯುವಂತೆ ಸತ್ಕರಿಸುವ ಶಕ್ತಿ ಇದ್ದರೂ, ನಮ್ಮಲ್ಲಿ ತಾವು ಏನೂ ತೆಗೆದುಕೊಳ್ಳಲ್ಲ, ಗೊತ್ತು. ಆದರೆ ಹಣ್ಣು, ಹಾಲು ಇದೆಯಲ್ಲ. ಕಾರು ಕೆಡದೆ ಇದ್ದಿದ್ದರೆ ಈ ವೇಳೆಗೆ ತಮ್ಮ ಮನೇಲಿ ಸುಖಭೋಜನವಾಗಿರೋದು" ನಕ್ಕು ಹೇಳಿದ ಅವನು.

"ನನ್ನ ಪರಿಚಯ ಉಂಟೆ ?"

ಕುಗ್ಗಿದ ಕಂಚುಕಂಠದಿಂದ ರಾಯರು ಕೇಳಿದರು.

"ಪ್ರಸಿದ್ಧ ವಕೀಲ ಶಿವರಾಯರ ಪರಿಚಯ ಇಲ್ಲದೋರು ಯಾರು ?" ಪ್ರಶ್ನೆಗೆ ಪ್ರಶ್ನೆ.

"ನಿಮ್ಮ ಧಣಿ ಎಲ್ಲಿ ? ಇಲ್ಲಿ ಬಂದ ಮೇಲೆ ನೋಡಬಹುದೆಂದಿದ್ದೆ."

"ಈಗ ಅವರು ಸಿಗಲಾರರು. ಬೆಳಗ್ಗೆ ಹೊರಡೋಕೆ ಮುಂಚೆ ಖಂಡಿತ ಕಾಣಬಹುದು. ಯಾವ ಶಂಕೆಯೂ ಇಲ್ಲದೆ ವಿಶ್ರಮಿಸಿ. ಶಿವ ಇದಾನೆ. ಮಕ್ಕಳು ಹಸಿದಿದಾರೆ. ಅಪ್ಪಣೆಯಾದರೆ ಬರ್ತೀನಿ."

"ಇದು ಯಾವ ಹಳ್ಳಿ ? ನಾನು ಇದೇ ಮೊದಲ ಸಲ ಈ ಕಡೆ ಬಂದಿರೋದು "

"ಬೆಳ್ಳಕ್ಕಿ ...! ತಾವು ಕೇಳಿರಬಹುದು."

ಬೆಳ್ಳಕ್ಕಿ ..ಬೆಳ್ಳಕ್ಕಿ ! ರಾಯರ ಮಿದುಳಿನಲ್ಲಿ ನೆನಪಿನ ಗಂಟೆ ಗಣಗಣನೆ ಬಾರಿಸಿತು. ಆ ಹಳೆಯ ಘಟನೆಯನ್ನು ಹಿಂಬದಿಗೆ ತಳ್ಳಿದ್ದರೂ ಮರೆಯುವುದಂತೂ ಸಾಧ್ಯವಿರಲಿಲ್ಲ.

ಅವನನ್ನು ಮತ್ತೇನೋ ಕೇಳಬೇಕೆಂದು ರಾಯರು ತಲೆ ಎತ್ತಿದರು. ಆದರೆ ಆತ ಇರಲಿಲ್ಲ. ಬಾಗಿಲು ಮುಂದೆ ಮಾಡಿಕೊಂಡು ಹೊರಟು ಹೋಗಿದ್ದ.

"ಅಪ್ಪಣ್ಣ ಬಾಗಿಲನ್ನು ಭದ್ರ ಮಾಡು."

"ಸ್ವಾಮಿ.... ಈ ಬಾಗಿಲಿಗೆ ಒಳಗಿನಿಂದ ಅಗುಣಿ ಚಿಲಕ ಒಂದೂ ಇಲ್ಲ"

ಮಂದವಾದ ಬೆಳಕಿನಲ್ಲಿ ಬಾಗಿಲನ್ನು ಸವರಿ ನೋಡುತ್ತ ಅಪ್ಪಣ್ಣ ಹೇಳಿದ.

"ಏನಂದೆ ? ಏನೂ ಇಲ್ಲವೆ ? ಇದೇನು ಹುಡುಗಾಟ ಆಡ್ತಿದಾರೋ ?

ಅವನ್ನ ಕರಿ ಕೇಳ್ತೀನಿ."

ರಾಯರ ನೋಟ ಬೋಳು ಬಾಗಿಲನ್ನು ದಿಟ್ಟಿಸಿದಾಗ ಬಾಗಿಲಿನ ಮೇಲು ಭಾಗದಲ್ಲಿ ಹಾಕಿದ್ದ ಫೋಟೋದ ಮೇಲೆ ಬಿತ್ತು.

ದಪ್ಪ ಮೀಸೆಯ ಆರಡಿ ಎತ್ತರದ ಆಜಾನುಬಾಹು, ಚಿತ್ರದಿಂದ ಇವರನ್ನ ಕೆಕ್ಕರಿಸಿ ನೋಡಿದ

ಅದೇ ಮುಖ, ಅದೇ ನೋಟ!

ಮೂರು ವರ್ಷಗಳ ಹಿಂದಿನ ಮಾತು. ಶಿವರಾಯರು ಎಂದಿನಂತೆ ತಮ್ಮ ಕೆಲಸವನ್ನು ಮುಗಿಸಿ ಆಫೀಸಿನಿಂದ ಮನೆಗೆ ಹೊರಡುವುದರಲ್ಲಿದ್ದರು ಅದೇ ದಿನ ಹೊಸದಾಗಿ ವಹಿಸಿಕೊಂಡ ಕ್ರಿಮಿನಲ್ ಕೇಸಿಗೆ ಸಂಬಂಧಪಟ್ಟ ಕಾಗದಗಳ ಕಟ್ಟನ್ನು ಮನೆಗೆ ಒಯ್ಯುವುದಿತ್ತು ಆಗ ಅವರ ಜೂನಿಯರ್ ಆಗಿದ್ದ ಹುಡುಗ ಒಳಗೆ ಬಂದು ಹೇಳಿದ.

"ಸಾರ್ ಬೆಳ್ಳಕ್ಕಿಯ ಭೀಮಪ್ಪನಾಯಕನಂತೆ, ಅರ್ಜೆಂಟಾಗಿ ತಮ್ಮನ್ನು ಕಾಣಬೇಕಂತೆ."

"ಬರಹೇಳು "

ಹೆಸರಿಗೆ ತಕ್ಕಂತೆ ಭೀಮಾಕೃತಿಯ ಮನುಷ್ಯ ಗಂಭೀರವಾಗಿ ನಡೆದು ಬಂದು ರಾಯರಿಗೆ ವಂದಿಸಿದ

ಮೂರು ದಿನಗಳ ಹಿಂದೆ ಬೆಳ್ಳಕಿಯಲ್ಲಿ ನಡೆದ ದೊಂಬಿ, ಎರಡು ಪಂಗಡಗಳ ಜಗಳ, ಪತ್ರಿಕೆಗಳ ತಲೆಬರಹದಲ್ಲಿ ಕಾಣಿಸಿತ್ತು. ಜನರ ಆಸಕ್ತಿಯನ್ನು ಕೆರಳಿಸಿದ್ದ ಆ ಪ್ರಸಂಗದಲ್ಲಿ ಭೀಮಪ್ಪನಾಯಕನ ತಮ್ಮ ಭರಮಪ್ಪನಾಯಕ ಸೂತ್ರಧಾರಿ ಎಂದು ಎಲ್ಲ ಹೇಳುತ್ತಿದ್ದರು.

ಪುಂಡರ ಗುಂಪನ್ನು ಕಟ್ಟಿಕೊಂಡು ಅವನು ನಡೆಸುತ್ತಿದ್ದ ಹಾವಳಿಗೆ ಮಿತಿ ಇರಲಿಲ್ಲ. ಅಣ್ಣನ ಮುಖ ನೋಡಿಕೊಂಡು ಜನ ಅವನ ಉಪಟಳವನ್ನು ಸಹಿಸುತ್ತಿದ್ದರು. ಊರಿಗೆ ಮುಖಂಡನಾಗಿದ್ದ ಭೀಮಪ್ಪನಾಯಕ, ಉದಾರಿ, ಧೀರ, ಕಷ್ಟದ ಹೊತ್ತಿನಲ್ಲಿ ಪ್ರಾಣವನ್ನಾದರೂ ಕೊಡಬಲ್ಲ ಉದಾತ್ತ ಮನುಷ್ಯ ಎಂದು ಪ್ರಸಿದ್ಧಿ ಪಡೆದಿದ್ದ.

ತಪ್ಪು ಮಾಡಿದರೂ ಈವರೆಗೆ ಸಿಕ್ಕಿ ಹಾಕಿಕೊಳ್ಳದಿದ್ದ ಭರಮ ಈ ದೊಂಬಿಯಲ್ಲಿ ಪೋಲೀಸರಿಗೆ ಸಿಕ್ಕಿಬಿದ್ದಿದ್ದ ಹಳ್ಳಿಯಲ್ಲಿ ಅವನ ಕಾಮುಕ

ತನಕ್ಕೆ ಬಲಿಯಾಗಿ ಪ್ರಾಣ ಕಳೆದುಕೊಂಡ ಹೆಣ್ಣುಗಳು ಎಷ್ಟೋ ? ಜಗಳ ದಲ್ಲಿ ಸತ್ತವರು ಒಬ್ಬಿಬ್ಬರಾದರೆ ಪೆಟ್ಟಾಗಿ ಆಸ್ಪತ್ರೆ ಸೇರಿದವರು ಹಲವರು.

ಇಡೀ ಹಳ್ಳಿಯಲ್ಲಿ ಅವನ ಬೆಂಬಲಿಗರು ಕೆಲವರನ್ನು ಬಿಟ್ಟರೆ ಉಳಿದವ ರೆಲ್ಲ ಅವನ ದ್ವೇಷಿಗಳೇ !

ನೋಟುಗಳ ಕಂತೆಯನ್ನೇ ರಾಯರ ಪಾದದ ಬಳಿ ಇಟ್ಟು ಭೀಮಪ್ಪ ತಲೆ ಬಾಗಿದ ತಮ್ಮನ ಪರ ವಾದಿಸಿ ಅವನನ್ನು ಉಳಿಸಬೇಕೆಂದು ಕೇಳಿ ಕೊಂಡ.

ಶಿವರಾಯರು ಹಿಡಿದ ಕೇಸು ಗೆಲ್ಲುವುದು ಖಂಡಿತ ಎಂದು ಪ್ರಸಿದ್ಧ. ಮನುಷ್ಯ ಎಷ್ಟು ನಿಷ್ಠುರರೋ, ಅಷ್ಟೇ ಹಟವಾದಿ ತಮಗೆ ಸರಿ ಎನಿಸದಿದ್ದನ್ನು ಏನೇ ಕಾರಣಕ್ಕೂ ಒಪ್ಪಿಕೊಳ್ಳುತ್ತಿರಲಿಲ್ಲ.

ರಾಯರು ಅವನನ್ನು ಮರ್ಯಾದೆಯಿಂದ ಕಂಡರೂ ಅವನ ಕೇಸು ಹಿಡಿಯಲಿಲ್ಲ. ಎಂದೂ ಯಾರಿಗೂ ಬಾಗದಿದ್ದ ಭೀಮಪ್ಪನ ಪ್ರಾರ್ಥನೆಗೆ ಅವರು ಬಗ್ಗಲಿಲ್ಲ

ನಾಯಕ ಸಿಟ್ಟಿನಿಂದಲೇ ಹೊರಬಿದ್ದು ಬೇರೆ ಲಾಯರನ್ನು ಗೊತ್ತು ಮಾಡಿದ ಅವನು ಬರಲು ಕೆಲವೇ ಗಂಟೆಗಳು ತಡವಾಗಿತ್ತು. ಆ ಬೆಳಗ್ಗೆ ಎದುರು ಗುಂಪಿನವರು ಬಂದು ರಾಯರನ್ನು ತಮ್ಮ ಪಕ್ಷಕ್ಕೆ ಒಲಿಸಿಕೊಂಡಿ ದ್ದರು.

ಶಿವರಾಯರು ಎದುರಾಳಿಯ ಪರ ಎಂದು ತಿಳಿದಾಗ ಭೀಮಪ್ಪ ತಲೆ ಚಚ್ಚಿಕೊಂಡ. ತಮ್ಮ ಪಾರಾಗಿ ಬರುವುದಿಲ್ಲ ಎಂದು ಖಂಡಿತವಾಯ್ತು. ದುಡ್ಡಿನ ಹೊಳೆ ಹರಿಸಿ ಹೋರಾಡಿದರೂ ಏಳು ವರ್ಷ ಜೈಲುವಾಸ ಭರಮನಿಗೆ ಆಗಿತ್ತು

ಭೀಮಪ್ಪನ ಪ್ರತಿಷ್ಠೆಗೆ ಧಕ್ಕೆ ತಾಗಿತ್ತು.

ಅದೇ ಭೀಮಪ್ಪನಾಯಕ ತಿಳಿದೋ ತಿಳಿಯದೆಯೋ ಅವರನ್ನು ತೊಂದರೆಯ ಹೊತ್ತಿನಲ್ಲಿ ಕರೆಸಿಕೊಂಡು, ತಾನು ಮರೆಯಲ್ಲಿದ್ದಾನೆ.

ಅವನ ಉದ್ದೇಶ ಏನಿರಬಹುದು ?

ಒಂದು ಕ್ಷಣ ರಾಯರ ಮನ ಹೊಯ್ದಾಡಿತು. ಅಸಹಾಯಕರಂತೆ ಕಾತರದಿಂದ ತಮ್ಮನ್ನೇ ದಿಟ್ಟಿಸುತ್ತಿದ್ದ ಮಡದಿಯನ್ನು ನೋಡಿದರು.

ಪ್ರಾಯದ ಇಬ್ಬರು ಹೆಣ್ಣುಮಕ್ಕಳು. ಅವರಿಗೆ ಸಂದರ್ಭದ ಗಭೀರತೆಯು ಅರಿವಾಗಿರದು. ಮುಗ್ಧತೆಯೇ ಮೂರ್ತಿವೆತ್ತಂತೆ ವಿಶ್ರಾಂತಿಯನ್ನು ಬಯಸಿ ರತ್ನಗಂಬಳಿಯ ಮೇಲೆ ಸುರುಟಿಕೊಂಡಿದ್ದಾರೆ.

ಅಪ್ಪಣ್ಣ ಹಳೆಯ ಹುಲಿ, ಎಲ್ಲ ಬಲ್ಲವ. ಸಾರಥಿಯಾದರೂ ಆಫೀಸಿನ ವಿದ್ಯಮಾನಗಳೆಲ್ಲ ಅವನಿಗೆ ಗೊತ್ತು. ಚಿಲಕವಿಲ್ಲದ ಬಾಗಿಲಿಗೆ ದೇಹದ ಭಾರವನ್ನು ಒರಗಿಸಿ ನಿಂತಿದ್ದಾನೆ. ಕೈಯಲ್ಲಿ ಬಲವಾದ ಟೈರ್ ಲಿವರ್, ಯುದ್ಧಕ್ಕೆ ಸಜ್ಜಾಗಿ ನಿಂತ ಯೋಧನಂತೆ ಭಂಗಿ.

ರಾಯರು ಮೆದುವಾಗಿ ನಕ್ಕರು. ಅವರ ನೈತಿಕ ಬಲ ವಿಜೃಂಭಿಸಿತು. ಮೆಲ್ಲಗೆ ಹೇಳಿದರು.

"ಅಪ್ಪಣ್ಣಾ ಬಾಗಿಲು ತೆಗೆ ಹೊರಗಿನ ಪಡಸಾಲೆಯಲ್ಲಿ ಹೋಗಿ ಮಲಗು. ಬೆಳಗ್ಗೆ ಬೇಗ ಹೊರಡೋಣ"

"ಸ್ವಾಮಿ....ನಿಮ್ಮನ್ನು ಒಬ್ಬರನ್ನೇ ಬಿಟ್ಟು ನಾನು ಹೋಗಲಾರೆ. ಇದು ಭೀಮಪ್ಪನಾಯಕರ ಮನೆ ಫೋಟೋ ನೋಡಿ"

"ನೋಡಿದೆ. ಅದಕ್ಕೇ ಹೋಗಿ ಮಲಗು ಎಂದೆ."

"ಅಂದರೆ ...?"

"ನಾವು ಅವರಿಗೆ ಏನೂ ಅನ್ಯಾಯ ಮಾಡಿಲ್ಲ. ಅವರು ಬರುವ ವೇಳೆಗೆ ನಾವು ಪ್ರತಿಪಕ್ಷ ಹಿಡಿದಿದ್ದೆವೆಂದು ಅವರಿಗೆ ಗೊತ್ತಿದೆ. ಮನೆಗೆ ಕರೆಸಿ ತೊಂದರೆ ಕೊಡುವಷ್ಟು ಕೀಳು ಮನುಷ್ಯರಲ್ಲ ಅವರು. ಮೊಕದ್ದಮೆ ನಡೆಯುತ್ತಿದ್ದಾಗ ಅವರ ಸ್ವಭಾವದ ಪರಿಚಯ ಆಗಿದೆ. ಭರಮ ಪಾಪಿ. ತಕ್ಕ ಶಿಕ್ಷೆ ಆಯ್ತು. ಅವರ ತಮ್ಮ ಎನಿಸಿಕೊಳ್ಳಲು ತಕ್ಕವನಲ್ಲ. ಆದರೆ ಕರುಳು, ಬೇಕಾದಷ್ಟು ಮಾಡಿದರು."

ಧಣಿಯ ಮಾತು ಮೀರಲಾರದೆ ಅಪ್ಪಣ್ಣ ಅರೆಮನಸ್ಸಿನಿಂದ ಹೊರಗೆ ಹೋದ. ಮಡದಿಯನ್ನು ಮಲಗುವಂತೆ ಹೇಳಿ ರಾಯರು ತಾವೂ ದಿಂಬಿಗೆ ತಲೆ ಕೊಟ್ಟರು.

ಬಾಲಸೂರ್ಯನ ಕಿರಣಗಳು ಮುಖವನ್ನು ತರುಬಿದಾಗ ರಾಯರು ಎದ್ದರು. ಮಡದಿ ಮತ್ತು ಮಕ್ಕಳು ಎದ್ದು ಕುಳಿತು ಕಣ್ಣುಜ್ಜುತ್ತಿದ್ದರು.

ರಾತ್ರೆ ತಂದು ಇಟ್ಟಿದ್ದ ಹಣ್ಣು ಮತ್ತು ಹಾಲು ಇನ್ನಲ್ಲೇ ಇತ್ತು.

ಅದನ್ನು ಯಾರೂ ಮುಟ್ಟಿರಲಿಲ್ಲ.

ರಾಯರು ಬಚ್ಚಲಿಗೆ ಹೋಗಿ ಕೈ ಕಾಲು ಮುಖ ತೊಳೆದರು. ಕಣ್ಣಿಗೆ ಕಾಣುವವರೆಗೂ ತೆಂಗಿನ ಮರಗಳು. ಬೆಳಗಿನ ಗಾಳಿಗೆ ತೂಗಾಡುತ್ತ ಎಳೆ ಬಿಸಿಲಿಗೆ ಮೈ ಒಡ್ಡಿ ನಿಂತಿದ್ದುವು.

ಸ್ನಾನ ಮಾಡಿ ಶುಭ್ರವಾದ ಬಟ್ಟೆ ತೊಟ್ಟು, ಹಣೆಗೆ ವಿಭೂತಿ ಧರಿಸಿ ಭೀಮಪ್ಪನಾಯಕ ಮಹಡಿ ಏರಿ ಬಂದ. ಅವನ ಹಿಂದಿನಿಂದ ಬಂದ ಆಳು ಮಗನ ಕೈಲಿ ಹೊಸದಾಗಿ ಕರೆದ ಹಸುವಿನ ಹಾಲು. ಹಣ್ಣುಗಳು ತುಂಬಿದ್ದ ತಟ್ಟೆ ಇದ್ದುವು.

ನಾಯಕ ತಾನೇ ಅದನ್ನು ರಾಯರ ಮುಂದಿಟ್ಟು ತಲೆ ಬಾಗಿ ವಂದಿಸಿದ, ಹಿಂದೊಮ್ಮೆ ವಂದಿಸಿದ್ದಂತೆ

"ರಾಯರು ಫಲಾಹಾರ ತಗೋಬೇಕು. ರಾತ್ರಿ ನಾನೇ ಬಂದು ವಿಚಾರಿಸದೆ ತಪ್ಪಾಯ್ತು. ಎಲ್ಲ ಉಪವಾಸ ಮಲಗುವಂತಾಯ್ತು."

ಶಿವರಾಯರ ಕಾರು ಕೆಟ್ಟು ಹೋಗಿ ದಾರಿಯಲ್ಲಿ ನಿಂತಿದಾರೆ ಎಂದು ಕೇಳಿದಾಗ ನೋವಿನ ಕಿಡಿ ಉರಿದಿತ್ತು. ತಾಯಿ ಸಾಯುವಾಗ ತನಗೆ ಒಪ್ಪಿಸಿದ ಭರವು, ಕೇಡಿಗನಾದರೂ ತನ್ನ ತಮ್ಮ ಅವನು ಇಂದು ಸೆರೆಯಲ್ಲಿ. ಮತ್ತೂ ನಾಲ್ಕು ವರ್ಷ ಅಲ್ಲಿ ಕಳೆಯಬೇಕು. ಅವನ ಹೆಂಡತಿ ಕೊರಗಿನಿಂದ ಹಾಸಿಗೆ ಹಿಡಿದಿದ್ದಾಳೆ.

ರಾಯರು ತನ್ನ ಪ್ರಾರ್ಥನೆಗೆ ಓಗೊಟ್ಟಿದ್ದರೆ?

ಸುರುಸುರು ಬಾಣದಂತೆ ಉರಿದೆದ್ದಿತು ಸೇಡಿನ ಬಯಕೆ. ಆದರೆ ಆ ಧೀರ ಗಂಭೀರ ಮನುಷ್ಯ, ಸ್ವಲ್ಪವೂ ಅಳುಕಿಲ್ಲದೆ ತನ್ನ ದೊಡ್ಡತನದಲ್ಲಿ ನಂಬಿಕೆ ಇಟ್ಟು ಮಗುವಿನಂತೆ ಹಾಯಾಗಿ ನಿದ್ರಿಸಿದ್ದನ್ನು ನೋಡಿದಾಗ ಸೇಡಿನ ಬಯಕೆ ಅಲ್ಲೇ ನಂದಿಹೋಗಿ ಬೂದಿಯಾಗಿತ್ತು.

ರಾಯರು ಮಲಗಿದ ಮೇಲೆ ಭೀಮಪ್ಪ ಸದ್ದಾಗದಂತೆ ಕಳ್ಳ ಹೆಜ್ಜೆಯಿಂದ ಬಂದಿದ್ದ. ತೆರೆದ ಬಾಗಿಲ ಹೊರಗೇ ನಿಂತ....ಮನೆಯಲ್ಲಿ ತಮ್ಮ ಸ್ವಂತ ಹಾಸಿಗೆಯಲ್ಲಿ ಮಲಗಿದಂತೆ ರಾಯರು ಆರಾಮವಾಗಿ ನಿದ್ರಿಸಿದ್ದರು.

ತುಂಬು ತೋಳಿನ ಮೇಲೆ ತಲೆ ಇಟ್ಟು ಪವಡಿಸಿದ್ದರು ರಾಯರ ಮಡದಿ. ಮೈ ತುಂಬ ಒಡವೆ, ಹಣೆ ತುಂಬ ಕುಂಕುಮ. ನಾಯಕನಿಗೆ ತನ್ನ ತಾಯಿಯ

ನೆನಪಾಯ್ತು, ಮನದಲ್ಲೇ ಆಕೆಗೆ ಮಣಿದ. ಅವರ ಪಕ್ಕದಲ್ಲಿ ಹಲಸಿನ ತೊಳೆ ಯಂತಹ ಇಬ್ಬರು ಹುಡುಗಿಯರು. ಲಾಂದ್ರದ ಬೆಳಕಿನಲ್ಲೂ ಅವರ ರೂಪು, ಯೌವನ ಕಣ್ಣು ಕೋರೈಸುವಂತಿತ್ತು.

ಇಂದು ಭರಮು ಇದ್ದಿದ್ದರೆ ?

ಮಿಂಚಿನಂತೆ ಹಾಯ್ದ ಯೋಚನೆಗೆ ನಾಯಕ ಬೆಚ್ಚಿದ. ಈ ಮಕ್ಕಳ ಪಾಡು ಏನಾಗುತ್ತಿತ್ತೋ ? ಒಂದು ವೇಳೆ ತಾನೇ ಮೊದಲು ಹೋಗಿ ರಾಯರು ತಮ್ಮ ಪಕ್ಷ ಹಿಡಿದು ವಾದಿಸಿ ಭರಮುನನ್ನು ಉಳಿಸಿದ್ದರೂ, ಅವನು ಅದೆಲ್ಲವನ್ನೂ ಮರೆತು ಕೃತಘ್ನನಾಗುತ್ತಿದ್ದ.

ಅಡ್ಡ ಬಂದರೆ ತನ್ನ ತಲೆ ಹಾರಿಸಲೂ ಹಿಂದೆಗೆಯುತ್ತಿರಲಿಲ್ಲ. ಆದದ್ದೆಲ್ಲ ಒಳಿತೇ.

ಮೊದಲ ಬಾರಿಗೆ ನಾಯಕನಿಗೆ ತನ್ನ ತಮ್ಮ ಸೆರೆಯಲ್ಲಿರುವುದು ಒಳಿತು ಎನಿಸಿತು. ಪಶ್ಚಾತ್ತಾಪ ಹೃದಯದುದ್ದಕ್ಕೂ ಹರಡಿತು. ಹೊರಗೆ ನಿಂತಿದ್ದಂತೆ ಕೈಜೋಡಿಸಿ ಅವರಿಗೆ ವಂದಿಸಿ ಹಿಂದಿರುಗಿದ.

ಸರ್ಪಗಾವಲು ಕಾಯುತ್ತಿದ್ದ ಅಪ್ಪಣ್ಣ ಆಯುಧ ಸಮೇತವಾಗಿ ಅಲ್ಲಿ ನಿಂತಿದ್ದ. ಒಳಗೆ ಕಾಲಿಟ್ಟಿದ್ದಿದ್ದರೆ ಆಯುಧ ನಾಯಕನ ತಲೆಯ ರಕ್ತದ ರುಚಿ ನೋಡುತ್ತಿತ್ತೇನೋ ?

ತುಟಿಯ ಮೇಲೆ ಬೆರಳಿಟ್ಟು ಸದ್ದು ಮಾಡದಂತೆ ಸನ್ನೆ ಮಾಡಿ ನಾಯಕ ಮಹಡಿ ಇಳಿದ. ಅವನ ಮನಸ್ಸಿನ ಒಳತೋಟಿ ಅಪ್ಪಣ್ಣನಿಗೆ ಅರ್ಥವಾಗದಿದ್ದರೂ ಆ ಸ್ವಾಮಿನಿಷ್ಠ ಕಣ್ಣು ಬಿಟ್ಟುಕೊಂಡೇ ಇಡೀ ರಾತ್ರಿ ಕಳೆದ.

ಭೀಮಪ್ಪನ ಆದರದ ಉಪಚಾರವನ್ನು ಮೀರಲಾರದೆ ರಾಯರು ಫಲಾಹಾರ ಸ್ವೀಕರಿಸಿದರು. ಸ್ನಾನವಾಗಿಲ್ಲವೆಂದು ಆ ಸಾಧ್ವಿ ಹಾಲನ್ನೂ ಸಹ ಮುಟ್ಟಲಿಲ್ಲ.

ರಾಯರಿಗೆ ಎಚ್ಚರವಾದ ಕೂಡಲೇ ಅಪ್ಪಣ್ಣ ಕಾರಿನ ಬಳಿಗೆ ಓಡಿದ್ದ. ಸ್ವಲ್ಪ ಹೊತ್ತಿನಲ್ಲೇ ಬಂದು,

"ಹೊರಡೋಣ" ಎಂದು ಸೂಚಿಸಿದ.

"ಸರಿಹೋಯಿತೆ ?"

"ಹೂಂ....ಊರು ಸೇರಬಹುದು"

ರಾಯರು ವಂದನೆ ಸಲ್ಲಿಸಿ ಹೊರಟರು. ಅವರು ಕಣ್ಮರೆಯಾಗುವವರೆಗೂ ಭೀಮಪ್ಪ ಬಾಗಿಲಿಗೆ ಒರಗಿ, ಅವರನ್ನೇ ನೋಡುತ್ತ ನಿಂತಿದ್ದ.

ಒಂದು ದುರ್ಬಲ ಗಳಿಗೆಯಲ್ಲಿ ತನ್ನನ್ನು ಆವರಿಸಿದ್ದ ಸೇಡಿನ ಬಲಿಯಿಂದ ಪಾರಾಗಿದ್ದಕ್ಕಾಗಿ ಅವನಿಗೆ ಸಂತಸವಾಗಿತ್ತು.

# ಎಲ್ಲವೂ ಒಳಿತೇ!

ಚಾಪೆಯ ಮೇಲೆ ಹೂವು ರಾಶಿ ರಾಶಿಯಾಗಿ ಸುರಿದಿತ್ತು. ಮಲ್ಲಿಗೆ, ಸಂಪಿಗೆ, ಗುಲಾಬಿ, ಕನಕಾಂಬರ, ಕಾಕಡಾ! ವಿವಿಧ ವರ್ಣಗಳ ಜೊತೆಗೆ ವಿಧವಿಧವಾದ ವಾಸನೆ ಸಹಾ.

ಬೇರೆ ಬೇರೆ ಗಿಡಗಳಿಂದ ಹೂವನ್ನು ಕೊಯ್ದು ತಂದವರು ಅದನ್ನು ಚಾಪೆಯ ಮೇಲೆ ಸುರಿದು ಮತ್ತೆ ಬೇರೆ ಹೂವು ಬಿಡಿಸಿ ತಂದು ಇನ್ನೊಂದು ಬದಿಗೆ ಸುರಿದಾಗ ಹೂವು ಎಲ್ಲ ಕಡೆಗೂ ಹರಡಿ ಚೆಲ್ಲಾಪಿಲ್ಲಿಯಾಗಿತ್ತು.

ಹೂವನ್ನು ಬಿಡಿಸಿ ತರುವುದಷ್ಟೇ ಕೋಮಲೆಯ ಕೆಲಸ. ಅದನ್ನು ಪೋಣಿಸಲು ಅವಳು ಎಂದೂ ಮುಂದಾಗುತ್ತಿರಲಿಲ್ಲ

ಕೋಮಲಾ ಹೆಸರಿಗೆ ತಕ್ಕಂತೆ ಕೋಮಲೆ. ನಡೆ, ನುಡಿ ಎಲ್ಲದರಲ್ಲೂ ನಯ. ಮರೆತೂ ಯಾರಿಗೂ ಕಠಿಣವಾಗಿ ನುಡಿದವಳಲ್ಲ, ಬಲವಾಗಿ ಎಳೆದರೆ ಗಿಡದ ರಂಬೆಗೆ ನೋವಾಗುವುದೇನೋ? ಎನ್ನುವಂತೆ ನಯವಾಗಿ ಒಂದೊಂದೇ ಹೂವನ್ನು ಬಿಡಿಸಿ ಬುಟ್ಟಿಗೆ ಹಾಕುವಾಗ ಗಿಡಗಳು ಮೆಚ್ಚುಗೆಯಿಂದ ತಲೆ ದೂಗುವಂತೆ ಗಾಳಿಗೆ ಅಲ್ಲಾಡುತ್ತಿದ್ದವು.

ತೆಳುವಾದ ನೀಳ ಬೆರಳುಗಳು, ಬಿಳಿಯ ಬೆರಳುಗಳ ಉಗುರಿಗೆ ನಸು ಗೆಂಪು ಬಣ್ಣ. ಹೂವುಗಳು ಅವಳ ಅಂಗೈ ಮೇಲೆ ಕುಳಿತಾಗ, ಕೈಗೂ ಹೂವಿಗೂ ಸ್ಪರ್ಧೆ!

ಯಾವುದು ಹೆಚ್ಚು ಚೆಲವು? ಹೆಚ್ಚು ಕೋಮಲ?

ಕೋಮಲ ಎಂದೂ ತನ್ನ ಚೆಲುವಿನ ಬಗೆಗೆ ಚಿಂತಿಸಿದವಳಲ್ಲ. ತಂಗಿ ವಿಮಲ ಹೇಳುವುದಿತ್ತು.

"ಅಕ್ಕಾ ...ನಿನ್ನ ಕೈಲಿ ಹೂವು ಎಷ್ಟು ಸುಂದರವಾಗಿ ಕಾಣ್ತದೆ!"

"ಅದು ಚೆನ್ನಾಗಿರೋದ್ರಿಂದ ಸುಂದರವಾಗಿ ಕಾಣ್ತದೆ. ನನ್ನ ಕೈ ಏನು ಮಾಡೀತು? ಗಿಡದ ಮೇಲೆ ಅದು ಇನ್ನೂ ಮುದ್ದಾಗಿತ್ತು. ನೋಡ್ತಾ

ಇದ್ದರೆ ಕೀಳಕ್ಕೇ ಮನಸ್ಸು ಬರಲ್ಲ. ಗಿಡದ ಮೇಲೆ ನಗ್ತಾ ಇರೋ ಹೂವನ್ನ ಕಿತ್ತು ತಲೆಗೆ ಮುಡಿಯೋದು ಅನ್ಯಾಯವೇನೋ? ಎನಿಸುತ್ತೆ."

"ಅನ್ಯಾಯ ಎಂಥದು? ಹೂವು ಇರೋದೇ ಮುಡಿಯೋಕೆ."

"ಒಂದು ಘಳಿಗೆ ಆದರ ನಲಿವು. ಬಾಡಿದ ಮೇಲೆ ಕಿತ್ತು ಬಿಸಾಡಿ ಬಿಡ್ತಾರೆ."

"ಅದಕ್ಕೇನು ಮಾಡೋದು? ಹೂವಿನ ಹಣೇ ಬರಹವೇ ಅಷ್ಟು. ಗಿಡದಲ್ಲೇ ಬಿಟ್ಟರೂ ಬಾಡಿ ನೆಲಕ್ಕೆ ಉದುರುತ್ತೆ."

"ನೀನು ಏನೇ ಹೇಳು. ನಾನು ಒಂದೊಂದು ಹೂವು ಕೀಳುವಾಗಲೂ ಮನಸ್ಸಿನಲ್ಲಿ ಅದಕ್ಕೆ ಕ್ಷಮಾಪಣೆ ಕೇಳಿಕೊಂಡು ನಿಧಾನವಾಗಿ ಅದನ್ನು ಒಲಿಸಿಕೊಂಡು ಬಿಡಿಸುತ್ತೇನೆ."

"ಅದಕ್ಕೇ ಇಷ್ಟು ನಿಧಾನವಾಗೋದು. ನಾನೂ ಪರಿಮಳ ಬಿಡಿಸೋಕೆ ನಿಂತರೆ, ನೀನು ಒಂದು ಹಿಡಿ ಬಿಡಿಸುವ ಹೊತ್ತಿಗೆ ನಾವು ಒಂದು ಬುಟ್ಟಿ ಭರ್ತಿ ಮಾಡಿರ್ತೀವಿ."

"ಇನ್ಮೇಲೆ ನೀವೇ ಆ ಕೆಲಸವನ್ನೂ ಮಾಡಿಬಿಡಿ."

"ಪರವಾಗಿಲ್ಲ, ಜಾಣೆ ನೀನು ಪೋಣಿಸೋದೂ ಇಲ್ಲ. ಕೆಲಸ ತಪ್ಪಿಸಿಕೊಂಡರೆ ನಿನಗೆ ಹೂವೂ ಇಲ್ಲ."

"ನನಗೆ ಬೇಡವೇ ಬೇಡ. ಎಂದಿನಿಂದಲೋ ಹೇಳ್ತಿದೀನಿ. ನೀವು ಮುಡಿದರೆ ನೋಡಿ ಸಂತೋಷಪಡ್ತೀನಿ."

"ಮುಖದ ಸುತ್ತಾ ಓಡಾಡಿದರೂ ತುತ್ತು ಬಾಯಿಗೇ ಬರಬೇಕು ಅಲ್ವಾ? ಎಷ್ಟೋಸಲ ಈ ಚರ್ಚೆ ಮ್ಮಾಡಿದೇವೆ. ಬಗೆಹರಿದಿಲ್ಲ. ಕೀಳು, ಕಟ್ಟು, ಮುಡಿ. ಹೆಚ್ಚಾದರೆ ಗುಡಿಯ ಹನುಮ ಇದ್ದೇ ಇದಾನೆ. ಪೂಜಾರಪ್ಪ ಹೂವಿನ ಮಾಲೇನ ಹನುಮನ ಮೇಲೆ ಹಾಕಿ ಬಂದವರಿಗೆಲ್ಲಾ ಪ್ರಸಾದ ಹಂಚುತಾರೆ."

ಅಕ್ಕತಂಗಿಯರಿಬ್ಬರೂ ಜೋರಾಗಿ ನಕ್ಕರು.

ವಿಮಲ, ಪರಿಮಳ ಇಬ್ಬರೂ ಸರಸರನೆ ಹೂವಿನ ಮೇಲೆ ಕೈ ಆಡಿಸುತ್ತಿದ್ದರು. ಪಳಗಿದ ಕೈಗಳ ನಡುವೆ ಹೂವಿನ ರಾಶಿ ಕರಗಿ ಹೆಣೆಯುತ್ತಿದ್ದ ಮಾಲೆ ಉದ್ದವಾಗುತ್ತಿತ್ತು.

ಕೋಮಲ ಪ್ರೇಕ್ಷಕಿ !

ಹೂವು ಕಿತ್ತು ತಂದು ಸುರಿದು ತಂಗಿಯರ ಕೈ ಚಳಕವನ್ನು ಮೆಚ್ಚುಗೆಯಿಂದ ನೋಡುತ್ತ ನಡು ನಡುವೆ ಮಾತಾಡುತ್ತಿದ್ದಳು.

"ಸಮಯಕ್ಕೆ ಬೆಲೆ ಇರುವುದಾದರೆ ನಾವು ಈ ಹೂವಿನ ದೆಸೆಯಿಂದ ದಿನಕ್ಕೆ ಎಷ್ಟು ಗಂಟೆಗಳು ವ್ಯರ್ಥಮಾಡುತ್ತಿದ್ದೇವೆ ಗೊತ್ತೇ ?"

ಬೊಗಸೆಯಲ್ಲಿ ಗದ್ದವೂರಿ ಕುಳಿತ ಕೋಮಲ ತಟ್ಟನೆ ಕೇಳಿದಳು.

ಪಟಾಕಿ ಸಿಡಿದಂತೆ ಪರಿಮಳನ ಉತ್ತರ ಹಿಂಪೆಯೇ ಹಾರಿತು.

"ನಾವು ಹೂವಿಗೆ ಕೈ ಹಾಕದಿದ್ದರೂ ಹೊತ್ತು ಉರುಳುವುದು ನಿಲ್ಲಲ್ಲ. ಮಾತಾಡುತ್ತಲೋ ಬೇರೆ ಏನಾದರೂ ಕೆಲಸ ಮಾಡುತ್ತಲೋ ಹೊತ್ತು ಕಳೆದು ಬಿಡ್ತೀವಿ ಎಚ್ಚರವಾಗಿರುವ ಪ್ರತಿ ನಿಮಿಷವನ್ನೂ ನಾವು ಲೆಕ್ಕಾಚಾರದಂತೆ ಉಪಯೋಗಿಸುವುದು ಅಷ್ಟರಲ್ಲೇ ಇದೆ."

ವಿಮಲ ನಸುಸಕ್ಕಳು. ಅವಳ ಕೆನ್ನೆಗಳಲ್ಲಿ ಗುಳಿ ಮೂಡಿ ನಗುವನ್ನು ತುಂಬಿಕೊಂಡಿತು. ಕೋಮಲ ಪರಿಮಳ ಇಬ್ಬರ ನಡುವೆ ಜರುಗುತ್ತಿದ್ದ ಮಾತಿನ ಚಕಮಕಿಯನ್ನು ನೋಡುವುದು ಅವಳಿಗೆ ಹಿಗ್ಗು.

ಗಂಡುಬೀರಿ ಬಜಾರಿ ಎಂದೆಲ್ಲಾ ಬಿರುದು ಪಡೆದಿದ್ದ ಪರಿಮಳ ಮನೆಯವರೆಲ್ಲರ ಮುದ್ದಿನ ಕಿರಿಯ ಮಗಳು.

ಅವಳು ಅತ್ತರೂ ಚೆನ್ನು. ನಕ್ಕರೂ ಸೊಗಸು. ಹಟ ಮಾಡಿದರೂ ಹಿತ !

ಆದರೂ ಅವಳು ಇಂದು ಎಂದಿನಂತಿಲ್ಲ ಎಂದು ಅಕ್ಕಂದಿರಿಗೆ ತೋರಿತು.

ಮಾತಿನಲ್ಲಿ ಹರಿತವಿಲ್ಲ. ನಗುವಿನಲ್ಲಿ ಸೊಗಸಿಲ್ಲ.

ಏನೋ ಯೋಚನೆ. ನೆನಪಿನ ಆಳವನ್ನು ಕೆದುಕುವಂತಿದ್ದ ಒಳನೋಟ, ಯಾಂತ್ರಿಕವಾಗಿ ಮಾತಾಡಿದರೂ ಅದರಲ್ಲಿ ಚೈತನ್ಯದ ಸುಳಿವೂ ಇಲ್ಲ.

"ಪರಿ ... ಈ ಸಲ ನಮ್ಮ ವ್ಯಾಜ್ಯವನ್ನು ಅಪ್ಪನ ಬಳಿ ಒಯ್ಯೋಣ. ಅವರ ತೀರ್ಪಿಗೆ ನಾವು ಬದ್ಧ."

"ಯಾವ ವ್ಯಾಜ್ಯವೇ ?"

ಕನಸಿನಿಂದ ಎಚ್ಚತ್ತವಳಂತೆ ಕೇಳಿದಳು ಪರಿಮಳ.

"ಅದೇ.... ಹೂವಿನದು."

"ಅದರಲ್ಲಿ ವ್ಯಾಜ್ಯವೇನು ಬಂತು ?"

"ವ್ಯಾಜ್ಯ ಎನ್ನದಿದ್ದರೂ ಭಿನ್ನಾಭಿಪ್ರಾಯ ಬಂದಿದೆಯಲ್ಲ ! ಹೂವಿನ ನೆವದಲ್ಲಿ ನಾವು ಇಷ್ಟು ಹೊತ್ತು ದಂಡ ಮಾಡುವುದು ಸರಿಯೇ ? ಅಪ್ಪ ಸರಿಯಲ್ಲ ಎಂದು ತೀರ್ಪಿತ್ತರೆ ನಾಳೆಯಿಂದ ಗಿಡಕ್ಕೆ ಕೈ ಹಾಕೋದೇ ಇಲ್ಲ."

ಕೋಮಲ ದೃಢವಾಗಿ ಹೇಳಿದಳು.

"ಇಷ್ಟು ಸಣ್ಣ ವಿಷಯಕ್ಕೆಲ್ಲ ಅವರ ಬಳಿ ಹೋದರೆ ಅಪ್ಪ ನಕ್ಕು ಬಿಡ್ತಾರೆ"

ವಿಮಲ ಅನುಮಾನಿಸಿದಳು.

"ಅಮ್ಮ . ?"

"ಅಮ್ಮನಿಗೆ ನಾವು ಏನು ಮಾಡಿದರೂ ಚೆನ್ನ."

"ಮತ್ತೇ ..?"

"ನಾವು ಚಿಕ್ಕವರಾಗಿದ್ದಾಗ ನಮ್ಮ ಜಗಳ ತೀರಿಸುತ್ತಿದ್ದವರು ಯಾರು?"

"ಶ್ರೀನಾಥ" ಎರಡು ಧ್ವನಿ ಒಟ್ಟಿಗೇ ಕೂಗಿದುವು

"ಅವನ ತೀರ್ಪು ನಮಗೆಲ್ಲಾ ಒಪ್ಪಿಗೆಯಾಗಿತ್ತು."

"ಅದು ಸರಿ ಆದರೆ ಶ್ರೀನಾಥ ಎಲ್ಲಿದಾನೋ ? ಅವನನ್ನ ಎಲ್ಲಿ ತರೋಣ ?"

"ಇದುವರೆಗೆ ಎಲ್ಲಿದ್ದನೋ ಗೊತ್ತಿಲ್ಲ. ಈಗಂತೂ ಬರ್ತಾನೆ ಇಲ್ಲಿಗೆ,"

ಪರಿಮಳ ಗಂಭೀರವಾಗಿ ಹೇಳಿದಳು ಎದೆಯೊಳಗೆ ಕುದಿಯುತ್ತಿದ್ದ ಸುದ್ದಿಯನ್ನು ಹರಡಿ ಹಗುರವಾಗಿ ನಕ್ಕಳು. ಅಕ್ಕಂದಿರ ಮುಖದಲ್ಲಿ ಕಾಣಿಸಿದ ಆಶ್ಚರ್ಯ ಸಂತಸ ನೋಡಿ ಅವಳಿಗೆ ಕೋಡು ಮೂಡಿದಷ್ಟು ಹೆಮ್ಮೆ !

"ನಿಜವಾ....ಪರಿ ? ನಿನಗೆ ಹೇಗೆ ಗೊತ್ತು ?"

ವಿಮಲ ಸಂತಸದಿಂದ ಕೇಳಿದಾಗ ಹಿಗ್ಗಿನಿಂದ ಅವಳ ಮುಖದ ಚೆಲುವೂ ಹಿಗ್ಗಿದಂತೆ ಕಾಣಿಸಿತು.

"ನಮ್ಮ 'ಶ್ರೀ' ಎಲ್ಲಿದ್ದನೋ ಇಷ್ಟು ದಿವಸ ? ಈಗ ಇದ್ದಕ್ಕಿದ್ದಂತೆ ಸಿಡಿಲಿನಂತೆ ಧುಮುಕಬೇಕಾದರೆ ?"

"ಕೋಮಲಕ್ಕ .ಶ್ರೀನಾಥನನ್ನ ಸಿಡಿಲಿಗೆ ಹೋಲಿಸಲು ಮನಸ್ಸಾದರೂ ನಿನಗೆ ಹೇಗೆ ಬರುತ್ತೆ ? ಮಿಂಚಿನಂತೆ, ತಂಗಾಳಿಯಂತೆ ಎಂದಿದ್ದರೆ ..." ಪರಿಮಳ ಗುಡುಗಿದಳು.

"ಸಿಡಿಲೋ .. ಮಿಂಚೋ ? ಅವನು ಬರೋದು ಮುಖ್ಯ. ನಿನಗೆ ಹೇಗೆ ಗೊತ್ತಾಯ್ತು ? ಕಾಗದ ಬರೆದಿದ್ದನೆ ನಿನಗೆ ?" ಅಸೂಯೆ ವಿಮಲಳ ಧ್ವನಿಯಲ್ಲಿ ಇಣುಕಿತ್ತು.

"ನನಗೆ ಬರೆದಿಲ್ಲ. ಅಪ್ಪ, ಅಮ್ಮ ಅವ ಬರ್ತಾನೆ ಅಂತ ಮಾತಾಡುತ್ತಿದ್ದುದು ಕೇಳಿಸಿತು."

"ನಮಗೇಕೆ ಹೇಳಲಿಲ್ಲ ?"

"ನಮಗೆ ತಿಳಿಸುವುದು ಬೇಡವೆಂದು ಬರೆದಿದಾನಂತೆ. ಧುಡುಮ್ಮನೆ ಧುಮುಕಿ, ನಮ್ಮ ವಿಸ್ಮಯ ನೋಡಲೆಂದು ಆಸೆಯೇನೋ ?"

"ವಿಸ್ಮಯವಾಗೋದು ಈಗ ಅವನಿಗೆ. ನಮಗಲ್ಲ. ನಮ್ಮ ಪರಿ ಒಂದು ರತ್ನ. ಎಲ್ಲೋ ಹೇಗೋ ಸುದ್ದಿ ಪತ್ತೆ ಮಾಡಿದಾಳೆ ನಡೀರಿ ನಾವೆಲ್ಲಾ ಸಿದ್ಧವಾಗೋಣ."

ಅಕ್ಕಂದಿರು ಅವಳನ್ನು ಬಾಚಿ ತಬ್ಬಿಕೊಂಡರು. ಹೂವು ದಾರ ಎಲ್ಲವನ್ನೂ ಮರೆತು ಓಡಿದರು.

ಶ್ರೀನಾಥ ಬಂದಾಗ ಮನೆ ನಿಶ್ಶಬ್ದವಾಗಿತ್ತು.

ಗಾಡಿ ನಿಂತ ಸದ್ದು ಕೇಳಿ ರಾಮಯ್ಯ ಬಾಗಿಲು ತೆಗೆದು ಹೊರಗೆ ಬಂದರು. ಗಂಗಮ್ಮ ಕೆಲಸವನ್ನು ಅರ್ಧಕ್ಕೆ ಬಿಟ್ಟು ಹಾರಿಬಂದು ಗಂಡನಿಗಿಂತ ಎರಡು ಹೆಜ್ಜೆ ಮುಂದೆಯೇ ನಿಂತರು.

ಶ್ರೀನಾಥ ..! ಉದ್ದ ನಿಲುವು, ಅದಕ್ಕೆ ಒಪ್ಪುವ ಮೈಕಟ್ಟು, ಬುದ್ಧಿವಂತಿಕೆಯನ್ನು ಸಾರುವ ಹೊಳಪು ಕಣ್ಣುಗಳು, ಎತ್ತರವಾದ ಹಣೆ, ಮುಖದಲ್ಲಿ ಅರಳಿನಿಂತ ನಗುವಿನೊಡನೆ ಶ್ರೀನಾಥ ಒಳಗೆ ಬಂದ. ಸಂತಸದ ಮಹಾಪೂರವನ್ನೇ ಹರಿಸಿದಂತೆ ಉಲ್ಲಾಸ ಅವನೊಡನೆ ಮನೆ ಹೊಕ್ಕಿತು.

ರಾಮಯ್ಯ ದಂಪತಿಗಳು ನಿಷ್ಕಾರಣವಾಗಿ ಮಕ್ಕಳಂತೆ ಕಿಲಕಿಲನೆ ನಕ್ಕು ಅವನನ್ನು ಸ್ವಾಗತಿಸಿದರು.

"ಹುಶ್ ..."ಎನ್ನುವಂತೆ ತುಟಿಯಮೇಲೆ ಬೆರಳಿಟ್ಟು ಶ್ರೀನಾಥ ಪಿಸುಗುಟ್ಟಿದ.

"ಎಲ್ಲಿ ಹುಡುಗರು ? ನಾನು ಬರೋದು ಅವರಿಗೆ ಗೊತ್ತಿಲ್ಲ ತಾನೇ ?"

"ಇಲ್ಲ ... ಇಲ್ಲ" ಇಬ್ಬರೂ ತಲೆ ಅಲ್ಲಾಡಿಸಿದರು.

ಸಾಮಾನುಗಳನ್ನು ಸದ್ದಾಗದಂತೆ ಜೋಡಿಸಿಟ್ಟು ಬೂಟು ಕಳಚುತ್ತಾ ಮತ್ತೆ ಕೇಳಿದ.

"ಒಳಗೆ ಇದಾರೆಯೇ ?"

"ಹೂ ..ಅಂತಃಪುರದಲ್ಲಿದಾರೆ "

"ಅಂತಃಪುರ! ಮತ್ತೊಮ್ಮೆ ನಗು ಹರಿದಾಡಿತು. ಹುಡುಗಿಯರ ಬಿಡುವಿಲ್ಲದ ಮಾತು, ಕಿಲಕಿಲ ನಗೆ, ತಮ್ಮ ಕೆಲಸಕ್ಕೆ ತೊಂದರೆಯಾಗುವುದೆಂದು ರಾಮಯ್ಯ ಹಾಲಿನ ಹಿಂಭಾಗಕ್ಕೆ ಇದ್ದ ದೊಡ್ಡ ಕೋಣೆಯನ್ನು ಅವರಿಗೆ ಕೊಟ್ಟಾಗ ಶ್ರೀನಾಥ ಅದನ್ನು 'ಅಂತಃಪುರ' ಎಂದು ಗೇಲಿ ಮಾಡಿದ್ದ.

ಅದೊಂದು ಪದ ಹಳೆಯ ನೂರಾರು ನೆನಪುಗಳ ಚಿಲುಮೆಯನ್ನು ಚಿಮ್ಮಿಸಿತು.

ಶ್ರೀನಾಥ ಹೆಸರಿಗೆ ತಕ್ಕಂತೆ ಸಿರಿವಂತನಲ್ಲ. ರಾಮಯ್ಯನ ದೂರದ ನೆಂಟ. ಅಲ್ಲಿ ಕಾಲೇಜಿನಲ್ಲಿ ಓದುತ್ತಿದ್ದಾಗ ಆಗಾಗ ಇವರ ಮನೆಗೆ ಬರುತ್ತಿದ್ದ.

ಬರೀ ಹೆಣ್ಣುಮಕ್ಕಳನ್ನೇ ಪಡೆದಿದ್ದ ಆ ದಂಪತಿಗಳಿಗೆ ಮಗನಂತೆ ವಾತ್ಸಲ್ಯ ಅವನ ಮೇಲೆ. ಅವನೂ ಅಷ್ಟೇ, ತನ್ನ ಸರಳ ಸ್ವಭಾವ, ಬಿಚ್ಚು ಮಾತಿನ ಲಹರಿಯಿಂದ ಎಲ್ಲರಿಗೂ ಅಚ್ಚುಮೆಚ್ಚು. ದೊಡ್ಡವರ ಎಲ್ಲ ಕೆಲಸಕ್ಕೂ ನೆರವು.

ಚಿಕ್ಕವರಾದ ಹುಡುಗಿಯರಂತೂ ವಯಸ್ಸಿನ ಅಂತರವನ್ನು ಮರೆತು ಅವನೊಡನೆ ಆಡುವರು ಎಲ್ಲದಕ್ಕೂ ಅವನ ಜೊತೆ. ಜಗಳ ಬಂದರೆ ಅವನೇ ಸಮಾಧಾನ ಮಾಡಬೇಕು.

ಇಟ್ಟರೆ, ತೊಟ್ಟರೆ, ಅವನು ನೋಡಿ ಮೆಚ್ಚಿದರೆ ಸಾಕು. ಅವನು ಓದು ಮುಗಿಸಿ ಹೊರಟುಹೋದ ಮೇಲೆ ಮನೆ ಬಿಕೋ ಎನಿಸಿತು. ಬಾಡಿದ ಹೂವುಗಳಂತೆ ಮನಸ್ಸೂ ಮುದುರಿತ್ತು.

ಆ ಎಳೆಯ ಹೃದಯಗಳಿಗೆ ಎಷ್ಟು ಹತ್ತಿರವಾಗಿದ್ದ ತಾನು?

ಸದ್ದಾಗದಂತೆ ಮೆಲ್ಲಗೆ ಹೆಜ್ಜೆ ಹಾಕುತ್ತಾ ಒಳಕ್ಕೆ ನಡೆದ ಅವನು. ರಾಮಯ್ಯನಕ್ಕು ತಮ್ಮ ಕೋಣೆ ಸೇರಿದರು ಗಂಗಮ್ಮ ಅರ್ಧದಲ್ಲಿ ನಿಲ್ಲಿಸಿದ್ದ ಕೆಲಸದತ್ತ ಧಾವಿಸಿದರು.

ಖಾಲಿ ಕೋಣೆ, ಅವನನ್ನು ಬೆರಗುಗೊಳಿಸಿತು. ಎದುರಿಗೆ ಚಾಪೆಯ

ಮೇಲೆ, ಕಟ್ಟದೇ ಉಳಿದಿದ್ದ ಹೂವು, ಅಲ್ಲಲ್ಲಿ ಎರಚಾಡಿದಂತಿದ್ದು, ಕಂಪು ಸೂಸಿ ಸ್ವಾಗತಿಸಿತು.

ಎಲ್ಲಿ ಅವರು ? ಸುಳಿವೇ ಇಲ್ಲ.

ಶ್ರೀನಾಥ ಒಂದು ಕ್ಷಣ ಬೆರಗಾಗಿ ನಿಂತು ಸುತ್ತಲೂ ನೋಟ ಹರಿಸಿದ. ಅದೇ ಪರಿಚಿತ ವಾತಾವರಣ.

ಇನ್ನೂ ನಿನ್ನೆ ಮೊನ್ನೆ ಇಲ್ಲಿಗೆ ಬಂದು ನಕ್ಕು ನಲಿದಂತಿದೆ. ಪರಿಮಳ ...! ಲಂಗ ಉಟ್ಟ ದಿಟ್ಟ ಹುಡುಗಿ. ಹಿಂದಿನಿಂದ ಬಂದು ಬೆನ್ನಿನ ಮೇಲೆ ಬಾಗಿ ಕಣ್ಮುಚ್ಚಿದಾಗ ? ತನ್ನ ಒರಟು ಕೈಗಳಿಂದ ಆ ಕೋಮಲ ಬೆರಳಗಳನ್ನು ಒತ್ತಿ ಹಿಡಿದು ಕಿರುಗುಟ್ಟಿಸಿದ್ದು ? ಈಗಲೂ ಅವಳು ಹಿಂದಿನಿಂದ ಬರುವಳೋ ?

ಎದರು ಗೋಡೆಯ ಮೇಲೆ ಹಾಕಿದ್ದ ಚಿತ್ರ ? ಸ್ವಲ್ಪ ಓರೆಯಾಗಿ ಒಂದು ಪಕ್ಕಕ್ಕೆ ವಾಲಿದಂತೆ ಇದ್ದುದು ಈಗಲೂ ಹಾಗೇ ಇದೆ.

ಈ ಐದು ವರ್ಷಗಳಲ್ಲಿ ಯಾರೂ ಅದನ್ನು ಗಮನಿಸಿಯೇ ಇಲ್ಲವೋ ?

ಶ್ರೀನಾಥನಿಗೆ ನಗಬೇಕು ಎನಿಸಿತು. ಹಿಂದು ಇಂದು ಎಲ್ಲವನ್ನೂ ಮರೆತು ಜೋರಾಗಿ ನಕ್ಕ. ಯಾವುದೋ ಶಕ್ತಿಯಿಂದ ಆಕರ್ಷಿತನಾದವನಂತೆ ಚಾಪೆಯ ಮೇಲೆ ಮಂಡಿಯೂರಿ ಬೊಗಸೆಯ ತುಂಬ ಹೂವು ಹಿಡಿದು ಅದನ್ನು ನಿಧಾನವಾಗಿ ಬೆರಳುಗಳ ಸಂದಿನಿಂದ ತೂರಿಸಿದ

ಸೀರೆಯ ನೆರಿಗೆಯ ಮುರ ಮುರ ಸದ್ದು, ಬಳೆಗಳ ಕಿಂಕಿಣಿ ನಾದ. ನಿಧಾನವಾಗಿ ಹೆಜ್ಜೆ ಎತ್ತಿಡುತ್ತ ತೇಲಿ ಬಂದರು, ಮೂವರು ರೂಪಸಿಯರು, ಚೆಲುವಿನ ಪುತ್ಥಳಿಗಳಂತೆ ಸಿಂಗರಿಸಿಕೊಂಡು.

ಶ್ರೀನಾಥ ತಟ್ಟನೆ ಎದ್ದು ನಿಂತ. ತನ್ನ ಕಣ್ಣು ಮೋಸಮಾಡುತ್ತಿದೆ ಎನಿಸಿತು. ಎಲ್ಲಿ ಆ ಮಕ್ಕಳು ? ಬೆನ್ನಿನ ಮೇಲೆ ಒರಗಿ ಕಚಗುಳಿ ಇಟ್ಟು ಆಟ ಆಡುತ್ತಿದ್ದ ಮುಗ್ಧೆಯರು ?

ನಾಲಿಗೆ ತೊದಲಿತು. ಮೂಕನಂತೆ ದಿಟ್ಟಿಸಿದ.

"ಶ್ರೀ...." ಪರಿಮಳ ಕೂಗಿ ವಾತಾವರಣವನ್ನು ಆವರಿಸಿದ್ದ ಮೌನ ವನ್ನು ಕಲಕಿದಳು.

ಮುಕ್ಷಣದಲ್ಲಿ ಹುಡುಗಿಯರು ಹತ್ತಿರ ಬಂದು ಕೇಳಿದರು–

ನಮ್ಮ ನೆನಪು ಬಂತೆ ? ಎಲ್ಲಿದ್ದೆ ಇಷ್ಟು ದಿನ ?"

* * *

ಐದು ದಿನಗಳು ಐದು ನಿಮಿಷಗಳಂತೆ ಉರುಳಿ ಹೋಗಿದ್ದುವು ಊಟ, ತಿಂಡಿ, ಮಾತು, ನಗು !

ಐದು ವರ್ಷಗಳ ತನ್ನ ದಿನಚರಿಯನ್ನೇ ಮುಂದೆ ಇಟ್ಟರೂ ಹುಡುಗಿಯರ ಪ್ರಶ್ನೆ ಮುಗಿಯುವಂತೆಯೇ ಇರಲಿಲ್ಲ.

ಕಳೆದುಹೋದ ಕವಡೆಯನ್ನು ಕತ್ತಲಲ್ಲಿ ತಡಕುವಂತೆ ಶ್ರೀನಾಥ ಕಳೆದು ಹೋದ ದಿನಗಳ ನೆನಪನ್ನು ತಡವರಿಸಿದ.

ಮತ್ತೆ ಆ ದಿನಗಳ ಸೊಗಸು ಕಾಣುವುದು ಎಂದಿಗಾದರೂ ಸಾಧ್ಯವೇ ? ಕುಣಿದಾಡುತ್ತಿದ್ದ ಹುಡುಗಿಯರು ಯೌವನದಲ್ಲಿ ಕಾಲಿಟ್ಟು ಹೊಸ ಪ್ರಪಂಚದಲ್ಲಿ ಸುಳಿದಾಡುತ್ತಿದ್ದಾರೆ.

ಅವರ ಮಾತಿನಲ್ಲಿ, ಆದರಿಸುವುದರಲ್ಲಿ ಕೊರತೆ ಇಲ್ಲ ಆದರೂ ..ಅವರ ನಡುವೆ ಅಂತರ ಹರವಿದಂತಾಗಿದೆ.

ಈ ಅನುಭವ ಹುಡುಗಿಯರಿಗೂ ಆಗುತ್ತಿದೆ. ಶ್ರೀನಾಥ ಬರುವ ಎಂದು ತಿಳಿದಾಗ ಹರಿದ ಸಂತಸದ ಹೊನಲಿನಲ್ಲಿ ಈಗ ವಿದ್ಯುತ್ ಪ್ರವೇಶವಾದ ಅನುಭವ !

ದೊಡ್ಡವರೂ ಎಚ್ಚೆತ್ತರು. ಎಚ್ಚರಗೊಳ್ಳಲೇಬೇಕು.

ಮಕ್ಕಳ ಆಟದಲ್ಲಿ ಸಂತೋಷ ಕಾಣುತ್ತಿದ್ದವರು ಈಗ ಅದರ ಉಪಯೋಗವೂ ಕಾಣುವ ಕಾಲ ಬಂದಿದೆ.

ವ್ಯವಹಾರ ಜ್ಞಾನ ಎದ್ದು ನಿಂತಿದೆ.

ಮೂರು ಹೆಣ್ಣುಮಕ್ಕಳಿಗೂ ಹೆಚ್ಚು ವಯಸ್ಸಿನ ಅಂತರವಿಲ್ಲ. ಇಂದೇ ಬೇಕಾದರೂ ಮದುವೆ ಮಾಡುವಂತೆ ಬೆಳೆದಿದಾರೆ. ಎರಡು ವರ್ಷಗಳಲ್ಲಿ ಮಕ್ಕಳ ಮದುವೆಯ ಚಿಂತೆ ಅವರನ್ನು ಸಾಕಷ್ಟು ಕಾಡಿಸಿದೆ.

ಹತ್ತಾರು ವರಗಳನ್ನು ಹುಡುಕುತ್ತಿದ್ದಾಗ ತಮಗೆ ಶ್ರೀನಾಥನ ನೆನಪು ಬಾರದುದಕ್ಕೆ ಅವರಿಗೇ ಅಚ್ಚರಿ !

ಶ್ರೀನಾಥ ಎಂದರೆ ಮಕ್ಕಳ ಜೊತೆ ಹುಡುಗು ಹುಡುಗಾಗಿ ಕುಣಿಯುವ ಸರಳ ವಿದ್ಯಾರ್ಥಿ. ಅದೇ ಚಿತ್ರ.

ಉದ್ಯೋಗಸ್ಥನಾಗಿ, ಸಂಪಾದಿಸುತ್ತಿರುವ, ಪ್ರೈ ತುಂಬಿದ ತರುಣ ಒಮ್ಮೆಗೇ ಎದುರಿಗೆ ಬಂದಾಗ ಅವರಿಬ್ಬರೂ ನಿಚ್ಚಳವಾಗಿ ಕಣ್ಣು ತೆರೆದರು ಅವನಲ್ಲಿ ಅಳಿಯನಾಗುವವನನ್ನು ಕಂಡರು.

ಒಬ್ಬ ಮಗಳ ಭವಿಷ್ಯ ಸುಖವಾಗುವುದು. ಅದರಲ್ಲಿ ಸಂದೇಹವೇ ಇಲ್ಲ. ಮತ್ತೆ ಧುತ್ತೆಂದು ಭೂತಾಕಾರವಾಗಿ ಪ್ರಶ್ನೆ ಎದುರಾಯಿತು.

"ವ ೂವರಲ್ಲಿ ಯಾರು ?"

ಗಂಗಮ್ಮ ಕ್ಷೀಣವಾಗಿ ಕೇಳಿದರು.

"ಒಳ್ಳೇ ಚೆನ್ನಾಗಿ ಕೇಳ್ತೀಯಲ್ಲಾ. ಕೋಮಲ ದೊಡ್ಡವಳು. ಅವಳ ವಿಚಾರ ಮೊದಲು ಯೋಚಿಸು "

"ಅದು ನನಗೂ ಗೊತ್ತು. ಆದರೆ ಶ್ರೀನಾಥ ಎಂದರೆ ...?"

"ಎಂದರೆ . ಏನು ?"

"ಮೂರು ಜನವೂ ಅವನನ್ನು ಅತಿಯಾಗಿ ಹಚ್ಚಿಕೊಂಡಿದ್ದಾರೆ. ಅವನೂ ಅಷ್ಟೆ."

"ಅದರಿಂದ ...?"

"ಆದರಿಂದ ಅಕ್ಕತಂಗಿಯರಲ್ಲೇ ವೈಮನಸ್ಸು ಉಂಟಾದೀತು. ನೀವೂ ಒಂದು ದಿನ ಗಮನಿಸಿ ನೋಡಿ "

"ನಾನೂ ಕಣ್ಣು ಮುಚ್ಚಿಕೊಂಡಿಲ್ಲ ಗಂಗಾ "

"ಮತ್ತೆ ತಿಳಿದೂ ತಿಳಿದೂ .."

"ಹಾಗಾದರೆ ಶ್ರೀನಾಥನ ವಿಚಾರ ಮರೆಯೋಣ ಅವನು ಮೊದಲಿನಂತೆ ಮಗನಾಗಿಯೇ ಉಳಿಯಲಿ."

"ಅವನೇ ಒಬ್ಬರನ್ನು ಇಷ್ಟಪಟ್ಟರೆ ? ಆಗ ನಮ್ಮ ಮೇಲೆ ಆಕ್ಷೇಪಣೆ ಇರಲ್ಲ. ನನಗೆ ಎಲ್ಲರೂ ಸುಖವಾಗಿರಲೆಂದೇ ಆಸೆ. ಶ್ರೀನಾಥನಂತಹ ಹುಡುಗನ್ನ ಬಿಡೋದಕ್ಕೂ ಮನಸ್ಸಿಲ್ಲ."

"ನೋಡೋಣ....ಆವನನ್ನೇ ಕೇಳೋಣ."

* * *

ರಾಮಯ್ಯ ಶ್ರೀನಾಥ ಒಬ್ಬನೇ ಇರುವ ಸಮಯ ಸಾಧಿಸಿ ತಮ್ಮ ಸಲಹೆ ಮುಂದಿಟ್ಟರು.

ಬೆಚ್ಚಿದ ಶ್ರೀನಾಥ !

ಇದೆಂತಹ ಸಂದಿಗ್ಧ ?

"ನಿಧಾನವಾಗಿ ವಿಚಾರ ಮಾಡು ಆತುರವೇನಿಲ್ಲ"–ಎಂದರು ರಾಮಯ್ಯ.

ಶ್ರೀನಾಥ ಇಡೀ ರಾತ್ರಿ ಕಣ್ಣು ಮುಚ್ಚಲಿಲ್ಲ. ಎಂತಹ ಇಕ್ಕಟ್ಟಿನಲ್ಲಿ ಸಿಕ್ಕಿದ್ದಾಗಿದೆ !

ಮೂವರೂ ಮೂರು ರತ್ನಗಳು ಇದ್ದಂತೆ. ಅವನಿಗೆ ಎಲ್ಲರಲ್ಲೂ ಮೆಚ್ಚಿಗೆ. ದೊಡ್ಡವರು ತಾವಾಗಿ ಯಾರನ್ನು ಹೇಳಿದ್ದರೂ ಸಂತೋಷದಿಂದ ಕೈ ಹಿಡಿಯಲು ಸಿದ್ಧವಾಗಿದ್ದ.

ಆದರೇ....ಮೂವರಲ್ಲಿ ಒಬ್ಬಳನ್ನು ನೀನೇ ಆರಿಸಿಕೋ ಎಂದರೆ ? ಅತಂಹ ಕಠಿಣ ಪ್ರಶ್ನೆ ಮತ್ತೊಂದಿಲ್ಲ !

'ಯಾರು ಹಿತವರು ನಿನಗೆ ಈ ಮೂವರೊಳಗೆ ?' ಎಲ್ಲಿಯೋ ಕೇಳಿದ ಹಾಡು ಮತ್ತೆ ಕಿವಿಯಲ್ಲಿ ಗುಯ್‌ಗುಟ್ಟಿತು.

ಶ್ರೀನಾಥ ಹಾಸಿಗೆಯಲ್ಲಿ ಹೊರಳಾಡಿದ. ದೊಡ್ಡದಾಗಿ ಕಣ್ಣು ಬಿಟ್ಟು ತಾರಸಿಯನ್ನು ದಿಟ್ಟಿಸಿದ

ಊಹೂಂ....ಪ್ರಶ್ನೆ ಬಗೆಹರಿಯಲಿಲ್ಲ

ಹಾಸಿಗೆಯಿಂದ ಎದ್ದು ಕಿಟಕಿಯ ಬಳಿ ಬಂದು ನಿಂತು. ಹೊರಗೆ ಬೆಳದಿಂಗಳು ಹಾಲಾಗಿ ಹರಡಿತ್ತು

ಪುನಃ ಹೃದಯವನ್ನು ಕೆದಕಲು ಪ್ರಯತ್ನಿಸಿದ.

ಯಾರು? ಯಾರು ? ಯಾರು ?

ಕೋಮಲ ..? ಹೆಸರಿಗೆ ತಕ್ಕಂತೆ ನಿಜವಾಗಿ ಕೋಮಲೆ. ಮರೆತೂ ಒಬ್ಬರಿಗೆ ಕಠಿಣವಾಗಿ ನುಡಿಯಲಾರಳು.

ನಡೆ ನುಡಿ ಎಲ್ಲವೂ ಕೋಮಲ. ಅರಿತೋ ಅರಿಯದೆಯೋ ಗಂಡ ಎನಿಸಿಕೊಂಡವನು ತಪ್ಪಿ ನಡೆದರೂ ಅದು ಕ್ಷಮಾರ್ಹ, ಅವಳ ಬಳಿ ಖಂಡಿತ ಭಯವಿಲ್ಲ !

ವಿಮಲಾ... ? ರೂಪಸಿ ವಿಮಲಾ. ಮತ್ತಿಬ್ಬರು ಲಕ್ಷಣವಾಗಿದ್ದರೂ ವಿಮಲಳ ಎದುರು ಸಪ್ಪೆ.

ಓಹ್....ಅದೆಂತಹ ಚೆಲುವು ಅವಳದು ? ಒಂದು ನಗೆ ಸಾಕು ಯಾರ

ನ್ನಾದರೂ ಸೆರೆ ಹಿಡಿಯಲು. ನಗು ಗಲ್ಲದ ಗುಳಿಯನ್ನು ತುಂಬಿ ಹೊರಗೆ ಹರಿದಾಗ ?

ಅವಳನ್ನು ಬೇಡ ಎನ್ನಲು ಎಂಟೆದೆ ಬೇಕು !

ಶ್ರೀನಾಥ ನಿಟ್ಟುಸಿರುಬಿಟ್ಟ. ಬೆಳದಿಂಗಳಿನಲ್ಲೂ ಹಣೆಯ ಮೇಲೆ ಬೆವರು ಕಾಣಿಸಿತು ಹೆಗಲಮೇಲಿದ್ದ ಟವೆಲಿನಿಂದ ಗಾಳಿ ಹಾಕಿಕೊಂಡ, ಹಿತವೆನಿಸಲಿಲ್ಲ. ಮತ್ತೆ ಹೋಗಿ ಹಾಸಿಗೆಯ ಮೇಲೆ ಉರುಳಿದ.

ಕಾಲಿನ ಗೆಜ್ಜೆಯನ್ನು ಝಣ ಝಣ ಎನಿಸುತ್ತ ನೃತ್ಯ ಭಂಗಿಯಲ್ಲಿ ಪರಿಮಳ ಎದುರು ನಿಂತಂತಾಯ್ತು.

ಓ ...ಚೈತನ್ಯವಾಹಿನಿ ಅವಳು ! ಬೆನ್ನಿಗೆ ಒರಗಿ ಕಣ್ಣು ಮುಚ್ಚಿದರೆ ಅವಳ ಬೆರಳುಗಳಿಂದ ಚೈತನ್ಯ ಹರಿದು ಬಂದು ಇಡೀ ದೇಹವನ್ನು ವ್ಯಾಪಿಸಿದಂತೆ ಆಗುವುದಿಲ್ಲವೆ ?

ಆ ತುಂಟನಗು....ಸೋಲು ಒಪ್ಪದ ಹೋರಾಡುವ ಮನೋಭಾವ ಅವಳೊಡನೆ ಸೆಣೆಸಿ ಮಣಿಸುವುದರಲ್ಲಿ ಎಂತಹ ತೃಪ್ತಿ ಸಿಗುವುದೋ ? ಸೋತರೂ ಸುಖ ಗೆದ್ದರೂ ಹೆಮ್ಮೆ !

ಅಂತಹ ಹುಡುಗಿಯೊಡನೆ ಬಾಳ್ವೆ, ನಿತ್ಯನೂತನ.

ಇದರಲ್ಲಿ ಯಾರನ್ನಾದರೂ ವರಿಸಬಹುದಾದ ಭಾಗ್ಯ ತನ್ನದು. ಇಂತಹ ಅವಕಾಶ ಎಷ್ಟು ಜನರಿಗೆ ದೊರಕೀತು ?

ಆದರೂ ..ಆದರೂ....ಈ ಸುಖ ಸಂಕೋಲೆಯಂತೆ ಬಿಗಿಯಾಗುತ್ತಿದೆ.

ಆಯ್ಕೆ ಖಂಡಿತಾ ಸುಲಭವಲ್ಲ.

ಶ್ರೀನಾಥ ಕಣ್ಣು ಮುಚ್ಚಿ ನಿದ್ರಿಸಲು ಪ್ರಯತ್ನಿಸಿದ.

* * *

ಬೆಳಗ್ಗೆ 'ಅಂತಃಪುರ'ದಲ್ಲಿ ಕಾಫಿಯನ್ನು ಕುಡಿಯುವಾಗ ವಾತಾವರಣ ಒಂದು ರೀತಿ ಬಿಗಿಯಾಗಿತ್ತು.

"ಶ್ರೀ ...ಏಕೆ ಹೀಗಿದಿ ? ಹುಷಾರಿಲ್ಲವಾ ?"

ಪರಿಮಳ ಅವನ ಮುಖ ನೋಡಿದ ಕೂಡಲೇ ಆತಂಕದಿಂದ ಜೋರಾಗಿ ಕೇಳಿದಳು.

"ಓ....ನನಗೇನಾಗಿದೆ ? ನಿನಗೆ ಇನ್ನೂ ನಿದ್ರೆಯ ಮಬ್ಬು, ಅಷ್ಟೆ"

ಶ್ರೀನಾಥ ಹಗುರವಾಗಿ ನಕ್ಕಂತೆ ಮಾಡಿದ.

ಹುಡುಗಿಯರೂ ಕಿಲಕಿಲನೆ ನಕ್ಕರು. ಸಂತಸ ತುಂಬಿರದ ಟೊಳ್ಳು ನಗೆ.

ರಾತ್ರಿಯೆಲ್ಲಾ ಯೋಚನೆ ಮಾಡಿ ಯಾವ ನಿರ್ಧಾರಕ್ಕೂ ಬರಲಾರದೆ ತೊಳಲಾಡಿದ್ದ ಶ್ರೀನಾಥ. ತನ್ನ ಹೆಗಲಿಗೆ ತೊಡಿಸಿದ್ದ ಹೊರೆಯನ್ನು ಹುಡುಗಿಯರಿಗೇ ತಗುಲಿ ಹಾಕೋದು.

ಅವರೇ ತಮ್ಮೊಳಗೆ ನಿಶ್ಚಯಿಸಲಿ ಎಂಬ ತೀರ್ಮಾನಕ್ಕೆ ಬಂದಿದ್ದ. ಅದನ್ನು ಅವರಿಗೆ ಹೇಗೆ ಹೇಳೋದು ?

"ನಿಮ್ಮಲ್ಲಿ ಒಂದು ಪ್ರಾರ್ಥನೆ ಇದೆ. ಬೇಸರವಿಲ್ಲದೆ ಕೇಳಬೇಕು"

ಕಾಫಿಯ ಲೋಟವನ್ನು ಬದಿಗೆ ಸರಿಸಿ, ನಾಟಕೀಯವಾಗಿ ಕೈ ಮುಗಿದುಕೊಂಡು ಶ್ರೀನಾಥ ಆರಂಭಿಸಿದ.

"ಸಾಕಪ್ಪ ಅಭಿನಯ. ಹೇಳಬೇಕಾದ್ದನ್ನು ಸೀದಾ ಹೇಳು ಇಷ್ಟೆಲ್ಲಾ ಪೀಠಿಕೆ ಯಾಕೆ ?"

ಶ್ರೀನಾಥ ಗಂಟಲು ಸರಿಮಾಡಿಕೊಂಡ. ತಲೆ ಕೆರೆದ ಕೊನೆಗೆ ಕಣ್ಣು ಗಳಲ್ಲಿ ತುಂಟನಗೆ ತುಳುಕಿಸುತ್ತಾ ಸೂಕ್ಷ್ಮವಾಗಿ ಪರಿಸ್ಥಿತಿಯನ್ನು ವಿವರಿಸಿದ.

ತನ್ನ ಮಾತಿನ ಪರಿಣಾಮವನ್ನು ಕಣ್ಣಿನ ಕೊನೆಯಿಂದ ನಿರುಕಿಸಿದ. ಏನಾಗಬಹುದು ? ಗುಡುಗೇ ? ಸಿಡಿಲೇ ? ಅಥವಾ ..ಜಲಪ್ರಳಯವೋ ?

ಆಶ್ಚರ್ಯ ! ಅಂಥದೇನೂ ಆಗಲಿಲ್ಲ.

ಹುಡುಗಿಯರು ಪರಸ್ಪರ ನೋಡಿದರು. ಸ್ವಲ್ಪ ನಕ್ಕರು. ಸುದ್ದಿ ಅವರಿಗೆ ಹೊಸದಾಗಿರಲಿಲ್ಲ. ದೊಡ್ಡವರು ತಾವಾಗಿ ಏನೂ ಹೇಳಿರದಿದ್ದರೂ, ಪರಿಮಳನಿಂದ ಅವರಿಗೆ ಎಲ್ಲ ತಿಳಿದಿತ್ತು.

ಆ ಹುಡುಗಿಗೆ ಮೂರನೆಯ ಕಿವಿ ಇತ್ತೋ ಏನೋ ? ಅಕ್ಕ ತಂಗಿ ಯರು ಹಾಸಿಗೆಯಲ್ಲಿ ಮಲಗಿ, ಪಿಸು ಮಾತಿನಲ್ಲಿ ಸಾಕಷ್ಟು ಚರ್ಚೆ ನಡೆಸಿ ದ್ದರು. ಮರೆಯಲ್ಲಿ ಕಣ್ಣೀರೂ ಹಾಕಿದ್ದಾರು. ಬೆಳಗಾಗುವ ಹೊತ್ತಿಗೆ ಏನೂ ಆಗದವರಂತೆ ಶಾಂತವಾಗಿ ಸಿಂಗರಿಸಿಕೊಂಡು ಸಿದ್ಧವಾಗಿದ್ದರು.

ಅವರು ಯಾರೂ ಮಾತಾಡಲಿಲ್ಲ. ಶ್ರೀನಾಥನೇ ಪುನಃ ಹೇಳಿದ-

"ನಿಮ್ಮ ಹಿರಿಯರಿಗೆ ನನ್ನ ಮೇಲೆ ಪೂರಾ ಅಭಿಮಾನ. ನನ್ನನ್ನು

ಅಳಿಯನನ್ನಾಗಿ ಸ್ವೀಕರಿಸಬೇಕಂತೆ. ನೀವು ಮೂರು ಜನರಲ್ಲಿ ಯಾರಾದರೂ ಒಬ್ಬರು ನನ್ನನ್ನು ಒಪ್ಪಿಕೊಂಡರೆ ನಾನು ಧನ್ಯ. ಈ ಪಾಮರನಿಗೆ ಆಯ್ಕೆ ಮಾಡಲು ಶಕ್ತಿಯಿಲ್ಲ. ನಿಮ್ಮದೇ ಕೊನೆಯ ತೀರ್ಮಾನ!"

ಶ್ರೀನಾಥ ಪುನಃ ನಾಟಕೀಯವಾಗಿ ಹೇಳಿದ. ಸಂದರ್ಭದ ಗಭೀರತೆಯನ್ನು ಹಗುರ ಮಾಡುವ ಉದ್ದೇಶದಿಂದ ಆದಷ್ಟು ಸರಳವಾಗಿ ನಗು ನಗುತ್ತಾ ಮಾತಾಡಿದ.

ಅವನೇನೋ ತನ್ನ ಹೊರೆ ಕಡಿಮೆ ಮಾಡಿಕೊಂಡು ಹಗುರವಾಗಿ ಉಸಿರಾಡಿದ. ಆದರೆ ಹುಡುಗಿಯರ ಪಾಲಿಗೆ ಸಮಸ್ಯೆ ಜಟಿಲವಾಗಿತ್ತು.

ಆ ಹೊತ್ತಿಗೆ ಹಿರಿಯರೂ ಅಲ್ಲಿಗೆ ಬಂದರು. ಅವರಿಗೂ ಹೀಗೇ ಎಂದು ನಿಶ್ಚಿತವಾಗಿ ಹೇಳಲು ಮನಸ್ಸಿಲ್ಲ.

ಬಹಳ ಸೂಕ್ಷ್ಮವಾದ ವಿಷಯ. ಯಾರ ಮನಸ್ಸು ನೋಯಿಸಲೂ ಇಷ್ಟವಿಲ್ಲ.

ಕೊನೆಗೆ ಗಂಗಮ್ಮನೇ ಒಂದು ಪರಿಹಾರ ಸೂಚಿಸಿದರು.

"ಯಾರ ಮಾತೂ ಬೇಡ. ಮಾರುತಿಯ ಗುಡಿಗೆ ಹೋಗಿ ಚೀಟಿ ಎತ್ತಿಸೋಣ ಯಾರ ಹೆಸರು ಬರುವುದೋ ಅವಳು ವಧುವಾಗಲಿ."

ಸಲಹೆ ಎಲ್ಲರಿಗೂ ಒಪ್ಪಿಗೆಯಾಯ್ತು. ಹಣ್ಣು, ಕಾಯಿ, ಹೂವು, ಸಮೇತ ಎಲ್ಲರೂ ಗುಡಿಗೆ ಹೋದರು.

ಎಲ್ಲರೂ ಒಟ್ಟಿಗೇ ಬಂದುದು ಪೂಜಾರಪ್ಪನಿಗೆ ಆಶ್ಚರ್ಯ. ಸಂಭ್ರಮದಿಂದ ಮಾರುತಿಗೆ ಪೂಜೆ ಮಾಡಿ ಮಂಗಳಾರತಿ ಬೆಳಗಿದರು

ಕರ್ಪೂರದಾರತಿಯ ಬೆಳಕಿನಲ್ಲಿ ಪರಿಮಳನ ಕಣ್ಣಂಚಿನಲ್ಲಿ ನೀರು ಫಳ ಫಳನೆ ಹೊಳೆಯಿತು. ಉಳಿದವರು ಭಕ್ತಿ ಭಾರದಿಂದ ಎಂಬಂತೆ ತಲೆಬಾಗಿ ನಿಂತಿದ್ದರು.

ಹಣ್ಣು ಕಾಯಿಗಳ ಜೊತೆ ತಟ್ಟೆಯಲ್ಲಿ ಮಡಚಿಟ್ಟಿದ್ದ ಮೂರು ಕಾಗದದ ಚೀಟಿ ಕಾಣಿಸಿದಾಗ 'ಇದೇನು?' ಎನ್ನುವಂತೆ ಪೂಜಾರಪ್ಪ ಪ್ರಶ್ನಾರ್ಥಕವಾಗಿ ಇವರ ಕಡೆ ನೋಡಿದರು

"ಅದನ್ನು ದೇವರ ಪಾದದ ಮೇಲೆ ಇಟ್ಟು ಒಂದು ಚೀಟಿ ಎತ್ತಿಕೊಡಿ"

ರಾಮಯ್ಯ ಗಂಭೀರವಾಗಿ ಹೇಳಿದರು.

ಪೂಜಾರಪ್ಪನೂ ಅಷ್ಟೇ ಗಂಭೀರವಾಗಿ ಚೀಟಿಗಳನ್ನು ದೇವರ ಪಾದದ ಮೇಲೆ ಇಟ್ಟು, ಧ್ಯಾನ ಮಾಡುವಂತೆ ಅರೆಕ್ಷಣ ಕಣ್ಣು ಮುಚ್ಚಿ ನಿಂತು, ಆಮೇಲೆ ನಿಧಾನವಾಗಿ ಬಗ್ಗಿ ಒಂದು ಚೀಟಿಯನ್ನು ಹೂವಿನ ಪ್ರಸಾದ ದೊಡನೆ ಕೈಗೆ ಎತ್ತಿಕೊಂಡು ರಾಮಯ್ಯನವರ ನೀಡಿದ ಬೊಗಸೆಗೆ ಹಾಕಿದರು.

"ಮನೆಗೆ ಹೋಗಿ ನೋಡೋಣ"

ಹಿಡಿಯಲ್ಲಿ ಪ್ರಸಾದವನ್ನು ಹಿಡಿದಂತೆ ಪ್ರಾಕಾರದ ಸುತ್ತ ಪ್ರದಕ್ಷಿಣೆ ಹಾಕಲು ರಾಮಯ್ಯ ಮುಂದಾದರು. ಉಳಿದವರು ಅವರನ್ನು ಹಿಂಬಾಲಿಸಿದರು. ಕಣ್ಣು ಒರೆಸಿಕೊಳ್ಳುತ್ತಾ ಹಿಂದೆ ನಿಂತವಳು ಪರಿಮಳ ಒಬ್ಬಳೇ.

"ತಗೋ ಮಗೂ ಹೂವು ಎಷ್ಟು ಚೆಂದಾಗಿದೆ."

ಮಾರುತಿಗೆ ಹಾಕಿದ್ದ ಪ್ರಸಾದದ ಹೂವನ್ನು ಕೊಡಲು ಬಂದರು ಆತ. ಹಿಂದೆ ನಿಂತ ಹುಡುಗಿಗೆ.

"ಹಾಗೇ .ಆ ಕಾಗದದ ಚೂರನ್ನೂ ಇತ್ತ ಕೊಡಿ ತಾತ. ಆಯಿತಲ್ಲ ಕೆಲಸ, ಹನುಮಪ್ಪನಿಗೇಕೆ ಈ ಎಲ್ಲ ಜಂಜಾಟ?" ಎಂದಳು ನಸುನಗುತ್ತ.

"ತಗೋಳನ್ನು" ಎಂದು ನಗುತ್ತಲೇ ಪ್ರಸಾದದ ಜೊತೆ ಉಳಿದಿದ್ದ ಕಾಗದದ ಚೂರನ್ನೂ ಅವಳಿಗಿತ್ತರು.

ಅದು ಏನೆಂದು ನೋಡುವ ಕುತೂಹಲವಂತೂ ಅವರಿಗೆ ಇರಲಿಲ್ಲ. ಹೂವು ಮುಡಿಯುತ್ತ ಪರಿಮಳ ಮನೆಯವರನ್ನು ಹಿಂಬಾಲಿಸಿದಳು.

* * *

"ಸ್ವಾಮಿಯ ಇಚ್ಛೆ"

–ಎಂದರು ರಾಮಯ್ಯ ಚೀಟಿ ಬಿಚ್ಚಿ ನೋಡಿ. ಉಳಿದವರೂ ಆ ಇಚ್ಛೆಗೆ ತಲೆಬಾಗಿದರು.

ನೀರು ಸುರಿಯುತ್ತಿದ್ದ ಕಣ್ಣುಗಳನ್ನು ಒರೆಸುತ್ತ "ಪರಿಮಳ" ಎಂದು ಬರೆದಿದ್ದ ಚೀಟಿಯನ್ನು ನೋಡಿ ಮತ್ತಷ್ಟು ಕಣ್ಣೀರು ಹರಿಸಿದಳು ಪರಿಮಳ.

"ಯಾಕಳ್ತೀ ಮರಿ? ನ್ಯಾಯವಾಗಿ ನಗಬೇಕು"

ಕೋಮಲ ತಂಗಿಯನ್ನು ತಬ್ಬಿಕೊಂಡು ಸಂತೈಸಿದಳು.

"ನೀವಿಬ್ಬರೂ ದೊಡ್ಡವರು. ನಾನು ... ನಾನು' ಪರಿಮಳ ತೊದಲಿದಳು.

"ಎಲ್ಲಾ ಸ್ವಾಮಿಯ ಇಚ್ಛೆ. ನಿನ್ನದು ಈ ಹೊತ್ತಾದರೆ ನಾಳೆ ಅವರ

ಸರದಿ ಬರುತ್ತೆ. ಆಳೋಕೆ ಏನಿದೆ ಇಲ್ಲಿ ?"

ರಾಮಯ್ಯ ಮತ್ತೆ ಸ್ವಾಮಿಯನ್ನೇ ಹೊಣೆ ಮಾಡಿದರು. ಆತ ಎಂದೂ ಕಾಲಕೆಳಗೆ ಹುಲ್ಲು ಬೆಳೆಯಗೊಡುವವರಲ್ಲ ಅವಸರದಲ್ಲೇ ಎಲ್ಲಾ ಏರ್ಪಾಡು ಮಾಡಿ ಕಿರಿಯ ಮಗಳಿಗೆ ಮದುವೆ ಮಾಡಿ ನವ ದಂಪತಿಗಳನ್ನು ಬೀಳ್ಕೊಟ್ಟರು.

ಏಕಾಂತದಲ್ಲಿ ಗಂಡನ ಎದೆಗೆ ಒರಗಿ ಮತ್ತೆ ಕಣ್ಣೀರು ಹರಿಸಿದಳು ಪರಿಮಳ

"ಮತ್ತೇಕೆ ಅಳು ? ಅಕ್ಕಂದಿರನ್ನು ಬಿಟ್ಟಿರಲಾರೆಯಾ ಪರಿ ? ನೀವು ಜೊತೆ ಜೊತೆಯಾಗಿ ನಕ್ಕು ನಲಿಯುವಾಗ ನೋಡಿದ್ದೆ ನಾನು. ನಿಮ್ಮನ್ನು ಅಗಲಿಸುವುದು ತಪ್ಪೇನೋ ಎನಿಸಿತ್ತು."

"ಅಲ್ಲ.... ಅಲ್ಲ . ."

"ಮತ್ತೆ... ನಿನಗೆ ಇಷ್ಟವಿರಲಿಲ್ಲವೇ ನಾನು ? ನಿನ್ನ ಹೆಸರು ಬಂದಿದ್ದ ರಿಂದ ಬಲವಂತಕ್ಕೆ ಒಪ್ಪಿದೆಯಾ ? ಮೊದಲೇ ಹೇಳಿದ್ದರೆ....?"

"ಬಲವಂತವೇನು ? ನನ್ನ ಹೆಸರು ಬರದೆ ಇರಲು ಸಾಧ್ಯವೇ ಇರಲಿಲ್ಲ."

"ಏನು ಹಾಗೆಂದರೆ ?"

"ಮೂರು ಚೀಟಿಗಳನ್ನೂ ಬರೆದವಳು ನಾನೇ, ಎಲ್ಲದರಲ್ಲೂ ನನ್ನ ಹೆಸರೇ ಬರೆದಿದ್ದೆ."

ಸಂದರ್ಭದ ಪೂರ್ಣ ಅರ್ಥ ಅನುಭವವಾಗಲು ಶ್ರೀನಾಥ ಜೋರಾಗಿ ನಕ್ಕ.

"ನಗಬೇಡ 'ಶ್ರೀ', ನನ್ನನ್ನು ಕ್ಷಮಿಸುವೆ ತಾನೇ ?"

ಪರಿಮಳ ಅವನನ್ನು ಅಲುಗಿಸಿ ಕೇಳಿದಳು.

'ಒಲುವಿನಲಿ.... ಸಮರದಲಿ ಎಲ್ಲವೂ ಒಳಿತೇ' ಶ್ರೀನಾಥ ಕೆಳದನಿಯಲ್ಲಿ ಹಾಡಿದ.

(ಸಾಧಾರ)

# ಬದುಕಿನ ದಾರಿ

ಬೃಹದಾಕಾರದ ಗಿರಿಗಟಿ ಗಿರಗಿರನೆ ಸುತ್ತಿ ಸುತ್ತಿ ನಿಧಾನವಾಗಿ ನಿಂತಿತು. ಅದರಲ್ಲಿ ಕೂತಿದ್ದವರು ಕೆಳಗಿಳಿದರು. ಮುಂದಿನ ಸರದಿಗಾಗಿ ಟಿಕೇಟುಕೊಂಡು ಕಾದಿದ್ದವರು ಸರಸರನೆ ಖಾಲಿಯಾದ ಜಾಗದಲ್ಲಿ ಕುಳಿತುಕೊಳ್ಳಲು ಧಾವಿಸಿದರು.

ವಸ್ತುಪ್ರದರ್ಶನದ ಆವರಣದಲ್ಲಿ ಕಣ್ಣು ಕೋರೈಸುವಷ್ಟು ದೀಪಗಳು, ಕೊಳವೆ ದೀಪಗಳ ಜೊತೆಗೆ ಮರಗಳನ್ನು ಅಲಂಕರಿಸಿದ್ದ ಹಳದಿ, ಕೆಂಪು ದೀಪಗಳು ಮರದಲ್ಲಿ ಬಿಟ್ಟ ಹಣ್ಣಿನಂತೆ ಕಾಣಿಸಿತು.

ಜನರು ಅಂಗಡಿಗಳ ಮುಂದೆ ಸಾಲು ಸಾಲಾಗಿ ನಡೆಯುತ್ತಿದ್ದರು. ಗಂಡಸರು, ಹುಡುಗರು, ಮಕ್ಕಳನ್ನು ಕಂಕುಳಿನಲ್ಲಿ ಹೊತ್ತ ಹೆಂಗಸರು, ಇವರದೂ ಒಂದು ರೀತಿ

ಪ್ರಾಯದ ಹುಡುಗರು, ಹುಡುಗಿಯರದೇ ಒಂದು ಪ್ರಪಂಚ.

ಕಣ್ಣುಕುಕ್ಕುವಂತೆ ಅಲಂಕರಿಸಿಕೊಂಡು, ಕುಲುಕುಲು ನಗುತ್ತ ವಯ್ಯಾರದಿಂದ ಬಳಕುತ್ತ, ತಮ್ಮನ್ನು ಎಲ್ಲರೂ ನೋಡುತ್ತಿರುವರೆ ? ಎಂಬುದನ್ನು ಕಣ್ಣಿನ ಕೊನೆಯಿಂದ ನಿರುಕಿಸುತ್ತ ಹುಡುಗಿಯರು ಮಂದಗಮನದಿಂದ ಸಾಗಿದ್ದರು.

ಅವರ ಹಿಂದೆ ಹುಡುಗರ ಗುಂಪು

ಅಲಂಕಾರದಲ್ಲಿ ಅವರೂ ಹಿಂದೆ ಬಿದ್ದಿರಲಿಲ್ಲ. ಆರಾಧನೆಯ ನೋಟ, ಕೆಣಕು ನಗು, ಹೆಣ್ಣುಮಕ್ಕಳನ್ನು ರೇಗಿಸುವ ಮಾತುಗಳು.

ಈ ಆಟ ಬೇಟ ತರುಣ, ತರುಣಿಯರ ಎರಡು ಗುಂಪಿಗೂ ಹಿತ, ತಣ್ಣನೆಯ ಗಾಳಿ, ಅಲ್ಲಲ್ಲಿ ಕೇಳಿಸುವ ಪ್ರೇಮಗೀತೆಗಳು. ಬೆಳಗುವ ದೀಪಗಳು. ಇವು ಸೃಷ್ಟಿಸಿದ ಮಾಯಾಲೋಕದಲ್ಲಿ ಕೆಲಹೊತ್ತು ಅಲೆಯಬೇಕೆಂದಲ್ಲವೇ ದುಡ್ಡು ತೆತ್ತು ಇಂಥ ಪ್ರದರ್ಶನಗಳಿಗೆ ಬರುವುದು.

ಅರ್ಥವಿಲ್ಲದ ನಗು. ಹಗುರ ಮಾತು.

ಗಿರಿಗಟ್ಟೆ ಇದ್ದ ಜಾಗ ಸ್ವಲ್ಪ ದೂರ. ಅಲ್ಲಿ ಗಲಾಟೆಯೂ ಕಡಿಮೆ. ಹುಡುಗರು ಅವರ ಜೊತೆ ಬಂದ ದೊಡ್ಡವರು ಇವರೇ ಹೆಚ್ಚು.

ಆದರೆ ಅಲ್ಲೊಂದು ಇಲ್ಲೊಂದು ಅಪರೂಪಕ್ಕೆ ಈ ಅಲಂಕಾರದ ಗುಂಪಿನಿಂದ ಜಾರಿಬಂದವರಂತೆ ಕಾಣಿಸಿದರು.

ಉಟ್ಟಿದ್ದ ತೆಳು ಸೀರೆಯ ಸೆರಗು ಗಾಳಿಗೆ ಹಾರಾಡಿತು! ಆ ಸುಂದರ ಮೈ ಮುಚ್ಚುವುದಕ್ಕಿಂತ ಅದರ ಅಂಕುಡೊಂಕುಗಳನ್ನು ಎತ್ತಿ ತೋರಿಸುವುದರಲ್ಲೇ ಸೀರೆಗೆ ಹೆಚ್ಚು ಸಾಮರ್ಥ್ಯವಿದ್ದಂತೆ ತೋರಿತು.

ಆ ಸುಂದರಿ ಬಳ್ಳಿಯಂತೆ ಬಳುಕುತ್ತ ತೆಳ್ಳಗಿನ ಸೀರೆಯ ಸೆರಗಿನಿಂದ ಮುಖಕ್ಕೆ ಗಾಳಿ ಹಾಕಿಕೊಂಡಳು. ಚಕ್ರದಲ್ಲಿ ಕುಳಿತು ಗಿರ್ರನೆ ತಿರುಗಿದ್ದು, ಮೇಲೇರಿದಾಗಿನ ಉತ್ಸಾಹ, ಹೆದರಿಕೆಯಿಂದ ಪಕ್ಕದಲ್ಲಿ ಕುಳಿತಿದ್ದ ಗೆಳತಿಯ ಕೈಹಿಡಿದದ್ದು, ಈ ಎಲ್ಲದರ ಪರಿಣಾಮವಾಗಿ ಹಣೆಯ ಮೇಲೆ ಬೆವರಿನ ಹನಿಗಳು ಕಾಣಿಸಿದುವು.

ನೀಳ ಜಡೆಯನ್ನು ಮುಂದಕ್ಕೆ ಎಳೆದುಕೊಂಡು ಉಸ್ಸೆಂದು ನಿಟ್ಟುಸಿರು ಬಿಟ್ಟಳು. ಆಗ ಹಿಂದಿನಿಂದ ಮೆಲ್ಲಗೆ ಯಾರೋ ಕೇಳಿದರು,

"ಬಹಳ ಚೆನ್ನಾಗಿತ್ತು ಅಲ್ವಾ? ಮೇಲೇರಿ ಕೆಳಗೆ ಇಳಿಯುವುದು, ಬಹಳ ಸೊಗಸು!"

ಅರುಣಾ ಬೆಚ್ಚಿ ಹಿಂದಿರುಗಿ ನೋಡಿದಳು. ಅವಳ ಸಹಪಾಠಿ ಲಕ್ಷ್ಮೀಶ ಹುಬ್ಬೇರಿಸಿ ನಗುತ್ತ ನಿಂತಿದ್ದ.

"ಓ .. ನೀವಾ ...? ನಾನು ಯಾರೋ ಎಂದು ಹೆದರಿದೆ."

ಬಳ್ಳಿದೇಹ ಮತ್ತಷ್ಟು ಬಳುಕಿತು. ಬೀಸುಗಾಳಿ ಸೆರಗನ್ನೂ ನೆರಿಯನ್ನೂ ಅಲ್ಲಾಡಿಸಿತು. ಲಕ್ಷ್ಮೀಶನ ಕಣ್ಣಿಗೆ ಹಬ್ಬ.

ಗೆಳತಿ ಅಪರ್ಣಾ ಅರುಣಾಳ ಚೆಲುವಿಗೆ ದೃಷ್ಟಿಬೊಟ್ಟು ಇಟ್ಟಂತೆ, ತೀರಾ ಸಾಧಾರಣ ರೂಪಿನ ಆ ಹುಡುಗಿಯೊಡನೆ ಓಡಾಡುವುದೆಂದರೆ ಅರುಣಾಳಿಗೆ ಬಹಳ ಇಷ್ಟ. ಅವಳ ಪಕ್ಕದಲ್ಲಿ ನಿಂತಾಗ ಅರುಣಾಳ ಚೆಲುವು ಎದ್ದು ಕಾಣುವುದು. ಕಾಲೇಜಿನಲ್ಲೂ ಇಬ್ಬರೂ ಜೊತೆ ಜೊತೆಯಾಗಿ ಓಡಾಡುವರು. ಪಕ್ಕದಲ್ಲಿ ಕೂಡುವರು.

ತನಗಿಂತ ಚೆನ್ನಾಗಿರುವವರ ಜೊತೆ ಅರುಣಾ ಸೇರುತ್ತಿರಲಿಲ್ಲ. ಆದಷ್ಟು ದೂರವೇ ಇರುವಳು.

ಅಪರ್ಣಾ ಮುಂದಾಗಿ ಬಂದು ತುಟಿ ಉಬ್ಬಿಸಿ ನಗು ತುಳುಕಿಸಿ ಕೇಳಿದಳು.

"ಇಲ್ಲೆಲ್ಲಿ ಬಂದಿರಪ್ಪ ನೀವು? ಇಲ್ಲಿ ನಮ್ಮವರು ಯಾರೂ ಇಲ್ಲ ಎಂದು ಕೊಂಡಿದ್ದೆವು."

ಲಕ್ಷ್ಮೀಶ ಮೂಗು ಸಿಂಡರಿಸಿದ. ಈ ಶನಿ ತಪ್ಪಿದ್ದೇ ಇಲ್ಲ ಎನ್ನುವಂತಿತ್ತು ಅವನ ಮುಖ ಭಾವ. ಬೇಸರ ಮರೆಸಿ ಹೇಳಿದ.

"ಏಕೆ ಬರಬಾರದೆ?"

"ಬೇಡ ಅಂದರೆ ಬಿಡುವವರೇನು ನೀವು?"

ಅರುಣಾ ಅವರ ಮಾತು ಕೇಳಿ ನಗುತ್ತ ನಿಂತಿದ್ದಳು. ಲಕ್ಷ್ಮೀಶನ ನೋಟ ಅವಳಿಗೆ ಕಚಗುಳಿ ಇಟ್ಟಂತಾಯಿತು.

"ಇನ್ನೊಂದು ರೌಂಡ್ ಹೋಗೋಣ ಬನ್ನಿ, ಟಿಕೇಟು ತರ್ತೀನಿ. ನಿಮ್ಮ ಜೊತೆ ಅದರಲ್ಲಿ ಕೂಡುವುದೇ ಸೊಗಸು. ಇಲ್ಲ ಎನ್ನಬೇಡಿ"

"ಥ್ಯಾಂಕ್ಸ್ .ಆದರೆ ದಯವಿಟ್ಟು ಬೇಡಿ. ಈಗಲೇ ತಲೆ ತಿರುಗುತ್ತಾ ಇದೆ."

"ಓ . ಹಾಗೆನ್ನಬೇಡಿ. ಪ್ಲೀಸ್... ನನಗಾಗಿ"

"ಇಲ್ಲ . ಕ್ಷಮಿಸಿ"

ಅರುಣಾ ಮುಂದೆ ಹೆಜ್ಜೆ ಇಟ್ಟಳು.

"ಹೋಗಲಿ ಕಾಫಿ........ತಗೊಳ್ಳೋಣ ಬನ್ನಿ. ತಲೆ ತಿರುಗು ಹೋದೀತು."

ಲಕ್ಷ್ಮೀಶ ಪುಟ್ಟ ಹುಡುಗನಂತೆ ಉತ್ಸಾಹದಿಂದ ಕಣ್ಣು ಅರಳಿಸಿದ. ಕೇಳಿದ ದನಿಯಲ್ಲಿ ಯಾಚನೆ, ನೋಟದಲ್ಲಿ ಬಯಕೆ.

"ಹುಶ್ ...ಸುಮ್ಮನಿರಿ. ಈಗ ಎಲ್ಲೂ ಬರಲು ಸಾಧ್ಯವಿಲ್ಲ. ಅಮ್ಮ ಬಂದಿದ್ದಾರೆ."

"ಎಲ್ಲಿ?" ದನಿಯಲ್ಲಿ ನಿರಾಶೆ.

ಕಣ್ಣು ಸನ್ನೆಯಿಂದಲೇ ಅರುಣಾ ಹುಲ್ಲಿನ ಮೇಲೆ ಕಾಲುನೀಡಿ ಕುಳಿ

ತಿದ್ದ ತಾಯಿಯನ್ನು ತೋರಿಸಿದಳು. ಧಡೂತಿಯಾಗಿ ಕಾಣಿಸುತ್ತಿದ್ದ ಆಕೆ ಮತ್ತೊಬ್ಬ ಹೆಂಗಸಿನೊಡನೆ ಮಾತಾಡುತ್ತ ಆರಾಮವಾಗಿ ಕುಳಿತಿದ್ದರು

ಪೆಚ್ಚು ಮುಖ ಹಾಕಿಕೊಂಡು ಲಕ್ಷ್ಮೀಶ ಹಿಂದಕ್ಕೆ ಹೋದ. ಅಪರ್ಣಾ ನಕ್ಕಳು. ಅವಳಿಗೆ ಇದೊಂದು ಮೋಜು.

ಲಕ್ಷ್ಮೀಶ ಅರುಣಾಳನ್ನು ಅನುಸರಿಸುವುದು ಇಡೀ ಕಾಲೇಜಿಗೆ ಗೊತ್ತು. ಗೆಳೆಯರ ಗುಂಪಿನಲ್ಲಿ ಅವರಿಬ್ಬರ ಹೆಸರುಗಳು ಧಾರಾಳವಾಗಿ ಕೇಳಿಸುವುದಿತ್ತು.

ಆದರೆ ಅರುಣಾ ?

ಅವಳ ಮನಸ್ಸು ಅರಿತವರಿಲ್ಲ. ಅವಳಿಗೆ ತನ್ನ ಚೆಲುವಿನ ಬಗೆಗೆ ಹೆಮ್ಮೆ ಹುಡುಗರ ಆರಾಧನೆಯ ನೋಟ ಅವಳ ಜೀವನದ ಉಸಿರು. ಅದಿಲ್ಲದೆ ಬದುಕಲು ಸಾಧ್ಯವೇ ? ಎನ್ನುವಂತಿತ್ತು ಅವಳ ನಡುವಳಿಕೆ.

ತನ್ನನ್ನು ಮೆಚ್ಚಿಕೊಂಡು ಓಡಾಡುವ ಹಲವರಲ್ಲಿ ಯಾರನ್ನೂ ತಿರಸ್ಕರಿಸಿರಲಿಲ್ಲ ಪುರಸ್ಕರಿಸಿಯೂ ಇರಲಿಲ್ಲ. ತಾವರೆ ಎಲೆಯ ಮೇಲಿನ ನೀರಿನ ಮಣಿಯಂತೆ ಹಗುರವಾಗಿ, ಯಾವುದಕ್ಕೂ ಅಂಟಿಕೊಳ್ಳದೆ ಮೇಲೆ ಮೇಲೇ ಓಡಾಟ.

ಅರುಣಾ ತಾಯಿ ಕುಳಿತಿದ್ದ ಜಾಗಕ್ಕೆ ಹೋದಳು. ಅಪರ್ಣಾ "ಬರ್ತೀನಿ ನಾನು" ಎನ್ನುತ್ತ ಲಕ್ಷ್ಮೀಶ ಹೋದ ಕಡೆಗೆ ಬೇಗ ಬೇಗ ಹೆಜ್ಜೆ ಹಾಕಿದಳು.

ಸ್ವಲ್ಪ ದೂರದಲ್ಲೇ ಅವನನ್ನು ಸಂಧಿಸಿ ಹೇಳಿದಳು.

"ನಡಿಯಿರಿ ಕಾಫಿ ಕುಡಿಯೋಣ. ನಾನು ಬರ್ತೀನಿ. ನನ್ನ ಬೆನ್ನ ಹಿಂದೆ ಅಮ್ಮ ಇಲ್ಲ "

ಲಕ್ಷ್ಮೀಶನಿಗೆ ಅವಳ ಜೊತೆ ಬೇಕಿತ್ತೋ ಇಲ್ಲವೋ ? ಆದರೆ ಇಬ್ಬರನ್ನು ಒಟ್ಟಿಗೆ ಆಹ್ವಾನಿಸಿದ್ದ. ಮನದ ಬಯಕೆಯ ಹುಡುಗಿ ಜಾರಿ ಕೊಂಡಿದ್ದಳು. ತಾನಾಗಿ ಬಂದ ಇವಳನ್ನು ಬೇಡ ಎನ್ನುವಷ್ಟು ಒರಟುತನ ಇರಲಿಲ್ಲ.

ತನ್ನ ನಿರಾಶೆಯನ್ನು ನಗುವಿನಲ್ಲಿ ಮುಚ್ಚಿ,

"ಬನ್ನಿ ಹೋಗೋಣ" ಎಂದ. ತಾವಿಬ್ಬರೂ ಒಟ್ಟಾಗಿ ಹೋಗುವುದನ್ನು ಅರುಣಾ ನೋಡಲಿ, ಎಂದೂ ಯೋಚಿಸಿದ.

ಅರುಣಾ ನೋಡಿಯೇ ನೋಡಿದಳು.

ಇವೊಂದು ಪೆದ್ದು. ನನಗಾಗಿ ಕರೆದದ್ದು. ತನ್ನನ್ನಲ್ಲ ಎಂದೂ

ಅರ್ಥವಾಗಲ್ಲ ಎಂದುಕೊಂಡಳು.

ತಾಯಿ ಕೈ ಊರಿ ಮೇಲೆದ್ದು ಕೇಳಿದರು.

"ಯಾರೇ ಅವನು ? ಹೆಣ್ಣು ಹುಡುಗಿಯರ ಮುಂದೆ ಹಲ್ಲು ಕಿರಿಯುತ್ತ ನಿಂತಿದ್ದ. ಬೇರೆ ಕೆಲಸ ಇಲ್ಲವೇ ? ಇಲ್ಲಿಲ್ಲಿ ಬಂದ ಅವನು ?"

"ಇದೀಗ ಚೆನ್ನಾಯ್ತು. ಇದು ವಸ್ತುಪ್ರದರ್ಶನ. ಯಾರು ಬೇಕಾದರೂ ದುಡ್ಡು ಕೊಟ್ಟು ಬರಬಹುದು"

"ಬರಲಿ ಆದರೆ ನಿನ್ನ ಜೊತೆ ಏನು ಮಾತು ?"

"ನಮ್ಮ ಕ್ಲಾಸಿನಲ್ಲಿ ಇದಾನೆ. ಎದುರಿಗೆ ಸಿಕ್ಕಾಗ ಮಾತಾಡಿಸಿದ"

ಅರುಣಾ ಸಿಡುಕಿದಳು. ಎತ್ತಲೋ ನೋಡುವವರಂತೆ ಕುಳಿತಿದ್ದರೂ ಆಕೆಯ ಕಣ್ಣೆಲ್ಲ ತಮ್ಮ ಮೇಲೆ ಎಂದು ಮಗಳಿಗೆ ಸಿಟ್ಟು.

"ಅವಳೆಲ್ಲಿ ನಿನ್ನ ಸ್ನೇಹಿತೆ !"

"ಮನೆಗೆ ಹೋದಳು."

"ಬರುವಾಗ ನಮ್ಮ ಸಂಗಡ ಬಂದಳು."

"ಆದರೇನು ? ಹೋಗುವಾಗಲೂ ನಮ್ಮ ಜೊತೆ ಇರಬೇಕೆಂದೇನೂ ಇಲ್ಲ. ಅವಳಿಗೆ ಮನೆಯ ದಾರಿ ಗೊತ್ತಿದೆ"

"ಅವನ ಜೊತೆ ಹೋದಳೇನೋ ?

ಆಕೆಯ ಪ್ರಶ್ನೆ ಮಗಳನ್ನು ಚುಚ್ಚಿತು

"ನಾನು ನೋಡಲಿಲ್ಲ ಅಮ್ಮ. ಅವರವರ ಹೊಣೆ ಅವರದ್ದು. ಹೋಗ್ತೀನಿ ಎಂದಳು ಹೂಂ ಎಂದೆ."

"ಅದೂ ಸರಿ ಅನ್ನು. ನಿನ್ನ ಜವಾಬ್ದಾರಿ ನೀನು ತಿಳಿದಿದ್ದರೆ ಸಾಕು. ಪರೀಕ್ಷೆ ಮುಗಿದ ಕೂಡಲೇ ನಿನಗೆ ಮದುವೆ. ನಿನ್ನ ತಂದೆ ಗೊತ್ತು ಮಾಡಿರುವ ವರ ನಿನಗಾಗಿ ಕಾದಿದಾನೆ ಎನ್ನೋದು ನೆನಪಿದ್ದರೆ ಸಾಕು. ಬೇರೆಯವರ ಉಸಾಬರಿ ನಮಗೇಕೆ ?"

ಮಗಳು ತಾಯಿಯ ಪಕ್ಕದಲ್ಲಿ ಮೌನವಾಗಿ ನಡೆದಳು. ಈ ದಿನ ತಾಯಿಯ ಜೊತೆಗೆ ಬರದಿದ್ದರೆ? ಎಷ್ಟು ಸೊಗಸಿತ್ತು. ಲಕ್ಷ್ಮೀಶನ ಜೊತೆ ಮತ್ತೊಮ್ಮೆ ರಾಟೆಯಲ್ಲಿ ಕುಳಿತು ಮೇಲೆ....ಮೇಲೆ ಏರುವಾಗ? ಎಂತಹ ಪುಳಕ ! ಹೆದರಿದ್ದರೆ ಹಿಡಿದುಕೊಳ್ಳುತ್ತಿರಲಿಲ್ಲವೇ ಅವನು ? ಸುಖದ ಯೋಚನೆ

ಯಿಂದ ಕಂಪಿಸಿದಳು ಅರುಣಾ. ಮತ್ತೆ ಅವನ ಜೊತೆ ಕಾಫಿ ಕುಡಿಯುವಾಗ? ಕಾಫಿಯ ಬಟ್ಟಲು ಮೇಲಿನಿಂದ ಆವನ ಹೊಳಪು ಕಣ್ಣುಗಳು ತನ್ನನ್ನು ಮೆಚ್ಚುಗೆಯಿಂದ ದಿಟ್ಟಿಸುವಾಗ?

ಮೂಕ ಪ್ರೇಕ್ಷಕಿ ಅಪರ್ಣಾ.

ನಾಳೆ ಕಾಲೇಜಿನಲ್ಲಿ ಹರಟುವವರಿಗೆ ಒಂದು ವಸ್ತು ಸಿಗುತ್ತಿತ್ತು. ಆದರೇನು? ಹರಟುವ ನಾಲಗೆ ಈಗಾಗಲೇ ಹರಟಿದೆ. ಕೆಲಸವಿಲ್ಲದ ಕೈಗಳು ಗೋಡೆಯ ಮೇಲೆ ಚಿತ್ರ ಬಿಡಿಸಿವೆ!

ಇನ್ನು ತಾಯಿಯ ಕನಸೋ?

ಅವರ ನೆಚ್ಚಿನ ಅಣ್ಣನ ಮಗ ತನಗಾಗಿ ಕಾದಿರುವನಂತೆ. ಎಷ್ಟು ವರ್ಷ ಗಳ ಆಸೆ ನೇಯ್ದಿರುವ ಮಾಲೆಯೋ ಅದು. ಅವನ ನೆನಪೇ ಸರಿಯಾಗಿಲ್ಲ. ದೂರದ ಅಸ್ಸಾಂನಲ್ಲೋ ಎಲ್ಲೋ ಇರುವನಂತೆ. ಹೇಗಿದ್ದ ಅವನು?

"ಮನೆ ಬಂತಲ್ಲ, ಇಳಿಯಮ್ಮ. ಇನ್ನೂ ಗಾಡಿಯಲ್ಲಿ ಕೂತಿರುವ ಆಸೆ ಏನು?"

ತಾಯಿ ಎಚ್ಚರಿಸಿದರು.

ಗಾಡಿಯವನಿಗೆ ಬಾಡಿಗೆ ತೆತ್ತು ಇಬ್ಬರೂ ಒಳಗೆ ನಡೆದರು.

* * *

"ಗೂಡ್ಸ್‌ರೈಲು ಕಂಬಿ ತಪ್ಪಿದ್ದರಿಂದ ದಾರಿಯಲ್ಲಿ ಅಡಚಣೆ. ಮದ್ರಾಸಿಗೆ ಹೊರಡುವ ರೈಲು ಮೂರು ಗಂಟೆ ತಡವಾಗಿ ಹೊರಡುವುದು"

ಧ್ವನಿವರ್ಧಕದ ಮೂಲಕ ಗೊಗ್ಗರು ದನಿಯಲ್ಲಿ ಕೇಳಿಬಂದ ಪ್ರಕಟನೆಗೆ ಹೆಂಗಸರ ವಿಶ್ರಾಂತಿ ಕೋಣೆಯಲ್ಲಿ ಒರಗು ಕುರ್ಚಿಗೆ ಮೈ ಆನಿಸಿದ ಅರುಣಾ ಬೆಚ್ಚಿ ನೆಟ್ಟಗೆ ಕುಳಿತು ಆಲಿಸಿದಳು.

ಅದೇ ಮಾತು ಮತ್ತೊಮ್ಮೆ ಕೇಳಿಬಂತು. ಮೂರು ಗಂಟೆ ತಡ. ದೂರದ ಪ್ರಯಾಣದಲ್ಲಿ ಒಂದೊಂದು ಗಳಿಗೆಗೂ ಮಹತ್ವ. ಮೊದಲೇ ಬೇಸರ. ಮತ್ತೆ ತಡವಾದರೆ?

ಬಂಧುಗಳ ಮನೆಯಲ್ಲಿ ನಡೆದ ಮದುವೆಗೆ ತಾನು ಬರದೆ ರಜೆ ಇಲ್ಲ ವೆಂದು ಹೆಂಡತಿಯನ್ನೂ ಮಕ್ಕಳನ್ನೂ ಕಳಿಸಿದ್ದ ಪತಿರಾಯ. ಬೆಂಗಳೂರಿನ